# ಶ್ರೀಮದ್ವಾಲ್ಮೀಕಿರಾಮಾಯಣವು

4

VENKATESHWARA PUBLISHERS
MYLAPORE, MADRAS-600 004

ಶ್ರೀಃ

ವಾಲ್ಮೀಕಿಮಹರ್ಷಿಪ್ರಣೀತ

# ಶ್ರೀಮದ್ರಾಮಾಯಣವು

## ಅರಣ್ಯಕಾಂಡವು

## Vol. 4

(ನಾಲ್ಕನೆಯ ಭಾಗವು)

ಕರ್ಣಾಟಕ ವಚನವು

---

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು.

---

ಪ್ರಕಾಶಕರು :

**ವೆಂಕಟೇಶ್ವರ ಪಬ್ಲಿಷರ್ಸ್**

14, ಭೀಮಸೇನಾ ಗಾರ್ಡನ್ಸ್, ಮೈಲಾಪುರ, ಮದರಾಸು–4

---

VENKATESWARA PUBLISHERS
14, Bhimasena Gardens,
Mylapore, Madras-600 004. Rs. 40/-

**Dedicated to the memory of**

**H. BHIMASENA RAU**

Accountant General

or whose unstinted support the publisher is grateful

**All Rights Reserved**

ಕಾಪೀರೈಟ್, ೧೯೧೯—ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, **ಆರ್. ವೆಂಕಟೇಶ್ವರ ಕಂಪೆನಿಯವರಿಗೆ** ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲೀ ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲೀ, ಪದಗಳನ್ನಾಗಲೀ, ಚಿತ್ರಪಟಗಳನ್ನಾಗಲೀ ಇತರರು ಕಾಪೀಮಾಡಿದ ಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

ಪ್ರಭಾ ಮುದ್ರಣಾಲಯ, ಬಸವನಗುಡಿ, ಬೆಂಗಳೂರು-೪

ಶ್ರೀರಸ್ತು

ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

# ಅವತಾರಿಕೆ

ಇದಕ್ಕೆ ಮೊದಲು ಬಾಲಕಾಂಡದಲ್ಲಿ ಲಕ್ಷ್ಮಣನಿಗೆ ತನ್ನ ಹಿರಿಯಣ್ಣನಾದ ರಾಮನಲ್ಲಿರುವ ಭಕ್ತಿಯೂ, ಸೀತೆಗೆ ರಾಮನಲ್ಲಿರುವ ಅನುರಾಗವೂ ಲೋಕ ಸಾಮಾನ್ಯವಾಗಿ ಸಂಗ್ರಹಿಸಿ ಹೇಳಲ್ಪಟ್ಟುವು. ಅದಕ್ಕೆ ಮೇಲೆ ಅಯೋಧ್ಯಾಕಾಂಡ ದಲ್ಲಿ, ಸೀತಾಲಕ್ಷ್ಮಣರಿಬ್ಬರೂ ತಾವು ಅನುಭವಿಸಬಹುದಾದ ರಾಜಭೋಗ ಗಳನ್ನು ಬಿಟ್ಟು, ತಮಗೆ ರಾಮನಲ್ಲಿರುವ ಪ್ರೇಮದಿಂದ ಆತನನ್ನು ಕ್ಷಣಕಾಲವೂ ಅಗಲಿರಲಾರದೆ, ಕಾಡಿನಲ್ಲಿಯೂ ಅವನನ್ನು ಹಿಂಬಾಲಿಸಿ ಹೋದರೆಂಬುದರಿಂದ, ಅವರ ಭಕ್ತ್ಯನುರಾಗಗಳೇ ಮತ್ತಷ್ಟು ವಿಶೇಷಿಸಿ ತಿಳಿಸಲ್ಪಟ್ಟಿರುವುವು. ಆ ಭಕ್ತ್ಯನುರಾಗಗಳೇ ಈ ಅರಣ್ಯಕಾಂಡದಲ್ಲಿ ಇನ್ನೂ ವಿಶೇಷವಾಗಿ ಪುಷ್ಟೀಕರಿಸ ಲ್ಪಡುವುವು. ವಿರಾಧನು ರಾಮಲಕ್ಷ್ಮಣರನ್ನೆತ್ತಿಕೊಂಡು ಹೋಗುತ್ತಿರುವಾಗ, ಸೀತೆಯು ಆ ರಾಕ್ಷಸನ ಹಿಂದೆ ಕೂಗಿಡುತ್ತ, ಅವನನ್ನು ಹಿಂಬಾಲಿಸಿ "ಮಾಂ ಹರೋತ್ಸೃಜ್ಯ ಕಾಕುತ್ಸ್ಥೌ ನಮಸ್ತೇ ರಾಕ್ಷಸೋತ್ತಮ" ಎಂದು ಪ್ರಾರ್ಥಿಸಿ, ತನ್ನ ಪ್ರಾಣವನ್ನಾದರೂ ಕೊಟ್ಟು ರಾಮನನ್ನು ಬಿಡಿಸಬೇಕೆಂಬ ಆತುರವನ್ನು ತೋರಿಸಿರುವುದರಿಂದಲೂ, ಹಾಗೆಯೇ ರಾಮಲಕ್ಷ್ಮಣರಿಬ್ಬರೂ ಕಬಂಧನ ತೋಳುಗಳಲ್ಲಿ ಸಿಕ್ಕಿ ಬಿದ್ದಾಗ, ಲಕ್ಷ್ಮಣನು ರಾಮನನ್ನು ಕುರಿತು, "ಮಾಂ ಚ ಭೂತಬಲಿಂ ದತ್ವಾ ಪಲಾಯಸ್ವ ಯಥಾಸುಖಂ" ಎಂಬುದಾಗಿ, ತಾನಾದರೂ ಆ ಭೂತಕ್ಕೆ ಬಲಿಯಾಗಿ ನಿಂತು ರಾಮನನ್ನು ಬಿಡಿಸಬೇಕೆಂದು ಉದ್ದೇಶವುಳ್ಳವ ನಾಗಿದ್ದುದರಿಂದಲೂ, ಈ ಸೀತಾಲಕ್ಷ್ಮಣರಿಗೆ ತಮ್ಮ ಪ್ರಾಣಕ್ಕಿಂತಲೂ ರಾಮನು ವಿಶೇಷ ಪ್ರಿಯತಮನಾಗಿದ್ದನೆಂದು ವ್ಯಕ್ತಪಡಿಸಲ್ಪಡುವುದು. ಮತ್ತು ಹಿಂದೆ ಅಯೋಧ್ಯಾಕಾಂಡದಲ್ಲಿ ಸೀತೆಯು ತನ್ನ ಪತಿಯಾದ ರಾಮನನ್ನಗಲಿರಲಾರದೆ, ಆತನೊಡನೆ ತಾನೂ ವನಪ್ರಯಾಣಕ್ಕೆ ಉದ್ಯುಕ್ತಳಾಗಿದ್ದಳೆಂಬ ವಿಷಯವನ್ನು ತಿಳಿಸಿದುದರಿಂದಲೇ ಆಕೆಯ ಪತಿಪರಾಯಣತ್ವವು ಸಾಮಾನ್ಯವಾಗಿ ತಿಳಿಸಲ್ಪಟ್ಟಿ ರುವುದು. ಈ ಅರಣ್ಯಕಾಂಡದಲ್ಲಿಯಾದರೋ ಅವಳ ಪಾತಿವ್ರತ್ಯ ಧರ್ಮವು

ಇನ್ನೂ ವಿಶೇಷಿಸಿ ನಿರೂಪಿಸಲ್ಪಡುವುದು ಪಂಚವಟಿಯಲ್ಲಿ ರಾವಣನು ಸೀತೆಯೊಡನೆ, "ಅಂಗುಲ್ಯಾ ನ ಸಮೋ ರಾಮೋ ಮಮ ಯುದ್ಧೇನ ಮಾನುಷಃ | ತವ ಭಾಗ್ಯೇನ ಸಂಪ್ರಾಪ್ತಂ ಭಜಸ್ವ ವರವರ್ಣಿನಿ" ಎಂದು ಕೇವಲ ಮನುಷ್ಯಮಾತ್ರನಾದ ರಾಮನು ತನ್ನ ಕಿರುಬೆರಳಿಗೂ ಸಾಟಿಯಾಗಲಾರನೆಂದೂ, ಭಾಗ್ಯವಶದಿಂದ ಸಿಕ್ಕಿರುವ ತನ್ನನ್ನು ವರಿಸಬೇಕೆಂದೂ ಕೇಳಿದಾಗ ಸೀತೆಯು ಎಂತವರಿಗೂ ಮನೋವಿಕಾರವನ್ನು ಹುಟ್ಟಿಸುವ ಆ ಏಕಾಂತಸ್ಥಳದಲ್ಲಿ, ತ್ರೈಲೋಕ್ಯಾಧಿಪತ್ಯದಲ್ಲಿರುವ ಆ ರಾವಣನು ತಾನಾಗಿ ಬಂದು ಯಾಚಿಸುತ್ತಿದ್ದರೂ ಮನಸ್ಸು ಕಲಗದೆ "ಕ್ರುದ್ಧಾ ಸಂರಕ್ತಲೋಚನಾ | ಅಬ್ರವೀತ್ಪರುಷಂ ವಾಕ್ಯಂ ರಹಿತೇ ರಾಕ್ಷಸಾಧಿಪಂ" ಎಂದು ಅತಿ ಕೋಪದಿಂದ ಕೆಂಪಾದ ಕಣ್ಣುಳ್ಳವಳಾಗಿ ಆತನ ಮುಖವನ್ನು ನೋಡುವುದಕ್ಕೂ ಅಸಹ್ಯಪಟ್ಟು, ಆತನಿಗೆ ಅಡ್ಡಲಾಗಿ ಒಂದು ಹುಲ್ಲುಕಡ್ಡಿಯನ್ನಿಟ್ಟು ಅದಕ್ಕೆ ಪ್ರತ್ಯುತ್ತರ ಕೊಟ್ಟಳೆಂಬುದರಿಂದ, ಸೀತೆಯ ಅಸಾಧಾರಣವಾದ ಪಾತಿವ್ರತ್ಯ ಮಹಿಮೆಯು ವ್ಯಕ್ತಪಡಿಸಲ್ಪಡುವುದು. ಹಿಂದಿನ ಕಾಂಡದಲ್ಲಿ ಸೀತಾರಾಮರ ಸಂಭೋಗ ಶೃಂಗಾರವು ವರ್ಣಿಸಲ್ಪಟ್ಟಿತು. ಈ ಅರಣ್ಯಕಾಂಡದಲ್ಲಿ ಅವರ ವಿಪ್ರಲಂಭ ಶೃಂಗಾರವು ನಿರೂಪಿಸಲ್ಪಡುವುದು. ಪೂರ್ವಕಾಂಡಗಳಲ್ಲಿ ಜಗಜ್ಜನ್ಮಾದಿ ಕಾರಣನಾಗಿಯೂ, ವೇದಾಂತವೇದ್ಯನಾಗಿಯೂ ಇರುವ ಪರಬ್ರಹ್ಮನಿಗೆ, ಅವಿದ್ಯಾನಿರಾಸಕತೆ, ನಿತ್ಯಾನಂದಪರಿಪೂರ್ಣತೆ, ನಿಖಿಲಾನ್ತರ್ಯಾಮಿತ್ವ, ನಿರತಿಶಯನೌಜ್ವಲ್ಯ, ನಿರುಪಮ ಧರ್ಮಪ್ರವರ್ತಕತೆ, ಮುಂತಾದ ಕಲ್ಯಾಣ ಗುಣಸಮೂಹಗಳು ವರ್ಣಿಸಲ್ಪಟ್ಟುವು. ಅರಣ್ಯಕಾಂಡದಲ್ಲಿ ಸಜ್ಜನಸಂರಕ್ಷಣ ರೂಪವಾದ ಆತನ ವಿಶೇಷ ಧರ್ಮವು ವರ್ಣಿಸಲ್ಪಡುವುದು. ಹಿಂದಿನ ಕಾಂಡದಲ್ಲಿ ಪಿತೃವಚನಪರಿಪಾಲನವೆಂಬ ಲೌಕಿಕ ಧರ್ಮವು ಅವಶ್ಯಾನುಷ್ಠೇಯವೆಂದು ತಿಳಿಸಲ್ಪಟ್ಟಿತು. ಈ ಕಾಂಡದಲ್ಲಿ ಸಜ್ಜನಸಂರಕ್ಷಣವೆಂಬ ಧರ್ಮವಿಶೇಷವು ತಿಳಿಸಲ್ಪಡುವುದು. ಮತ್ತು ಈ ಕಾಂಡದಲ್ಲಿ, ಜಟಾಯು ವೃತ್ತಾಂತದಿಂದ ಸ್ವಾಮಿಕೈಂಕರ್ಯಪರನಾದವನಿಗೆ ಲಭಿಸಬಹುದಾದ ಅತ್ಯುತ್ತಮ ಫಲಗಳೂ, ಶಬರೀವೃತ್ತಾಂತದಿಂದ ಸಜ್ಜನಶುಶ್ರೂಷಾ ಪ್ರಭಾವವೂ ವ್ಯಕ್ತಪಡಿಸಲ್ಪಡುವುವು. ಈ ಕಾಂಡದಲ್ಲಿ ಸೀತಾಪಹರಣವೇ ಮುಖ್ಯ ವಿಷಯವು. ಇತರ ವಿಷಯಗಳೆಲ್ಲವೂ ಅದಕ್ಕೆ ಸಾಧನಗಳಾಗಿ ಬಂದೊದಗಿರುವುವು. ಮಹರ್ಷಿಗಳು

ಉಪಾಯದಿಂದ ರಾಮನನ್ನು ದಂಡಕಾರಣ್ಯಕ್ಕೆ ಕರೆತಂದು, ಅಲ್ಲಲ್ಲಿ ತಮ್ಮ ಆಶ್ರಮಗಳನ್ನು ತೋರಿಸುವ ನೆಪದಿಂದ ಲಂಕೆಗೆ ದ್ವಾರದಂತಿರುವ ಜನಸ್ಥಾನಕ್ಕೆ ಆತನನ್ನು ಸೇರಿಸಿದುದು, ಅಲ್ಲಿ ಶೂರ್ಪಣಖಾಭಂಗದ ನೆಪದಿಂದ ಖರಾದಿಗಳನ್ನು ಕೊಲ್ಲಿಸಿದುದು, ತನ್ಮೂಲಕವಾಗಿ ರಾವಣನಿಗೆ ವೈರವನ್ನು ಹುಟ್ಟಿಸಿದುದು. ಇವೆಲ್ಲವೂ ಈ ಸೀತಾಪಹರಣಕ್ಕೆ ಅಂಗಗಳೆಂದೆಣಿಸಬೇಕು. ದೇವಕಾರ್ಯಾರ್ಥವಾಗಿಯೇ ಶ್ರೀಮಹಾವಿಷ್ಣುವು, ಈ ಭೂಲೋಕದಲ್ಲಿ ರಾಮರೂಪದಿಂದವತರಿಸಿರುವುದರಿಂದ, ಈ ಅವತಾರಕ್ಕೆ ಮುಖ್ಯ ಪ್ರಯೋಜನವಾದ ರಾಕ್ಷಸಕುಲ ವಿನಾಶಕ್ಕೀಸೀತಾಪಹರಣವೇ ಪೂರ್ವರಂಗವು. ಈ ನಾಟಕಾರಂಭಕ್ಕೆ ದಂಡಕಾರಣ್ಯವೇ ರಂಗಸ್ಥಳದ ದ್ವಾರದೇಶವಾಗಿರುವುದರಿಂದ, ಲೋಕಕಂಟಕೋದ್ಧಾರಣಾರ್ಥವಾಗಿ ದಂಡಕಾರಣ್ಯವನ್ನು ಪ್ರವೇಶಿಸಿದನೆಂಬುದರಿಂದ ಈ ಕಾಂಡದ ಕಥೆಯು ಆರಂಭಿಸಲ್ಪಡುವುದು.

# ಅರಣ್ಯಕಾಂಡದ ವಿಷಯಾನುಕ್ರಮಣಿಕೆ


| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| | ಅವತಾರಿಕೆ. | iii |
| ೧. | ರಾಮನು ದಂಡಕಾರಣ್ಯವಾಸಿಗಳಾದ ಋಷಿಗಳಿಂದ ಆತಿಥ್ಯವನ್ನು ಹೊಂದಿದುದು. ... ... ... | ೧ |
| ೨. | ವಿರಾಧನೆಂಬ ರಾಕ್ಷಸನನ್ನು ನೋಡಿದುದು. ಆ ರಾಕ್ಷಸನು ಸೀತೆಯನ್ನು ಹರಿಸಿಕೊಂಡು ಹೋದುದು. ಆತನಿಗೂ ರಾಮಲಕ್ಷ್ಮಣರಿಗೂ ನಡೆದ ಸಂಭಾಷಣವು. ... ... ... | ೯ |
| ೩. | ವಿರಾಧನೊಡನೆ ಯುದ್ಧವು. ವಿರಾಧನು ಸೀತೆಯನ್ನು ಬಿಟ್ಟು ರಾಮಲಕ್ಷ್ಮಣರನ್ನೆತ್ತಿಕೊಂಡು ಹೋದುದು. ... | ೧೪ |
| ೪. | ಸೀತೆಯು ಅಳುತ್ತಿರುವುದನ್ನು ನೋಡಿ ರಾಮಲಕ್ಷ್ಮಣರು ಬೇಗನೆ ಆ ವಿರಾಧನ ತೋಳುಗಳನ್ನು ಕತ್ತರಿಸಿದುದು. ವಿರಾಧನ ಪೂರ್ವಜನ್ಮವೃತ್ತಾಂತವು. ಅವನು ಇವರಿಗೆ ಶರಭಂಗಾಶ್ರಮವನ್ನು ತೋರಿಸಿ, ತಾನು ನಿಜರೂಪದಿಂದ ಸ್ವರ್ಗಲೋಕವನ್ನು ಸೇರಿದುದು. ... | ೧೭ |
| ೫. | ರಾಮಲಕ್ಷ್ಮಣರು ಶರಭಂಗಾಶ್ರಮಕ್ಕೆ ಹೋದುದು. ಶರಭಂಗನು ರಾಮನನ್ನು ಸತ್ಕರಿಸಿ, ಸುತೀಕ್ಷ್ಣಾಶ್ರಮಕ್ಕೆ ಮಾರ್ಗವನ್ನು ತೋರಿಸಿ, ರಾಮನಮುಂದೆ ಅಗ್ನಿಪ್ರವೇಶವನ್ನುಮಾಡಿ ಪರಮಪದವನ್ನು ಹೊಂದಿದುದು. ... ... | ೨೧ |
| ೬. | ಶರಭಂಗಾಶ್ರಮದಲ್ಲಿದ್ದ ಋಷಿಗಳೆಲ್ಲರೂ ರಾಮನಲ್ಲಿ ಮರೆಹೊಕ್ಕು ತಮಗುಂಟಾಗಿರುವ ರಾಕ್ಷಸಬಾಧೆಯನ್ನು ತಿಳಿಸಿದುದು. ರಾಮನು ಆ ರಾಕ್ಷಸರನ್ನು ಕೊಲ್ಲುವುದಾಗಿ ಅವರಿಗೆ ಅಭಯವನ್ನು ಕೊಟ್ಟುದು. ... ... ... | ೨೭ |
| ೭. | ಸುತೀಕ್ಷ್ಣದರ್ಶನವು. ಸುತೀಕ್ಷ್ಣನು ತನಗುಂಟಾಗುತ್ತಿದ್ದ ಮೃಗಬಾಧೆಯನ್ನು ರಾಮನಲ್ಲಿ ತಿಳಿಸಿದುದು. ರಾಮನು ಆತನಿಗೆ ಮೃಗಗಳನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿಕೊಟ್ಟು, ಆ ಆಶ್ರಮದಲ್ಲಿಯೆ ರಾತ್ರಿಯನ್ನು ಕಳೆದುದು. ... ... ... | ೩೩ |
| ೮. | ಸುತೀಕ್ಷ್ಣನ ಅನುಮತಿಯನ್ನು ಪಡೆದು ರಾಮನು ಅಲ್ಲಿನ ಋಷ್ಯಾಶ್ರಮಸಮೂಹಗಳನ್ನು ಸುತ್ತಿ ನೋಡುವುದಕ್ಕಾಗಿ ಹೊರಟುದು. ... | ೩೬ |

| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| ೯. | ರಾಮನು ತಾನು ರಾಕ್ಷಸರೆಲ್ಲರನ್ನೂ ಕೊಲ್ಲುವುದಾಗಿ ಋಷಿಗಳ ಮುಂದೆ ಪ್ರತಿಜ್ಞೆಮಾಡಿದುದನ್ನು ಕೇಳಿ, ಸೀತೆಯು ಭಯಪಟ್ಟು, ವೈರಬುದ್ಧಿಯಿಲ್ಲದ ರಾಕ್ಷಸರನ್ನು ಕೊಲ್ಲದಿರಬೇಕೆಂದು ಪ್ರೇಮಪೂರ್ವಕವಾಗಿ ರಾಮನನ್ನು ಪ್ರಾರ್ಥಿಸಿದುದು. ... ... | ೩೯ |
| ೧೦. | ರಾಮನು ಆರ್ತರಕ್ಷಣವೇ ಕ್ಷತ್ರಿಯಧರ್ಮವೆಂದೂ, ತನ್ನ ಆಶ್ರಿತರ ವಿರೋಧಿಗಳೇ ತನಗೆ ವಿರೋಧಿಗಳೆಂದೂ ನಿರೂಪಿಸಿ, ತನ್ನ ಪ್ರತಿಜ್ಞಾನುಸಾರವಾಗಿ ರಾಕ್ಷಸರನ್ನು ಕೊಲ್ಲಬೇಕಾದುದೇ ಅವಶ್ಯವೆಂದು ಸೀತೆಗೆ ಹೇಳಿದುದು. ... ... ... | ೪೪ |
| ೧೧. | ರಾಮನು ತನ್ನನ್ನು ಹಿಂಬಾಲಿಸಿ ಬಂದ ಧರ್ಮಭೃತನೆಂಬ ಮುನಿಯಿಂದ, ಪಂಚಾಪ್ಸರವೆಂಬ ಸರಸ್ಸಿನ ಪ್ರಭಾವವನ್ನು ಕೇಳಿದುದು. ಅಲ್ಲಿನ ಋಷ್ಯಾಶ್ರಮಗಳಲ್ಲಿ ಸ್ವಲ್ಪಕಾಲವಿದ್ದು ಸುತೀಕ್ಷ್ಣಾಶ್ರಮಕ್ಕೆ ಬಂದು, ಆತನಿಂದ ಅಗಸ್ತ್ಯಾಶ್ರಮದ ಮಾರ್ಗವನ್ನು ಕೇಳಿ ತಿಳಿದುದು. ಲಕ್ಷ್ಮಣನಿಗೆ ಅಗಸ್ತ್ಯ ಮುನಿಯ ಕಥೆಯನ್ನು ಹೇಳುತ್ತ, ಅಗಸ್ತ್ಯಭ್ರಾತನ ಆಶ್ರಮದಲ್ಲಿ ಒಂದು ರಾತ್ರಿಯಿದ್ದು, ಅಲ್ಲಿಂದ ಅಗಸ್ತ್ಯಾಶ್ರಮವನ್ನು ಸೇರಿ, ಮೊದಲು ಲಕ್ಷ್ಮಣನನ್ನು ಆ ಮಹರ್ಷಿಯ ಬಳಿಗೆ ಕಳುಹಿಸಿದುದು! ... ... ... | ೪೭ |
| ೧೨. | ಅಗಸ್ತ್ಯನು ಶಿಷ್ಯರನ್ನು ಕಳುಹಿಸಿ, ರಾಮನನ್ನು ಕರೆಸಿಕೊಂಡು, ಅವನಿಗೆ ಅತಿಥಿ ಸತ್ಕಾರಗಳನ್ನು ನಡಿಸಿ, ವೈಷ್ಣವ ಧನುಸ್ಸನ್ನೂ ಬಾಣಬತ್ತಳಿಕೆಗಳನ್ನೂ ರಾಮನಿಗೆ ಅನುಗ್ರಹಿಸಿಕೊಟ್ಟುದು. ... | ೫೭ |
| ೧೩. | ರಾಮನು ಖರಾದಿರಾಕ್ಷಸರನ್ನು ಕೊಲ್ಲುವುದಕ್ಕಾಗಿ ಅಗಸ್ತ್ಯನಿಂದ ಅನುಜ್ಞೆಯನ್ನು ಪಡೆದು, ಸೀತಾಲಕ್ಷ್ಮಣರೊಡನೆ ಪಂಚವಟಿಗೆ ಹೋದುದು. ... ... ... | ೬೧ |
| ೧೪. | ರಾಮನು ಪಂಚವಟಿಗೆ ಹೋಗುತ್ತಿರುವಾಗ, ದಾರಿಯಲ್ಲಿ ಜಟಾಯುವನ್ನು ಕಂಡು, ಅವನ ಪೂರ್ವೋತ್ತರಗಳನ್ನು ಕೇಳಿದುದು. ಅವನೊಡನೆ ಸೇರಿ ಎಲ್ಲರೂ ಪಂಚವಟಿಗೆ ಹೋದುದು. ... ... | ೬೫ |
| ೧೫. | ಪಂಚವಟಿಯಲ್ಲಿ ರಾಮನು ಲಕ್ಷ್ಮಣನಿರ್ಮಿತವಾದ ಆಶ್ರಮದಲ್ಲಿ ಸೀತಾಲಕ್ಷ್ಮಣಸಹಿತನಾಗಿ ಕೆಲವು ಕಾಲವಿದ್ದುದು. ... ... | ೬೯ |
| ೧೬. | ಒಮ್ಮೆ ರಾಮನು ಗೋದಾವರಿಗೆ ಸ್ನಾನಾರ್ಥವಾಗಿ ಹೋದಾಗ, ಲಕ್ಷ್ಮಣನು ಅವನನ್ನು ಹಿಂಬಾಲಿಸುತ್ತ, ಆಗಿನ ಹೇಮಂತ ಋತುವನ್ನು ವರ್ಣಿಸಿ, ಭರತನ ಗುಣಗಳನ್ನು ಕೊಂಡಾಡಿ, ಕೈಕೇಯಿ | |

| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| | ಯನ್ನು ನಿಂದಿಸಿದುದು. ರಾಮನು ಅದನ್ನು ಕೇಳಲಾರದೆ ಮಾತೃನಿಂದೆಯು ಕೂಡದೆಂದು ಲಕ್ಷ್ಮಣನಿಗೆ ಬುದ್ಧಿವಾದಗಳನ್ನು ಹೇಳಿ, ಭರತನ ಗುಣಗಳನ್ನು ತಾನೂ ಕೊಂಡಾಡುತ್ತ, ಅತನಲ್ಲಿ ತನಗಿರುವ ಪ್ರೇಮಾತಿಶಯವನ್ನು ತಿಳಿಸಿದುದು. ಆಮೇಲೆ ಎಲ್ಲರೂ ಗೋದಾವರಿಯಲ್ಲಿ ಸ್ನಾನಮಾಡಿದುದು. ... ... | ೭೪ |
| ೧೭. | ಶ್ರೀರಾಮನು ಹಿಂತಿರುಗಿ ಆಶ್ರಮಕ್ಕೆಬಂದು ಅಲ್ಲಿ ಸುಖವಾಗಿದ್ದುದು. ಅಲ್ಲಿಗೆ ಶೂರ್ಪಣಖಾಗಮನವು. ಶೂರ್ಪಣಖೆಯು ತನ್ನನ್ನು ಪತ್ನಿಯನ್ನಾಗಿ ಕೈಕೊಳ್ಳಬೇಕೆಂದು ರಾಮನನ್ನು ಪ್ರಾರ್ಥಿಸಿದುದು. ... | ೮೪ |
| ೧೮. | ರಾಮನು ಲಕ್ಷ್ಮಣನನ್ನು ವರಿಸೆಂದು ಶೂರ್ಪಣಖೆಗೆ ಹೇಳಿದುದು. ಲಕ್ಷ್ಮಣನು ತಾನು ರಾಮನಿಗೆ ದಾಸನಾದುದರಿಂದ ದಾಸ ಭಾರ್ಯೆಯಾಗಿರಬಾರದೆಂದೂ, ರಾಮನನ್ನು ವರಿಸುವುದೇ ಉತ್ತಮವೆಂದೂ ಹೇಳಿದುದು. ಆಗ ಶೂರ್ಪಣಖೆಯು ಕೋಪಿಸಿ ಸೀತೆಯಮೇಲೆ ಬೀಳುವುದಕ್ಕೆ ಹೋಗಲು, ರಾಮಾಜ್ಞೆಯಿಂದ ಲಕ್ಷ್ಮಣನು ಆಕೆಯ ಕಿವಿಮೂಗುಗಳನ್ನು ಕುಯ್ದುದು. ... ... | ೮೮ |
| ೧೯. | ಶೂರ್ಪಣಖೆಯು ಖರನಿಗೆ ರಾಮಾದಿಗಳ ವೃತ್ತಾಂತವನ್ನು ತಿಳಿಸಿದುದು. ಖರನು ರಾಮನನ್ನು ಜಯಿಸುವುದಕ್ಕಾಗಿ ಹದಿನಾಲ್ಕುಮಂದಿ ರಾಕ್ಷಸಾಧಿಪತಿಗಳನ್ನು ಕಳುಹಿಸಿದುದು. ಅವರು ಶೂರ್ಪಣಖೆಯೊಡಗೂಡಿ ರಾಮನಿರುವ ಸ್ಥಳಕ್ಕೆ ಬಂದುದು. ... ... | ೯೩ |
| ೨೦. | ರಾಮನು ಆ ಹದಿನಾಲ್ಕುಮಂದಿ ರಾಕ್ಷಸಪ್ರಧಾನರನ್ನೂ ಕೊಂದುದು. ಶೂರ್ಪಣಖೆಯು ಭಯಪಟ್ಟು ಖರನ ಬಳಿಗೆ ಹಿಂತಿರುಗಿ ಹೋದುದು. ... ... ... | ೧೦೩ |
| ೨೧. | ಶೂರ್ಪಣಖೆಯು ಹದಿನಾಲ್ಕುಮಂದಿ ರಾಕ್ಷಸಪ್ರಧಾನರ ವಧ ಕ್ರಮವನ್ನೂ ಖರನಿಗೆ ತಿಳಿಸಿದುದು. ... ... | ೧೦೬ |
| ೨೨. | ಖರನು ಹದಿನಾಲ್ಕುಸಾವಿರ ಸಂಖ್ಯೆಯುಳ್ಳ ರಾಕ್ಷಸ ಸೈನ್ಯದೊಡನೆ ಯುದ್ಧಕ್ಕೆ ಹೊರಟುದು. ... ... | ೧೦೯ |
| ೨೩. | ಯುದ್ಧೋದ್ಯುಕ್ತನಾಗಿ ಹೊರಟ ಖರನು ದುಶ್ಶಕುನಗಳನ್ನು ಕಂಡುದು. ... ... ... | ೧೧೨ |
| ೨೪. | ಅತ್ತಲಾಗಿ ರಾಮನು ಜಯಸೂಚಕವಾದ ಶುಭನಿಮಿತ್ತಗಳನ್ನು ಕಂಡುದು. ಸೀತೆಯನ್ನು ಒಂದು ಬೆಟ್ಟದ ಗುಹೆಯಲ್ಲಿರಿಸಿ ಅಲ್ಲಿ ಲಕ್ಷ್ಮಣನನ್ನು ಕಾವಲಿಟ್ಟು ಯುದ್ಧಸನ್ನದ್ಧನಾದುದು. ರಾಕ್ಷಸ ಸೈನ್ಯವು ರಾಮನನ್ನು ಸಮೀಪಿಸಿದುದು. ... ... | ೧೧೫ |

| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| ೨೫. | ರಾಮ ರಾಕ್ಷಸರ ತುಮುಲಯುದ್ಧವು. ... ... | ೧೧೯ |
| ೨೬. | ದೂಷಣಾದಿಗಳ ವಧವು. ... ... ... | ೧೨೪ |
| ೨೭. | ತ್ರಿಶಿರಸ್ಸಿನ ವಧವು. ... ... ... | ೧೨೮ |
| ೨೮ | ರಾಮನು ಖರನ ರಥಾದಿಗಳನ್ನು ಮುರಿದುದು. ... | ೧೩೦ |
| ೨೯. | ರಾಮನು ಮೃದುವಾಕ್ಯಗಳಿಂದ ಖರನನ್ನು ನಿಂದಿಸಿದುದು. ಖರನು ರಾಮನಮೇಲೆ ಗದೆಯನ್ನು ಬೀಸಿದುದು. ಆ ಗದೆಯನ್ನು ರಾಮನು ಖಂಡಿಸಿದುದು. ... ... ... | ೧೩೪ |
| ೩೦. | ಗದೆಯು ಮುರಿದುದನ್ನು ನೋಡಿ, ರಾಮನು ಖರನಲ್ಲಿ ಪಶ್ಚಾತ್ತಾಪಪಟ್ಟು, ಆತನಿಗೆ ವಿವೇಕವನ್ನು ಹೇಳಿದುದು. ಖರನು ಆತನ ಬುದ್ಧಿವಾದವನ್ನು ಕೇಳದೆ ಸಾಲವೃಕ್ಷವನ್ನು ಹಿಡಿದು ರಾಮನ ಮೇಲೆ ಯುದ್ಧಕ್ಕೆ ಬಂದುದು. ರಾಮನು ಅಗಸ್ತ್ಯದತ್ತ ಬಾಣದಿಂದ ಖರನ ಹೃದಯವನ್ನು ಭೇದಿಸಿದುದು ಮಹರ್ಷಿಗಳ ಸ್ತೋತ್ರವು. ಸೀತೆಯು ಸಂತೋಷದಿಂದ ಬಂದು ರಾಮನ್ನಾಲಿಂಗಿಸಿದುದು. ... | ೧೩೮ |
| ೩೧. | ಅಕಂಪನನೆಂಬ ರಾಕ್ಷಸನು ಜನಸ್ಥಾನದಲ್ಲಿ ನಡೆದ ಈ ರಾಕ್ಷಸ ವಧವನ್ನು ಲಂಕೇಶ್ವರನಾದ ರಾವಣನಿಗೆ ತಿಳಿಸಿದುದು. ರಾವಣನು ಮಾರೀಚನ ಸಹಾಯವನ್ನು ಕೇಳಿದುದು. ಮಾರೀಚನು ರಾಮನ ಮಹಿಮೆಯನ್ನು ಬೋಧಿಸಲು, ರಾವಣನು ಲಂಕೆಗೆ ಹಿಂತಿರುಗಿದುದು. ... | ೧೪೮ |
| ೩೨. | ಶೂರ್ಪಣಖೆಯು ರಾವಣನ ಬಳಿಗೆ ಬಂದುದು. ... | ೧೫೮ |
| ೩೩. | ತನ್ನ ಕಿವಿಮೂಗುಗಳನ್ನು ನೋಡಿಯೂ ರಾವಣನು ಸುಮ್ಮನಿದ್ದುದನ್ನು ನೋಡಿ ಶೂರ್ಪಣಖೆಯು ಕೋಪಗೊಂಡು, ಆತನನ್ನು ನಿಂದಿಸಿದುದು. | ೧೬೦ |
| ೩೪. | ಶೂರ್ಪಣಖೆಯು ರಾಮಲಕ್ಷ್ಮಣರ ರೂಪಸೌಂದರ್ಯಪರಾಕ್ರಮಾದಿಗಳನ್ನೂ, ಸೀತೆಯ ರೂಪಾತಿಶಯವನ್ನೂ ರಾವಣನಿಗೆ ವರ್ಣಿಸಿ ಸೀತೆಯನ್ನು ಕದ್ದು ತರುವಂತೆ ಬೋಧಿಸಿದುದು. ... | ೧೬೩ |
| ೩೫. | ರಾವಣನು ಮಾರೀಚನ ಬಳಿಗೆ ಬಂದುದು. ... ... | ೧೬೭ |
| ೩೬. | ರಾವಣನು ಜನಸ್ಥಾನವೃತ್ತಾಂತವನ್ನು ಮಾರೀಚನಿಗೆ ತಿಳಿಸಿ, ಸೀತೆಯನ್ನು ಕದ್ದುತರುವುದಕ್ಕಾಗಿ ಮೃಗರೂಪದಿಂದ ತನಗೆ ಸಹಾಯಕನಾಗಬೇಕೆಂದು ಆತನನ್ನು ಬೇಡಿದುದು. ... ... | ೧೭೧ |
| ೩೭. | ಸೀತಾಪಹರಣವೇ ರಾಕ್ಷಸಕುಲನಾಶಕ್ಕೆ ಮೂಲವಾಗುವುದೆಂದು ಹೇಳಿ, ಮಾರೀಚನು ರಾವಣನಿಗೆ ಹಿತೋಪದೇಶವನ್ನು ಮಾಡಿದುದು. ... | ೧೭೫ |
| ೩೮. | ಹಿಂದೆ ಬಾಲನಾದ ರಾಮನಿಂದ ತನಗುಂಟಾದ ಸಂಕಟವನ್ನು ಮಾರೀಚನು ರಾವಣನೊಡನೆ ಹೇಳಿದುದು. ... ... ... | ೧೭೮ |

| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| ೩೯. | ಮಾರೀಚನು ರಾವಣನಿಗೆ ಬೇರೊಂದು ವೃತ್ತಾಂತದಿಂದ ರಾಮನ ಮಹಿಮೆಯನ್ನು ತಿಳಿಸಿದುದು. ... ... | ೧೮೨ |
| ೪೦. | ರಾವಣನು ಮಾರೀಚನ ಬುದ್ಧಿವಾದವನ್ನು ನಿರಾಕರಿಸಿ, ತನಗೆ ಸಹಾಯ ಮಾಡಿಯೇ ತೀರಬೇಕೆಂದು ಆತನನ್ನು ಬಲಾತ್ಕರಿಸಿದುದು. ... | ೧೮೫ |
| ೪೧. | ಮಾರೀಚನು ರಾವಣನಿಗೆ ಪುನಃ ಹಿತವನ್ನು ಬೋಧಿಸಿದುದು. ... | ೧೮೯ |
| ೪೨. | ಮಾರೀಚನು ರಾವಣನೊಡನೆ ರಥದಲ್ಲಿ ಹೊರಟು, ನಾನಾನಗರಾದಿಗಳನ್ನು ನೋಡುತ್ತ ದಂಡಕಾರಣ್ಯದಲ್ಲಿ ರಾಮಾಶ್ರಮಕ್ಕೆ ಹೋದುದು. ಅಲ್ಲಿ ವಿಚಿತ್ರ ಮೃಗರೂಪವನ್ನು ಧರಿಸಿ ನಲಿದಾಡುತ್ತಿರುವಾಗ, ಪುಷ್ಪಾಪಚಯಕ್ಕಾಗಿ ಬಂದ ಸೀತೆಯು ಅದನ್ನು ನೋಡಿ ಆಶ್ಚರ್ಯಗೊಂಡುದು. ... ... ... | ೧೯೨ |
| ೪೩. | ಸೀತೆಯು ಮಾಯಾಮೃಗವನ್ನು ನೋಡಿ, ಅದನ್ನು ಹಿಡಿದುಕೊಡಬೇಕೆಂದು ರಾಮಲಕ್ಷ್ಮಣರನ್ನು ಪ್ರಾರ್ಥಿಸಿದುದು. ಲಕ್ಷ್ಮಣನು ಅದು ರಾಕ್ಷಸನ ಮಾಯೆಯೆಂದು ಹೇಳಿ ತಡೆದುದು. ರಾಮನು ಹೇಗಿದ್ದರೂ ಅದನ್ನು ಹಿಡಿದು ತರುವುದಾಗಿ ಹೇಳಿ, ಸೀತೆಗೆ ಕಾವಲಾಗಿ ಲಕ್ಷ್ಮಣನನ್ನಿರಿಸಿ ಆ ಮೃಗವನ್ನು ಹಿಂಬಾಲಿಸಿ ಹೋದುದು. ... | ೧೯೬ |
| ೪೪. | ರಾಮನು ಮಾಯಾಮೃಗವನ್ನು ಬಹುದೂರದವರೆಗೆ ಹಿಂಬಾಲಿಸಿದರೂ ಅದು ಕೈಗೆ ಸಿಕ್ಕದಿರಲು, ಕೋಪದಿಂದ ಬಾಣವನ್ನು ಬಿಟ್ಟುದು. ಅದು ರಾಕ್ಷಸರೂಪವನ್ನು ಹೊಂದಿ ರಾಮನಂತೆ ದೀನಧ್ವನಿಯಿಂದ ಕೂಗಿದುದು. ... ... ... | ೨೦೪ |
| ೪೫. | ಸೀತೆಯು ಮಾರೀಚನ ದೀನಧ್ವನಿಯನ್ನು ಕೇಳಿ ಭಯಪಟ್ಟು, ಲಕ್ಷ್ಮಣನನ್ನು ರಾಮನ ಸಮೀಪಕ್ಕೆ ಹೋಗೆಂದು ನಿರ್ಬಂಧಿಸಿದುದು. ಲಕ್ಷ್ಮಣನು ರಾಮನಿಗೆ ಯಾವ ಭಯವೂ ಉಂಟಾಗಲಾರದೆಂದು ಸೀತೆಗೆ ಧೈರ್ಯವನ್ನು ಹೇಳಿದುದು. ಸೀತೆಯು ಲಕ್ಷ್ಮಣನನ್ನು ನಿಂದಿಸಿದುದು. ಅದನ್ನು ಸಹಿಸಲಾರದೆ ಲಕ್ಷ್ಮಣನು ರಾಮನನ್ನು ಹುಡುಕಿಕೊಂಡು ಹೊರಟುದು. ... ... | ೨೦೭ |
| ೪೬. | ಲಕ್ಷ್ಮಣನು ಪರ್ಣಶಾಲೆಯನ್ನು ಬಿಟ್ಟು ಹೋದಮೇಲೆ ರಾವಣನು ಸನ್ಯಾಸಿ ವೇಷದಿಂದ ಸೀತೆಯ ಬಳಿಗೆ ಬಂದು, ಅವಳ ಸೌಂದರ್ಯಾದಿಗಳನ್ನು ವರ್ಣಿಸಿ ಸ್ತೋತ್ರಮಾಡಿ, ಅವಳ ಪೂರ್ವವೃತ್ತಾಂತವನ್ನು ಕೇಳಿದುದು. ಸೀತೆಯು ತನ್ನ ವೃತ್ತಾಂತವನ್ನು ಯಥಾವತ್ತಾಗಿ ತಿಳಿಸಿದುದು. ... ... ... | ೨೧೩ |

| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| ೪೭. | ಸೀತೆಯು ತನ್ನ ವೃತ್ತಾಂತವನ್ನು ರಾವಣನಿಗೆ ಹೇಳಿದ ಮೇಲೆ ರಾವಣನು ತನ್ನ ಸ್ಥಿತಿಯನ್ನು ತಿಳಿಸಿ ತನ್ನನ್ನು ವರಿಸುವಂತೆ ಸೀತೆಯನ್ನು ಕೇಳಿದುದು. ಸೀತೆಯು ಪರುಷೋಕ್ತಿಗಳನ್ನಾಡಿದುದು. ... | ೨೧೮ |
| ೪೮. | ರಾವಣನು ನಿಜರೂಪವನ್ನು ತೋರಿಸಿ, ತನ್ನ ಪರಾಕ್ರಮಾದಿಗಳನ್ನು ಹೊಗಳಿಕೊಂಡು ತನ್ನನ್ನು ವರಿಸಬೇಕೆಂದು ಸೀತೆಯನ್ನು ನಿರ್ಬಂಧಿಸಿದುದು. ಸೀತೆಯು ರಾವಣನನ್ನು ನಿಂದಿಸಿದುದು. ... | ೨೨೬ |
| ೪೯. | ರಾವಣನು ನಿಜರೂಪವನ್ನು ತೋರಿಸಿ ಸೀತೆಯನ್ನಪಹರಿಸಿಕೊಂಡು ಹೋದುದು. ಸೀತೆಯ ಪ್ರಲಾಪವು. ... ... | ೨೩೧ |
| ೫೦. | ಜಟಾಯುವು ರಾವಣನನ್ನಡ್ಡಗಟ್ಟಿ ಸೀತೆಯನ್ನು ಬಿಟ್ಟುಬಿಡುವಂತೆ ರಾವಣನಿಗೆ ಹಿತೋಕ್ತಿಯನ್ನು ಹೇಳಿದುದು. ... | ೨೩೮ |
| ೫೧. | ಜಟಾಯು ರಾವಣರ ಯುದ್ಧವು. ಜಟಾಯುವು ಶಸ್ತ್ರಹತನಾಗಿ ಬಿದ್ದುದು. | ೨೪೨ |
| ೫೨. | ಪುನಃ ರಾವಣನು ಸೀತೆಯನ್ನೆತ್ತಿಕೊಂಡು ಹೋದುದು. ವೇಗದಿಂದ ಹೋಗುತ್ತಿರುವಾಗ ಸೀತೆಯು ತನ್ನ ಆಭರಣಗಳನ್ನೂ ಪುಷ್ಪಮಾಲಿಕೆಗಳನ್ನೂ ಕೆಳಕ್ಕೆ ಬಿಸುಟುದು. ಲೋಕವೆಲ್ಲವೂ ಅದರಿಂದ ಕ್ಷೋಭ ಹೊಂದಿದುದು. ... ... ... | ೨೪೭ |
| ೫೩. | ಸೀತೆಯು ರಾವಣನನ್ನು ಅನೇಕ ವಿಧದಲ್ಲಿ ನಿಂದಿಸಿದುದು. ... | ೨೫೨ |
| ೫೪. | ಸೀತೆಯು ತನ್ನ ಕೆಲವು ಆಭರಣಗಳನ್ನು ಸೆರಗಿನಲ್ಲಿ ಕಟ್ಟಿ, ದಾರಿಯಲ್ಲಿ ಗೋಚರಿಸಿದ ಕೆಲವು ವಾನರರ ಮುಂದೆ ರಾವಣನಿಗೆ ತಿಳಿಯದಂತೆ ಬಿಸುಟುದು. ರಾವಣನು ಸೀತೆಯನ್ನು ಅಶೋಕವನದಲ್ಲಿಟ್ಟು, ಇತ್ತಲಾಗಿ ರಾಮನನ್ನು ಕೊಲ್ಲಬೇಕೆಂದು ಕೆಲವು ರಾಕ್ಷಸರನ್ನು ಜನಸ್ಥಾನಕ್ಕೆ ಕಳುಹಿಸಿದುದು. ... ... | ೨೫೫ |
| ೫೫. | ರಾವಣನು ಸೀತೆಗೆ ತನ್ನ ಭೋಗಸಾಧನಗಳನ್ನು ತೋರಿಸಿ ಆಸೆ ಹುಟ್ಟಿಸಿದುದು. ... ... ... | ೨೫೯ |
| ೫೬. | ಸೀತೆಯು ರಾವಣನನ್ನು ಧಿಕ್ಕರಿಸಿ ಮಾತಾಡಿದುದು. ರಾವಣನು ಅವಳನ್ನು ಪುನಃ ಅಶೋಕವನಕ್ಕೆ ಕಳುಹಿಸಿದುದು. ... | ೨೬೫ |
| ೫೭. | ರಾಮನು ಇತ್ತಲಾಗಿ ಮಾರೀಚನನ್ನು ಕೊಂದು ಆಶ್ರಮಕ್ಕೆ ಬರುತ್ತಿರುವಾಗ ಲಕ್ಷ್ಮಣನನ್ನು ನೋಡಿದುದು. ದಾರಿಯಲ್ಲಿ ದುಶ್ಶಕುನಗಳನ್ನು ಕಂಡು ದುಃಖಿಸುತ್ತ ಬಂದುದು. ... ... | ೨೭೦ |
| ೫೮. | ರಾಮನು ಇನ್ನುಮೇಲೆ ಸೀತೆಯನ್ನು ಕಾಣುವುದು ಸಂದೇಹವೆಂದು ನಿಶ್ಚಯಿಸಿ ಪ್ರಲಾಪಿಸಿದುದು. ... ... | ೨೭೩ |

| ಸರ್ಗಸಂಖ್ಯೆ | ವಿಷಯಗಳು | ಪುಟಸಂಖ್ಯೆ |
|---|---|---|
| ೫೯. | ರಾಮನು ಸೀತೆಯೊಬ್ಬಳನ್ನೇ ಬಿಟ್ಟುಬರುವುದಕ್ಕೆ ಕಾರಣವೇನೆಂದು ಲಕ್ಷ್ಮಣನನ್ನು ಕೇಳಿದುದು. ಲಕ್ಷ್ಮಣನು ಅಲ್ಲಿ ನಡೆದ ವಿಷಯವನ್ನು ರಾಮನಿಗೆ ತಿಳಿಸಿದುದು. ... ... | ೨೭೬ |
| ೬೦. | ರಾಮನು ಆಶ್ರಮದಲ್ಲಿ ಸೀತೆಯನ್ನು ಕಾಣದೆ ದುಃಖಿಸಿದುದು. ... | ೨೭೯ |
| ೬೧. | ರಾಮನ ಪ್ರಲಾಪವು. ಲಕ್ಷ್ಮಣನು ಸಮಾಧಾನಪಡಿಸಿದುದು. ... | ೨೮೬ |
| ೬೨. | ಪುನಃ ರಾಮನ ವಿಲಾಪವು. ... ... | ೨೮೯ |
| ೬೩. | ರಾಮನ ದುಃಖಪ್ರಲಾಪಗಳು. ... ... | ೨೯೧ |
| ೬೪. | ದಾರಿಯಲ್ಲಿ ಕಾಣಿಸಿದ ಗುರುತುಗಳಿಂದ ಸೀತೆಯು ರಾಕ್ಷಸರಿಂದಪಹೃತಳಾದಳೆಂದು ನಿಶ್ಚಯಿಸಿದುದು. ... ... | ೨೯೩ |
| ೬೫. | ಲಕ್ಷ್ಮಣನು ರಾಮನನ್ನು ಸಮಾಧಾನಪಡಿಸಿದುದು. ... | ೩೦೪ |
| ೬೬. | ಲಕ್ಷ್ಮಣನು ರಾಮನಿಗೆ ಮುಂದೆ ಮಾಡಬೇಕಾದ ಕಾರ್ಯವನ್ನು ತಿಳಿಸಿದುದು. ... ... ... | ೩೦೬ |
| ೬೭. | ರಾಮನು ದಾರಿಯಲ್ಲಿ ಜಟಾಯುವನ್ನು ಕಂಡು ದುಃಖಿಸಿದುದು. ... | ೩೦೯ |
| ೬೮. | ರಾಮನು ಜಟಾಯುವಿಗೆ ಅಗ್ನಿಸಂಸ್ಕಾರಾದಿಗಳನ್ನು ಮಾಡಿದುದು. ... | ೩೧೩ |
| ೬೯. | ಅಯೋಮುಖಿಯನ್ನು ವಿರೂಪಮಾಡಿದುದು. ಕಬಂಧನನ್ನು ಕಂಡುದು. ... ... ... | ೩೨೧ |
| ೭೦. | ರಾಮಲಕ್ಷ್ಮಣರು ಕಬಂಧನ ತೋಳುಗಳನ್ನು ಕಡಿದುದು. ಅವನಿಗೆ ಪೂರ್ವಜನ್ಮಸ್ಮೃತಿಯುಂಟಾದುದು. ... ... | ೩೨೬ |
| ೭೧. | ಕಬಂಧನು ತನ್ನ ಪೂರ್ವವೃತ್ತಾಂತವನ್ನು ತಿಳಿಸಿ ತನ್ನ ಶಾಪವಿಮೋಚನೆಗಾಗಿ ತನ್ನ ದೇಹವನ್ನು ದಹಿಸಬೇಕೆಂದು ಬೇಡಿದುದು. ... | ೩೨೯ |
| ೭೨. | ಕಬಂಧನು ರಾಮನಿಂದ ಸಂಸ್ಕೃತನಾಗಿ, ನಿಜರೂಪವನ್ನು ಹೊಂದಿ, ರಾಮನಿಗೆ ತಕ್ಕ ಮಿತ್ರನೊಬ್ಬನನ್ನು ತಿಳಿಸಿದುದು. ... | ೩೩೩ |
| ೭೩. | ಕಬಂಧನು ರಾಮನಿಗೆ ಸುಗ್ರೀವನಿರುವ ಸ್ಥಳವನ್ನೂ ಅಲ್ಲಿಗೆ ಹೋಗುವ ದಾರಿಯನ್ನೂ ತಿಳಿಸಿ ಅಂತರ್ಧಾನಹೊಂದಿದುದು. ... | ೩೩೬ |
| ೭೪. | ರಾಮಲಕ್ಷ್ಮಣರು ಶಬರ್ಯಾಶ್ರಮಕ್ಕೆ ಹೋದುದು. ಶಬರಿಯು ಅವರನ್ನು, ಪೂಜಿಸಿ, ಅಲ್ಲಿ ಮತಂಗಶಿಷ್ಯರ ಆಶ್ರಮವೇ ಮೊದಲಾದುವನ್ನು ತೋರಿಸಿ ತಾನು ಪರಮಪದಕ್ಕೆ ಹೋದುದು. ... | ೩೪೧ |
| ೭೫. | ರಾಮಲಕ್ಷ್ಮಣರು ಪಂಪಾ ತೀರವನ್ನು ಸೇರಿದುದು. ... | ೩೪೬ |

ಶ್ರೀಃ

ಶ್ರೀ ಸೀತಾಲಕ್ಷ್ಮಣಸಮೇತ ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ವಾಲ್ಮೀಕಿಮಹರ್ಷಿಪ್ರಣೀತ

# ಶ್ರೀಮದ್ರಾಮಾಯಣವು

## ಅರಣ್ಯಕಾಂಡವು

ಶ್ರೀರಾಮನಾದರೋ ಯಾವುದಕ್ಕೂ ಅಂಜದ ಮಹಾಧೈರ್ಯವುಳ್ಳವನು ಮತ್ತು ಯಾರಿಂದಲೂ ಇದಿರಿಸುವುದಕ್ಕಾಗದ ಮಹಾ ವೀರ್ಯವುಳ್ಳವನು. ಆದುದರಿಂದಲೇ ಚಿತ್ರಕೂಟವನ್ನು ಬಿಟ್ಟು ಇತರರಿಂದ ಪ್ರವೇಶಿಸುವುದಕ್ಕಸಾಧ್ಯವಾದ ದಂಡಕಾರಣ್ಯಕ್ಕೂ ನಿರ್ಭಯವಾಗಿ ಪ್ರವೇಶಿಸಿದನು. ಅದರ ಮುಂಭಾಗದಲ್ಲಿ ಅನೇಕ ಋಷ್ಯಾಶ್ರಮಗಳ ಸಮೂಹವು ಕಾಣಿಸಿತು. ಅಲ್ಲಲ್ಲಿ ಕಟ್ಟಿದ ದರ್ಭೆಯ ರಾಶಿಗಳೂ, ಬಿಸಿಲಿನಲ್ಲಿ ಆರುಹಾಕಿದ ನಾರುಮಡಿಗಳೂ ಗೋಚರಿಸಿದುವು. ಆ ಪ್ರದೇಶವನ್ನು ನೋಡುವಾಗಲೇ ಅಲ್ಲಿಂದ ಅದ್ಭುತವಾದ ಒಂದು ಬ್ರಹ್ಮತೇಜಸ್ಸು ಹೊರಟುಬರುವಂತೆ ತೋರಿತು. ಆಕಾಶಮಧ್ಯಗತನಾದ ಸೂರ್ಯನನ್ನು, ಮಂದೇಹಾದಿ ರಾಕ್ಷಸರು ಹೇಗೆ ಇದಿರಿಸಲಾರರೋ, ಹಾಗೆ ಆ ದಿವ್ಯತೇಜಸ್ಸೇ ದೈತ್ಯದಾನವಾದಿಗಳನ್ನು ದೂರಕ್ಕೋಡಿಸುವಂತೆ ತೋರುತ್ತಿತ್ತು. ಅಲ್ಲಿನ ಮಹರ್ಷಿಗಳ ಪ್ರಭಾವದಿಂದ ಪ್ರಾಣಿಗಳಿಗೆ ಸ್ವಾಭಾವಿಕವಾಗಿರಬೇಕಾದ ಜಾತಿವೈರವು ನಿಶ್ಶೇಷವಾಗಿ ಬಿಟ್ಟುಹೋಗಿದ್ದುದರಿಂದ, ಆ ಪ್ರದೇಶವು ಸಮಸ್ತ ಭೂತಗಳಿಗೂ ಸುಖಾಶ್ರಯವಾಗಿತ್ತು. ಅಲ್ಲಲ್ಲಿ ಸಾರಿಸಿ ಶುಚಿಯಾಗಿಡಲ್ಪಟ್ಟ ಅಂಗಳಗಳು ಕಾಣಿಸಿದುವು. ಅನೇಕ ಮೃಗಗಳೂ ಪಕ್ಷಿಸಮೂಹಗಳೂ ಸುಖವಾಗಿ ತಿರುಗುತ್ತಿದ್ದುವು. ಆ ಪ್ರದೇಶವು ಅತಿಮನೋಹರವಾಗಿದ್ದುದರಿಂದ, ಅಲ್ಲಿಗೆ ಅಪ್ಸರಸ್ಸುಗಳು ಗುಂಪುಗುಂಪಾಗಿ ಬಂದು ಅಲ್ಲಲ್ಲಿ ನರ್ತಿಸುತ್ತಿದ್ದರು. ಅಲ್ಲಲ್ಲಿ ವಿಸ್ತಾರವಾದ ಅಗ್ನಿಶಾಲೆಗಳು ಕಾಣಿಸಿದುವು. ಮತ್ತು ಸ್ರುಕ್ಕು ಮೊದಲಾದ

ಯಾಗೋಪಕರಣಗಳು, ಕೃಷ್ಣಾಜಿನಗಳು, ದರ್ಭೆಗಳು, ಸಮಿತ್ತುಗಳು, ಜಲ ಕುಂಭಗಳು, ಫಲಮೂಲಗಳು, ಇವೆಲ್ಲವೂ ಶೋಭಿಸುತ್ತಿದ್ದುವು. ರುಚಿಯಾದ ಹಣ್ಣುಗಳಿಂದ ತುಂಬಿದ ದೊಡ್ಡದೊಡ್ಡ ಕಾಡುಮರಗಳು ಅಲ್ಲಿ ದಟ್ಟವಾಗಿ ಬೆಳೆದಿದ್ದುವು. ಭೂತಬಲಿ ಮೊದಲಾದ ಬಲಿಕಾರ್ಯಗಳಿಂದಲೂ ವೈಶ್ವದೇವಾದಿ ಹೋಮಗಳಿಂದಲೂ ಆ ಪ್ರದೇಶವೆಲ್ಲವೂ ಪವಿತ್ರವಾಗಿ ಕಾಣುತ್ತಿದ್ದುವು. ಸುತ್ತಲೂ ವೇದಮಂತ್ರಧ್ವನಿಗಳು ಹೊರಡುತ್ತಿದ್ದುವು. ದೇವಾರ್ಚನೆಗಾಗಿ ಅಲ್ಲಲ್ಲಿ ಪುಷ್ಪಗಳು ಸಂಗ್ರಹಿಸಿಡಲ್ಪಟ್ಟಿದ್ದುವು. ತಾವರೆ ಹೂಗಳಿಂದ ತುಂಬಿದ ಅನೇಕ ಸರೋವರಗಳು ಕಾಣಿಸುತ್ತಿದ್ದುವು. ಫಲಮೂಲಗಳನ್ನು ಭುಜಿಸುತ್ತ ಜಿತೇಂದ್ರಿಯರಾಗಿ, ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿ, ಸೂರ್ಯಾಗ್ನಿ ಗಳಿಗೆ ಸಮಾನವಾದ ದಿವ್ಯತೇಜಸ್ಸುಳ್ಳ ವೃದ್ಧ ಮುನಿಗಳು ಅಲ್ಲಲ್ಲಿ ಕಾಣಿಸುತ್ತಿ ದ್ದರು. ಮತ್ತು ಈ ಋಷಿಸಮೂಹಕ್ಕೂ ಪೂಜನೀಯರಾಗಿ ಆಹಾರನಿಯಮವುಳ್ಳ ಕೆಲವು ಋಷಿಶ್ರೇಷ್ಠರು ಅಲ್ಲಲ್ಲಿ ಕಂಗೊಳಿಸುತ್ತಿದ್ದರು. ಹೀಗೆ ಬ್ರಹ್ಮಲೋಕಕ್ಕೆ ಸಮಾನವಾಗಿ, ವೇದಮಂತ್ರಘೋಷಗಳಿಂದ ತುಂಬಿ, ಬ್ರಹ್ಮಜ್ಞಾನವುಳ್ಳ ಮಹಾತ್ಮರಾದ ಅನೇಕ ಬ್ರಾಹ್ಮಣರಿಂದಲಂಕರಿಸಲ್ಪಟ್ಟ ಆ ಆಶ್ರಮ ಪ್ರದೇಶ ವನ್ನು ಶ್ರೀರಾಮನು ನೋಡಿ, ಶಾಂತವಾದ ಆ ಋಷ್ಯಾಶ್ರಮವನ್ನು ತಾನು ವಿನಯವೇಷದಿಂದ ಪ್ರವೇಶಿಸಬೇಕೆಂದು ನಿಶ್ಚಯಿಸಿ, ತನ್ನ ಧನುಸ್ಸಿನ ನಾಣನ್ನಿಳಿಸಿ, ವಿನೀತನಾಗಿ ಪ್ರವೇಶಿಸಿದನು. ಇಷ್ಟರಲ್ಲಿ ಆ ಆಶ್ರಮವಾಸಿ ಗಳಾದ ಋಷಿಗಳು [1] ದಿವ್ಯಜ್ಞಾನವುಳ್ಳವರಾಗಿಯೂ, ಅಲೌಕಿಕವಾದ ವಿಷಯ ಗಳನ್ನೂ ತಮ್ಮ ದಿವ್ಯದೃಷ್ಟಿಯಿಂದ ಸಾಕ್ಷಾತ್ಕರಿಸಬಲ್ಲವರಾಗಿಯೂ ಇದ್ದುದರಿಂದ ರಾಮನು ತಮ್ಮಾಶ್ರಮಕ್ಕೆ ಬರುತ್ತಿರುವುದನ್ನೂ, ಆತನ ಅವತಾರ ರಹಸ್ಯ ವನ್ನೂ ತಿಳಿದು, ಬಹುಸಂತೋಷದಿಂದ ರಾಮನನ್ನೂ, ಯಶಸ್ವಿನಿಯಾದ

---

1 ಇಲ್ಲಿ "ದಿವ್ಯಜ್ಞಾನೋಪಪನ್ನಾಸ್ತೇ ರಾಮಂ ದೃಷ್ಟ್ವಾ ಮಹರ್ಷಯಃ | ಅಭ್ಯಗಚ್ಛಂಸ್ತಥಾ ಪ್ರೀತಾಃ" ಎಂದು ಮೂಲವು. ದಿವ್ಯಜ್ಞಾನೋಪಪನ್ನರೆಂದರೆ ಲೋಕ ವಿಲಕ್ಷಣವಾದ ಜ್ಞಾನವುಳ್ಳವರೆಂದರ್ಥವು. ಇದರಿಂದ ಅವರಿಗೆ ರಾವಣವಧಾರ್ಥವಾಗಿ ಅವತರಿಸಿದ ಮಹಾವಿಷ್ಣುವೇ ರಾಮನೆಂದೂ, ಲಕ್ಷ್ಮಣನು ಅವನ ಅಂಶವೆಂದೂ, ಸೀತೆಯೇ ಲಕ್ಷ್ಮೀದೇವಿಯೆಂದೂ ಅವರವರ ಅವತಾರ ರಹಸ್ಯವು ತಿಳಿದಿತ್ತೆಂದು ಭಾವವು. ಇಂತಹ ಮಹರ್ಷಿಗಳು "ಪ್ರೀತಾಃ" ಭಕ್ತಿರೂಪವಾದ ಪ್ರೀತಿಯುನ್ನಿಟ್ಟವರಾಗಿ "ಅಭ್ಯಗಚ್ಛನ್" ಇದಿರುಗೊಂಡರು.

ಸೀತೆಯನ್ನೂ ಇದಿರುಗೊಳ್ಳುವುದಕ್ಕಾಗಿ ಬಂದರು. ಧಾರ್ಮಿಕರಾಗಿಯೂ, ವ್ರತನಿಷ್ಠರಾಗಿಯೂ ಇರುವ ಆ ಮಹರ್ಷಿಗಳು [1] ಉದಿಸುತ್ತಿರುವ ಚಂದ್ರನಂತೆ ನೇತ್ರಾನಂದಕರವಾದ ರಾಮಲಕ್ಷ್ಮಣರನ್ನೂ, ಸೀತೆಯನ್ನೂ ಮುಂದೆ ನೋಡಿ, ದೂರದಿಂದಲೇ ಇವರಿಗೆ ಮಂಗಳಾಶೀರ್ವಚನಗಳನ್ನು ಮಾಡುತ್ತ ಸಮೀಪಕ್ಕೆ ಬಂದು ಇವರನ್ನು ಪ್ರೀತಿಯಿಂದ ಮನ್ನಿಸಿ ಬರಮಾಡಿಕೊಂಡರು. ಕಾಡಿನಲ್ಲಿಯೇ

---

1 ಇಲ್ಲಿ "ತೇ ತಾಂ ಸೋಮಮಿವೋದ್ಯಂತಂ ದೃಷ್ಟ್ವಾ ವೈ ಧರ್ಮಚಾರಿಣಃ। ಲಕ್ಷ್ಮಣಂ ಚೈವ ದೃಷ್ಟ್ವಾ ತು ವೈದೇಹೀಂ ಚ ಯಶಸ್ವಿನೀಂ॥ ಮಂಗಳಾನಿ ಪ್ರಯುಂಜಾನಾಃ ಪ್ರತ್ಯಗೃಹ್ಣನ್ ದೃಢವ್ರತಾಃ" ಎಂಬುದಾಗಿ ರಾಮನನ್ನು ಉದಿಸುವ ಚಂದ್ರನಿಗೆ ಹೋಲಿಸಿರುವುದರಿಂದ (ಚಂದ್ರನು ಕತ್ತಲೆಯನ್ನು ನೀಗಿಸುವುದಕ್ಕಾಗಿ ಉದಿಸುವಂತೆ) ಈ ರಾಮನೂ ರಾಕ್ಷಸನಿರಸನಾರ್ಥವಾಗಿ ಉದಿಸಿದವನೆಂದು ಭಾವವು. ಮತ್ತು ಆ ರಾಮನು ಕಾಡುಗಳ ಕತ್ತಲೆಯಲ್ಲಿ ನಡೆದು ಬರುತ್ತಿರುವುದರಿಂದ ಉದಿಸುವಾಗ ಮೇಘದಿಂದ ಮರೆಸಲ್ಪಟ್ಟ ಚಂದ್ರನಂತೆ ಪ್ರಕಾಶಿಸುವನೆಂದೂ ಭಾವವು. (ದೃಷ್ಟ್ವಾ ವೈ ಧರ್ಮಚಾರಿಣಃ) ಇದಕ್ಕೆ ಮೊದಲು ತಾವು ತಮ್ಮ ಧರ್ಮಬಲದಿಂದ ಕಾಣುತ್ತಿದ್ದ ರಾಮನನ್ನು ಈಗ ಕಣ್ಣಿದಿರಿಗೆ ನೋಡುವವರಾದೆವೆಂಬರ್ಥವು. (ಮಂಗಳಾನಿ ಪ್ರಯುಂಜಾನಾಃ) ಆ ಋಷಿಗಳು ಈ ರಾಮನನ್ನು ಕಂಡೊಡನೆ ಆತನಲ್ಲಿ ತಮಗುಂಟಾಗಿರುವ ರಾಕ್ಷಸಬಾಧೆಯನ್ನು ತಿಳಿಸಿ, ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ಅತ್ಯಾತುರವುಳ್ಳವರಾಗಿದ್ದರೂ, ಆ ರಾಮನ ದೇಹದ ಸೌಂದರ್ಯ ಸೌಕುಮಾರ್ಯಾದಿಗಳನ್ನು ನೋಡಿ ಪರವಶರಾಗಿ, ಘೋರರಾಕ್ಷಸರಿಂದ ತುಂಬಿದ ಆ ವನದಲ್ಲಿ ಆತನ ದಿವ್ಯಮಂಗಳ ವಿಗ್ರಹಕ್ಕೆ ಯಾವ ಹಾನಿಯುಂಟಾಗುವುದೋ ಎಂದು ಭಯಪಟ್ಟು, ಮೊದಲು ಆತನಿಗೆ ಮಂಗಳಾಶೀರ್ವಚನಗಳನ್ನು ಹೇಳುತ್ತ ಬಂದರೆಂದು ಭಾವವು. (ದೃಢವ್ರತಾಃ) ಆತನೇ ತಮಗೆ ರಕ್ಷಕನೇ ಹೊರತು ಬೇರೆಯವರಲ್ಲವೆಂಬ ಬಲವಾದ ನಿಯಮವನ್ನು ಹಿಡಿದವರೆಂದು ಭಾವವು. ಅಥವಾ "ತಸ್ಮಾತ್ಸೋಮರಾಜಾನೋ ಬ್ರಾಹ್ಮಣಾಃ" ಎಂಬ ಶ್ರುತಿ ಪ್ರಮಾಣದಂತೆ, ಬ್ರಾಹ್ಮಣರಿಗೆ, ಚಂದ್ರನೇ ರಾಜನೆನಿಸುವನು. ಆದುದರಿಂದ ಇಲ್ಲಿ ಈ ಬ್ರಾಹ್ಮಣರು, ಚಂದ್ರನಂತೆ ತಮಗೆ ರಕ್ಷಕನಾದ ರಾಮನನ್ನು ಕಂಡರೆಂದು ಭಾವವು. (ಯಶಸ್ವಿನೀಂ) ಪಾತಿವ್ರತ್ಯ ಯಶಸ್ಸುಳ್ಳವಳು, ಅಥವಾ ರಾಕ್ಷಸಕುಲ ಸಂಹಾರಕ್ಕೆ ತಾನೇ ಮೂಲವೆಂಬ ಕೀರ್ತಿಯನ್ನು ಪಡೆದವಳು ಎಂದು ಭಾವವು. ಹೀಗೆ ಋಷಿಗಳು ಸೀತಾ ರಾಮಲಕ್ಷ್ಮಣರನ್ನು ನೋಡಿದಾಗಲೇ ಅವರಿಗೆ ಈ ಮೂವರ ಅವತಾರ ರಹಸ್ಯವೂ ವ್ಯಕ್ತವಾಗಿ ತಿಳಿದುಹೋದುದರಿಂದ, ಆ ಋಷಿಗಳು ಈ ರಾಮನಲ್ಲಿ ಕೇವಲ ಪ್ರಾಕೃತ ಮನುಷ್ಯನೆಂಬ ಭಾವನೆಯನ್ನು ಬಿಟ್ಟು, ಅವನಲ್ಲಿ ಮರೆಹೊಕ್ಕು ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸುವರೆಂದು ತಿಳಿಯಬೇಕು.

*

ಹುಟ್ಟಿಬೆಳೆದ ಆ ಋಷಿಗಳು ಈ ರಾಮನ [1] ರೂಪವನ್ನೂ, ಸೌಂದರ್ಯವನ್ನೂ, ಲಾವಣ್ಯವನ್ನೂ, ಸೌಕುಮಾರ್ಯವನ್ನೂ, ಈತನ ಅಂದವಾದ ವೇಷವನ್ನೂ ನೋಡಿ ಆಶ್ಚರ್ಯದಿಂದ ಅರಳಿದ ಮುಖವುಳ್ಳವರಾಗಿದ್ದರು. ಮತ್ತು ವನಚಾರಿಗಳಾದ ಆ ಋಷಿಗಳು ಸೀತಾಲಕ್ಷ್ಮಣರ ಅಪೂರ್ವವಾದ ಆ ರೂಪಾತಿಶಯವನ್ನು ನೋಡಿ [2] ಆಶ್ಚರ್ಯಪಟ್ಟು ಎವೆಯಿಲ್ಲದವರಂತೆ ಕಣ್ಣಿಟ್ಟು ನೋಡುತ್ತಾ ಸ್ತಬ್ಧರಾಗಿದ್ದರು. ಆಮೇಲೆ ಮಹಾತ್ಮರಾದ ಆ ಋಷಿಗಳೆಲ್ಲರೂ, ಸಮಸ್ತ ಭೂತಗಳಿಗೂ ಹಿತಕರನಾದ ರಾಮನು ತಮ್ಮಲ್ಲಿಗೆ ಅತಿಥಿಯಾಗಿ ಬರುವುದನ್ನು ನೋಡಿ ಸಂತೋಷಗೊಂಡು, ಆತನನ್ನು ತಮ್ಮ ಪರ್ಣಶಾಲೆಗೆ ಕರೆದುಕೊಂಡು ಹೋದರು. ಅಗ್ನಿಯಂತೆ ಮಹಾ ತೇಜಸ್ಸುಳ್ಳವರಾಗಿಯೂ, [3] ಧರ್ಮಜ್ಞ

---

[1] ಇಲ್ಲಿ ರೂಪವೆಂದರೆ "ಅಂಗಾನ್ಯಭೂಷಿತಾನ್ಯೇವ ಪ್ರೇಕ್ಷಣೀಯೈರ್ವಿಭೂಷಣೈಃ । ಯೇನ ಭೂಷಿತವದ್ಭಾತಿ ತದ್ರೂಪಮಿತಿ ಕಥ್ಯತೇ ॥" ಎಂಬ ಲಕ್ಷಣಾನುಸಾರವಾಗಿ, ಆಭರಣಗಳಿಂದಲಂಕರಿಸಲ್ಪಡದಿದ್ದರೂ, ಉತ್ತಮವಾದ ಭೂಷಣಗಳಿಂದ ಕೂಡಿದಂತೆ ಕಾಣುವುದಕ್ಕೆ ರೂಪವೆಂದು ಹೆಸರು. ಸೌಂದರ್ಯವೆಂದರೆ "ಅಂಗಪ್ರತ್ಯಂಗಕಾನಾಂ ಯಸ್ಸನ್ನಿವೇಶೋ ಯಥೋಚಿತಃ । ಸುಶ್ಲಿಷ್ಟಸಂಧಿಬಂಧಸ್ಸ್ಯಾತ್ ತತ್ಸೌಂದರ್ಯ-ಮಿಹೋಚ್ಯತೇ" ಅಂಗೋಪಾಂಗಗಳು ಒಂದಕ್ಕೊಂದು ತಕ್ಕಂತೆ ಸಮವಾಗಿರುವುದು ಸೌಂದರ್ಯವೆನಿಸುವುದು. ಲಾವಣ್ಯವೆಂದರೆ "ಮುಕ್ತಾಫಲೇಷು ಛಾಯಾಯಾಸ್ತರಳತ್ವ-ಮಿವಾಂತರಾ । ಪ್ರತಿಭಾತಿ ಯದಂಗೇಷು ಲಾವಣ್ಯಂ ತದಿಹೋಚ್ಯತೇ ॥" ಮುತ್ತಿನಲ್ಲಿ ಕಾಣುವ ನೀರೋಟವೆಂಬ ಹೊಳಪಿನಂತೆ ಹೊಳೆಯುವ ದೇಹದ ಹೊಳಪಿಗೆ ಲಾವಣ್ಯವೆಂದು ಹೆಸರು. ಸೌಕುಮಾರ್ಯವೆಂದರೆ ಅರಳಿದ ಹೂವಿನಲ್ಲಿರುವಂತೆ ದೇಹದಲ್ಲಿರುವ ಕೋಮಲತೆಯು.

[2] ಇಲ್ಲಿ "ಆಶ್ಚರ್ಯಭೂತಾನ್" ಎಂದು ಗೋವಿಂದರಾಜೀಯ ವ್ಯಾಖ್ಯಾನಾನುಸಾರವಾದ ಪಾಠವು. ವನವಾಸಿಗಳಾದ ಋಷಿಗಳು ತಾವು ಇಂತಹ ದಿವ್ಯರೂಪವನ್ನು ಹಿಂದೆ ಯಾವಾಗಲೂ ಕಂಡಿಲ್ಲದಿದ್ದುದರಿಂದ ಆಶ್ಚರ್ಯಕರವಾದ ಆಕಾರವುಳ್ಳ ಅವರನ್ನು ಎವೆಮುಚ್ಚದೆ ನೋಡಿದರೆಂದರ್ಥವು. ಮಹೇಶ್ವರತೀರ್ಥವ್ಯಾಖ್ಯಾನದಲ್ಲಿ "ಆಶ್ಚರ್ಯ-ಭೂತಾಃ" ಎಂಬ ಪಾಠಾಂತರವಿರುವುದು. ಇದಕ್ಕೆ ಕಾಡಿನಲ್ಲಿರುವ ಪಶುಪಕ್ಷಿಮೃಗಾದಿಗಳೆಲ್ಲವೂ ಆಶ್ಚರ್ಯಪಟ್ಟು ರಾಮಾದಿಗಳನ್ನು ನೋಡುತ್ತ ಎವೆಮುಚ್ಚದೆ ನಿಂತಿದ್ದುವೆಂದು ಅರ್ಥಾಂತರವು ಸೂಚಿಸಲ್ಪಟ್ಟಿರುವುದು.

[3] ಧರ್ಮಜ್ಞರೆಂದರೆ, ಶೇಷಿ (ಸ್ವಾಮಿ) ಯಲ್ಲಿ ಶೇಷವೃತ್ತಿಯೆಂಬ ಧರ್ಮವನ್ನು ಬಲ್ಲವರೆಂದರ್ಥವು. ಇದರಿಂದ ಋಷಿಗಳ ಆತ್ಮಭರಸಮಾರೋಪಣವು ನಿರೂಪಿಸಲ್ಪಟ್ಟಿರುವುದು.

ರಾಗಿಯೂ ಇರುವ ಆ ಋಷಿಗಳು, ರಾಮನನ್ನು ಕುಶಲಪ್ರಶ್ನೆ ಮಾಡಿ, ಆತನಿಗೆ ಅರ್ಘ್ಯಪಾದ್ಯಾದಿಗಳಿಗಾಗಿ ನೀರನ್ನು ತಂದಿಟ್ಟರು. ಮತ್ತು ಆತನ ಆಹಾರಾರ್ಥವಾಗಿ ತಾವು ಕಾಡಿನಿಂದ ತಂದು ಸಂಗ್ರಹಿಸಿಟ್ಟದ್ದ ಫಲ ಮೂಲ ಗಳನ್ನು ತಂದೊಪ್ಪಿಸಿದರು. ಹೀಗೆ ಅವರು ಅವೆಲ್ಲವನ್ನೂ ಮುಂದಿಟ್ಟು ರಾಮನನ್ನು ನೋಡಿ ಕೈಮುಗಿದು "ಎಲೈ ಮಹಾತ್ಮನೇ! ಈ ಆಶ್ರಮವು ನಿನ್ನದೆಂದೇ ತಿಳಿದು, ಇಲ್ಲಿ ಇಷ್ಟ ಬಂದಹಾಗೆ ಯಥೇಷ್ಟವಾಗಿರಬಹುದು. ಮಹಾ ಯಶಸ್ವಿಯಾದ ನೀನು ನಮ್ಮ ವರ್ಣಾಶ್ರಮಧರ್ಮಗಳನ್ನು ಕಾಪಾಡ ತಕ್ಕವನಾದುದರಿಂದ, ಈ ಸಮಸ್ತ ಋಷಿಸಮೂಹವೂ ನಿನ್ನನ್ನೇ ದಿಕ್ಕಾಗಿ ಎಣಿಸಿರುವುದು. ಲೋಕವೆಲ್ಲವೂ ನಿನ್ನನ್ನು ದೇವತೆಯೆಂದು ತಿಳಿದು ಪೂಜಿ ಸುತ್ತಿರುವುದು. ರಾಜನೆಂದು ತಿಳಿದು ಗೌರವಿಸುವುದು. ರಾಜನೆನಿಸಿಕೊಂಡವನು ದುಷ್ಟರನ್ನು ನಿಗ್ರಹಿಸತಕ್ಕವನಾದುದರಿಂದ ಆತನನ್ನು ಪೂಜಿಸಬೇಕಾದುದು ಮಾತ್ರವಲ್ಲದೆ ಆತನೇ ಪ್ರಜೆಗಳಿಗೆ ಗುರುವೆನಿಸುವನು. [1] ಭೂಲೋಕದಲ್ಲಿ

---

[1] ನಾಲ್ಕುಮಂದಿ ದಿಕ್ಪಾಲಕರಲ್ಲಿ ಒಬ್ಬೊಬ್ಬರ ನಾಲ್ಕನೆಯ ಅಂಶವೂ ರಾಜನಲ್ಲಿ ಸೇರಿರುವುದೆಂಬ ನ್ಯಾಯವನ್ನು ಇಲ್ಲಿ ಅನುಸಂಧಿಸಿಕೊಳ್ಳಬೇಕು. ಮತ್ತು ಇಲ್ಲಿ "ಇಂದ್ರ-ಸ್ಯೇಹ ಚತುರ್ಭಾಗಃ ಪ್ರಜಾ ರಕ್ಷತಿ ರಾಘವ ॥" ಎಂದು ಮೂಲವು. "ಅಷ್ಟಾಭಿರ್ಲೋಕ-ಪಾಲಾನಾಂ ಮಾತ್ರಾಭಿಃ ಕಲ್ಪಿತೋ ನೃಪಃ" ಎಂಬ ವಚನವಿರುವುದರಿಂದ, ಇಲ್ಲಿ ಇಂದ್ರ ಶಬ್ದವನ್ನು ಮಾತ್ರ ಹೇಳಿದ್ದರೂ, ಅದನ್ನೇ ಇತರ ದಿಕ್ಪಾಲಕರಿಗೂ ಉಪಲಕ್ಷಕವೆಂದು ಗ್ರಹಿಸಬೇಕು. ಆದರೆ ಇಲ್ಲಿ ಇಂದ್ರಶಬ್ದವನ್ನು ಮಾತ್ರವೇ ಹೇಳಿರುವುದರಿಂದ ಈ ಇಂದ್ರ ಶಬ್ದ ಪರಮಾತ್ಮಪರವೆಂಬುದು ವಾಸ್ತವಾರ್ಥವು. "ಇದಿ ಪರಮೈಶ್ವರ್ಯೇ" ಎಂಬ ಧಾತ್ವರ್ಥವು ಆ ಪರಮಾತ್ಮನಲ್ಲಿಯೇ ಮುಖ್ಯವಾಗಿ ವರ್ತಿಸುವುದು. ಇದಲ್ಲದೆ "ಇಂದ್ರೋ ಮಾಯಾಭಿಃ ಪುರುರೂಪ ಈಯತೇ" ಎಂದು ಇದಕ್ಕೆ ಶ್ರುತಿಪ್ರಮಾಣವುಂಟು. ಆ ಪರಮಾತ್ಮನ ಚತುರ್ಭಾಗವೆಂದರೆ ಅವನ ಅಂಶದಿಂದವತರಿಸಿದ ನಾಲ್ಕು ವ್ಯಕ್ತಿಗಳಲ್ಲಿ ಒಬ್ಬನಾದವನೆಂದು ಭಾವವು. ಈ ಸಂದರ್ಭದಲ್ಲಿ ಪರಮಾತ್ಮಪರವಾದ ಈ ಅರ್ಥವೇ ಉಚಿತವು. ಋಷಿಗಳು ಹೀಗೆ ರಾಮನನ್ನು ಪರಮಾತ್ಮಾಂಶಭೂತನನ್ನಾಗಿ ಗ್ರಹಿಸಿದುದ ರಿಂದಲೇ, ಆತನಿಗೆ ಅಂಜಲಿಯನ್ನು ಮಾಡಿದರೇ ಹೊರತು ಸಾಮಾನ್ಯರಾಜನೆಂದೆಣಿಸಿದ್ದ ಪಕ್ಷದಲ್ಲಿ ಅಂಜಲಿಯನ್ನು ಮಾಡಿರಲಾರರು. (ಇದು ಗೋವಿಂದರಾಜೀಯ ವ್ಯಾಖ್ಯಾನವು).

ಇಲ್ಲಿ ಮಹೇಶ್ವರತೀರ್ಥರ ಅಭಿಪ್ರಾಯವೇನೆಂದರೆ—"ನಿನಗೆ ವಶವರ್ತಿಯಾಗಿ ಕೆಲಸ ಮಾಡುತ್ತಿರುವ ಇಂದ್ರನ ಚತುರ್ಥಾಂಶಭೂತನೆಂಬ ಮಾತ್ರಕ್ಕೇ ಸಾಮಾನ್ಯ ರಾಜನಾದವನು ಪ್ರಜೆಗಳನ್ನಾಳುವನಲ್ಲದೆ, ಬೇಕಾದ ಯೋಗಗಳನ್ನೆಲ್ಲಾ ಅನುಭವಿಸುವನು. ಲೋಕವೆಲ್ಲವೂ

ದೇವೇಂದ್ರನ ನಾಲ್ಕನೆಯ ಭಾಗವೂ, ಉಳಿದ ದಿಕ್ಪಾಲಕರ ಅಂಗಗಳೂ ಸೇರಿದ ಹೊರತು ರಾಜನೆನಿಸಿಕೊಳ್ಳಲಾರನು. ಅಂತವನೇ ಪ್ರಜೆಗಳನ್ನು ರಕ್ಷಿಸತಕ್ಕವನು. ಆದುದರಿಂದ ರಾಜನು ಲೋಕಪೂಜ್ಯನೆನಿಸಿಕೊಂಡು, ಉತ್ತಮವಾದ ಭೋಗಗಳೆಲ್ಲವನ್ನೂ ಅನುಭವಿಸುವ ಭಾಗ್ಯವನ್ನು ಪಡೆದಿರುವನು. [1] ಎಲೈ ಮಹಾತ್ಮನೇ! ಆರ್ತರಾದ ನಾವು ನಿನ್ನ ದೇಶಕ್ಕೆ ಸೇರಿದವರಾಗಿಯೂ ಇರುವುದರಿಂದ ನಮ್ಮನ್ನು ರಕ್ಷಿಸತಕ್ಕ ಭಾರವು ನಿನಗೆ ಸೇರಿದೆ. ನೀನು ರಾಜ್ಯಾಧಿಕಾರದಲ್ಲಿದ್ದರೂ, ಅಥವಾ ಕಾಡಿನಲ್ಲಿದ್ದರೂ ನಮಗೆ ನೀನೇ ರಾಜನು. ನೀನೇ ಸಮಸ್ತ ಜನಗಳಿಗೂ ಪ್ರಭುವು. ಆದರೆ ನೀನು ನಮ್ಮನ್ನು ಕುರಿತು "ನಿಮ್ಮ ತಪಃಪ್ರಭಾವವೇ ನಿಮ್ಮನ್ನು ರಕ್ಷಿಸಬಹುದಲ್ಲವೆ" ಎಂದು ಕೇಳಬಹುದು. ಎಲೈ ರಾಮನೆ! ಹಾಗೆಣಿಸಬೇಡ! [2] ನಾವಾಗಿ ಯಾರನ್ನೂ ದಂಡಿಸುವ ಹಾಗಿಲ್ಲ. ನಾವು ಇಂದ್ರಿಯಗಳನ್ನು ಜಯಿಸಿ ಕೋಪವೆಂಬುದನ್ನು ನಿಶ್ಶೇಷವಾಗಿ

---

ಅವನನ್ನು ಪೂಜಿಸುವುದು. ಆತನಿಗೇ ಇಷ್ಟು ಪ್ರಭಾವವಿರುವಾಗ ಲೋಕರಕ್ಷಣಾರ್ಥವಾಗಿ ಈಶ್ವರ ಸ್ವರೂಪದಿಂದವತರಿಸಿರುವ ನಿನ್ನ ಮಹಿಮೆಯನ್ನು ಹೇಳತಕ್ಕುದ್ದೇನು?" ಎಂದು ಭಾವವು.

1 ಇಲ್ಲಿ "ತೇ ವಯಂ ಭವತಾ ರಕ್ಷ್ಯಾ ಭವದ್ವಿಷಯವಾಸಿನಃ ॥ ನಗರಸ್ಥೋ ವಾ ವನಸ್ಥೋ ವಾ ತ್ವಂ ನೋ ರಾಜಾ ಜನೇಶ್ವರಃ ॥" ಎಂದು ಮೂಲವು. ಇದರಿಂದ "ನಮ್ಮನ್ನು ನೀನು ರಕ್ಷಿಸುವುದಕ್ಕೆ ನಾವು ನಿನ್ನ ದೇಶಕ್ಕೆ ಸೇರಿದವರಾಗಿರುವುದೇ ಸಾಕಾದ ಕಾರಣ" ವೆಂದು ಋಷಿಗಳ ಭಾವವು. ಮತ್ತು "ಭವದ್ವಿಷಯವಾಸಿನಃ ಭವತಾ ರಕ್ಷ್ಯಾಃ" ಎಂದರೆ ನಮ್ಮ ಉಪವಾಸಬಲದಿಂದ ಮಾತ್ರವೇ ನಾವು ನಿನಗೆ ರಕ್ಷ್ಯರಲ್ಲವು, ನಿನ್ನ ದೇಶದಲ್ಲಿ ವಾಸಮಾಡುತ್ತಿರುವುದರಿಂದಲೂ ನಾವು ನಿನ್ನ ರಕ್ಷಣೆಗೆ ಪಾತ್ರರು. ಇದಲ್ಲದೆ ಉಪವಾಸಾದಿಗಳಲ್ಲಿ ಆಗಾಗ ಪ್ರಮಾದವೂ ಬರಬಹುದು. ನಿನ್ನದೇಶವಾಸಿತ್ವದಲ್ಲಿ ಆ ಪ್ರಮಾದಗಳಿಗೇ ಅವಕಾಶವಿಲ್ಲವು. ಆದುದರಿಂದ ಭವದ್ದೇಶವಾಸಿತ್ವವೇ ನಿಷ್ಪ್ರಮಾದವಾದ ಹೇತುವೆಂದು ಭಾವವು. ಒಂದುವೇಳೆ 'ರಾಜ್ಯಭ್ರಷ್ಟನಾಗಿ ಬಂದಿರುವ ನಾನು ನಿಮ್ಮನ್ನು ಹೇಗೆ ರಕ್ಷಿಸಲಿ?' ಎಂದು ರಾಮನು ಶಂಕಿಸುವನೆಂಬುದಕ್ಕೆ ಪರಿಹಾರವಾಗಿ 'ನಗರಸ್ಥಃ' ಇತ್ಯಾದಿಗಳಾದ ಮುಂದಿನ ವಾಕ್ಯವು.

2 ಅಥವಾ (ತೇ ವಯಂ) ಅಂತಹ ನಾವು, ಎಂದರೆ ಮೊದಲು ನಿನ್ನಲ್ಲಿ ಆತ್ಮಾತ್ಮೀಯಭರ ಸಮರ್ಪಣವನ್ನು ಮಾಡಿದಂತವರಾದ ನಾವುಗಳೆಂದರ್ಥವು. ಆತ್ಮಾತ್ಮೀಯಭರಸಮರ್ಪಣವೆಂದರೆ ತಮ್ಮನ್ನೂ ತಮ್ಮ ಪದಾರ್ಥಗಳನ್ನೂ ಸ್ವಾಮಿಯಲ್ಲಿ ಒಪ್ಪಿಸಿಬಿಡುವುದು. ಇದಕ್ಕೆ ಮೊದಲು "ಮೂಲಂ ಪುಷ್ಪಂ ಫಲಂ ವನ್ಯಂ" ಇತ್ಯಾದಿ ಶ್ಲೋಕದಲ್ಲಿ ಋಷಿಗಳು ರಾಮನಲ್ಲಿ

ಬಿಟ್ಟಿರುವೆವು. ನಾವು ಇದುವರೆಗೆ ಗಳಿಸಿಟ್ಟ ತಪಃಫಲವು ಕೆಟ್ಟುಹೋಗುವುದೆಂಬ ಅಂಜಿಕೆಯಿಂದ ನಮಗೆ ವಿರೋಧಿಗಳಾದವರನ್ನು ಶಾಪದಿಂದ ನಿಗ್ರಹಿಸುವುದಕ್ಕೂ ಇಷ್ಟಪಡದೆ ನಮ್ಮ ಕೋಪವನ್ನು ನಮ್ಮಲ್ಲಿಯೇ ಅಡಗಿಸಿಕೊಂಡು ಜಿತೇಂದ್ರಿಯರಾಗಿರುವೆವು. ನಮ್ಮ ಮನಸ್ಸೆಲ್ಲವೂ ತಪಸ್ಸಿನಲ್ಲಿಯೇ ನಿರತವಾಗಿರುವುದು.

---

ಮಾಡಿದ ಆತ್ಮಭರಸಮರ್ಪಣವು ಸೂಚಿತವಾಗಿರುವುದು. (ಭವತಾ ರಕ್ಷ್ಯಾಃ) ಹೀಗೆ ಅಪಾಯದಲ್ಲಿ ಸಿಕ್ಕಿ ಉಪಾಯಾಂತರಶೂನ್ಯರಾದ ನಾವು, ನಿರುಪಾಧಿಕ ರಕ್ಷಕನಾದ "ನಿನ್ನಿಂದಲೇ ರಕ್ಷಿಸಲ್ಪಡಬೇಕೇ ಹೊರತು ಬೇರೆಂಬುದಿಲ್ಲವು" ಎಂದು ಭಾವವು. "ಹಾಗೆ ನೀನು ನಿರುಪಾಧಿಕ ಸರ್ವಲೋಕಶರಣ್ಯನಾದರೆ ನಿಮ್ಮ ಶತ್ರುಗಳನ್ನೂ ರಕ್ಷಿಸಬೇಕಾದುದೇ ಉಚಿತವಲ್ಲವೆ?" ಎಂಬ ಅತಿಪ್ರಸಕ್ತಿಯು ಬರಬಹುದು. ಅದಕ್ಕೆ ಪರಿಹಾರಕವಾಗಿ (ಭವದ್ವಿಷಯವಾಸಿನಃ) ನಾವು ನಿನ್ನ ದೇಶದಲ್ಲಿಯೇ ಇದ್ದುಕೊಂಡು ನಿನ್ನನ್ನೇ ನಂಬಿರುವವರಾದುದರಿಂದ, ನಮ್ಮನ್ನೇ ನೀನು ರಕ್ಷಿಸಬೇಕಾದುದು ಆವಶ್ಯ" ಎಂದರ್ಥವು. ಸಾಕೇತದಲ್ಲಿ ಹುಟ್ಟಿದ ಯಾವ ಚರಾಚರ ವಸ್ತುವಿಗಾದರೂ ಪ್ರಪತ್ತಿಯಿಲ್ಲದೆಯೇ ರಕ್ಷಣವುಂಟಾಗುವಂತೆ, ರಾಮದೇಶವಾಸಿಗಳಾದ ನಮಗೂ ಪ್ರಪತ್ತಿ ಎಂಬುದರ ಅಪೇಕ್ಷೆಯೇ ಇಲ್ಲದೆ, ದೇಶವಾಸಮಾತ್ರದಿಂದಲೇ ರಕ್ಷಣವುಂಟಾಗುವುದೆಂಬುದು ಒಂದು ಪಕ್ಷವು. ಆದರೆ ಪೂರ್ವೋತ್ತರ ಶ್ಲೋಕಗಳಿಂದ ಆತ್ಮಭರಸಮರ್ಪಣವು ನಿರೂಪಿಸಲ್ಪಟ್ಟಿರುವುದರಿಂದ, ಪ್ರಪತ್ತಿಮೂಲಕವಾಗಿಯೇ ರಕ್ಷಣವುಂಟಾಗಬೇಕೆಂಬುದು ಬೇರೊಂದು ಪಕ್ಷವು. "ಹಾಗಿದ್ದರೆ ಪ್ರಪತ್ತಿರೂಪವಾದ ಆತ್ಮಭರಸಮರ್ಪಣದಿಂದಲೇ ಪ್ರಯೋಜನಸಿದ್ಧಿಯಾಗುವ ಪಕ್ಷದಲ್ಲಿ, ವಿಷಯವಾಸಿತ್ವವೆಂಬ ಸಾಧನವು ನಿಷ್ಪ್ರಯೋಜನವಲ್ಲವೆ?" ಎಂದು ಶಂಕಿಸಬಾರದು. ರಕ್ಷಕನ ಕಣ್ಣೆದಿರಾಗಿಯೇ ರಕ್ಷ್ಯಕ್ಕೆ ಅಪಾಯವುಂಟಾಗುವ ಪಕ್ಷದಲ್ಲಿ, ಅದು ವಿಶೇಷ ದೋಷಾಸ್ಪದವೆನಿಸುವುದರಿಂದ, ನಿನ್ನಿಂದ ರಕ್ಷ್ಯರಾದ ನಮಗೆ ರಕ್ಷಕನಾದ ನಿನ್ನ ಮುಂದೆಯೇ ನಾಶವುಂಟಾಯಿತೆಂದರೆ, ಅದು ನಿನಗೆ ಮಹಾ ದೋಷಾಸ್ಪದವೆಂಬುದನ್ನು ಸೂಚಿಸುವುದಕ್ಕಾಗಿಯೇ ಇಲ್ಲಿ ವಿಷಯವಾಸಿತ್ವವು ಹೇಳಲ್ಪಟ್ಟಿರುವುದೆಂದು ಗ್ರಹಿಸಬೇಕು. ಮತ್ತು ರಾಮದೇಶವಾಸಿತ್ವವೆಂಬುದೇ ರಕ್ಷಣೆಗೆ ನಿರಪೇಕ್ಷಸಾಧನವೆಂಬ ನಿರ್ಬಂಧವನ್ನಂಗೀಕರಿಸಿದರೂ, ಅದು ಕೇವಲ ಮೋಕ್ಷವಿಷಯವಾದುದೇ ಹೊರತು, ಮೋಕ್ಷವ್ಯತಿರಿಕ್ತವಾದ ಬೇರೆ ಪ್ರಯೋಜನಗಳಿಗೆ ಅದು ಉಪಾಯವೆಂಬುದರಿಂದ ವಿರೋಧವೇನೂ ಇಲ್ಲವು. ಇಲ್ಲಿ ಋಷಿಗಳು ಅಪೇಕ್ಷಿಸುವುದು ದುಷ್ಟ ರಾಕ್ಷಸನಿರಸನವೇ ಹೊರತು ಮೋಕ್ಷವಲ್ಲ. ಆದುದರಿಂದ ಇಲ್ಲಿನ ರಕ್ಷಣೆಗೆ ವಿಷಯವಾಸಿತ್ವವನ್ನೂ ಒಂದು ಸಾಧನವನ್ನಾಗಿ ಹೇಳಿದುದು ವ್ಯರ್ಥವಲ್ಲವೆಂದು ನಿಷ್ಕೃಷ್ಟಾರ್ಥವು. (ನಗರಸ್ಥೋ ವಾ ವನಸ್ಥೋ ವಾ ತ್ವಂ ನೋ ರಾಜಾ) ಇತರ ಮೂರ್ಧಾಭಿಷಿಕ್ತ ರಾಜರಿಗೆ ಬುದ್ಧಿಬಲವೂ, ಸ್ಥಾನಬಲವೂ, ಚತುರಂಗ ಬಲವೂ ಸಂಪೂರ್ಣವಾಗಿದ್ದಪಕ್ಷದಲ್ಲಿ ಆಗಲೂ ಅವರು ತಮ್ಮ ರಾಷ್ಟ್ರವನ್ನು ಮಾತ್ರವೇ ರಕ್ಷಿಸಬಲ್ಲರು. ಸರ್ವಲೋಕ

ಕೈಲಾಗದ ಮಕ್ಕಳಂತಿರುವ ನಮ್ಮನ್ನು ನೀನೇ ರಕ್ಷಿಸಬೇಕು" ಎಂದರು. ಆಮೇಲೆ ಋಷಿಗಳು ರಾಮಲಕ್ಷ್ಮಣರಿಗೆ ಫಲಮೂಲಗಳನ್ನೂ, ವನಪುಷ್ಪಗಳನ್ನೂ ಮತ್ತು ತಮ್ಮ ಮನಸ್ಸಂಕಲ್ಪದಿಂದೊದಗಿಸಿದ ವಿಧವಿಧವಾದ ಆಹಾರಗಳನ್ನೂ ಮುಂದೆ ತಂದಿಟ್ಟು ಸತ್ಕರಿಸಿದರು. ಹಾಗೆಯೇ ಆ ಆಶ್ರಮಪ್ರದೇಶ

---

ರಕ್ಷಣಧುರಂಧರನಾಗಿಯೂ, ಅಸಹಾಯ ಶೂರನಾಗಿಯೂ ಇರುವ ನಿನಗಾದರೋ, ನಗರವಾಸದಿಂದ ಬಲವು ಹೆಚ್ಚುವುದಾಗಲಿ, ವನವಾಸದಿಂದ ತಗ್ಗುವುದಾಗಲಿ ಇದಾವುದೊಂದು ವಿಕಾರವೂ ಇಲ್ಲ. ಎಂದರೆ ಸ್ವಾಭಾವಿಕ ನಿತ್ಯನಿರತಿಶಯ ಶಕ್ತಿ ಸಂಪನ್ನನಾದ ನಿನ್ನ ಶಕ್ತಿಯನ್ನು ತಗ್ಗಿಸತಕ್ಕ ಕಾರಣಗಳೊಂದೂ ಇಲ್ಲವೆಂದರ್ಥವು.

ಇಲ್ಲಿ "ನ್ಯಸ್ತದಂಡಾ ವಯಂ ರಾಜನ್ ಜಿತಕ್ರೋಧಾ ಜಿತೇಂದ್ರಿಯಾಃ ! ರಕ್ಷಿತವ್ಯಾಸ್ತ್ವಯಾ ಶಶ್ವದ್ಗರ್ಭಭೂತಾಸ್ತಪೋಧನಾಃ" ಎಂದು ಮೂಲವು. "ನೀವು ನಿಮ್ಮ ತಪಃ ಪ್ರಭಾವದಿಂದಲೇ ರಾಕ್ಷಸರನ್ನು ನಿಗ್ರಹಿಸಿ, ನಿಮ್ಮನ್ನು ಕಾಪಾಡಿಕೊಳ್ಳಬಾರದೆ ?" ಎಂದು ರಾಮನು ಅಪೇಕ್ಷಿಸುವನೆಂದೆಣಿಸಿ, ಅದಕ್ಕೆ ಸಮಾಧಾನವಾಗಿ ಋಷಿಗಳು ಈ ವಾಕ್ಯವನ್ನು ಹೇಳಿರುವರು. ನ್ಯಸ್ತದಂಡಾಃ, ಜಿತಕ್ರೋಧಾಃ, ಜಿತೇಂದ್ರಿಯಾಃ, ಎಂಬೀ ಮೂರು ವಿಶೇಷಗಳಲ್ಲಿ ಹಿಂದಿನ ವಿಶೇಷಣಕ್ಕೆ ಉತ್ತರೋತ್ತರ ವಿಶೇಷಣಗಳು ಸಾಧಕಗಳಾಗಿರುವುವು. ಎಂದರೆ, "ನಾವು ಇಂದ್ರಿಯಗಳನ್ನು ಜಯಿಸಿರುವುದರಿಂದ ಕೋಪವನ್ನಡಗಿಸಿಕೊಂಡಿರುವೆವೆಂದೂ, ಆ ಕೋಪವನ್ನಡಗಿಸಿಕೊಂಡಿರುವುದರಿಂದಲೇ ಇತರರನ್ನು ದಂಡಿಸುವ ಉದ್ದೇಶವೇ ನಮಗೆ ಹುಟ್ಟಲಾರದೆಂದೂ ಭಾವವು. ಇಲ್ಲಿನ ವಾಸ್ತವಾರ್ಥವೇನೆಂದರೆ, ತಮಗೆ ಸಾಮರ್ಥ್ಯವಿದ್ದರೂ ಬೇರೆ ರಕ್ಷಕನಿರುವಾಗ, ತಮ್ಮನ್ನು ತಾವೇ ರಕ್ಷಿಸಿಕೊಳ್ಳುವುದಕ್ಕೆ ಪ್ರಯತ್ನಿಸುವುದು ಸ್ವರೂಪವಿರುದ್ಧವೆಂದು ಮುಖ್ಯಾಭಿಪ್ರಾಯವು. ಆದುದರಿಂದಲೇ "ತ್ವಯಾ ರಕ್ಷಿತವ್ಯಾಃ" ನಿನ್ನಿಂದಲೇ ನಾವು ರಕ್ಷಿಸಲ್ಪಡಬೇಕು. ಏಕೆಂದರೆ "ಗರ್ಭಭೂತಾಃ" ನಾವು ನಿನಗೆ ಮಕ್ಕಳಂತಿರುವವರು. ಇದರಿಂದ ಅನನ್ಯಾರ್ಹಶೇಷತ್ವವು ಹೇಳಲ್ಪಡುವುದು. "ಶಶ್ವತ್" ಎಂಬ ಪದವು ಕಾಕಾಕ್ಷಿನ್ಯಾಯದಿಂದ ರಕ್ಷಿತವ್ಯಾಃ ಗರ್ಭಭೂತಾಃ ಎಂಬ ಎರಡು ವಿಶೇಷಣಗಳಿಗೂ ಅನ್ವಯಿಸುವುದರಿಂದ ನಮ್ಮ ಅನನ್ಯಾರ್ಹ ಶೇಷತ್ವವೂ ಅನನ್ಯ ಶರಣ್ಯತ್ವವೂ, ಯಾವಾಗಲೂ ಸ್ವಾಭಾವಿಕವಾದುದೆಂದು ಭಾವವು. ಆದರೆ ಸಾಧನವಿರದೆ ರಕ್ಷಿಸಬೇಕೆಂದರೆ ಎಲ್ಲರನ್ನೂ ಭೇದಜ್ಞಾನವಿಲ್ಲದೆ ರಕ್ಷಿಸಬೇಕಾಗಿ ಬರುವುದರಿಂದ ಅತಿ ಪ್ರಸಕ್ತಿಯುಂಟಾಗುವುದಲ್ಲವೆ ? ತನ್ನಿವಾರಣಾರ್ಥವಾಗಿ "ತಪೋಧನಾಃ" ನಾವು ತಪಸ್ಸನ್ನು ಎಂದರೆ ಪ್ರಪತ್ತಿಯನ್ನೇ ಧನವಾಗಿ ಉಳ್ಳವರು "ತಸ್ಮಾನ್ನ್ಯಾಸಮೇಷಾಂತಪಸಾಮತಿರಿಕ್ತಮಾಹುಃ" ಎಂಬಂತೆ ತಪಸ್ಸೆಂದರೆ ನ್ಯಾಸವೆನಿಸುವುದು. ನಾವು ಮಾಡಿರುವ ಪ್ರಪತ್ತಿಯನ್ನೇ ನಿಮಿತ್ತವಾಗಿ ಅಂಗೀಕರಿಸಿ ನಮ್ಮನ್ನು ರಕ್ಷಿಸಬೇಕೆಂದು ಋಷಿಗಳ ಭಾವವು. (ಗೋವಿಂದರಾಜೀಯವು.)

ಗಳಲ್ಲಿದ್ದ ಇತರ ಮಹರ್ಷಿಗಳೂ ಒಬ್ಬೊಬ್ಬರಾಗಿ ಬಂದು ಪ್ರಭುವಾದ ರಾಮನನ್ನು ಸ್ತೋತ್ರಮಾಡಿ, ನ್ಯಾಯರೀತಿಯಿಂದ ಆತನನ್ನು ನಾನಾವಿಧದಲ್ಲಿ ಪೂಜಿಸಿದರು.

ಇಲ್ಲಿಗೆ ಒಂದನೆಯ ಸರ್ಗವು.

---

ವಿರಾಧನೆಂಬ ರಾಕ್ಷಸನನ್ನು ನೋಡಿದುದು. ಆ ರಾಕ್ಷಸನು ಸೀತೆಯನ್ನು ಅಪಹರಿಸಿಕೊಂಡು ಹೋದುದು. ಆತನಿಗೂ ರಾಮಲಕ್ಷ್ಮಣರಿಗೂ ನಡೆದ ಸಂಭಾಷಣವು.

ರಾಮನು ಹೀಗೆ ಋಷಿಗಳ ಆತಿಥ್ಯವನ್ನು ಸ್ವೀಕರಿಸಿ, ಬೆಳಗಾದ ಮೇಲೆ ನಡೆಸಬೇಕಾದ ಆಹ್ನಿಕಗಳನ್ನೂ ತೀರಿಸಿಕೊಂಡು, ಅವರೆಲ್ಲರ ಅನುಜ್ಞೆಯನ್ನೂ ಪಡೆದು ಅಲ್ಲಿಂದ ನಡುಕಾಡಿಗೆ ಹೊರಟನು. ಅಲ್ಲಿ ಬಗೆಬಗೆಯಾದ ಮೃಗಗಳೂ, ಹುಲಿ, ತೋಳ ಮೊದಲಾದ ಕ್ರೂರಜಂತುಗಳೂ ತುಂಬಿದ್ದುವು. ಆ ಭಯಂಕರವಾದ ವನಮಧ್ಯದಲ್ಲಿ ಮರಗಳಾಗಲಿ, ಬಳ್ಳಿಗಳಾಗಲಿ, ಪೊದೆಗಳಾಗಲಿ ಯಾವುದೊಂದೂ ಕಾಣಿಸುತ್ತಿರಲಿಲ್ಲ. ಅಲ್ಲಿದ್ದ ಕೊಳಗಳೆಲ್ಲವೂ ಕಣ್ಣಿನಿಂದ ನೋಡುವುದಕ್ಕೂ ಅಸಹ್ಯವಾಗಿ ಕಾಣುತ್ತಿದ್ದುವು. ಅಲ್ಲಿನ ಪಕ್ಷಿಗಳು ಭಯದಿಂದ ಸದ್ದುಮಾಡದೆ ಗೂಡುಗಳಲ್ಲಿ ಅಡಗಿದ್ದುವು. ಅಲ್ಲಲ್ಲಿ ಭೇರುಂಡಗಳು ಕೂಗಿಕೊಳ್ಳುತ್ತಿದ್ದುವು. ರಾಮನು ಸೀತಾಲಕ್ಷ್ಮಣ ಸಹಿತನಾಗಿ ಮುಂದೆ ಮುಂದೆ ಹೋಗುತ್ತ ಘೋರವಾದ ವನಮಧ್ಯವನ್ನು ನೋಡಿದನು. ಭಯಂಕರವಾದ ಕ್ರೂರಮೃಗಸಮೂಹದಿಂದ ತುಂಬಿದ ಆ ಅರಣ್ಯದ ನಡುವೆ ಈ ಮೂವರೂ ಹೋಗುತ್ತಿದ್ದಾಗ, ಪರ್ವತಶಿಖರದಂತೆ ಮಹೋನ್ನತವಾದ ಆಕಾರವುಳ್ಳ ಒಂದು ರಾಕ್ಷಸಾಕೃತಿಯು ಕ್ರೂರಧ್ವನಿಯಿಂದ ಕೂಗಿಡುತ್ತ ಇದಿರಾಗಿ ಬರುತ್ತಿದ್ದುದನ್ನು ಕಂಡರು. ಆ ರಾಕ್ಷಸನ ಗುಳಿಬಿದ್ದ ಕಣ್ಣುಗಳೂ, ಅಗಲವಾದ ಬಾಯಿಯೂ, ದೊಡ್ಡ ದೇಹವೂ, ನಿಮ್ನೋನ್ನತವಾದ ಆತನ ಹೊಟ್ಟೆಯೂ ಅತಿ ಭಯಂಕರವಾಗಿ ಕಾಣುತ್ತಿದ್ದುವು. ಆತನ ಅವಯವಗಳಲ್ಲಿ ಅಲ್ಲಲ್ಲಿ ರಕ್ತಮಾಂಸಗಳು ಅಂಟಿಕೊಂಡಿದ್ದುದರಿಂದ, ದೂರದಿಂದಲೇ ಅಸಹ್ಯಕರ

ವಾದ ದುರ್ಗಂಧವನ್ನು ಹರಡಿಸುತ್ತಿತ್ತು. ಆತನ ಅವಯವಗಳು ಒಂದಕ್ಕೊಂದಕ್ಕೆ ಸಮವಾಗಿಲ್ಲದೆ ವಿಕಾರರೂಪದಿಂದ ಕಾಣಿಸುತ್ತಿದ್ದುವು. ಅದಕ್ಕೆ ತಕ್ಕಂತೆ ಅವನ ವೇಷವೂ ಅತಿವಿಕಾರವಾಗಿದ್ದುದರಿಂದ ನೋಡಿದ ಮಾತ್ರದಿಂದಲೇ ಅಂಜಿಕೆಯನ್ನು ಹುಟ್ಟಿಸುವ ಹಾಗಿತ್ತು. ರಕ್ತದಿಂದಲೂ ಕೆನ್ನೀರಿನಿಂದಲೂ ನೆನೆದ ಹುಲಿಯ ಚರ್ಮವನ್ನುಟ್ಟಿದ್ದನು. ಬಾಯಿಬಿಟ್ಟುಕೊಂಡು ಬರುವ ಯಮನಂತೆ ಆತನು ಸಮಸ್ತ ಭೂತಗಳಿಗೂ ಭಯವನ್ನುಂಟುಮಾಡುತ್ತಿದ್ದನು. ಮತ್ತು ಆತನು ಕೈಯಲ್ಲಿ ಹಿಡಿದಿದ್ದ ಶೂಲದ ತುದಿಗೆ ಮೂರು ಸಿಂಹಗಳನ್ನೂ ನಾಲ್ಕು ಹುಲಿಗಳನ್ನೂ, ಎರಡು ಕೊಂಬುಗಳಿಂದ ಕೂಡಿ ರಕ್ತದಲ್ಲಿ ನೆನೆದ ಒಂದು ದೊಡ್ಡ ಆನೆಯ ತಲೆಯನ್ನೂ ಸಿಕ್ಕಿಸಿಟ್ಟು, ಆರ್ಭಟಿಸಿ ಕೂಗುತ್ತ ಮುಂದೆ ಬಂದನು. ಅವನು ಇವರನ್ನು ಸಮೀಪಿಸಿದೊಡನೆಯೇ ಮಿತಿಮೀರಿದ ಕೋಪವನ್ನು ತೋರಿಸುತ್ತ, ಯಮನು ಸಂಹಾರಕಾಲದಲ್ಲಿ ಪ್ರಾಣಿಗಳ ಮೇಲೆ ಬೀಳುವಂತೆ ಈ ಮೂವರನ್ನೂ ಅಡ್ಡಗಟ್ಟಿನಿಂತು, ಆಗಲೂ ಒಂದಾವರ್ತಿ ಭೂಮಿಯೆಲ್ಲವೂ ನಡುಗುವಂತೆ ಅತಿಭಯಂಕರವಾಗಿ ಘರ್ಜಿಸಿದನು. ಕೊನೆಗೆ ಸೀತೆಯ ಕಾಲನ್ನು ಹಿಡಿದು, ಅವಳನ್ನು [1] ಮೇಲಕ್ಕೆತ್ತಿಕೊಂಡು ದೂರಕ್ಕೆ ಹೋಗಿ ನಿಂತು ರಾಮಲಕ್ಷ್ಮಣರನ್ನು ಕುರಿತು "ಎಲೈ, ನೀವು ಯಾರು? ನಿಮಗೆ ಈ ಜಡೆಯೇನು? ಈ ನಾರುಮಡಿಗಳೇನು? ಈ ಋಷಿವೇಷದಿಂದಿರುವ ನಿಮಗೆ ಈಕೆಯು ಎಲ್ಲಿ ಸಿಕ್ಕಿದಳು? ಇದರಮೇಲೆ ಕೈಯಲ್ಲಿ ಧನುರ್ಬಾಣಗಳನ್ನೂ ಕತ್ತಿಯನ್ನೂ ಹಿಡಿದಿರುವಿರಿ! ಈ ವಿಪರೀತ ವ್ಯವಹಾರಗಳು ನಿಮಗುಂಟಾದುದು ಹೇಗೆ?

---

[1] ಇಲ್ಲಿ ವಿರಾಧನು ಸೀತೆಯನ್ನು ಎತ್ತಿಕೊಂಡುದು, ತನ್ನ ಪಾಪಪರಿಹಾರಾರ್ಥವಾಗಿಯೇ ಹೊರತು ನಿಜವಾಗಿ ತನಗೆ ಭಾರ್ಯೆಯನ್ನಾಗಿ ಮಾಡಿಕೊಳ್ಳಬೇಕೆಂಬ ಬುದ್ಧಿಯಿಂದಲ್ಲವು. ಇದೇ ವಿಷಯವು ಸ್ಕಾಂದಪುರಾಣದಲ್ಲಿ ವ್ಯಕ್ತವಾಗಿ ಹೇಳಲ್ಪಟ್ಟಿರುವುದು "ಸೋಽಪಿ ತಾಂ ಜಾನಕೀಂ ದೃಷ್ಟ್ವಾ ಶೀಘ್ರಂ ಸಂಜಾತವಿಕ್ರಮಃ । ಇಯಂ ಪರಾ ಮಹಾಶಕ್ತಿಃ ಸೇಯಂ ಸ್ವರ್ಗಸ್ಯ ಕಾರಣಂ ॥ ಅಸ್ಯಾ ವಿಬೋಧೋ ಮೋಕ್ಷೇಽಪಿ ಕಾರಣಂ ಬಂಧನೇಽಪಿ ಚ । ತಸ್ಮಾದಿಮಾಂ ಭಜಿಷ್ಯಾಮಿ ದಿಷ್ಟ್ಯಾ ಪ್ರಾಪ್ತಂ ಹಿ ದರ್ಶನಂ । ಇತಿ ದರ್ಶನಮಾತ್ರೇಣ ವಿಮುಕ್ತಾಘೌಘಪಂಜರಃ । ಭಕ್ತಿಯುಕ್ತೋ ಜಹಾರೈನಾಂ ಸೀತಾಂ ಚೈತನ್ಯರೂಪಿಣೀಂ ॥" ಎಂದು ಹೇಳಲ್ಪಟ್ಟಿರುವುದರಿಂದ, ದೈವಿಕವಾಗಿ ತನಗೆ ಆಕೆಯ ದರ್ಶನವು ಲಭಿಸಿತೆಂದು, ವಿರಾಧನು ತಿಳಿದು ಭಕ್ತಿಯಿಂದ ಸೀತೆಯನ್ನು ಗ್ರಹಿಸಿದನೆಂದು ಸಿದ್ಧವಾಗುವುದು.

ಅದು ಹೇಗಾದರೂ ಹೋಗಲಿ! ನೀವು ಭಯಂಕರವಾದ ಅರಣ್ಯಕ್ಕೆ ಬಂದಿರುವುದರಿಂದಲೇ ಇಂದಿಗೆ ನಿಮ್ಮಾಯುಸ್ಸು ತೀರಿತೆಂದೆಣಿಸುವೆನು. ಅಯ್ಯೋ! ತಾಪಸ ವೇಷದಿಂದಿರುವ ನಿಮಗೆ ಈ ಸ್ತ್ರೀಯ ಸಹವಾಸವು ಹೇಗೆ ಬಂದಿತು? ಮುನಿವೇಷವನ್ನು ಹಾಕಿಕೊಂಡು ಋಷಿಗಳ ಧರ್ಮಕ್ಕೆ ವಿರುದ್ಧರಾಗಿ ಬಿಲ್ಲು ಬಾಣಗಳನ್ನು ಧರಿಸುವುದೆಂದರೇನು? ಹೀಗೆ ಅಧರ್ಮದಲ್ಲಿ ಬಿದ್ದು ಪಾಪಿಗಳಾದ ನೀವು ಋಷಿಗಳಿಗೆ ಅವಮಾನವನ್ನು ತರುವುದಕ್ಕಾಗಿಯೇ ಬಂದಿರುವಂತಿದೆ. ಅದೂ ಹೋಗಲಿ. ನಾನು ಯಾರೆಂದು ಬಲ್ಲಿರಾ! ನಾನೊಬ್ಬ ರಾಕ್ಷಸನು. ನನ್ನನ್ನು ವಿರಾಧನೆಂದು ಕರೆಯುವರು. ನಾನು ಆಯುಧಪಾಣಿಯಾಗಿ ಈ ವನದ ಸುತ್ತಲೂ ಸಂಚರಿಸುತ್ತಿರುವೆನು. ಅಲ್ಲಲ್ಲಿ ಕಣ್ಣಿಗೆ ಸಿಕ್ಕಿದ ಋಷಿಗಳನ್ನು ಕೊಂದು ಅವರ ಮಾಂಸವನ್ನೇ ನನ್ನ ಆಹಾರವಾಗಿ ತೆಗೆದುಕೊಳ್ಳುತ್ತಿರುವೆನು. ಎಲೈ ನೀಚರೆ! ತಾಪಸವೇಷದಲ್ಲಿರುವ ನಿಮಗೆ ಈ ಸುಂದರಿಯೇಕೆ? ಇವಳು ಇನ್ನು ಮೇಲೆ ನನ್ನ ಹೆಂಡತಿಯಾಗಿರಲಿ! ಪಾಪಿಗಳಾದ ನಿಮ್ಮ ರಕ್ತವನ್ನೂ ಈಗಿನ ಯುದ್ಧದಲ್ಲಿಯೇ ಕುಡಿದುಬಿಡುವೆನು" ಎಂದನು. ಹೀಗೆ ದುರಾತ್ಮನಾದ ಆ ವಿರಾಧನು ಹೇಳಿದ ದುರ್ವಾಕ್ಯಗಳನ್ನು ಕೇಳಿ, ಸೀತೆಯು ಬಹಳ ಭಯದಿಂದ ತತ್ತಳಿಸಿ ಬಿರುಗಾಳಿಗಿದಿರಾಗಿ ನಿಂತ ಬಾಳೆಯ ಗಿಡದಂತೆ ನಡುಗುತ್ತಿದ್ದಳು. ಹೀಗೆ ಆ ವಿರಾಧನ ಕೈಗೆ ಸಿಕ್ಕಿ ಭಯದಿಂದ ಮೈಮರೆತು ನಡುಗುತ್ತಿರುವ ಸೀತೆಯನ್ನು ನೋಡಿ ರಾಮನು ಕಂದಿದ ಮುಖವುಳ್ಳವನಾಗಿ ಸಮೀಪದಲ್ಲಿದ್ದ ಲಕ್ಷ್ಮಣನನ್ನು ಕುರಿತು, "ಹಾ! ವತ್ಸನೇ! ಅಲ್ಲಿ ನೋಡು! ಜನಕರಾಜನಿಗೆ ಮಗಳಾಗಿ, ಸದಾಚಾರಸಂಪನ್ನೆಯಾಗಿ, ಬಾಲ್ಯದಿಂದಲೂ ಸುಖದಿಂದಲೇ ಬೆಳೆದು, ನನ್ನ ಕೈಹಿಡಿದಿರುವ ಯಶಸ್ವಿನಿಯಾದ ಆ ಸೀತೆಗೆ ಬಂದಿರುವ ದುರವಸ್ಥೆಯನ್ನು ನೋಡಿದೆಯಾ! ಆಕೆಯು ರಾಕ್ಷಸನ ಕೈಯಲ್ಲಿ ಸಿಕ್ಕಿ ತತ್ತಳಿಸುವುದನ್ನು ನೋಡಲಿಲ್ಲವೆ? ಹಾ! ವತ್ಸನೆ! [1] ಕೈಕೇಯಿಯು ನಮ್ಮ ವಿಷಯದಲ್ಲಿ ಯಾವ ಉದ್ದೇಶವನ್ನಿಟ್ಟಿದ್ದಳೋ ಆ ಕೋರಿಕೆಯಲ್ಲವೂ ಈಗ ಕೈಗೂಡಿತು. ಅವಳು ವರಗಳೆಂಬ ನೆಪವನ್ನಿಟ್ಟುಕೊಂಡು ಆಶೆಪಟ್ಟು ಯಾವುದನ್ನು ಕೇಳಿದಳೋ

---

1 "ಕೈಕೇಯಿಯು ತನ್ನ ಮಗನಾದ ಭರತನಿಗೆ ರಾಜ್ಯವನ್ನು ಕೊಡಿಸುವುದೊಂದರಲ್ಲಿಯೇ ಉದ್ಯುಕ್ತಳಾಗಿದ್ದ ಪಕ್ಷದಲ್ಲಿ, ಅದನ್ನು ಮಾತ್ರವೇ ಕೇಳುತ್ತಿದ್ದಳೇ ಹೊರತು, ನನ್ನ ವನವಾಸವನ್ನೂ ಕೋರುತ್ತಿರಲಿಲ್ಲವು. ಆಕೆಯು ಬಹು ದೂರದೃಷ್ಟಿಯುಳ್ಳವಳಾ

ಅದೆಲ್ಲವೂ ಈಗ ನೆರವೇರಿತು. ಆ ಕೈಕೇಯಿಯು ದೂರದೃಷ್ಟಿಯುಳ್ಳವ ಳೆಂಬುದೇ ನಿಜವು. ತನ್ನ ಮಗನಾದ ಭರತನಿಗೆ ರಾಜ್ಯವನ್ನು ಕೊಡಿಸಿದ ಮಾತ್ರದಲ್ಲಿಯೇ ತೃಪ್ತಿಪಡದೆ, ನನ್ನನ್ನು ಕಾಡಿಗೆ ಕಳುಹಿಸಬೇಕೆಂದೂ ಉದ್ದೇಶಿಸಿದ ಆಕೆಯ ಪ್ರಯತ್ನಗಳೆಲ್ಲವೂ ಈಗ ಸಾರ್ಥಕವಾದುವು. ಹಾ! ಲಕ್ಷ್ಮಣನೆ! ನಾನು ಹುಟ್ಟಿದುದು ಮೊದಲು ಇದುವರೆಗೆ ಯಾವ ಪ್ರಾಣಿಗೂ ಕೇಡನ್ನು ಬಯಸಿದವನಲ್ಲ. ಯಾರಿಗೂ ಹಿತವನ್ನೇ ಕೋರುತ್ತಿದ್ದವನು. ಹೀಗಿದ್ದರೂ ನನಗೆ ಬಂದ ದುರವಸ್ಥೆಯನ್ನು ನೋಡಿದೆಯಾ? ಈಗಲೀಗ ನನ್ನ ನಡುತಾಯಿಯಾದ [1] ಆ ಕೈಕೇಯಿಯ ಕೋರಿಕೆಯು ಸಂಪೂರ್ಣವಾಗಿ ಕೈಗೂಡಿತು. ಅಯ್ಯೋ! ಲಕ್ಷ್ಮಣನೆ! ನನ್ನ ಕೈಹಿಡಿದ ಹೆಂಡತಿಯಾದ ಸೀತೆಯನ್ನು ನನ್ನ ಕಣ್ಣಿದಿರಾಗಿಯೇ, ಪರಪುರುಷನು ಮುಟ್ಟಿದನೆಂದರೆ, ಇದಕ್ಕಿಂತಲೂ ನಾನು ಅನುಭವಿಸಬೇಕಾದ ಬೇರೆ ದುಃಖವೇನುಂಟು? ನನಗೆ ಹಿಂದೆ ನಡೆದ ಪಿತೃವಿಯೋಗದಿಂದಲಾಗಲಿ, ರಾಜ್ಯಭ್ರಂಶದಿಂದಲಾಗಲಿ ಇಷ್ಟು

---

ಮುದರಿಂದ, ನಾನು ಬದುಕಿರುವವರೆಗೂ ಭರತನಿಗೆ ರಾಜ್ಯವು ನಿಷ್ಕಂಟಕವಾಗಲಾರ ದೆಂದೆಣಿಸಿ, ಅದಕ್ಕಾಗಿಯೇ ನನ್ನನ್ನು ಕಾಡಿಗೆ ಕಳುಹಿಸಬೇಕೆಂದೆಣಿಸಿದಳು. ನಾನು ಕಾಡಿಗೆ ಹೋಗುವಾಗ ಹೇಗಿದ್ದರೂ ಸೀತೆಯು ನನ್ನನ್ನು ಹಿಂಬಾಲಿಸುವಳೆಂದೂ, ಆ ಸೀತೆಯನ್ನು ಕಾಡಿನಲ್ಲಿ ಯಾರಾದರೂ ರಾಕ್ಷಸರು ಅಪಹರಿಸಿಕೊಂಡು ಹೋಗಬಹುದೆಂದೂ ಆಗ ಆಕೆಯ ವಿರಹವನ್ನು ತಡೆಯಲಾರದೆ ನಾನು ಪ್ರಾಣವನ್ನೇ ಬಿಡಬೇಕಾಗುವುದೆಂದೂ ಆಮೇಲೆ ಭರತನಿಗೆ ರಾಜ್ಯವು ನಿಷ್ಕಂಟಕವಾಗುವುದೆಂದೂ, ಈ ದೂರಾಲೋಚನೆಯಿಂದಲೇ ಹೀಗೆ ನನ್ನನ್ನು ಕಾಡಿಗೆ ಕಳುಹಿಸಿರುವಳು. ಆಕೆಯ ಉದ್ದೇಶದಂತೆಯೇ ಒಂದೊಂದು ಕೆಲಸವೂ ಕೈಗೂಡಿ ಬರುತ್ತಿರುವುದು" ಎಂದು ರಾಮನ ಆಶಯವು.

1 "ಭರತನೂ ಕೈಕೇಯಿಯೂ ಕಾಡಿಗೆ ಬಂದು ರಾಮನನ್ನು ಅಯೋಧ್ಯೆಗೆ ಹಿಂತಿರುಗಿ ಬರಬೇಕೆಂದು ಪ್ರಾರ್ಥಿಸಿರುವುದರಿಂದ, ಮೊದಲು ಅವರು ಮಾಡಿದುದು ಅಜ್ಞಾನ ಕೃತವೆಂದೇ ಸ್ಪಷ್ಟಪಡುವುದು. ಹೀಗಿದ್ದರೂ ಈಗ ರಾಮಲಕ್ಷ್ಮಣರು ಕೈಕೇಯಿಯನ್ನು ನಿಂದಿಸುವುದುಚಿತವೆ?" ಎಂದು ಶಂಕೆಯುಂಟಾಗಬಹುದು. ಕೊನೆಗೆ ಕೈಕೇಯಿಗೆ ದುರ್ಬುದ್ಧಿಯು ಹುಟ್ಟಿರಬಹುದಾದರೂ, ಮೊದಲು ಆಕೆಯು ನಡೆಸಿದ ದುರಾಲೋಚನೆಯೇ ತಮಗೆ ಈ ದುರವಸ್ಥೆಯನ್ನುಂಟುಮಾಡಿರುವುದರಿಂದ, ಇಲ್ಲಿ ರಾಮಲಕ್ಷ್ಮಣರು ತಮ್ಮ ದುಃಖಾತಿಶಯದಿಂದ ಅದನ್ನು ಉದ್ಘಾಟಿಸಿ ಹೇಳಿದರೆಂದು ಗ್ರಹಿಸಬೇಕು. ಮತ್ತು ಎಷ್ಟೇ ವ್ಯಸನವಿದ್ದರೂ ಇತರರ ದೋಷವನ್ನೆತ್ತಿ ಹೇಳುವುದು ಸಜ್ಜನ ಶಿರೋಮಣಿಯಾದ ರಾಮನ ಸೌಜನ್ಯಕ್ಕೆ ವಿರುದ್ಧವಲ್ಲವೆ? ಮತ್ತು "ಸುಪ್ತಪ್ರಮತ್ತ ಕುಪಿತಾನಾಂ ಭಾವ-

ದುಃಖವುಂಟಾಗಿರಲಿಲ್ಲವು. ಹಾ! ಎಂತಹ ದುರವಸ್ಥೆಯು ಬಂದೊದಗಿರುವುದು. ನೋಡಿದೆಯಾ?" ಎಂದನು. ಹೀಗೆ ದುಃಖಿತನಾಗಿ ಕಣ್ಣೀರು ಬಿಡುತ್ತ ರಾಮನು ದೈನ್ಯದಿಂದ ಪ್ರಲಾಪಿಸುವುದನ್ನು ಕೇಳಿ ಲಕ್ಷ್ಮಣನು, ಮಂತ್ರ ಬಲದಿಂದ ತಡೆಗಟ್ಟಿದ ಮಹಾಸರ್ಪದಂತೆ ಮಿತಿಮಿಾರಿದ ಕೋಪವುಳ್ಳವನಾಗಿ "ಅಣ್ಣಾ! ಇದೀಗ ಚೆನ್ನಾಯಿತು! ಇದೇನು? ನೀನೂ ಹೀಗೆ ದುಃಖಿಸುವುದುಂಟೆ? [1] ಸಮಸ್ತಲೋಕಕ್ಕೂ ನಾಥನಾಗಿ ಇಂದ್ರಸಮಾನನೆನಿಸಿದ ನೀನೇ ಹೀಗೆ ದಿಕ್ಕಿಲ್ಲದವರಂತೆ ಅಳುವುದೆಂದರೇನು? ನಾನು ನಿನ್ನ ಭೃತ್ಯನಾಗಿ ನೀನು ಹೇಳಿದ ಕೆಲಸವನ್ನು ಮಾಡುವುದಕ್ಕೂ ಸಿದ್ಧನಾಗಿ, ನಿನ್ನ ಸಮಿಾಪದಲ್ಲಿಯೇ ಇರುತ್ತಿರುವಾಗಲೂ ನೀನು ಹೀಗೆ ಅನಾಥನಂತೆ ದುಃಖಿಸುವುದೇಕೆ? ಇದೋ! ಈ ಬಾಣದಿಂದಲೇ ರಾಕ್ಷಸನನ್ನು ಕೊಂದು, ಈಗಲೇ ಇವನ ರಕ್ತವನ್ನು ಭೂಮಿಗೆ ಕುಡಿಸುವೆನು ನೋಡು! ರಾಜ್ಯದಾಸೆಗಾಗಿ ಪ್ರಯತ್ನಿಸಿದ ಭರತನ ಮೇಲೆ ಮೊದಲು ನನಗೆ ಯಾವ ಕೋಪವುಂಟಾಗಿತ್ತೋ, ಆ ಕೋಪವೆಲ್ಲವನ್ನೂ ಇಂದ್ರನು ತನ್ನ ವಜ್ರಾಯುಧವನ್ನು ಪರ್ವತಗಳ ಮೇಲೆ ಪ್ರಯೋಗಿಸುವಂತೆ, ಈ ದುಷ್ಟರಾಕ್ಷಸನ ಮೇಲೆ ಉಪಯೋಗಿಸುವೆನು. ನಾನು

---

ಜ್ಞಾನಂ ವೃಶ್ಯಂ" ಎಂಬ ನ್ಯಾಯದಿಂದ ಮಲಗಿರುವವರೂ, ಪ್ರಮಾದವಶವಲ್ಲಿರುವವರೂ ಕೋಪಗೊಂಡವರೂ ತಮ್ಮ ಮನೋಭಿಪ್ರಾಯವನ್ನು ಹೊರಕ್ಕೆ ಬಿಟ್ಟುಬಿಡುವರು. ಈಗ ರಾಮನು ಕೋಪದಲ್ಲಿ ಈ ಮಾತನ್ನಾಡಿರುವುದರಿಂದ ಆತನ ನಿಜವಾದ ಮನೋಭಾವವು ಹೀಗೆಯೇ ಇರಬಹುದೆಂದೂಹಿಸಬೇಕಲ್ಲವೆ?" ಎಂದೂ ಶಂಕೆಯುಂಟಾಗಬಹುದು. ಲೋಕದಲ್ಲಿ ಜನರು ಸಾಮಾನ್ಯವಾಗಿ ಕೋಪಗೊಂಡಾಗ "ಈ ಮಾತನ್ನಾಡಬಹುದು. ಇದನ್ನಾಡಬಾರದು" ಎಂಬ ಯುಕ್ತಾಯುಕ್ತ ವಿವೇಚನೆಯನ್ನೇ ಬಿಟ್ಟು, ಬಾಯಿಗೆ ಬಂದ ಹಾಗೆ ಆಡಿಬಿಡುವರೆಂಬ ಲೋಕಸ್ವಭಾವವನ್ನು ಜನಗಳಿಗೆ ನಟಿಸಿ ತೋರಿಸುವುದಕ್ಕಾಗಿಯೇ ರಾಮನು ಹೀಗೆ ಹೇಳಿರುವನೆಂದು ಗ್ರಾಹ್ಯವು.

1 ಇಲ್ಲಿ "ಅನಾಥ ಇವ ಭೂತಾನಾಂ ನಾಥಸ್ತ್ವಂ ವಾಸವೋಪಮಃ" ಎಂದು ಮೂಲವು. ಅಲ್ಲಿನ ತತ್ವಾರ್ಥವೇನೆಂದರೆ, "ಸರ್ವಲೋಕಗಳಿಗೂ ನಾಥನಾಗಿ ಇಂದ್ರನಿಗೂ ಉಪಮಾನಭೂತನಾದ ನೀನು ಯಾರಿಗೂ ನಾಥನಲ್ಲದಂತೆ ನಟಿಸುತ್ತ ಹೀಗೆ ಪರಿತಾಪವನ್ನು ತೋರಿಸಬಹುದೆ?" ಎಂದು ಗೂಢಾರ್ಥವು. ವಿಶ್ವಾಮಿತ್ರನು ಹಿಂದೆ "ಅಹಂ ವೇದ್ಮಿ ಮಹಾತ್ಮಾನಂ" ಎಂದೂ, ಪರಶುರಾಮನು "ತ್ವಯಾ ತ್ರೈಲೋಕ್ಯನಾಥೇನ" ಎಂದೂ ಹೇಳಿರುವ ತತ್ವಾರ್ಥವೇ ಇಲ್ಲಿಯೂ ಅನುಸಂಧೇಯವು.

ನನ್ನ ಭುಜಬಲದಿಂದ ಬಿಡತಕ್ಕ ಬಾಣವು ಈ ರಾಕ್ಷಸನ ಎದೆಯನ್ನು ಭೇದಿಸಿಕೊಂಡು ಹೊರಟು, ಅವನ ಪ್ರಾಣವನ್ನು ನೀಗಿಸಿ ಬಿಡುವುದನ್ನು ಈಗಲೇ ನೋಡು! ಈಗಲೇ ಈ ರಾಕ್ಷಸನು ಬಾಣದಿಂದ ಹತನಾಗಿ ಗಿರಗಿರನೆ ತಿರುಗಿ ನೆಲದಮೇಲೆ ಉರುಳುವುದನ್ನೂ ನಿನಗೆ ತೋರಿಸುವೆನು" ಎಂದನು.

ಇಲ್ಲಿಗೆ ಎರಡನೆಯ ಸರ್ಗವು.

---

ವಿರಾಧನೊಡನೆ ಯುದ್ಧವು. ವಿರಾಧನು ಸೀತೆಯನ್ನು ಬಿಟ್ಟು ರಾಮಲಕ್ಷ್ಮಣರನ್ನೆತ್ತಿಕೊಂಡು ಹೋದುದು.

ಲಕ್ಷ್ಮಣನು ಹೀಗೆ ರಾಮನಿಗೆ ಸಮಾಧಾನಮಾಡಿ, ಆಮೇಲೆ ಆ ವಿರಾಧನ ಕಡೆಗೆ ತಿರುಗಿ ನಗುತ್ತಿರುವವನಂತೆಯೇ ಅವನನ್ನು ಕುರಿತು "ಎಲೈ ನೀಚನೆ! ನೀನು ಈ ಕಾಡಿನಲ್ಲಿಯೇ ತಿರುಗುತ್ತಿರುವುದಾಗಿ ಹೇಳಿಕೊಂಡೆಯಲ್ಲವೆ? ನಿನ್ನ ಸ್ಥಳವಾವುದು? ನೀನು ಎಲ್ಲಿಂದ ಬಂದವನು?" ಎಂದನು. ಅದಕ್ಕಾ ವಿರಾಧನು ಆ ವನವೆಲ್ಲವೂ ಮೊಳಗುವಂತೆ ಆರ್ಭಟಿಸುತ್ತ "ಮೊದಲು ನಾನು ಕೇಳಿದುದಕ್ಕೆ ಪ್ರತ್ಯುತ್ತರವನ್ನು ಕೊಡಿರಿ! ನೀವು ಯಾರು? ಎಲ್ಲಿಗೆ ಹೋಗುತ್ತಿರುವಿರಿ" ಎಂದನು. ಮುಖದಿಂದ ಉರಿಯನ್ನು ಕಕ್ಕುವಂತೆ ಮಾತಾಡುತ್ತಿರುವ ಭಯಂಕರನಾದ ಆ ರಾಕ್ಷಸನು, ಹೀಗೆ ನಿರ್ಬಂಧಿಸಿ ಕೇಳುತ್ತಿರುವುದನ್ನು ನೋಡಿ ತೇಜಸ್ವಿಯಾದ ರಾಮನು ಆತನಿಗೆ ತನ್ನ ಇಕ್ಷ್ವಾಕುವಂಶವನ್ನೂ, ತಾನು ಕಾಡಿಗೆ ಹೊರಟುಬಂದ ಕಾರಣವನ್ನೂ ಯಥಾವತ್ತಾಗಿ ತಿಳಿಸಲಾರಂಭಿಸಿ, "ಎಲೈ ರಾಕ್ಷಸನೆ! ನಾವು ಕ್ಷತ್ರಿಯರು. ಆ ಕ್ಷತ್ರಿಯ ವೃತ್ತಿಯಲ್ಲಿಯೇ ನಿರತರಾದವರು. ಈಗ ಕಾರಣಾಂತರದಿಂದ ಕಾಡಿಗೆ ಬಂದಿರುವೆವು. ಇನ್ನು ನಿನ್ನ ಸಂಗತಿಯನ್ನು ತಿಳಿಸು. ಈ ಕಾಡಿನಲ್ಲಿ ತಿರುಗುತ್ತಿರುವ ನೀನು ಯಾರು?" ಎಂದನು. ಅದಕ್ಕಾ ವಿರಾಧನು ಸತ್ಯಪರಾಕ್ರಮನಾದ ರಾಮನನ್ನು ನೋಡಿ "ಓಹೋ! ಹಾಗಿದ್ದರೆ ನೀನು ರಘುವಂಶದಲ್ಲಿ ಹುಟ್ಟಿದ ರಾಜನೆ? ಇನ್ನು ನನ್ನ ಪೂರ್ವೋತ್ತರವನ್ನು ತಿಳಿಸು

ವೆನು ಕೇಳು! ನಾನು ಜಯನೆಂಬವನ ಮಗನು. ನನ್ನ ತಾಯಿಗೆ ಶತಹ್ರದೆಯೆಂದು ಹೆಸರು. ರಾಕ್ಷಸರೆಲ್ಲರೂ ನನ್ನನ್ನು [1] ವಿರಾಧನೆಂದು ಕರೆಯುತ್ತಿರುವರು. ನಾನು ಹಿಂದೆ ಮಹಾತಪಸ್ಸುಮಾಡಿ ಬ್ರಹ್ಮನನ್ನು ಮೆಚ್ಚಿಸಿದೆನು ಆತನು ನನ್ನಲ್ಲಿ ಪ್ರಸನ್ನನಾಗಿ ನನಗೆ ಯಾವ ಶಸ್ತ್ರಗಳಿಂದಲೂ ಮರಣವಾಗಲಿ ಛೇದವಾಗಲಿ ಉಂಟಾಗದಂತೆ ವರವನ್ನು ಕೊಟ್ಟಿರುವನು. ನನ್ನನ್ನು ಯಾರೂ ಯಾವ ಶಸ್ತ್ರಗಳಿಂದಲೂ ಛೇದಿಸಲಾರರು. ಇನ್ನು ನೀವು ಈ ಹೆಂಗುಸಿನ ಆಸೆಯನ್ನು ಬಿಟ್ಟು, ಬಂದ ದಾರಿಯನ್ನು ಹಿಡಿದು ಹಿಂತಿರುಗಿ ಹೊರಟುಹೋಗಿರಿ! ಇಲ್ಲಿ ನಿಲ್ಲಬೇಡಿರಿ! ಓಡಿಹೋಗಿರಿ! ಆಗ ನಾನು ನಿಮ್ಮನ್ನು ಏನೂ ಮಾಡುವುದಿಲ್ಲ. ಇಲ್ಲದಿದ್ದರೆ ನಿಮ್ಮನ್ನು ಪ್ರಾಣದೊಡನೆ ಬಿಡಲಾರೆನು" ಎಂದನು. ಇದನ್ನು ಕೇಳಿ ರಾಮನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ವಿಕೃತಾಕಾರವುಳ್ಳ ಪಾಪಿಯಾದ ಆ ರಾಕ್ಷಸನನ್ನು ಕುರಿತು, "ಛೀ ನೀಚನೆ! ನಿನಗೆ ಈ ವಿಪರೀತ ಬುದ್ಧಿಯೇಕೆ ಹುಟ್ಟಿತು? ನೀನು ಮರಣವನ್ನೇ ಇದಿರು ನೋಡುತ್ತಿರುವ ಹಾಗಿದೆ! ಹಾಗಿದ್ದರೆ ಈ ನಿನ್ನ ಕೋರಿಕೆಯು ಈಗ ನನ್ನೊಡನೆ ಯುದ್ಧ ಮಾಡುವಾಗ ಈಡೇರುವುದರಲ್ಲಿ ಸಂದೇಹವಿಲ್ಲ. ಇಷ್ಟವಿದ್ದರೆ ಮುಂದೆ ಬಂದು ನಿಲ್ಲು!" ಎಂದನು. ಹೀಗೆಂದು ಹೇಳುತ್ತಾ ರಾಮನು ತನ್ನ ಧನುಸ್ಸಿಗೆ ನಾಣೇರಿಸಿ ಕಟ್ಟ ತೀಕ್ಷ್ಣವಾದ ಬಾಣಗಳನ್ನು ಸಂಧಾನಮಾಡಿ ರಾಕ್ಷಸನಿಗೆ ಗುರಿಯಿಟ್ಟು ಹೊಡೆದನು. ಹೀಗೆ ರಾಮನು, ಚಿನ್ನದ ಕಟ್ಟುಗಳುಳ್ಳುದಾಗಿಯೂ, ಗರುಡನಂತೆಯೂ, ವಾಯುವಿನಂತೆಯೂ ಮಹಾವೇಗವುಳ್ಳವುಗಳಾಗಿಯೂ, ಇರುವ ಏಳು ಬಾಣಗಳನ್ನು ಎಡೆಬಿಡದೆ ಆ ವಿರಾಧನ ಮೇಲೆ ಪ್ರಯೋಗಿಸಲು ಗರಿಯ ರೆಕ್ಕೆಗಳಿಂದ ಕೂಡಿ, ಬೆಂಕಿಯಂತೆ ಉರಿಯುತ್ತಿದ್ದ ಆ ಬಾಣಗಳೆಲ್ಲವೂ ವಿರಾಧನ ದೇಹದಲ್ಲಿ ನಾಟಿ ಸ್ವಲ್ಪಮಟ್ಟಿಗೆ ಮಾತ್ರ ಆತನ ದೇಹದ ರಕ್ತದಿಂದ ನೆನೆದು ನೆಲದ ಮೇಲೆ ಬಿದ್ದುವು. ಆಗ ರಾಕ್ಷಸನಾದರೋ ತಡೆಯಲಾರದ ಕೋಪವುಳ್ಳವನಾಗಿ, ತಾನು ಹೊತ್ತುಕೊಂಡಿದ್ದ ಸೀತೆಯನ್ನು ಕೆಳಗಿಳಿಸಿ, ತನ್ನ ಶೂಲಾಯುಧವನ್ನು ಎತ್ತಿಕೊಂಡು ರಾಮ

---

1 ವಿರಾಧನೆಂಬುದು ಈತನಿಗೆ ತಂದೆ ತಾಯಿಗಳಿಟ್ಟ ಹೆಸರಲ್ಲವು. ಇವನ ಸಜಾತೀಯರಾದ ರಾಕ್ಷಸರು ಇವನನ್ನು ಈ ಹೆಸರಿನಿಂದ ಕರೆಯುತ್ತಿದ್ದರು. "ವಿರಾಧಃ" ಎಂದರೆ ಯಾರಿಗೂ ವಶನಾಗದವನೆಂದು ವ್ಯುತ್ಪತ್ತಿಯು.

ಲಕ್ಷ್ಮಣರಿಗಿದಿರಾಗಿ ಓಡಿಬಂದನು. ಹೀಗೆ ಮಹಾಧ್ವನಿಯಿಂದ ಕೂಗುತ್ತ ಆತನು ಶೂಲವನ್ನು ಎತ್ತಿ ಹಿಡಿದು ಮುಂದೆ ಬರುತ್ತಿರಲು, ಭೂತಗಳನ್ನು ನುಂಗುವುದಕ್ಕಾಗಿ ಬಾಯಿಬಿಟ್ಟುಕೊಂಡು ಬರುವ ಯಮನಂತೆಯೇ ತೋರುತ್ತಿದ್ದನು. ಆಮೇಲೆ ರಾಮಲಕ್ಷ್ಮಣರಿಬ್ಬರೂ ಅವನ ಮೇಲೆ ಬಾಣಗಳ ಮಳೆಯನ್ನು ಕರೆಯುಲಾರಂಭಿಸಿದರು. [1] ಪ್ರಳಯಕಾಲದಲ್ಲಿ ಸಮಸ್ತ ಭೂತಗಳನ್ನೂ ಸಂಹರಿಸುವುದಕ್ಕಾಗಿ ಬರುತ್ತಿರುವ ಯಮನೋ ಎಂಬಂತೆ, ಭಯಂಕರಸ್ವರೂಪದಿಂದ ಕೂಡಿದ ಈ ರಾಕ್ಷಸನು, ಕೇವಲ ಮನುಷ್ಯಮಾತ್ರದವರನ್ನು ಗೆಲ್ಲುವುದಕ್ಕಾಗಿ ತಾನು ಮಾಡಬೇಕಾದ ಸಾಹಸವನ್ನು ನೋಡಿ ತಾನೇ ನಗುತ್ತ, ಇದ್ದಕ್ಕಿದ್ದ ಹಾಗೆ ಮಾಯೆಯಿಂದ ಒಂದು ದೊಡ್ಡ ಆಕಾರವನ್ನು ತಾಳಿದನು. ಹೀಗೆ ಉಬ್ಬುತ್ತಿರುವ ಆತನ ದೇಹದಿಂದ ಅಲ್ಲಲ್ಲಿ ನಾಟಿಕೊಂಡಿದ್ದ ಬಾಣಗಳೆಲ್ಲವೂ ಪುಡಿಪುಡಿಯಾಗಿ ಉದಿರಿದುವು. ಆ ರಾಕ್ಷಸನು ಬ್ರಹ್ಮನ ವರಬಲದಿಂದ ತನ್ನ ಪ್ರಾಣವಾಯುಗಳನ್ನು ಹೃದಯದಲ್ಲಿ ಅಡಗಿಸಿಕೊಂಡು, ಶೂಲವನ್ನು ಹಿಡಿದು, ರಾಮಲಕ್ಷ್ಮಣರ ಮೇಲೆ ಬೀಳುವುದಕ್ಕೆ ಬಂದನು. ಹೀಗೆ ಬರುತ್ತಿರುವಾಗಲೇ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ರಾಮನು, ವಜ್ರಸಮಾನವಾಗಿ ಬೆಂಕಿಯಂತೆ ಉರಿಯುತ್ತಿರುವ ಆ ಶೂಲವನ್ನು ತನ್ನ ಎರಡು ಬಾಣಗಳಿಂದ ಕತ್ತರಿಸಿಬಿಟ್ಟನು. ಹೀಗೆ ರಾಮಬಾಣದಿಂದ ಕತ್ತರಿಸಲ್ಪಟ್ಟ, ಆ ಶೂಲವು ವಜ್ರಾಯುಧದಿಂದ ಹೊಡೆಯಲ್ಪಟ್ಟ ಮೇರುಪರ್ವತದ ಕಲ್ಲುಬಂಡೆಯಂತೆ ಆತನ ಕೈಯಿಂದ ಮುರಿದು ಕೆಳಗೆ ಬಿದ್ದಿತು. ಆಗ ರಾಮಲಕ್ಷ್ಮಣರಿಬ್ಬರೂ ಕಾಳಸರ್ಪದಂತೆ ಕ್ರೂರವಾದ ಎರಡು ಕತ್ತಿಗಳನ್ನು ಹಿಡಿದು, ಇದಿರಾಗಿ ಬರುತ್ತಿರುವ ಆ ರಾಕ್ಷಸನನ್ನು ಹೊಡೆದರು. ಅದಕ್ಕೂ ಲಕ್ಷ್ಯಮಾಡದೆ ಆ ರಾಕ್ಷಸನು ಅವರಿಬ್ಬರನ್ನೂ ತನ್ನ ಎರಡು ತೋಳುಗಳಿಂದ ಹಿಡಿದೆತ್ತಿ, ತನ್ನ ಹೆಗಲಮೇಲೆ ಇಟ್ಟುಕೊಂಡು ಓಡುವುದಕ್ಕಾರಂಭಿಸಿದನು. ಆ ರಾಕ್ಷಸನು ತಮ್ಮನ್ನು ಬೇರೊಂದು ಕಾಡಿಗೆ ಎತ್ತಿಕೊಂಡು ಹೋಗುತ್ತಿರುವನೆಂದು ತಿಳಿದು, ರಾಮನು ಲಕ್ಷ್ಮಣನನ್ನು ನೋಡಿ

---

[1] ಇಲ್ಲಿ "ಕಾಲಾಂತಕಯಮೋಪಮೇ" ಎಂದು ಮೂಲವು. ಕಾಲ, ಅಂತಕ, ಯಮನೆಂಬ ಮರಣಾಧಿಕಾರಿಗಳು ಮೂವರುಂಟು. ಇವರಲ್ಲಿ ಜೀವವನ್ನಪಹರಿಸುವವನು ಕಾಲನೆಂದೂ, ಪ್ರಾಣಗಳನ್ನೆಳೆಯುವವನು ಅಂತಕನೆಂದೂ, ಪುಣ್ಯಪಾಪಗಳ ವಿವೇಚನೆಯನ್ನು ಮಾಡುವವನು ಯಮನೆಂದೂ ಇವರ ಅಧಿಕಾರಭೇದವು. (ಮಹೇಶ್ವರತೀರ್ಥರು).

ನಗುತ್ತ "ಎಲೆ ವತ್ಸನೆ! ಈಗ ನೀನು ಸುಮ್ಮನಿರು! ಈ ವ್ಯಾಜದಿಂದಲೇ ನಮಗೆ ನಡೆಯುವ ಕಷ್ಟವೇ ತಪ್ಪಿತು. ಇವನಿಗೆ ಇಷ್ಟವಿರುವವರೆಗೂ ಇವನು ನಮ್ಮನ್ನು ಎತ್ತಿಕೊಂಡು ಹೋಗಲಿ! ಇವನು ಯಾವ ದಾರಿಯನ್ನು ಹಿಡಿದು ಹೋದರೂ ಹೋಗಲಿ! ನಮಗಂತೂ ದಾರಿಯು ತಿಳಿಯದು. ಹೇಗಿದ್ದರೂ ನಡುಕಾಡಿಗೆ ಹೋಗಿ ಸೇರಬೇಕೆಂಬುದೊಂದೇ ನಮ್ಮ ಮುಖ್ಯೋದ್ದೇಶವು" ಎಂದನು. ಆ ರಾಕ್ಷಸನಾದರೋ ಮಕ್ಕಳನ್ನೆತ್ತಿಕೊಂಡು ಹೋಗುವಂತೆ, ತನ್ನ ಬಲಶೌರ್ಯ ಗಳಿಂದ ಆ ರಾಮಲಕ್ಷ್ಮಣರಿಬ್ಬರನ್ನೂ ತನ್ನ ಹೆಗಲಮೇಲಿಟ್ಟುಕೊಂಡು, ಭಯಂಕರವಾಗಿ ಗರ್ಜಿಸುತ್ತ ತಾನುದ್ದೇಶಿಸಿದ ಕಾಡಿಗಭಿಮುಖನಾಗಿಯೇ ಹೊರಟನು. ಕೊನೆಗೆ ಆ ರಾಕ್ಷಸನು, ಮಹಾಮೇಘದಂತೆ ಕಪ್ಪಾಗಿಯೂ, ದೊಡ್ಡದೊಡ್ಡ ಮರಗಳಿಂದ ತುಂಬಿದುದಾಗಿಯೂ, ಬಗೆಬಗೆಯಾದ ಪಕ್ಷಿಸಮೂಹ ದಿಂದ ವಿಚಿತ್ರವಾಗಿಯೂ ನರಿಗಳಿಂದಲೂ ಇತರ ಕ್ರೂರಮೃಗಗಳಿಂದಲೂ ತುಂಬಿದುದಾಗಿಯೂ ಇರುವ ಒಂದು ವನಮಧ್ಯವನ್ನು ಪ್ರವೇಶಿಸಿದನು.

ಇಲ್ಲಿಗೆ ಮೂರನೆಯ ಸರ್ಗವು.

---

ಸೀತೆಯು ಅಳುತ್ತಿರುವುದನ್ನು ನೋಡಿ ರಾಮಲಕ್ಷ್ಮಣರು ಬೇಗನೆ ಆ ವಿರಾಧನ ತೋಳುಗಳನ್ನು ಕತ್ತರಿಸಿದುದು. ವಿರಾಧನ ಪೂರ್ವಜನ್ಮವೃತ್ತಾಂತವು. ಆತನು ಇವರಿಗೆ ಶರಭಂಗಾಶ್ರಮವನ್ನು ತೋರಿಸಿ ತಾನು ನಿಜರೂಪದಿಂದ ಸ್ವರ್ಗಲೋಕವನ್ನು ಸೇರಿದುದು.

ಹೀಗೆ ಆ ರಾಕ್ಷಸನು ರಾಮಲಕ್ಷ್ಮಣರಿಬ್ಬರನ್ನೂ ಎತ್ತಿಕೊಂಡು ಹೋಗುವು ದನ್ನು ನೋಡಿ ಸೀತೆಗೆ ಮಹಾ ಭಯವುಂಟಾಯಿತು. ಆಕೆಯು ಹೀಗೆ ಭಯದಿಂದ ಕೈಗಳನ್ನು ಹಿಸುಕುತ್ತ ಉಚ್ಚಸ್ವರದಿಂದ ಅಳುವುದಕ್ಕಾರಂಭಿಸಿ, "ಅಯ್ಯೋ! ದಶರಥಪುತ್ರನಾಗಿ, ಸತ್ಯವಂತನಾಗಿ, ಶೀಲವಂತನಾದ, ದೋಷ ರಹಿತನಾಗಿರುವ ರಾಮನನ್ನು ಈ ರಾಕ್ಷಸನು ಎಲ್ಲಿಗೋ ಎತ್ತಿಕೊಂಡುಹೋಗುವ ನಲ್ಲಾ! ಹಾ! ದೈವವೆ! ಈತನು ಇವರನ್ನು ಎಲ್ಲಿಗೆ ಅಪಹರಿಸಿಕೊಂಡು ಹೋಗುವನೋ ತಿಳಿಯದಲ್ಲಾ! ಹಾ! ನಾನೇನು ಮಾಡಲಿ? ಎಲೈ

ರಾಕ್ಷಸೋತ್ತಮನೇ! ನಾನು ಕೈಮುಗಿದು ಬೇಡುವೆನು. ಇವರನ್ನು ನೀನು ಎತ್ತಿಕೊಂಡು ಹೋದಮೇಲೆ ಈ ನಡುಕಾಡಿನಲ್ಲಿ ನನಗೆ ದಿಕ್ಕಾರು? ಆಮೇಲೆ ಹೇಗಿದ್ದರೂ ಇಲ್ಲಿ ನನ್ನನ್ನು ತೋಳಗಳೋ ಹುಲಿಗಳೋ ತಿಂದುಬಿಡುವುವು. ಅದಕ್ಕೆ ಬದಲಾಗಿ ನೀನೇ ನನ್ನನ್ನು ಎತ್ತಿಕೊಂಡು ಹೋಗು. ಅವರಿಬ್ಬರನ್ನೂ ಬಿಟ್ಟುಬಿಡು. ಇದೋ ನಿನಗೆ ಕೈಮುಗಿದು ಬೇಡುವೆನು" ಎಂದು ಕೂಗುತ್ತಿದ್ದಳು. ಸೀತೆಯ ಈ ಪ್ರಲಾಪವನ್ನು ಕೇಳಿದಮೇಲೆ, ರಾಮಲಕ್ಷ್ಮಣರಿಬ್ಬರಿಗೂ ಆ ರಾಕ್ಷಸನನ್ನಾಗಲೇ ಕೊಂದುಬಿಡಬೇಕೆಂದು ಮನಸ್ಸು ಹುಟ್ಟಿತು. ಒಡನೆಯೇ [1]ಲಕ್ಷ್ಮಣನು ಅವನ ಎಡತೋಳನ್ನು ಕತ್ತರಿಸಿಬಿಟ್ಟನು. ಇತ್ತಲಾಗಿ ರಾಮನೂ ಅವನ ಬಲತೋಳನ್ನು ಕತ್ತರಿಸಿದನು. ಆಗ ಮೇಘದಂತೆ ಕಪ್ಪುಮೈಯುಳ್ಳ ಆ ರಾಕ್ಷಸನು, ವಜ್ರಾಯುಧದಿಂದ ಭೇದಿಸಲ್ಪಟ್ಟ ದೊಡ್ಡ ಬೆಟ್ಟದಂತೆ ತೋಳು ಮುರಿದು ಕೆಳಗೆ ಬಿದ್ದನು. ಆಮೇಲೆ ರಾಮಲಕ್ಷ್ಮಣರಿಬ್ಬರೂ ಆ ರಾಕ್ಷಸನನ್ನು ತಮ್ಮ ಬಲವಾದ ಮುಷ್ಟಿಗಳಿಂದಲೂ, ಕಾಲುಗಳಿಂದಲೂ, ಮೊಳಕಾಲುಗಳಿಂದಲೂ ಗುದ್ದಿ ಅರ್ಧಪ್ರಾಣದಂತೆ ಮಾಡಿ, ಕೊನೆಗೆ ಆತನ ದೇಹವನ್ನು ಒಬ್ಬರಾದಮೇಲೊಬ್ಬರು ಎತ್ತಿಯೆತ್ತಿ ನೆಲದಮೇಲೆ ಕುಕ್ಕರಿಸುತ್ತ, ನಜ್ಜುಗುಜ್ಜಾಗಿ ಮಾಡಿ, ಕೊನೆಗೆ ಒಂದುಂಡೆಯಂತೆ ಮಾಡಿಟ್ಟರು. ಎಷ್ಟಾದರೇನು! ಹೀಗೆ ಅನೇಕ ಬಾಣಗಳಿಂದ ಭೇದಿಸಿದರೂ, ಕತ್ತಿಯಿಂದ ಕತ್ತರಿಸಿದರೂ, ನೆಲದ ಮೇಲಿಟ್ಟು ನಜ್ಜುಗುಜ್ಜಾಗಿ ಮಾಡಿದರೂ ಆತನು ಸಾಯಲಿಲ್ಲವು. ಹೀಗೆ ಯಾವ ಉಪಾಯಗಳಿಂದಲೂ ಸಾಯದೆ, ಬೆಟ್ಟದಂತೆ ನಿಶ್ಚಲನಾಗಿರುವ ಆ ರಾಕ್ಷಸನನ್ನು ನೋಡಿ ರಾಮನು ಆಶ್ಚರ್ಯಭರಿತನಾಗಿ ಸಮೀಪದಲ್ಲಿದ್ದ ಲಕ್ಷ್ಮಣನನ್ನು ಕುರಿತು, "ಎಲೆ ವತ್ಸನೆ! ಈತನ ತಪೋಮಹಿಮೆಯು ಬಹಳ ಅತಿಶಯವಾಗಿರುವುದು. ಈತನನ್ನು ಕೊಲ್ಲುವುದು ಸಾಧ್ಯವಲ್ಲ. ನಾವು ಯುದ್ಧದಲ್ಲಿ ಉಪಯೋಗಿಸಿದ ಶಸ್ತ್ರಗಳೆಲ್ಲವೂ ನಿಷ್ಫಲವಾದುವು. ಇವನನ್ನು ನಾವಿಬ್ಬರೂ

---

1. ಇಲ್ಲಿ ಲಕ್ಷ್ಮಣನು ಎಡದ ತೋಳನ್ನೂ, ರಾಮನು ಬಲತೋಳನ್ನೂ ಖಂಡಿಸಿದುದಾಗಿ ಹೇಳಿರುವಂತೆಯೇ, ಕಬಂಧಬಾಹುಚ್ಛೇದನದಲ್ಲಿಯೂ ಇದೇ ಕ್ರಮವು ಕಾಣುವುದು. ಲಕ್ಷ್ಮಣನು ಯಾವಾಗಲೂ ರಾಮನ ಬಲಗಡೆಯಲ್ಲಿಯೇ ಇರುವುದರಿಂದಲೂ ಆ ಕ್ರಮದಿಂದಲೇ ಆ ರಾಕ್ಷಸನು ಇವರನ್ನು ಎಡಬಲತೋಳುಗಳಲ್ಲಿ ಗ್ರಹಿಸಿದುದರಿಂದಲೂ ಈ ರಾಮಲಕ್ಷ್ಮಣರು ತಮ್ಮ ತಮ್ಮ ಕಡೆಯ ತೋಳುಗಳನ್ನು ಭೇದಿಸಿದರೆಂದು ಗ್ರಾಹ್ಯವು.

ಸೇರಿ ಇಲ್ಲಿಯೇ ನೆಲದಲ್ಲಿ ಹೂಳಿಬಿಡುವೆವು" ಎಂದನು. ಅಭಯಪ್ರದನಾದ ರಾಮನು ಹೇಳಿದ ಈ ಮಾತನ್ನು ಆ ರಾಕ್ಷಸನೂ ಕೇಳುತ್ತಿದ್ದು, ರಾಮನನ್ನು ಕುರಿತು ವಿನಯವಾಕ್ಯದಿಂದ "ಎಲೈ ಪುರುಷಶ್ರೇಷ್ಠನೆ! ಇನ್ನೂ ನಾನು ಸಾಯಲಿಲ್ಲವೆಂದೆಣಿಸಬೇಡ. ಇಂದ್ರನಿಗೆ ಸಮಾನವಾದ ಬಲವುಳ್ಳ ನಿನ್ನ ಕೈಯಿಂದ ನಾನು ಈಗ ಹತನಾದಂತೆಯೇ ತಿಳಿ. ಅಜ್ಞಾನವಶದಿಂದ ನಿನ್ನ ಮಹಿಮೆಯು ನನಗೆ ಮೊದಲು ತಿಳಿಯದೇಹೋಯಿತು ಸ್ವಾಮಿ! ಈಗ ನಾನು[1] ನಿಮ್ಮೆಲ್ಲರ ನಿಜಸ್ಥಿತಿಯನ್ನೂ ತಿಳಿದುಕೊಂಡೆನು. ನೀನು ಕೌಸಲ್ಯೆಯ ಪುತ್ರರತ್ನವೆಂಬು ದನ್ನೂ ಈಗ ನಾನು ತಿಳಿದೆನು. ಮಹಾತ್ಮಳಾದ ಈಕೆಯು ವಿದೇಹರಾಜಪುತ್ರಿ ಯೆಂಬುದನ್ನೂ, ಮಹಾಯಶಸ್ವಿಯಾದ ಈ ಲಕ್ಷ್ಮಣನ ನಿಜತ್ವವನ್ನೂ ಈಗ ಕಂಡುಕೊಂಡೆನು. ಇದುವರೆಗೆ ಈ ತತ್ವಜ್ಞಾನವು ನನಗೆ ಹುಟ್ಟದಿದ್ದುದಕ್ಕೆ ಒಂದು ಮುಖ್ಯಕಾರಣವುಂಟು. ನಾನು ಮೊದಲು ತುಂಬುರುವೆಂಬ ಹೆಸರುಳ್ಳ ಗಂಧರ್ವನಾಗಿದ್ದೆನು. ಕುಬೇರನ ಶಾಪದಿಂದ ನನಗೆ ಈ ರಾಕ್ಷಸಸ್ವರೂಪ ವುಂಟಾಯಿತು. ನಾನು ಪೂರ್ವದಲ್ಲಿ ರಂಭೆಯೆಂಬ ಅಪ್ಸರಸ್ತ್ರೀಯಲ್ಲಿ ಆಸಕ್ತ ನಾಗಿ, ನಾನು ನಡೆಸಬೇಕಾದ ಕುಬೇರನ ಸೇವೆಯನ್ನು ತಕ್ಕ ಕಾಲದಲ್ಲಿ ನಡೆಸದೇಹೋದುದರಿಂದ ನನ್ನ ಪ್ರಭುವಾದ ಕುಬೇರನು ಕುಪಿತನಾಗಿ, ರಾಕ್ಷಸ ಜನ್ಮವನ್ನು ಹೊಂದುವಂತೆ ನನಗೆ ಶಾಪವನ್ನು ಕೊಟ್ಟನು. ಆಗ ನಾನು ಆತನಲ್ಲಿಯೇ ಮರೆಹೊಕ್ಕು ಅವನನ್ನು ಪ್ರಸನ್ನನನ್ನಾಗಿ ಮಾಡಿದೆನು. ಆಗ ಕುಬೇರನು ನನ್ನನ್ನು ನೋಡಿ "ದಶರಥಪುತ್ರನಾದ ರಾಮನೊಡನೆ ನಿನಗೆ ಯಾವಾಗ ಯುದ್ಧವು ಸಂಧಿಸುವುದೋ, ಆಗ ನೀನು ನಿನ್ನ ನಿಜಸ್ವರೂಪವನ್ನು ಹೊಂದಿ ಸ್ವರ್ಗವನ್ನು ಸೇರುವೆ" ಎಂದನುಗ್ರಹಿಸಿದನು. ಎಲೈ ಮಹಾತ್ಮನೆ! ಈಗ ನಿನ್ನ ಅನುಗ್ರಹದಿಂದ ಭಯಂಕರವಾದ ಆ ಶಾಪದಿಂದ ಬಿಡುಗಡೆ ಹೊಂದಿ ದೆನು. ಇನ್ನು ನಾನು ನನ್ನ ಲೋಕಕ್ಕೆ ಹೋಗುವೆನು. ನಿಮಗೆ ಮಂಗಳ ವಾಗಲಿ! ಆದರೆ ಈಗ ನಾನು ತಿಳಿಸಬೇಕಾದ ಮತ್ತೊಂದು ವಿಷಯವುಂಟು. ಇದೋ! ಇತ್ತಲಾಗಿ ಶರಭಂಗನೆಂಬ ಮಹರ್ಷಿಯೊಬ್ಬನಿರುವನು. ಆತನು ಬಹಳ ಧರ್ಮಾತ್ಮನು. ಮಹಾ ತಪಸ್ವಿಯು. ಸೂರ್ಯಸಮಾನವಾದ ತೇಜ

---

1. ನಿಮ್ಮ ಮೂವರ ಅವತಾರರಹಸ್ಯಗಳೂ ನನಗೆ ಈಗ ಚೆನ್ನಾಗಿ ತಿಳಿಸುಬಂದು ವೆಂದು ಭಾವವು.

ಸ್ಸುಳ್ಳವನು. ಆತನ ಆಶ್ರಮವು ಇಲ್ಲಿಗೆ ಒಂದುವರೆ ಗಾವುದದ ದೂರದಲ್ಲಿರುವುದು. ನೀನು ಈಗಲೇ ಆತನ ಬಳಿಗೆ ಹೋಗು! [1]ಅದರಿಂದ ನಿನಗೆ ಶ್ರೇಯಸ್ಸುಂಟು. ನೀನು ಕ್ಷೇಮದಿಂದ ಹೋಗಿ ಋಷ್ಯಾಶ್ರಮವನ್ನು ಸೇರು. ನೀನು ಮೊದಲುದ್ದೇಶಿಸಿದಂತೆಯೇ ನನ್ನ ಈ ದೇಹವನ್ನು ಒಂದು ಹಳ್ಳದಲ್ಲಿ ಹೂಳಿಡು. ಮೃತರಾದ ರಾಕ್ಷಸರ ದೇಹವನ್ನು ಹಳ್ಳದಲ್ಲಿ ಹೂಳಿಡುವುದೇ ಆದಿಯಿಂದ ಬಂದ ಧರ್ಮವು. ಹಳ್ಳದಲ್ಲಿ ಹೂಳಿಡಲ್ಪಟ್ಟ ರಾಕ್ಷಸರಿಗೆ ಪುಣ್ಯಲೋಕಸಿದ್ಧಿಯುಂಟು" ಎಂದನು. ಹೀಗೆ ಬಾಣದಿಂದ ಭೇದಿಸಲ್ಪಟ್ಟ ವಿರಾಧನು ರಾಮನಿಗೆ ತನ್ನ ಪೂರ್ವವೃತ್ತಾಂತವನ್ನು ತಿಳಿಸಿ, ತಾನು ಸ್ವರ್ಗಕ್ಕೆ ಹೊರಟು ಹೋದನು. ರಾಮನು ವಿರಾಧನ ಮಾತನ್ನು ಕೇಳಿ ಲಕ್ಷ್ಮಣನನ್ನು ನೋಡಿ "ಎಲೆ ವತ್ಸನೆ! ಕಾಡಾನೆಯಂತೆ ಭಯಂಕರವಾದ ಈ ರಾಕ್ಷಸನ ದೇಹಪ್ರಮಾಣಕ್ಕೆ ತಕ್ಕಂತೆ ಈ ವನಪ್ರದೇಶದಲ್ಲಿ ಒಂದು ದೊಡ್ಡ ಹಳ್ಳವನ್ನು ಮಾಡು" ಎಂದನು. ವೀರ್ಯವಂತನಾದ ರಾಮನು ಹಳ್ಳವನ್ನು ತೋಡುವ ಕೆಲಸಕ್ಕೆ ಲಕ್ಷ್ಮಣನನ್ನು ನಿಯಮಿಸಿ, ಆ ವಿರಾಧನ ದೇಹವು ಅತ್ತಿತ್ತ ಚಲಿಸದಂತೆ ಅವರ ಕಂಠಸ್ಥಾನದಲ್ಲಿ ತನ್ನ ಕಾಲನ್ನು ಮೆಟ್ಟಿಕೊಂಡು ನಿಂತಿದ್ದನು. ಇಷ್ಟರಲ್ಲಿ ಲಕ್ಷ್ಮಣನು ಪಕ್ಕದಲ್ಲಿಯೇ ಒಂದು ಪ್ರದೇಶವನ್ನು ನೋಡಿ, ಗುದ್ದಲಿಯನ್ನು ಹಿಡಿದು ಒಂದು ದೊಡ್ಡ ಹಳ್ಳವನ್ನು ತೋಡಿದನು. ಹಳ್ಳವು ಸಿದ್ಧವಾದೊಡನೆಯೇ ರಾಮನು ಆ ರಾಕ್ಷಸದೇಹದ ಕಂಠಪ್ರದೇಶದಲ್ಲಿಟ್ಟಿದ್ದ ತನ್ನ ಕಾಲನ್ನು ಸಡಿಲಿಸಲು, ಆ ದೇಹವು ಭಯಂಕರವಾದ ಧ್ವನಿಯಿಂದ ಮೊರೆಯಿಡಲಾರಂಭಿಸಿತು. ಗರ್ದಭಾಕಾರವುಳ್ಳ ಆ ದೇಹವನ್ನು ಈ ಅಣ್ಣತಮ್ಮಂದಿರಿಬ್ಬರೂ ಹಳ್ಳದಲ್ಲಿ ಹಾಕಿ ಹೂಳಿಬಿಟ್ಟರು. ಮಹಾಪರಾಕ್ರಮಿಗಳಾಗಿಯೂ, ಯಾವ ಯುದ್ಧದಲ್ಲಿಯೂ ಹಿಂಜರಿಯದವರಾಗಿಯೂ ಇರುವ ರಾಮಲಕ್ಷ್ಮಣರಿಬ್ಬರೂ ಭಯಂಕರ ಸ್ವರೂಪವುಳ್ಳ ಆ ರಾಕ್ಷಸನನ್ನು ಹೀಗೆ ಯುದ್ಧದಲ್ಲಿ ಜಯಿಸಿ ನಿರ್ಜೀವದಶೆಯಲ್ಲಿಯೂ ಅರಚಿಕೊಳ್ಳುತ್ತಿರುವ ಆ ದೇಹವನ್ನು ಬಿಲದಲ್ಲಿ

---

1. ಇಲ್ಲಿ "ಸ ತೇ ಶ್ರೇಯೋ ವಿಧಾಸ್ಯತಿ" ಎಂದು ಮೂಲವು. ಇದಕ್ಕೆ ಭಗವತ್ಪರವಾದ ತತ್ವಾರ್ಥವೇನೆಂದರೆ:– (ಸಃ) ಅವನು (ತೇ) ನಿನ್ನ ದೆಸೆಯಿಂದ (ಇಲ್ಲಿ ಪಂಚಮೀ ವಿಭಕ್ತಿಯಾಗಿ ಗ್ರಹಿಸಬೇಕು.) (ಶ್ರೇಯಃ) ಬ್ರಹ್ಮಲೋಕಪ್ರಾಪ್ತಿರೂಪವಾದ ಶ್ರೇಯಸ್ಸನ್ನು (ವಿಧಾಸ್ಯತಿ) ಹೊಂದುವನು." (ಗೋವಿಂದರಾಜೀಯವು).

ಹಾಕಿ ಹೂಳಿಟ್ಟು ಸಂತುಷ್ಟರಾಗಿದ್ದರು. ಆ ಕ್ರೂರ ರಾಕ್ಷಸನು ಶಸ್ತ್ರಗಳಿಂದ ಅವಧ್ಯನೆಂಬುದನ್ನು ತಿಳಿದು, ಆತನನ್ನು ಕೊಲ್ಲುವುದಕ್ಕೆ ಬೇರೆ ಉಪಾಯವಿಲ್ಲವೆಂದು ನಿಶ್ಚಯಿಸಿ, ಭೂಸ್ಥಾಪನೆಯಿಂದಲೇ ಆತನನ್ನು ಕೊಂದರು ಇದಲ್ಲದೆ ಮೊದಲೇ ವಿರಾಧನು ಇವರಿಗೆ ತಾನು ಶಸ್ತ್ರಗಳಿಂದ ಅವಧ್ಯನೆಂಬುದನೂ, ತನ್ನ ಮರಣೋಪಾಯವನ್ನೂ ತಿಳಿಸಿ, ತಮ್ಮಿಂದಲೇ ತನಗೆ ಮರಣವಾಗಬೇಕೆಂದೂ ಕೋರಿದ್ದುದರಿಂದ, ಆಶ್ರಿತವತ್ಸಲನಾದ ರಾಮನು ತನ್ನ ಶತ್ರುವಾದ ಆತನಲ್ಲಿಯೂ ಅನುಗ್ರಹವನ್ನಿಟ್ಟು, ಆವನ ಕೋರಿಕೆಯಂತೆ ಆ ರಾಕ್ಷಸದೇಹವನ್ನು ಹಳ್ಳದಲ್ಲಿಯೇ ಹೂಳಿಟ್ಟನು. ರಾಮನು ಆ ರಾಕ್ಷಸದೇಹವನ್ನು ಬಲಾತ್ಕಾರದಿಂದೆಳೆದು ಹಳ್ಳದಲ್ಲಿಡುವಾಗ, ಆ ವನಪ್ರದೇಶವೆಲ್ಲವೂ ಮೊಳಗುವಂತೆ ಆ ಮೃತದೇಹದಿಂದ ಭಯಂಕರವಾದ ಮಹಾಧ್ವನಿಯೊಂದು ಹೊರಟಿತು. ರಾಮಲಕ್ಷ್ಮಣರಿಬ್ಬರೂ ಆ ರಾಕ್ಷಸದೇಹವನ್ನು ಹಳ್ಳದಲ್ಲಿ ಹೂಳಿ, ಸಂತೋಷದಿಂದ ಪುಲಕಿತವಾದ ಮೈಯುಳ್ಳವರಾಗಿ, ಆ ಹಳ್ಳದ ಮೇಲೆ ಒಂದು ದೊಡ್ಡ ಕಲ್ಲುಬಂಡೆಯನ್ನೆಳೆದು, ನಿರ್ಭಯವಾಗಿ ಆ ವನಪ್ರದೇಶದಲ್ಲಿ ಸುತ್ತುತ್ತಿದ್ದರು. ಚಿನ್ನದಿಂದ ಚಿತ್ರಕೆಲಸಮಾಡಲ್ಪಟ್ಟ ದಿವ್ಯಧನುಸ್ಸನ್ನು ಕೈಯಲ್ಲಿ ಹಿಡಿದು, ಆ ರಾಮಲಕ್ಷ್ಮಣರಿಬ್ಬರೂ ಹೀಗೆ ಆಕಾಶದಲ್ಲಿರುವ ಚಂದ್ರಸೂರ್ಯರಂತೆ ಆ ವನದಲ್ಲಿ ಸೀತೆಯೊಡಗೂಡಿ ಸಂತೋಷದಿಂದ ಸುತ್ತುತ್ತಿದ್ದರು.

ಇಲ್ಲಿಗೆ ನಾಲ್ಕನೆಯ ಸರ್ಗವು.

---

ಶರಭಂಗಾಶ್ರಮಕ್ಕೆ ಹೋದುದು. ಶರಭಂಗನು ರಾಮನನ್ನು ಸತ್ಕರಿಸಿ ಸುತೀಕ್ಷ್ಣಾಶ್ರಮಕ್ಕೆ ಮಾರ್ಗವನ್ನು ತೋರಿಸಿ ರಾಮನ ಮುಂದೆ ಅಗ್ನಿಪ್ರವೇಶವನ್ನು ಮಾಡಿ ಪರಮಪದವನ್ನು ಹೊಂದಿದುದು.

ಮಹಾಪರಾಕ್ರಮಿಯಾದ ರಾಮನು ಆ ಕಾಡಿನಲ್ಲಿ ವಿರಾಧನನ್ನು ಕೊಂದಮೇಲೆ, ಸೀತೆಯನ್ನಪ್ಪಿಕೊಂಡು, ಅವಳನ್ನು ಸಮಾಧಾನಪಡಿಸಿ, ತೇಜಸ್ವಿಯಾದ ತನ್ನ ತಮ್ಮನನ್ನು ಕುರಿತು “ವತ್ಸನೆ! ಈ ಕಾಡಾದರೋ ಬಹಳ ಅಪಾಯಗಳಿಗೆಡೆಯಾದುದು. ನಾವಾದರೋ ಕಾಡಿನಲ್ಲಿದ್ದು ಬಳಕೆಯುಳ್ಳವರೂ

ಅಲ್ಲ. ಆದುದರಿಂದ ಇನ್ನು ಸಾವಕಾಶಮಾಡದೆ ಬೇಗನೆ ಶರಭಂಗಾಶ್ರಮಕ್ಕೆ ಹೋಗಿ ಸೇರುವುದುತ್ತಮವು" ಎಂದನು ಆದರಂತೆಯೇ ಎಲ್ಲರೂ ಆ ಆಶ್ರಮ ವನ್ನು ಕುರಿತು ಹೊರಟುಬಂದರು. ದೇವತೆಗಳಂತೆ ಮಹಾಮಹಿಮೆಯುಳ್ಳವ ನಾಗಿಯೂ, ತಪಃಪ್ರಭಾವದಿಂದ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿದವನಾಗಿಯೂ ಇರುವ ಆ ಶರಭಂಗಮಹರ್ಷಿಯನ್ನು ನೋಡುವುದಕ್ಕೆ ಹೋದಾಗ, ಅವನ ಸಮೀಪದಲ್ಲಿ ಅದ್ಭುತಾಕಾರವುಳ್ಳ ಒಂದು ವ್ಯಕ್ತಿಯು ಗೋಚರಿಸಿತು ಅದು ಜಾಜ್ವಲ್ಯಮಾನವಾದ ಕಾಂತಿಯುಳ್ಳುದಾಗಿಯೂ, ಸೂರ್ಯಾಗ್ನಿತೇಜಸ್ಸಿನಿಂದ ಕೂಡಿ ಆಶ್ಚರ್ಯಕರವಾದ ಸ್ವರೂಪವುಳ್ಳುದಾಗಿಯೂ ಇದ್ದಿತು. ಇದನ್ನು ನೋಡುತ್ತ ರಾಮನು ಆಶ್ಚರ್ಯದಿಂದ ಇನ್ನೂ ಮುಂದೆಮುಂದೆ ಬಂದು ಅದನ್ನು ಸಮೀಪಿಸಿದನು. ಅಲ್ಲಿ ಶರಭಂಗಮುನಿಯ ಸಮೀಪದಲ್ಲಿ ದಿವ್ಯಪುರುಷನೊಬ್ಬನು ರಥದಿಂದಿಳಿದು, ಕೆಲವು ದೇವತೆಗಳಿಂದ ಪರಿವೃತನಾಗಿ ವಿನಯದಿಂದ ಭೂಮಿ ಯನ್ನು ಸ್ಪರ್ಶಿಸದೆ ಹಾಗೆ ಅಂತರಾಳದಲ್ಲಿ ನಿಂತಿರುವುದನ್ನು ಕಂಡನು. ಆತ ನಾದರೋ ಕಾಂತಿವಿಶಿಷ್ಟಗಳಾದ ಆಭರಣಗಳಿಂದಲಂಕೃತನಾಗಿ, ನಿರ್ಮಲವಾದ ಮಡಿಬಟ್ಟೆಯನ್ನುಟ್ಟು, ತನ್ನಂತೆಯೇ ಇರುವ ಅನೇಕ ಮಹಾತ್ಮರಿಂದ ಪರಿವೃತ ನಾಗಿ ಅವರಿಂದ ಸೇವಿಸಲ್ಪಡುತ್ತಿದ್ದನು. ಪಕ್ಕದಲ್ಲಿ ಹಸುರುಬಣ್ಣವುಳ್ಳ ಕುದುರೆ ಗಳಿಂದ ಹೂಡಲ್ಪಟ್ಟ, ಸೂರ್ಯನಂತೆ ಜಾಜ್ವಲ್ಯಮಾನವಾಗಿ ಭೂಸ್ಪರ್ಶವಿಲ್ಲದೆ ಅಂತರಿಕ್ಷದಲ್ಲಿ ನಿಂತಿರುವ ಒಂದು ರಥವೂ ಕಾಣಿಸಿತು. ಮತ್ತು ಬಿಳೀ ಮೇಘದಂತೆ ಕಾಂತಿಯುಳ್ಳುದಾಗಿಯೂ, ಚಂದ್ರಬಿಂಬಕ್ಕೆ ಸಮಾನವಾಗಿಯೂ, ವಿಚಿತ್ರ ವಾದ ಪುಷ್ಪಮಾಲಿಕೆಗಳಿಂದಲಂಕರಿಸಲ್ಪಟ್ಟುದಾಗಿಯೂ, ಅಮೂಲ್ಯವಾಗಿಯೂ ಇರುವ ಎರಡು ಚಾಮರಗಳನ್ನು ದೇವಸ್ತ್ರೀಯರಿಬ್ಬರು ಆತನ ತಲೆಯಮೇಲೆ ಬೀಸುತ್ತಿದ್ದರು. ಆತನ ಸುತ್ತಲೂ ಸಿದ್ಧಗಂಧರ್ವಾದಿ ದೇವತೆಗಳೂ, ಅನೇಕ ಮಹರ್ಷಿಗಳೂ ನಿಂತು ಆತನನ್ನು ಉತ್ತಮವಾದ ಸ್ತುತಿವಾಕ್ಯಗಳಿಂದ ಸ್ತುತಿಸು ತ್ತಿದ್ದರು. ಹೀಗೆ ದಿವ್ಯಪುರುಷನೊಬ್ಬನು ಮಹಾವೈಭವದಿಂದ ಬಂದು, ಶರಭಂಗ ಮಹರ್ಷಿಯೊಡನೆ ಮಾತಾಡುತ್ತಿರುವುದನ್ನು ನೋಡಿ ರಾಮನು ಲಕ್ಷ್ಮಣನನ್ನು ಕರೆದು ಆ ರಥವನ್ನು ಲಕ್ಷ್ಮಣನಿಗೆ ತೋರಿಸುತ್ತಾ "ವತ್ಸ ಲಕ್ಷ್ಮಣನೆ! ಅಲ್ಲಿ ನೋಡಿದೆಯಾ? ಜ್ವಲಿಸುತ್ತಿರುವ ಸೂರ್ಯನಂತೆ ಅಂತರಿಕ್ಷದಲ್ಲಿ ಕಾಣುವ ಅದ್ಭುತವಾದ ರಥವನ್ನು ನೋಡು. ಅದರ ಕಾಂತಿವಿಶೇಷವನ್ನೂ, ಅದರ

ತೇಜಸ್ಸನ್ನೂ ನೋಡು. ನಾವು ಪೂರ್ವದಲ್ಲಿ ಇಂದ್ರನ ಕುದುರೆಗಳ ವಿಷಯವಾಗಿ ಕೇಳಿಬಲ್ಲೆವಲ್ಲವೆ ! ಅದೋ ! ಆ ದಿವ್ಯಾಶ್ವಗಳೇ ಇಲ್ಲಿ ಕಾಣುತ್ತಿರುವುವು. ಮತ್ತು ಈ ರಥದ ಸುತ್ತಲೂ ಕುಂಡಲಾಲಂಕೃತರಾಗಿ, ಖಡ್ಗಪಾಣಿಗಳಾಗಿ ಯೌವನದಿಂದುಬ್ಬಿದವರಾಗಿ, ವಿಸ್ತಾರವಾದ ಎದೆಯಿಂದಲೂ, ಅಗಳಿಯಂತೆ ಉದ್ದವಾದ ತೋಳುಗಳಿಂದಲೂ ಕೂಡಿದವರಾಗಿ, ಕೆಂಪುಬಟ್ಟೆಯನ್ನುಟ್ಟು ನಿಂತಿರುವ ಪುರುಷಶ್ರೇಷ್ಠರನ್ನು ನೋಡು. ಅವರೊಬ್ಬೊಬ್ಬರೂ ಹುಲಿಗಳಂತೆ ಇತರರಿಂದ ಇದಿರಿಸಲ್ಪಡುವುದಕ್ಕೆ ಅಸಾಧ್ಯರಾಗಿರುವರು. ಅವರೊಬ್ಬೊಬ್ಬರ ಎದೆಯಲ್ಲಿಯೂ ಅಗ್ನಿಯಂತೆ ಜ್ವಲಿಸುವ ದಿವ್ಯಹಾರಗಳು ಕಾಣುತ್ತಿರುವುದನ್ನು ನೋಡು ! ಅವರೊಬ್ಬೊಬ್ಬರೂ ಇಪ್ಪತ್ತೈದು ವರ್ಷದ ಪ್ರಾಯದವರಂತೆಯೇ ತೋರುತ್ತಿರುವರು. ವತ್ಸ ಲಕ್ಷ್ಮಣಾ ! ದೇವತೆಗಳಿಗೆ ಯಾವಾಗಲೂ ಇದೇ ವಯಸ್ಸು ಸ್ಥಿರವಾಗಿರುವುದು. ಒಬ್ಬೊಬ್ಬರೂ ಇವರಂತೆಯೇ ಪ್ರಿಯದರ್ಶನವುಳ್ಳವರಾಗಿರುವರು. ಎಲೈ ವತ್ಸನೆ ! ನೀನು ಈ ಸೀತೆಯೊಡನೆ ಇಲ್ಲಿಯೇ ಒಂದು ಮುಹೂರ್ತಕಾಲದವರೆಗೆ ನಿಂತಿರು. ನಾನು ಮುಂದೆ ಹೋಗಿ ಈ ರಥದಲ್ಲಿರುವ ತೇಜಸ್ವಿಯಾದ ಮಹಾಪುರುಷನಾರೆಂಬುದನ್ನು ಚೆನ್ನಾಗಿ ವಿಚಾರಿಸಿ ಬರುವೆನು" ಎಂದು ಹೇಳಿ ಲಕ್ಷ್ಮಣನನ್ನು ಅಲ್ಲಿಯೇ ನಿಲ್ಲಿಸಿ, ಆ ಶರಭಂಗಾಶ್ರಮಕ್ಕೆ ಹೋದನು. ಇಷ್ಟರಲ್ಲಿ ಅಲ್ಲಿದ್ದ ಇಂದ್ರನು ಆಶ್ರಮಕ್ಕಿದಿರಾಗಿ ಬರುತ್ತಿರುವ ರಾಮನನ್ನು ದೂರದಿಂದಲೇ ನೋಡಿ, ಒಡನೆಯೇ ಆ ಶರಭಂಗಮಹರ್ಷಿಯ ಬಳಿಗೆ ಹೋಗಿ, ಏಕಾಂತದಲ್ಲಿ ಅವನನ್ನು ಕುರಿತು "ಎಲೈ ಮಹಾತ್ಮನೆ ! ಇದೋ ಇಲ್ಲಿಗೆ ರಾಮನು ಬರುತ್ತಿರುವನು. [1]ಈಗ ನಾನು ಇವನ ಕಣ್ಣಿಗೆ ಕಾಣಿಸಿಕೊಳ್ಳುವುದುಚಿತವಲ್ಲ. ಇವನು ನನ್ನನ್ನು ಮಾತಾಡಿಸುವುದಕ್ಕೆ ಬರಬಹುದು. ಅವನಿಂದ ನಡೆಯಬೇಕಾದ ಕೆಲಸವು ನಡೆದುಹೋಗುವುದಕ್ಕೆ ಮೊದಲು ಆತನಿಗೆ ನಾನು ಕಾಣಿಸಿಕೊಳ್ಳುವುದೇ ಉಚಿತವಲ್ಲ. ಆತನು ತನ್ನ ಪ್ರತಿಜ್ಞೆಯನ್ನು ನಿರ್ವಹಿಸಿದಮೇಲೆಯೇ ನನ್ನನ್ನು ನೋಡಲಿ ! ಇವನು ನಡೆಸಬೇಕಾದ

---

1. ಇಲ್ಲಿ ದೇವೇಂದ್ರನು ರಾಮನೊಡನೆ ತಾನು ಮಾತಾಡುವುದರಿಂದಾಗಲಿ, ಅವನಿಗೆ ತಾನು ಇದಿರಾಗಿ ನಿಲ್ಲುವುದರಿಂದಾಗಲಿ ಅವನ ದೇವತ್ವವು ಹೊರಬೀಳುವುದೆಂದೂ, ಆ ರಾಮನು ಮನುಷ್ಯದೇಹದಿಂದಲೇ ದೊಡ್ಡ ಕಾರ್ಯವನ್ನು ಮಾಡಬೇಕಾಗಿರುವುದರಿಂದ, ಅದಕ್ಕೆಮೊದಲು ತಾನು ಅವನೊಡನೆ ಪ್ರತ್ಯಕ್ಷದಲ್ಲಿ ನಿಲ್ಲಬಾರದೆಂದೂ ಹೇಳಿದುದಾಗಿ ಭಾವವು

ಕೆಲಸಗಳು ಅನೇಕವಾಗಿರುವುವು. ಇವನು ಆ ಕೆಲಸಗಳೆಲ್ಲವನ್ನೂ ಪೂರಯಿಸಿ ಕೃತಕೃತ್ಯನಾದಮೇಲೆ ನಾನಾಗಿಯೇ ಹೋಗಿ ಆತನನ್ನು ನೋಡುವೆನು. ಅದುವರೆಗೆ ನಾನು ಅವನ ದೃಷ್ಟಿಗೆ ಬೀಳಬಾರದು. ಇವನು ರಾವಣನನ್ನು ಜಯಿಸಿ ದೇವತೆಗಳಾದ ನಮ್ಮ ಕಾರ್ಯವನ್ನು ಸಾಧಿಸಿಕೊಟ್ಟ ಹೊರತು ನಾನು ಇವನನ್ನು ನೋಡುವುದಕ್ಕಿಲ್ಲ! ಇತರರಿಂದ ಸಾಧ್ಯವಾಗದ ಈ ದೊಡ್ಡ ಕಾರ್ಯವನ್ನು ನಡೆಸಿದಮೇಲೆ ನಾವಿಬ್ಬರೂ ಸೇರುವೆವು" ಎಂದನು. ಇಂದ್ರನು ಹೀಗೆ ಶರಭಂಗನಿಗೆ ತಿಳಿಸಿ, ಆ ಮಹರ್ಷಿಯನ್ನು ಸತ್ಕರಿಸಿ, ಉತ್ತಮಾಶ್ವಗಳಿಂದ ಕೂಡಿದ ತನ್ನ ರಥವನ್ನೇರಿ ಆಗಲೇ ಸ್ವರ್ಗಕ್ಕೆ ಹೋದನು. ಅತ್ತಲಾಗಿ ಇಂದ್ರನು ಹೊರಟು ಹೋದಮೇಲೆ ರಾಮನು ಆ ಆಶ್ರಮಕ್ಕೆ ಹೋಗಿ, ಶಿಷ್ಯರಿಂದ ಪರಿವೃತನಾಗಿ ಅಗ್ನಿಕಾರ್ಯಗಳನ್ನು ನಡೆಸುತ್ತಿರುವ ಶರಭಂಗಮಹಾಮುನಿಯನ್ನು ಕಂಡು ಆತನ ಪಾದಗಳನ್ನು ಹಿಡಿದು ನಮಸ್ಕರಿಸಿದನು. ಇಷ್ಟರಲ್ಲಿ ಸೀತಾಲಕ್ಷ್ಮಣರೂ ಅಲ್ಲಿಗೆ ಬಂದು ಆ ಋಷಿಗೆ ನಮಸ್ಕರಿಸಿದರು. ಆಮೇಲೆ ಅತಿಥಿಗಳಾಗಿ ಬಂದ ಈ ಮೂವರನ್ನೂ ಆ ಮಹರ್ಷಿಯು ಚೆನ್ನಾಗಿ ಸತ್ಕರಿಸಿ, ಆ ಮೂವರಿಗೂ ಉಚಿತಾಸನಗಳನ್ನು ಕೊಡಲು, ಆ ಮಹರ್ಷಿಯ ಅನುಜ್ಞೆಯಿಂದ ಅವರೆಲ್ಲರೂ ಕುಳಿತುಕೊಂಡರು. ಆಗ ರಾಮನು ಶರಭಂಗಮುನಿಯನ್ನು ಕುರಿತು ಆ ಆಶ್ರಮಕ್ಕೆ ಇಂದ್ರನು ಬಂದಿದ್ದುದಕ್ಕೆ ಕಾರಣವೇನೆಂದು ಕೇಳಿದನು. ಶರಭಂಗಮುನಿಯು ಆ ವಿಷಯವೆಲ್ಲವನ್ನೂ ರಾಮನಿಗೆ ತಿಳಿಸಲಾರಂಭಿಸಿ, "ಎಲೈ ರಾಮನೆ! ವರಪ್ರದನಾದ ದೇವೇಂದ್ರನು ಬ್ರಹ್ಮಾಜ್ಞೆಯಿಂದ ನನ್ನನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗಬೇಕೆಂದು ಇಲ್ಲಿಗೆ ಬಂದನು. ನನ್ನ ಉಗ್ರತಪಸ್ಸಿನಿಂದ ನಾನೇ ಆ ಲೋಕವನ್ನು ಸಾಧಿಸಿಕೊಂಡಿರುವೆನು. ಆತ್ಮಜ್ಞಾನವಿಲ್ಲದವರು ಅದನ್ನು ಪಡೆಯಲಾರರು. ಆ ಲೋಕಕ್ಕೆ ನನ್ನನ್ನು ಸೇರಿಸುವುದಕ್ಕಾಗಿ ಇಂದ್ರನು ತಾನಾಗಿಯೇ ಇಲ್ಲಿಗೆ ಬಂದನು. ಆದರೆ ನಾನು ಯೋಗದೃಷ್ಟಿಯಿಂದ, ನೀನು ಇಲ್ಲಿಗೆ ಸಮೀಪದಲ್ಲಿರುವುದನ್ನು ತಿಳಿದು, ಪ್ರಿಯಾತಿಥಿಯಾದ ನಿನ್ನನ್ನು ನೋಡದೆ ಹೋಗುವುದುಚಿತವಲ್ಲವೆಂದು ಭಾವಿಸಿ, [1] ಆ ಬ್ರಹ್ಮಲೋಕಕ್ಕೂ ಹೋಗದೆ

1. ಇಲ್ಲಿ "ಬ್ರಹ್ಮಲೋಕಂ ನ ಗಚ್ಛಾಮಿ ... ತ್ರಿದಿವಂ ದೇವಸೇವಿತಂ" ಎಂದು ಮೂಲವು. ಇಲ್ಲಿನ ತತ್ವಾರ್ಥವೇನೆಂದರೆ, "ನಾನು ನಿನ್ನ ದರ್ಶನವನ್ನೇ ಕೋರುವವನಾದುದರಿಂದ ನಾನು ಬ್ರಹ್ಮಲೋಕಕ್ಕೆ ಹೋಗಲೊಲ್ಲೆನು. (ದೇವಸೇವಿತಂ) "ಯತ್ರ ಪೂರ್ವೇ

ನಿಂತುಬಿಟ್ಟೆನು. ಧಾರ್ಮಿಕನಾಗಿಯೂ ಸತ್ಯಸಂಕಲ್ಪನಾಗಿಯೂ ಇರುವ ನಿನ್ನನ್ನು ಕಂಡಮೇಲೆ ದೇವತೆಗಳಿಂದ ಸೇವಿತವಾದ ಆ ಬ್ರಹ್ಮಲೋಕಕ್ಕೆ ಹೋಗಬೇಕೆಂದಿರುವೆನು. ಎಲೈ ಪುರುಷಶ್ರೇಷ್ಠನೆ! ನಾನು ಬ್ರಹ್ಮಲೋಕಕ್ಕೂ ಸ್ವರ್ಗಲೋಕಕ್ಕೂ ಸೇರಿದ ಅಕ್ಷಯವಾದ ಅನೇಕ ಪುಣ್ಯಲೋಕಗಳನ್ನು ತಪಸ್ಸಿನಿಂದ ಸಾಧಿಸಿರುವೆನು. ಆ ಪ್ರದೇಶಗಳೆಲ್ಲವೂ ಸರ್ವೋತ್ತಮವಾದ ಭೋಗಭೂಮಿಗಳು. [1]ಅವೆಲ್ಲವನ್ನೂ ನಿನಗೇ ಅರ್ಪಿಸಬೇಕೆಂದಿರುವೆನು. ನೀನು ಅವು

---

ಸಾಧ್ಯಾಸ್ಸಂತಿ ದೇವಾಃ" ಎಂಬ ಉಪನಿಷದ್ವಾಕ್ಯಾನುಸಾರವಾಗಿ ದೇವಶಬ್ದವಾಚ್ಯರಾದ ನಿತ್ಯಸೂರಿಗಳಿಗಾಶ್ರಯವಾಗಿರುವ (ತ್ರಿದಿವಂ) ತ್ರಿಪಾದ್ವಿಭೂತಿಯುಕ್ತವಾದ ಪರಮಪದವನ್ನೇ ಸೇರುವೆನು. (ತ್ವಯಾ ಸಮಾಗಮ್ಯ) ನಿನ್ನೊಡನೆ ಸೇರಿ, ನಿನ ಕೃಪಾಕಟಾಕ್ಷಕ್ಕೆ ಪಾತ್ರನಾಗುವೆನು" (ಎಂದು ಗೋವಿಂದರಾಜ ವ್ಯಾಖ್ಯಾನವು). ನಿತ್ಯಾನಂದಸ್ವರೂಪನಾದ ನಿನ್ನ ದರ್ಶನಾನಂದಕ್ಕಿಂತಲೂ ಭೋಗ್ಯವಾದ ವಸ್ತುವು ಬ್ರಹ್ಮಲೋಕದಲ್ಲಿಯೂ ನನಗಿಲ್ಲವು. ನಾನು ಮೊದಲು ದೇಹಾಂತರದಲ್ಲಿಯೇ ಆ ಬ್ರಹ್ಮಲೋಕಾನಂದವನ್ನನುಭವಿಸಿ ತಿಳಿದಿರುವೆನು. ಇದು ನನಗೆ ಅನುಭವವಿದಿತವಾಗಿದ್ದರೂ, ನನ್ನ ಪ್ರಾರಬ್ಧಕರ್ಮವಶದಿಂದ ಅಲ್ಲಿಗೆ ಹೋಗಬೇಕಾಗಿರುವುದೆಂದು ಮಹೇಶ್ವರತೀರ್ಥ ವ್ಯಾಖ್ಯಾನವು.

1. ಇಲ್ಲಿ ಶರಭಂಗನು ತಾನು ಬ್ರಹ್ಮಲೋಕವನ್ನೊಲ್ಲೆನೆಂದೂ, ಪರಮಪದವನ್ನು ಹೊಂದುವೆನೆಂದೂ ಹೇಳಲು, ರಾಮನು "ಈಗಿನ ಕರ್ಮಫಲಗಳಿಗೆ ತಕ್ಕ ಸ್ವರ್ಗಾದಿಲೋಕಗಳನ್ನು ಮೊದಲು ಅನುಭವಿಸಿ, ಆಮೇಲೆ ಕ್ರಮವಾಗಿ ಪರಮಪದವನ್ನೇ ಸೇರಬಹುದು" ಎಂಬುದಾಗಿಯೂ, ಅದಕ್ಕಾ ಮುನಿಯು "ನಾನಾರ್ಜಿಸಿರುವ ಆ ಕರ್ಮಗಳೆಲ್ಲವನ್ನೂ ನಿನಗೇ ಅರ್ಪಿಸುವೆನು" ಎಂದು ಹೇಳಿದುದಾಗಿಯೂ ಗ್ರಹಿಸಬೇಕು. ಕರ್ಮಗಳನ್ನು ಭಗವಂತನಿಗರ್ಪಿಸುವುದೆಂದರೆ, ಆ ಕರ್ಮಗಳ ಫಲದಲ್ಲಿ ತನ್ನ ಸಂಬಂಧವನ್ನು ಬಿಟ್ಟು ಆ ಕರ್ಮಗಳಿಗೆ ತಾನು ಕರ್ತೃವೆಂಬ ಅಭಿಮಾನವನ್ನೂ ಬಿಟ್ಟು ಅವುಗಳನ್ನು ಭಗವತ್ಕೈಂಕರ್ಯರೂಪವೆಂದೆಣಿಸಿ ನಡೆಸುವುದೆಂದು ಗ್ರಹಿಸಬೇಕಲ್ಲದೆ, ಇಲ್ಲಿ ಶರಭಂಗನು ತನ್ನ ಕರ್ಮಫಲಗಳನ್ನು ಭಗವದರ್ಪಣಮಾಡಿದುದಾಗಿಯೂ, ರಾಮರೂಪಿಯಾದ ಭಗವಂತನು ಅದನ್ನಂಗೀಕರಿಸಿದುದಾಗಿಯೂ ಅಂತರಾರ್ಥವು. ಪ್ರಾತೀತಿಕಾರ್ಥವೇನೆಂದರೆ, ರಾಮನು ಅತಿಥಿಯಾಗಿ ತನ್ನಾಶ್ರಮಕ್ಕೆ ಬಂದುದನ್ನು ನೋಡಿ ಋಷಿಯು ತಾನು ಸತ್ಕರ್ಮಗಳಿಂದಾರ್ಜಿಸಿದ ಪುಣ್ಯಲೋಕಗಳನ್ನೇ ಅತಿಥಿಸತ್ಕಾರರೂಪವಾಗಿ ಆತನಿಗೆ ಕೊಟ್ಟನೆಂಬುದು ಗೋವಿಂದರಾಜೀಯವು. ರಾಮನು ರಾಜರಿಗೆ ಪ್ರತಿಗ್ರಹವು ಧರ್ಮವಿರುದ್ಧವೆಂಬುದಕ್ಕಾಗಿ ಅತಿಥಿಸತ್ಕಾರಾರ್ಥವಾಗಿ ಋಷಿಯು ಕೊಟ್ಟ ಪುಣ್ಯಲೋಕಗಳನ್ನು ಸ್ವೀಕರಿಸದೆ "ಅಹಮೇವಾಹರಿಷ್ಯಾಮಿ" ನಾನೇ ಅವುಗಳನ್ನು ಸಾಧಿಸಿಕೊಳ್ಳಬಲ್ಲೆನೆಂದು ಹೇಳಿದುದಾಗಿ ಮಹೇಶ್ವರತೀರ್ಥರ ವ್ಯಾಖ್ಯಾನವು.

ಗಳನ್ನು ಸ್ವೀಕರಿಸಬೇಕು" ಎಂದನು. ಸಮಸ್ತಶಾಸ್ತ್ರಗಳನ್ನು ಬಲ್ಲವನಾಗಿಯೂ ಪುರುಷಶ್ರೇಷ್ಠನಾಗಿಯೂ ಇರುವ ರಾಮನು, ಆ ಋಷಿಯ ಮಾತನ್ನು ಕೇಳಿ ಆತನನ್ನು ಕುರಿತು ವಿನಯದಿಂದ "ಎಲೈ ಮಹಾತ್ಮನೆ! ನೀನು ನನಗೆ ಅನುಗ್ರಹಿಸಿಕೊಟ್ಟ ಲೋಕಗಳೆಲ್ಲವನ್ನೂ ಸ್ವೀಕರಿಸುವುದಕ್ಕೆ ಸಿದ್ಧನಾಗಿರುವೆನು. ಆದರೆ ಈಗ ಈ ಕಾಡಿನಲ್ಲಿ ನನಗೆ ಒಂದು ವಾಸಸ್ಥಾನವನ್ನೇರ್ಪಡಿಸಿಕೊಡಬೇಕು." ಎಂದನು. ಈ ಮಾತನ್ನು ಕೇಳಿ ಪ್ರಾಜ್ಞನಾದ ಆ ಮಹರ್ಷಿಯು "ಎಲೈ ರಾಮನೆ! ಈ ಕಾಡಿನಲ್ಲಿಯೇ ಇಲ್ಲಿಗೆ ಸ್ವಲ್ಪ ದೂರದಲ್ಲಿ ಸುತೀಕ್ಷ್ಣನೆಂಬ ಮಹರ್ಷಿಯೊಬ್ಬನಿರುವನು. ಆತನು ಎಣೆಯಿಲ್ಲದ ಮಹಿಮೆಯುಳ್ಳವನು. ಧರ್ಮಬುದ್ಧಿಯುಳ್ಳವನು. ನೀನು ಆತನ ಬಳಿಗೆ ಹೋಗು. ಅವನು ನಿಮಗೆ ಅನೇಕ ಶ್ರೇಯಸ್ಸುಗಳನ್ನುಂಟುಮಾಡುವನು. ಈ ಕಾಡಿನಲ್ಲಿ ನಿನಗೆ ಅನುಕೂಲವಾದ ಸ್ಥಳವನ್ನೂ ಕಲ್ಪಿಸಿಕೊಡುವನು. ಇದೋ! ಇಲ್ಲಿ [1]ಮಂದಾಕಿನೀ ನದಿಯು ಪೂರ್ವಾಭಿಮುಖವಾಗಿ ಪ್ರವಹಿಸುತ್ತಿರುವುದಲ್ಲವೆ! ಈ ಪ್ರವಾಹಕ್ಕೆದಿರಾಗಿ ಪಶ್ಚಿಮಾಭಿಮುಖವಾಗಿ ಹೋಗುವ ದಾರಿಯನ್ನೇ ಹಿಡಿದುಹೋಗು. ಆ ದಾರಿಯು ಕೆಲವು ಕಡೆಗಳಲ್ಲಿ ನದಿಗೆ ಸಮೀಪವಾಗಿಯೂ, ಕೆಲವು ಕಡೆಗಳಲ್ಲಿ ನದಿಗೆ ಸ್ವಲ್ಪ ದೂರವಾಗಿಯೂ ಹೋಗುವುದು. ಆ ನದಿಯಲ್ಲಿ ಹೂಗಳು ಉದ್ದಕ್ಕೂ ತೆಪ್ಪದಂತೆ ದಟ್ಟವಾಗಿ ತೋರುತ್ತಿರುವುವು. ಎಲೈ ಪುರುಷಶ್ರೇಷ್ಠನೆ! ಅದೋ, ಅಲ್ಲಿ ನೋಡು! ಅದೇ ನೀನು ಹೋಗಬೇಕಾದ ದಾರಿಯು" ಎಂದು ಕೈನೀಡಿ ರಾಮನಿಗೆ ಆ ದಾರಿಯನ್ನು ತೋರಿಸಿ, ಪುನಃ ಆ ರಾಮನನ್ನು ಕುರಿತು "ವತ್ಸ ರಾಮನೆ! ನಿನಗೆ ಇಲ್ಲಿ ಒಂದು ವೈಚಿತ್ರ್ಯವನ್ನು ತೋರಿಸುವೆನು. ಸ್ವಲ್ಪ ಹೊತ್ತಿನವರೆಗೆ ನೀನು ಇಲ್ಲಿ ನಿಂತು ನನ್ನನ್ನು ನೋಡುತ್ತಿರು! ಹಾವು ತನ್ನ ಜೀರ್ಣವಾದ ಪರೆಯನ್ನು ಸುಲಿದುಬಿಡುವಂತೆ ನಿನ್ನಿದಿರಾಗಿಯೇ ನಾನು ಈ ನನ್ನ

"ಅಹಮೇವಾಹರಿಷ್ಯಾಮಿ" ಎಂದರೆ ನಾನೇ ನಿನಗೆ ಸಂಪಾದಿಸಿಕೊಡುವೆನೆಂದರ್ಥವು. "ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್" ಎಂಬ ಗೀತಾವಾಕ್ಯವನ್ನನುಸರಿಸಿ, ಭಗವಂತನು ತಾನಾಗಿ ಕೊಡುವ ಕೋರಿಕೆಗಳನ್ನೇ ಭಕ್ತರು ಅಂಗೀಕರಿಸುವರಾದುದರಿಂದ ನಾನಾಗಿಯೇ ಆ ಲೋಕಗಳನ್ನು ಕೊಡುವೆನೆಂದೂ ಅರ್ಥವು (ತನಿಶ್ಲೋಕಿ).

1. ಇಲ್ಲಿ ಮಂದಾಕಿನಿಯೆಂದರೆ ಅದರಂತೆ ಪವಿತ್ರವಾದ ಒಂದು ನದಿಯೆಂದು ಗ್ರಹಿಸಬೇಕು. ಇದರಿಂದ ಋಷಿಗಳು ಪುಣ್ಯನದಿಗಳೆಲ್ಲವನ್ನೂ ಹೀಗೆಯೇ ಹೇಳುತ್ತಿದ್ದಂತೆ ತೋರುವುದು. ಅದರಿಂದಲೇ ಚಿತ್ರಕೂಟದ ನದಿಗೂ ಮಂದಾಕಿನಿಯೆಂದೇ ಹೆಸರಿಡಲ್ಪಟ್ಟಿರುವುದು.

ದೇಹವನ್ನು ಬಿಟ್ಟುಬಿಡುವೆನು" ಎಂದನು. ಆಮೇಲೆ ಮಹಾತೇಜಸ್ವಿಯಾದ ಆ ಶರಭಂಗನು ಮಂತ್ರೋಚ್ಚಾರಣೆಯಿಂದ ಅಗ್ನಿಯನ್ನು ಸಂಸ್ಕರಿಸಿ, ಪರಿಸ್ತರಣಾದಿಗಳಿಂದಲಂಕರಿಸಿ, ಬ್ರಹ್ಮಮೇಧ ಮಂತ್ರಗಳನ್ನು ಜಪಿಸುತ್ತಾ, ಆ ಅಗ್ನಿಯಲ್ಲಿ ಆಜ್ಯಾಹುತಿಯನ್ನು ಮಾಡಿ, ಕೊನೆಗೆ ತಾನೂ ಅದರಲ್ಲಿ ಪ್ರವೇಶಿಸಿಬಿಟ್ಟನು. ಆಗಲೇ ಮಹಾತ್ಮನಾದ ಆ ಋಷಿಯ ತಲೆಗೂದಲುಗಳೂ, ಜೀರ್ಣವಾದ ಆತನ ಚರ್ಮವೂ, ಅಸ್ಥಿಗಳೂ, ರಕ್ತಮಾಂಸಗಳೂ, ಆ ಅಗ್ನಿಯಲ್ಲಿ ಬೆಂದುಹೋದವು. ಸೀತಾರಾಮಲಕ್ಷ್ಮಣರು ಮೂವರೂ ಇದನ್ನು ನೋಡುತ್ತಾ, ಆಶ್ಚರ್ಯಭರಿತರಾಗಿ ನಿಂತಿದ್ದರು. ಹೀಗೆ ನೋಡುತ್ತಿರುವಾಗಲೇ ಆ ಶರಭಂಗನು ಅಗ್ನಿಯಂತೆ ಜಾಜ್ವಲ್ಯಮಾನವಾದ ತೇಜಸ್ಸುಳ್ಳವನಾಗಿ, ಮೂವತ್ತೆರಡು ವರ್ಷದ ಪ್ರಾಯವುಳ್ಳ ಕುಮಾರನಂತೆ ಆ ಅಗ್ನಿಕುಂಡದಿಂದ ಮೇಲಕ್ಕೆದ್ದುಬಂದು ನಿಂತನು. ಆಮೇಲೆ ಆ ಋಷಿಯು ಸೀತಾರಾಮಲಕ್ಷ್ಮಣರಿದಿರಾಗಿಯೇ ಅಂತರಿಕ್ಷಾಭಿಮುಖವಾಗಿ ಹೊರಟು [1]ಆಹಿತಾಗ್ನಿಗಳೂ, ಮಹಾತ್ಮರಾದ ಅನೇಕ ಋಷಿಗಳೂ ಹೊಂದತಕ್ಕ ಲೋಕಗಳೆಲ್ಲವನ್ನೂ ಅತಿಕ್ರಮಿಸಿ ಬ್ರಹ್ಮಲೋಕಕ್ಕೆ ಹೋಗಿ ಸೇರಿದನು. ಅತ್ತಲಾಗಿ ಪುಣ್ಯಕರ್ಮವುಳ್ಳ ಆ ಮಹಾಮುನಿಯು ಬ್ರಹ್ಮಲೋಕದಲ್ಲಿ ಸಪರಿವಾರನಾಗಿದ್ದ ಬ್ರಹ್ಮನನ್ನು ಪೂಜಿಸಲು ಬ್ರಹ್ಮದೇವನೂ ಕೂಡ ಆ ಮಹರ್ಷಿಯನ್ನು ನೋಡಿ ಸಂತೋಷಿಸಿ, ಆತನ ಸುಖಾಗಮನವನ್ನು ಕೇಳಿ ಮನ್ನಿಸಿದನು.

ಇಲ್ಲಿಗೆ ಐದನೆಯ ಸರ್ಗವು.

---

ಶರಭಂಗಾಶ್ರಮದಲ್ಲಿದ್ದ ಋಷಿಗಳೆಲ್ಲರೂ ರಾಮನಲ್ಲಿ ಮರೆಹೊಕ್ಕು, ತಮಗುಂಟಾಗಿರುವ ರಾಕ್ಷಸಬಾಧೆಯನ್ನು ತಿಳಿಸಿದುದು. ರಾಮನು ಆ ರಾಕ್ಷಸರನ್ನು ಕೊಲ್ಲುವುದಾಗಿ ಅವರಿಗೆ ಅಭಯವನ್ನು ಕೊಟ್ಟುದು.

ಶರಭಂಗನು ಬ್ರಹ್ಮಲೋಕಕ್ಕೆ ಹೋದಮೇಲೆ, ಆ ಆಶ್ರಮದಲ್ಲಿದ್ದ ಇತರ ಮುನಿಜನರೆಲ್ಲರೂ ಒಂದಾಗಿ ಕಲೆತು ತೇಜಸ್ವಿಯಾದ ರಾಮನ ಬಳಿಗೆ ಬಂದರು.

---

1. ಇಲ್ಲಿ ದೇವಯಾನಮಾರ್ಗದಿಂದಲೇ ಬ್ರಹ್ಮಲೋಕವನ್ನು ಹೊಂದಬೇಕೆಂಬುದಾಗಿ ತಿಳಿಯಬೇಕು.

ಅವರಲ್ಲಿ ಕೆಲವರು ಬ್ರಹ್ಮನ ನಖದಿಂದ ಹುಟ್ಟಿದ ವೈಖಾನಸ ಕುಲಕ್ಕೆ ಸೇರಿದವರು. ಕೆಲವರು ಬ್ರಹ್ಮನ ರೋಮದಿಂದ ಹುಟ್ಟಿದ ವಾಲಖಿಲ್ಯ ಕುಲದವರು. ಮತ್ತೆ ಕೆಲವರು ತಮ್ಮ ದೇಹದ ಒಳಭಾಗವನ್ನೂ ನೀರಿನಿಂದ ತೊಳೆದು ಶುದ್ಧಿ ಮಾಡಬಲ್ಲ ಮಹಾಮಹಿಮೆಯುಳ್ಳವರು ಕಿರಣಪಾನದಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡಿರುವವರು ಕೆಲವರು. ತಮ್ಮ ದೇಹದ ಕೊಬ್ಬನ್ನಡಗಿಸುವುದಕ್ಕಾಗಿ ಕಲ್ಲುಗಳಿಂದ ಮೈಯನ್ನು ಜಜ್ಜಿ ದೇಹದಂಡನೆಯನ್ನು ಮಾಡಿದವರು ಕೆಲವರು. ಎಲೆಗಳನ್ನು ತಿಂದು ಜೀವಿಸುತ್ತಿದ್ದವರು ಕೆಲವರು. ತಮ್ಮ ಹಲ್ಲಿನಿಂದಲೇ ಹೊಟ್ಟುಗಳನ್ನು ಸುಲಿದು ಒಳಗಿನ ಧಾನ್ಯವನ್ನು ತಿಂದು ದೇಹಯಾತ್ರೆಯನ್ನು ನಡೆಸುತ್ತಿದ್ದವರು ಕೆಲವರು. ಕಂಠಪರ್ಯಂತವಾಗಿ ಯಾವಾಗಲೂ ನೀರಿನಲ್ಲಿ ಮುಳುಗಿ ತಪಸ್ಸು ಮಾಡುತ್ತಿದ್ದವರು ಕೆಲವರು. ತಮ್ಮ ದೇಹವನ್ನೇ ತಮಗೆ ಹಾಸಿಗೆಯನ್ನಾಗಿ ಮಾಡಿಕೊಂಡು, ಎದೆ, ಬೆನ್ನು, ಹೆಗಲು ಮುಂತಾದ ಅವಯವಗಳನ್ನೇ ದಿಂಬಾಗಿಸಿ, ಅದರ ಮೇಲೆ ತಲೆಯನ್ನಿಟ್ಟುಕೊಂಡು ಮಲಗುತ್ತಿದ್ದವರು ಕೆಲವರು. ನಿದ್ರೆಯನ್ನೇ ನಿಶ್ಶೇಷವಾಗಿ ಬಿಟ್ಟಿದ್ದವರು ಕೆಲವರು. ಜಲಭಕ್ಷಕರು ಕೆಲವರು. ವಾಯುಭಕ್ಷಕರು ಕೆಲವರು. ಉಷ್ಣಕಾಲಗಳಲ್ಲಿ ಪಂಚಾಗ್ನಿ ಮಧ್ಯದಲ್ಲಿಯೂ, ಶೀತಕಾಲಗಳಲ್ಲಿ ಜಲಮಧ್ಯದಲ್ಲಿಯೂ ತಪಸ್ಸು ಮಾಡುವವರು ಕೆಲವರು. ತಮ್ಮ ಯೋಗಬಲದಿಂದ, ನಿರಾಶ್ರಯರಾಗಿ ಅಂತರಾಳದಲ್ಲಿ ನಿಂತು ತಪಸ್ಸು ಮಾಡತಕ್ಕವರು ಕೆಲವರು. ನಿಶ್ಶೇಷವಾಗಿ ಆಹಾರವನ್ನೇ ಬಿಟ್ಟು ನಿತ್ಯೋಪವಾಸದಿಂದಿರತಕ್ಕವರು ಕೆಲವರು. ಇಂದ್ರಿಯಗಳೆಲ್ಲವನ್ನೂ ಜಯಿಸಿದವರು ಕೆಲವರು. ಯಾವಾಗಲೂ ಒದ್ದೆಬಟ್ಟೆಯನ್ನುಟ್ಟು ತಮ್ಮ ನಿತ್ಯಕರ್ಮಗಳನ್ನು ನಡೆಸುತ್ತಿದ್ದವರು ಕೆಲವರು. ನೆಲದ ಮಣ್ಣಿನಮೇಲೆ ಮಲಗತಕ್ಕವರು ಕೆಲವರು. ಯಾವಾಗಲೂ ಎಡೆಬಿಡದೆ ಮಂತ್ರಜಪವನ್ನು ಮಾಡತಕ್ಕವರು ಕೆಲವರು. ಅಹೋರಾತ್ರಿಯೂ ತಪಸ್ಸು ಮಾಡುತ್ತಿದ್ದವರು ಕೆಲವರು. ಹೀಗೆ ಚಿತ್ರವಿಚಿತ್ರವಾದ ಮಹಾಮಹಿಮೆಯುಳ್ಳ ಆ ಋಷಿಗಳೆಲ್ಲರೂ ತಮ್ಮ ತಮ್ಮ ಬ್ರಹ್ಮತೇಜಸ್ಸಿನಿಂದ ಜ್ವಲಿಸುವಂತೆ ಕಾಣುತ್ತಿದ್ದರು. ಒಬ್ಬೊಬ್ಬರೂ ಯೋಗಪರಿಪಾಕವುಳ್ಳವರಾಗಿಯೂ, ಏಕಾಗ್ರಚಿತ್ತರಾಗಿಯೂ ಇರುತ್ತಿದ್ದರು. ಧರ್ಮಜ್ಞರಾದ ಈ ಮಹರ್ಷಿಗಳೆಲ್ಲರೂ ತಮಗಿಂತಲೂ ಮೇಲೆ ಧರ್ಮಜ್ಞನೆನಿಸಿಕೊಂಡಿರುವ ರಾಮನ ಬಳಿಗೆ ಬಂದು, ಎಚ್ಚರಿಕೆಯಿಂದ ಆತನನ್ನು

ಕುರಿತು, "ಎಲೈ ಮಹಾರಥನೆ! ಇಂದ್ರನು ದೇವತೆಗಳಿಗೆ ಹೇಗೋ ಹಾಗೆ ನೀನು ಇಕ್ಷ್ವಾಕುಕುಲಕ್ಕೆ ನಾಥನಾಗಿರುವೆ. ನಿನ್ನ ಕೀರ್ತಿಯೂ ನಿನ್ನ ಯಶಸ್ಸೂ ಮೂರು ಲೋಕಗಳಲ್ಲಿಯೂ ಪ್ರಸಿದ್ಧಿಹೊಂದಿರುವುದು. ಪಿತೃಭಕ್ತಿಯೂ, ಸತ್ಯ ಧರ್ಮಗಳೂ ನಿನ್ನಲ್ಲಿ ಪುಷ್ಕಲವಾಗಿ ತುಂಬಿರುವುವು ಮತ್ತು ನೀನು ಆಶ್ರಿತರಕ್ಷಣವೆಂಬ ಧರ್ಮವನ್ನೂ ಹಿಡಿದು ಇದುವರೆಗೆ ಅನೇಕರನ್ನು ಅನುಗ್ರಹಿಸಿರುವೆ! ಸಮಸ್ತ ಧರ್ಮಗಳನ್ನೂ ತಿಳಿದು ಅವುಗಳನ್ನು ಅಕ್ಕರೆಯಿಂದ ನಡೆಸುತ್ತಿರುವ ನಿನ್ನಲ್ಲಿ ನಾವು ಮರೆಹೊಕ್ಕಿರುವೆವು. ಈಗ ನಮ್ಮದೊಂದು ಪ್ರಾರ್ಥನೆಯುಂಟು. ಆದರೆ ನಿನ್ನಲ್ಲಿಗೆ ಬಂದು ಶರಣಾಗತಿಯನ್ನು ಮಾಡುವುದೇ ನಮ್ಮ ಕಾರ್ಯಸಿದ್ಧಿಗೆ ಸಾಕಾಗಿರುವುದರಿಂದ ನಾವು ನಿನ್ನಲ್ಲಿ ಯಾವುದನ್ನೂ ಪ್ರಾರ್ಥಿಸಿಕೊಳ್ಳಬೇಕಾದುದೇ ಇಲ್ಲವು. ಹಾಗಿದ್ದರೂ ನಮಗೆ ಈಗುಂಟಾಗಿರುವ ಭಯಾತುರವು ಮಿತಿಮೀರಿ ನಿನ್ನನ್ನು ಪ್ರಾರ್ಥಿಸುವಂತೆ ಮಾಡಿರುವುದು. [1]ಆದಕ್ಕಾಗಿ ನೀನು ನಮ್ಮನ್ನು ಮನ್ನಿಸಬೇಕು. ಎಲೈ ಮಹಾತ್ಮನೆ! [2]ಲೋಕದಲ್ಲಿ ಯಾವ ರಾಜನು ರಾಜ್ಯದ ಉತ್ಪತ್ತಿಯ [3]ಆರನೆಯ ಭಾಗವನ್ನು ರಾಜಾದಾಯ

---

1. ಇದರಿಂದ ಚೇತನನು ಭಗವಂತನನ್ನು ಉಪಾಯರೂಪವಾಗಿ ಅಧ್ಯವಸಾನಮಾಡಬೇಕಾದುದು ಮಾತ್ರವೇ ಹೊರತು, ಪ್ರಾರ್ಥನೆಮಾಡಬಾರದೆಂದೂ, ಪ್ರಮಾದವಶದಿಂದ ಹಾಗೆ ಮಾಡಿಬಿಟ್ಟರೂ ಕ್ಷಮೆಯನ್ನು ಕೇಳಿಕೊಳ್ಳಬೇಕೆಂದೂ ಸೂಚಿತವಾಗುವುದು.

2. ಲೋಕದಲ್ಲಿ ಸಾಮಾನ್ಯ ರಾಜನಾದವನು ಜನಗಳನ್ನು ರಕ್ಷಿಸುವುದಕ್ಕೆ ಯಾವುದೋ ಒಂದು ಕಾರಣವಿರಬೇಕು. ಇಲ್ಲಿ ರಾಮನಿಗೆ ಮಾತ್ರ ತಮ್ಮನ್ನು ರಕ್ಷಿಸುವುದು ಸ್ವಾಭಾವಿಕ ಧರ್ಮವೆಂದು ತಿಳಿಸುವುದಕ್ಕಾಗಿ, ಋಷಿಗಳು ಈ ಮಾತನ್ನು ಹೇಳಿರುವರೆಂದು ಗೋವಿಂದರಾಜೀಯ ವ್ಯಾಖ್ಯಾನವು. ಜಗದ್ರಕ್ಷಣಾರ್ಥವಾಗಿಯೇ ರಾಮನು ಅವತರಿಸಿರುವುದರಿಂದ ಆತನು ತಮ್ಮನ್ನು ರಕ್ಷಿಸುವುದರಲ್ಲಿ ಸಂದೇಹವಿಲ್ಲವೆಂದು ತಿಳಿದಿದ್ದರೂ, ಭಯಾತಿಶಯದಿಂದ ಋಷಿಗಳು ಲೋಕರೀತಿಯನ್ನನುಸರಿಸಿ ರಾಜಧರ್ಮವನ್ನು ವಿಜ್ಞಾಪಿಸಿ, ಆ ಧರ್ಮಕ್ಕಾಗಿ ತಮ್ಮನ್ನು ರಕ್ಷಿಸಬೇಕೆಂದು ಯಾಚಿಸಿದುದಾಗಿ ಮಹೇಶ್ವರತೀರ್ಥ ವ್ಯಾಖ್ಯಾನವು.

3. ಕೆಲವು ಕಡೆಗಳಲ್ಲಿ ಧರ್ಮದ ಆರನೆಯ ಭಾಗವು ರಾಜನಿಗೆ ಸೇರುವುದೆಂದು ಹೇಳಲ್ಪಟ್ಟಿದೆ. ಇಲ್ಲಿ ನಾಲ್ಕನೆಯ ಭಾಗವು ಹೇಳಲ್ಪಟ್ಟಿದೆ. ಇನ್ನು ಕೆಲವು ಕಡೆಗಳಲ್ಲಿ ಅರ್ಧಭಾಗವೆಂದು ಹೇಳಲ್ಪಡುವುದು. ಈ ವಿರೋಧಗಳಿಗೆ ಸಮಾಧಾನವೇನೆಂದರೆ, ಉಪವಾಸ ಮಾಡಿ ಭಿಕ್ಷಾಪರರಾಗಿರುವ ಜನಗಳ ಧರ್ಮದಲ್ಲಿ ರಾಜನಿಗೆ ಷಷ್ಠಾಂಶವು ಸೇರುವುದೆಂದೂ, ಸ್ವದೇಶದಲ್ಲಿ ಹುಟ್ಟಿದ ಫಲಗಳನ್ನು ಅನುಭವಿಸುವವರ ಧರ್ಮದಲ್ಲಿ ಚತುರ್ಥಾಂಶವು ಸೇರುವುದೆಂದೂ.

ರೂಪವಾಗಿ ಪ್ರಜೆಗಳಿಂದ ತೆಗೆದುಕೊಳ್ಳುತ್ತಿರುವಾಗಲೂ, ಆ ಪ್ರಜೆಗಳನ್ನು ಮಕ್ಕಳಂತೆ ಪ್ರೀತಿಯಿಂದ ರಕ್ಷಿಸದಿರುವನೋ, ಆತನು ದೊಡ್ಡ ಅಧರ್ಮಕ್ಕೆ ಪಾತ್ರನಾಗುವನು. ಯಾವ ರಾಜನು ಪ್ರಯತ್ನಪೂರ್ವಕವಾಗಿ ಯಾವಾಗಲೂ ಎಚ್ಚರಿಕೆಯನ್ನಿಟ್ಟು ತನ್ನ ದೇಶದ ಪ್ರಜೆಗಳನ್ನು ತನ್ನ ಪ್ರಾಣದಂತೆಯೂ, ಕೊನೆಗೆ ಪ್ರಾಣಕ್ಕಿಂತಲೂ ಪ್ರಿಯರಾದ ಮಕ್ಕಳಂತೆಯೂ ಭಾವಿಸಿ ರಕ್ಷಿಸುತ್ತಿರುವನೋ, ಅವನು ಚಿರಸ್ಥಾಯಿಯಾದ ಕೀರ್ತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಅಂತಹ ರಾಜನು ತನ್ನ ಕಾಲಾನಂತರದಲ್ಲಿ ಬ್ರಹ್ಮಲೋಕವನ್ನು ಸೇರಿ ಅಲ್ಲಿ ಬ್ರಹ್ಮನಿಂದಲೂ ಪೂಜಿಸಲ್ಪಡುವನು ಎಲೈ ನಾಥನೆ! "ರಾಜನು ಪ್ರಜೆಗಳಿಂದ ತೆರಿಗೆಯನ್ನು ತೆಗೆದುಕೊಂಡು ಅದಕ್ಕೆ ಪ್ರತಿಫಲವಾಗಿ ಅವರನ್ನು ಕ್ಷೇಮದಿಂದ ರಕ್ಷಿಸುವುದು ನ್ಯಾಯವೇ ಹೊರತು, ಯಾವ ತೆರಿಗೆಯನ್ನೂ ಕೊಡಲಾರದ ನಮ್ಮಂತಹ ಋಷಿಗಳನ್ನು ರಕ್ಷಿಸುವುದು ಹೇಗೆ?" ಎಂದು ನೀನು ಶಂಕಿಸಬಹುದು. ಹಾಗೆಣಿಸಬೇಡ! ನಿನಗೆ ನಮ್ಮಿಂದ ಸಲ್ಲತಕ್ಕ ತೆರಿಗೆಗಳೂ ಉಂಟು. ಋಷಿಯಾದವನು ಫಲಮೂಲಗಳನ್ನು ತಿಂದು ಕಷ್ಟಪಟ್ಟು ನಡೆಸತಕ್ಕ ಉತ್ತಮ ಧರ್ಮಗಳು ಯಾವುವುಂಟೋ ಅವುಗಳಲ್ಲಿ ನಾಲ್ಕನೆಯ ಭಾಗವು ಆಯಾ ದೇಶದ ರಾಜರಿಗೆ ಸೇರಿಹೋಗುವುದು. ಆದುದರಿಂದ ಪುರವಾಸಿಗಳಿಗಿಂತಲೂ ಉತ್ತಮವಾದ ಮತ್ತು ಹೆಚ್ಚಾದ ತೆರಿಗೆಯನ್ನು ಸಲ್ಲಿಸತಕ್ಕ ಋಷಿಗಳನ್ನು ರಾಜನು ಧರ್ಮದಿಂದ ಪಾಲಿಸಲೇಬೇಕು. [1]ಎಲೈ ರಾಮನೆ! ವಾನಪ್ರಸ್ಥಾಶ್ರಮವನ್ನು ಹಿಡಿದ ಅನೇಕ ಮಹರ್ಷಿಗಳು ಇಲ್ಲಿ ದೊಡ್ಡ ಗುಂಪಾಗಿ ಬಂದಿರುವರು. ಇವರಲ್ಲಿ ಪ್ರಾಯಿಕವಾಗಿ ಎಲ್ಲರೂ ಬ್ರಾಹ್ಮಣರಾಗಿಯೇ ಇರುವರು. ಇವರೆಲ್ಲರಿಗೂ ನಾಥನಾಗಿ ನೀನಿರುವಾಗಲೂ, ಅವರು ಅನಾಥರಂತೆ ರಾಕ್ಷಸರಿಂದ ಕೊಲ್ಲಲ್ಪಡುತ್ತಿರುವರು. ಇದೋ! ಇಲ್ಲಿಗೆ ಬಂದಿರುವವರ ಶರೀರಗಳನ್ನು ನೋಡು! ಈ

---

ರಾಜನ ಅನ್ನಪಾನಗಳಿಂದಲೇ ಜೀವಿಸುವವರ ಧರ್ಮದಲ್ಲಿ ಅರ್ಧಾಂಶವು ಸೇರುವುದೆಂದೂ ತಾರತಮ್ಯವುಂಟು. "ಯಸ್ಯಾನ್ನಪಾನಪುಷ್ಟಾಂಗಃ ಕುರುತೇ ಧರ್ಮಸಂಚಯಂ । ಅನ್ನಪ್ರದಾತುಸ್ತಸ್ಯಾರ್ಧಂ ಕರ್ತುರ್ಶ್ಚಾರ್ಧಂ ನ ಸಂಶಯಃ ॥" ಎಂಬುದೇ ಇದಕ್ಕೆ ಪ್ರಮಾಣವು.

1. ಇದುವರೆಗೆ ಪ್ರಜೆಗಳನ್ನು ರಕ್ಷಿಸತಕ್ಕ ರಾಜನಿಗೆ ಧರ್ಮಾರ್ಥಗಳೆರಡೂ ಪ್ರತಿಫಲಗಳೆಂಬುದನ್ನು ಹೇಳಿದುದಾಯಿತು. ಈಗ ರಾಮನು ತಮ್ಮನ್ನು ರಕ್ಷಿಸುವುದಕ್ಕೆ ತಮ್ಮ ಶರಣಾಗತಿಯೇ ಮೇಲಾದ ಉಪಾಯವೆಂದು ಈ ಮುಂದಿನ ವಾಕ್ಯದಿಂದ ತಿಳಿಸುವನೆಂದು ಗ್ರಹಿಸಬೇಕು.

ಕಾಡಿನಲ್ಲಿ ಅನೇಕ ರಾಕ್ಷಸರು ಅನೇಕ ವಿಧವಾಗಿ ನಮ್ಮನ್ನು ಬಾಧಿಸಿ ಶರೀರ ಹಿಂಸೆಯನ್ನು ಮಾಡಿ ಕೊಲ್ಲುತ್ತಿರುವರು. ನಮ್ಮ ನಮ್ಮ ದೇಹದಲ್ಲಿರುವ ಗಾಯ ಗಳನ್ನು ನೋಡಿದರೆ, ನಾವು ಇಲ್ಲಿ ಎಷ್ಟು ಕಷ್ಟಪಡುತ್ತಿರುವೆವೆಂದು ನಿನಗೇ ವ್ಯಕ್ತವಾಗುವುದು. ಈ ಕಾಡಿನಲ್ಲಿ ಆಗಾಗ ರಾಕ್ಷಸರು ಗುಂಪುಗುಂಪಾಗಿ ಬಂದು ಪಂಪಾ ನದೀತೀರದಲ್ಲಿಯೂ, ಮಂದಾಕಿನೀ ನದೀತೀರದಲ್ಲಿಯೂ, ಚಿತ್ರಕೂಟದ ತಪ್ಪಲುಗಳಲ್ಲಿಯೂ ವಾಸಮಾಡುತ್ತಿರುವ ಋಷಿಗಳಿಗೆ ಎಡೆಬಿಡದೆ ಉಪದ್ರವ ವನ್ನು ಕೊಡುತ್ತಿರುವರು. ಹೀಗೆ ರಾಕ್ಷಸರ ಬಾಧೆಯಿಂದ ಋಷಿಗಳಿಗುಂಟಾಗ ತಕ್ಕ ಕಷ್ಟವನ್ನು ನಾವು ನೋಡಿ ಸಹಿಸಲಾರೆವು. [1]ಇದಕ್ಕಾಗಿ ಸರ್ವಲೋಕ ಶರಣ್ಯನಾದ ನಿನ್ನಲ್ಲಿ ಬಂದು ಮರೆಹೊಕ್ಕಿರುವೆವು. ರಾಕ್ಷಸರ ಕೊಲೆಯಿಂದ ನಮ್ಮನ್ನು ರಕ್ಷಿಸಬೇಕಾದ ಭಾರವು ನಿನಗೆ ಸೇರಿದೆ. [2]ಈ ಲೋಕದಲ್ಲಿ ನಿನ್ನನ್ನು

1. ಇಲ್ಲಿ "ತತಸ್ತ್ವಾಂ ಶರಣಾರ್ಥಂ ಚ ಶರಣ್ಯಂ ತ್ವಾಮುಪಸ್ಥಿತಾಃ । ಪರಿಪಾಲಯ ನೋ ರಾಮ ವಧ್ಯಮಾನಾನ್ನಿಶಾಚರೈಃ ॥" ಎಂದು ಮೂಲವು. ಈ ಶ್ಲೋಕದಿಂದ ವೈಷ್ಣವ ರಿಗೆ ಮುಖ್ಯಾನುಸಂಧೇಯವಾದ ದ್ವಯಾರ್ಥವು ಪ್ರತಿಪಾದಿತವಾಗುವುದು. ಹೇಗೆಂದರೆ, (ಶರಣ್ಯಂ) ಇಲ್ಲಿ ಉಪಪದವಿಲ್ಲದುದರಿಂದ ಸರ್ವಲೋಕಶರಣ್ಯನೆಂದೇ ಸಿದ್ಧವಾಗುವುದು. ಈ ಅರ್ಥಸಿದ್ಧಿಯಿಂದ ಅಂತಹ ಶರಣ್ಯತ್ವಕ್ಕೆ ಉಪಯುಕ್ತಗಳಾದ ಸ್ವಾಮಿತ್ವಾದಿ ಗುಣ ಗಳೆಲ್ಲವೂ ಪ್ರತಿಪಾದಿತಗಳಾಗುವುವು. ಇದರಿಂದ ಪೂರ್ವಖಂಡವಾದ ನಾರಾಯಣ ಪದಾರ್ಥವು ಹೇಳಲ್ಪಡುವುದು. (ಶರಣಾರ್ಥಂ) ಉಪಾಯಾಂತರಸ್ಥಾನದಲ್ಲಿಡುವುದಕ್ಕಾಗಿ (ಸಮುಪಾ ಗತಾಃ) ವಿಶ್ವಾಸನೇ ಮೊದಲಾದ ಅಂಗಸಂಪತ್ತಿಗಳೊಡನೆ ರಕ್ಷಾಭರಸಮರ್ಪಣವನ್ನು ಮಾಡಿರುವೆನೆಂದರ್ಥವು. ಇಲ್ಲಿ "ಶರಣಾರ್ಥಂ" ಎಂಬುದರಿಂದ "ಚರಣೌ ಶರಣಂ" ಎಂಬೀ ಎರಡು ಪದಗಳ ಅರ್ಥವೂ "ಸಮುಪಾಗತಾಃ" ಎಂಬುದರಿಂದ "ಪ್ರಪದ್ಯೇ" ಎಂಬ ಕ್ರಿಯಾ ಪದವೂ ವಿವರಿಸಲ್ಪಟ್ಟಿರುವುದು. (ಪರಿಪಾಲಯ ನಃ) ಎಂಬುದರಿಂದ ಗೋಪ್ತೃತ್ವವರಣವು ಹೇಳಲ್ಪಟ್ಟಿರುವುದು. ಈ ಶ್ಲೋಕದ ಉತ್ತರಾರ್ಧದಿಂದ ಅನಿಷ್ಟನಿವೃತ್ತಿರೂಪ ಫಲ ಪ್ರಾರ್ಥನೆಯೂ ನಿರೂಪಿತವಾಗುವುದು.

2. ಇಲ್ಲಿ "ಪರಾತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ । ಪರಿಪಾಲಯ ನಸ್ಸರ್ವಾನ್ ರಾಕ್ಷಸೇಭ್ಯೋ ನೃಪಾತ್ಮಜ ॥" ಎಂದು ಮೂಲವು. ಇದರಿಂದ ಅಕಿಂಚಿನ್ಯ ವೆಂಬ ಉತ್ತರಖಂಡ ವಿವರಣವು ಹೇಳಲ್ಪಡುವುದು. ನಮಗೆ ನಿನಗಿಂತಲೂ ಬೇರೆಯಾದ ಉಪಾಯವಿಲ್ಲವೆಂಬುದರಿಂದ "ನಾನ್ಯಃ ಪಂಥಾ ಅಯನಾಯ ವಿದ್ಯತೇ" ಎಂಬ ಶ್ರುತ್ಯ ರ್ಥವು ಸೂಚಿತವಾಗುವುದು. "ರಾಕ್ಷಸೇಭ್ಯಃ" ಎಂಬುದು ಸರ್ವಾನಿಷ್ಟಗಳಿಗೂ ಉಪಲಕ್ಷಕ ವೆಂದು ಗ್ರಾಹ್ಯವು.

ಬಿಟ್ಟರೆ ನಮಗೆ ಬೇರೆ ಗತಿಯಿಲ್ಲವು. ನಮಗೆ ಈ ರಾಕ್ಷಸರ ಬಾಧೆಯನ್ನು ತಪ್ಪಿಸಿ ನಮ್ಮನ್ನು ರಕ್ಷಿಸು" ಎಂದರು. ಹೀಗೆ ಆ ತಪಸ್ವಿಗಳು ಮೊರೆಯಿಡುವುದನ್ನು ಕೇಳಿ, ಧಾರ್ಮಿಕನಾದ ರಾಮನು ಅವರೆಲ್ಲರನ್ನೂ ಕುರಿತು "ಎಲೈ ಮಹಾತ್ಮರೆ! [1]ನೀವು ನನ್ನ ವಿಷಯದಲ್ಲಿ ಇಷ್ಟುಮಟ್ಟಿಗೆ ಹೇಳುವುದುಚಿತವಲ್ಲ. ಯಾವ ವಿಷಯಕ್ಕಾದರೂ ನೀವು ನನಗೆ ಆಜ್ಞೆಮಾಡಬೇಕೇ ಹೊರತು ಮಹಾಜ್ಞಾನಿಗಳಾದ ನೀವು ಅತ್ಯಲ್ಪನಾದ ನನ್ನನ್ನು ಪ್ರಾರ್ಥಿಸುವುದೆಂದರೇನು? ನಾನು ಈ ಕಾಡಿಗೆ ಬಂದಿರುವುದು ಸ್ವಕಾರ್ಯಕ್ಕಾಗಿಯೇ ಎಂದು ಭಾವಿಸಿದರೂ, ನಿಮ್ಮನ್ನು ರಕ್ಷಿಸುವುದು ನನಗೆ ಸ್ವಕಾರ್ಯವಲ್ಲವೆ? ನಿಮಗುಂಟಾದ ರಾಕ್ಷಸ ಬಾಧೆಯನ್ನು ತಪ್ಪಿಸುವುದಕ್ಕಾಗಿಯೇ ನಾನು ಬಂದಿರುವೆನು. ಪಿತೃವಾಕ್ಯ ಪರಿಪಾಲನವೆಂಬುದು ಕೇವಲ ವ್ಯಾಜಮಾತ್ರವೇ ಹೊರತು, ನಿಮ್ಮ ಇಷ್ಟವನ್ನು ನೆರವೇರಿಸಿಕೊಡಬೇಕಾದುದೇ ನಾನು ಇಲ್ಲಿಗೆ ಬಂದುದಕ್ಕೆ ಮುಖ್ಯ ಕಾರಣವು. ಈ ವನದಲ್ಲಿರುವುದರಿಂದ ನನಗೆ ಅನೇಕ ಮಹಾಫಲಗಳುಂಟಾಗುವುದರಲ್ಲಿ ಸಂದೇಹವಿಲ್ಲ. ಯುದ್ಧದಲ್ಲಿ ಋಷಿಕಂಕಟಕರಾದ ರಾಕ್ಷಸರನ್ನು ನಿರ್ಮೂಲಮಾಡುವುದೇ ನನ್ನ ಮನಸ್ಸಿನ ಮುಖ್ಯಾಭಿಲಾಷೆಯು. ಎಲೈ ಮಹಾತ್ಮರೆ! ಹೆಚ್ಚಾಗಿ ಹೇಳಿದುದರಿಂದೇನು? ತಪೋಧನರಾದ ಇಲ್ಲಿನ ಋಷಿಗಳೆಲ್ಲರೂ ಅಣ್ಣತಮ್ಮಂದಿರಾದ ನಮ್ಮಿಬ್ಬರ ವೀರ್ಯವನ್ನು ನೋಡಲಿ" ಎಂದನು. ಧರ್ಮದಲ್ಲಿಯೇ ನಿಶ್ಚಲವಾದ ಮನಸ್ಸುಳ್ಳ ರಾಮನು ಆ ತಪಸ್ವಿಗಳಿಗೆ ಹೀಗೆ ಅಭಯಪ್ರದಾನವನ್ನು ಮಾಡಿ, ಅವರಿಂದ ಸತ್ಕೃತನಾಗಿ, ಲಕ್ಷ್ಮಣನನ್ನು ಕರೆದುಕೊಂಡು ಅಲ್ಲಿಂದ ಹೊರಟು ಸುತೀಕ್ಷ್ಣಾಶ್ರಮಕ್ಕೆ ಹೋದನು.

ಇಲ್ಲಿಗೆ ಆರನೆಯ ಸರ್ಗವು.

---

1. ಈ ಮುಂದಿನ ವಾಕ್ಯಗಳಿಂದ ರಾಮನ ಸೌಲಭ್ಯಾತಿಶಯವು ವ್ಯಂಜಿತವಾಗುವುದು. "ನೈವಮರ್ಹತ ಮಾಂ ವಕ್ತುಮಾಜ್ಞಾಪ್ಯೋಽಹಂ ತಪಸ್ವಿನಾಂ । ಕೇವಲೇನಾತ್ಮಕಾರ್ಯೇಣ ಪ್ರವೇಷ್ಟವ್ಯಂ ಮಯಾ ವನಂ ॥" ಎಂದು ಇದಕ್ಕೆ ಮೂಲವು. ಇಲ್ಲಿ "ಕೇವಲೇನಾತ್ಮಕಾರ್ಯೇಣ" "ಕೇವಲ ಸ್ವಕಾರ್ಯಕ್ಕಾಗಿಯೇ" ಎಂಬುದರಿಂದ ಶೇಷಭೂತವಾದ ವಸ್ತುವನ್ನು ಕಾಪಾಡಿಕೊಳ್ಳುವುದು ಶೇಷಿ(ಸ್ವಾಮಿ)ಯ ಪ್ರಯೋಜನಾರ್ಥವಾಗಿಯೇ ಅಲ್ಲವೆ? ಇದರಿಂದ ಋಷಿಗಳನ್ನು ರಕ್ಷಿಸುವುದೂ ಸ್ವಪ್ರಯೋಜನವೇ ಎಂಬ ಭಾವವು ರಾಮನಿಗಿಷ್ಟಂತೆ ಸೂಚಿತವಾಗಿ ಭಗವಂತನ ಆಶ್ರಿತವಾತ್ಸಲ್ಯವು ಇಲ್ಲಿ ವ್ಯಕ್ತವಾಗುವುದು. ಹೀಗೆ ತನ್ನ ಕಾರ್ಯವನ್ನು ತಾನು ನಡೆಸಿಕೊಳ್ಳುವ ವಿಷಯದಲ್ಲಿ ಇತರರು ಹೇಳಬೇಕಾದ ಅವಶ್ಯವೇನೆಂಬ ಭಾವವು. (ಗೋವಿಂದರಾಜೀಯವು.)

ಸುತೀಕ್ಷ್ಣದರ್ಶನವು. ಸುತೀಕ್ಷ್ಣನು ತನಗುಂಟಾಗುತ್ತಿದ್ದ ಮೃಗಬಾಧೆಯನ್ನು ರಾಮನಲ್ಲಿ ತಿಳಿಸಿಡುದು. ರಾಮನು ಆತನಿಗೆ ಮೃಗಗಳನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿಕೊಟ್ಟು, ಆ ಆಶ್ರಮದಲ್ಲಿಯೇ ಆ ರಾತ್ರಿಯನ್ನು ಕಳೆದುದು.

ರಾಮನು ಸೀತಾಲಕ್ಷ್ಮಣರೊಡಗೂಡಿ ಅಲ್ಲಿಂದ ಹೊರಟನು. ವೈಖಾನಸಾದಿ ಬ್ರಾಹ್ಮಣರೆಲ್ಲರೂ ಆತನನ್ನು ಬಿಡದೆ ಹಿಂಬಾಲಿಸಿದರು. ಎಲ್ಲರೂ ಸುತೀಕ್ಷ್ಣಾಶ್ರಮಕ್ಕೆ ಹೊರಟು ಬಹುದೂರ ಪ್ರಯಾಣಮಾಡಿ ಜಲಪೂರ್ಣವಾದ [1]ಅನೇಕ ನದಿಗಳನ್ನು ದಾಟಿ, ಮಹಾಮೇಘದಂತೆ ಕಾಣುತ್ತಿದ್ದ ಒಂದು ಪರ್ವತವನ್ನು ಕಂಡರು. ಅದಕ್ಕೆ ಸೇರಿದಹಾಗೆ ಬಗೆಬಗೆಯಾದ ವೃಕ್ಷಸಮೂಹದಿಂದ ತುಂಬಿದ ವಿಸ್ತಾರವಾದ ಒಂದು ಕಾಡನ್ನು ಪ್ರವೇಶಿಸಿದರು. ಹೀಗೆ ರಾಮಲಕ್ಷ್ಮಣರಿಬ್ಬರೂ ಸೀತೆಯನ್ನು ಕರೆದುಕೊಂಡು ಆ ಘೋರಾರಣ್ಯವನ್ನು ಪ್ರವೇಶಿಸಿದಮೇಲೆ, ಅಲ್ಲಿ ಒಂದು ವಿವಿಕ್ತವಾದ ಸ್ಥಳದಲ್ಲಿ ಪುಣ್ಯಾಶ್ರಮವೊಂದನ್ನು ಕಂಡರು. ಬಗೆಬಗೆಯಾದ ಪುಷ್ಪಫಲಗಳಿಂದ ತುಂಬಿದ ವೃಕ್ಷಗಳುಳ್ಳುದಾಗಿಯೂ, ಅಲ್ಲಲ್ಲಿ ಸಾಲಾಗಿ ಆರುಹಾಕಿದ ನಾರುಮಡಿಗಳಿಂದ ಶೋಭಿತವಾಗಿಯೂ ಇರುವ ಆ ಆಶ್ರಮವನ್ನು ಸೇರಿದಮೇಲೆ ಅಲ್ಲಿ ರಾಮನು ತಪಸ್ಸಂಪನ್ನನಾಗಿ ಕುಳಿತಿದ್ದ ಸುತೀಕ್ಷ್ಣನೆಂಬ ಮಹರ್ಷಿಯನ್ನು ಕಂಡನು. ಆ ಮಹರ್ಷಿಯಾದರೋ ಯಾವಾಗಲೂ ಎಡೆಬಿಡದೆ ತಪಸ್ಸಿನಲ್ಲಿಯೇ ನಿರತನಾಗಿ, ಸ್ನಾನವೇ ಮೊದಲಾದ ದೇಹಸಂಸ್ಕಾರಗಳನ್ನೂ ಬಿಟ್ಟಿದ್ದುದರಿಂದ, ದೇಹದಲ್ಲಿ ವಿಶೇಷವಾದ ಕೊಳೆಯೂ, ರಜಸ್ಸೂ ತುಂಬಿದ್ದುವು. ಆತನ ತಲೆಯಲ್ಲಿ ಉದ್ದವಾದ ಜಡೆಯು ಕಾಣಿಸುತ್ತಿತ್ತು. ಅವನು ತಪೋನಿರತನಾಗಿ ಕಣ್ಣುಮುಚ್ಚಿದ್ದುದರಿಂದ ರಾಮನು ತಾನಾಗಿಯೇ ಮುಂದೆ ಹೋಗಿ ನಿಂತು, ವಿಧ್ಯುಕ್ತವಾಗಿ ಆತನಿಗೆ ನಮಸ್ಕರಿಸಿ, “ಎಲೈ ಮಹಾತ್ಮನೆ! ನೀನು ಸಮಸ್ತ ಧರ್ಮಗಳನ್ನೂ ತಿಳಿದ ಮಹರ್ಷಿಯೆನಿಸಿಕೊಂಡಿರುವೆ. ನಿನ್ನ ತಪೋಮಹಿಮೆಯು ಲೋಕಾದ್ಭುತವಾದುದು. ಇದೋ ರಾಮನೆಂಬ ನಾನು ನಮಸ್ಕರಿಸುವೆನು. ನಿನ್ನನ್ನು ದರ್ಶನಮಾಡಬೇಕೆಂಬುದಕ್ಕಾಗಿಯೇ ಇಲ್ಲಿಗೆ ಬಂದೆನು. ಈ ನನ್ನ ಪ್ರಣಾಮವನ್ನು ಸ್ವೀಕರಿಸಿ, ನನ್ನನ್ನು

---

1. ಆ ವನಪ್ರದೇಶಗಳಲ್ಲಿ ಮಂದಾಕಿನೀ ನದಿಯೇ ಸುತ್ತಿಸುತ್ತಿ ಬರುವುದರಿಂದ ಅಲ್ಲಲ್ಲಿ ಮಂದಾಕಿನಿಯೆಂದು ವ್ಯವಹರಿಸಲ್ಪಡುವುದಾಗಿ ಗ್ರಹಿಸಬೇಕು.

ಆಶೀರ್ವದಿಸಿ ಅನುಗ್ರಹಿಸು" ಎಂದನು. ಆಗ ಮಹರ್ಷಿಯು ವೀರನಾದ ರಾಮನನ್ನು ಕೈನೀಡಿ ಬಿಗಿಯಾಗಿ ಅಪ್ಪಿಕೊಂಡು, ಆತನನ್ನು ಕುರಿತು "ಎಲೈ ಧಾರ್ಮಿಕ ಶಿರೋಮಣಿಯೆ! ನಿನಗೆ ಸುಖಾಗಮನವೆ? ನೀನು ಈ ನಮ್ಮಾಶ್ರಮಕ್ಕೆ ಕಾಲಿಟ್ಟುದರಿಂದ ಈಗಲೇ ಇದು ಸನಾಥವಾಯಿತೆಂದು ಭಾವಿಸುವೆನು. ಎಲೈ ಮಹಾಯಶಸ್ವಿಯೆ! ನಾನೂ ಇದುವರೆಗೆ ನಿನಗಾಗಿಯೇ ನಿರೀಕ್ಷಿಸುತ್ತಿದ್ದೆನು. [1]ನಿನ್ನನ್ನು ದರ್ಶನಮಾಡಬೇಕೆಂಬ ಉದ್ದೇಶದಿಂದಲೇ ನಾನು ಈ ದೇಹವನ್ನು ಬಿಟ್ಟು ಸ್ವರ್ಗಲೋಕಕ್ಕೂ ಹೋಗದೆ ತಡೆದು ನಿಂತಿದ್ದೆನು. ನೀನು ಚಿತ್ರಕೂಟಕ್ಕೆ ಬಂದಾಗಲೇ ನಿನಗೆ ರಾಜ್ಯಭ್ರಂಶವುಂಟಾದ ವೃತ್ತಾಂತವು ನನ್ನ ಕಿವಿಗೆ ಬಿದ್ದಿತು. ನಾನು ಈಗ ಪರಲೋಕಪ್ರಯಾಣಕ್ಕೆ ಸಿದ್ಧನಾಗಿರುವೆನು. ಶರಭಂಗಮುನಿಯನ್ನು ಬ್ರಹ್ಮಲೋಕಕ್ಕೇರಿಸುವುದಕ್ಕಾಗಿ ಈ ಭೂಲೋಕಕ್ಕೆ ಬಂದಿದ್ದ ದೇವೇಂದ್ರನು ನನ್ನಲ್ಲಿಗೂ ಬಂದು ನನಗೆ ನನ್ನ ಪುಣ್ಯಕರ್ಮದಿಂದ ಸಮಸ್ತ ಲೋಕಗಳೂ ಸ್ವಾಧೀನವಾಗಿರುವುವೆಂದು ಹೇಳಿ ಹೋದನು. ಹೀಗೆ ದೇವದೇವನಾದ ಶತಕ್ರತುವು ನನಗೆ ಈ ವಿಷಯವನ್ನು ತಿಳಿಸಿಹೋಗಿದ್ದರೂ, ನಾನು ನಿನ್ನ ದರ್ಶನಾರ್ಥವಾಗಿಯೇ ಇಲ್ಲಿ ಕಾದಿದ್ದೆನು. ಎಲೈ ರಾಮನೆ! ನಾನು ತಪಸ್ಸಿನಿಂದ ಗಳಿಸಿಟ್ಟಿರುವ ದೇವಋಷಿಸೇವಿತವಾದ ಆ ಲೋಕಗಳನ್ನು ನಿನಗೇ ಕೊಡುವೆನು. [2]ನೀನು

---

1. ಅಲ್ಲಿ "ತಸ್ಯಾಂತರಾಯೋಮೈತ್ರೇಯ ದೇವೇಂದ್ರತ್ವಾದಿಕಂ ಫಲಂ" ಎಂಬುದಾಗಿ ಸ್ವರ್ಗಾದಿಗಳು ಮೋಕ್ಷವಿರೋಧಿಗಳಾದುದರಿಂದ, ಅಲ್ಲಿಗೆ ಹೋಗದೆ, ತಾನು ರಾಮನನ್ನು ಇದಿರುನೋಡುತ್ತಿದ್ದುದಾಗಿ ಭಾವವು. ಋಷಿಯು ತನಗಿರತಕ್ಕ ಮೋಕ್ಷಾಪೇಕ್ಷೆಯನ್ನು ಈ ವಾಕ್ಯಗಳಿಂದ ಸೂಚಿಸಿದುದಾಗಿ ತಿಳಿಯಬೇಕು (ಗೋವಿಂದರಾಜೀಯವು).

"ಪರಮಪುರುಷಾರ್ಥಸ್ವರೂಪವಾದ ನಿನ್ನ ದರ್ಶನಕ್ಕೆ ಸ್ವರ್ಗಪ್ರಾಪ್ತಿಯು ಅಡ್ಡಿಯಾದುದರಿಂದ ಅದನ್ನೂ ಬಿಟ್ಟು ನಿನ್ನ ದರ್ಶನವನ್ನಿದಿರುನೋಡುತ್ತಿರುವೆನು" ಎಂದು ಮಹೇಶ್ವರತೀರ್ಥರ ವ್ಯಾಖ್ಯಾನವು.

2. ಇಲ್ಲಿ "ಮತ್ಪ್ರಸಾದಾತ್ಸಭಾರ್ಯಸ್ತ್ವಂ ವಿಹರಸ್ವ ಯಥಾಸುಖಂ" ಎಂದು ಮೂಲವು. ಇಲ್ಲಿ ವಾಸ್ತವಾರ್ಥವೇನೆಂದರೆ (ಮತ್ಪ್ರಸಾದಾತ್) ನನ್ನಲ್ಲಿ ಅನುಗ್ರಹದಿಂದ (ವಿ-ಹರಸ್ವ) ವಿಶೇಷವಾಗಿ ಸ್ವೀಕರಿಸು" ಎಂದರೆ ಆ ಲೋಕಗಳೆಲ್ಲವನ್ನೂ ನನ್ನಲ್ಲಿ ಅನುಗ್ರಹವಿಟ್ಟು ನೀನು ಸ್ವೀಕರಿಸಬೇಕೆಂದು, ಭಗವಂತನಲ್ಲಿ ತನ್ನ ಕರ್ಮಫಲಗಳನ್ನು ಸಮರ್ಪಿಸಬೇಕೆಂಬ ಬುದ್ಧಿಯಿಂದ ಋಷಿಯು ಈ ವಾಕ್ಯವನ್ನು ಹೇಳಿದುದಾಗಿ ಗ್ರಹಿಸಬೇಕು.

ಸೀತಾಲಕ್ಷ್ಮಣರೊಡಗೂಡಿ ಅವುಗಳಲ್ಲಿ ಸುಖವಾಗಿ ವಿಹರಿಸು" ಎಂದನು. ಮಹಾತ್ಮನಾದ ರಾಮನು ಉಗ್ರತಪಸ್ವಿಯಾಗಿಯೂ, ಸತ್ಯವಾದಿಯಾಗಿಯೂ ಇರುವ ಆ ಮಹರ್ಷಿಯು ಹೇಳಿದ ಮಾತನ್ನು ಕೇಳಿ, ಕಾಶ್ಯಪನು ಬ್ರಹ್ಮದೇವರಲ್ಲಿ ವಿಜ್ಞಾಪಿಸುವಂತೆ, ವಿನಯದಿಂದ ಆತನನ್ನು ಕುರಿತು, "ಎಲೈ ಮಹರ್ಷಿಯೇ, [1]ನಾನಾಗಿಯೇ ಆ ಸಮಸ್ತ ಲೋಕಗಳನ್ನೂ ಸಂಪಾದಿಸಿಕೊಳ್ಳಬಲ್ಲೆನು. ಮುಖ್ಯವಾಗಿ ಈಗ ನನಗೆ ಈ ಅರಣ್ಯದಲ್ಲಿ ಅನುಕೂಲವಾದ ಒಂದು ವಾಸಸ್ಥಾನವನ್ನು ತೋರಿಸಿಕೊಟ್ಟರೆ ಸಾಕು! ನೀನು ಅದನ್ನು ಮಾತ್ರ ಗ್ರಹಿಸಿ ಹೇಳಬೇಕು. ಗೌತಮವಂಶದಲ್ಲಿ ಹುಟ್ಟಿದ ಮಹಾತ್ಮನಾದ ಶರಭಂಗಮುನಿಯು, ನನಗೆ ನೀನು ಮಹಾಮಹಿಮೆಯುಳ್ಳವನೆಂದೂ, ಸರ್ವಭೂತದಯಾಪರನೆಂದೂ ಆಗಲೇ ಹೇಳಿರುವನು" ಎಂದನು. ಲೋಕವಿಖ್ಯಾತನಾದ ಆ ಸುತೀಕ್ಷ್ಣನು ರಾಮನ ಮಾತನ್ನು ಕೇಳಿ, ಆತನ ಸೌಜನ್ಯಕ್ಕಾಗಿ ಸಂತೋಷಿಸಿ, ಮೃದುವಾಕ್ಯದಿಂದ ಆತನನ್ನು ಕುರಿತು "ಎಲೈ ರಾಮನೆ! ಈ ಆಶ್ರಮವೇ ನಿನಗೆ ಅನುಕೂಲವಾದ ಸ್ಥಳವು. ಇಲ್ಲಿ ಅನೇಕ ಋಷಿಗಳು ವಾಸಮಾಡುತ್ತಿರುವರು. ಯಾವಾಗಲೂ ಇಲ್ಲಿ ಫಲಮೂಲಗಳು ಸಮೃದ್ಧವಾಗಿ ಸಿಕ್ಕುವುವು. ಆದರೆ, ಎಲೈ ಯಶಸ್ವಿಯೆ! ಇಲ್ಲಿ ಅನೇಕ ಮೃಗಗಳು ನಿರ್ಭಯವಾಗಿ ಅಲ್ಲಲ್ಲಿ ತಿರುಗುತ್ತಿದ್ದು, ತಮ್ಮ ತಮ್ಮ ವಿಚಿತ್ರವಾದ ಗತಿಚೇಷ್ಟಾದಿ ವ್ಯಾಪಾರಗಳಿಂದಲೂ, ವಿಚಿತ್ರರೂಪಗಳಿಂದಲೂ, ಋಷಿಗಳಾದ ನಮ್ಮ ಮನಸ್ಸನ್ನು ಮರುಳಾಗಿಸಿ, ನಮ್ಮ ಸಮಾಧಿಗಳನ್ನೂ ಕೆಡಿಸಿ ಹೊರಟುಹೋಗುವುವು. ಈ ಮೃಗಗಳ ಬಾಧೆಯೊಂದು ಹೊರತು ಬೇರೊಂದನ್ನೂ ನಾವು ಇಲ್ಲಿ ಕಂಡರಿಯೆವು" ಎಂದನು. ಈ ಮಾತನ್ನು ಕೇಳಿದೊಡನೆಯೇ ರಾಮನು ತನ್ನ ಬಿಲ್ಲಿಗೆ ನಾಣೇರಿಸಿ, ಬಾಣಸಂಧಾನಮಾಡಿ, ಆ ಮಹರ್ಷಿಯನ್ನು ಕುರಿತು, "ಎಲೈ ಮಹಾತ್ಮನೆ! ಆ ಮೃಗಗಳೆಲ್ಲವನ್ನೂ ಕೊಲ್ಲುವುದಕ್ಕೆ ಇದೋ! ನಾನು ಸಿದ್ಧನಾಗಿರುವೆನು. ಸಿಡಿಲಿನಂತೆ ಕ್ರೂರವಾಗಿ ಜ್ವಲಿಸುತ್ತಿರುವ ಅತಿ ತೀಕ್ಷ್ಣವಾದ ಅಲಗುಗಳುಳ್ಳ ಈ ಬಾಣಗಳಿಂದ ಈಗಲೇ ಅವುಗಳನ್ನು ಕೊಂದುಹಾಕುವೆನು. ಆದರೆ ಇಲ್ಲಿ ಆಶ್ರಮಮೃಗ

---

1. ಇಲ್ಲಿ "ಅಹಮೇವಾಹರಿಷ್ಯಾಮಿ" ಎಂದಿರುವುದರಿಂದ ಭಗವಂತನ ಕರ್ಮಫಲಸ್ವೀಕಾರವು ಸೂಚಿತವು (ಗೋವಿಂದರಾಜೀಯವು).

*

ಗಳನ್ನು ಕೊಲ್ಲುವುದರಿಂದ [1]ನಿನ್ನ ಮನಸ್ಸಿಗೆ ವಿಷಾದವುಂಟಾಗಬಹುದಾದರೆ ನಾನು ನಿನ್ನಲ್ಲಿ ಅಪರಾಧಪಟ್ಟಂತಾಗುವುದಲ್ಲವೆ ! ಅದಕ್ಕಿಂತಲೂ ಬೇರೆ ದುಷ್ಕೃತ್ಯವೇನುಂಟು ? ಆದುದರಿಂದ ಈ ಆಶ್ರಮದಲ್ಲಿ ಇನ್ನು ಬಹಳ ದಿನಗಳ ವರೆಗೆ ನಿಲ್ಲುವುದೇನೋ ನನಗೆ ಸಮ್ಮತವಿಲ್ಲ. ಆ ಮೃಗಗಳು ನನ್ನ ಕಣ್ಣೆದಿರಿಗೆ ಗೋಚರಿಸುವವರೆಗೆ ಇಲ್ಲಿರುವುದೂ ನನಗೆ ಇಷ್ಟವಿಲ್ಲ" ಎಂದು ಹೇಳಿ, ಆ ಮಹರ್ಷಿಯ ಅನುಜ್ಞೆಯನ್ನು ಪಡೆದು, ಸಾಯಂಕಾಲದ ಸಂಧ್ಯಾಕಾರ್ಯಗಳನ್ನು ನಡೆಸುವುದಕ್ಕಾಗಿ ಸರಸ್ತೀರಕ್ಕೆ ಹೋಗಿಬಂದು, ರಮ್ಯವಾದ ಆ ಆಶ್ರಮದಲ್ಲಿಯೇ ಸೀತಾಲಕ್ಷ್ಮಣರೊಡನೆ ಆ ರಾತ್ರಿಯನ್ನು ಕಳೆಯುವುದಾಗಿ ನಿಶ್ಚಯಿಸಿದನು. ಸಂಧ್ಯಾಕಾಲವು ಕಳೆದು ರಾತ್ರಿಯಾದುದನ್ನು ನೋಡಿ, ಮಹಾತ್ಮನಾದ ಸುತೀಕ್ಷ್ಣಮುನಿಯು, ಪುರುಷಶ್ರೇಷ್ಠರಾದ ಆ ರಾಮಲಕ್ಷ್ಮಣರಿಬ್ಬರನ್ನೂ ವಿಶೇಷವಾಗಿ ಸತ್ಕರಿಸಿ, [2]ಅವರಿಬ್ಬರ ರಾತ್ರಿ ಭೋಜನಕ್ಕಾಗಿ ತಾಪಸಯೋಗ್ಯವಾದ ಫಲಮೂಲಾದಿಗಳನ್ನು ತಕ್ಕಷ್ಟು ತಂದಿರಿಸಿದನು.

ಇಲ್ಲಿಗೆ ಏಳನೆಯ ಸರ್ಗವು.

---

ಸುತೀಕ್ಷ್ಣನ ಅನುಮತಿಯನ್ನು ಪಡೆದು ರಾಮನು ಅಲ್ಲಿನ ಋಷ್ಯಾಶ್ರಮ
ಸಮೂಹಗಳನ್ನು ಸುತ್ತಿ ನೋಡುವುದಕ್ಕಾಗಿ ಹೊರಟನು.

ರಾಮಲಕ್ಷ್ಮಣರು ಸುತೀಕ್ಷ್ಣನಿಂದ ಸತ್ಕೃತರಾಗಿ ಅಲ್ಲಿಯೇ ಆ ರಾತ್ರಿಯಲ್ಲಿ ಮಲಗಿದ್ದರು. ಬೆಳಗಾದಮೇಲೆ ರಾಮನು ಸಕಾಲಕ್ಕೆ ಎದ್ದು, ಕಮಲದ

---

1. ನಿನ್ನಿದಿರಾಗಿಯೇ ನಿನ್ನಾಶ್ರಮದ ಮೃಗಗಳನ್ನು ಕೊಂದರೆ, ನಿನಗೆ ದುಃಖವನ್ನುಂಟುಮಾಡಿದಂತಾಗುವುದರಿಂದ ನಿನಗೆ ಮರೆಯಾಗಿ ಬೇರೊಂದು ಕಡೆಯಲ್ಲಿ ಅವುಗಳನ್ನು ಕೊಲ್ಲುವೆನೆಂದು ಭಾವವು. ಮಾರೀಚನು ರಾವಣನೊಡನೆ ಹೇಳುವ ಮಾತಿನಿಂದ ಇದು ಸ್ಪಷ್ಟವಾಗುವುದು (ಗೋವಿಂದರಾಜೀಯವು).

2. ಇಲ್ಲಿ ಸೀತೆಗೆ ಆಹಾರವನ್ನು ಕೊಟ್ಟುದಾಗಿ ಕಾಣಿಸದಿದ್ದರೂ, ರಾಮನು ತಿಂದು ಮಿಕ್ಕುದನ್ನೇ ಸೀತೆಯೂ ಭುಜಿಸಿದಳೆಂದು ಊಹ್ಯವು.

ವಾಸನೆಯುಳ್ಳ ಶೀತಲವಾದ ನೀರಿನಲ್ಲಿ ಸೀತೆಯೊಡಗೂಡಿ ಸ್ನಾನಾದಿ ಕಾರ್ಯಗಳನ್ನು ತೀರಿಸಿಕೊಂಡು ಸಿದ್ಧನಾಗಿದ್ದನು. ಹೀಗೆ ಶುಚೀಭೂತರಾದ ಸೀತಾರಾಮಲಕ್ಷ್ಮಣರು ಮೂವರೂ ಆ ಋಷ್ಯಾಶ್ರಮದಲ್ಲಿ ಪ್ರಾತಃಕಾಲದಲ್ಲಿ ನಡೆಸಬೇಕಾದ ಅಗ್ನಿಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನಡೆಸಿ, ದೇವದೇವನಾದ ಶ್ರೀಮನ್ನಾರಾಯಣನನ್ನು ಉಪಾಸನೆ ಮಾಡಿದರು. [1]ಅಷ್ಟರಲ್ಲಿ ಚೆನ್ನಾಗಿ ಸೂರ್ಯೋದಯವಾಯಿತು. ಆಗ ಅವರೆಲ್ಲರೂ ಸುತೀಕ್ಷ್ಣಮಹಾಮುನಿಯ ಬಳಿಗೆ ಬಂದು ವಿನಯದಿಂದ ಆತನನ್ನು ಕುರಿತು “ಎಲೈ ಮಹಾತ್ಮನೆ! ಪೂಜ್ಯನಾದ ನಿನ್ನ ಸತ್ಕಾರದಿಂದ ನಾವು ಬಹಳ ಸಂತುಷ್ಟರಾದೆವು. ನಿನ್ನೆಯ ರಾತ್ರಿಯನ್ನು ಸುಖವಾಗಿ ಕಳೆದೆವು. ಮುಂದಿನ ಪ್ರಯಾಣಕ್ಕೆ ನಿನ್ನ ಅನುಜ್ಞೆಯನ್ನು ಕೇಳುವುದಕ್ಕಾಗಿ ಬಂದೆವು. ನಮ್ಮನ್ನು ಹಿಂಬಾಲಿಸಿ ಬಂದಿರುವ ಈ ಋಷಿಗಳು ಬಹಳವಾಗಿ ನಿರ್ಬಂಧಿಸುತ್ತಿರುವುದರಿಂದ, ಈ ದಂಡಕಾರಣ್ಯದಲ್ಲಿರುವ ಪುಣ್ಯಶೀಲರಾದ ಋಷಿಗಳೆಲ್ಲರ ಆಶ್ರಮಗಳನ್ನೂ ನೋಡಿಬರಬೇಕೆಂದಿರುವೆವು. ಪರಮಧಾರ್ಮಿಕರಾಗಿಯೂ, ತಪಸ್ವಿಗಳಾಗಿಯೂ, ಜಿತೇಂದ್ರಿಯರಾಗಿಯೂ, ಉರಿಯಿಲ್ಲದ ಕೆಂಡದಂತೆ ಹೊರಕ್ಕೆ ಕಾಣದ ಮಹಾಮಹಿಮೆಯುಳ್ಳವರಾಗಿಯೂ ಇರುವ ಈ ಮಹರ್ಷಿಗಳೂ, ನಾವೂ, ನಿನ್ನ ಅನುಜ್ಞೆಗಾಗಿಯೇ ಇದಿರುನೋಡುತ್ತಿರುವೆವು. ಸಾಧುಸಹವಾಸವಿಲ್ಲದ ಕೆಟ್ಟ ರಾಜನು ದುಷ್ಕಾಲದಲ್ಲಿ ಹುಟ್ಟಿ, ದುರ್ಮಾರ್ಗದಿಂದ ಹಣವನ್ನು ಸಂಪಾದಿಸಿ, ಈ ಐಶ್ವರ್ಯವು ಹೆಚ್ಚಿದಹಾಗೆಲ್ಲಾ ಗರ್ವದಿಂದ ಕ್ರಮಕ್ರಮವಾಗಿ ಬೀಗುವಂತೆ, ಈ ಸೂರ್ಯನು ತೀಕ್ಷ್ಣವಾದ ಕಾಂತಿಯನ್ನು ಪ್ರಸರಿಸಿ ಸಂತಾಪವನ್ನುಂಟುಮಾಡುವುದಕ್ಕೆ ಮೊದಲೇ ನಾವು ಪ್ರಯಾಣಮಾಡಬೇಕೆಂದಿರುವೆವು” ಎಂದು ಹೇಳಿ, ಆ ಮೂವರೂ ಋಷಿಯ ಪಾದಗಳಿಗೆ ನಮಸ್ಕರಿಸಿದರು. ಆಗ ಸುತೀಕ್ಷ್ಣನು ನಮಸ್ಕರಿಸುತ್ತಿರುವ ರಾಮಲಕ್ಷ್ಮಣರನ್ನೆತ್ತಿ, ಪ್ರೀತಿಯಿಂದ ಅವರನ್ನಪ್ಪಿಕೊಂಡು, “ವತ್ಸ ರಾಮನೆ! ಲಕ್ಷ್ಮಣನನ್ನೂ, ಛಾಯೆಯಂತೆ ಎಡೆಬಿಡದೆ ನಿನ್ನನ್ನು ಅನುವರ್ತಿಸುತ್ತಿರುವ

---

1. ಹೋಮಾನಂತರದಲ್ಲಿ ಸೂರ್ಯನು ಉದಿಸುತ್ತಿರುವುದಾಗಿ ಸೂರ್ಯೋಪಸ್ಥಾನವು ಹೇಳಲ್ಪಡುವುದರಿಂದ ಸೂರ್ಯೋದಯಕ್ಕೆ ಮೊದಲು ನಡೆಸಬೇಕಾದ ಹೋಮಪಕ್ಷವು ಇಲ್ಲಿ ಸೂಚಿತವಾಗುವುದು. ಇದರಿಂದ ಕಾತ್ಯಾಯನಸೂತ್ರಕ್ರಮವಾಗಿ ರಘುವಂಶದವರ ಅನುಷ್ಠಾನವಿತ್ತೆಂದು ತಿಳಿಯುವುದು.

ಈ ಸೀತೆಯನ್ನೂ ಕರೆದುಕೊಂಡು ಸುಖವಾಗಿ ಹೋಗಿಬಾ! [1]ನಿನಗೆ ಮಾರ್ಗವು ನಿರುಪದ್ರವವಾಗಿ ಸಾಗಲಿ! ತಪಸ್ಸಿನಿಂದ ಆತ್ಮಧ್ಯಾನಪರರಾಗಿ ದಂಡಕಾರಣ್ಯದಲ್ಲಿರುವ ಋಷಿಗಳ ಆಶ್ರಮವೆಲ್ಲವನ್ನೂ ನೋಡಿ ಬಾ! ಆ ಆಶ್ರಮಗಳೆಲ್ಲವೂ ಬಹು ಮನೋಹರವಾಗಿರುವುವು. ಅಲ್ಲಿನ ವನಗಳಲ್ಲಿ ಸಮೃದ್ಧವಾದ ಫಲಮೂಲಗಳೂ ತುಂಬಿರುವುವು. ಅಲ್ಲಲ್ಲಿ ಪ್ರಶಸ್ತವಾದ ಮೃಗಗಳಿರುವುವು. ಪಕ್ಷಿಗಳೂ ಪರಸ್ಪರ ವೈರವನ್ನು ಬಿಟ್ಟು ಶಾಂತಸ್ವಭಾವದಿಂದಿರುವುವು. ಅಲ್ಲಿನ ಮಡುಗಳೂ ಕೊಳಗಳೂ ಅರಳಿದ ತಾವರೆಹೂಗಳಿಂದ ತುಂಬಿ ತಿಳಿನೀರಿನಿಂದ ಅತಿಮನೋಹರವಾಗಿರುವುವು. ನೋಡುವುದಕ್ಕೆ ಅತಿ ರಮಣೀಯವಾದ ಗಿರಿನದಿಗಳಿಂದಲೂ, ನವಿಲುಗಳ ಕೇಕಾಧ್ವನಿಯಿಂದಲೂ ಮನೋಹರವಾದ ಅರಣ್ಯಪ್ರದೇಶಗಳು ಅನೇಕವಾಗಿರುವುವು. ಅವೆಲ್ಲವನ್ನೂ ನೀವು ನೋಡಿ ಬರಬೇಕು. ವತ್ಸಲಕ್ಷ್ಮಣನೆ! ನೀನೂ ಹೋಗಿ ಬಾ. ರಾಮಾ, ಹೋಗಿಬರುವೆಯಾ? ಎಲೈ ವತ್ಸರೆ! ನೀವು ಮತ್ತೊಂದಾವರ್ತಿ ನಮ್ಮಾಶ್ರಮಕ್ಕೆ ತಪ್ಪದೆ ಬಂದುಹೋಗಬೇಕು" ಎಂದನು. ಇದನ್ನು ಕೇಳಿ ರಾಮನು ಹಾಗೆಯೇ ಆಗಲೆಂದೊಪ್ಪಿ, ಲಕ್ಷ್ಮಣಸಹಿತನಾಗಿ ಆ ಋಷಿಗೆ ಪ್ರದಕ್ಷಿಣವನ್ನು ಮಾಡಿ, ಹೊರಡುವುದಕ್ಕೆ ಸಿದ್ಧನಾದನು. [2]ಆಗ ಸೀತೆಯು ಆ ಸಹೋದರರಿಬ್ಬರಿಗೂ ಉತ್ತಮವಾದ ಎರಡು ಬತ್ತಳಿಕೆಗಳನ್ನೂ, ಎರಡು ಬಿಲ್ಲುಗಳನ್ನೂ, ಶುದ್ಧವಾದ ಎರಡು ಕತ್ತಿಗಳನ್ನೂ ತಂದುಕೊಟ್ಟಳು. ರಾಮಲಕ್ಷ್ಮಣರಿಬ್ಬರೂ ಆ ಬತ್ತಳಿಕೆಗಳನ್ನು ಹೆಗಲಿಗೆ ಕಟ್ಟಿಕೊಂಡು, ಧನುಸ್ಸನ್ನು ಕೈಯಲ್ಲಿ ಹಿಡಿದು, ಅದನ್ನು ಟಂಕಾರ ಮಾಡುತ್ತ ಆ ಆಶ್ರಮದಿಂದ ಹೊರಟರು. ಹೀಗೆ ಶ್ರೀಮಂತರಾಗಿಯೂ ತೇಜಸ್ವಿ

---

1. ಇದಕ್ಕೆ "ಅರಿಷ್ಟಂ ಗಚ್ಛ ಪಂಥಾನಂ" ಎಂದು ಮೂಲವು. ಇದರಿಂದ ರಾವಣವಧಕ್ಕೆ ಸುತೀಕ್ಷ್ಣನು ಅನುಜ್ಞೆಕೊಟ್ಟುದಾಗಿ ಸೂಚಿತವಾಗುವುದು.

2. ಇದರಿಂದ ತೋರಿಬರುವ ವಿಷಯವೇನೆಂದರೆ, ಆಶ್ರಮವನ್ನು ಪ್ರವೇಶಿಸುವಾಗ ತಮಗೆ ಆಯುಧಗಳಿಂದೇನುಪಯೋಗವೆಂದು ತಿಳಿದು ಸೀತೆಯು ಅವುಗಳನ್ನು ಆ ಋಷಿಯ ಮನೆಯಲ್ಲಿಯೇ ಒಂದಾನೊಂದು ಕಡೆಯಲ್ಲಿಟ್ಟಿದ್ದಳು. ಆದರೆ ರಾಮನು "ಅಮಾರ್ಗದಿಂದ" ಎಂದು ಹೇಳಿದ ವಾಕ್ಯಗಳಿಂದಲೂ, "ಮಾರ್ಗವು ನಿರುಪದ್ರವವಾಗಿರಲಿ" ಎಂದು ಋಷಿಯು ಹೇಳಿದ ವಾಕ್ಯಗಳಿಂದಲೂ, ಅವರ ಮನೋಭಿಪ್ರಾಯವನ್ನು ತಿಳಿದು ತಾನೇ ಅವುಗಳನ್ನು ಹಿಂತಿರುಗಿ ತಂದುಕೊಟ್ಟುದಾಗಿ ತಿಳಿದುಬರುವುದು.

ಗಳಾಗಿಯೂ, ರೂಪಾತಿಶಯದಿಂದ ಮೆರೆಯುವವರಾಗಿಯೂ ಇರುವ ರಾಮ ಲಕ್ಷ್ಮಣರಿಬ್ಬರೂ ಸೀತೆಯನ್ನೂ ಕರೆದುಕೊಂಡು ಅಲ್ಲಿಂದ ಪ್ರಯಾಣ ಮಾಡಿದರು.

ಇಲ್ಲಿಗೆ ಎಂಟನೆಯ ಸರ್ಗವು.

---

ತಾನು ರಾಕ್ಷಸರೆಲ್ಲರನ್ನೂ ಕೊಲ್ಲುವುದಾಗಿ ಋಷಿಗಳ ಮುಂದೆ ರಾಮನು ಪ್ರತಿಜ್ಞೆ ಮಾಡಿದುದನ್ನು ಕೇಳಿ, ಸೀತೆಯು ಭಯಪಟ್ಟು ವೈರಬುದ್ಧಿಯಿಲ್ಲದ ರಾಕ್ಷಸರನ್ನು ಕೊಲ್ಲದಿರಬೇಕೆಂದು ಪ್ರೇಮಪೂರ್ವಕವಾಗಿ ರಾಮನನ್ನು ಪ್ರಾರ್ಥಿಸಿದುದು.

ಸುತೀಕ್ಷ್ಣನ ಅನುಮತಿಯನ್ನು ಪಡೆದು, ಅಲ್ಲಿಂದ ಪ್ರಯಾಣಮಾಡಿದ ತನ್ನ ಪತಿಯಾದ ರಾಮನನ್ನು ನೋಡಿ, ಸೀತೆಯು [1]ಹಿತವಾಕ್ಯಗಳಿಂದ "ಎಲೈ ಆರ್ಯನೆ! ನೀನು ನಡೆಸಿಕೊಂಡು ಬರುವ ಈ ಮುನಿಧರ್ಮವಾದರೂ ಬಹಳ ಮಹತ್ತಾದುದು. ಅತಿಸೂಕ್ಷ್ಮ ವಿಚಾರದಿಂದಲೇ ಈ ಧರ್ಮವನ್ನು ಪಡೆಯ ಬೇಕು. ಆ ವಿಚಾರವು ಬೇರೊಂದೂ ಅಲ್ಲವು. ತಮ್ಮ ತಮ್ಮ ಸ್ವೇಚ್ಛೆಯಿಂದ ಪ್ರಾಪ್ತವಾಗುವ ವ್ಯಸನಗಳನ್ನು ಮೊದಲು ತ್ಯಜಿಸಬೇಕು. ಅಂತಹ ವ್ಯಸನ ಗಳನ್ನು ತ್ಯಜಿಸಿದವರಿಗೆ ಮಾತ್ರವೇ ಇದನ್ನು ಸಂಪಾದಿಸುವುದಕ್ಕೆ ಶಕ್ಯವಾಗು ವುದು. ವಿಶೇಷವಾಗಿ ಕಾಮಜನ್ಯಗಳಾದ ಈ ವ್ಯಸನಗಳು ಲೋಕದಲ್ಲಿ ಮುಖ್ಯ ವಾಗಿ ಮೂರು ಬಗೆಯಾಗಿರುವುವು. ಅಸತ್ಯವನ್ನಾಡುವುದು ಮೊದಲನೆಯದು.

---

1. ಇಲ್ಲಿ "ಹೃದ್ಯಯಾ ಸ್ನಿಗ್ಧಯಾ ವಾಚಾ" ಎಂದು ಮೂಲವು. ಸ್ನಿಗ್ಧವಾಕ್ಯೆಂದರೆ ಸ್ನೇಹಪ್ರವೃತ್ತವಾದ ವಾಕ್ಯೆಂದರ್ಥವು. ಇದರಿಂದ ಸೀತೆಯು ಹೇಳುವುದೆಲ್ಲವೂ ರಾಮನಲ್ಲಿ ತನಗಿರುವ ಸ್ನೇಹದಿಂದಲೇ ಹೊರತು ಬೇರೆಯಲ್ಲವೆಂದು ಸೂಚಿತವಾಗುವುದು. ಅದ ಕ್ಕಾಗಿಯೇ ಇಲ್ಲಿ ರಾಮನು ಋಷಿಗಳಿಗೆ ಪ್ರತಿಜ್ಞೆಮಾಡಿಕೊಟ್ಟಿರುವ ವಿಷಯವೂ, ಆ ಪ್ರತಿಜ್ಞೆ ಯನ್ನು ಯಾರೂ ತಪ್ಪಿಸಲಾರರೆಂಬ ವಿಷಯವೂ ಸೀತೆಗೆ ಚೆನ್ನಾಗಿ ತಿಳಿದಿದ್ದರೂ, ರಾಮನಿಗೆ ರಾಕ್ಷಸರೊಡನೆ ವಿರೋಧವುಂಟಾದರೆ, ಅತನು ತನ್ನನ್ನಗಲಿ ಕ್ಲೇಶಕ್ಕೆ ಗುರಿಯಾಗುವನೆಂದೆಣಿಸಿ ಪ್ರೇಮಾಂಧೆಯಾಗಿ ಈ ಮಾತನ್ನಾಡಿರುವಳೆಂದು ತಿಳಿಯಬೇಕು.

ಇದೊಂದು ಪ್ರಬಲವಾದ ವ್ಯಸನವು. ಪರದಾರ ಗಮನ, ದ್ವೇಷಕಾರಣವಿಲ್ಲದೆ ಇತರರನ್ನು ಹಿಂಸಿಸುವುದು, ಇವೆರಡೂ ಅದಕ್ಕಿಂತಲೂ ಪ್ರಬಲತರವಾದುವುಗಳು. ಈ ಮೂರು ವ್ಯಸನಗಳಲ್ಲಿ ಅಸತ್ಯ ವಾಕ್ಯವೆಂಬುದು ನಿನ್ನಲ್ಲಿ ಕನಸಿನಲ್ಲಿಯೂ ಉಂಟಾಗಲಾರದು. ಹಾಗೆಯೇ ಅಧರ್ಮಹೇತುವಾದ ಪರದಾರಗಮನವೆಂಬುದರ ಪ್ರಸಕ್ತಿಯೇ ನಿನ್ನಲ್ಲಿ ತಲೆತೋರದು. ಹೀಗೆ ಇವೆರಡು ವ್ಯಸನಗಳ ಸಂಬಂಧವೇ ನಿನಗಿಲ್ಲವು. ಇದಕ್ಕೆ ಮೊದಲು ಹಿಂದೆ ಯಾವಾಗಲೂ ನಿನ್ನಲ್ಲಿದ್ದುದೂ ಇಲ್ಲ. ಇವುಗಳನ್ನು ನೀನು ಮನಸ್ಸಿನಿಂದಲಾದರೂ ಎಣಿಸಿದುದಿಲ್ಲ. ನೀನು ಯಾವಾಗಲೂ ಸ್ವಭಾರ್ಯೆಯಲ್ಲಿಯೇ ಆಸಕ್ತಿಯುಳ್ಳವನು. ಧರ್ಮಮಾರ್ಗ ವನ್ನು ಎಂದಿಗೂ ತಪ್ಪಿದವನಲ್ಲ. ಸತ್ಯವೆಂಬುದೇ ನಿನ್ನ ದೃಢ ಪ್ರತಿಜ್ಞೆಯಾಗಿರು ವುದು. ತಂದೆಯಾಜ್ಞೆಯನ್ನು ಮೀರಲಾರದೆ, ಕೊಟ್ಟಮಾತಿಗೆ ಕಟ್ಟುಬಿದ್ದು ಹೀಗೆ ಕಾಡಿನಲ್ಲಿ ಕಷ್ಟಪಡುತ್ತಿರುವುದೇ ನಿನ್ನ ಸತ್ಯಸಂಧತೆಗೆ ಸಾಕಾದ ನಿದರ್ಶನ ವಾಗಿರುವುದು. ನೀನು ಸತ್ಯಸಂಧನೆಂಬುದೂ ನಿಜವು! ನೀನು ಶ್ರೀಮಂತ ನೆಂಬುದೂ ನಿಜವು! ಇದಲ್ಲದೆ ನೀನು ವಯಸ್ಸಿನಲ್ಲಿ ಮಾತ್ರವೇ ಲಕ್ಷ್ಮಣನಿಗೆ ಹಿರಿಯನಲ್ಲ. ವೈರಾಗ್ಯಾದಿ ಗುಣಗಳಿಂದಲೂ ನೀನು ಆತನಿಗೆ ಹಿರಿಯನು. ಸತ್ಯಧರ್ಮಗಳೆರಡೂ ನಿನ್ನಲ್ಲಿ ಸ್ಥಿರವಾಗಿಯೇ ನೆಲಸಿಬಿಟ್ಟಿರುವುವು. ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ನಿನ್ನಲ್ಲಿಲ್ಲದ ಗುಣಗಳಿಲ್ಲ. ಐಶ್ವರ್ಯ ವೈರಾಗ್ಯಾದಿ ಸಮಸ್ತ ಗುಣಗಳಿಗೂ ನೀನು ನಿತ್ಯಾಶ್ರಯನಾಗಿರುವೆ. ಜಿತೇಂದ್ರಿ ಯರಾದ ಮಹರ್ಷಿಗಳಿಗಲ್ಲದೆ, ಈ ಗುಣಗಳು ಬೇರೆಯವರಿಗೆ ಸ್ವಾಧೀನವಾಗಿ ನಿಲ್ಲಲಾರವು. ನೀನು ಜಿತೇಂದ್ರಿಯನೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಕಂದಿಕುಂದದ ನಿನ್ನ ದೇಹದ ಸೌಂದರ್ಯಾತಿಶಯವೇ ನೀನು ಜಿತೇಂದ್ರಿಯ ನೆಂಬುದಕ್ಕೆ ನಿದರ್ಶಕವಾಗಿರುವುದು. ಆದರೆ, ಎಲೈ ಪ್ರಿಯನೆ! ವೈರಕಾರಣ ವಿಲ್ಲದೆ ಇತರರನ್ನು ಹಿಂಸಿಸುವುದೆಂಬ ಮೂರನೆಯ ಮಹಾವ್ಯಸನವೊಂದನ್ನು ಹೇಳಿದೆನಲ್ಲವೆ? ಇದೇ ಲೋಕದಲ್ಲಿ ಮಹಾ ರೌದ್ರವಾದ ವ್ಯಸನವು. ಜ್ಞಾನ ಹೀನರಾದ ಪಾಮರರು, ತಮ್ಮ ಅಜ್ಞತೆಯಿಂದ ಇಂತಹ ವ್ಯಸನದಲ್ಲಿ ಪ್ರವರ್ತಿ ಸುವುದುಂಟು. ಈಗ ನೀನೂ ಅದರಲ್ಲಿ ಪ್ರವರ್ತಿಸಬೇಕಾಗಿ ಬಂದಿರುವುದಲ್ಲವೆ? ನೀನು ದಂಡಕಾರಣ್ಯದಲ್ಲಿರುವ ಋಷಿಗಳನ್ನು ಕಾಪಾಡುವುದಕ್ಕಾಗಿ ಯುದ್ಧ ದಲ್ಲಿ ರಾಕ್ಷಸರನ್ನು ಕೊಲ್ಲುವುದಾಗಿ ಅವರಿಗೆ ಪ್ರತಿಜ್ಞೆಮಾಡಿಕೊಟ್ಟಿರುವೆ.

ಇದಕ್ಕಾಗಿಯೇ ಧನುರ್ಬಾಣಗಳನ್ನು ಹಿಡಿದು ಲಕ್ಷ್ಮಣಸಹಿತನಾಗಿ ಈ ದಂಡಕಾರಣ್ಯಕ್ಕೂ ಬಂದಿರುವೆ. ಹೀಗೆ ನೀನು ಶಸ್ತ್ರವನ್ನು ಹಿಡಿದು ಸಿದ್ಧನಾಗಿ ಪ್ರಯಾಣಮಾಡಬಂದಿರುವುದನ್ನೂ, ನಿನ್ನ ಸತ್ಯಸಂಧತೆ, ಪರದಾರವಿಮುಖತೆ ಮೊದಲಾದ ಸುಗುಣಗಳನ್ನೂ ಆಲೋಚಿಸಿ ನೋಡಿದರೆ, ನಿನ್ನ ಶ್ರೇಯಸ್ಸಿಗಾಗಿಯೇ ಅನವರತವೂ ಹಾರೈಸುತ್ತಿರುವ ನನ್ನ ಮನಸ್ಸು ಸ್ವಲ್ಪ ವ್ಯಾಕುಲವಾಗುವುದು. ಮೊದಲು ನೀನು ಈ ದಂಡಕಾರಣ್ಯಕ್ಕೆ ಬಂದುದೇ ನನಗೆ ಇಷ್ಟವಿಲ್ಲ. ಈಗಲಾದರೋ ನೀನು ಧನುರ್ಬಾಣಗಳನ್ನೂ ಹಿಡಿದು ಲಕ್ಷ್ಮಣನೊಡಗೂಡಿ ರಾಕ್ಷಸವಧಾರ್ಥವಾಗಿಯೇ ಸಿದ್ಧನಾಗಿ ಬಂದು ನಿಂತಿರುವೆ! ಈ ವನದಲ್ಲಿ ತಿರುಗುವ ರಾಕ್ಷಸರನ್ನು ಕಂಡಾಗ ಅಲ್ಲಲ್ಲಿ ಅವರ ಮೇಲೆ ಬಾಣಗಳನ್ನು ಪ್ರಯೋಗಿಸಬೇಕಾಗಿಬರುವುದು. ಬೆಂಕಿಯ ಸಮೀಪದಲ್ಲಿ ಸೌದೆಯನ್ನಿಟ್ಟರೆ ಅದರ ತೇಜಸ್ಸು ಮತ್ತಷ್ಟು ಹೆಚ್ಚುವುದಲ್ಲವೆ? ಅದರಂತೆಯೇ ಕ್ಷತ್ರಿಯರ ಕೈಯಲ್ಲಿ ಧನುರ್ಬಾಣಗಳಿದ್ದರೆ ಅವರ ವೀರ್ಯಕ್ಕೆ ಉತ್ತೇಜನವನ್ನು ಕೊಡುವುದು. ಇದಕ್ಕೆ ನಿದರ್ಶನವಾಗಿ ಒಂದಿತಿಹಾಸವನ್ನು ಹೇಳುವೆನು ಕೇಳು! ಮೊದಲು ಒಂದಾನೊಂದು ಕಾಲದಲ್ಲಿ ಅನೇಕ ಮೃಗಪಕ್ಷಿಗಳಿಗೆ ಸುಖಾಶ್ರಯವಾದ ಒಂದು ಪುಣ್ಯವನದಲ್ಲಿ, ಮಹಾತಪಸ್ವಿಯಾಗಿಯೂ, ಸತ್ಯವಾದಿಯಾಗಿಯೂ, ಶುಚಿಯಾಗಿಯೂ ಇರುವ ಋಷಿಯೊಬ್ಬನಿದ್ದನಂತೆ! ಆತನ ತಪಸ್ಸನ್ನು ಕೆಡಿಸಬೇಕೆಂಬ ಉದ್ದೇಶದಿಂದ ಶಚೀಪತಿಯಾದ ಇಂದ್ರನು, ಒಬ್ಬ ವೀರಭಟನಂತೆ ಆಕಾರವನ್ನು ಧರಿಸಿ, ಖಡ್ಗಪಾಣಿಯಾಗಿ ಆತನ ಆಶ್ರಮಕ್ಕೆ ಬಂದನು. ಅಲ್ಲಿ ತಾನು ಹಿಡಿದಿದ್ದ ತೀಕ್ಷ್ಣವಾದ ಕತ್ತಿಯನ್ನು ತಪಸ್ಸಿನಲ್ಲಿದ್ದ ಆ ಋಷಿಯ ಕೈಗೆ ಕೊಟ್ಟು, ಅದನ್ನು ತಾನು ಹಿಂತಿರುಗಿ ಕೇಳುವವರೆಗೂ ಆ ಆಶ್ರಮದಲ್ಲಿಯೇ ತನ್ನ ಸ್ವಾಧೀನದಲ್ಲಿಟ್ಟಿರುವಂತೆ ಕೇಳಿಕೊಂಡನು. ಋಷಿಯು ಆ ಶಸ್ತ್ರವನ್ನು ತೆಗೆದುಕೊಂಡು ತನ್ನಲ್ಲಿ ನಂಬಿಕೆಯಿಂದ ನ್ಯಾಸರೂಪವಾಗಿಟ್ಟಿರುವ ಆ ವಸ್ತುವನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತ ಅಲ್ಲಲ್ಲಿ ತಿರುಗುತ್ತಿದ್ದನು. ಆತನು ಕಾಡಿನಲ್ಲಿ ಫಲಮೂಲಗಳನ್ನು ಸಂಗ್ರಹಿಸಿ ತರುವುದಕ್ಕಾಗಿ ಸಂಚಾರಹೊರಡುವಾಗಲೂ ಕೂಡ, ಆ ಶಸ್ತ್ರವನ್ನು ಬಿಡದೆ ಕೈಯಲ್ಲಿಯೇ ಇಟ್ಟುಕೊಂಡು ತಿರುಗುತ್ತಿದ್ದನು. ಹೀಗೆ ಆ ತಪಸ್ವಿಯು, ತನ್ನಲ್ಲಿ ನಂಬಿಕೆಯಿಂದ ನ್ಯಾಸರೂಪವಾಗಿಟ್ಟಿರುವ ಶಸ್ತ್ರವನ್ನು ಕಾಪಾಡಿಡುವುದೊಂದರಲ್ಲಿಯೇ ದೃಷ್ಟಿಯುಳ್ಳವನಾಗಿ, ಅದನ್ನು ಕ್ಷಣಕಾಲವೂ ಅಗಲಿರಲಾರದೆ ಹೊತ್ತುಕೊಂಡೇ ತಿರುಗುತ್ತಿರಲು,

ದಿನದಿನಕ್ಕೆ ಆತನಿಗೆ ತಪಸ್ಸಿನಲ್ಲಿ ಆಸೆಯು ತಪ್ಪಿತು. ಆಯುಧಧಾರಿಗಳಿಗುಂಟಾಗತಕ್ಕ ರೌದ್ರಬುದ್ಧಿಯುಂಟಾಯಿತು. ಅಲ್ಲಲ್ಲಿ ಸಿಕ್ಕಿದ ಜಂತುಗಳನ್ನು ಕೊಲ್ಲಲಾರಂಭಿಸಿದನು. ಆತನಿಗೆ ಮೊದಲಿದ್ದ ಧರ್ಮಬುದ್ಧಿಯೇ ಹೋಯಿತು. ಅಧರ್ಮದಲ್ಲಿಯೇ ಪ್ರವರ್ತಿಸಲಾರಂಭಿಸಿದನು. ಹೀಗೆ ಶಸ್ತ್ರಸಂಬಂಧದಿಂದ ಆತನಿಗೆ ಮೃಗಹಿಂಸೆಯಲ್ಲಿ ಮನಸ್ಸು ಪ್ರವರ್ತಿಸಿ, ಕೊನೆಗೆ ಆತನು ನರಕದಲ್ಲಿಯೂ ಬಿದ್ದುಬಿಟ್ಟನು. ಆಯುಧದ ಸಹವಾಸದಿಂದ ಮನುಷ್ಯನ ಬುದ್ಧಿಯು ಹೀಗೆ ವಿಪರೀತವಾಗಿ ಪರಿಣಮಿಸಿತೆಂದು ಹಿರಿಯರಿಂದ ನಾನು ಕೇಳಿರುವೆನು. ಅಗ್ನಿ ಸಂಬಂಧವು ಹೇಗೋ, ಹಾಗೆಯೇ ಆಯುಧ ಸಂಬಂಧವೂ ವಿಕಾರಹೇತುವೆಂದು ದೊಡ್ಡವರು ಹೇಳುವರು. ಆದರೆ ಇವೊಂದೂ ನಿನಗೆ ತಿಳಿಯದ ವಿಷಯಗಳಲ್ಲ. ನನಗೆ ನಿನ್ನಲ್ಲಿರುವ ಪ್ರೇಮಾತಿಶಯದಿಂದಲೂ, ನೀನು ನನ್ನಲ್ಲಿ ತೋರಿಸುತ್ತಿರುವ ಸಲಿಗೆಯಿಂದಲೂ, ನಿನಗೆ ತಿಳಿದ ವಿಷಯವನ್ನೇ ನಾನು ಪುನಃ ಜ್ಞಾಪಿಸಿದೆನೇ ಹೊರತು, ನಿನಗೆ ಬುದ್ಧಿಕಲಿಸುವುದಕ್ಕಾಗಿ ಹೇಳಿದವಳಲ್ಲ. ಆದುದರಿಂದ, ಎಲೈ ಪ್ರಿಯನೆ! ನನ್ನ ಪ್ರಾರ್ಥನೆಯನ್ನು ಲಾಲಿಸು! ನೀನು ದಂಡಕಾರಣ್ಯದಲ್ಲಿ ರಾಕ್ಷಸನ್ನು ಕೊಲ್ಲುವಾಗ, ನಿನ್ನ ಕೈಯಲ್ಲಿ ಧನುರ್ಬಾಣಗಳು ಸ್ವಾಧೀನವಾಗಿರುವುವೆಂಬ ಮಾತ್ರಕ್ಕಾಗಿ ನಿರಪರಾಧಿಗಳಾದವರನ್ನು ಕೊಲ್ಲುವ ಕ್ರೂರಬುದ್ಧಿಯನ್ನು ಬಿಟ್ಟುಬಿಡಬೇಕು! ಎಲೈ ವೀರನೆ! ನಿರಪರಾಧಿಗಳನ್ನು ಕೊಲ್ಲುವುದು ನಿನಗೆ ಸರ್ವಥಾ ಸಮ್ಮತವಲ್ಲವು. ಕಾಡಿನಲ್ಲಿರುವ ಋಷಿಗಳಿಗೆ ಯಾರಾದರೂ ಉಪದ್ರವವನ್ನು ಕೊಡುವುದಾಗಿದ್ದರೂ ಅಂತಹ ಋಷಿಕಂಟಕರನ್ನು ಹೆದರಿಸಿ ದೂರಕ್ಕಟ್ಟಿ, ಋಷಿಗಳಿಗೆ ಬಾಧೆಯಿಲ್ಲದಂತೆ ಮಾಡುವುದೇ ವೀರರಾದ ಕ್ಷತ್ರಿಯರು ತಮ್ಮ ಬಿಲ್ಲಿನಿಂದ ನಡೆಸಬೇಕಾದ ಕಾರ್ಯವೇ ಹೊರತು, ಅವರನ್ನು ಕೊಲ್ಲುವುದಲ್ಲ. ಒಂದು ವೇಳೆ ಆಶ್ರಿತರ ರಕ್ಷಣಾರ್ಥವಾಗಿಯಾದರೂ ಧನುರ್ಬಾಣಗಳು ಸಿದ್ಧವಾಗಿ ಕೈಯಲ್ಲಿರಬೇಕಲ್ಲವೆ? "ಎಂದು ನೀನು ಕೇಳಬಹುದು. ಅದೂ ಈಗ ನಮಗೆ ಉಚಿತವಲ್ಲ. ರಾಜ್ಯಪಾಲನವನ್ನು ಮಾಡುವವರಿಗೇ ಅದು ಯೋಗ್ಯವು. ಶಸ್ತ್ರವೆಲ್ಲಿ! ಈ ತಪೋವನವೆಲ್ಲಿ! ಕ್ಷತ್ರಿಯಧರ್ಮವೆಲ್ಲಿ! ತಪಸ್ಸೆಲ್ಲಿ! ಇವೆಲ್ಲವೂ ಪರಸ್ಪರ ವಿರುದ್ಧ ಧರ್ಮಗಳಲ್ಲವೆ? ಆದುದರಿಂದ ನಾವು ಕಾಲದೇಶೋಚಿತವಾದ ಧರ್ಮವನ್ನೇ ಅವಲಂಬಿಸಬೇಕಲ್ಲವೆ? ನಾವು ಕಾಡಿನಲ್ಲಿರುವವರೆಗೂ ನಮಗೆ ತಪಸ್ಸೇ ಯೋಗ್ಯವಾದುದು. ಆ ತಪಸ್ಸಿನಲ್ಲಿಯೇ, ನಾವು ನಿರತರಾಗಿರಬೇಕೇ ಹೊರತು ಆಯುಧವಾಗಲಿ,

ಬೇರೆ ಯಾವ ಕ್ಷತ್ರಿಯ ಧರ್ಮವಾಗಲಿ ನಮಗೆ ಯೋಗ್ಯವಲ್ಲ ! "ಹಾಗಾದರೆ ಸ್ವಧರ್ಮವನ್ನು ಬಿಟ್ಟು ಕುಲವಿರುದ್ಧವಾದ ಧರ್ಮವನ್ನವಲಂಬಿಸಿದಂತಾಗುವುದಿಲ್ಲವೆ ?" ಎಂದು ನೀನು ಶಂಕಿಸಬಹುದು. ಆರ್ಯನೆ ! ಶಸ್ತ್ರಧಾರಣವಿಲ್ಲದಿದ್ದ ಮಾತ್ರಕ್ಕೆ ಧರ್ಮವಿರೋಧವೇನೂ ಬಾರದು. ಶಸ್ತ್ರಸಹವಾಸದಿಂದ ಬುದ್ಧಿಯು ಕೆಡುವುದು. ನೀನು ಪುನಃ ಅಯೋಧ್ಯೆಗೆ ಹೋದಮೇಲೆ ಕ್ಷತ್ರಿಯಧರ್ಮಕ್ಕೆ ಬೇಕಾದುದೆಲ್ಲವನ್ನೂ ನಡೆಸಬಹುದು. ಈಗಿನ ಸ್ಥಿತಿಗೆ ನಮಗೆ ತಪಸ್ಸೇ ಯೋಗ್ಯವು. ಇಲ್ಲಿ ತಪಸ್ಸನ್ನು ಮಾಡುತ್ತಿರುವುದರಿಂದ ಮತ್ತೊಂದು ಫಲವೂ ಉಂಟು. ನೀನು ಪುನಃ ರಾಜ್ಯವೇ ಬೇಡವೆಂದು ಅದರ ಆಸೆಯನ್ನೇ ಬಿಟ್ಟು ನಿತ್ಯವಾಗಿ ಮುನಿವೃತ್ತಿಯನ್ನೇ ಅವಲಂಬಿಸಿದ್ದರೆ, ಅತ್ತಲಾಗಿ ನನ್ನ ಅತ್ತೆ ಮಾವಂದಿರಾದ ಕೈಕೇಯೀ ದಶರಥರಿಬ್ಬರಿಗೂ ಇನ್ನೂ ಹೆಚ್ಚು ಸಂತೋಷವನ್ನುಂಟುಮಾಡಿದಂತಾಗುವುದು. ಆಗ ಅವರ ಪ್ರೀತಿಯು ನಮ್ಮಲ್ಲಿ ಅಕ್ಷಯವಾಗುವುದು. ನಿನ್ನ ಮನಸ್ಸಿಗೂ ಯಾವಾಗಲೂ ಶಾಂತತೆಯು ತಪ್ಪದೆ ನಿಷ್ಕಲ್ಮಷವಾಗಿರುವುದು. ಧರ್ಮವೇ ಸಮಸ್ತ ಶ್ರೇಯಸ್ಸುಗಳಿಗೂ ಮೂಲವು. ಧರ್ಮದಿಂದಲೇ ಧನವುಂಟಾಗುವುದು. ಧರ್ಮವೇ ಸಾರವು. ಧರ್ಮವನ್ನಾರ್ಜಿಸುವ ಮಾರ್ಗವು ಸುಲಭವಲ್ಲ. ನಿಪುಣರಾದವರು ಆಯಾ ನಿಯಮಗಳಿಂದ ಪ್ರಯತ್ನಪೂರ್ವಕವಾಗಿ ದೇಹವನ್ನು ದಂಡಿಸಿ ಚಾಂದ್ರಾಯಣಾದಿ ವ್ರತಗಳನ್ನು ನಡೆಸಿ, ಧರ್ಮವನ್ನು ಪಡೆಯುವರು. ಸುಖದಿಂದಲೇ ಸುಖವು ಎಂದಿಗೂ ದೊರಕಲಾರದು. ಆದುದರಿಂದ ಎಲೈ ಸೌಮ್ಯನೆ ! ತಪೋವನದಲ್ಲಿಯೇ ನಿಯತನಾಗಿದ್ದು, ನಿರ್ಮಲಬುದ್ಧಿಯಿಂದ ಧರ್ಮವನ್ನಾಚರಿಸು. ನಿನಗೆ ಲೋಕದಲ್ಲಿ ತಿಳಿಯದುದಿಲ್ಲ. ಈ ಮೂರು ಲೋಕವನ್ನೂ ನೀನು ತತ್ವಜ್ಞಾನದಿಂದ ತಿಳಿದಿರತಕ್ಕವನು. ಹೀಗಿದ್ದರೂ ಸ್ತ್ರೀಯರಿಗೆ ಸ್ವಾಭಾವಿಕವಾದ ಚಪಲಬುದ್ಧಿಯಿಂದ ನಾನು ನಿನಗೆ ಹೀಗೆ ಹೇಳಿದೆನು. ಈ ಲೋಕದಲ್ಲಿ ಯಾರು ತಾನೇ ಧರ್ಮವನ್ನುಪದೇಶಿಸುವುದಕ್ಕೆ ಸಮರ್ಥರು ? ಎಲೈ ಆರ್ಯನೆ ! ನನ್ನಲ್ಲಿ ದಾಕ್ಷಿಣ್ಯದಿಂದ ನೀನು ನನ್ನ ಮಾತಿಗೆ ನಿರ್ಬಂಧಪಡಬೇಕಾದುದಿಲ್ಲ ! ನಿನ್ನ ಸ್ವಬುದ್ಧಿಯಿಂದಲೇ ನೀನು ಚೆನ್ನಾಗಿ ವಿಚಾರಿಸಿ, ಲಕ್ಷ್ಮಣನೊಡನೆಯೂ ಚೆನ್ನಾಗಿ ಪರ್ಯಾಲೋಚಿಸಿ, ನಿನ್ನ ಮನಸ್ಸಿಗೆ ಇಷ್ಟವಿದ್ದಂತೆ ನಡೆಸು" ಎಂದಳು.

ಇಲ್ಲಿಗೆ ಒಂಬತ್ತನೆಯ ಸರ್ಗವು.

ರಾಮನು ಆರ್ತರಕ್ಷಣವೇ ಕ್ಷತ್ರಿಯಧರ್ಮವೆಂದೂ, ತನ್ನ ಆಶ್ರಿತರ ವಿರೋಧಿಗಳೇ ತನಗೆ ವಿರೋಧಿಗಳೆಂದೂ ನಿರೂಪಿಸಿ, ತನ್ನ ಪ್ರತಿಜ್ಞಾನುಸಾರವಾಗಿ ರಾಕ್ಷಸರನ್ನು ಕೊಲ್ಲಬೇಕಾದುದೇ ಅವಶ್ಯವೆಂದು ಸೀತೆಗೆ ಹೇಳಿದುದು.

ಸೀತೆಯು ಪತಿಪ್ರೇಮದಿಂದ ತನ್ನೊಡನೆ ಹೇಳಿದ ಮಾತನ್ನು ಕೇಳಿ, ಧರ್ಮನಿರತನಾದ ರಾಮನು ಆಕೆಯನ್ನು ಕುರಿತು "ಎಲೆ ದೇವಿ! ನೀನು ಧರ್ಮಗಳನ್ನು ತಿಳಿದವಳೆಂಬುದು ನಿಜವು. ನಿನಗೆ ನನ್ನಲ್ಲಿರುವ ಸ್ನೇಹಕ್ಕೆ ತಕ್ಕಂತೆ ನನಗೆ ಹಿತವಾದ ಮಾತನ್ನೇ ಹೇಳಿರುವೆ! ಈ ಮಾತುಗಳಿಂದಲೇ ನೀನು ಉತ್ತಮಕುಲದಲ್ಲಿ ಹುಟ್ಟಿದವಳೆಂಬುದೂ ವ್ಯಕ್ತವಾಗುವುದು. ಆದರೆ ನಾನೂ ಹೇಳಬೇಕಾದುದುಂಟು. ತಮ್ಮ ದೇಶದ ಪ್ರಜೆಗಳಲ್ಲಿ ದುಃಖದಿಂದ ಕೂಗಿಡುವವರು ಯಾರೊಬ್ಬರೂ ಇರಬಾರದೆಂಬುದಕ್ಕಾಗಿಯೇ ಕ್ಷತ್ರಿಯರು ಧನುರ್ಧಾರಿಗಳಾಗಿರುವರೆಂದು ನೀನೇ ಹೇಳಿದೆಯಲ್ಲವೆ? ಎಲೆ ಸೀತೆ! ಈ ದಂಡಕಾರಣ್ಯವಾಸಿಗಳಾದ ಋಷಿಗಳು ಎಷ್ಟೋ ಕಷ್ಟದಿಂದ ಬಂದು ಬಹು ದೈನ್ಯದಿಂದ ನನ್ನಲ್ಲಿ ಮರೆಹೊಕ್ಕುದನ್ನು ಕಾಣೆಯಾ? ಆ ಋಷಿಗಳಾದರೋ ಯಾವಾಗಲೂ ತಮ್ಮ ವ್ರತನಿಯಮಗಳಲ್ಲಿಯೇ ನಿರತರಾಗಿರತಕ್ಕವರು. ತಮ್ಮ ಧರ್ಮವನ್ನು ಎಂದಿಗೂ ಬಿಟ್ಟುಹೋಗತಕ್ಕವರಲ್ಲ. ಕಾಡಿನಲ್ಲಿ ಫಲಮೂಲಗಳನ್ನು ತಿಂದು ಜೀವಿಸತಕ್ಕವರು. ಹೀಗಿದ್ದರೂ ಕ್ರೂರರಾದ ರಾಕ್ಷಸರಿಂದ ಪೀಡಿಸಲ್ಪಟ್ಟು ಕಷ್ಟದಲ್ಲಿ ಸಿಕ್ಕಿಬಿದ್ದಿರುವರು. ಮಾಂಸಾಹಾರಿಗಳಾದ ಘೋರರಾಕ್ಷಸರು ಕಾಡಿನಲ್ಲಿ ಸುತ್ತಿ ವ್ರತನಿಷ್ಠರಾದ ಈ ಋಷಿಗಳನ್ನು ಕೊಂದು ಅವರ ಮಾಂಸವನ್ನು ತಿನ್ನುತ್ತಿರುವರು. ದಂಡಕಾರಣ್ಯದಲ್ಲಿರುವ ಬ್ರಾಹ್ಮಣೋತ್ತಮರೂ ಋಷಿಗಳೂ ಆ ರಾಕ್ಷಸರ ಬಾಧೆಯನ್ನು ತಡೆಯಲಾರದೆ ನನ್ನಲ್ಲಿಗೆ ಬಂದು ರಕ್ಷಣೆಯನ್ನು ಬೇಡಿರುವರು. ನಾನೂ ಅವರ ಮಾತನ್ನು ಕೇಳಿ, ಅವರ ಪಾದಗಳಿಗೆ ನಮಸ್ಕರಿಸಿ "ಎಲೈ ಮಹಾತ್ಮರೆ! ನಿಮ್ಮ ಮಾತನ್ನು ಕೇಳಿ ನನಗೆ ನಾಚಿಕೆಯುಂಟಾಗಿರುವುದು. ನಾನಾಗಿ ನಿಮ್ಮ ಬಳಿಗೆ ಬಂದು ನಿಮ್ಮ ನಿಮ್ಮ ಕೋರಿಕೆಗಳನ್ನು ನಡೆಸಿಕೊಡಬೇಕಾದುದೇ ನನ್ನ ಅವಶ್ಯಕರ್ತವ್ಯವು. ಮಹಾತ್ಮರಾದ ನೀವು ಕಿಂಕರಪ್ರಾಯನಾದ ನನ್ನಲ್ಲಿ ಹೀಗೆ ಯಾಚಿಸುವುದೆಂದರೇನು? ಈಗ ನಾನು ನಿಮ್ಮಲ್ಲಿ ಮಹಾಪರಾಧಿಯಾದೆನು. ನನ್ನನ್ನು ಮನ್ನಿಸಬೇಕು. ನಾನು ಈಗ ಮಾಡಬೇಕಾದುದೇನೆಂಬುದನ್ನು ಆಜ್ಞಾಪಿಸಬೇಕು!" ಎಂದು

ಅನೇಕ ಬ್ರಾಹ್ಮಣರ ಮುಂದೆ ನನ್ನ ಬಾಯಿಂದ ನಾನೇ ಕೇಳಿರುವೆನು. ಅದಕ್ಕವರೆಲ್ಲರೂ ಒಂದಾಗಿ ನನ್ನನ್ನು ನೋಡಿ "ಎಲೈ ರಾಮನೆ! ದಂಡಕಾರಣ್ಯದಲ್ಲಿ ಕಾಮರೂಪಿಗಳಾದ ಅನೇಕ ರಾಕ್ಷಸರು ಬಂದು ನಮ್ಮನ್ನು ಬಹಳವಾಗಿ ಬಾಧಿಸುತ್ತಿರುವರು. ಆ ಬಾಧೆಯನ್ನು ತಪ್ಪಿಸಿ ನಮ್ಮನ್ನು ರಕ್ಷಿಸಬೇಕು. ನಾವು ಯಾವ ವಿಧದಿಂದಲೂ ಅವರನ್ನಿದಿರಿಸಲಾರೆವು. ಅವರು ಮಾಂಸಾಹಾರಿಗಳು. ಮತ್ತು ಹೋಮಕಾಲಗಳಲ್ಲಿಯೂ, ದರ್ಶಪೌರ್ಣಮಾಸಾದಿ ಕಾಲಗಳಲ್ಲಿಯೂ ನಮ್ಮ ಮೇಲೆ ಬಿದ್ದು ನಮ್ಮ ವ್ರತಗಳನ್ನು ಕೆಡಿಸುವರು. ನಮಗೆ ಅನೇಕ ವಿಧದಲ್ಲಿ ಹಿಂಸೆಯನ್ನುಂಟುಮಾಡುವರು. ಹೀಗೆ ದುಃಖಿತರಾದ ನಾವೆಲ್ಲರೂ ನಿನ್ನಲ್ಲಿ ಬಂದು ಮರೆಹೊಕ್ಕಿರುವೆವು. ನಮಗೆ ನೀನೇ ಪರಮಗತಿಯು. ಎಲೈ ರಾಜಕುಮಾರನೆ! ನಾವು ನಮ್ಮ ತಪಃಪ್ರಭಾವದಿಂದಲೇ ರಾಕ್ಷಸರನ್ನು ಕೊಲ್ಲಬಹುದು. ಆದರೂ ಬಹುಕಾಲದಿಂದ ನಾವು ಕಷ್ಟಪಟ್ಟು ಸಂಪಾದಿಸಿದ ತಪಃಫಲವೆಲ್ಲವೂ ನಷ್ಟವಾಗುವುದೆಂಬ ಭಯಕ್ಕಾಗಿ ಸುಮ್ಮನಿರುವೆವು. ತಪಸ್ಸುಮಾಡುವುದು ಬಹಳ ಕಷ್ಟಕಾರ್ಯವು. ಅದಕ್ಕೆ ಅನೇಕ ವಿಘ್ನಗಳುಂಟು. ಹಾಗಿದ್ದರೂ ಅವೆಲ್ಲವನ್ನೂ ಜಯಿಸಿ ಎಷ್ಟೋ ಕಷ್ಟಪಟ್ಟು ಸಂಪಾದಿಸಿದ ತಪಸ್ಸನ್ನು ಹೀಗೆ ವ್ಯರ್ಥವಾಗಿ ವ್ಯಯಮಾಡಲಾರದೆ, ರಾಕ್ಷಸರು ನಮ್ಮನ್ನು ಹಿಡಿದು ಭಕ್ಷಿಸುತ್ತಿದ್ದರೂ ನಾವು ಅವರನ್ನು ಶಪಿಸದಿರುವೆವು. ಆದುದರಿಂದ ನೀನು ಲಕ್ಷ್ಮಣಸಹಿತನಾಗಿ ದಂಡಕಾರಣ್ಯವಾಸಿಗಳಾದ ನಮಗೆ ರಾಕ್ಷಸರ ಬಾಧೆಯನ್ನು ತಪ್ಪಿಸಿ ರಕ್ಷಿಸಬೇಕು. ಈ ಕಾಡಿನಲ್ಲಿ ನಮಗೆ ನೀನಲ್ಲದೆ ಬೇರೆ ಯಾರೂ ದಿಕ್ಕಿಲ್ಲವು" ಎಂದರು. ಎಲೈ ಜನಕಪುತ್ರಿ! ಹೀಗೆ ಎಷ್ಟೋ ದೈನ್ಯದಿಂದ ನನ್ನನ್ನು ಪ್ರಾರ್ಥಿಸುತ್ತಿರುವ ಋಷಿಗಳ ಮಾತನ್ನು ಕೇಳಿ ನನ್ನ ಮನಸ್ಸು ಕರಗಿತು. ಆಗಲೇ ನಾನು ಅವರೆಲ್ಲರನ್ನೂ ಕಾಪಾಡುವುದಾಗಿ ಪ್ರತಿಜ್ಞೆಮಾಡಿಬಿಟ್ಟೆನು. ಎಲೈ ಪ್ರಿಯೇ! ನಾನು ಬಾಯಿಬಿಟ್ಟು ಹೇಳಿದ ಮೇಲೆ ನನ್ನ ದೇಹದಲ್ಲಿ ಈ ಪ್ರಾಣಗಳಿರುವವರೆಗೂ ಆ ಪ್ರತಿಜ್ಞೆಯನ್ನು ನಡೆಸದೆಮಾತ್ರ ಬಿಡಲಾರೆನು. ನನಗೆ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ, ಸತ್ಯವೆಂಬುದೊಂದೇ ಪ್ರಿಯವೆಂಬುದನ್ನು ನೀನು ಕಾಣೆಯಾ? ಅದರಲ್ಲಿಯೂ ಆ ಮಹರ್ಷಿಗಳ ಮುಂದೆ ಆಡಿ ಬಂದ ಮಾತನ್ನು ಹೇಗೆ ತಪ್ಪುವೆನು? ಎಲೆ ಪ್ರಿಯೆ! ಹೆಚ್ಚಾಗಿ ಹೇಳಿದುದರಿಂದೇನು? ನಾನು ನನ್ನ ಪ್ರಾಣಗಳನ್ನಾದರೂ ಬಿಡಬಲ್ಲೆನೇ

ಹೊರತು ಆಡಿದ ಮಾತನ್ನು ನಡೆಸದೆ ಬಿಡಲಾರೆನು. [1] ಅಷ್ಟೇಕೆ? ಪ್ರಾಣಕ್ಕಿಂತಲೂ ಪ್ರಿಯಳಾದ ನಿನ್ನನ್ನಾಗಲಿ, ಲಕ್ಷ್ಮಣನನ್ನಾಗಲಿ ಒಂದುವೇಳೆ ನಾನು ಬಿಟ್ಟರೂ ಬಿಡಬಹುದು. ಕೊಟ್ಟಮಾತನ್ನು ಮಾತ್ರ ಎಂದಿಗೂ ನಡೆಸದೆ ಬಿಡಲಾರೆನು. ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರಿಗೆ ನಾನು ಆಡಿದ ಮಾತನ್ನು ತಪ್ಪುವೆನೆ? ಎಲೆ ಸೀತೆ! ಆ ಋಷಿಗಳು ತಾವಾಗಿ ನನ್ನಲ್ಲಿಗೆ ಬಂದು ಹೇಳದಿದ್ದರೂ ನಾನಾಗಿಯೇ ಅವರನ್ನು ರಕ್ಷಿಸಬೇಕಾಗಿತ್ತು. ಹೀಗಿರುವಾಗ ಅವರೇ ನನ್ನನ್ನು ಬಂದು ಪ್ರಾರ್ಥಿಸಿ ನಾನೂ ಅವರಿಗೆ ಪ್ರತಿಜ್ಞೆಮಾಡಿಕೊಟ್ಟ ಮೇಲೆ ಇನ್ನು ಹೇಳಬೇಕಾದುದೇನು? ಎಲೆ ಸೀತೆ! ನೀನೇನೋ ನನ್ನಲ್ಲಿ ನಿನಗಿರುವ ಪ್ರೀತಿವಿಶೇಷಕ್ಕೂ, ನಿನ್ನಲ್ಲಿ ನನಗಿರುವ ಸ್ನೇಹಕ್ಕೂ ಅನುರೂಪವಾದ ಮಾತನ್ನೇ ಹೇಳಿದೆ! ಅದರಿಂದ ನಾನು ಬಹಳ ಸಂತುಷ್ಟನಾದೆನು. ಲೋಕದಲ್ಲಿ ಯಾರಾದರೇನು? ತಮ್ಮ ಇಷ್ಟರಿಗೆ ಮಾತ್ರವೇ ಹಿತವನ್ನುಪದೇಶಿಸುವರೇ ಹೊರತು ಬೇರೆಯವರಿಗುಪದೇಶಿಸಲಾರರು. ನೀನು ಈಗ ನನಗೆ ಹೇಳಿದ ಮಾತು, ನಿನ್ನ ಸೌಜನ್ಯಕ್ಕೂ ನಿನ್ನ ಕುಲಕ್ಕೂ ಅನುರೂಪವಾಗಿಯೇ ಇರುವುದು. ನೀನು ನನಗೆ ಪ್ರಾಣಕ್ಕಿಂತಲೂ ಪ್ರಿಯಳಾಗಿರುವೆ. ಹಾಗಿದ್ದರೂ ನಾನು ಯಾವ ಧರ್ಮವನ್ನು ಸಂಕಲ್ಪಿಸುವೆನೋ ಅದನ್ನೇ ನೀನು ಅನುಸರಿಸಿ ನಡೆಯಬೇಕಾದುದೇ ನ್ಯಾಯವಲ್ಲವೆ" ಎಂದನು. ಹೀಗೆ ಮಹಾತ್ಮನಾದ ರಾಮನು ತನ್ನ ಪ್ರಿಯಳಾದ ಜನಕಪುತ್ರಿಗೆ ಸಮಾಧಾನವನ್ನು ಹೇಳಿ, ಧನುರ್ಧಾರಿಯಾಗಿ ಲಕ್ಷ್ಮಣನೊಡಗೂಡಿ ರಮಣೀಯವಾದ ಆ ತಪೋವನಪ್ರದೇಶಗಳಿಗೆ ಹೋದನು.

ಇಲ್ಲಿಗೆ ಹತ್ತನೆಯ ಸರ್ಗವು.

---

1. ರಾಮನು ಪ್ರತಿಜ್ಞೆಯನ್ನು ತಪ್ಪುವವನಲ್ಲ, ನಿರಪರಾಧಿಗಳಾದವರನ್ನು ಕೊಲ್ಲುವವನೂ ಅಲ್ಲ. ತನ್ನನ್ನಗಲಿಯೇ ರಾಕ್ಷಸರನ್ನು ಕೊಲ್ಲಬೇಕಾಗುವುದು. ತನ್ನಗಲಿಕೆಯನ್ನೂ ಸಹಿಸುವವನಲ್ಲ. ಹೀಗೆ ಧರ್ಮಸಂಕಟವು ಬಂದೊದಗುವುದೆಂದು ಪೂರದೃಷ್ಟಿಯಿಂದ ಸೀತೆಯು ಚಿಂತಿಸಿ, ರಾಕ್ಷಸವಧಪ್ರಯತ್ನದಿಂದ ರಾಮನನ್ನು ತಪ್ಪಿಸಬೇಕೆಂದು ನೋಡಲು, ಅದಕ್ಕೆ ಸಮಾಧಾನವಾಗಿ ರಾಮನು "ನಿನ್ನನ್ನು ಅಗಲಿಯಾದರೂ ನಾನು ರಾಕ್ಷಸರನ್ನು ಕೊಂದು ನನ್ನ ಪ್ರತಿಜ್ಞೆಯನ್ನು ತೀರಿಸಿಕೊಳ್ಳದೆ ಬಿಡೆನು" ಎಂದು, ಇದರಿಂದ ಹೇಳುವುದಾಗಿ ಗ್ರಾಹ್ಯವು.

ರಾಮನು ತನ್ನನ್ನು ಹಿಂಬಾಲಿಸಿ ಬಂದ ಧರ್ಮಭೃತನೆಂಬ ಮುನಿಯಿಂದ ಪಂಚಾಪ್ಸರವೆಂಬ ಸರಸ್ಸಿನ ಪ್ರಭಾವವನ್ನು ಕೇಳಿದುದು. ಅಲ್ಲಿನ ಋಷ್ಯಾಶ್ರಮಗಳಲ್ಲಿ ಸ್ವಲ್ಪ ಕಾಲವಿದ್ದು ಸುತೀಕ್ಷ್ಣಾಶ್ರಮಕ್ಕೆ ಬಂದು ಆತನಿಂದ ಅಗಸ್ತ್ಯಾಶ್ರಮದ ಮಾರ್ಗವನ್ನು ಕೇಳಿ ತಿಳಿದುದು. ಲಕ್ಷ್ಮಣನಿಗೆ ಅಗಸ್ತ್ಯಮುನಿಯ ಕಥೆಯನ್ನು ಹೇಳುತ್ತ ಅಗಸ್ತ್ಯಭ್ರಾತನ ಆಶ್ರಮದಲ್ಲಿ ಒಂದು ರಾತ್ರಿಯಿದ್ದು, ಅಲ್ಲಿಂದ ಅಗಸ್ತ್ಯಾಶ್ರಮವನ್ನು ಸೇರಿ, ಮೊದಲು ಲಕ್ಷ್ಮಣನನ್ನು ಆ ಮಹರ್ಷಿಯ ಬಳಿಗೆ ಕಳುಹಿಸಿದುದು.

[1] ರಾಮನು ಮುಂದೆ ಹೊರಟನು. ಅಂದವಾದ ನಡುವುಳ್ಳ ಸೀತೆಯು ನಡುವೆ ಹೋಗುತ್ತಿದ್ದಳು. ಇವರ ಹಿಂದೆ ಲಕ್ಷ್ಮಣನು ಧನುರ್ಧಾರಿಯಾಗಿ ಹೋಗುತ್ತಿದ್ದನು. ಅಲ್ಲಿ ರಾಮಲಕ್ಷ್ಮಣರು ಬಗೆಬಗೆಯಾದ ಬೆಟ್ಟದ ತಪ್ಪಲುಗಳನ್ನೂ, ಕಾಡುಗಳನ್ನೂ, ವಿಧವಿಧವಾದ ನದಿಗಳನ್ನೂ , ಆ ನದೀತೀರದಲ್ಲಿ, ಅಂದವಾದ ಮರಳುದಿಣ್ಣೆಗಳಮೇಲೆ ವಿಹರಿಸುತ್ತಿರುವ ಸಾರಸಗಳನ್ನೂ ಚಕ್ರವಾಕ

---

1. ಅಲ್ಲಿ "ಅಗ್ರತಃ ಪ್ರಯಯೌ ರಾಮಸ್ಸೀತಾಮಧ್ಯೇ ಸುಮಧ್ಯಮಾ । ಪೃಷ್ಠತಸ್ತು ಧನುಷ್ಪಾಣಿರ್ಲಕ್ಷ್ಮಣೋಽನುಜಗಾಮ ಹ ॥" ಎಂದು ಮೂಲವು. ಇಲ್ಲಿ ಪ್ರಣವಾರ್ಥವು ಸೂಚಿತವೆಂದು ಸಂಪ್ರದಾಯವು. "ಅಗ್ರತಃ" ಎಂಬಲ್ಲಿ, ಮೊದಲಿರುವ "ಅ"ವರ್ಣವು ಪ್ರಣವದ ಮೊದಲನೆಯ ವರ್ಣವನ್ನು ಸೂಚಿಸುವುದು. (ಅಗ್ರತಃ ಪ್ರಯಯೌ) ಎಂಬುದರಿಂದ ಎಲ್ಲಕ್ಕೂ ಮೊದಲನೆಯದೆಂದು ವ್ಯಂಜಿತವಾಗುವುದು. (ರಾಮಃ) ಎಂಬುದರಿಂದ "ಸತ್ತಾಸಂಪಾದನ ರಕ್ಷಣಾದಿನಾ ರಮತೇ" ಎಂಬ ವ್ಯುತ್ಪತ್ತ್ಯನುಸಾರವಾಗಿ ಕಾರಕತ್ವವೂ ರಕ್ಷಕತ್ವವೂ ಸೂಚಿತವು. ಮತ್ತು (ರಮಾಸಂಬಂಧೀ ರಾಮಃ) ಎಂಬ ವ್ಯುತ್ಪತ್ತಿಯಿಂದ ಶ್ರೀಪತಿತ್ವವೂ ತೋರುವುದು. (ಸುಮಧ್ಯಮಾ) ಎಂಬುದರಿಂದ "ಉ"ವರ್ಣವು ಮಧ್ಯಗತವಾದುದೆಂದು ಸೂಚಿತವಾಗುವುದು. "ಸೀತಾಮಧ್ಯೇ" ಎಂಬುದರಿಂದ ಲಕ್ಷ್ಮಿಯು ಪುರುಷಕಾರಭೂತೆಯೆಂದು ವ್ಯಕ್ತವಾಗುವುದು. (ಲಕ್ಷ್ಮಣಃ) ಎಂಬುದರಿಂದ "ಮನಜ್ಞಾನೇ" "ಮನ ಅವಬೋಧನೇ" ಎಂಬ ಧಾತ್ವರ್ಥವನ್ನನುಸರಿಸಿ ಚೇತನನಿಗಿರಬೇಕಾದ ಮಕಾರೋಕ್ತವಾದ ಅಸಾಧಾರಣಧರ್ಮವತ್ತ್ವವೂ, (ಧನುಷ್ಪಾಣಿಃ) ಎಂಬುದರಿಂದ ನಿರಂತರ ಕೈಂಕರ್ಯವೃತ್ತಿತ್ವವೂ, (ಅನುಜಗಾಮ) ಎಂಬುದರಿಂದ, ಅಹಂಕಾರ ಮಮಕಾರಗಳನ್ನು ತ್ಯಜಿಸುವುದರ ಮೂಲಕವಾಗಿ ನಿತ್ಯಾನುವರ್ತನವೂ ವ್ಯಂಜಿತವಾಗುವುದು. ವಾಕ್ಯಾಂತದಲ್ಲಿ ನಿಲ್ಲುವ "ಅನುಜಗಾಮ" ಎಂಬ ಕ್ರಿಯಾಪದದ ಕೊನೆಯಲ್ಲಿರುವ "ಮ" ವರ್ಣವು ಪ್ರಣವದ ಕೊನೆಯ ವರ್ಣವನ್ನು ಸೂಚಿಸುವುದು. (ತನಿಶ್ಲೋಕಿ) ಹಾಗೆಯೇ ಮುಂದೆ "ಕೌ ಪಶ್ಯಮಾನಾ ವಿವಿಧಾನ್" ಎಂಬುದರಲ್ಲಿ ನಾರಾಯಣ ಪದಾರ್ಥವೂ, ಮಾಂಡಕರ್ಣಿ ವೃತ್ತಾಂತದಲ್ಲಿ ನಮಃ ಪದಾರ್ಥವೂ ಪ್ರಕಾಶಿತವಾಗಿರುವುದೆಂದು ಸಂಪ್ರದಾಯವು.

ಪಕ್ಷಿಗಳನ್ನೂ, ಅಲ್ಲಲ್ಲಿ ಜಲಪಕ್ಷಿಗಳಿಂದ ತುಂಬಿದ ತಾವರೆ ಕೊಳಗಳನ್ನೂ, ಅಲ್ಲಲ್ಲಿ ಗುಂಪುಗುಂಪಾಗಿ ನಿಂತಿರುವ ಚುಕ್ಕಿಯುಳ್ಳ ಜಿಂಕೆಗಳನ್ನೂ, ಕೊಬ್ಬಿ ಮೈಮರೆತಿರುವ ಉದ್ದವಾದ ಕೊಂಬುಳ್ಳ ಕಾಡೆಮ್ಮೆಗಳು, ಹಂದಿಗಳು ಮೊದಲಾದ ವನಜಂತುಗಳನ್ನೂ, ಅಲ್ಲಲ್ಲಿ ಗಿಡಮರಗಳನ್ನುರುಳಿಸುತ್ತಿರುವ ಆನೆಗಳನ್ನೂ ನೋಡುತ್ತಾ, ಸೀತೆಯೊಡಗೂಡಿ ಹೋಗುತ್ತಿದ್ದರು. ಹೀಗೆ ಅವರೆಲ್ಲರೂ ಬಹು ದೂರದವರೆಗೆ ಹೋಗಿ ಸೂರ್ಯಾಸ್ತಮಯಕ್ಕೆ ಸರಿಯಾಗಿ ರಮಣೀಯವಾದ ಒಂದು ಕೆರೆಯನ್ನು ಕಂಡರು. ಆ ಕೆರೆಯು ಒಂದು ಗಾವುದದ ಪ್ರಮಾಣದಷ್ಟು ವಿಸ್ತಾರವಾಗಿ, ಕಮಲಗಳಿಂದ ದಟ್ಟವಾಗಿ ತುಂಬಿತ್ತು. ಅಲ್ಲಲ್ಲಿ ಸರ್ಪಗಳೂ. ಆನೆಯ ಹಿಂಡುಗಳೂ, ಬಗೆಬಗೆಯಾದ ಹಂಸಸಾರಸಾದಿ ಜಲಚರ ಪಕ್ಷಿಗಳೂ ತುಂಬಿ ನೋಡುವುದಕ್ಕೆ ನೇತ್ರಾನಂದಕರವಾಗಿತ್ತು. ನೀರು ತುಂಬಿ ಮನೋಹರ ವಾದ ಆ ಕೊಳದ ಕಡೆಯಿಂದ ಸಂಗೀತಧ್ವನಿಯೂ ಇತರ ವಾದ್ಯಘೋಷವೂ ಹೊರಟುಬರುತ್ತಿದ್ದವು. ಆದರೆ ಅಲ್ಲಿ ಯಾರೊಬ್ಬರೂ ಕಣ್ಣಿಗೆ ಕಾಣಿಸಲಿಲ್ಲ. ಆಗ ರಾಮಲಕ್ಷ್ಮಣರಿಬ್ಬರಿಗೂ ಮನಸ್ಸಿನಲ್ಲಿ ಆಶ್ಚರ್ಯವುಂಟಾಯಿತು. ಹಾಗೆಯೇ ಆ ಮೂವರೂ ಆ ಕೊಳದ ಕಡೆಗೆ ಹೋಗಿ ತಮ್ಮನ್ನು ಹಿಂಬಾಲಿಸಿ ಬರುತ್ತಿದ್ದ ಧರ್ಮಭೃತ್ತೆಂಬ ಋಷಿಯನ್ನು ನೋಡಿ "ಎಲೈ ಮಹರ್ಷಿಯೆ! ಈ ಆಶ್ಚರ್ಯ ಕರವಾದ ಧ್ವನಿಯನ್ನು ಕೇಳಿ ನಮ್ಮೆಲ್ಲರಿಗೂ ಮನಸ್ಸಿನಲ್ಲಿ ಕುತೂಹಲ ವುಂಟಾಗಿರುವುದು. ಇದರ ಕಾರಣವೇನೆಂದು ತಿಳಿಯಬೇಕೆಂದಿರುವೆವು. ನೀನು ಇದರ ಕಾರಣವನ್ನು ತಿಳಿದಿರಬಹುದು. ಇದು ಅಷ್ಟಾಗಿ ರಹಸ್ಯ ವಿಲ್ಲದಿದ್ದ ಪಕ್ಷದಲ್ಲಿ, ನಮಗೂ ಇದನ್ನು ನೀನು ಹೇಳಬಹುದಾದ ಪಕ್ಷದಲ್ಲಿ ಈ ವಿಷಯವನ್ನು ತಿಳಿಸಬೇಕು" ಎಂದರು. ಧರ್ಮಾತ್ಮನಾದ ಋಷಿಯು ರಾಮನ ಮಾತನ್ನು ಕೇಳಿ, ಆ ಸರೋವರದ ಉತ್ಪತ್ತಿವೃತ್ತಾಂತವನ್ನೂ, ಗಾನಧ್ವನಿಯ ಕಾರಣವನ್ನೂ ವಿಸ್ತಾರವಾಗಿ ಅವರಿಗೆ ತಿಳಿಸಲಾರಂಭಿಸಿ ದನು. "ಎಲೈ ರಾಮನೆ! ಈ ಸರೋವರಕ್ಕೆ ಪಂಚಾಪ್ಸರವೆಂದು ಹೆಸರು. ಇದರಲ್ಲಿ ಯಾವಾಗಲೂ ಗಾನಧ್ವನಿಯು ಎಡೆಬಿಡದೆ ಕೇಳಿಸುತ್ತಿರುವುದು. ಇದನ್ನು ಮಾಂಡಕರ್ಣಿಯೆಂಬ ಋಷಿಯು ತನ್ನ ತಪಃಪ್ರಭಾವದಿಂದ ನಿರ್ಮಿಸಿ ದನು. ಆ ಮಹರ್ಷಿಯು ಹತ್ತುಸಾವಿರ ವರ್ಷಗಳವರೆಗೆ ವಾಯುಭಕ್ಷಣವನ್ನು ಮಾಡುತ್ತ, ಈ ನೀರಿನಲ್ಲಿಯೇ ನಿಂತು ಕ್ರೂರತಪಸ್ಸನ್ನು ಮಾಡುತ್ತಿದ್ದನು.

ಈತನ ತಪಸ್ಸಿನಿಂದ ಇಂದ್ರಾಗ್ನಿಗಳೇ ಮೊದಲಾದ ದೇವತೆಗಳೆಲ್ಲರೂ ಚಿಂತಾಕ್ರಾಂತರಾಗಿ ಎಲ್ಲರೂ ಒಂದಾಗಿ ಕಲೆತು, ಒಬ್ಬರಿಗೊಬ್ಬರು ಮಂತ್ರಾಲೋಚನೆಯನ್ನು ಮಾಡತೊಡಗಿ “ಆಹಾ ಈ ಮಹರ್ಷಿಯಾದರೋ ಉಗ್ರತಪಸ್ಸನ್ನು ಮಾಡುತ್ತಿರುವನು  ಇದನ್ನು ನೋಡಿದರೆ ಇವನು ನಮ್ಮಲ್ಲಿ ಯಾರ ಪದವಿಯನ್ನೋ ಅಪೇಕ್ಷಿಸಿ ಈ ಕ್ರೂರ ತಪಸ್ಸನ್ನು ಮಾಡುವ ಹಾಗೆ ತೋರುತ್ತಿದೆ” ಎಂದು ನಿಶ್ಚಯಿಸಿ, ಅಂಜಿದವರಾಗಿ, ಆ ಋಷಿಯ ತಪಸ್ಸಿಗೆ ಭಂಗವನ್ನುಂಟು ಮಾಡಬೇಕೆಂದುದ್ದೇಶಿಸಿ, ಅಪ್ಸರಸ್ತ್ರೀಯರಲ್ಲಿ ಪ್ರಧಾನರಾದ ಐವರನ್ನು ಆ ಋಷಿಯ ತಪೋವಿಘ್ನಕ್ಕಾಗಿ ಪ್ರೇರಿಸಿ ಕಳುಹಿಸಿದರು. ಮಿಂಚಿನಂತೆ ಥಳಥಳಿಸುತ್ತಿರುವ ದೇಹಕಾಂತಿಯುಳ್ಳ ಆ ಐದು ಮಂದಿ ಸ್ತ್ರೀಯರೂ ದೇವಕಾರ್ಯಸಿದ್ಧಿಗಾಗಿ ಮಹರ್ಷಿಯ ಬಳಿಗೆ ಬಂದು, ಆತನ ಮನಸ್ಸನ್ನು ಕೆಡಿಸಲಾರಂಭಿಸಿದರು. ಆ ಋಷಿಯು ಜೀವಾತ್ಮ ಪರಮಾತ್ಮ ಸ್ವರೂಪವನ್ನು ಚೆನ್ನಾಗಿ ಬಲ್ಲವನಾಗಿದ್ದರೂ ಆ ಸ್ತ್ರೀಯರ ಮೋಹಪಾಶಕ್ಕೊಳಗಾಗಿಬಿಟ್ಟನು. ಆ ಅಪ್ಸರಸ್ತ್ರೀಯರೈದು ಮಂದಿಯೂ ಆತನಿಗೆ ಪತ್ನಿಯರಾದರು. ಈ ಕೆರೆಯ ಅಡಿಯಲ್ಲಿ ಆ ಐದುಮಂದಿ ಅಪ್ಸರಸ್ಸುಗಳಿಗೂ ಬೇರೆ ಬೇರೆ ಗೃಹವು ನಿರ್ಮಿಸಲ್ಪಟ್ಟಿರುವುದು  ಆ ಐವರೂ ಇದರ ಕೆಳಗೆ ಸುಖವಾಗಿ ವಾಸಮಾಡುತ್ತಿರುವರು. ಮತ್ತು ತಪೋಬಲದಿಂದ ಯೌವನವನ್ನು ಹೊಂದಿದ ಮಾಂಡಕರ್ಣಿಯೆಂಬ ಋಷಿಯನ್ನು ಆ ಸ್ತ್ರೀಯರು ನಾನಾವಿಧದಿಂದ ಸಂತೋಷಪಡಿಸುತ್ತಿರುವರು. ಹೀಗೆ ಆ ಅಪ್ಸರಸ್ತ್ರೀಯರು ಸಂಭ್ರಮದಿಂದ ಇಲ್ಲಿ ಕ್ರೀಡಿಸುತ್ತಿರುವರಾದುದರಿಂದ, ಆಭರಣಧ್ವನಿಗಳಿಂದ ಕೂಡಿದ ಅವರ ಗಾನಧ್ವನಿಯೂ, ವಾದ್ಯಧ್ವನಿಯೂ ಇಲ್ಲಿ ಯಾವಾಗಲೂ ಕೇಳಿಸುತ್ತಿರುವುದು. ನಾವು ಈಗ ಅದನ್ನೇ ಕೇಳುತ್ತಿರುವೆವು” ಎಂದನು. ಹೀಗೆ ಆತ್ಮಜ್ಞನಾದ ಧರ್ಮಭೃತ್ತೆಂಬ ಮುನಿಯು ಹೇಳಿದ ವಾಕ್ಯವನ್ನು ಕೇಳಿ, ರಾಮಲಕ್ಷ್ಮಣರಿಬ್ಬರೂ “ಆಹಾ! ಇದು ಅತ್ಯಾಶ್ಚರ್ಯವೇ ಸರಿ!” ಎಂದು ಆಮೋದಿಸಿದರು. ಹೀಗೆ ಪರಸ್ಪರ ಸಲ್ಲಾಪಗಳನ್ನು ಮಾಡುತ್ತ ಅವರೆಲ್ಲರೂ ಮುಂದೆ ಹೋಗಲು, ಅಲ್ಲಿ ಒಂದು ಋಷ್ಯಾಶ್ರಮ ಸಮೂಹವು ಕಾಣಿಸಿತು. ಅಲ್ಲಲ್ಲಿ ದರ್ಭೆಗಳೂ ನಾರುಮಡಿಗಳೂ ಗೋಚರಿಸಿದುವು. ಅಲ್ಲಲ್ಲಿ ಬ್ರಾಹ್ಮಣರು ಗುಂಪುಗುಂಪಾಗಿ ತಿರುಗುತ್ತಿದ್ದರು  ರಾಮನು ಸೀತಾಲಕ್ಷ್ಮಣರೊಡಗೂಡಿ, ಆ ಆಶ್ರಮವನ್ನು ಪ್ರವೇಶಿಸಿ, ಅಲ್ಲಿನ ಋಷಿಗಳು ತಮಗೆ ಮಾಡಿದ

ಸತ್ಕಾರಗಳನ್ನು ಪ್ರೀತಿಯಿಂದ ಸ್ವೀಕರಿಸುತ್ತ, ಅಲ್ಲಿಯೇ ಕೆಲವು ದಿನಗಳವರೆಗೆ ವಾಸಮಾಡಿದನು. ಹೀಗೆ ಮಹಾಯಶಸ್ವಿಯಾಗಿಯೂ, ಸರ್ವಾಸ್ತ್ರವಿಶಾರದನಾಗಿಯೂ ಇರುವ ರಾಮನು ಬ್ರಹ್ಮತೇಜೋವಿಶಿಷ್ಟವಾದ ಆ ಆಶ್ರಮಸಮೂಹದಲ್ಲಿ ಅಲ್ಲಲ್ಲಿನ ರಾಕ್ಷಸಬಾಧೆಯನ್ನು ತಪ್ಪಿಸಿ ಸುಖದಿಂದಿದ್ದನು. ಹೀಗೆ ರಾಮನು ಕೆಲವು ಆಶ್ರಮಗಳಲ್ಲಿ ಹದಿಮೂರು ತಿಂಗಳ ಕಾಲವನ್ನು ಕಳೆದನು. ಕೆಲವು ಕಡೆಗಳಲ್ಲಿ ಒಂದು ಸಂವತ್ಸರಕಾಲದವರೆಗಿದ್ದನು. ಹಾಗೆಯೇ ಕೆಲವು ಆಶ್ರಮಗಳಲ್ಲಿ ನಾಲ್ಕು ತಿಂಗಳು, ಕೆಲವು ಕಡೆಗಳಲ್ಲಿ ಐದು ತಿಂಗಳು, ಕೆಲವು ಕಡೆಗಳಲ್ಲಿ ಆರು ತಿಂಗಳು, ಕೆಲವು ಕಡೆಗಳಲ್ಲಿ ಏಳು ತಿಂಗಳು, ಕೆಲವಾಶ್ರಮಗಳಲ್ಲಿ ಒಂದೂ ಕಾಲು ತಿಂಗಳು, ಕೆಲವಾಶ್ರಮಗಳಲ್ಲಿ ಮುಕ್ಕಾಲು ತಿಂಗಳು, ಕೆಲವು ಕಡೆಗಳಲ್ಲಿ ಮೂರು ತಿಂಗಳು, ಕೆಲವು ಕಡೆಗಳಲ್ಲಿ ಎಂಟು ತಿಂಗಳು. ಹೀಗೆ ಆಯಾ ಸ್ಥಿತಿಗೆ ತಕ್ಕಂತೆ ಅಲ್ಲಲ್ಲಿ ನಿಂತು ಅವರವರ ಸತ್ಕಾರಗಳನ್ನು ಸ್ವೀಕರಿಸುತ್ತಾ ಸುಖವಾಗಿರುತ್ತಿದ್ದನು. ಹೀಗೆ ರಾಮನು ಆ ಋಷ್ಯಾಶ್ರಮಮಂಡಲದಲ್ಲಿ ಒಂದೊಂದು ಕಡೆಗೂ ಎರಡೆರಡಾವರ್ತಿ ಪ್ರವೇಶಿಸಿ, ಅಲ್ಲಲ್ಲಿದ್ದು ಸುಖವಾಗಿ ಕಾಲವನ್ನು ಕಳೆಯುತ್ತಿರಲು, ಇದೇ ರೀತಿಯಲ್ಲಿ [1]ಹತ್ತು ವರ್ಷಗಳು ಕಳೆದುಹೋದುವು. ಹೀಗೆ ರಾಮನು ಸೀತಾಸಹಿತನಾಗಿ ಅಲ್ಲಲ್ಲಿ ಸುತ್ತುತ್ತಿದ್ದು, ಅಲ್ಲಿಂದ ಹಿಂತಿರುಗಿ ಸುತೀಕ್ಷ್ಣಾಶ್ರಮಕ್ಕೆ ಬಂದನು. ಅಲ್ಲಿ ಸಮಸ್ತ ಋಷಿಗಳಿಂದಲೂ ಸತ್ಕರಿಸಲ್ಪಟ್ಟವನಾಗಿ, ಶತ್ರುನಾಶನದಲ್ಲಿಯೇ ನಿರತನಾಗಿದ್ದು, ಅಲ್ಲಿಯೂ ಕೆಲವು ಕಾಲದವರೆಗೆ ವಾಸಮಾಡುತ್ತಿದ್ದನು. ಹೀಗಿರುವಾಗ ಒಂದಾನೊಂದು ಕಾಲದಲ್ಲಿ ರಾಮನು ಸುತೀಕ್ಷ್ಣ ಮಹಾಮುನಿಯ ಬಳಿಗೆ ಬಂದು, ವಿನಯದಿಂದ ಆ ಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ! ಪೂಜ್ಯನಾದ ಅಗಸ್ತ್ಯಮುನಿಯು ಈ ಅರಣ್ಯದಲ್ಲಿಯೇ ವಾಸಮಾಡುತ್ತಿರುವುದಾಗಿ ನಾನು ಆಗಾಗ ಅನೇಕ ಜನರ ಬಾಯಿಂದ ಕೇಳಿರುವೆನು. ಈ ಅರಣ್ಯವು ಅತಿವಿಸ್ತಾರವಾಗಿರುವುದರಿಂದ ಆ ಪ್ರದೇಶವು ಎಲ್ಲಿರುವುದೋ ನನಗೆ ತಿಳಿಯಲಿಲ್ಲ. ಆ ಮಹರ್ಷಿಯ ಪುಣ್ಯಾಶ್ರಮ

---

1. ಮೇಲೆ ಕಾಣಿಸಿರುವ ತಿಂಗಳುಗಳನ್ನು ಕ್ರಮವಾಗಿ ಎಣಿಸಿದರೆ, ಅರುವತ್ತು ತಿಂಗಳುಗಳಾಗುವುವು. ಎಂದರೆ ಐದು ವರ್ಷಗಳಾಗುವುವು. ಚಿತ್ರಕೂಟದಲ್ಲಿ ಕಳೆದ ಐದು ವರ್ಷಗಳನ್ನು ಸೇರಿಸಿಕೊಂಡರೆ, ಇದುವರೆಗೆ ಹತ್ತು ವರ್ಷಗಳಾದುವೆಂದು ಗ್ರಾಹ್ಯವು. ಇದಕ್ಕೆ ಹಿಂದುಮುಂದಿನ ಕಾಲಪ್ರಮಾಣವು ಮೇಲಿನ ಕಾಂಡದಲ್ಲಿ ವ್ಯಕ್ತವಾಗುವುದು.

ವಿರತಕ್ಕ ಸ್ಥಳವನ್ನು ನನಗೆ ತಿಳಿಸಬೇಕು. ನೀನು ನನ್ನಲ್ಲಿ ಅನುಗ್ರಹಿಸಿ ಈ ವಿಷಯುವನ್ನು ತಿಳಿಸಿದರೆ, ನಾನು ಸೀತಾಲಕ್ಷ್ಮಣರೊಡಗೂಡಿ ಪೂಜ್ಯನಾದ ಆ ಅಗಸ್ತ್ಯಮಹರ್ಷಿಯನ್ನು ಕಂಡು ನಮಸ್ಕರಿಸಿ ಬರುವೆನು. ಆ ಮಹರ್ಷಿಯನ್ನು ದರ್ಶನಮಾಡಿ ಆತನ ಸೇವೆಯನ್ನು ಮಾಡಿ ಬರಬೇಕೆಂದು ನಮಗೆ ಬಹಳ ಕುತೂಹಲವಿರುವುದು" ಎಂದು ಕೇಳಿದನು. ಧರ್ಮಾತ್ಮನಾದ ರಾಮನು ಹೀಗೆ ಪ್ರಾರ್ಥಿಸುತ್ತಿರುವುದನ್ನು ನೋಡಿ ಸುತೀಕ್ಷ್ಣಮಹಾಮುನಿಯು ಪರಮ ಸಂತುಷ್ಟನಾಗಿ "ವತ್ಸ ರಾಮನೆ! ನಾನೂ ಸೀತಾಲಕ್ಷ್ಮಣರೊಡಗೂಡಿದ ನಿನಗೆ ಈ ವಿಷಯುವನ್ನೇ ಹೇಳಬೇಕೆಂದುದ್ದೇಶಿಸಿದ್ದೆನು. ಈಗ ನೀನೇ ಈ ವಿಷಯವನ್ನು ದೈವಿಕವಾಗಿ ನನ್ನನ್ನು ಕೇಳಿದೆ. ಅಗಸ್ತ್ಯಮಹಾಮುನಿಯು ವಾಸಮಾಡುವ ಸ್ಥಳವನ್ನು ಅವಶ್ಯವಾಗಿ ತಿಳಿಸುವೆನು ಇದೋ! ಇಲ್ಲಿಂದ ದಕ್ಷಿಣಾಭಿಮುಖವಾಗಿ ಹೋಗು. ಇಲ್ಲಿಗೆ ನಾಲ್ಕು ಗಾವುದಗಳ ದೂರದಲ್ಲಿ ಅಗಸ್ತ್ಯನ ತಮ್ಮನಾದ ಸುದರ್ಶನನೆಂಬ ಮಹರ್ಷಿಯ ಆಶ್ರಮವಿರುವುದು. ಆ ಆಶ್ರಮವು ಬಹಳ ವಿಸ್ತಾರವಾಗಿರುವುದು. ಅದೊಂದು ದೊಡ್ಡ ಮೈದಾನವಾಗಿರುವುದು. ಅಲ್ಲಿ ಪುಷ್ಪಫಲಗಳು ಸಮೃದ್ಧವಾಗಿರುವುವು. ಬಗೆಬಗೆಯಾದ ಹಕ್ಕಿಗಳು ಯಾವಾಗಲೂ ಕಿವಿಗಿಂಪಾಗಿ ಕೂಗುತ್ತಿರುವುವು. ಅಲ್ಲಲ್ಲಿ ಹಿಪ್ಪಲೀ ಗಿಡಗಳು ದಟ್ಟವಾಗಿ ತುಂಬಿರುವುವು. ತಿಳಿನೀರಿನಿಂದ ಕೂಡಿದ ತಾವರೆ ಕೊಳಗಳು ಅನೇಕವಾಗಿರುವುವು. ಆ ಕೊಳಗಳಲ್ಲಿ ಹಂಸಕಾರಂಡವಾದಿ ಜಲಚರಪಕ್ಷಿಗಳು, ಚಕ್ರವಾಕಗಳೂ ಹೇರಳವಾಗಿ ತುಂಬಿ ನೋಡುವವರಿಗೆ ಅತ್ಯಾನಂದವನ್ನುಂಟುಮಾಡುವುವು. ಅಲ್ಲಿ ಒಂದು ರಾತ್ರಿಯಿದ್ದು ಬೆಳಗಾದಮೇಲೆ ಎದ್ದು ಮುಂದಕ್ಕೆ ಪ್ರಯಾಣಮಾಡು! ಆ ಆಶ್ರಮಕ್ಕೆ ದಕ್ಷಿಣದಲ್ಲಿ ಒಂದು ವನಸಮೂಹವಿರುವುದು. ಅದರ ಪಕ್ಕದ ದಾರಿಯನ್ನೇ ಹಿಡಿದು ಒಂದು ಗಾವುದದ ದೂರದವರೆಗೆ ಹೋದರೆ ಅಗಸ್ತ್ಯಾಶ್ರಮವು ಸಿಕ್ಕುವುದು. ಅನೇಕ ವೃಕ್ಷಗಳಿಂದ ತುಂಬಿ ರಮಣೀಯವಾದ ಒಂದು ವನಪ್ರದೇಶದಲ್ಲಿ ಆ ಆಶ್ರಮವಿರುವುದು. ಅಲ್ಲಿ ನೀನೂ, ಸೀತಾಲಕ್ಷ್ಮಣರೂ ಬಹುವಿನೋದದಿಂದಿರಬಹುದು. ಆ ವನಪ್ರದೇಶವು ಬಹು ರಮಣೀಯವಾಗಿರುವುದು. ಅದರಲ್ಲಿ ಸಮಸ್ತ ವಿಧವಾದ ವೃಕ್ಷಗಳೂ ಇರುವುವು. ನಿನಗೆ ಅಗಸ್ತ್ಯಮಹಾಮುನಿಯನ್ನು ನೋಡಬೇಕೆಂಬ ಸದುದ್ದೇಶವು ಹುಟ್ಟಿರುವ ಪಕ್ಷದಲ್ಲಿ ಈಗಲೇ ಇಲ್ಲಿಂದ ಹೊರಡುವುದಕ್ಕೆ ಪ್ರಯತ್ನಿಸು" ಎಂದನು.

*

ಹೀಗೆ ಸುತೀಕ್ಷ್ಣನು ಹೇಳಿದ ಮಾತನ್ನು ಕೇಳಿ, ರಾಮನು ಲಕ್ಷ್ಮಣಸಹಿತನಾಗಿ ಆತನಿಗೆ ನಮಸ್ಕರಿಸಿ, ಆಗಲೇ ಸೀತೆಯನ್ನು ಕರೆದುಕೊಂಡು ಅಗಸ್ತ್ಯಾಶ್ರಮದ ಕಡೆಗೆ ಹೊರಟನು. ದಾರಿಯಲ್ಲಿ ರಮಣೀಯವಾದ ವನಗಳನ್ನೂ ಮೇಘಪಂಕ್ತಿಯಂತಿರುವ ಪರ್ವತಗಳನ್ನೂ, ಕೊಳಗಳನ್ನೂ, ಪುಣ್ಯನದಿಗಳನ್ನೂ ನೋಡುತ್ತ, ಸುತೀಕ್ಷ್ಣನು ಹೇಳಿದ ಮಾರ್ಗವನ್ನೇ ಹಿಡಿದು ಸುಖವಾಗಿ ಪ್ರಯಾಣಮಾಡುತ್ತಿದ್ದನು. ಹೀಗೆ ಪ್ರಯಾಣಮಾಡಿದಮೇಲೆ ರಾಮನು ಮುಂದೆ ನೋಡಿ, ಸಂತೋಷದಿಂದ ಲಕ್ಷ್ಮಣನನ್ನು ಕುರಿತು "ವತ್ಸ ಲಕ್ಷ್ಮಣನೆ! ಮಹಾತ್ಮನಾಗಿಯೂ, ಪುಣ್ಯಕರ್ಮವುಳ್ಳವನಾಗಿಯೂ ಇರುವ ಅಗಸ್ತ್ಯಭ್ರಾತೃವಾದ ಸುದರ್ಶನನ ಆಶ್ರಮವು ಇದೋ! ಇಲ್ಲಿಯೇ ಕಾಣುತ್ತಿರುವುದು. ಇದರಲ್ಲಿ ಸಂದೇಹವಿಲ್ಲ. ಸುತೀಕ್ಷ್ಣನು ನಮಗೆ ಹೇಳಿದ ಗುರುತುಗಳೆಲ್ಲವೂ ಕಾಣುವುವು ನೋಡು. ದಾರಿಯಲ್ಲಿ ಪುಷ್ಪಫಲಸಮೃದ್ಧಿಯಿಂದ ಜಗ್ಗಿರುವ ಅನೇಕ ವೃಕ್ಷಗಳು ಅಲ್ಲಲ್ಲಿ ಕಾಣುತ್ತಿರುವುವು. ಇದೋ ಈ ಕಡೆಯಿಂದ ಚೆನ್ನಾಗಿ ಪಕ್ವವಾದ ಹಿಪ್ಪಲೀ ಗಿಡದ ಹಣ್ಣುಗಳ ಒಗರು ವಾಸನೆಯು ಗಾಳಿಯಲ್ಲಿ ಕಲೆತು ಬರುತ್ತಿರುವುದು. ಅಲ್ಲಲ್ಲಿ ಅಡಕಿಟ್ಟಿರುವ ಸೌದೆಯ ರಾಶಿಗಳೂ ಕಾಣುತ್ತಿರುವುವು. ಅಲ್ಲಲ್ಲಿ ಋಷಿಗಳು ಕುಯ್ದಿಟ್ಟಿರುವ ದರ್ಭೆಯ ತುಂಡುಗಳು ದಾರಿಯಲ್ಲಿ ವೈಡೂರ್ಯದಂತೆ ಥಳಥಳಿಸುತ್ತಿರುವುದನ್ನು ನೋಡಿದೆಯಾ? ಇದೋ ಈ ವನಮಧ್ಯದಿಂದ ಅಗ್ನಿಹೋತ್ರದ ಧೂಮಪರಂಪರೆಯು ಕಪ್ಪಾದ ಮೇಘಗಳಂತೆ ಹೊರಟು ಬರುವುದನ್ನು ನೋಡು. ಬ್ರಾಹ್ಮಣರು ಅಲ್ಲಲ್ಲಿ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ತಮ್ಮ ಕೈಯಿಂದಲೇ ಹೂಗಳನ್ನು ಕೊಯ್ದು ತಂದು ಪುಷ್ಪಬಲಿಯನ್ನು ನಡೆಸುತ್ತಿರುವರು. ವತ್ಸಲಕ್ಷ್ಮಣಾ! ಸುತೀಕ್ಷ್ಣನು ನಮಗೆ ತಿಳಿಸಿದ ಗುರುತುಗಳೆಲ್ಲವೂ ಕ್ರಮವಾಗಿ ಇಲ್ಲಿ ಕಾಣಿಸುತ್ತಿರುವುದರಿಂದ, ಇದೇ ಅಗಸ್ತ್ಯಭ್ರಾತೃವಿನ ಪುಣ್ಯಾಶ್ರಮವೆಂದು ಸ್ಪಷ್ಟವಾಗಿ ನಿಶ್ಚಯಿಸಬಹುದು. ಈ ಮಹರ್ಷಿಯ ಅಣ್ಣನಾದ ಅಗಸ್ತ್ಯನು ಲೋಕಹಿತಾರ್ಥವಾಗಿ ತನ್ನ ತಪೋಮಹಿಮೆಯಿಂದ ಮಾಡಿದ ಅಸಾಧ್ಯಕಾರ್ಯವನ್ನು ಕೇಳಿಬಲ್ಲೆಯಾ? ಇಲ್ವಲವಾತಾಪಿಗಳೆಂಬ ರಾಕ್ಷಸರಿಂದ ತನಗುಂಟಾದ ಮೃತ್ಯುವನ್ನು ತಪ್ಪಿಸಿಕೊಂಡು, ಅವರನ್ನು ನಿರ್ಮೂಲಮಾಡಿ, ಈ ದಕ್ಷಿಣದಿಕ್ಕನ್ನು ತನಗೆ ವಾಸಯೋಗ್ಯವನ್ನಾಗಿ ಮಾಡಿಕೊಂಡನು. ಆ ಕಥೆಯನ್ನು ವಿಸ್ತಾರವಾಗಿ ನಿನಗೆ ತಿಳಿಸುವೆನು ಕೇಳು. ಮೊದಲು ಒಂದಾನೊಂದು

ಕಾಲದಲ್ಲಿ ಇಲ್ವಲವಾತಾಪಿಗಳೆಂಬ ಇಬ್ಬರು ಅಣ್ಣತಮ್ಮಂದಿರಿರುತ್ತಿದ್ದರು. ಅವರಿಬ್ಬರೂ ರಾಕ್ಷಸರು ಬ್ರಾಹ್ಮಣರನ್ನು ಕೊಲ್ಲುವುದೇ ಅವರ ವೃತ್ತಿಯಾಗಿತ್ತು. ಅವರಿಬ್ಬರೂ ಯಾವಾಗಲೂ ಒಂದಾಗಿಯೇ ಸೇರಿರುವರು. ಅವರಲ್ಲಿ ನಿರ್ಘೃಣನಾದ ಇಲ್ವಲನೆಂಬುವನು ಮಾಯೆಯಿಂದ ಬ್ರಾಹ್ಮಣರೂಪವನ್ನು ಧರಿಸಿ. ಸಂಸ್ಕೃತಭಾಷೆಯಿಂದಲೇ ಮಾತನಾಡುತ್ತ, ತಾನು ಶ್ರಾದ್ಧವನ್ನು ನಡೆಸುವುದಾಗಿ ಹೇಳಿ, ಕಂಡಕಂಡ ಬ್ರಾಹ್ಮಣರನ್ನೆಲ್ಲಾ ನಿಮಂತ್ರಣಕ್ಕೆ ಕರೆಯುತ್ತಿದ್ದನು. ಅಭ್ಯಾಗತರಾಗಿ ಬಂದ ಆ ಬ್ರಾಹ್ಮಣರನ್ನು ವಂಚಿಸುವುದಕ್ಕಾಗಿ, ಮನೆಯಲ್ಲಿ ಮೇಕೆಯ ರೂಪದಿಂದಿದ್ದ ತನ್ನ ತಮ್ಮನಾದ ವಾತಾಪಿಯನ್ನು ಕುಯ್ದು, ಆತನ ಮಾಂಸವನ್ನು ಪಚನಮಾಡಿ ಶಾಸ್ತ್ರರೀತಿಯಿಂದಲೇ ಶ್ರಾದ್ಧಕಾರ್ಯಗಳೆಲ್ಲವನ್ನೂ ನಡೆಸಿ, ಆಯಾ ಬ್ರಾಹ್ಮಣರಿಗೆ ಭೋಜನವನ್ನಿಡುತ್ತಿದ್ದನು. ಆಮೇಲೆ ಬ್ರಾಹ್ಮಣರು ಭೋಜನದಿಂದ ತೃಪ್ತರಾಗಿ ಕುಳಿತಿರುವಾಗ, ಇಲ್ವಲನು ಅವರ ಮುಂದೆ ನಿಂತು " ವಾತಾಪೀ ! ಹೊರಕ್ಕೆ ಬಾ ! " ಎಂದು ಹೆಸರುಹಿಡಿದು ಗಟ್ಟಿಯಾಗಿ ಕೂಗುತ್ತಿದ್ದನು. ಇಲ್ವಲನು ಹೀಗೆ ಕೂಗಿದೊಡನೆಯೇ ವಾತಾಪಿಯು ಮೇಕೆಯಂತೆ ಅರಚುತ್ತ ಆಯಾ ಬ್ರಾಹ್ಮಣರ ಶರೀರವನ್ನು ಭೇದಿಸಿಕೊಂಡು ಹೊರಕ್ಕೆ ಬರುತ್ತಿದ್ದನು. ಕಾಮರೂಪಿಗಳಾಗಿಯೂ ಮಾಂಸಾಹಾರಿಗಳಾಗಿಯೂ ಇರುವ ಆ ರಾಕ್ಷಸರಿಬ್ಬರೂ ಸೇರಿ ಹೀಗೆ ನಿತ್ಯವೂ ಸಾವಿರಾರು ಮಂದಿ ಬ್ರಾಹ್ಮಣರನ್ನು ಕೊಲ್ಲುತ್ತಿದ್ದರು. ಆಗ ದೇವತೆಗಳೆಲ್ಲರೂ ಅಗಸ್ತ್ಯನ ಬಳಿಗೆ ಬಂದು ಪ್ರಾರ್ಥಿಸಲು, ಆ ಮಹರ್ಷಿಯು ಒಮ್ಮೆ ಇಲ್ವಲನ ನಿಮಂತ್ರಣಕ್ಕೊಪ್ಪಿ ಬಂದು, ಎಂದಿನಂತೆ ಶ್ರಾದ್ಧದಲ್ಲಿ ವಾತಾಪಿಯ ಮಾಂಸವನ್ನು ಭಕ್ಷಿಸಿದನು. ಹೀಗೆ ಶ್ರಾದ್ಧಕಾರ್ಯಗಳೆಲ್ಲವೂ ಮುಗಿದಮೇಲೆ, ಇಲ್ವಲನು ಅಗಸ್ತ್ಯನನ್ನು ಕುರಿತು, " ನಿನಗೆ ತೃಪ್ತಿಯುಂಟಾಯಿತೇ ? " ಎಂದು ಕೇಳಿ, ಆತನಿಗೆ ಉತ್ತರಾಪೋಶನವನ್ನು ಕೊಟ್ಟಮೇಲೆ, ಎಂದಿನಂತೆ ಕ್ರಮವಾಗಿ " ವಾತಾಪೀ ! ಹೊರಕ್ಕೆ ಬಾ ! " ಎಂದು ಕರೆದನು. ಇಷ್ಟರಲ್ಲಿ ಮಹಾಧೀಮಂತನಾದ ಅಗಸ್ತ್ಯನು, ಹೀಗೆ ತನ್ನ ತಮ್ಮನನ್ನು ಕರೆಯುತ್ತಿರುವ ಬ್ರಾಹ್ಮಣಘಾತುಕನಾದ ಇಲ್ವಲನನ್ನು ನೋಡಿ ನಗುತ್ತ " ಎಲೆ ನೀಚನೆ ! ಇನ್ನು ತಮ್ಮನಾದ ಆ ರಾಕ್ಷಸನು ಹೊರಕ್ಕೆ ಬರುವುದೆಂದರೇನು ? ಆತನಿಗೆ ಶಕ್ತಿಯೆಲ್ಲಿಯದು ? ಮೇಕೆಯ ರೂಪವನ್ನು ಧರಿಸಿದ್ದ ಆತನು ಆಗಲೇ ನನ್ನ ಜಠರಾಗ್ನಿಯಿಂದ ಜೀರ್ಣನಾಗಿ, ಇಷ್ಟರಲ್ಲಿ ಯಮನ

ಪಟ್ಟಣವನ್ನು ಸೇರಿರುವನು" ಎಂದನು. ಆಗ ಇಲ್ವಲನು ತನ್ನ ತಮ್ಮನಾದ ವಾತಾಪಿಯು ಮರಣಹೊಂದಿದನೆಂಬ ವಾರ್ತೆಯನ್ನು ಕೇಳಿ, ಬಹುಕೋಪದಿಂದ ಅಗಸ್ತ್ಯಮುನಿಯಮೇಲೆ ಬಿದ್ದು ಹಿಂಸಿಸಲಾರಂಭಿಸಿದನು. ಹೀಗೆ ರಾಕ್ಷಸನು ಅಗಸ್ತ್ಯನ ಮೇಲೆ ಬೀಳುವುದಕ್ಕೆ ಬರಲು, ಮಹಾತೇಜಸ್ವಿಯಾದ ಆ ಋಷಿಯು, ಬೆಂಕಿಯಂತೆ ಉರಿಯುತ್ತಿರುವ ತನ್ನ ಕಣ್ಣಿನಿಂದಲೇ ಆತನನ್ನು ಭಸ್ಮಮಾಡಿದನು. ಲೋಕಕಂಟಕರಾದ ಇಲ್ವಲ ವಾತಾಪಿಗಳಿಬ್ಬರೂ ಹೀಗೆ ಆ ಮಹಾತ್ಮನಿಂದ ಸಂಹರಿಸಲ್ಪಟ್ಟರು. ಬ್ರಾಹ್ಮಣರಕ್ಷಣೆಗಾಗಿ ಹೀಗೆ ದುಷ್ಕರಕಾರ್ಯವನ್ನು ನಡೆಸಿದ ಮಹಾಮಹಿಮೆಯುಳ್ಳ ಆ ಅಗಸ್ತ್ಯಮುನಿಯ ತಮ್ಮನೇ ಇಲ್ಲಿರುವನು. ಕೆರೆಗಳಿಂದಲೂ, ತೋಟಗಳಿಂದಲೂ ಮನೋಹರವಾದ ಈ ಪ್ರದೇಶವೇ ಆ ಅಗಸ್ತ್ಯಭ್ರಾತೃವಿನ ಪುಣ್ಯಾಶ್ರಮವು" ಎಂದನು. ಹೀಗೆ ರಾಮನು ಲಕ್ಷ್ಮಣನಿಗೆ ಕಥೆಯನ್ನು ಹೇಳಿ ಮುಗಿಸುವಷ್ಟರಲ್ಲಿಯೇ ಸೂರ್ಯನು ಅಸ್ತಂಗತನಾದನು. ಸಂಧ್ಯಾಕಾಲವೂ ಪ್ರಾಪ್ತವಾಯಿತು. ಆಗ ರಾಮನು ಲಕ್ಷ್ಮಣನೊಡನೆ ಆಗಿನ ಸಂಧ್ಯಾವಂದನಾದಿ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನಡೆಸಿ, ಆ ಆಶ್ರಮದೊಳಗೆ ಪ್ರವೇಶಿಸಿ ಅಲ್ಲಿದ್ದ ಮಹರ್ಷಿಗೆ ನಮಸ್ಕರಿಸಿದನು. ಆ ಋಷಿಯೂ ಇವರನ್ನು ಯಥೋಚಿತವಾಗಿ ಸತ್ಕರಿಸಿ, ಇವರ ಭೋಜನಾರ್ಥವಾಗಿ ಫಲಮೂಲಗಳನ್ನು ತಂದಿಡಲು, ಸೀತಾರಾಮಲಕ್ಷ್ಮಣರು ಮೂವರೂ ಅವುಗಳನ್ನು ಭುಜಿಸಿ ಆ ರಾತ್ರಿಯಲ್ಲಿ ಅಲ್ಲಿಯೇ ವಾಸಮಾಡುತ್ತಿದ್ದರು. ರಾತ್ರಿಯು ಕಳೆದು ಚೆನ್ನಾಗಿ ಸೂರ್ಯೋದಯವಾದಮೇಲೆ, ರಾಮನು ಅಗಸ್ತ್ಯನ ತಮ್ಮನಾದ ಆ ಮಹರ್ಷಿಯ ಬಳಿಗೆ ಬಂದು, ಮುಂದಿನ ಪ್ರಯಾಣಕ್ಕೆ ಆತನ ಅನುಜ್ಞೆಯನ್ನು ಪ್ರಾರ್ಥಿಸುತ್ತ "ಎಲೈ ಪೂಜ್ಯನೆ! ನಿನಗೆ ನಮಸ್ಕರಿಸುವೆನು. ನಿನ್ನೆಯ ರಾತ್ರಿಯನ್ನು ಇಲ್ಲಿ ಸುಖವಾಗಿ ಕಳೆದೆವು. ನಿನಗೆ ಅಣ್ಣನಾಗಿಯೂ ಗುರುವಾಗಿಯೂ ಇರುವ ಪೂಜ್ಯನಾದ ಅಗಸ್ತ್ಯಮುನಿಯನ್ನು ನೋಡುವುದಕ್ಕೆ ಹೋಗುವೆನು. ಅನುಜ್ಞೆಯನ್ನು ಕೊಡಬೇಕು" ಎಂದನು. ಆಗ ಋಷಿಯು ಹೋಗಿಬಾರೆಂದು ಅನುಜ್ಞೆಯನ್ನು ಕೊಡಲು, ರಾಮನು ಅಲ್ಲಿಂದ ಹೊರಟು, ದಾರಿಯಲ್ಲಿರುವ ವನಗಳ ರಾಮಣೀಯಕವನ್ನು ನೋಡುತ್ತ ಸುತೀಕ್ಷ್ಣನು ಹೇಳಿದ್ದ ದಾರಿಯನ್ನೇ ಹಿಡಿದು ಹೋದನು. ಅಲ್ಲಲ್ಲಿ ಕಡವು, ಪಗಡೆ, ಹಲಸು, ತಾಳೆ, ತಿಮಿರ, ಚಿರಿಬಿಲ್ವ, ಬೇವು, ಬಿಲ್ವ, ತಿಂದುಕ ಮೊದಲಾದ ಬಗೆಬಗೆಯ ವೃಕ್ಷಗಳನ್ನೂ ಅವುಗಳಲ್ಲಿರುವ

ಪುಷ್ಪಸಮೃದ್ಧಿಯನ್ನೂ, ಆ ಮರಗಳಿಗೆ ಸುತ್ತಿಕೊಂಡು ಬೆಳೆದಿರುವ ಪುಷ್ಪಿತ ಗಳಾದ ಲತೆಗಳನ್ನೂ ನೋಡುತ್ತ ಹೋದನು. ಇಂತಹ ಕಾಡುಮರಗಳು ಅಲ್ಲಲ್ಲಿ ಸಾವಿರಾರು ಸಂಖ್ಯೆಯಿಂದ ದಟ್ಟವಾಗಿ ತುಂಬಿದ್ದವು. ಅಲ್ಲಲ್ಲಿ ಆನೆಗಳು ತಮ್ಮ ಸೊಂಡಿಲುಗಳಿಂದ ಮುರಿದುಹಾಕಿದ ಮರಗಳ ಶಾಖೆಗಳು ಕಾಣು ತ್ತಿದ್ದುವು. ಅಲ್ಲಲ್ಲಿ ಕಪಿಗಳು ಮರದಿಂದ ಮರಕ್ಕೆ ಹಾರಿ ವಿನೋದಿಸುತ್ತಿದ್ದುವು. ಮದಿಸಿದ ಪಕ್ಷಿಗಳು ಅಲ್ಲಲ್ಲಿ ಗುಂಪುಗುಂಪಾಗಿ ಕಲಕಲ ಧ್ವನಿಯನ್ನು ಮಾಡು ತ್ತಿದ್ದುವು. ಆಗ ರಾಮನು ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ವೀರನಾದ ಲಕ್ಷ್ಮಣ ನನ್ನು ತನ್ನ ಸಮೀಪಕ್ಕೆ ಕರೆದು "ವತ್ಸ ಲಕ್ಷ್ಮಣನೆ! ಇದೋ ನೋಡು! ಈ ವೃಕ್ಷಗಳೆಲ್ಲವೂ ಉಲ್ಲಾಸದಿಂದ ಬೆಳೆದು ಹಸುರೆಲೆಗಳಿಂದ ತುಂಬಿರುವುದನ್ನೂ, ಈ ಕಾಡಿನ ಮೃಗಪಕ್ಷಿಗಳೆಲ್ಲವೂ ತಮ್ಮ ಕ್ರೂರಸ್ವಭಾವವನ್ನು ಬಿಟ್ಟು ಶಾಂತವಾ ಗಿರುವುದನ್ನೂ ನೋಡಿದರೆ, ಪರಮಾತ್ಮಧ್ಯಾನರೂಪನಾದ ಆ ಅಗಸ್ತ್ಯಮುನಿಯ ಆಶ್ರಮವು ಇಲ್ಲಿಗೆ ಸಮೀಪದಲ್ಲಿಯೇ ಇರುವುದೆಂದು ತೋರುವುದು. ಯಾವನು ವಿಂಧ್ಯಪರ್ವತವನ್ನು ತನ್ನ ಆಜ್ಞೆಯಿಂದ ಸ್ತಂಭಿಸಿಟ್ಟು ಆ ಅಸಾಧ್ಯ ಕಾರ್ಯ ದಿಂದಲೇ ಅಗಸ್ತ್ಯನೆಂದು ಲೋಕದಲ್ಲಿ ಪ್ರಸಿದ್ಧನಾದನೋ, ಆ ಮಹರ್ಷಿಯ ಪುಣ್ಯಾಶ್ರಮವು ಇದೋ ಇಲ್ಲಿಯೇ ಕಾಣುತ್ತಿರುವುದು. ದಾರಿ ನಡೆದುಬಂದುದ ರಿಂದುಂಟಾದ ಆಯಾಸವೆಲ್ಲವೂ ಇದರ ದರ್ಶನಮಾತ್ರದಿಂದಲೇ ಪರಿಹಾರವಾಗು ವುದು. ಅಲ್ಲಲ್ಲಿ ಹೋಮಾಗ್ನಿಯ ಹೊಗೆಯೂ ಹೊರಡುತ್ತಿರುವುದು. ಅಲ್ಲಲ್ಲಿ ನಾರುಮಡಿಗಳು ಸಾಲುಸಾಲಾಗಿ ಆರಹಾಕಲ್ಪಟ್ಟಿರುವುವು. ಶಾಂತವಾದ ಮೃಗ ಸಮೂಹವೂ, ಬಗೆಬಗೆಯಾದ ಪಕ್ಷಿಗಳ ಧ್ವನಿಯೂ ಮನಸ್ಸಿಗೆ ಎಷ್ಟೋ ಹರ್ಷ ವನ್ನುಂಟುಮಾಡುತ್ತಿರುವುವು. ಈ ಮಹರ್ಷಿಯ ಪ್ರಭಾವದಿಂದ ರಾಕ್ಷಸರು ಈ ದಿಕ್ಕನ್ನು ನೋಡುವುದಕ್ಕೂ ಭಯಪಡುವರು. ಮೊದಲಿನಂತೆ ನಿರ್ಭಯ ವಾಗಿ ಈ ಕಡೆಯಲ್ಲಿ ಸ್ವೇಚ್ಛೆಯಿಂದ ವಿಹರಿಸಲಾರರು. ಪುಣ್ಯಾತ್ಮನಾದ ಈ ಮಹರ್ಷಿಯು ಈ ದಿಕ್ಕಿಗೆ ಕಾಲಿಟ್ಟುದು ಮೊದಲು ರಾಕ್ಷಸರು ಋಷಿಗಳ ಮೇಲಿನ ದ್ವೇಷವನ್ನೇ ಬಿಟ್ಟು ಶಾಂತರಾಗಿರುವರು. ಮತ್ತು ಎಲೈ ವತ್ಸಳೆ! ಈ ದಕ್ಷಿಣ ದಿಕ್ಕು ಪೂಜ್ಯನಾದ ಈ ಅಗಸ್ತ್ಯಮುನಿಯ ಪ್ರಭಾವದಿಂದಲೇ ಅಗಸ್ತ್ಯದಿಕ್ಕೆಂಬು ದಾಗಿ ಪ್ರಸಿದ್ಧಿಹೊಂದಿ ಕ್ರೂರರಾಕ್ಷಸರಿಗೆ ದುರ್ಗಮವಾಗಿ ಲೋಕದಲ್ಲಿ ಪ್ರಖ್ಯಾತಿ ಹೊಂದಿರುವುದು. ಈ ಅಗಸ್ತ್ಯಮುನಿಯ ಮತ್ತೊಂದು ಮಹಿಮೆಯನ್ನು ಹೇಳುವೆನು

ಕೇಳು. ಮೊದಲು ಪರ್ವತರಾಜನಾದ ವಿಂಧ್ಯವು, ಸೂರ್ಯನ ಗತಿಯನ್ನು ತಡೆಯಬೇಕೆಂದು ಪ್ರಯತ್ನಿಸಿ ಈ ಮಹರ್ಷಿಯ ಆಜ್ಞೆಯನ್ನು ಮೀರಲಾರದೆ, ಮುಂದಕ್ಕೆ ಬೆಳೆಯದೆ, ಈಗಲೂ ಹಾಗೆಯೇ ಇರುತ್ತಿರುವುದು. ಹೀಗೆ ಲೋಕ ವಿಖ್ಯಾತನಾದ ಮಹಿಮೆಯುಳ್ಳ ಮತ್ತು ದೀರ್ಘಾಯುಷ್ಮಂತನಾದ ಅಗಸ್ತ್ಯನ ಆಶ್ರಮವೇ ಇದು. ಶಾಂತರಾದ ಮುನಿಜನಗಳಿಂದ ಸೇವಿತವಾಗಿಯೂ, ಬ್ರಹ್ಮ ಸಂಪತ್ತಿನಿಂದ ಕೂಡಿದುದಾಗಿಯೂ ಇರುವ ಈ ಆಶ್ರಮದಲ್ಲಿ ಸಮಸ್ತ ಲೋಕ ಗಳಿಂದಲೂ ಪೂಜಿಸಲ್ಪಟ್ಟವನಾಗಿಯೂ, ಸಾಧುವಾಗಿಯೂ, ಸತ್ಪುರುಷರಿಗೆ ಹಿತಕರನಾಗಿಯೂ ಇರುವ ಆ ಅಗಸ್ತ್ಯನು ವಾಸಮಾಡುತ್ತಿರುವನು. ನಾವು ಆತನ ಬಳಿಗೆ ಹೋಗಿ ದರ್ಶನಮಾಡಿದರೆ,ನಮಗೆ ಅನೇಕ ವಿಧದಲ್ಲಿ ಶ್ರೇಯಸ್ಸುಂಟು. ವತ್ಸ ಲಕ್ಷ್ಮಣನೆ ! ಇಲ್ಲಿ ನಿತ್ಯವೂ ದೇವತೆಗಳೂ, ಗಂಧರ್ವರೂ, ಸಿದ್ಧರೂ, ದೇವರ್ಷಿಗಳೂ ಬಂದು ನಿಯತಾಹಾರನಾಗಿ ತಪಸ್ಸುಮಾಡುತ್ತಿರುವ ಈ ಅಗಸ್ತ್ಯ ಮುನಿಯನ್ನು ಪೂಜಿಸುತ್ತಿರುವರು. ಈ ಪುಣ್ಯಾಶ್ರಮದಲ್ಲಿ ಸುಳ್ಳಾಡುವವ ನಾಗಲಿ, ಕ್ರೂರನಾಗಲಿ, ವಂಚಕನಾಗಲಿ, ಘಾತುಕನಾಗಲಿ, ಶಾಸ್ತ್ರನಿಯಮ ವನ್ನು ಬಿಟ್ಟು ಸ್ವೇಚ್ಛೆಯಿಂದ ವರ್ತಿಸುವ ದುರಾಚಾರವುಳ್ಳವನಾಗಲಿ ಬದುಕ ಲಾರನು. ಈ ಅಗಸ್ತ್ಯಮಹರ್ಷಿಯ ಮಹಿಮೆಯು ಅಪಾರವಾದುದು. ಇಲ್ಲಿ ದೇವತೆಗಳೂ, ಯಕ್ಷರೂ, ನಾಗರೂ, ಪತಗರೂ ಕೂಡ ನಿಯತಾಹಾರವುಳ್ಳವ ರಾಗಿ ಧರ್ಮವನ್ನೇ ಹಿಡಿದು ವಾಸಮಾಡುತ್ತಿರುವರು. ಇಲ್ಲಿ ಮಹಾತ್ಮರನೇಕರು ತಪಸ್ಸುಮಾಡಿ ಸಿದ್ಧಿಯನ್ನು ಪಡೆದು, ಮನುಷ್ಯದೇಹವನ್ನು ಬಿಟ್ಟು, ನೂತನ ವಾದ ದಿವ್ಯದೇಹವನ್ನು ಹೊಂದಿ, ಸೂರ್ಯಸಮಾನವಾದ ವಿಮಾನಗಳನ್ನೇರಿ, ಸ್ವರ್ಗಕ್ಕೆ ಹೋಗಿರುವರು. ದೇವತೆಗಳು ಈ ಆಶ್ರಮದಲ್ಲಿ ತಮ್ಮನ್ನಾರಾಧಿಸಿ ದವರಿಗೆ ಯಕ್ಷಸ್ವರೂಪವನ್ನೂ, ದೇವತಾಸ್ವರೂಪವನ್ನೂ ಅನೇಕ ರಾಜ್ಯಾಧಿ ಪತ್ಯವನ್ನೂ ಆಗಾಗಲೇ ಅನುಗ್ರಹಿಸಿಕೊಡುವರು. ವತ್ಸ ಲಕ್ಷ್ಮಣನೆ! ನಾವು ಈಗ ಅಗಸ್ತ್ಯಾಶ್ರಮವನ್ನು ಸೇರಿಬಿಟ್ಟೆವು. ನೀನು ಮುಂದೆ ಹೋಗಿ ಸೀತಾಸಮೇತನಾಗಿ ನಾನು ಬಂದಿರುವ ವಿಷಯವನ್ನು ಆ ಮಹರ್ಷಿಗೆ ತಿಳಿಸು" ಎಂದನು.

ಇಲ್ಲಿಗೆ ಹನ್ನೊಂದನೆಯ ಸರ್ಗವು

ಅಗಸ್ತ್ಯನು ಶಿಷ್ಯರನ್ನು ಕಳುಹಿಸಿ, ರಾಮನನ್ನು ಕರೆಸಿಕೊಂಡು, ಅವನಿಗೆ ಅತಿಥಿಸತ್ಕಾರಗಳನ್ನು ನಡೆಸಿ, ವೈಷ್ಣವಧನುಸ್ಸನ್ನೂ, ಬಾಣಬತ್ತಳಿಕೆ ಗಳನ್ನೂ ರಾಮನಿಗೆ ಅನುಗ್ರಹಿಸಿಕೊಟ್ಟನು.

ಲಕ್ಷ್ಮಣನು ಆಶ್ರಮದೊಳಗೆ ಪ್ರವೇಶಿಸಿ, ಅಗಸ್ತ್ಯಮುನಿಯ ಶಿಷ್ಯ ನೊಬ್ಬನನ್ನು ಕಂಡು, "ಎಲೈ ತಪಸ್ವಿಯೇ! ದಶರಥನೆಂಬ ರಾಜನಿಗೆ ಜ್ಯೇಷ್ಠ ಕುಮಾರನಾದ ರಾಮನು ತನ್ನ ಪತ್ನಿಯಾದ ಸೀತೆಯೊಡನೆ ಬಂದಿರುವನು. ಆತನು ಅಗಸ್ತ್ಯಮಹರ್ಷಿಯನ್ನು ದರ್ಶನಮಾಡಬೇಕೆಂದು ಕಾದಿರುವನು. ನಾನು ಆತನ ತಮ್ಮನು. ನನಗೆ ಲಕ್ಷ್ಮಣನೆಂದು ಹೆಸರು. ನಾನು ಆ ನನ್ನ ಜ್ಯೇಷ್ಠ ಸಹೋದರನಿಗೆ ಬಹಳ ವಿಶ್ವಾಸಪಾತ್ರನಾಗಿಯೂ ಆತನಿಗೆ ಯಾವಾಗಲೂ ಹಿತವನ್ನೇ ಬಯಸತಕ್ಕವನಾಗಿಯೂ ಇದ್ದು, ಆತನ ಶುಶ್ರೂಷೆಯಲ್ಲಿ ನಿರತ ನಾಗಿರುವೆನು. [1] ನಾವು ಮೂವರೂ ನಮ್ಮ ತಂದೆಯಾಜ್ಞೆಯಿಂದ ಮಹಾ ಭಯಂಕರವಾದ ಈ ಅರಣ್ಯಕ್ಕೆ ಬಂದುಬಿಟ್ಟೆವು. ನಾವೆಲ್ಲರೂ ಪೂಜ್ಯನಾದ ಅಗಸ್ತ್ಯಮುನಿಯನ್ನು ದರ್ಶನಮಾಡಬೇಕೆಂದು ಕುತೂಹಲವುಳ್ಳವರಾಗಿರುವೆವು. ಈ ವಿಷಯವನ್ನು ನಿನ್ನ ಗುರುವಿಗೆ ತಿಳಿಸಬೇಕು" ಎಂದನು. ಲಕ್ಷ್ಮಣನು ಹೇಳಿದುದನ್ನು ಕೇಳಿ ಆ ತಪಸ್ವಿಯು ಹಾಗೆಯೇ ಆಗಲೆಂದೊಪ್ಪಿ, ಅಗಸ್ತ್ಯನನ್ನು ನೋಡುವುದಕ್ಕಾಗಿ ಅಗ್ನಿಶಾಲೆಗೆ ಹೋದನು. ಅಲ್ಲಿ ತನ್ನ ತಪೋಜ್ವಾಲೆಯಿಂದ ಲೋಕದಲ್ಲಿ ಯಾರಿಗೂ ದುರ್ದರ್ಶನಾದ ಅಗಸ್ತ್ಯನನ್ನು ನೋಡಿ, ಆ ತಾಪಸನು ಆತನಿಗೆ ವಿನಯದಿಂದ ಕೈಮುಗಿದು ರಾಮನು ಬಂದಿರುವ ವೃತ್ತಾಂತವನ್ನು ಲಕ್ಷ್ಮಣನು ಹೇಳಿದ ಕ್ರಮದಲ್ಲಿಯೇ ತಿಳಿಸಲಾರಂಭಿಸಿ "ಆರ್ಯರೆ! ರಾಮ ಲಕ್ಷ್ಮಣರೆಂಬ ದಶರಥರಾಜನ ಮಕ್ಕಳಿಬ್ಬರೂ ನಮ್ಮ ಆಶ್ರಮಕ್ಕೆ ಬಂದಿರುವರು. ಅವರಲ್ಲಿ ರಾಮನು ತನ್ನ ಪತ್ನಿಯಾದ ಸೀತೆಯನ್ನೂ ಕರೆದುಕೊಂಡು ಬಂದಿರು ವನು. ಆ ಮೂವರೂ ನಿಮ್ಮ ದರ್ಶನವನ್ನು ಮಾಡಿ ಶುಶ್ರೂಷೆಯನ್ನು ಮಾಡು ತ್ತಿರಬೇಕೆಂದು ಬಂದಿರುವರು. ಮಹಾವೀರರಾದ ಅವರಿಬ್ಬರೂ ತಾವು ಬಂದಿರುವ

1. ಇಲ್ಲಿ "ತೇ ವಯಂ ವನಮುತ್ಯುಗ್ರಂ" ಎಂದು ಮೂಲವು. ಈ ವಾಕ್ಯದಲ್ಲಿರುವ "ಯ" ಎಂಬಕ್ಷರವು ಗಾಯತ್ರಿಯ ಎಂಟನೆಯ ಅಕ್ಷರವಾದುದರಿಂದ, ಇದುವರೆಗೆ ರಾಮಾಯಣದಲ್ಲಿ ಏಳು ಸಾವಿರ ಗ್ರಂಥಗಳು ಮುಗಿದು, ಈ ಶ್ಲೋಕದಲ್ಲಿ ಎಂಟನೆಯ ಸಹಸ್ರವು ಆರಂಭಿಸಲ್ಪಡುವುದೆಂದು ಗ್ರಹಿಸಬೇಕು.

ವಿಷಯವನ್ನು ನಿಮಗೆ ತಿಳಿಸುವುದಾಗಿ ನನ್ನನ್ನು ಕಳುಹಿಸಿರುವರು. ಇದರ ಮೇಲೆ ಹೇಗೆ ನಡೆಸಬೇಕೆಂಬುದಕ್ಕಾಗಿ ಅಪ್ಪಣೆಕೊಡಿಸಬೇಕು" ಎಂದನು. ಹೀಗೆ ಶಿಷ್ಯನು ಬಂದು ತಿಳಿಸಲು, ಅದನ್ನು ಕೇಳಿ ಅಗಸ್ತ್ಯನು ಸೀತಾರಾಮ ಲಕ್ಷ್ಮಣರು ಮೂವರೂ ತನ್ನಾಶ್ರಮಕ್ಕೆ ಬಂದುದಕ್ಕಾಗಿ ಬಹಳ ಸಂತೋಷ ಗೊಂಡು, ಅತ್ಯಾತುರದಿಂದ ಆ ಶಿಷ್ಯನನ್ನು ನೋಡಿ "ಭಲೆ! ಈಗಲೇ ನನ್ನ ಭಾಗ್ಯವು ಫಲಿಸಿತು. ಬಹುಕಾಲಕ್ಕೆ ರಾಮನು ನನ್ನನ್ನು ನೋಡುವುದಕ್ಕಾಗಿ ಬಂದನೆ! ನಾನು ಎಷ್ಟೋ ದಿವಸಗಳಿಂದ ಆತನ ಆಗಮನವನ್ನು ಕುತೂಹಲ ದಿಂದ ನಿರೀಕ್ಷಿಸುತ್ತಿದ್ದೆನು. ವತ್ಸನೆ! ಬೇಗ ಹೋಗು! ಆ ಮೂವರೂ ಸಾಮಾನ್ಯರೆಂದು ತಿಳಿಯಬೇಡ. ಸಮಸ್ತಲೋಕಕ್ಕೂ ಪೂಜ್ಯರು. ಅವರನ್ನು ಈ ಕ್ಷಣವೇ ಇಲ್ಲಿಗೆ ಕರೆದುಕೊಂಡು ಬಾ! ನೀನು ಆ ಸುದ್ದಿಯನ್ನು ಕೇಳಿದೊಡನೆ ನಿನ್ನ ಸಂಗಡಲೇ ಅವರನ್ನು ಕರತರಬೇಕಾಗಿತ್ತಲ್ಲವೇ? ಇಷ್ಟು ಸಾವಕಾಶವನ್ನು ಮಾಡಬಹುದೆ?" ಎಂದನು. ಹೀಗೆ ಗುರುವು ಅತ್ಯಾತುರದಿಂದ ಹೇಳುವುದನ್ನು ಕೇಳಿ, ಆ ಶಿಷ್ಯನು ಧರ್ಮಜ್ಞನಾಗಿಯೂ, ಮಹಾತ್ಮನಾಗಿಯೂ, ಇರುವ ಆ ಅಗಸ್ತ್ಯನಿಗೆ ವಿನಯದಿಂದ ನಮಸ್ಕರಿಸಿ "ಸ್ವಾಮಿ! ಇದೋ ಈಗಲೇ ಕರೆತರು ವೆನು" ಎಂದು ಹೇಳಿ, ಹೊರಕ್ಕೆ ಬಂದು ಅತಿವೇಗದಿಂದ ಲಕ್ಷ್ಮಣನನ್ನು ಸಮೀಪಿಸಿ "ರಾಮನೆಲ್ಲಿ? ನಮ್ಮ ಗುರುವಾದ ಅಗಸ್ತ್ಯಮುನಿಯನ್ನು ಆತನು ಹೋಗಿ ನೋಡುವುದಕ್ಕೆ ಯಾವುದೊಂದು ತಡೆಯೂ ಇಲ್ಲ, ಧಾರಾಳವಾಗಿ ಹೋಗಲಿ" ಎಂದನು. ಇದನ್ನು ಕೇಳಿ ಲಕ್ಷ್ಮಣನು ಆ ಶಿಷ್ಯನನ್ನೂ ಕರೆದುಕೊಂಡು ಆಶ್ರಮದ ಹೊರಬಾಗಿಲಿಗೆ ಬಂದು, ಆತನಿಗೆ ಶ್ರೀರಾಮನನ್ನೂ, ಜನಕರಾಜ ಪುತ್ರಿಯಾದ ಸೀತೆಯನ್ನೂ ತೋರಿಸಿದನು. ಅವರನ್ನು ನೋಡಿದಾಗಲೇ ಆ ಶಿಷ್ಯನಿಗೆ ಅವರು ಪೂಜಾರ್ಹರೆಂದು ತೋರಿತು. ತಾನೇ ಅವರನ್ನು ಯಥೋಚಿತವಾಗಿ ಸತ್ಕರಿಸಿ, ಆಶ್ರಮದೊಳಕ್ಕೆ ಕರೆದುಕೊಂಡು ಹೋದನು. ರಾಮನು ಸೀತಾಲಕ್ಷ್ಮಣಸಮೇತನಾಗಿ ಒಳಗೆ ಪ್ರವೇಶಿಸಿ, ಅಲ್ಲಲ್ಲಿ ಕೇವಲ ಶಾಂತಸ್ವಭಾವವುಳ್ಳ ಜಿಂಕೆಗಳು ನಿರ್ಭಯವಾಗಿ ಓಡಾಡುತ್ತಿರುವುದನ್ನು ನೋಡುತ್ತ ಮುಂದೆ ಹೋದನು. ಆ ಅಗಸ್ತ್ಯಾಶ್ರಮದಲ್ಲಿ, ಒಂದು ಕಡೆಯಲ್ಲಿ ಬ್ರಹ್ಮದೇವನ ಪೂಜಾಸ್ಥಾನವೂ, ಮತ್ತೊಂದು ಕಡೆಯಲ್ಲಿ ಅಗ್ನಿಪೂಜಾ ಸ್ಥಾನವೂ, ಬೇರೊಂದು ಕಡೆಯಲ್ಲಿ ವಿಷ್ಣು ಪೂಜಾಸ್ಥಾನವೂ, ಇನ್ನೊಂದು

ಕಡೆಯಲ್ಲಿ ದೇವೇಂದ್ರನ ಸ್ಥಾನವೂ, ಶೋಭಿಸುತ್ತಿದ್ದುವು. ಹಾಗೆಯೇ ಸೂರ್ಯ ಚಂದ್ರರು, ಭಗವೆಂಬ ದೇವತಾವಿಶೇಷವು, ಮಹಾತ್ಮನಾದ ಕುಬೇರನು, ಧಾತೃವಿಧಾತೃಗಳು, ವಾಯುದೇವನು, ನಾಗರಾಜನು, ಗಾಯತ್ರಿ, ಅಷ್ಟವಸು ಗಳು, ಪಾಶಹಸ್ತನಾದ ಮಹಾತ್ಮನಾದ ವರುಣನು, ಕೃತ್ತಿಕಾಪುತ್ರನಾದ ಷಣ್ಮುಖನು, ಧರ್ಮದೇವತೆ ಮೊದಲಾದ ಸಮಸ್ತದೇವತೆಗಳ ಪೂಜಾಸ್ಥಾನ ಗಳನ್ನೂ ಅಲ್ಲಲ್ಲಿ ನೋಡುತ್ತಹೋದನು. ಅಗಸ್ತ್ಯಮಹರ್ಷಿಯು ಅಷ್ಟರಲ್ಲಿ ಶಿಷ್ಯರೊಡಗೂಡಿ ತಾನಾಗಿಯೇ ರಾಮನನ್ನು ಇದಿರುಗೊಂಡು ಬರುತ್ತಿದ್ದನು. ರಾಮನು ಹೀಗೆ ಮಹಾತೇಜಸ್ವಿಯಾದ ಅಗಸ್ತ್ಯನು ಮಹರ್ಷಿಗಳಿಂದ ಪರಿವೃತ ನಾಗಿ ತನ್ನನ್ನು ಇದಿರುಗೊಂಡು ಬರುತ್ತಿರುವುದನ್ನು ಕಂಡು, ಪಕ್ಕದಲ್ಲಿದ್ದ ಲಕ್ಷ್ಮಣನನ್ನು ಕುರಿತು “ವತ್ಸನೆ! ಇದೋ! ಅಗಸ್ತ್ಯಮಹಾಮುನಿಯೇ ಇದಿರಾಗಿ ಬರುತ್ತಿರುವನು. ಆತನ ದಿವ್ಯ ತೇಜಸ್ಸನ್ನು ನೋಡಿದೆಯಾ! ಇವನನ್ನು ನೋಡಿದಾಗಲೇ ಇವನು ತಪಸ್ಸುಗಳಿಗೆಲ್ಲಾ ನಿಧಿಯೆಂದು ತೋರುವು ದಲ್ಲವೇ” ಎಂದನು. ಹೀಗೆ ಪರಂತಪನಾಗಿಯೂ ಮಹಾಬಾಹುವಾಗಿಯೂ ಇರುವ ರಾಮನು ಸೂರ್ಯವರ್ಚಸ್ಸುಳ್ಳ ಅಗಸ್ತ್ಯನನ್ನು ಕೊಂಡಾಡುತ್ತಾ, ಪರಮಸಂತೋಷದಿಂದ ಆ ಋಷಿಯ ಬಳಿಗೆ ಬಂದು ಸೀತಾಲಕ್ಷ್ಮಣ ಸಮೇತ ನಾಗಿ ಆತನ ಪಾದಗಳನ್ನು ಹಿಡಿದು ನಮಸ್ಕರಿಸಿ, ಕೈಮುಗಿದು ನಿಂತಿದ್ದನು. ಆ ಮಹರ್ಷಿಯೂ ರಾಮನಿಗೆ ಆತಿಥ್ಯಗಳನ್ನು ನಡೆಸಿ, ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ, ಅವರ ಕ್ಷೇಮಲಾಭವನ್ನು ವಿಚಾರಿಸಿ, ಆಸನವನ್ನು ಕೊಟ್ಟು, ಕುಳಿತು ಕೊಳ್ಳುವಂತೆ ಹೇಳಿದನು. ಆಮೇಲೆ ಅಗಸ್ತ್ಯಮುನಿಯು ವೈಶ್ವದೇವಕಾರ್ಯ ವನ್ನು ಮಾಡಿ ಬಂದು, ಪುನಃ ಅವರಿಗೆ ಅರ್ಘ್ಯಾದಿಗಳಿಂದ ಶಾಸ್ತ್ರೋಕ್ತವಾದ ಅತಿಥಿಸತ್ಕಾರಗಳನ್ನು ಮಾಡಿ ಅವರಿಗೆ ವಾನಪ್ರಸ್ಥ ಧರ್ಮಾನುಸಾರವಾಗಿ ಫಲಮೂಲಾದ್ಯಾಹಾರಗಳನ್ನೂ ತಂದುಕೊಟ್ಟನು. ಆಮೇಲೆ ತಾನು ಮೊದಲು ಆಸನದಲ್ಲಿ ಕುಳಿತುಕೊಂಡು, ತನ್ನ ಮುಂದೆ ಕೈಮುಗಿದು ನಿಂತಿದ್ದ ಧರ್ಮಜ್ಞನಾದ ರಾಮನನ್ನೂ ಆಸನದಲ್ಲಿ ಕುಳಿತುಕೊಳ್ಳುವಂತೆ ಹೇಳಿ, ಸುಖಾಸೀನನಾದ ಆತನನ್ನು ಕುರಿತು, “ವತ್ಸ ರಾಮನೆ! ವೈಶ್ವದೇವವನ್ನು ಮೊದಲು ನಡೆಸಿ, ಆಮೇಲೆ ಅತಿಥಿಗಳಿಗೆ ಅರ್ಘ್ಯವನ್ನು ಕೊಟ್ಟು ಪೂಜಿಸಬೇಕಾದುದೇ ಧರ್ಮವು. ಋಷಿಯಾದವನು ಈ ನಿಯಮವನ್ನು ಬಿಟ್ಟು, ಬೇರೆ ವಿಧದಿಂದ ಅತಿಥಿಪೂಜೆ

ಯನ್ನು ಮಾಡಿದರೆ, ಅಂತವನು ಸುಳ್ಳುಸಾಕ್ಷ್ಯವನ್ನು ಹೇಳಿದವನಂತೆ ಪರಲೋಕ ದಲ್ಲಿ ತನ್ನ ಮಾಂಸವನ್ನು ತಾನೇ ಭಕ್ಷಿಸುವವನಾಗುವನು. ರಘುವಂಶೋತ್ತಮನೆ! [1] ನೀನಾದರೋ ಸಮಸ್ತಪ್ರಜೆಗಳಿಗೂ ರಾಜನಾಗಿ, ಧರ್ಮನಿರತನಾಗಿ, ಮಹಾ ರಥನೆನಿಸಿಕೊಂಡು ಎಲ್ಲರಲ್ಲಿಯೂ ಪೂಜ್ಯತೆಯನ್ನೂ, ಮರ್ಯಾದೆಯನ್ನೂ ಪಡೆದವನು. ಇಂತಹ ನಿನ್ನನ್ನು ನಾವು ವಿಶೇಷವಾಗಿ ಪೂಜಿಸಬೇಕೆಂಬುದನ್ನು ಹೇಳತಕ್ಕುದೇನು!" ಎಂದನು. ಹೀಗೆ ಪ್ರಿಯವಾಕ್ಯಗಳಿಂದ ಆತನನ್ನು ಮನ್ನಿ ಸುತ್ತಾ [2] ಫಲಮೂಲಗಳನ್ನೂ, ಪುಷ್ಪಗಳನ್ನೂ, ಇತರ ವಿಧವಾದ ಪೂಜಾ ದ್ರವ್ಯಗಳನ್ನೂ ತಂದು, ಯಥೋಕ್ತವಾದ ಪೂಜೆಯನ್ನು ನಡೆಸಿ, ಪುನಃ ಆತನನ್ನು ನೋಡಿ, "ಎಲೈ ಪುರುಷಶ್ರೇಷ್ಠನೆ! ಸುವರ್ಣಮಯವಾಗಿ ರತ್ನಖಚಿತವಾದ ಈ ದಿವ್ಯಧನುಸ್ಸನ್ನು ನೋಡಿದೆಯಾ! ಇದು [3] ವಿಷ್ಣುದೇವನದು. ಇದನ್ನು ವಿಶ್ವಕರ್ಮನೇ ನಿರ್ಮಿಸಿರುವನು. ಸೂರ್ಯನಂತೆ ಜಾಜ್ವಲ್ಯಮಾನವಾಗಿ ಹೊಳೆ ಯುತ್ತಿರುವ ಈ ಬಾಣಗಳೂ ಅಮೋಘವಾದುವು. ಇವು ಬ್ರಹ್ಮನಿಂದ ಅನುಗ್ರಹಿಸಿಕೊಡಲ್ಪಟ್ಟಿರುವುವು. ಅಗ್ನಿಯಂತೆ ಜ್ವಲಿಸುವ ಬಾಣಗಳಿಂದ

---

1. ಇಲ್ಲಿ "ರಾಜಾ ಸರ್ವಸ್ಯ ಲೋಕಸ್ಯ ಧರ್ಮಚಾರೀ ಮಹಾರಥಃ । ಪೂಜನೀಯಶ್ಚ ಮಾನ್ಯಶ್ಚ ಭರ್ವಾ ಪ್ರಾಪ್ತಃ ಪ್ರಿಯಾತಿಥಿಃ ॥" ಎಂದು ಮೂಲವು. ಇದಕ್ಕೆ ರಾಜಪಕ್ಷವಾದ ಅರ್ಥವು ಮೇಲೆ ವಿವರಿಸಲ್ಪಟ್ಟಿರುವುದು. ಭಗವತ್ಪರವಾದ ತತ್ವಾರ್ಥವೇನೆಂದರೆ:— "ಸರ್ವಸ್ಯ ಲೋಕಸ್ಯ ರಾಜಾ" ಎಂಬುದರಿಂದ, "ಪತಿಂ ವಿಶ್ವಸ್ಯ" ಇತ್ಯಾದಿ ಶ್ರುತಿ ಪ್ರಮಾಣವನ್ನನುಸರಿಸಿ ಸರ್ವಲೋಕೇಶ್ವರನೆಂದರ್ಥವು! "ಪೂಜನೀಯಃ" ಎಂಬುದರಿಂದ "ಇಷ್ಟಾಪೂರ್ತಂ ಬಹುಧಾ ಜಾತಂ ಜಾಯಮಾನಂ ವಿಶ್ವಂ ಬಿಭರ್ತಿ ಭುವನಸ್ಯ ನಾಭಿಃ" ಎಂಬ ಶ್ರುತಿಯಂತೆ ಕರ್ಮಗಳಿಂದ ಲೋಕಾರಾಧ್ಯನೆಂದರ್ಥವು. "ಮಾನ್ಯಃ" ಮಾನ್ಯ ನೆಂದರೆ ಮುಕ್ತಿಗಾಗಿ ಯೋಗಿಗಳಿಂದ ಚಿಂತಿಸಲ್ಪಡುವವನೆಂದರ್ಥವು. "ಪ್ರಿಯಾತಿಥಿಃ" ಎಂದರೆ ಲೌಕಿಕಾತಿಥಿಗಿಂತ ವಿಲಕ್ಷಣನೆಂದು ಭಾವವು.

2. ಇಲ್ಲಿ ಪುನಃ ಫಲಮೂಲಾದಿಗಳನ್ನು ತಂದುಕೊಟ್ಟುದು ಸೀತೆಗೋಸ್ಕರವೆಂದು ತಿಳಿಯಬೇಕು.

3. ರಾಮನು ತಾನು ಹಿಂದೆ ಪರಶುರಾಮನಿಂದ ತೆಗೆದುಕೊಂಡ ವೈಷ್ಣವ ಧನುಸ್ಸನ್ನು ವರುಣನ ವಶಕ್ಕೆ ಕೊಟ್ಟಿದ್ದನು. ಆ ವರುಣನು ಈಗ ಖರಾದಿವಧವು ಸಮೀಪಿಸಿರುವುದನ್ನು ತಿಳಿದು ಆ ಧನುಸ್ಸನ್ನೇ ಪುನಃ ರಾಮನ ಕೈಗೆ ಸೇರಿಸುವುದಕ್ಕಾಗಿ ಅಗಸ್ತ್ಯನ ವಶಕ್ಕೆ ಕೊಟ್ಟಿದ್ದುದಾಗಿ ಇಲ್ಲಿನ 'ವೈಷ್ಣವ' ಶಬ್ದದಿಂದ ಸೂಚಿತವಾಗುವುದು.

ತುಂಬಿದ ಈ ಎರಡು ಬತ್ತಳಿಕೆಗಳನ್ನೂ ನೋಡು ಇದನ್ನು ದೇವೇಂದ್ರನೇ ನನಗೆ ಅನುಗ್ರಹಿಸಿಕೊಟ್ಟಿರುವನು. ಈ ಬತ್ತಳಿಕೆಗಳೆರಡೂ ಅಕ್ಷಯವಾದುವುಗಳು. ಇದೋ! ಚಿನ್ನದ ಒರೆಯಲ್ಲಿಡಲ್ಪಟ್ಟು, ಥಳಥಳಿಸುತ್ತಿರುವ ಸುವರ್ಣಾಲಂಕೃತವಾದ ಈ ಖಡ್ಗವನ್ನೂ ನನಗೆ ದೇವೇಂದ್ರನೇ ಕೊಟ್ಟಿರುವನು, ಎಲೈ ರಾಮನೆ! ಪೂರ್ವದಲ್ಲಿ ವಿಷ್ಣುದೇವನು ಈ ಧನುಸ್ಸಿನಿಂದಲೇ ಯುದ್ಧದಲ್ಲಿ ದೈತ್ಯರನ್ನು ಕೊಂದು ಸ್ವರ್ಗಭ್ರಷ್ಟರಾಗಿದ್ದ ದೇವತೆಗಳಿಗೆ ಹಿಂತಿರುಗಿ ರಾಜ್ಯಾಧಿಪತ್ಯವನ್ನು ಕೊಟ್ಟನು. ಎಲೆ ಮಾನ್ಯನೆ! ಆ ಧನುಸನ್ನೂ, ಬತ್ತಳಿಕೆಗಳನ್ನೂ, ಬಾಣಗಳನ್ನೂ, ಕತ್ತಿಯನ್ನೂ ನೀನು ನಿನ್ನ ಶತ್ರುಜಯಕ್ಕಾಗಿ ಪ್ರತಿಗ್ರಹಿಸು! ವಜ್ರಾಯುಧವು ದೇವೇಂದ್ರನ ಕೈಗೆ ಸೇರಿದಂತೆ ಇವು ನಿನ್ನ ವಶದಲ್ಲಿರಲಿ!" ಎಂದನು. ಮಹಾತೇಜಸ್ವಿಯಾಗಿಯೂ, ಪೂಜ್ಯನಾಗಿಯೂ ಇರುವ ಅಗಸ್ತ್ಯನು ಹೀಗೆಂದು ಹೇಳಿ, ಆ ದಿವ್ಯಾಯುಧಗಳೆಲ್ಲವನ್ನೂ ರಾಮನ ಕೈಗೆ ತೆಗೆದುಕೊಟ್ಟು, ಪುನಃ ಅವರೆಲ್ಲರನ್ನೂ ಕುರಿತು ಒಂದಾನೊಂದು ಮಾತನ್ನು ಹೇಳುವನು [1].

ಇಲ್ಲಿಗೆ ಹನ್ನೆರಡನೆಯ ಸರ್ಗವು.

## ರಾಮನು ಖರಾದಿರಾಕ್ಷಸರನ್ನು ಕೊಲ್ಲುವುದಕ್ಕಾಗಿ ಅಗಸ್ತ್ಯನಿಂದ ಅನುಜ್ಞೆಯನ್ನು ಪಡೆದು, ಸೀತಾಲಕ್ಷ್ಮಣರೊಡನೆ ಪಂಚವಟಿಗೆ ಹೋದುದು.

"ಎಲೈ ರಾಮನೆ! ನನಗೆ ಬಹಳ ಸಂತೋಷವಾಯಿತು. ನಿನಗೆ ಮಂಗಳವಾಗಲಿ! ವತ್ಸ ಲಕ್ಷ್ಮಣನೆ! ನಿನ್ನ ವಿಷಯದಲ್ಲಿಯೂ ನಾನು ಪರಮ ಸಂತುಷ್ಟನಾದೆನು. ನೀವು ನನ್ನನ್ನು ನಮಸ್ಕರಿಸಬೇಕೆಂಬುದಕ್ಕಾಗಿ ಅಬಲೆಯಾದ ಈ ಸೀತೆಯನ್ನೂ ಕರೆದುಕೊಂಡು ಇಷ್ಟುದೂರದವರೆಗೆ ಬಂದಿರಲ್ಲವೆ? ಮಾರ್ಗಾಯಾಸದಿಂದ ನಿಮಗೆ ಬಹಳ ಶ್ರಮವುಂಟಾಗಿ ಮೈಯೊಳಗೆಲ್ಲಾ ಬೆವರು ಸುರಿಯುತ್ತಿರುವುದು. ಕೋಮಲವಾದ ಮೈಯುಳ್ಳ ಜನಕರಾಜ

1. ಇಲ್ಲಿ ಕಥಾಸಂದರ್ಭವು ಮುಗಿಯುವುದರಿಂದ, ಇಲ್ಲಿಗೆ ಸರ್ಗ ವಿಚ್ಛೇದವಿಲ್ಲವೆಂದು ತೋರುತ್ತದೆ.

ಪುತ್ರಿಯಾದ ಈ ಸೀತೆಯೂ ಬಹಳವಾಗಿ ಬಳಲಿ ವಿಶ್ರಾಂತಿಯನ್ನಪೇಕ್ಷಿಸುತ್ತಿರುವಂತೆ ತೋರುವುದು. ಇವಳು ಅಷ್ಟು ಸುಕುಮಾರವಾದ ಮೈಯುಳ್ಳವಳಾಗಿದ್ದರೂ ಅಪಾಯಪ್ರಚುರವಾದ ಈ ಕಾಡಿಗೆ ಬಂದು ಕಷ್ಟಪಡುವಳಲ್ಲವೆ? ಈಕೆಗೆ ಪತಿಯಲ್ಲಿರುವ ಪ್ರೀತಿವಿಶೇಷವು ಎಷ್ಟೇ ಶ್ರಮವನ್ನಾದರೂ ಸಹಿಸುವಂತೆ ಮಾಡಿರುವುದು. ವತ್ಸ ರಾಮನೆ! ಈ ಸೀತೆಯ ಮನಸ್ಸಿಗೆ ಹೇಗೆ ಸಂತೋಷವುಂಟಾಗುವುದೋ ಅದಕ್ಕನುಸಾರವಾಗಿಯೇ ನೀನು ನಡೆಯುತ್ತಿರಬೇಕು. ಆಹಾ! ಈ ಬಾಲೆಯು ತನ್ನ ಶಕ್ತಿಯನ್ನು ಯೋಚಿಸದೆ ಈ ಘೋರಾರಣ್ಯಕ್ಕೆ ಬಂದಿರುವಳಲ್ಲಾ! ಇವಳು ಬಹಳ ದುಷ್ಕರವಾದ ಕಾರ್ಯವನ್ನಾರಂಭಿಸಿಬಿಟ್ಟಳು. ಲೋಕದಲ್ಲಿ ಸ್ತ್ರೀಯರು ಗಂಡಂದಿರನ್ನು ಅವರು ಉತ್ತಮ ಸ್ಥಿತಿಯಲ್ಲಿರುವವರೆಗೂ ಸಂತೋಷಪಡಿಸುತ್ತಿರುವರು. ಅವರಿಗೆ ದುರ್ದಶೆಯು ಬಂದೊದಗಿದಾಗ ಲಕ್ಷ್ಯಮಾಡುವುದಿಲ್ಲ. ಇದು ಸ್ತ್ರೀಯರಿಗೆ ಸೃಷ್ಟಿಕಾಲದಿಂದ ಸ್ವಾಭಾವಿಕವಾಗಿ ಬಂದ ನಡತೆಯು. ವತ್ಸ ರಾಮನೆ! ಸ್ತ್ರೀಯರ ಮನಸ್ಸು ಮಿಂಚಿನಂತೆ ಅತಿ ಚಂಚಲವಾದುದು. ಅವರ ಮನಸ್ಸು ಶಸ್ತ್ರದಂತೆ ಅತಿ ತೀಕ್ಷ್ಣವಾದುದು. ಹಿಂದುಮುಂದು ನೋಡದೆ ಯಾವ ಕೆಲಸಕ್ಕಾದರೂ ಆತುರದಿಂದ ಪ್ರವರ್ತಿಸುವವರಾದುದರಿಂದ ಗರುಡನಿಗಿಂತಲೂ, ವಾಯುವಿಗಿಂತಲೂ ಸ್ತ್ರೀಯರಲ್ಲಿ ಹೆಚ್ಚಾದ ವೇಗಾತಿಶಯವುಂಟು. ಲೋಕದಲ್ಲಿ ಸ್ತ್ರೀ ಸಾಮಾನ್ಯಕ್ಕೇ ಇದು ಸ್ವಾಭಾವಿಕಗುಣವಾಗಿದ್ದರೂ, ನಿನ್ನ ಪತ್ನಿಯಾದ ಸೀತೆಯಲ್ಲಿ ಮಾತ್ರ ಸ್ವಲ್ಪವಾದರೂ ಈ ದೋಷಗಳಿಲ್ಲವು. ಇವಳಲ್ಲಿ ದೋಷವಿಲ್ಲವೆಂಬುದು ಮಾತ್ರವೇ ಅಲ್ಲ. ಲೋಕದಲ್ಲಿ ಸಮಸ್ತ ಜನಗಳಿಂದಲೂ ಶ್ಲಾಘಿಸಲ್ಪಡುವುದಕ್ಕೂ ಯೋಗ್ಯಳು. ಮತ್ತು ಅರುಂಧತಿಯಂತೆ ಪತಿವ್ರತೆಯರೊಳಗೆಲ್ಲಾ ಮೇಲೆಂಬ ಖ್ಯಾತಿಯನ್ನೂ ಹೊಂದಿರುವಳು. ಎಲೈ ರಾಮನೆ! ಇನ್ನು ನಾನು ಹೆಚ್ಚಾಗಿ ಹೇಳಿದುದರಿಂದೇನು? ನೀನು ಲಕ್ಷ್ಮಣನೊಡನೆಯೂ, ಪತಿವ್ರತಾಶಿರೋಮಣಿಯಾದ ಈ ಸೀತೆಯೊಡನೆಯೂ ಇಲ್ಲಿಗೆ ಬಂದುದರಿಂದ, ನಮ್ಮ ಆಶ್ರಮಕ್ಕೇ ಒಂದು ಅಲಂಕಾರವುಂಟಾದಂತೆ ಎಣಿಸುವೆನು" ಎಂದನು. ಇದನ್ನು ಕೇಳಿ ರಾಮನು ಕೈಮುಗಿಯುತ್ತಾ ಜ್ವಲಿಸುತ್ತಿರುವ ಅಗ್ನಿಯಂತೆ ತೇಜಸ್ವಿಯಾದ ಆ ಮಹರ್ಷಿಯನ್ನು ನೋಡಿ, ವಿನಯದಿಂದ "ಎಲೈ ಮಹಾತ್ಮನೆ! ವರಪ್ರದನಾಗಿಯೂ, ಋಷಿಕುಲಕ್ಕೆ ತಿಲಕಪ್ರಾಯನಾಗಿಯೂ ಇರುವ ನೀನು, ನಾವು ಇಲ್ಲಿಗೆ ಬಂದುದ

ಕ್ಕಾಗಿ ಸಂತೋಷಿಸಿ, ನನ್ನ ತಮ್ಮನ ಗುಣಗಳನ್ನೂ ಹೀಗೆ ನಿನ್ನ ಬಾಯಿಂದಲೇ ಕೊಂಡಾಡುತ್ತಿರುವಾಗ ನಮ್ಮ ಭಾಗ್ಯವನ್ನೇನೆಂದು ಹೇಳಲಿ! ಈಗ ನಾವು ಪರಮಧನ್ಯರಾದೆವು. ಈಗ ನಾನು ಅನುಗ್ರಹಿಸಲ್ಪಟ್ಟೆನು. ಆದರೆ, ಎಲೈ ಮಹರ್ಷಿಯೆ! ಜಲಸಮೃದ್ಧಿಯಿಂದಲೂ, ಫಲಪುಷ್ಪಗಳಿಂದ ತುಂಬಿದ ತೋಟಗಳಿಂದಲೂ ಕೂಡಿದ ಯಾವುದಾದರೂ ಒಂದು ಆಶ್ರಮಸ್ಥಾನವನ್ನು ನಮಗೆ ತೋರಿಸಿ, ನಾವು ಸುಖವಾಗಿ ವಾಸಮಾಡುವಂತೆ ಅನುಗ್ರಹಿಸಬೇಕು" ಎಂದನು. ಇದನ್ನು ಕೇಳಿ ಧರ್ಮಾತ್ಮನಾಗಿಯೂ, [1]ಧೀರನಾಗಿಯೂ ಇರುವ ಆ ಋಷಿಶ್ರೇಷ್ಠನು, ತನ್ನ ಧ್ಯಾನದೃಷ್ಟಿಯಿಂದ ಸ್ವಲ್ಪಹೊತ್ತಿನವರೆಗೆ ಆಲೋಚಿಸಿ, ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು "ಎಲೈ ವತ್ಸನೆ! ಇಲ್ಲಿಗೆ ಎರಡು ಗಾವುದಗಳ ದೂರದಲ್ಲಿ ವಿಶೇಷವಾದ ಫಲಮೂಲಗಳಿಂದಲೂ, ಜಲಸಮೃದ್ಧಿಯಿಂದಲೂ ಕೂಡಿದ ಒಂದು ಪ್ರದೇಶವಿರುವುದು. ಅದರಲ್ಲಿ ಬಗೆಬಗೆಯಾದ ಅನೇಕ ಮೃಗಗಳು ನೇತ್ರಾನಂದಕರಗಳಾಗಿರುವುವು. ಅದಕ್ಕೆ ಪಂಚವಟಿಯೆಂದು ಹೆಸರು. ನೀನು ಸೀತಾಲಕ್ಷ್ಮಣರೊಡಗೂಡಿ ಅಲ್ಲಿಗೆ ಹೋಗಿ, ಆಶ್ರಮವನ್ನು ಮಾಡಿಕೊಂಡು ಪಿತೃವಾಕ್ಯಪರಿಪಾಲನವೆಂಬ ನಿನ್ನ ಪ್ರತಿಜ್ಞೆಯನ್ನು ನಡೆಸುತ್ತಾ ವಿನೋದದಿಂದಿರಬಹುದು. ಎಲೈ ರಘುವಂಶೋತ್ತಮನೆ! ನೀನು ತಂದೆಯ ಆಜ್ಞಾನುಸಾರವಾಗಿ ಕಾಡಿನಲ್ಲಿರಬೇಕಾದ ಕಾಲವು ಹೆಚ್ಚು ಕಡಿಮೆಯಾಗಿ ಬಹಳಮಟ್ಟಿಗೆ ಕಳೆದುಹೋಯಿತು. ಇನ್ನು ಸ್ವಲ್ಪ ಕಾಲದೊಳಗಾಗಿಯೇ ನೀನು ನಿನ್ನ ಪ್ರತಿಜ್ಞೆಯನ್ನು ತೀರಿಸಿಕೊಂಡು ರಾಜ್ಯವನ್ನು ಹೊಂದಿ ಸುಖವಾಗಿರುವೆ! ವತ್ಸ ರಾಮನೆ! ಯಯಾತಿಯು ತನ್ನ ಮಗನಿಂದ ತನ್ನ ಪ್ರತಿಜ್ಞೆಯನ್ನು ಸಾಗಿಸಿಕೊಂಡಂತೆ, ದಶರಥರಾಜನು ಹಿರಿಯಮಗನಾದ ನಿನ್ನಿಂದ ತನ್ನ ಪ್ರತಿಜ್ಞೆಯನ್ನು ಕೊನೆಗಾಣಿಸಿಕೊಂಡನು. ನಿನ್ನ ತಂದೆಯಾದ ಆ ದಶರಥನೇ ಧನ್ಯನು. ಲೋಕದಲ್ಲಿ ಆತನೊಬ್ಬನನ್ನೇ ಪುತ್ರವಂತನೆಂದು ಹೇಳಬೇಕು. ನನಗೆ

---

1 ಇಲ್ಲಿ "ಧ್ಯಾತ್ವಾ ಮುಹೂರ್ತಂ ಧರ್ಮಾತ್ಮಾ ಧೀರಃ" ಎಂದು ಮೂಲವು. ಇಲ್ಲಿ ಮೊದಲು "ಧ್ಯಾನಿಸಿ" ಎಂದು ಹೇಳಿ, ಆಮೇಲೆ ಧೀರನೆಂಬ ವಿಶೇಷಣವನ್ನು ಪ್ರಯೋಗಿಸಿರುವುದರಿಂದ, ಅಗಸ್ತ್ಯನು ಮುಂದೆ ಬರಬಹುದಾದ ಸೀತಾವಿಯೋಗವನ್ನು ತಿಳಿದು ಚಿಂತಾಕ್ರಾಂತನಾಗಿದ್ದು, ಆಮೇಲೆ ರಾವಣಾದಿವಧವನ್ನು ಪರ್ಯಾಲೋಚಿಸಿ ಧೈರ್ಯವನ್ನು ತಂದುಕೊಂಡನೆಂದು ಸೂಚಿತವು.

ನಿನ್ನ ತಂದೆಯಾದ ದಶರಥನಲ್ಲಿರುವ ಪ್ರೇಮಾತಿಶಯದಿಂದ, ನಾನು ಮೊದಲೇ ನನ್ನ ತಪೋಮಹಿಮೆಯಿಂದ ಇದುವರೆಗೆ ನಡೆದ ನಿನ್ನ ವೃತ್ತಾಂತವೆಲ್ಲವನ್ನೂ ತಿಳಿದುಕೊಂಡೇ ಇರುವೆನು. ನೀನು ನಡೆಸಿದ ಕಾರ್ಯಗಳನ್ನು ಮಾತ್ರವೇ ಅಲ್ಲ. ನಾನು ನನ್ನ ತಪಃಪ್ರಭಾವದಿಂದ ನಿನ್ನ [1]ಮನಸ್ಸಿನೊಳಗಿನ ಅಭಿಪ್ರಾಯ ವನ್ನೂ ತಿಳಿದಿರುವೆನು. ಆದುದರಿಂದ ಮೊದಲು ನನ್ನೊಡನೆ ಇಲ್ಲಿಯೇ ಇರುವಂತೆ ನಾನು ನಿನಗೆ ಅನುಮತಿಸಿದ್ದರೂ, ಈಗ ನಿನ್ನ ಅಭಿಪ್ರಾಯವನ್ನು ತಿಳಿದು ನಿನ್ನನ್ನು ಪಂಚವಟಿಗೆ ಹೋಗೆಂದು ಹೇಳಿದೆನು. ಎಲೈ ರಾಮನೆ! ಆ ವನಪ್ರದೇಶವು ಬಹಳ ರಮಣೀಯವಾದುದು. ಸೀತೆಯೂ ಅಲ್ಲಿ ಸಂತೋಷ ದಿಂದಿರಬಹುದು. ಆ ಪ್ರದೇಶವು ಬಹಳ ಶ್ಲಾಘನೀಯವಾಗಿರುವುದು ಮಾತ್ರವೇ ಅಲ್ಲ. ಇಲ್ಲಿಗೆ ಸಮೀಪವಾಗಿಯೂ ಇರುವುದು ಅದರ ಸಮೀಪದಲ್ಲಿಯೇ ಗೋದಾವರೀ ನದಿಯಿರುವುದರಿಂದ, ಆ ನದೀತೀರದಲ್ಲಿ ಸೀತೆಯು ಆಗಾಗ ಬಹುವಿನೋದದಿಂದ ಕ್ರೀಡಿಸುತ್ತಿರಬಹುದು. ಆ ಪ್ರದೇಶದಲ್ಲಿ ಫಲ ಮೂಲಗಳು ಸಮೃದ್ಧವಾಗಿರುವುವು. ಅಲ್ಲಿ ಬಗೆಬಗೆಯಾದ ಪಕ್ಷಿಗಳನ್ನು ನೋಡಬಹುದು. ಮತ್ತು ಅದು ವಿವಿಕ್ತವಾಗಿಯೂ, ಪವಿತ್ರವಾಗಿಯೂ, ರಮಣೀಯವಾಗಿಯೂ ಇರುವುದು. ಆ ಪ್ರದೇಶವು ಪತ್ನೀ ಸಮೇತನಾದ ನಿನಗೆ ವಾಸಯೋಗ್ಯವಾಗಿರು ವುದು. ಮತ್ತು ನೀನು ಆಶ್ರಿತರಕ್ಷಣದಲ್ಲಿಯೇ ಆತುರವುಳ್ಳವನಾದುದರಿಂದ, ಅಲ್ಲಿ ನೀನು ಕಾವಲಿದ್ದು, ತಪಸ್ವಿಗಳೆಲ್ಲರನ್ನೂ ರಕ್ಷಿಸಬಹುದು. ಎಲೆ ವೀರನೆ! ಇದೋ! ಇಲ್ಲಿ ದೊಡ್ಡ ಹಿಪ್ಪೇ ಮರದ ತೋಪು ಕಾಣುತ್ತಿರುವುದು. ನೋಡು! ಆ ತೋಪಿಗೆ ಉತ್ತರದಿಕ್ಕಿನಿಂದ ಹೋದರೆ, ಅಲ್ಲಿ ದೊಡ್ಡ ಆಲದ ಮರವೊಂದು ಕಾಣುವುದು. ಆ ಮರವನ್ನು ದಾಟಿ ಅದೇ ದಾರಿಯನ್ನು ಹಿಡಿದುಹೋಗು! ಅಲ್ಲಿಂದ ಮುಂದೆ ಸ್ವಲ್ಪ ತಿಟ್ಟಾದ ನೆಲವನ್ನೇರಿ ಮುಂದೆ ಹೋದರೆ ಒಂದು ಪರ್ವತವು ಕಾಣುವುದು. ಅದರ ಸಮೀಪದಲ್ಲಿ ಪಂಚವಟಿಯೆಂಬ ಪ್ರಸಿದ್ಧವಾದ ಪ್ರದೇಶವಿರುವುದು. ಅಲ್ಲಿ ಯಾವಾಗಲೂ ಪುಷ್ಪಗಳು ತುಂಬಿರುವುವು" ಎಂದನು. ಇದನ್ನು ಕೇಳಿ ರಾಮನು ಲಕ್ಷ್ಮಣನೊಡಗೂಡಿ ಆ ಮಹರ್ಷಿಯನ್ನು ಪೂಜಿಸಿ, "ಇನ್ನು ನಾನು ಹೋಗಿಬರುವೆನು" ಎಂದನು. ಹೀಗೆ ರಾಮಲಕ್ಷ್ಮಣರಿಬ್ಬರೂ ಆ ಮಹರ್ಷಿಯ ಪಾದಗಳನ್ನು ಹಿಡಿದು ನಮಸ್ಕರಿಸಿ, ಆತನ ಅನುಜ್ಞೆಯನ್ನು

1. ಇಲ್ಲಿ ರಾಕ್ಷಸವಧೋದ್ದೇಶವೇ ರಾಮನ ಮನೋಭಿಪ್ರಾಯವೆಂದು ತಿಳಿಯಬೇಕು.

ಪಡೆದು, ಸೀತಾಸಮೇತರಾಗಿ ಆ ಆಶ್ರಮುವನ್ನು ಬಿಟ್ಟು ಹೊರಟರು. ಅವರಿಬ್ಬರೂ ಧನುಸ್ಸನ್ನು ಹಿಡಿದು ಬತ್ತಳಿಕೆಗಳನ್ನು ಕಟ್ಟಿಕೊಂಡು, ಬಹಳ ಎಚ್ಚರಿಕೆಯಿಂದ ಅಗಸ್ತ್ಯಮುನಿಯು ಹೇಳಿದ ದಾರಿಯನ್ನೇ ಹಿಡಿದು ಪಂಚವಟಿಗೆ ಹೋಗುತ್ತಿದ್ದರು.

ಇಲ್ಲಿಗೆ ಹದಿಮೂರನೆಯ ಸರ್ಗವು.

---

ರಾಮನು ಪಂಚವಟಿಗೆ ಹೋಗುತ್ತಿರುವಾಗ, ದಾರಿಯಲ್ಲಿ ಜಟಾಯುವನ್ನು ಕಂಡು ಅವನ ಪೂರ್ವೋತ್ತರಗಳನ್ನು ಕೇಳಿದುದು. ಅವನೊಡನೆ ಸೇರಿ ಎಲ್ಲರೂ ಪಂಚವಟಿಗೆ ಹೋದುದು.

ಹೀಗೆ ರಾಮನು ಪಂಚವಟಿಗೆ ಪ್ರಯಾಣಮಾಡುತ್ತಿರುವಾಗ, ನಡುದಾರಿಯಲ್ಲಿ ಆಲದಮರದ ಮೇಲೆ ದೊಡ್ಡ ಆಕಾರವುಳ್ಳ ಒಂದು ಹದ್ದು ಕುಳಿತಿರುವುದನ್ನು ಕಂಡನು. ಅದರ ಆಕಾರವನ್ನು ನೋಡಿದಾಗಲೇ ಅದು ಬಹು ಶಕ್ತಿಯುಳ್ಳುದಾಗಿರಬಹುದೆಂದು ತೋರಿತು. ಮಹಾತ್ಮರಾದ ರಾಮಲಕ್ಷ್ಮಣರಿಬ್ಬರೂ ಅದನ್ನು ನೋಡಿ ಯಾವನೋ ರಾಕ್ಷಸನೊಬ್ಬನು ಪಕ್ಷಿರೂಪದಿಂದಿರಬಹುದೆಂದು ಶಂಕಿಸಿ, ಅದರ ಸಮೀಪಕ್ಕೆ ಬಂದು “ಎಲೈ ನೀನು ಯಾರು ?” ಎಂದು ಕೇಳಿದರು. ಆಗ ಆ ಪಕ್ಷಿಯು ಅವರನ್ನು ಸಂತೋಷಪಡಿಸುವಂತೆ ಕಿವಿಗಿಂಪಾದ ಮಾತಿನಿಂದ “ಎಲೈ ವತ್ಸನೆ! ನನ್ನನ್ನು ಅನ್ಯನೆಂದು ಭಾವಿಸಬೇಡ! ನಾನು ನಿನ್ನ ತಂದೆಗೆ ಪ್ರಿಯಮಿತ್ರನು” ಎಂದಿತು. ಹೀಗೆ ತಾನು ದಶರಥನ ಮಿತ್ರನೆಂದು ಆ ಪಕ್ಷಿಯು ಹೇಳಿದೊಡನೆ, ರಾಮನಿಗೆ ಆ ಪಕ್ಷಿಯಲ್ಲಿ ಗೌರವಜ್ಞಾನವುಂಟಾಯಿತು. ಆಗಲೇ ಆ ಪಕ್ಷಿಯನ್ನು ತಕ್ಕಂತೆ ಪೂಜಿಸಿದನು. ಆಮೇಲೆ ಆ ಪಕ್ಷಿಯ ವಂಶವೃತ್ತಾಂತವನ್ನೂ, ಹೆಸರನ್ನೂ ಕೇಳಿದನು. ಅದಕ್ಕಾ ಪಕ್ಷಿಯು ಮೊದಲು ರಾಮನಿಗೆ ಸಮಸ್ತ ಭೂತಗಳ ಉತ್ಪತ್ತಿಪ್ರಕಾರವನ್ನೂ, ತನ್ನ ಕುಲವನ್ನೂ, ತನ್ನ ಹೆಸರನ್ನೂ ಹೇಳಲಾರಂಭಿಸಿ, “ಎಲೈ ಮಹಾಬಾಹುವಾದ ರಾಮನೆ! ಪೂರ್ವದಲ್ಲಿ ಪ್ರಸಿದ್ಧಿಗೊಂಡ ಪ್ರಜಾಪತಿಗಳೆಲ್ಲರ ಹೆಸರನ್ನೂ ಮೊದಲು ನಿನಗೆ ಕ್ರಮವಾಗಿ ತಿಳಿಸುವೆನು ಕೇಳು. ಅವರಲ್ಲಿ ಕರ್ದಮನೆಂಬುವನು

ಮೊದಲನೆಯವನು. ಎರಡನೆಯವನು ವಿಕ್ರೀತನು. ಶ್ರೇಷ್ಠನೆಂಬುವನು ಮೂರನೆಯವನು. ಅನೇಕ ಪುತ್ರರನ್ನು ಪಡೆದವನಾಗಿಯೂ, ವೀರ್ಯವಂತನಾಗಿಯೂ ಇದ್ದ ಸಂಶ್ರಯನೆಂಬುವನು ನಾಲ್ಕನೆಯವನು. ಹಾಗೆಯೇ ಸ್ಥಾಣು, ಮರೀಚಿ, ಅತ್ರಿ, ಮಹಾಬಲಾಢ್ಯನಾದ ಕ್ರತು, ಪುಲಸ್ತ್ಯನು, ಅಂಗೀರಸ್ಸು, ಪ್ರಚೇತಸ್ಸು, ಪುಲಹನು, ದಕ್ಷನು, ವಿವಸ್ವಂತನು ಎಂಬಿವರೆಲ್ಲರೂ ಕ್ರಮವಾಗಿ ಪ್ರಖ್ಯಾತರಾಗಿದ್ದರು. ಅರಿಷ್ಟನೇಮಿಯೆಂಬ ನಾಮಾಂತರವುಳ್ಳ ಮಹಾತೇಜಸ್ವಿಯಾದ ಕಾಶ್ಯಪನೆಂಬುವನು ಇವರಲ್ಲಿ ಕೊನೆಯವನು. ಇವರಲ್ಲಿ ದಕ್ಷನೆಂಬವನಿಗೆ ಮಹಾಯಶಸ್ವಿನಿಯರಾದ ಅರವತ್ತುಮಂದಿ ಹೆಣ್ಣುಮಕ್ಕಳಿದ್ದುದಾಗಿ ಕೇಳುವೆವು. ಈ ಅರವತ್ತುಮಂದಿಯಲ್ಲಿ ಅದಿತಿ, ದಿತಿ, ದನು, ಕಾಳಿಕೆ, ತಾಮ್ರೆ, ಕ್ರೋಧವಶೆ, ಮನು, ಅನವೆ, ಎಂಬ ಎಂಟುಮಂದಿ ಉತ್ತಮಕನ್ಯೆಯರನ್ನು ಕಾಶ್ಯಪನು ಮದುವೆಮಾಡಿಕೊಂಡನು. ಇವರಲ್ಲಿ ಕಾಶ್ಯಪನಿಗೆ ಬಹಳ ಪ್ರೀತಿಯು ಹುಟ್ಟಿತು. ಒಮ್ಮೆ ಆತನು ಈ ಎಂಟುಮಂದಿಯನ್ನೂ ಕರೆದು, "ಎಲೈ ಪ್ರಿಯಪತ್ನಿಯರೆ! ನನಗೆ ಸಮಾನರಾಗಿ ಮೂರು ಲೋಕವನ್ನೂ ಆಳಬಲ್ಲ ಪುತ್ರರನ್ನು ನೀವು ಪಡೆಯಿರಿ!" ಎಂದು ಅನುಗ್ರಹಿಸಿದನು. ಆಗ ಅದಿತಿ, ದಿತಿ, ಕಾಳಿಕೆ ಈ ಮೂವರೂ ಅದರಿಂದ ಅದೇ ಮನಸ್ಸುಳ್ಳವರಾಗಿದ್ದರು. ಉಳಿದವರು ಅಲಕ್ಷ್ಯದಿಂದ ಬೇರೆ ಮನಸ್ಸುಳ್ಳವರಾಗಿದ್ದರು. ಆಮೇಲೆ ಅದಿತಿಯಲ್ಲಿ ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು, ಅಶ್ವಿನೀದೇವತೆಗಳಿಬ್ಬರು ಹೀಗೆ ಮೂರು ದೇವತೆಗಳು ಜನಿಸಿದರು. ದಿತಿಯೆಂಬವಳು ಯಶಸ್ವಿಗಳಾದ ದೈತ್ಯರನ್ನು ಪುತ್ರರನ್ನಾಗಿ ಪಡೆದಳು. ಮೊದಲು ವನಗಳಿಂದಲೂ ಸಮುದ್ರಗಳಿಂದಲೂ ಕೂಡಿದ ಸಮಸ್ತ ಭೂಮಿಯೂ ಆ ದೈತ್ಯರ ವಶವಾಗಿಯೇ ಇದ್ದಿತು. ದನುವೆಂಬವಳು ಅಶ್ವಗ್ರೀವನೆಂಬ ಪುತ್ರನನ್ನು ಪಡೆದಳು ಕಾಳಿಕೆಯೆಂಬವಳು ನರಕ, ಕಾಲರೆಂಬ ಪುತ್ರರಿಬ್ಬರನ್ನು ಪಡೆದಳು. ತಾಮ್ರೆಯೆಂಬವಳು ಕ್ರೌಂಚಿ, ಭಾಸಿ, ಶ್ಯೇನಿ, ಧೃತರಾಷ್ಟ್ರಿ, ಶುಕಿ ಎಂಬ ಲೋಕವಿಶ್ರುತರಾದ ಐದು ಮಂದಿ ಕನ್ಯೆಯರನ್ನು ಪಡೆದಳು. ಈ ಪಂಚಕನ್ಯೆಯರಲ್ಲಿ ಕ್ರೌಂಚಿಯೆಂಬವಳಿಂದ ಗೂಗೆಗಳೂ, ಭಾಸಿಯೆಂಬವಳಿಂದ ಭಾಸಪಕ್ಷಿಗಳೂ, ಶ್ಯೇನಿಯಿಂದ ಗಿಡುಗಗಳೂ ಮತ್ತು ಮಹಾವೀರ್ಯವುಳ್ಳ ಹದ್ದುಗಳೂ ಜನಿಸಿದುವು. ಧೃತರಾಷ್ಟ್ರಿಯೆಂಬ ಕನ್ಯಕೆಯು ಹಂಸಗಳನ್ನೂ ಕಲಹಂಸಗಳನ್ನೂ ಚಕ್ರವಾಕ ಪಕ್ಷಿಗಳನ್ನೂ ಹಡೆದಳು. ಶುಕಿ

ಯೆಂಬವಳಿಗೆ ನತೆಯೆಂಬ ಮಗಳು ಹುಟ್ಟಿದಳು. ನತೆಗೆ ವಿನತೆಯೆಂಬ ಮಗಳಾದಳು. ಕಶ್ಯಪಪತ್ನಿಯರಲ್ಲಿ ಆರನೆಯವಳಾದ ಕ್ರೋಧವಶೆಯೆಂಬವಳಿಗೆ ಹತ್ತುಮಂದಿ ಹೆಣ್ಣುಮಕ್ಕಳಾದರು. ಅವರಿಗೆ ಕ್ರಮವಾಗಿ ಮೃಗಿ, ಮೃಗಮಂದೆ, ಹರಿ, ಭದ್ರಮದೆ, ಮಾತಂಗಿ, ಶಾರ್ದೂಲಿ, ಶ್ವೇತೆ, ಸರಭಿ, ಸರ್ವಲಕ್ಷಣಸಂಪನ್ನೆಯಾದ ಸುರಸೆ, ಕದ್ರುಕೆ ಎಂಬವರು ಹುಟ್ಟಿದರು. ಎಲೈ ಪುರುಷಶ್ರೇಷ್ಠನಾದ ರಾಮನೆ! ಈಗ ಲೋಕದಲ್ಲಿರುವ ಜಿಂಕೆಯ ಜಾತಿಗಳೆಲ್ಲವೂ ಮೃಗಿಯಿಂದ ಹುಟ್ಟಿದುವು. ಮೃಗಮಂದೆಯೆಂಬವಳಿಗೆ ಕರಡಿಗಳೂ, ಚಮರಮೃಗಗಳೂ, ಸೃಮರವೆಂಬ ಮೃಗಗಳೂ ಮಕ್ಕಳಾದುವು. ಹರಿಯೆಂಬವಳಿಂದ ಸಿಂಹಗಳೂ, ವಾನರಗಳೂ ಹುಟ್ಟಿದುವು. ಭದ್ರಮದೆಗೆ ಇರಾವತಿಯೆಂಬ ಮಗಳೊಬ್ಬಳು ಹುಟ್ಟಿ, ಅವಳಿಂದ ಐರಾವತವೆಂಬ ಶ್ರೇಷ್ಠವಾದ ದಿಗ್ಗಜವು ಹುಟ್ಟಿತು. ಎಲೈ ಪುರುಷಶ್ರೇಷ್ಠನೆ! ಮಾತಂಗಿಯೆಂಬವಳಿಂದ ಆನೆಗಳು ಹುಟ್ಟಿದವು. ಶಾರ್ದೂಲಿಯೆಂಬವಳಿಂದ ಸಿಂಗಳೀಕಗಳೂ, ಹುಲಿಗಳೂ ಹುಟ್ಟಿದವು. ಶ್ವೇತೆಯೆಂಬವಳಿಗೆ ಇತರ ದಿಗ್ಗಜಗಳು ಮಕ್ಕಳಾದುವು. ಸುರಭಿಯೆಂಬವಳಿಗೆ ರೋಹಿಣಿ ಮತ್ತು ಗಂಧರ್ವಿಯೆಂಬ ಹೆಣ್ಣುಮಕ್ಕಳಿಬ್ಬರು ಹುಟ್ಟಿದರು. ಅವರಲ್ಲಿ ರೋಹಿಣಿಯು ಗೋವುಗಳನ್ನೂ, ಗಂಧರ್ವಿಯು ಕುದುರೆಗಳನ್ನೂ ಉಂಟುಮಾಡಿದರು. ಸುರಸೆಯೆಂಬವಳಿಂದ ಅನೇಕ ಫಣೆಗಳುಳ್ಳ ಸರ್ಪಗಳೂ, ಕದ್ರುವಿನಿಂದ ಇತರ ಸಾಮಾನ್ಯ ಸರ್ಪಗಳೂ ಹುಟ್ಟಿದುವು. ಮನುವೆಂಬ ಕಾಶ್ಯಪಭಾರ್ಯೆಯು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಮನುಷ್ಯಜಾತಿಯನ್ನು ಪಡೆದಳು. ಅನಲೆಯೆಂಬವಳು ಉತ್ತಮ ಫಲವನ್ನು ಕೊಡುವ ವೃಕ್ಷಜಾತಿಗಳೆಲ್ಲವನ್ನೂ ಪಡೆದಳು. ಎಲೈ ವೀರನೆ! ಇನ್ನು ನನ್ನ ಕುಲದ ಸಂಬಂಧವನ್ನೂ ಹೇಳುವೆನು ಕೇಳು. ಶುಕಿಯೆಂಬವಳಿಗೆ ವಿನತೆಯು ಮುಮ್ಮಗಳೆಂದು ಮೊದಲೇ ಹೇಳಿರುವೆನಲ್ಲವೆ? ಕದ್ರುವೆಂಬವಳು ಸುರಸೆಯ ತಂಗಿಯು. ಕದ್ರುವಿಗೆ ಸಾವಿರ ತಲೆಗಳಿಂದ ಭೂಮಿಯನ್ನು ಹೊತ್ತಿರತಕ್ಕ ಆದಿಶೇಷನು ಜನಿಸಿದನು. ವಿನತೆಗೆ ಗರುಡನೆಂದೂ ಅನೂರುವೆಂದೂ ಪ್ರಸಿದ್ಧರಾದ ಇಬ್ಬರು ಮಕ್ಕಳಾದರು. ಎಲೈ ಪರಂತಪನೆ! ನಾನು ಆ ಅನೂರುವಿಗೆ [1]ಶ್ಯೇನಿಯಲ್ಲಿ ಹುಟ್ಟಿದ ಮಗನು.

---

1. "ಶ್ಯೇನಿ ಶುಕಿ ಇವರಿಬ್ಬರೂ ಕಾಶ್ಯಪನ ಭಾರ್ಯೆಯಾದ ತಾಮ್ರೆಯೆಂಬವಳ ಮಕ್ಕಳಾಗಿರುವಾಗ, ಈ ಶ್ಯೇನಿಯು ಅರುಣನ ಭಾರ್ಯೆಯೆಂಬುದು ಹೇಗೆ? ಮತ್ತು

*

ನನಗೆ ಸಂಪಾತಿಯೆಂಬ ಒಬ್ಬ ಅಣ್ಣನುಂಟು. ನನಗೆ ಜಟಾಯುವೆಂದು ಹೆಸರು. ನೀನು ಇಷ್ಟಪಟ್ಟರೆ ನಿನ್ನ ವನವಾಸ ಕಾಲದಲ್ಲಿ ಸಹಾಯಕನಾಗಿರಬೇಕೆಂದು ಕೋರುವೆನು. ಈ ಕಾಡಿನಲ್ಲಿ ಕ್ರೂರಮೃಗಗಳು ಬಹಳವಾಗಿರುವುವು. ರಾಕ್ಷಸರೂ ಹೆಚ್ಚಾಗಿರುವರು. ಈ ಪ್ರದೇಶವು ಬಹು ದುರ್ಗಮವಾದುದು. ಎಲೈ ರಾಮನೆ! ನೀನು ಲಕ್ಷ್ಮಣನೊಡನೆ ಎಲ್ಲಿಯಾದರೂ ಹೊರಗೆ ಹೋಗಿ ಸುತ್ತಿಬರಬೇಕಾಗಿದ್ದರೆ ನಾನು ಈ ಸೀತೆಗೆ ಕಾವಲಾಗಿರುವೆನು. ಇನ್ನೂ ಅನೇಕ ವಿಧದಲ್ಲಿ ನನ್ನಿಂದ ನಿನಗೆ ಸಹಾಯವುಂಟು" ಎಂದನು. ಇದನ್ನು ಕೇಳಿ ರಾಮನು ಅತ್ಯಾದರದಿಂದ ಆ ಜಟಾಯುವನ್ನು ಪೂಜಿಸಿ, ಸಂತೋಷದಿಂದ ಆತನ ದೇಹವನ್ನು ಅಪ್ಪಿಕೊಂಡನು. ಆ ಜಟಾಯುವೂ ಕೂಡ, ಬಾರಿ ಬಾರಿಗೂ ತನಗೂ ದಶರಥನಿಗೂ ಇದ್ದ ಸ್ನೇಹವನ್ನು ಹೇಳಿ ಕೊಂಡಾಡುತ್ತಿರಲು, ಅದನ್ನು ರಾಮನು ಅತ್ಯಾದರದಿಂದ ಕೇಳುತ್ತ ಪಿತೃಭಕ್ತಿಯಿಂದ ಆ ಜಟಾಯುವಿಗೆ ನಮಸ್ಕರಿಸುತ್ತಿದ್ದನು. ಕೊನೆಗೆ ರಾಮನು ಸೀತೆಯ ರಕ್ಷಣೆಯನ್ನು ನೋಡಿಕೊಳ್ಳುವಂತೆ ಜಟಾಯುವಿಗೆ ಅನುಮತಿಯನ್ನು ಕೊಟ್ಟು, ಮಹಾಬಲಾಢ್ಯನಾದ ಆ ಪಕ್ಷಿರಾಜನೊಡನೆಯೂ, ಸೀತಾಲಕ್ಷ್ಮಣರೊಡನೆಯೂ ಮುಂದೆ ಹೊರಟು, ಅಗ್ನಿಯು ಶಲಭಗಳನ್ನು ದಹಿಸುವಂತೆ ಶತ್ರುಗಳನ್ನು ನಿರ್ಮೂಲಮಾಡಬೇಕೆಂಬ ಅತ್ಯಾತುರವನ್ನು ಮನಸ್ಸಿನಲ್ಲಿಟ್ಟುಕೊಂಡು ಪಂಚವಟಿಗೆ ಬಂದು ಸೇರಿದನು.

ಇಲ್ಲಿಗೆ ಹದಿನಾಲ್ಕನೆಯ ಸರ್ಗವು.

---

ಶ್ಯೇನಿಗೆ ಜಟಾಯುವು ಹೇಗೆ ಮಗನಾಗುವನು ?" ಎಂದರೆ, ಈಗ ಹೇಳಿದ ಶ್ಯೇನಿಯೆಂಬವಳು ಶ್ಯೇನಿಯ ಸಂತಾನಪರಂಪರೆಗಳಲ್ಲಿ ಸೇರಿದ ಬೇರೊಬ್ಬ ಶ್ಯೇನಿಯೆಂದು ಗ್ರಹಿಸುವುದರಿಂದ ದೋಷವಿಲ್ಲವು. ಅಥವಾ ವಿಧಿನಿಷೇಧಗಳಿಗೆ ಅಧಿಕಾರವು ಮನುಷ್ಯರಿಗೇ ಹೊರತು ಮೃಗಪಕ್ಷ್ಯಾದಿತಿರ್ಯಗ್ಜಂತುಗಳಿಗಿಲ್ಲದುದರಿಂದ ಕಾಶ್ಯಪನ ಮಕ್ಕಳಾಗಿಯೂ ಇರಬಹುದು.

### ಪಂಚವಟಿಯಲ್ಲಿ ರಾಮನು ಲಕ್ಷ್ಮಣನಿರ್ಮಿತವಾದ ಆಶ್ರಮದಲ್ಲಿ ಸೀತಾಲಕ್ಷ್ಮಣಸಹಿತನಾಗಿ ಕೆಲವುಕಾಲವಿದ್ದುದು.

ಆಮೇಲೆ ರಾಮನು ಅನೇಕ ಕ್ರೂರಮೃಗಗಳಿಂದಲೂ ಸರ್ಪಗಳಿಂದಲೂ ತುಂಬಿದ ಪಂಚವಟಿಯನ್ನು ಸೇರಿ ಲಕ್ಷ್ಮಣನನ್ನು ನೋಡಿ "ವತ್ಸನೆ! ಅಗಸ್ತ್ಯ ಮುನಿಯು ಹೇಳಿದಂತೆ ನಾವು ಈ ಪ್ರದೇಶವನ್ನು ಸೇರಿಬಿಟ್ಟೆವು. ಇದೋ ಪುಷ್ಪಿತವಾದ ಕಾಡುಗಳು ಕಾಣುತ್ತಿರುವುವು ನೋಡು. ಈ ಪ್ರದೇಶವೇ ಪಂಚವಟಿಯು. ಕಾಡಿನಲ್ಲಿ ಅನುಕೂಲವಾದ ಆಶ್ರಮಸ್ಥಲವನ್ನು ಕಂಡುಹಿಡಿಯು ವುದರಲ್ಲಿ ನಿನಗೆ ಬಹಳ ಬಳಕೆಯುಂಟಲ್ಲವೆ? ಇಲ್ಲಿ ನಾವು ಯಾವ ಕಡೆಯಲ್ಲಿ ಅನುಕೂಲವಾದ ಆಶ್ರಮವನ್ನು ಮಾಡಿಕೊಳ್ಳಬಹುದು? ನಾವು ಈಗ ನಿರ್ಣಯಿಸುವ ಸ್ಥಳವು ಸೀತೆಗೂ, ನಿನಗೂ, ನನಗೂ ಮನಸ್ಸಿಗೊಪ್ಪುವಂತಿರ ಬೇಕು. ಈಗ ನಾವು ನಿರ್ಮಿಸುವ ಆಶ್ರಮವು ಕೊಳಕ್ಕೆ ಸಮೀಪವಾಗಿರಬೇಕು. ಈಗ ಕಲ್ಪಿಸುವ ಆಶ್ರಮದ ಸಮೀಪದಲ್ಲಿ ಸುತ್ತಲೂ [1]ರಮಣೀಯವಾದ ತೋಟ ಗಳಿರಬೇಕು. ಅಲ್ಲಿನ ನೆಲವೂ ಹಳ್ಳತಿಟ್ಟುಗಳಿಲ್ಲದೆ ಅಂದವಾಗಿ ಕಾಣಬೇಕು. ಮತ್ತು ಸಮಿತ್ತುಗಳು, ಪುಷ್ಪಗಳು, ದರ್ಭೆಗಳು ಮೊದಲಾದ ಸಾಧನಗಳೆಲ್ಲವೂ ಸಮೀಪದಲ್ಲಿ ಸಿಕ್ಕುವಹಾಗಿರಬೇಕು. ಆದುದರಿಂದ ವತ್ಸ ಲಕ್ಷ್ಮಣನೆ! ಇಲ್ಲಿ ಸುತ್ತಲೂ ಕಣ್ಣಿಟ್ಟುನೋಡಿ ಸರಿಯಾದ ಸ್ಥಲವೊಂದನ್ನು ಕಂಡುಹಿಡಿ" ಎಂದನು. [2]ಇದನ್ನು ಕೇಳಿ ಲಕ್ಷ್ಮಣನು, ಸೀತೆಯ ಮುಂದೆ ರಾಮನಿಗೆ ಕೈಮುಗಿದು

---

1. ರಮಣೀಯವಾದ ತೋಟಗಳಿರಬೇಕೆಂಬುದರಿಂದ, ಸೀತೆಯ ಪುಷ್ಪಾಪಚಯಕ್ಕನು ಕೂಲವಾಗಿರಬೇಕೆಂದೂ, ಹಳ್ಳತಿಟ್ಟುಗಳಿಲ್ಲದಿರಬೇಕೆಂಬುದರಿಂದ ತನ್ನ ಸುಖಶಯನಾದಿ ಗಳಿಗೆ ಅನುಕೂಲಿಸಬೇಕೆಂದೂ, ಸಮಿತ್ತು, ಪುಷ್ಪಗಳು ಮುಂತಾದುವು ಸಮೀಪದಲ್ಲಿರ ಬೇಕೆಂಬುದರಿಂದ ಲಕ್ಷ್ಮಣನು ನಡೆಸುವ ಕೈಂಕರ್ಯಗಳಿಗೆ ಅನುಕೂಲವಾಗಿರಬೇಕೆಂದೂ, ಹೀಗೆ ತಮಗೆ ಮೂವರಿಗೂ ಅನುಕೂಲವಾದ ಪ್ರದೇಶವನ್ನೇ ನೋಡಬೇಕೆಂದು ಭಾವವು.

2. ಇಲ್ಲಿ ಏವಮುಕ್ತಸ್ತು ರಾಮೇಣ ಲಕ್ಷ್ಮಣಸ್ಸಂಯತಾಂಜಲಿಃ | ಸೀತಾಸಮಕ್ಷಂ ಕಾಕುತ್ಸ್ಥಮಿದಂ ವಚನಮಬ್ರವೀತ್ ॥ ಪರವಾನಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂಸ್ಥಿತೇ ಸ್ವಯಂ ತು ರುಚಿರೇ ದೇಶೇ ಕ್ರಿಯತಾಮಿತಿ ಮಾಂ ವದ" ಎಂದು ಮೂಲವು. ಇಲ್ಲಿ ರಾಮನು ಲಕ್ಷ್ಮಣನೊಡನೆ "ನಿನ್ನ ಸೌಖ್ಯಕ್ಕೆ ಅನುಕೂಲವಾಗಿರುವಂತೆ ಒಂದಾಶ್ರಮ

ನಿಂತು "ಅಣ್ಣಾ ! ನೀನು ಈ ಕಾಡಿನಲ್ಲಿ ನೂರು ವರ್ಷಗಳಿದ್ದರೂ ನಾನು ನಿನಗೆ ಪರತಂತ್ರನಾಗಿ, ನೀನು ಹೇಳಿದ ಕೆಲಸವನ್ನು ಮಾಡತಕ್ಕವನೇ ಹೊರತು,

---

ವನ್ನು ಕಲ್ಪಿಸಬೇಕೆಂ"ದು ಹೇಳಿದುದನ್ನು ಕೇಳಿ ಲಕ್ಷ್ಮಣನು ತನಗೆ ಅಷ್ಟು ಸ್ವಾತಂತ್ರ್ಯವನ್ನು ಕೊಟ್ಟುದಕ್ಕೆ ಸಹಿಸಲಾರದೆ, ರಾಮನನ್ನು ಕುರಿತು, ಸೀತೆಗೂ ನಿನಗೂ ಅನುಕೂಲವಾದ ಸ್ಥಳವನ್ನು ನೋಡೆಂದಾಜ್ಞಾಪಿಸಬೇಕೇ ಹೊರತು, ನನ್ನ ಸೌಕರ್ಯವನ್ನು, ನೋಡಬೇಕಾದುದಿಲ್ಲ"ವೆಂದು ನೈಚ್ಯಾನುಸಂಧಾನವನ್ನು ಮಾಡಿಕೊಳ್ಳುವನು. (ಸೀತಾ ಸಮಕ್ಷಂ) ಎಂಬುದರಿಂದ, ಪುರುಷಕಾರಸಾನ್ನಿಧ್ಯವು ಹೇಳಲ್ಪಡುವುದು. (ಪರವಾನಸ್ಮಿ ಎಂಬುದರಿಂದ, ತನ್ನ ಸ್ಥಿತಿಯು ಪಾರತಂತ್ರ್ಯರೂಪವಾದುದೆಂದು ಸೂಚಿತವು. ಕಾಕುತ್ಸ್ಥ ಎಂಬುದರಿಂದ "ನಿನ್ನ ಪರತ್ವಾವಸ್ಥೆಯಲ್ಲಿಯೇ ಅಲ್ಲದೆ ಈ ನಿನ್ನ ಅವತಾರಾವಸ್ಥೆಯಲ್ಲಿಯೂ ಕೂಡ ನಾನು ಪರತಂತ್ರನಾಗಿಯೇ ಇರುವೆ" ನೆಂದು ಭಾವವು. (ತ್ವಯಿ ವರ್ಷಶತಂ ಸ್ಥಿತೇ) ಇಲ್ಲಿ ಶತ ಶಬ್ದವು ಅನಂತ್ಯವಾಚಕವಾದುದರಿಂದ, ಸರ್ವಕಾಲಗಳಲ್ಲಿಯೂ ನನಗೆ ಪಾರತಂತ್ರ್ಯವೇ ಸ್ವರೂಪವೆಂದು ಭಾವವು. ಹೀಗೆ ಯಾವಾಗಲೂ ಪಾರತಂತ್ರ್ಯವೇ ಸ್ವರೂಪವಾಗಿ ಉಳ್ಳ ನನಗೆ, ತದನುರೂಪವಾದ ಆಜ್ಞೆಯನ್ನೇ ಮಾಡಬೇಕೇ ಹೊರತು ಬೇರೆ ವಿಧವಾದ ಮಾತುಗಳನ್ನು ಹೇಳಬಾರದೆಂದು ಪ್ರಾರ್ಥಿಸುವನು. (ಸ್ವಯಂ ತು ರುಚಿರೇ ದೇಶೇ) ನಿನಗೆ ರಮಣೀಯವಾದ ಪ್ರದೇಶದಲ್ಲಿ ಆಶ್ರಮವನ್ನು ಕಟ್ಟಬೇಕೆಂದು ನಿಯಮಿಸಬೇಕೇ ಹೊರತು ನನ್ನ ಸೌಕರ್ಯವನ್ನು ನೋಡಬೇಕಾದುದಿಲ್ಲವೆಂದೂ ಭಾವವು. (ಗೋವಿಂದರಾಜೀಯವು.)

(ಏವಮುಕ್ತಸ್ತು) ಹೀಗೆ ರಾಮನು ತನ್ನಲ್ಲಿ ಅಷ್ಟು ಸಲಿಗೆಯನ್ನು ತೋರಿಸಿದ ಮೇಲೆ, ಇಲ್ಲಿ "ತು" ಕಾರವು ವೈಲಕ್ಷಣ್ಯವನ್ನು ಸೂಚಿಸುವುದು. "ರಾಮನು ಪಾರತಂತ್ರ್ಯಸ್ವರೂಪನಾದ ತನ್ನಲ್ಲಿ ಹೀಗೆ ಸ್ವಾತಂತ್ರ್ಯವನ್ನಿಟ್ಟಾಗಲೇ ತನ್ನನ್ನು ಪರಿತ್ಯಾಗವಮಾಡಿದಂತಾಯಿತಲ್ಲವೆ" ಎಂದು ರಾಮನಿಂದ ತ್ಯಜಿಸಲ್ಪಟ್ಟ ವಿಲಕ್ಷಣಾವಸ್ಥೆಯನ್ನು ಹೊಂದಿದವನಾಗಿ ಎಂದರೆ, ಇದುವರೆಗೆ ನನ್ನ ಅಜ್ಞಾನದಿಂದಲೇ ಪಾರತಂತ್ರ್ಯವನ್ನು ತಿಳಿಯದಿದ್ದುದರಿಂದ ನನ್ನ ಸ್ವರೂಪಕ್ಕೆ ಹಾನಿಯುಂಟಾಗಿದ್ದಿತು. ಇದರಮೇಲೆ ಈಗ ರಾಮನೇ ನನ್ನ ಪಾರತಂತ್ರ್ಯಸ್ವರೂಪಕ್ಕೆ ಹಾನಿಯನ್ನುಂಟುಮಾಡಿರುವನು. ಇದರಿಂದ ಇನ್ನುಮೇಲೆ ನನಗೆ ಸ್ವರೂಪವೆಂಬುದೊಂದು ಇರುವುದೇ ?" ಎಂದು ಈ ವಿಧವಾದ ಅವಸ್ಥಾಂತರವನ್ನು ಹೊಂದಿದವನೆಂದು ಭಾವವು. (ಲಕ್ಷ್ಮಣಃ) ಪಾರತಂತ್ರ್ಯವೇ ಲಕ್ಷಣವಾಗಿ ಉಳ್ಳವನು. (ಸಂಯತಾಂಜಲಿ) ಅಂಜಲಿಯನ್ನು ಮಾಡಿದವನಾಗಿ, ಇದರಿಂದ "ನಾನಾಗಿಯೇ ನನ್ನ ಸ್ವರೂಪವನ್ನು ಕೆಡಿಸಿಕೊಂಡಿದ್ದ ಪಕ್ಷದಲ್ಲಿ, ಅದನ್ನು ಕಾಪಾಡಿಕೊಳ್ಳುವುದಕ್ಕೆ ಬೇರೆ ಉಪಾಯಾಂತರವನ್ನು ಹುಡುಕಬಹುದಾಗಿದ್ದಿತು. ರಾಮನೇ ನನ್ನ ಸ್ವರೂಪಕ್ಕೆ ಈಗ ಹಾನಿಯನ್ನು ತಂದಿರುವುದರಿಂದ ನನ್ನಷ್ಟಕ್ಕೆ ನಾನೇ ಅದನ್ನು ರಕ್ಷಿಸಿಕೊಳ್ಳಲಾರೆನು. ಅಂಜಲಿಯೆಂಬುದು ಸರ್ವಾಭೀಷ್ಟಗಳಿಗೂ ಸಾಧಕವಾದುದರಿಂದ, ಈ ಅಂಜಲಿಯಿಂದಲೇ ತನ್ನ ಸ್ವರೂಪವನ್ನು ರಕ್ಷಿಸಿಕೊಳ್ಳ

ಯಾವ ವಿಷಯದಲ್ಲಿಯೂ ಸ್ವಾತಂತ್ರ್ಯವನ್ನು ವಹಿಸುವುದಕ್ಕೆ ಶಕ್ತನಲ್ಲ. ನನಗೂ ಅನುಕೂಲವೆಂದು ತೋರಿದ ಸ್ಥಳದಲ್ಲಿಯೇ ಆಶ್ರಮವನ್ನು ಮಾಡಬೇಕೆಂದು ಹೇಳಿದೆಯಲ್ಲವೆ ? ಅದಕ್ಕಿಂತಲೂ ನಿನಗನುಕೂಲವಾದ ಸ್ಥಳವನ್ನು ನೀನೇ ನೋಡಿ ಆ ಸ್ಥಲದಲ್ಲಿ ಆಶ್ರಮವನ್ನು ಕಲ್ಪಿಸಬೇಕೆಂದು ನನಗೆ ನಿಯಮಿಸು. ಅದರಂತೆ ನಾನು ನಡೆಸುವೆನು" ಎಂದನು. ಮಹಾತ್ಮನಾದ ಲಕ್ಷ್ಮಣನು ಹೇಳಿದ ಮಾತುಗಳನ್ನು ಕೇಳಿ ರಾಮನು ಸಂತೋಷಿಸಿ, ತಾನೇ ಆ ವನದ ಸುತ್ತಲೂ ಕಣ್ಣಿಟ್ಟು ನೋಡಿ, ಸಮಸ್ತ ವಿಧದಲ್ಲಿಯೂ ಅನುಕೂಲವಾದ ಸ್ಥಳವೊಂದನ್ನು ನಿರ್ಣಯಿಸಿದನು. ರಮಣೀಯವಾದ ಪ್ರದೇಶದಲ್ಲಿ ಆಶ್ರಮವನ್ನು ಕಟ್ಟಬೇಕೆಂದುದ್ದೇಶಿಸಿ, ತನ್ನ ಕೈಯಿಂದ ಲಕ್ಷ್ಮಣನ ಕೈಯನ್ನು ಹಿಡಿದುಕೊಂಡು "ವತ್ಸ ಲಕ್ಷ್ಮಣನೆ! ಅದೋ! ಆ ಸ್ಥಲವು ಹಳ್ಳತಿಟ್ಟುಗಳಿಲ್ಲದೆ ಸಮವಾಗಿಯೂ ಇರುವುದು. ಆ ಸ್ಥಲದಲ್ಲಿಯೇ ಯಥಾವಿಧಿಯಾಗಿ ಆಶ್ರಮವನ್ನು ನಿರ್ಮಿಸು. ಸೂರ್ಯನಂತೆ ಹೊಳೆಯುತ್ತಿರುವ ಸುವಾಸನೆಯುಳ್ಳ ಕಮಲಗಳಿಂದ ತುಂಬಿದ ಅತಿ ರಮಣೀಯವಾದ ಸರೋವರವೊಂದು ಇದೋ ಸಮೀಪದಲ್ಲಿಯೇ ಕಾಣುತ್ತಿರುವುದು. ಮಹಾತ್ಮನಾದ ಅಗಸ್ತ್ಯಮುನಿಯು ಹೇಳಿದಂತೆ, ಇದೋ ಸಮೀಪದಲ್ಲಿಯೇ ಗೋದಾವರಿಯೂ ಪ್ರವಹಿಸುತ್ತಿರುವುದು. ಆ ನದೀತೀರದಲ್ಲಿರುವ ಪುಷ್ಪಿತಗಳಾದ ವೃಕ್ಷಸಮೂಹಗಳನ್ನು ನೋಡು. ಅಲ್ಲಲ್ಲಿ ಹಂಸಗಳೂ, ನೀರುಕೋಳಿಗಳೂ, ಚಕ್ರವಾಕಗಳೂ ನೇತ್ರಾನಂದಕರವಾಗಿ ಸಂಚರಿಸುತ್ತಿರುವುವು. ಈ ಸ್ಥಳಕ್ಕೆ ಬಹಳ ಸಮೀಪವಾಗಿಯೂ, ಬಹಳ ದೂರವಾಗಿಯೂ ಇಲ್ಲದೆ, ಪರ್ವತಶ್ರೇಣಿಗಳು ಕಾಣುತ್ತಿರುವುವು ನೋಡು. ಅದರಲ್ಲಿ ಅನೇಕ ಮೃಗಗಳು ತುಂಬಿರುವುವು. ಅಲ್ಲಲ್ಲಿ ನವಿಲುಗಳು ಕೂಗುತ್ತಿರುವುವು. ಅಲ್ಲಲ್ಲಿ ಅನೇಕ ಗುಹೆಗಳೂ ಕಾಣುತ್ತಿರುವುವು. ಅದರ ಸುತ್ತಲೂ ಪುಷ್ಪಿತಗಳಾದ ವೃಕ್ಷಸಮೂಹ

---

ಬೇಕೆಂದು ಕೈಮುಗಿದನೆಂದು ಭಾವವು. (ಸೀತಾಸಮಕ್ಷಂ) ತನ್ನನ್ನು ಅನ್ಯಪರನನ್ನಾಗಿ ಪ್ರತಿಪಾದಿಸದೆ, ಭಗವತ್ಪರನನ್ನಾಗಿಯೇ ನಿರೂಪಿಸುವ ವಿಷಯದಲ್ಲಿ ಪುರುಷಕಾರ ಭೂತೆಯಾದ ಲಕ್ಷ್ಮೀದೇವಿಯ ಸಾನ್ನಿಧ್ಯದಲ್ಲಿ ಲಕ್ಷ್ಮಣನು ಈ ಮಾತನ್ನು ಹೇಳಿದನೆಂದು ಭಾವವು. ಇಲ್ಲಿ (ಸೀತಾಸಮಕ್ಷಂ) ಎಂಬುದರಿಂದ ದ್ವಯವೆಂಬ ಮಂತ್ರದ ಉತ್ತರ ಖಂಡದಲ್ಲಿ ಪ್ರತಿಪಾದಿಸಲ್ಪಡುವ ಲಕ್ಷ್ಮೀ ವಿಶಿಷ್ಟನಾದ ಶ್ರೀಮನ್ನಾರಾಯಣನಿಗೇ ಕೈಂಕರ್ಯವು ಸಂಬಂಧಿಸುವುದೆಂಬ ಅರ್ಥವೂ ವ್ಯಂಜಿತವಾಗುವುದು.

ಗಳು ತುಂಬಿರುವುವು. ಉನ್ನತವಾಗಿಯೂ ಮನೋಹರವಾಗಿಯೂ ಇರುವ ಈ ಪರ್ವತಗಳ ಮೇಲೆ ನಾನಾಕಡೆಗಳಲ್ಲಿಯೂ ಬಂಗಾರ, ಬೆಳ್ಳಿ, ತಾಮ್ರ ಮೊದಲಾದ ಬಣ್ಣಗಳುಳ್ಳ ಧಾತುವಿಶೇಷಗಳು ಕಾಣುತ್ತಿರುವುವು. ಇವುಗಳನ್ನು ನೋಡಿದರೆ ವಿಚಿತ್ರವಿಚಿತ್ರಗಳಾದ ರೇಖೆಗಳಿಂದಲಂಕರಿಸಲ್ಪಟ್ಟ ಆನೆಗಳಂತೆ ಕಾಣುವುವು. ಮತ್ತು ಈ ಬೆಟ್ಟಗಳ ಮೇಲೆ ಮತ್ತಿ, ತಾಳೆ, ಹೊಂಗೆ, ಖರ್ಜೂರ, ಹಲಸು, ಮಾವು, ಕಡವು, ನೇಮಿ, ಹೊನ್ನೆ, ಅಸುಗೆ, ನಿಂಬೆ, ಸಂಪಗೆ, ತಿಲಕ, ಕೇದಗೆ ಮುಂತಾದ ಬಗೆಬಗೆಯ ವೃಕ್ಷಗಳು ಹೂಗಳಿಂದಲೂ, ಶಾಖೆಗಳಿಂದಲೂ, ಬಳ್ಳಿಗಳಿಂದಲೂ ಅಲಂಕರಿಸಲ್ಪಟ್ಟು ಅತಿಮನೋಹರವಾಗಿ ಕಾಣುತ್ತಿರುವುವು. ಮತ್ತು ಇಲ್ಲಿ ಚಂದನವೃಕ್ಷಗಳೂ, ಸ್ಪಂದನವೃಕ್ಷಗಳೂ, ಉಮ್ಮತ್ತ, ಮುತ್ತುಗ, ಬನ್ನಿ, ಪಾಟಲಿ ಮೊದಲಾದ ವೃಕ್ಷಗಳೂ ತುಂಬಿರುವುವು. ವತ್ಸ ಲಕ್ಷ್ಮಣನೆ! ಈ ಸ್ಥಳವೇ ಪವಿತ್ರವಾಗಿಯೂ, ಶುಚಿಯಾಗಿಯೂ, ಅನೇಕ ಮೃಗಪಕ್ಷಿಗಳಿಂದ ಕೂಡಿದುದಾಗಿಯೂ ಇರುವುದು. ಆದುದರಿಂದ ನಮ್ಮೊಡನೆ ಹಿಂಬಾಲಿಸಿ ಬಂದಿರುವ ಈ ಜಟಾಯುವೆಂಬ ಪಕ್ಷಿಯೊಡನೆ ಕೂಡಿ ಇಲ್ಲಿಯೇ ವಾಸಮಾಡುವೆವು" ಎಂದನು. ಈ ಮಾತನ್ನು ಕೇಳಿದೊಡನೆ ಲಕ್ಷ್ಮಣನು ಅಲ್ಲಿ ಉತ್ತಮವಾದ ಮತ್ತು ವಿಸ್ತಾರವಾದ ಪರ್ಣಶಾಲೆಯೊಂದನ್ನು ನಿರ್ಮಿಸಿದನು. ಲಕ್ಷ್ಮಣನು ಬಹಳ ಬಲಾಢ್ಯನಾಗಿಯೂ, ಕಾರ್ಯದಲ್ಲಿ ಚತುರನಾಗಿಯೂ ಇರುವುದರಿಂದ ಅಲ್ಲಿನ ನೆಲವನ್ನು ಅಗೆದು ಮೃದುವಾಗಿ ಮಾಡಿ, ಬಲವಾದ ಕಂಬಗಳನ್ನು ನೆಟ್ಟು ಆ ಕಂಬಗಳ ಮೇಲೆ ಬಿದಿರಿನ ತೊಲೆಗಳನ್ನೆತ್ತಿ ಅದರ ಉಭಯಪಾರ್ಶ್ವಗಳಲ್ಲಿಯೂ ಬನ್ನೀಮರದ ಕೊಂಬೆಗಳನ್ನು ಬೀಸಿ ಬಲವಾದ ಹಗ್ಗಗಳಿಂದ ಕಟ್ಟಿ, ದರ್ಭೆ, ನೊದೆ ಮತ್ತು ಬೇರೆಬೇರೆ ಮರದೆಲೆಗಳು ಮುಂತಾದುವುಗಳನ್ನೆಲ್ಲಾ ಹೊದ್ದಿಸಿ, ಅಲ್ಲಿನ ನೆಲವನ್ನು ಸಮನಾಗಿ ಮಾಡಿ, ನಿಮಿಷಮಾತ್ರದಲ್ಲಿ ಆ ಆಶ್ರಮ ಕಾರ್ಯವೆಲ್ಲವನ್ನೂ ಅತಿ ಮನೋಹರವಾಗಿರುವಂತೆ ಮಾಡಿಬಿಟ್ಟನು. ಹೀಗೆ ರಾಮನ ವಾಸಕ್ಕಾಗಿ ಅತ್ಯುತ್ತಮವಾದ ಆಶ್ರಮವನ್ನು ಕಟ್ಟಿದಮೇಲೆ, ಲಕ್ಷ್ಮಣನು ಗೋದಾವರೀ ನದಿಗೆ ಹೋಗಿ ಸ್ನಾನಮಾಡಿ, ತಾವರೆ ಹೂಗಳನ್ನೂ ಹಣ್ಣುಗಳನ್ನೂ ಸಂಗ್ರಹಿಸಿ ತಂದನು. ಆಮೇಲೆ ಆ ಹೊಸ ಆಶ್ರಮಕ್ಕೆ ಮಾಡಬೇಕಾದ ಪುಷ್ಪಬಲಿ ಮುಂತಾದ ಶಾಂತಿಕರ್ಮಗಳನ್ನೂ ಯಥೋಕ್ತವಾಗಿ ನಡೆಸಿ, ರಾಮನನ್ನು ಕರೆತಂದು ತೋರಿಸಿದನು. ರಾಮನು ಸೀತಾಸಮೇತನಾಗಿ

ಬಂದು ಲಕ್ಷ್ಮಣನಿರ್ಮಿತವಾದ ಪರ್ಣಶಾಲೆಯನ್ನು ನೋಡಿ ಬಹಳ ಸಂತೋಷ ಪಟ್ಟು ಆ ಲಕ್ಷ್ಮಣನನ್ನು ಎರಡುತೋಳುಗಳಿಂದಲೂ ಬಿಗಿಯಾಗಿ ಅಪ್ಪಿಕೊಂಡು ಅತಿ ಪ್ರೀತಿಯನ್ನು ತೋರಿಸುತ್ತ ತನ್ನ ಸಂತೋಷವನ್ನು ತಡೆಯಲಾರದೆ "ವತ್ಸನೆ ! ನನಗೆ ಪರಮ ಸಂತೋಷವಾಯಿತು. ಈ ನಿನ್ನ ಸಾಹಸಕ್ಕೆ ನಿನಗೆ ನಾನು ಯಾವ ಪ್ರತ್ಯುಪಕಾರವನ್ನು ಮಾಡಲಿ ? ಇದೋ ! ಅದಕ್ಕೆ ಪ್ರತಿಫಲ ವಾಗಿ ನಿನ್ನನ್ನು ಆಲಿಂಗಿಸಿಕೊಳ್ಳುವೆನು. [1]ನನ್ನ ಮನೋಭಿಪ್ರಾಯವನ್ನು

---

1. ಇಲ್ಲಿ "ಭಾವಜ್ಞೇನ ಕೃತಜ್ಞೇನ ಧರ್ಮಜ್ಞೇನ ಚ ಲಕ್ಷ್ಮಣ! ತ್ವಯಾ ಪುತ್ರೇಣ ಧರ್ಮಾತ್ಮಾ ನ ಸಂವೃತ್ತಃ ಪಿತಾ ಮಮ" ಎಂದು ಮೂಲವು. ಇಲ್ಲಿನ ವಿಶೇಷಾರ್ಥವೇ ನೆಂದರೆ:—(ಭಾವಜ್ಞೇನ) ಭಾವವನ್ನು ತಿಳಿದವನೆಂದರೆ, ತಾನು ಋಷಿಗಳೊಡನೆ ಕುಳಿತು ಮಾತಾಡುವುದಕ್ಕಾಗಿ ಒಂದು ಸ್ಥಲವನ್ನೂ, ಅಡುಗೆಗಾಗಿ ಒಂದು ಸ್ಥಳವನ್ನೂ ನಿರ್ಮಿಸ ಬೇಕೆಂದು ರಾಮನು ನಿಯಮಿಸಿರುವನೇ ಹೊರತು ತಾನು ಸೀತೆಯೊಡಗೂಡಿ ಏಕಾಂತದಲ್ಲಿ ರುವುದಕ್ಕಾಗಿಯೂ ಅಲ್ಲಿ ಒಂದು ಸ್ಥಲವನ್ನು ನಿರ್ಮಿಸಬೇಕೆಂದು ಹೇಳಿದವನಲ್ಲ. ಹೀಗಿದ್ದರೂ ರಾಮನಿಗೆ ಆ ಆಶಯವೂ ಮನಸ್ಸಿನಲ್ಲಿರಬಹುದೆಂದೂಹಿಸಿ, ಅದಕ್ಕನುಕೂಲವಾದ ಸ್ಥಳ ವನ್ನೂ ಆಶ್ರಮದಲ್ಲಿ ಕಲ್ಪಿಸಿಟ್ಟುದುದರಿಂದಲೇ ಈತನು ಭಾವಜ್ಞನೆಂದು ಭಾವವು. ಮತ್ತು (ಕೃತಜ್ಞೇನ) ದಶರಥನು ಬಹುಕಾಲದವರೆಗೆ ಸಂತಾನವಿಲ್ಲದಿದ್ದು, ಕೊನೆಗೆ ಈ ರಾಮನೆಂಬ ಪುತ್ರರತ್ನವನ್ನು ಪಡೆದುದರಿಂದ, ಆ ಪುತ್ರನಿಗೆ ತಕ್ಕಂತೆ ಮಹಾರಾಜನು ಅಕ್ಕರೆಯಿಂದ ಚಂದ್ರತಾರಾಬಲಾದಿಗಳನ್ನಾಲೋಚಿಸಿ, ಹೇಗೆ ಗೃಹವನ್ನು ಕಟ್ಟಿಸಿದ್ದನೋ ಆ ಕ್ರಮವನ್ನೂ ಚೆನ್ನಾಗಿ ತಿಳಿದವನೆಂದು ಭಾವವು. ಮತ್ತು (ಧರ್ಮಜ್ಞೇನ) ತಾನು ರಾಜಕುಮಾರನಾಗಿದ್ದರೂ ತನ್ನ ಸೌಕರ್ಯವನ್ನು ನೋಡಿಕೊಳ್ಳದೆ ರಾಮನ ಮನಸ್ಸಂತೋಷದಲ್ಲಿಯೇ ದೃಷ್ಟಿಯಿಟ್ಟು ಆತನ ಕೈಂಕರ್ಯವೇ ತನಗೆ ಸ್ವರೂಪವೆಂಬ ಧರ್ಮವನ್ನು ಚೆನ್ನಾಗಿ ಬಲ್ಲವನೆಂದು ಭಾವವು. ಅಥವಾ ತಾನು ಒಡಹುಟ್ಟಿದ ತಮ್ಮನಾಗಿದ್ದರೂ ಕೇವಲ ಭೃತ್ಯನಂತೆ ಅಣ್ಣನನ್ನು ಉಪಚರಿ ಸುತ್ತಿರುವೆನೆಂಬ ಡಂಬವನ್ನು ತೋರಿಸಬೇಕೆಂಬ ಉದ್ದೇಶದಿಂದಲ್ಲದೆ, ಇದೇ ತನಗೆ ಉಜ್ಜೀವನ ಧರ್ಮವೆಂಬ ಧರ್ಮಸೂಕ್ಷ್ಮವನ್ನು ತಿಳಿದವನೆಂದೂ ಸೂಚಿತವು. (ತ್ವಯಾ ಪುತ್ರೇಣ) ಪುತ್ರ ನೆಂದರೆ ಪುನ್ನಾಮಕವಾದ ನರಕದಿಂದ ತಪ್ಪಿಸಿ ಕಾಪಾಡುವವನು. ತಂದೆಯಾದ ದಶರಥನು ತನ್ನ ಇಷ್ಟವನ್ನು ನೆರವೇರಿಸದಿರುವುದೇ ತನಗೆ ನರಕವೆಂದು ತಿಳಿದಿದ್ದುದರಿಂದ, ನೀನು ಈ ನನ್ನ ಕೋರಿಕೆಯನ್ನು ಕೈಗೂಡಿಸಿ ಆತನಿಗೆ ಆ ನರಕಬಾಧೆಯಿಲ್ಲದಂತೆ ಉದ್ಧರಿಸಿದವನೆಂದು ಭಾವವು. ಇಂತಹ ನಿನ್ನಿಂದ (ಧರ್ಮಾತ್ಮಾ) ತಾನು ಜೀವಿಸುವವರೆಗೂ ನನ್ನ ಕೋರಿಕೆ ಗಳನ್ನೀಡೇರಿಸಿಕೊಡುತ್ತಿದ್ದು ತನ್ನ ಕೊನೆಗಾಲದಲ್ಲಿಯೂ ಆ ಕಾರ್ಯಕ್ಕಾಗಿ ನಿನ್ನನ್ನು ನಿಲ್ಲಿಸಿಹೋಗಿರುವುದರಿಂದ, ಆ ದಶರಥನು ಬಹಳ ಧರ್ಮಾತ್ಮನೆಂದರ್ಥವು. ಆದುದರಿಂದ (ಮಮ ಪಿತಾ ನ ಸಂವೃತ್ತಃ) ಆ ನನ್ನ ತಂದೆಯು ಇನ್ನೂ ಸಾಯಲಿಲ್ಲವು. ಏಕೆಂದರೆ

ತಿಳಿದು ನನಗೆ ಮಾಡಬೇಕಾದ ಕಾರ್ಯಗಳನ್ನು ಪರ್ಯಾಲೋಚಿಸಿ, ಧರ್ಮ ವನ್ನು ತಿಳಿದು ನಡೆಯುತ್ತಿರುವ ನಿನ್ನಂತಹ ಸತ್ಪುತ್ರನನ್ನು ಪಡೆದಿರುವುದರಿಂದ, ಈಗ ತನ್ನ ತಂದೆಯಾದ ದಶರಥನು ಇನ್ನೂ ಸಾಯದೆ ಬದುಕಿರುವನೆಂದೇ ಎಣಿಸಬೇಕಾಗಿದೆ" ಎಂದನು. ಆಮೇಲೆ ರಾಮನು ಫಲಸಮೃದ್ಧವಾದ ಆ ಪ್ರದೇಶದಲ್ಲಿಯೇ ಸುಖವಾಗಿ ವಾಸಮಾಡುತ್ತಿದ್ದನು. ಹೀಗೆ ರಾಮನು ಅಲ್ಲಿ ಸೀತಾಲಕ್ಷ್ಮಣರಿಬ್ಬರಿಂದಲೂ ಕಾಲಕಾಲಕ್ಕೆ ಉಪಚರಿಸಲ್ಪಡುತ್ತಿರುವವನಾಗಿ, ದೇವಲೋಕದಲ್ಲಿ ದೇವೇಂದ್ರನು ಹೇಗೋ ಹಾಗೆ ಅಲ್ಲಿಯೇ ಕೆಲವುಕಾಲದವರೆಗೆ ಸುಖದಿಂದಿದ್ದನು.

ಇಲ್ಲಿಗೆ ಹದಿನೈದನೆಯ ಸರ್ಗವು.

---

ಒಮ್ಮೆ ರಾಮನು ಗೋದಾವರಿಗೆ ಸ್ನಾನಾರ್ಥವಾಗಿ ಹೋದಾಗ ಲಕ್ಷ್ಮಣನು ಅವನನ್ನು ಹಿಂಬಾಲಿಸುತ್ತ, ಆಗಿನ ಹೇಮಂತಋತುವನ್ನು ವರ್ಣಿಸಿ, ಭರತನ ಗುಣಗಳನ್ನು ಕೊಂಡಾಡಿ, ಕೈಕೇಯಿಯನ್ನು ನಿಂದಿಸಿದುದು. ರಾಮನು ಅದನ್ನು ಕೇಳಲಾರದೆ, ಮಾತೃನಿಂದೆಯು ಕೂಡದೆಂದು ಲಕ್ಷ್ಮಣನಿಗೆ ಬುದ್ಧಿವಾದಗಳನ್ನು ಹೇಳಿ ಭರತನ ಗುಣಗಳನ್ನು ತಾನೂ ಕೊಂಡಾಡುತ್ತ ಆತನಲ್ಲಿ ತನಗಿರುವ ಪ್ರೇಮಾತಿಶಯವನ್ನು ತಿಳಿಸಿದುದು. ಆಮೇಲೆ ಎಲ್ಲರೂ ಗೋದಾವರಿಯಲ್ಲಿ ಸ್ನಾನಮಾಡಿದುದು.

ಮಹಾತ್ಮನಾದ ರಾಮನು ಆ ಆಶ್ರಮದಲ್ಲಿ ಸುಖವಾಗಿ ವಾಸಮಾಡುತ್ತಿದ್ದಾಗಲೇ ಶರದೃತುವು ಕಳೆದು, ಕಾಮುಕರ ಮನಸ್ಸಿಗಿಂಪಾದ ಹೇಮಂತ ಋತುವು ತಲೆದೋರಿತು. ಆಗ ಒಂದಾನೊಂದು ದಿನದ ಬೆಳಗಿನ ಸಮಯದಲ್ಲಿ, ರಾಮನು ಸ್ನಾನಕ್ಕಾಗಿ ರಮಣೀಯವಾದ ಗೋದಾವರೀನದಿಗೆ ಹೋದನು. ವೀರ್ಯವಂತನಾದ ಲಕ್ಷ್ಮಣನೂ ಆತನ ಹಿಂದೆ ಅತಿ ವಿನಯದಿಂದ ಕೈಯಲ್ಲಿ ಕಲಶವನ್ನು ಹಿಡಿದುಕೊಂಡು ಹೊರಟನು. ಸೀತೆಯೂ ಇವರನ್ನು ಹಿಂಬಾಲಿಸಿ ಬರುತಿದ್ದಳು. ಆಗ ಲಕ್ಷ್ಮಣನು ಅಣ್ಣನನ್ನು ಕುರಿತು, "ಅಣ್ಣಾ ! ಯಾವಾಗಲೂ

---

ನೀನೇ ನನಗೆ ತಂದೆಯಂತೆ ಸರ್ವಾಭೀಷ್ಟಗಳನ್ನೂ ಈಡೇರಿಸಿಕೊಡುತ್ತಿರುವುದರಿಂದ, ಈಗಲೂ ನಾನು ತಂದೆ ಇಲ್ಲದವನಾಗಲಿಲ್ಲವೆಂದು ಭಾವವು.

ನಿನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿದ್ದ ಹೇಮಂತಋತುವು ಪ್ರಾಪ್ತವಾಯಿತು. ಈ ಋತುವು ಸಂವತ್ಸರಕ್ಕೇ ಒಂದು ಅಲಂಕಾರವನ್ನುಂಟುಮಾಡುತ್ತಿರುವುದು. ಈಗ ಮಂಜಿನಿಂದ ಜನಗಳ ದೇಹವು ಬಿರಿದು, ಸ್ವಾಭಾವಿಕವಾದ ಮೃದುತ್ವವನ್ನು ಬಿಟ್ಟಿರುವುದು. ಭೂಭಾಗವೆಲ್ಲವೂ ಪೈರುಗಳಿಂದ ಮನೋಹರವಾಗಿರುವುದು. ಬೆಂಕಿಯನ್ನು ಕಾಯಿಸುವುದರಲ್ಲಿ ಎಲ್ಲರಿಗೂ ಪ್ರೀತಿಯು ಹೆಚ್ಚು. ಹೊಸದಾದ [1]ಅಗ್ರ್ರಯಣವೆಂಬ ಯಜ್ಞಕಾರ್ಯದಿಂದ ಪಿತೃದೇವತೆಗಳನ್ನು ಪೂಜಿಸಿ, ಯುಕ್ತಕಾಲದಲ್ಲಿ ಆ ಕರ್ಮವನ್ನು ನೆರವೇರಿಸಿ, ಸತ್ಪುರುಷರೆಲ್ಲರೂ ಈಗ ತಮ್ಮ ಪಾಪಗಳನ್ನು ನೀಗುವರು. ಈಗ ಜನರಿಗೆ ಮಿತಿಮಾರಿದ ಕಾಮೋದ್ರೇಕವು ಹುಟ್ಟುವುದು. ಈಗ ಹಸುವಿನ ಹಾಲು ಸಮೃದ್ಧವಾಗಿ ಸಿಕ್ಕುವುದು. ಜಯಾಪೇಕ್ಷೆಯುಳ್ಳ ರಾಜರು ಈ ಕಾಲದಲ್ಲಿಯೇ ಜೈತ್ರಯಾತ್ರೆಗಾಗಿ ಹೊರಟು ಸುತ್ತುತ್ತಿರುವರು. ಸೂರ್ಯನು ದಕ್ಷಿಣದಿಕ್ಕಿನಲ್ಲಿ ವಿಶೇಷಪ್ರೀತಿಯುಳ್ಳವನಾಗಿ, ಯಮದಿಶೆಯೆಂಬ ಆ ಸ್ತ್ರೀಯನ್ನೇ ಬಲವಾಗಿ ಆಶ್ರಯಿಸಿರುವುದರಿಂದ, ಅದನ್ನು ನೋಡಿ ಕುಬೇರದಿಕ್ಕೆಂಬ ಆಕೆಯ ಸವತಿಯು, ಅಸೂಯೆಗೊಂಡು ದುಃಖದಿಂದ ತನ್ನ ಮುಖದಲ್ಲಿರುವ ತಿಲಕವನ್ನು ಅಳಿಸಿಬಿಟ್ಟಿರುವಂತೆ, ಉತ್ತರದಿಕ್ಕಿಗೆ ಪ್ರಕಾಶವೇ ಕಾಣುವುದಿಲ್ಲವು. ಸ್ವಾಭಾವಿಕವಾಗಿಯೇ ಹಿಮದಿಂದ ತುಂಬಿರುವ ಹಿಮಾಲಯಪರ್ವತವು, ಈಗ ಸೂರ್ಯನು ತನ್ನನ್ನು ಬಿಟ್ಟು ದೂರಕ್ಕೆ ಹೊರಟುಹೋಗಿರುವುದರಿಂದ, ಮತ್ತಷ್ಟು ಮಂಜಿನಿಂದ ತುಂಬಿ, ಹಿಮವಂತನೆಂಬ ತನ್ನ ಹೆಸರನ್ನು ಯಥಾರ್ಥವಾಗಿ ಮಾಡುತ್ತಿರುವುದು. ಈ ದಿನಗಳಲ್ಲಿ ನಡುಹಗಲಿನಲ್ಲಿಯೂ ಕೂಡ ಹೊರಗಿನ ಸಂಚಾರವು ಮೈಗೆ ಹಿತವನ್ನುಂಟುಮಾಡುತ್ತಿರುವುದು. ಸೂರ್ಯನ ಬಿಸಿಲು ಎಲ್ಲರಿಗೂ ಆತ್ಯಾದರಣೀಯವಾಗಿರುವುದು ಮರದ ನೆಳಲಾಗಲಿ, ನೀರಾಗಲಿ ಈಗ ಯಾರಿಗೂ ರುಚಿಸದು. ಸೂರ್ಯನೂ ಕೂಡ ಈಗ ಮೃದುಸ್ವಭಾವವನ್ನು ಹೊಂದಿರುವನು. ಎಲ್ಲೆಲ್ಲಿ ನೋಡಿದರೂ ಮಂಜು ಸುರಿಯುತ್ತಿರುವುದು. ಚಳಿಯು ಹೆಚ್ಚಾಗಿರುವುದು. ಗಾಳಿಯೂ ಹೆಚ್ಚಾಗಿ ಬೀಸುತ್ತಿರುವುದು. ಕಾಡಿನಲ್ಲಿರುವವರು ಈ ಕಾಲದ ಚಳಿಯನ್ನು ತಡೆಯಲಾರದೆ, ತಮ್ಮ ತಮ್ಮ

1. ಆಗ್ರ್ರಯಣವೆಂದರೆ ಹೊಸಧಾನ್ಯವನ್ನು ಭುಜಿಸುವುದಕ್ಕೆ ಮೊದಲು ನಡೆಸಲ್ಪಡುವ ಒಂದು ಹವಿರ್ಯಜ್ಞವು.

ಗುಡಿಸಲುಗಳನ್ನು ಬಿಟ್ಟು ಹೊರಕ್ಕೆ ಬಾರದುದರಿಂದ, ಕಾಡೆಲ್ಲವೂ ಹಾಳು ಬಿದ್ದಂತೆ ಕಾಣುವುದು. ಇಲ್ಲಿನ ವನವಾಸಿಗಳೆಲ್ಲರೂ [1]ಈ ಚಳಿಯ ಬಾಧೆಯಿಂದ ಯಾವ ಕಾರ್ಯಕ್ಕೂ ಉತ್ಸಾಹವಿಲ್ಲದೆ, ದೇಹವೆಲ್ಲವನ್ನೂ ಉಡುಗಿಸಿಕೊಂಡು ಚಟುವಟಿಕೆಯಿಲ್ಲದಿರುವರು. [2]ನಿರಾವರಣ ಪ್ರದೇಶದಲ್ಲಿ ಈಗ ಯಾರೊಬ್ಬರೂ ಮಲಗಲಾರರು. ಈಗ ಪುಷ್ಯಮಾಸವು ಸಮೀಪಿಸಿರುವುದು. ಈ ತಿಂಗಳಲ್ಲಿ ಪುಷ್ಯನಕ್ಷತ್ರದಿಂದ ಕೂಡುವ ಹುಣ್ಣಿಮೆಯು ಬಹುಪ್ರಶಸ್ತವಾದ ದಿನವೆನಿಸುವುದು. ಆದುದರಿಂದ ಈ ಮಾಸದ ರಾತ್ರಿ ಪರಿಮಾಣವನ್ನು ಈ ನಕ್ಷತ್ರದಿಂದಲೇ ಕಂಡುಹಿಡಿಯಬಹುದು. ಈಗಿನ ರಾತ್ರಿಯು ಮಂಜಿನಿಂದ ಮುಚ್ಚಿ ಕಾಂತಿಹೀನವಾಗಿರುವುದು. ಗಾಳಿಯು ಅತಿ ಶೀತಲವಾಗಿ ಬೀಸುವುದು. ರಾತ್ರಿ ಕಾಲವು ಅತಿದೀರ್ಘವಾಗಿರುವಂತೆ ತೋರುವುದು. [3]ಚಂದ್ರನಿಗಿರುವ ಆಹ್ಲಾದಕತ್ವವೂ, ಸೌಂದರ್ಯವೂ, ಈಗ ಸೂರ್ಯನಿಗೆ ಹೋಗಿ ಸೇರಿರುವುವು. ಚಂದ್ರನ ಸ್ಥಿತಿಯು ಈಗ ಬಹಳವಾಗಿ ಕಂದಿರುವುದು. ಚಂದ್ರಬಿಂಬವು ಮಂಜಿನಿಂದ ಮುಚ್ಚಿ, ಕೆಂಬಣ್ಣಕ್ಕೆ ತಿರುಗಿರುವುದರಿಂದ, ಅದರ ಅಂದವೇ ಮಾಸಿಹೋಗಿರುವುದು. ಉಸಿರಾಡಿಸಿದ ಕನ್ನಡಿಯಂತೆ ಚಂದ್ರಬಿಂಬವು ಮಲಿನವಾಗಿ, ತನ್ನ ಸ್ವಾಭಾವಿಕವಾದ ಪ್ರಕಾಶವನ್ನು ಬಿಟ್ಟಿರುವುದು. ಎಡೆಬಿಡದೆ ಮಂಜು ಬೀಳುತ್ತಿರುವುದರಿಂದ [4]ಹುಣ್ಣಿಮೆಯಲ್ಲಿಯೂ ಕೂಡ ಚಂದ್ರಿಕೆಯೊಡಗೂಡಿದ

---

1. ಇದರಿಂದ ರಾಕ್ಷಸರಿಂದುಂಟಾಗತಕ್ಕ ಬಾಧೆಯು ಸೂಚಿತವಾಗುವುದು.

2. ಇಲ್ಲಿ "ನಿವೃತ್ತಾಕಾಶಶಯನಾಃ ಪುಷ್ಯನೀತಾ ಹಿಮಾರುಣಾಃ । ಶೀತಾ ವೃದ್ಧತರಾಯಾಮಾಸ್ತ್ರಿಯಾಮಾ ಯಾಂತಿ ಸಾಂಪ್ರತಂ ॥" ಎಂದು ಮೂಲವು. ಇಲ್ಲಿ "ನಿವೃತ್ತಾಕಾಶಶಯನಾಃ" ಎಂದುದರಿಂದ ಸ್ವರ್ಗಲೋಕದವರಿಗೆ ಸಂಭವಿಸುವ ಮಹೋಪದ್ರವವೂ "ವೃದ್ಧತರಾ ಯಾಮಾಸ್ತ್ರಿಯಾಮಾಃ" ಎಂದುದರಿಂದ ತಾಮಸರಾದ ರಾಕ್ಷಸರ ವೃದ್ಧಿಯೂ ಅಹಃ ಪರಿಣಾಮವು ಕಡಿಮೆಯೆಂಬುದರಿಂದ ಸಜ್ಜನಕ್ಷಯವೂ, "ಪುಷ್ಯನೀತಾಃ" ಎಂಬಲ್ಲಿ ಪುಷ್ಯಶಬ್ದವು ಕಲಿವಾಚಕವಾದುದರಿಂದ ಕಲಿಪ್ರಾಚುರ್ಯವೂ ಸೂಚಿತವು.

3. ಇಲ್ಲಿ ರಾವಣನು ಸರ್ವಸ್ವವನ್ನೂ ಅಪಹರಿಸಲು ಮಲಿನಾಕೃತಿಯನ್ನು ಹೊಂದಿದ ಇಂದ್ರನ ದುರವಸ್ಥೆಯು ಸೂಚಿಸಲ್ಪಡುವುದು.

4. ಇಲ್ಲಿ "ಹುಣ್ಣಿಮೆಯಲ್ಲಿಯೂ ಚಂದ್ರಿಕಾವಿಶಿಷ್ಟವಾದ ರಾತ್ರಿಯು ಶೋಭಿಸುವುದಿಲ್ಲ"ವೆಂದು ಹೇಳಿದುದರಿಂದ ಮುಂದೆ ಸೀತೆಗೆ ರಾವಣನಿಂದುಂಟಾಗತಕ್ಕ ದುರವಸ್ಥೆಯು

ರಾತ್ರಿಯು ಮನಸ್ಸಿಗಿಂಪನ್ನು ಕೊಡದೆ, ತನ್ನ ಪ್ರಕಾಶವನ್ನು ಬಿಟ್ಟಿರುವುದು. ಇದನ್ನು ನೋಡಿದರೆ ಕಾಡಿನಲ್ಲಿ ಬಿಸಿಲಿನಿಂದ ಬಳಲಿ ಬಣ್ಣಗುಂದಿದ ನಮ್ಮ ಸೀತೆಯಂತೆ ಕಾಣುತ್ತಿರುವುದು. ಆದರೂ ಆಕೆಯಂತೆ ತನ್ನ ಸ್ವಾಭಾವಿಕವಾದ ಚೆಲುವಿಕೆಯನ್ನು ಬಿಟ್ಟಿಲ್ಲ. [1]ಪಶ್ಚಿಮ ದಿಕ್ಕಿನ ಗಾಳಿಯು ಸಹಜವಾಗಿಯೇ ತಣ್ಣಗಿರುವುದು. ಇದರ ಮೇಲೆ ಈಗ ಮಂಜು ಬೀಳುತ್ತಿರುವುದರಿಂದ, ಮತ್ತಷ್ಟು ಶೀತಲವಾಗಿ ಬೀಸುವುದು. ಈ [2]ಕಾಡುಗಳೆಲ್ಲವೂ ಮಂಜಿನಿಂದ ಮುಚ್ಚಿಹೋಗಿರುವುವು. ಜವೆಗೋಧಿಯ ಪೈರುಗಳು ಸುತ್ತಲೂ ಬೆಳೆದಿರುವುವು. ಸೂರ್ಯನು ಉದಿಸುತ್ತಿರುವುದನ್ನು ನೋಡಿ ಕ್ರೌಂಚಗಳೂ, ಸಾರಸಪಕ್ಷಿಗಳೂ ಅಲ್ಲಲ್ಲಿ ಕೂಗುತ್ತಿರುವುವು. [3]ಬಂಗಾರದ ಬಣ್ಣದಿಂದ ಪ್ರಕಾಶಿಸುತ್ತಿರುವ ಈ

---

ಸೂಚಿತವಾಗುವುದು. ಈ ರಾತ್ರಿಗಿಂತಲೂ ಸೀತೆಯಲ್ಲಿ ಶೋಭಾತಿಶಯವನ್ನು ಹೇಳಿರುವುದರಿಂದ, ಸೀತೆಗುಂಟಾಗುವ ರಾವಣಾಭಿಭವವೇ ದೇವಸ್ತ್ರೀಯ ಸೆರೆಯನ್ನು ಬಿಡಿಸುವುದಕ್ಕೆ ಕಾರಣವಾಗುವುದೆಂಬ ಅತಿಶಯವೂ ವ್ಯಂಜಿತವಾಗುವುದು.

1. ಇಲ್ಲಿ ಪಶ್ಚಿಮದ ಗಾಳಿಯನ್ನು ಹೇಳಿರುವುದರಿಂದ ರಾಮನ ಸ್ವಭಾವವು ಸೂಚಿತವಾಗುವುದು. ರಾಮನು ಸ್ವಾಭಾವಿಕವಾಗಿಯೇ ಕರುಣಾಶೀತಲನಾಗಿರುವನು. ಇದರ ಮೇಲೆ ಈತನ ಅವತಾರಕಾಲದಲ್ಲಿ ದೇವತೆಗಳ ಪ್ರಾರ್ಥನೆಯಿಂದ ಆ ಕೃಪೆಯು ಮತ್ತಷ್ಟು ಶೀತಲವಾಯಿತು. ಈತನು ಋಷ್ಯಾಶ್ರಮಕ್ಕೆ ಬಂದಮೇಲೆ ಅದೇ ಕೃಪೆಯು ಇಮ್ಮಡಿಯಾಗಿರುವುದೆಂದು ಸೂಚಿಸುವುದಕ್ಕಾಗಿ ಇಲ್ಲಿ "ಪ್ರಕೃತ್ಯಾ ಶೀತಲಸ್ಪರ್ಶೋ ಹಿಮವಿದ್ಧಶ್ಚ ಸಾಂಪ್ರತಂ। ಪ್ರವಾತಿ ಪಶ್ಚಿಮೋ ವಾಯುಃ ಕಾಲೇ ದ್ವಿಗುಣಶೀತಲಃ ॥" ಎಂಬುದಾಗಿ ಸ್ವಭಾವಶೀತಲವಾದ ಪಶ್ಚಿಮವಾಯುವಿಗೆ ಹಿಮಸಂಬಂಧದಿಂದುಂಟಾದ ಶೈತ್ಯವೂ ಪ್ರಾತಃಕಾಲದಲ್ಲಿ ಇನ್ನೂ ದ್ವಿಗುಣವಾಗಿ ತೋರುವ ದೃಶ್ಯವೂ ವರ್ಣಿಸಲ್ಪಟ್ಟಿರುವುದು.

2. ಇಲ್ಲಿ ಸೂರ್ಯೋದಯವನ್ನು ಹೇಳಿರುವುದರಿಂದ ಋಷ್ಯಾಶ್ರಮಕ್ಕೆ ರಾಮಾಗಮನವೂ, ಯವಾದಿಸಮೃದ್ಧಿಯಿಂದ ಋಷಿಗಳ ತಪಸ್ಸಮೃದ್ಧಿಯೂ, ಕ್ರೌಂಚ ಧ್ವನಿಗಳಿಂದ ಅಲ್ಲಿನ ವೇದಘೋಷಗಳೂ ಸೂಚಿಸಲ್ಪಡುವುವು. ರಾಮನು ಆಶ್ರಮಕ್ಕೆ ಬಂದೊಡನೆಯೇ ಋಷಿಗಳು ನಿರ್ಭಯರಾಗಿ ನಡೆಸಿದ ತಪಸ್ಸಮೃದ್ಧಿಯೂ ಅವರ ವೇದಘೋಷಗಳೂ ಇದರಿಂದ ವ್ಯಂಜಿತವಾಗುವುವು.

3. ಇದರಿಂದ ಬಹಳ ವೃದ್ಧರಾದ ಮಹರ್ಷಿಗಳೂ ಕೂಡ ಹೊಂಬಣ್ಣ ಜಟಾಭಾರದಿಂದ ಕೂಡಿದ ತಮ್ಮ ತಲೆಗಳನ್ನು ತಗ್ಗಿಸಿ ರಾಮನಿಗೆ ನಮಸ್ಕರಿಸಿದರೆಂಬ ಭಾವವು ಸೂಚಿತವು.

ಬತ್ತದ ಪೈರುಗಳು, ಖರ್ಜೂರದ ಹೂವಿನಂತಿರುವ ತೆನೆಗಳಿಂದ ಕೂಡಿ, ಧಾನ್ಯದ ಭಾರಕ್ಕೆ ಸ್ವಲ್ಪ ಬಗ್ಗಿರುವುದನ್ನು ನೋಡು! [1]ಸೂರ್ಯನು ಉದಿಸಿ ಬಹು ದೂರಕ್ಕೆ ಬಂದಿದ್ದರೂ ಮಂಜು ಮುಚ್ಚಿದ ಕಿರಣವುಳ್ಳವನಾದುದರಿಂದ ಈಗ ಚಂದ್ರನಂತೆಯೇ ಕಾಣುತ್ತಿರುವನು. ಈಗ ಪ್ರಾತಃಕಾಲದ ಬಿಸಿಲಿನಲ್ಲಿ ಸ್ವಲ್ಪವಾದರೂ ಉಷ್ಣತೆಯೇ ಕಾಣುವುದಿಲ್ಲ. ಹೊತ್ತೇರಿದಹಾಗೆಲ್ಲಾ ಈಗಿನ ಬಿಸಿಲು ಮೈಗೆ ಹಿತವಾಗುತ್ತಾ ಬರುವುದು. ಎಳಗೆಂಪಿನಿಂದ ಕೂಡಿ ಬಿಳುಪಾಗಿ ಕಾಣುವ ಎಳೆಯ ಬಿಸಿಲು, ನೆಲದಮೇಲೆ ಬಿದ್ದು ಎಷ್ಟು ಮನೋಹರವಾಗಿ ಕಾಣುತ್ತಿರುವುದು ನೋಡು! ಹಸುರಾದ ಈ ಗರಿಕೆಯಮೇಲೆ [2]ಇಬ್ಬನಿಯು ಬಿದ್ದು ಅಲ್ಲಲ್ಲಿ ನೀರುಹನಿಗಳು ಕುಳಿತಿರುವುದರಿಂದ, ಅವುಗಳಲ್ಲಿ ಪ್ರತಿಫಲಿತ ವಾಗುವ ಎಳೆಯ ಬಿಸಿಲಿನ ಕಾಂತಿಯು ಹೊಳೆಯುತ್ತಿರುವುದನ್ನೂ ನೋಡು! [3]ಎಷ್ಟೋ ದಾಹಪಟ್ಟು ಬಂದ ಈ ಆನೆಯು ಹಿಮದಿಂದ ಬಹಳ ಶೀತಲವಾದ ನೀರಿಗೆ ಸುಂಡಿಲನ್ನು ನೀಡಿ, ಅದನ್ನು ಮುಟ್ಟಿದ ಮಾತ್ರದಿಂದಲೇ ದಾಹವಡಗಿ, ಚಳಿಗೆ ತಡೆಯಲಾರದೆ ಸುಂಡಿಲನ್ನು ಹಿಂದಕ್ಕೆಳೆದುಕೊಳ್ಳುತ್ತಿರುವುದು ನೋಡು. ಇದೋ! [4]ಇಲ್ಲಿ ಜಲಚರಪಕ್ಷಿಗಳೂ ಕೂಡ ಚಳಿಗೆ ಹೆದರಿ ನೀರಿಗಿಳಿಯಲಾರದೆ

---

1. ಇಲ್ಲಿ "ಸೂರ್ಯನು ಉದಿಸಿ ಬಹಳ ಮೇಲಕ್ಕೆ ಬಂದಿದ್ದರೂ ಮಂಜಿನಿಂದ ಪ್ರತಿಹತವಾದ ಕಿರಣವುಳ್ಳವನಾಗಿ ಚಂದ್ರನಂತೆ ಮೃದುವಾಗಿರುವನು" ಎಂಬುದರಿಂದ ರಾಮನು ಅಯೋಧ್ಯೆಯನ್ನು ಬಿಟ್ಟುಬಂದು ಬಹುಕಾಲವಾಗಿದ್ದರೂ, ತನ್ನನ್ನು ಸುತ್ತಿ ಬರುವ ರಾಕ್ಷಸರನ್ನಿದಿರಿಸದೆ ಮೃದುತ್ವವನ್ನು ವಹಿಸಿರುವನೆಂಬ ಭಾವವು ಸೂಚಿತವು. ಇದರಿಂದ ಲಕ್ಷ್ಮಣನು ರಾಮನನ್ನು ಕುರಿತು "ಇನ್ನೂ ನಿನಗೆ ಈ ಮೃದುಸ್ವಭಾವವೇಕೆ"ಂದು ಎಚ್ಚರಿಸಿದುದಾಗಿಯೂ ಗ್ರಾಹ್ಯವು.

2. ಇಲ್ಲಿ ಹಿಮಕಿರಣದಿಂದ ಕೂಡಿದ ಹಸುರು ಹುಲ್ಲನ್ನು ಹೇಳಿರುವುದರಿಂದ ರಾಕ್ಷಸರ ಭಂಗದಿಂದುಂಟಾದ ಋಷಿಗಳ ರೋದನವೂ, ಎಳೆಯ ಬಿಸಿಲನ್ನು ಹೇಳಿರುವುದರಿಂದ ಅವರಲ್ಲಿ ರಾಮನ ಕೃಪಾಪ್ರವೃತ್ತಿಯೂ ಸೂಚಿತವು.

3. ಇದರಿಂದ ಇಂದ್ರನು ರಾಜ್ಯಭೋಗಾಭಿಲಾಷೆಯಿದ್ದರೂ, ರಾಕ್ಷಸಬಾಧೆಗೆ ಭಯ ಪಟ್ಟು, ಅದನ್ನನುಭವಿಸುವುದಕ್ಕೆ ಹಿಂಜರಿಯುತ್ತಿರುವನೆಂದು ಭಾವವು.

4. ಇಲ್ಲಿ ಪಕ್ಷಿಗಳೆಂಬುದರಿಂದ ಋಷಿಗಳೆಂದು ಗ್ರಾಹ್ಯವು. ಪಕ್ಷಿಗಳು ನೀರಿನ ಸಮೀಪ ದಲ್ಲಿದ್ದರೂ, ಅದರಲ್ಲಿ ಪ್ರವೇಶಿಸಲಾರದೆ, ಭಯದಿಂದ ಹಿಂಜರಿಯುವಂತೆ ಮುನಿಗಳು ತಮ್ಮಾಶ್ರಮದಲ್ಲಿರುವಾಗಲೂ, ತಮ್ಮ ಸಮಾಧಿಗಳನ್ನು ಕ್ರಮವಾಗಿ ನಡೆಸುವುದಕ್ಕೆ ಬೆದರು ತ್ತಿರುವರೆಂದು ಅವರ ಸಮಾಧಿಭಂಗವು ಸೂಚಿತವಾಗುವುದು.

ಕೊಳದ ಸುತ್ತಲೂ ಅಲ್ಲಲ್ಲಿ ಕುಳಿತಿರುವುದನ್ನು ನೋಡು. ಇವು ಯುದ್ಧಭೂಮಿಯನ್ನು ನೋಡಿ ಹೆದರಿ ದೂರದಲ್ಲಿ ನಿಂತಿರುವ ಹೇಡಿಗಳಂತೆ ಕಾಣುತ್ತಿರುವುವು. [1]ಹಿಮದಿಂದಲೂ ಮಂಜಿನಿಂದಲೂ ಕತ್ತಲೆ ಕವಿದಂತಿರುವ ಈ ಮರದ ಸಾಲುಗಳಲ್ಲಿ, ಹೂಗಳೂ ಉದುರಿಹೋಗಿರುವುದರಿಂದ, ಈ ವನವು ನಿಶ್ಚಲವಾಗಿ, ಮೇಲೆ ದುಪಟೆಯನ್ನು ಹೊದೆದುಕೊಂಡು, ಕಣ್ಣು ಮುಚ್ಚಿ ನಿದ್ರಿಸುವಂತಿದೆ. [2]ಈ ನದಿಯಮೇಲೆ ಮಂಜು ಮುಚ್ಚಿಕೊಂಡಿರುವುದರಿಂದ ಅದರ ನೀರೇ ಕಣ್ಣಿಗೆ ಕಾಣುವುದಿಲ್ಲ. ಇದರಲ್ಲಿರುವ ಸಾರಸ ಪಕ್ಷಿಗಳನ್ನು ಅವುಗಳ ಕೂಗಿನಿಂದಲೇ ತಿಳಿಯಬೇಕಾಗಿದೆ. ನದೀ ತೀರದ ಈ ಮಳಲುದಿಣ್ಣೆಗಳೆಲ್ಲವೂ ಇಬ್ಬನಿಯಿಂದ ಚೆನ್ನಾಗಿ ನೆನೆದುಹೋಗಿವೆ. [3]ಈ ಕಾಲದಲ್ಲಿ ಎಡೆಬಿಡದೆ ಮಂಜು ಸುರಿಯು

---

1. ಹಿಮದಿಂದ ಬಿಗಿಯಲ್ಪಟ್ಟಿತೆಂಬುದರಿಂದ ನಿಶ್ಚಲವಾದಂತೆಯೂ, ಮಂಜಿನಿಂದ ಮುಚ್ಚಲ್ಪಟ್ಟಿತೆಂಬುದರಿಂದ ದುಪ್ಪಟಿಯನ್ನು ಹೊದೆದಂತೆಯೂ, ಪುಷ್ಪವಿಲ್ಲದಿರುವುದೆಂಬುದರಿಂದ ಕಣ್ಣುಮುಚ್ಚಿದಂತೆಯೂ ಕಾಣುತ್ತ, ನಿದ್ರಿಸುವಂತಿರುವುದೆಂದು ಭಾವವು. (ಗೋವಿಂದರಾಜೀಯವು)

ಮಲಗಿದವರಿಗೆ ಬಾಹ್ಯಾಭ್ಯಂತರಗಳೆಂಬ ಎರಡು ಬಗೆಯ ತಮಸ್ಸುಗಳೂ ಆವರಿಸಿರುವುವು. ನಿದ್ರೆಯೆಂಬುದೇ ಆಭ್ಯಂತರ (ಒಳಗಿನ) ತಮಸ್ಸೆನಿಸುವುದು. ರಾತ್ರ್ಯಂಧಕಾರವೇ ಹೊರಗಿನ ತಮಸ್ಸೆನಿಸುವುದು. ಹೀಗೆ ಎರಡು ಬಗೆಯ ತಮಸ್ಸುಗಳಿಂದ ಆವೃತರಾಗಿ ಮಲಗಿರುವ ಮನುಷ್ಯರಂತೆ ವನಸಮೂಹಗಳೂ ಕೂಡ ತಮೋಮಯಗಳಿನ ಹಿಮಜಲವೆಂಬ ತಮಸ್ಸಿನಿಂದ ಉಡುಗಿ ಚಿಗುರುಗಳುಳ್ಳವಾಗಿಯೂ, ಮೇಲೆಮುಸುಕಿದ ಮಂಜೆಂಬ ತಮಸ್ಸಿನಿಂದ ಆವರಿಸಲ್ಪಟ್ಟುವಾಗಿಯೂ ಇರುವುವೆಂದು ಭಾವವು. (ಮಹೇಶ್ವರತೀರ್ಥವ್ಯಾಖ್ಯಾನವು) ಇದರಿಂದ ವನವಾಸಿಗಳ ದೈನ್ಯಾವಸ್ಥೆಯು ಸೂಚಿತವು.

2. ಇಲ್ಲಿ "ಬಾಷ್ಪಸಂಛನ್ನಸಲಿಲಾ ರುತವಿಜ್ಞೇಯಸಾರಸಾಃ । ಸರಿತೋ ಭಾಂತಿ ಸಾಂಪ್ರತಂ ॥" ಎಂದು ಮೂಲವು. ಇಲ್ಲಿ ನದಿಗಳೆಂದರೆ ಋಷಿಗಳೆಂದು ಗ್ರಾಹ್ಯವು. ಬಾಷ್ಪಶಬ್ದದಿಂದ ರಾಕ್ಷಸಬಾಧೆಗಾಗಿ ಅವರು ಬಿಡುತ್ತಿದ್ದ ಕಣ್ಣೀರಿನ ಹನಿಯು ಸೂಚಿತವಾಗುವುದು. ಹೀಗೆ ವನವಾಸಿಗಳು ರಾಕ್ಷಸಭಯದಿಂದ ದುಃಖಾಕ್ರಾಂತರಾಗಿ ನಿಟ್ಟುಸಿರುಬಿಡುತ್ತ, ಹೊರಕ್ಕೆ ಬಾರದೆ ಅವಿತುಕೊಂಡಿರುವರೆಂದೂ ಸೂಚಿತವು.

3 ಇಲ್ಲಿಯೂ ಹಿಮಪತನವೆಂಬುದರಿಂದ ಋಷಿಗಳಿಗುಂಟಾಗುತ್ತಿರುವ ರಾಕ್ಷಸಬಾಧೆಯೂ, ಸೂರ್ಯನ ಮೃದುತ್ವದಿಂದ ರಾಮನು ಪ್ರಯತ್ನವಿಲ್ಲದಿರುವನೆಂಬುದೂ ಸೂಚಿತವು. "ಇಲ್ಲಿ ಅಗ್ರ್ಯಾಗ್ರಸ್ಥಮಪಿ" "ಅಗ್ರ್ಯಸ್ಥಧನುಷಿ" ಎಂಬ ಪಾಠಾಂತರಗಳುಂಟು. "ಅಗ್ರ್ಯಾಗ್ರಸ್ಥಮಪಿ" ಎಂಬ ಪಾಠದಲ್ಲಿ ಬಹಳ ಆಳಕ್ಕಿಳಿದಿರುವ ನೀರೂ ಕೂಡ ರುಚಿಕರವಾಗಿಯೇ ಇರುವುದೆಂದು ಅರ್ಥ ಭೇದವು.

ತ್ತಿರುವುದರಿಂದಲೂ ಬಿಸಿಲು ಚೆನ್ನಾಗಿ ಕಾಯುವುದರಿಂದಲೂ, ಈ ಬೆಟ್ಟದ ಮೇಲಿಂದ ಹರಿದುಬರುವ ನದಿಯ ನೀರಿನಲ್ಲಿ ಮಿರಿಮೀರಿದ ಶೈತ್ಯವುಂಟಾಗಿ, ವಿಷದಂತೆ ಕುಡಿಯುವುದಕ್ಕೆ ಅಸಾಧ್ಯವಾಗಿರುವುದು. ಈ ಸರೋವರಗಳನ್ನು ನೋಡು ! ಹಿಮದ ಬಾಧೆಯಿಂದ ಬಹಳವಾಗಿ ಕಳಿತುಹೋಗಿರುವ ಈ ತಾವರೆ ಹೂಗಳಲ್ಲಿ ಒಳಗಿನ ದಿಂಡೂ, ಕೇಸರಗಳೂ ಉದಿರಿಹೋಗಿ, ಇವುಗಳಲ್ಲಿ ಕೆಳಗಿನ ದಂಟುಮಾತ್ರವೇ ಉಳಿದಿರುವುದರಿಂದ, ಅದರ ಸ್ವಾಭಾವಿಕವಾದ ಅಂದವೇ ಕೆಟ್ಟುಹೋಗಿರುವುದು. ಅಣ್ಣಾ ! ಹೇಗಿದ್ದರೂ ಇದು ಭೋಗಿಗಳಿಗೆ ವಿಶೇಷ ಭೋಗಾರ್ಹವಾದ ಕಾಲವು. ಈ ಭೋಗಕಾಲದಲ್ಲಿಯೂ ಕೂಡ ಧರ್ಮಾರ್ಥ ನಾಗಿಯೂ, ಪುರುಷತಿಲಕನಾಗಿಯೂ ಇರುವ ನಮ್ಮಣ್ಣನಾದ ಭರತನು, ನಿನ್ನ ವಿರಹ ದುಃಖದಿಂದ ಪೀಡಿತನಾಗಿ, ನಿನ್ನಲ್ಲಿ ಭಕ್ತಿಯಿಂದ ಅಯೋಧ್ಯೆಯಲ್ಲಿ ತಪಸ್ಸುಮಾಡುತ್ತಿರುವನು. ಅಯ್ಯೋ ! ಆತನ ಶೋಚನೀಯಾವಸ್ಥೆಯನ್ನು ನಾನೇನೆಂದು ಹೇಳಲಿ ! ಕೈಗೆ ಬಂದ ರಾಜ್ಯವನ್ನೂ ಬಿಟ್ಟನು ತಾನು ರಾಜನೆಂಬ ಹೆಮ್ಮೆಯನ್ನೂ ಬಿಟ್ಟನು. ತಾನು ಅನುಭವಿಸಬಹುದಾದ ರಾಜಭೋಗಗಳನ್ನೂ ಬಿಟ್ಟನು. ಈಗ ಮುನಿವೇಷದಿಂದ ಜಟಾವಲ್ಕಲಗಳನ್ನು ಧರಿಸಿ, ಫಲಮೂಲಗಳನ್ನು ತಿನ್ನುತ್ತ, ಶೀತಲವಾದ ಬರೀ ನೆಲದಮೇಲೆ ಮಲಗುತ್ತಿರುವನಲ್ಲಾ ! ಆತನು ಪ್ರತಿದಿನವೂ ಇಷ್ಟು ಹೊತ್ತಿಗೆ ಸರಿಯಾಗಿ ಪ್ರಜೆಗಳೊಡನೆ ಕೂಡಿ ಸ್ನಾನಾರ್ಥವಾಗಿ ಸರಯೂ ನದಿಗೆ ಹೋಗುತ್ತಿರ ಬಹುದು ! [1]ಆತನಾದರೋ ಬಾಲ್ಯದಿಂದಲೂ ಬಹಳ ಮೋಹದಿಂದ ಸುಖವಾಗಿ

---

1. ಇಲ್ಲಿ "ಅತ್ಯಂತ ಸುಖಸಂವೃದ್ಧಃ ಸುಕುಮಾರಸ್ಸುಖೋಚಿತಃ । ಕಥಂ ನ್ವಪರ ರಾತ್ರೇಷು ಸರಯೂಮವಗಾಹತೇ ॥" ಎಂದು ಮೂಲವು. ಇದರ ವಿಶೇಷಾರ್ಥವೇನೆಂದರೆ (ಅತ್ಯಂತಸುಖಸಂವೃದ್ಧಃ) ರಾಜನಿಂದ ಸುಖಸಂವೃದ್ಧನಾದ ಭರತನು ನಿನ್ನ ಉಪಲಾಲನೆ ಯಿಂದ ಇನ್ನೂ ವಿಶೇಷವಾಗಿ ಸುಖಸಂವೃದ್ಧನೆಂದು ಭಾವವು (ಸುಖೋಚಿತಃ) ನಿನ್ನ ಸಹವಾಸ ಸುಖಕ್ಕರ್ಹನೇ ಹೊರತು ನಿನ್ನ ವಿಯೋಗದುಃಖಕ್ಕರ್ಹನಲ್ಲ. ಇಂತಹ ಭರತನು (ಕಥಂನು) ಹೇಗೆ ತಾನೆ ಇಲ್ಲಿ ಲಕ್ಷ್ಮಣನು ತನ್ನಂತೆಯೇ ಭರತನನ್ನೂ ಭಾವಿಸಿ, ಈ ಮಾತನ್ನು ಹೇಳುವುದಾಗಿ ಗ್ರಹಿಸಬೇಕು. ತನಗೆ ರಾಮನ ಸಾನ್ನಿಧ್ಯವಿರುವುದರಿಂದ ಹಿಮಗಾಲದ ಬಾಧೆಯು ತೋರಬಹುದು. ಭರತನಿಗಾದರೋ ರಾಮವಿಯೋಗದಿಂದ ಮನಸ್ಸಿಗೆ ನೆಮ್ಮದಿ ಯಿಲ್ಲ. "ಉಪತಪ್ತೋದಕಾ ನದ್ಯಃ" ಎಂಬಂತೆ ರಾಮನ ವಿರಹಾಗ್ನಿಯಿಂದ ನದಿಗಳೂ ಕಾದುಹೋಗಿರುವುವು. ಮೊದಲೇ ರಾಮನ ವಿಯೋಗದಿಂದ ತಪ್ತನಾದ ಭರತನಿಗೆ ವಿರಹ

ಬೆಳೆಸಲ್ಪಟ್ಟವನು. ಬಹಳ ಕೋಮಲವಾದ ಮೈಯುಳ್ಳವನಾದುದರಿಂದ ಮುಂದಕ್ಕೂ ಸೌಖ್ಯದಿಂದಲೇ ಬಳೆಯುವುದಕ್ಕರ್ಹನಾದವನು! ಆಹಾ! ಇಂತಹ ರಾಜಕುಮಾರನು, ಹೇಗೆ ಅರ್ಧರಾತ್ರಿಯಲ್ಲೆದ್ದು ಬಂದು, ಈ ಚಳಿಗಾಲದಲ್ಲಿ ಹೇಗೆ ಸರಯೂನದಿಯಲ್ಲಿ ಮುಳುಗುವನೋ! ಇದಲ್ಲದೆ ಆತನ ಅವಯವಸನ್ನಿವೇಶಗಳಲ್ಲಿಯಾಗಲಿ, ಆತನ ಸ್ವಭಾವದಲ್ಲಿಯಾಗಲಿ, ಯಾವುದೊಂದು ನ್ಯೂನತೆಯೂ ಇಲ್ಲದೆ, ಮಹಾಪುರುಷಲಕ್ಷಣಗಳೆಲ್ಲವೂ ಸಂಪೂರ್ಣವಾಗಿ ತುಂಬಿರುವುವು. ತಾವರೆಯೆಸಳಿನಂತೆ ಅಂದವಾದ ಕಣ್ಣುಳ್ಳವನು. ಮಹಾವೀರನು. ಶ್ಯಾಮವರ್ಣದಿಂದ ಕೂಡಿದ ಮೈಯುಳ್ಳವನು. ಸಿಂಹಕ್ಕಿರುವಂತೆ ಅಂದವಾದ ಸಣ್ಣ ನಡುವುಳ್ಳವನು. ಸಮಸ್ತ ಜನರಿಗೂ ಮೇಲೆನಿಸಿಕೊಂಡಿರುವವನು. ಆತನಿಗೆ ತಿಳಿಯದ ಧರ್ಮಗಳಿಲ್ಲ. ಎಂದಿಗೂ ಸತ್ಯವನ್ನು ತಪ್ಪುವವನಲ್ಲ. ಅಕೃತ್ಯಗಳಿಗೆ ನಾಚತಕ್ಕವನು. ಜಿತೇಂದ್ರಿಯನೆನಿಸಿಕೊಂಡಿರುವನು. ಯಾರೊಡನೆಯೂ ಪ್ರಿಯವನ್ನೇ ನುಡಿಯತಕ್ಕವನು. ಆತನ ಆಕೃತಿಯನ್ನು ನೋಡುವಾಗಲೇ ಮನಸ್ಸಿಗೆ ಒಂದು ವಿಧವಾದ ಹರ್ಷವುಂಟಾಗುವುದು. ಉದ್ದವಾದ ತೋಳುಗಳುಳ್ಳವನು. ಯಾವ ಶತ್ರುಗಳನ್ನಾದರೂ ಜಯಿಸತಕ್ಕ ಅದ್ಭುತ ಸಾಮರ್ಥ್ಯವುಳ್ಳವನು ಹೀಗಿದ್ದರೂ ಭರತನು ಸಮಸ್ತ ಭೋಗಗಳನ್ನೂ ತೊರೆದು, ತ್ರಿಕರಣಶುದ್ಧಿಯಿಂದ ನಿನ್ನನ್ನನುವರ್ತಿಸುತ್ತಿರುವನಲ್ಲವೆ? ಅಣ್ಣಾ! ಹೆಚ್ಚಾಗಿ ಹೇಳಿದುದರಿಂದೇನು? [1]ಮಹಾತ್ಮನಾದ ಆ ನಿನ್ನ ತಮ್ಮನು,

---

ತಪ್ತವಾದ ಸರಯೂನದಿಯಲ್ಲಿ ಸ್ನಾನಮಾಡುವಾಗ ಶೈತ್ಯಪ್ರಸಕ್ತಿಯೇ ಇರದು. ಹೀಗಿದ್ದರೂ ಅದನ್ನು ಪರ್ಯಾಲೋಚಿಸದೆ ಲಕ್ಷ್ಮಣನು, ಭರತನ ಸ್ಥಿತಿಯನ್ನೂ ತನ್ನ ಸ್ಥಿತಿಯಂತೆಯೇ ಭಾವಿಸಿ ಹೀಗೆ ಹೇಳಿದುದಾಗಿ ಗ್ರಾಹ್ಯವು. (ಅಪರರಾತ್ರೇಷು) ನವವೈಧವ್ಯವುಳ್ಳ ಸ್ತ್ರೀಯರು ಇತರರಿಗೆ ಮುಖವನ್ನು ತೋರಿಸಲಾರದೆ ಮನುಷ್ಯಸಂಚಾರಕ್ಕೆ ಮೊದಲೇ ನದೀಸ್ನಾನಾರ್ಥವಾಗಿ ಹೋಗಿಬರುವಂತೆ, ತಾನು ಕೈಕೇಯಿಯ ಮಗನಾದುದಕ್ಕೆ ನಾಚಿ, ಜನರಿಗೆ ಮುಖವನ್ನು ತೋರಿಸಲಾರದೆ, ಅರ್ಧರಾತ್ರಿಯಲ್ಲಿಯೇ ಸ್ನಾನಮಾಡಿ ಬರುವನೆಂದು ಭಾವವು. (ಸರಯೂಮವಗಾಹತೇ) ತನಗಿರುವ ದುಃಖಾತಿಶಯದಿಂದ, ಬಹಳ ವೇಗವಾಗಿ ಪ್ರವಹಿಸುವ ಸರಯೂ ನದಿಯಲ್ಲಿಯೂ ಕೂಡ ನಿರ್ಭಯವಾಗಿ ಮುಳುಗುವನೆಂದರ್ಥವು.

1. ಇಲ್ಲಿ "ಜಿತಸ್ಸ್ವರ್ಗಸ್ತವ ಭ್ರಾತ್ರಾ" ಎಂದು ಮೂಲವು. ನಿನ್ನ ತಮ್ಮನಾದ ಭರತನು ಸ್ವರ್ಗವನ್ನೂ ತಿರಸ್ಕರಿಸಿಬಿಟ್ಟಿರುವನೆಂದು ಇಲ್ಲಿನ ಅರ್ಥಾಂತರವು. ದುಃಖಾತಿಶಯದಿಂದ ದೇಹವಿಯೋಗವನ್ನು ಹೊಂದಿ ಅದರಿಂದ ಸ್ವರ್ಗವನ್ನು ಸೇರಬಹುದಾಗಿದ್ದರೂ,

ನೀನು ಕಾಡಿನಲ್ಲಿ ತಾಪಸವೃತ್ತಿಯಿಂದಿರುವುದನ್ನು ನೋಡಿ, ನಿನ್ನಂತೆಯೇ ತಾನೂ ಮುನಿವೇಷವನ್ನು ಧರಿಸಿ, ನಿನ್ನನ್ನನುಸರಿಸುತ್ತಿರುವುದರಿಂದ, ಆತನಿಗೆ ಸ್ವರ್ಗವು ಕೈಸೇರಿಬಿಟ್ಟಿರುವುದೆಂಬುದರಲ್ಲಿ ಸ್ವಲ್ಪವೂ ಸಂದೇಹವೇ ಇಲ್ಲ. ಲೋಕದಲ್ಲಿ ಮಕ್ಕಳಿಗೆ ತಾಯಿಯ ಸ್ವಭಾವವು ಬರುವುದೇ ಹೊರತು ತಂದೆಯ ಸ್ವಭಾವವು ಬರುವುದಿಲ್ಲವೆಂಬ ಲೋಕಪ್ರವಾದವುಂಟು. ಭರತನಾದರೋ ತಾಯಿಯ ಸ್ವಭಾವವನ್ನು ಬಿಟ್ಟು ತನ್ನ ತಂದೆಯ ಗುಣವನ್ನೇ ಅನುಸರಿಸುತ್ತಿರುವುದರಿಂದ, ಇವನೊಬ್ಬನು ಮಾತ್ರವೇ ಆ ಪ್ರವಾದವನ್ನು ಸುಳ್ಳುಮಾಡಿರುವನು. ಆಹಾ! 1ಯಾವಳಿಗೆ ಅಂತಹ ದಶರಥರಾಜನೇ ಪತಿಯಾಗಿದ್ದನೋ, ಯಾವಳಿಗೆ ಸತ್ಪುರುಷನಾದ ಭರತನೇ ಮಗನಾಗಿರುವನೋ, ಅಂತಹ ಕೈಕೇಯಿಗೂ ಈ ಕ್ರೂರಸ್ವಭಾವವು ಹೇಗುಂಟಾಯಿತು?" ಎಂದನು. ಧಾರ್ಮಿಕನಾದ ಲಕ್ಷ್ಮಣನು ರಾಮನಲ್ಲಿ ಸ್ನೇಹದಿಂದ ಈ ಮಾತುಗಳನ್ನಾಡುತ್ತಿರಲು, ಆತನು ಹೇಳುತ್ತಿರುವ ಕೈಕೇಯಿಯ ನಿಂದಾವಾಕ್ಯಗಳನ್ನು ಕೇಳಿ ಸಹಿಸಲಾರದೆ ರಾಮನು ಲಕ್ಷ್ಮಣನನ್ನು ನೋಡಿ, "ಎಲೆ ವತ್ಸನೆ! ನಮ್ಮ ಮಧ್ಯಮ ಮಾತೆಯಾದ ಕೈಕೇಯಿಯನ್ನು ನಿಂದಿಸುವುದು ನಿನಗೆ ಎಷ್ಟುಮಾತ್ರವೂ ಉಚಿತವಲ್ಲ. ನೀನು ಇದುವರೆಗೆ ಹೇಳುತ್ತಿದ್ದಂತೆ ಆ ಭರತನ ಗುಣಗಳನ್ನೇ ಕೊಂಡಾಡುತ್ತಿರಬಾರದೆ? ಅದನ್ನು ಬಿಟ್ಟು ಕೈಕೇಯಿಯ ವಿಷಯವನ್ನು ಎತ್ತಿದುದೇಕೆ? ದೃಢವಾದ ವ್ರತವನ್ನು

---

ಅದು ನಿನ್ನ ದರ್ಶನಕ್ಕೆ ಪ್ರತಿಬಂಧಕವೆಂಬುದಕ್ಕಾಗಿ ಅದನ್ನೂ ತಿರಸ್ಕರಿಸಿ, ನಿನಗಾಗಿಯೇ ಬಲಾತ್ಕಾರದಿಂದ ಪ್ರಾಣವನ್ನು ಹಿಡಿದುಕೊಂಡಿರುವನೆಂದರ್ಥವು. ಹೀಗೆ "ರಾಕ್ಷಸವಧಾರ್ಥವಾಗಿ ಮಾಡಿದ ನಿನ್ನ ಪ್ರತಿಜ್ಞೆಯನ್ನು ತೀರಿಸಿಕೊಳ್ಳದೆ ಆಲಸ್ಯವನ್ನು ಮಾಡಿದೆ. ಭರತನು ಅನುಭವಿಸುತ್ತಿರುವ ಕ್ಲೇಶವನ್ನಾದರೂ ನೋಡಿ ಅಲ್ಲಿಗೆ ತ್ವರೆಯಿಂದ ಹೋಗಬೇಕಲ್ಲವೆ! ಅಲ್ಲಿ ಇನ್ನು ಕೆಲಸವೇನು?" ಎಂದು ಸೂಚಿಸಿ ಲಕ್ಷ್ಮಣನು ಇನ್ನುಮೇಲೆ ಸರ್ವಾನರ್ಥಮೂಲಭೂತೆಯಾದ ಕೈಕೇಯಿಯನ್ನು ನಿಂದಿಸುವನು.

1. ಬೆಳಗಿನಜಾವದಲ್ಲಿ ಸೀತಾರಾಮರಿಬ್ಬರೂ ಸ್ನಾನಾರ್ಥವಾಗಿ ನಡೆದು ಬರುತ್ತಿರುವ ಕಷ್ಟವನ್ನು ನೋಡಿ ಲಕ್ಷ್ಮಣನು ದುಃಖಿತನಾಗಿ ಕೈಕೇಯಿಯನ್ನು ನಿಂದಿಸತೊಡಗಿದನು. ಆಕಸ್ಮಾತ್ತಾಗಿ ಅವಳನ್ನು ನಿಂದಿಸಿದರೆ ರಾಮನಿಗೆ ಕೋಪವುಂಟಾಗಬಹುದೆಂದು ಹೆದರಿ, ಅದಕ್ಕೆ ಪೀಠಿಕಾರೂಪವಾಗಿ ಮೊದಲು ಹೇಮಂತಋತುವಿನ ಸ್ವಭಾವವನ್ನು ಪ್ರಸ್ತಾಪಿಸಿ, ಆ ಪ್ರಸಂಗದಿಂದ ಭರತನ ಗುಣಗಳನ್ನು ಕೊಂಡಾಡಿ, ಕೊನೆಗೆ ಅನರ್ಥಗಳಿಗೆಲ್ಲಾ ಮೂಲಭೂತೆಯಾದ ಕೈಕೇಯಿಯನ್ನು ನಿಂದಿಸುವುದಾಗಿ ಊಹಿಸಬೇಕು.

ಹಿಡಿದ ನಾನು, ವನವಾಸಮಾಡಬೇಕೆಂದೇ ನಿಶ್ಚಯಿಸಿ ಇತ್ತಲಾಗಿ ಹೊರಟು ಬಂದಿದ್ದರೂ ಆ ಭರತನಲ್ಲಿರುವ ಸ್ನೇಹದಿಂದ ಆತನನ್ನು ಮನಸ್ಸಿನಲ್ಲಿ ಸ್ಮರಿಸಿ ಕೊಂಡಹಾಗೆಲ್ಲಾ ನನ್ನ ಮನಸ್ಸಿಗೂ ಸ್ಥೈರ್ಯವು ತಪ್ಪಿ ಚಂಚಲವಾಗುತ್ತಿರು ವುದು. ಭರತನ ಮಾತುಗಳು ಈಗಲೂ ನನ್ನ ಮನಸ್ಸಿನಲ್ಲಿ ನಾಟಿಕೊಂಡಿರುವುವು. ಅತಿ ಪ್ರಿಯವಾಗಿಯೂ, ಸ್ವಲ್ಪವೂ ಕಾಠಿನ್ಯವಿಲ್ಲದೆಯೂ, ಕಿವಿಗಿಂಪಾಗಿಯೂ ಇರುವ ಆತನ ಮಾತುಗಳು ಎಂದೆಂದಿಗೂ ನನ್ನ ಎದೆಯನ್ನು ಬಿಟ್ಟುಹೋಗುವ ಹಾಗಿಲ್ಲ. ಅಮೃತದಂತೆ ಮನಸ್ಸನ್ನು ಆಹ್ಲಾದಪಡಿಸತಕ್ಕ ಆತನ ಮೃದು ವಾಕ್ಯಗಳು ನನ್ನ ಮನಸ್ಸನ್ನು ಚೆನ್ನಾಗಿ ಕಲಕಿಬಿಟ್ಟಿರುವುವು. ಎಲೆ ವತ್ಸನೆ! [1]ಮಹಾತ್ಮನಾದ ಭರತನೊಡನೆಯೂ, ವೀರನಾದ ಶತ್ರುಘ್ನನೊಡನೆಯೂ, ರಘುವಂಶಕ್ಕೆ ಆನಂದವರ್ಧಕನಾದ ನಿನ್ನೊಡನೆಯೂ ಈ ಸೀತೆಯೊಡನೆಯೂ ಸೇರಿ ನಾನು ಯಾವಾಗ ಒಂದಾಗಿ ಕಲೆತಿರುವೆನೋ!" ಎಂದನು. ಹೀಗೆ ರಾಮನು ಪ್ರಲಾಪಿಸುತ್ತ, ಗೋದಾವರೀ ನದಿಗೆ ಹೋಗಿ, ಅಲ್ಲಿ ಸೀತಾಲಕ್ಷ್ಮಣ ರೊಡಗೂಡಿ ಸ್ನಾನಮಾಡಿ, ಅಲ್ಲಿ ಪಿತೃಗಳಿಗೂ, ದೇವತೆಗಳಿಗೂ ಜಲತರ್ಪಣ ವನ್ನು ಬಿಟ್ಟು, ಸೂರ್ಯೋಪಸ್ಥಾನವನ್ನು ಮಾಡಿ, ಸಂಧ್ಯಾದಿ ದೇವತೆಗಳನ್ನೂ ಉಪಾಸನೆಮಾಡಿದನು. ಹೀಗೆ ರಾಮನು ಸ್ನಾನಮಾಡಿ ಸೀತಾಲಕ್ಷ್ಮಣರೊಡ ಗೂಡಿರುವಾಗ, ಪಾರ್ವತಿಯೊಡನೆಯೂ, ನಂದಿಯೊಡನೆಯೂ ಸೇರಿರುವ ಪೂಜ್ಯನಾದ ಶಿವನಂತೆಯೇ ಪ್ರಕಾಶಿಸುತ್ತಿದ್ದನು.

ಇಲ್ಲಿಗೆ ಹದಿನಾರನೆಯ ಸರ್ಗವು.

---

1. ಇಲ್ಲಿ "ಕದಾನ್ವಹಂ ಸಮೇಷ್ಯಾಮಿ ಭರತೇನ ಮಹಾತ್ಮನಾ । ಶತ್ರುಘ್ನೇನ ಚ ವೀರೇಣ ತ್ವಯಾ ಚ ರಘುನಂದನ" ಎಂದು ಮೂಲವು. ರಾಮನು ಈಗ ತನಗೆ ಭರತ ಸಾನ್ನಿಧ್ಯವಿಲ್ಲದಿರುವುದರಿಂದ, ಸೀತಾಲಕ್ಷ್ಮಣರು ಸಮೀಪದಲ್ಲಿದ್ದರೂ ತಾನು ಏಕಾಕಿಯಾಗಿ ರುವಂತೆಯೇ ಭಾವಿಸಿ ಈ ವಾಕ್ಯವನ್ನು ಹೇಳುವನು. ಇದರಿಂದ ರಾಮನಿಗೆ ಭರತನಲ್ಲಿರುವ ಸ್ನೇಹಾತಿಶಯವು ಸೂಚಿತವಾಗುವುದು. ಇಲ್ಲಿನ 'ಚ' ಕಾರದಿಂದಲೇ ಸೀತೆಯನ್ನೂ ಹೇಳಿದುದಾಗಿ ಗ್ರಾಹ್ಯವು.

*

ಶ್ರೀರಾಮನು ಹಿಂತಿರುಗಿ ಆಶ್ರಮಕ್ಕೆ ಬಂದು ಅಲ್ಲಿ ಸುಖವಾಗಿದ್ದುದು. ಅಲ್ಲಿಗೆ ಶೂರ್ಪಣಖಾಗಮನವು. ಅವಳೊಡನೆ ಪರಸ್ಪರ ಸಲ್ಲಾಪವು. ಶೂರ್ಪಣಖಿಯು ತನ್ನನ್ನು ಪತ್ನಿಯನ್ನಾಗಿ ಕೈಕೊಳ್ಳಬೇಕೆಂದು ರಾಮನನ್ನು ಪ್ರಾರ್ಥಿಸುವುದು.

ರಾಮನು ಸ್ನಾನಮಾಡಿದಮೇಲೆ ಸೀತಾಲಕ್ಷ್ಮಣರೊಡನೆ ಆ ಗೋದಾವರೀ ನದಿಯಿಂದ ಹಿಂದಿರುಗಿ ತನ್ನ ತಪೋವನಕ್ಕೆ ಬಂದನು. ಅಲ್ಲಿ ರಾಮಲಕ್ಷ್ಮಣರಿಬ್ಬರೂ ಬ್ರಹ್ಮಯಜ್ಞವೇ ಮೊದಲಾದ ಪೂರ್ವಾಹ್ಣ ಕರ್ಮಗಳನ್ನು ಮುಗಿಸಿಕೊಂಡು, ಪರ್ಣಶಾಲೆಗೆ ಹೋಗಿ, ಅಲ್ಲಿ ಮಹರ್ಷಿಗಳಿಂದ ಪೂಜಿತರಾಗಿ ಸುಖವಾಗಿ ಕುಳಿತುಕೊಂಡು ಬೇರೆಬೇರೆ ಕಥೆಗಳನ್ನಾಡುತ್ತಿದ್ದರು. ರಾಮನು ಅಲ್ಲಿ ಸೀತೆಯೊಡನೆ ಕುಳಿತಿರುವಾಗ, ಚಿತ್ರಾನಕ್ಷತ್ರದೊಡನೆ ಕೂಡಿದ ಚಂದ್ರನಂತೆಯೇ ಪ್ರಕಾಶಿಸುತ್ತಿದ್ದನು. ಹೀಗೆ ಅವರೆಲ್ಲರೂ ಬೇರೆಬೇರೆ ಕಥೆಗಳಿಂದ ವಿನೋದಿಸುತ್ತ, ಪರ್ಣಶಾಲೆಯಲ್ಲಿ ಕುಳಿತಿರುವ ಕಾಲಕ್ಕೆ ಸರಿಯಾಗಿ ರಾಕ್ಷಸಿಯೊಬ್ಬಳು ಆಕಸ್ಮಿಕವಾಗಿ ಆ ಪ್ರದೇಶಕ್ಕೆ ಬಂದಳು. ಅವಳಿಗೆ ಶೂರ್ಪಣಖಿಯೆಂದು ಹೆಸರು. ಅವಳು ರಾವಣನಿಗೆ ಒಡಹುಟ್ಟಿದ ತಂಗಿಯು. ಅವಳು ನೆಟ್ಟನೆ ರಾಮನಿದ್ದ ಸ್ಥಳಕ್ಕೆ ಬಂದು ದೇವಸಮಾನನಾಗಿ ಪ್ರಕಾಶಿಸುತ್ತಿರುವ ಆತನನ್ನು ನೋಡಿದಳು. ಸಿಂಹದಂತೆ ವಿಸ್ತಾರವಾದ ಎದೆಯುಳ್ಳವನಾಗಿಯೂ, ಮಹಾಬಾಹುವಾಗಿಯೂ, ಕಮಲದಳದಂತೆ ಕಣ್ಣುಳ್ಳವನಾಗಿಯೂ, ಮೊಣಕಾಲಿನವರೆಗೆ ನೀಡಿದ ತೋಳುಗಳುಳ್ಳವನಾಗಿಯೂ, ಮಹಾತೇಜಸ್ವಿಯಾಗಿಯೂ, ಪ್ರಿಯದರ್ಶನನಾಗಿಯೂ, ಆನೆಯಂತೆ ಗಂಭೀರವಾದ ನಡಿಗೆಯುಳ್ಳವನಾಗಿಯೂ, ಜಡೆಗಳನ್ನು ಧರಿಸಿದವನಾಗಿಯೂ, ಮಹಾಬಲಾಢ್ಯನಾಗಿದ್ದರೂ ಅತಿ ಕೋಮಲವಾದ ಅಂಗಸೌಷ್ಠವವುಳ್ಳವನಾಗಿಯೂ ಇರುವ ರಾಮನನ್ನು ನಟ್ಟದೃಷ್ಟಿಯಿಂದ ನೋಡಿದಳು. ಆತನಲ್ಲಿ ಸಮಸ್ತ ರಾಜಲಕ್ಷಣಗಳೂ ಕಾಣುತ್ತಿದ್ದುವು. ಶ್ಯಾಮವರ್ಣವಾದ ದೇಹಕಾಂತಿಯಿಂದ ಕೂಡಿದ ಆತನು ಮನ್ಮಥನಂತೆಯೇ ತೋರುತ್ತಿದ್ದನು. ಹೀಗೆ ದೇವೇಂದ್ರನಂತೆ ಪ್ರಕಾಶಿಸುತ್ತಿರುವ ಆ ರಾಮನನ್ನು ನೋಡಿದೊಡನೆಯೇ ಆ ರಾಕ್ಷಸಿಯ ಮನಸ್ಸಿನಲ್ಲಿ ಕಾಮವಿಕಾರವು ಅಂಕುರಿಸಿತು. ಪ್ರಸನ್ನವಾದ ಮುದ್ದುಮೊಗವುಳ್ಳ ಆ ರಾಮನೆಲ್ಲಿ! ವಿಕಾರವಾದ ಮೂರ್ತಿಯುಳ್ಳ ಈ ರಾಕ್ಷಸಿ ಎಲ್ಲಿ! ರಾಮನಾದರೋ ದುಂಡಾದ ನಡುವುಳ್ಳವನು. ಇವಳಾದರೋ ಗುಡಾಣದಂತೆ ದೊಡ್ಡ ಹೊಟ್ಟೆಯುಳ್ಳವಳು. ಆತನ ವಿಸ್ತಾರವಾದ ಕಣ್ಣುಗಳೂ,

ನುಣುಪಾದ ತಲೆಗೂದಲೂ ನೋಡುವಾಗಲೇ ಮೋಹವನ್ನು ಹುಟ್ಟಿಸುವಂತಿರುವುವು. ಗುಳಿಬಿದ್ದು ವಿಕಾರವಾಗಿರುವ ಈಕೆಯ ಕಣ್ಣುಗಳೂ, ಇವಳ ಕೆಂಪಾದ ತಲೆಗೂದಲುಗಳೂ ನೋಡುವಾಗಲೇ ಅಸಹ್ಯವಾಗಿ ಕಾಣುವುವು. ಆತನು ಮೇಘದಂತೆ ಗಂಭೀರವಾದ ಕಂಠಸ್ವರವುಳ್ಳವನು, ಅವಳಾದರೋ ಮಹಾ ಭಯಂಕರವಾದ ಕಂಠಧ್ವನಿಯುಳ್ಳವಳು. ರಾಮನು ಯಾವಾಗಲೂ ಋಜುವಾದ ಮಾತುಗಳನ್ನಾಡುವನು. ಇವಳೋ ಕೇವಲ ವಕ್ರವಾಕ್ಯವುಳ್ಳವಳು. ರಾಮನು ಯಾವಾಗಲೂ ಸದಾಚಾರಸಂಪನ್ನನಾದವನು. ಈ ರಾಕ್ಷಸಿಯಾದರೋ ದುರಾಚಾರಶೀಲೆಯು. ರಾಮನು ಎಲ್ಲರಿಗೂ ಪ್ರಿಯದರ್ಶನವುಳ್ಳವನು. ಆಕೆಯುನ್ನು ನೋಡುವಾಗಲೇ ಅಸಹ್ಯವು ಹುಟ್ಟುವುದು. ರಾಮನು ಇನ್ನೂ ನವಯೌವನವುಳ್ಳವನು. ಈ ರಾಕ್ಷಸಿಯಾದರೋ ಹಣ್ಣುಹಣ್ಣು ಮುದುಕಿಯಾಗಿರುವಳು. ಹೀಗೆ ರೂಪಲಾವಣ್ಯಾದಿಗಳಿಂದ ಶೋಭಿಸುತ್ತಿದ್ದ ರಾಮನನ್ನು ನೋಡಿ ಅತಿವಿಕಾರಸ್ವರೂಪವುಳ್ಳ ಆ ಶೂರ್ಪಣಖೆಯು ಕಾಮಪೀಡಿತೆಯಾಗಿ, ರಾಮನನ್ನು ಮಾತಾಡಿಸತೊಡಗಿದಳು. “ಎಲೈ ! ಇದೇನು ? ತಾಪಸರೂಪದಿಂದ ಜಟಾಧಾರಿಯಾಗಿರುವ ನಿನಗೆ ಪಕ್ಕದಲ್ಲಿ ಈ ಹೆಂಡತಿಯೇನು ? ಕ್ಷತ್ರಿಯನಂತೆ ಕೈಯಲ್ಲಿ ಈ ಬಿಲ್ಲುಬಾಣಗಳೇನು ? ರಾಕ್ಷಸಪ್ರಚುರವಾದ ಈ ಪ್ರದೇಶಕ್ಕೆ ನೀನು ಹೇಗೆ ಬಂದೆ ? ನೀನು ಇಲ್ಲಿಗೆ ಬಂದುದಕ್ಕೆ ನಿಜವಾದ ಕಾರಣವನ್ನು ಯಥಾಸ್ಥಿತವಾಗಿ ತಿಳಿಸು” ಎಂದಳು. ಇದನ್ನು ಕೇಳಿ ರಾಮನು ಬಹಳ ಋಜುಸ್ವಭಾವವುಳ್ಳವನಾದುದರಿಂದ ತನ್ನ ವೃತ್ತಾಂತವನ್ನು ಯಥಾಸ್ಥಿತವಾಗಿ ತಿಳಿಸಲಾರಂಭಿಸಿದನು. ರಾಮನ ಬಾಯಿಂದ ಸುಳ್ಳೆಂಬುದು ಯಾವಾಗಲೂ ಹೊರಟುದಿಲ್ಲ. ಇದರಮೇಲೆ ಅತಿಶಾಂತವಾದ ಆ ಋಷ್ಯಾಶ್ರಮದಲ್ಲಿದ್ದುಕೊಂಡಿರುವನು. ತಾಪಸಧರ್ಮವನ್ನೂ ಅನುಸರಿಸಿರುವನು. ಇಂತಹ ಸ್ಥಿತಿಯಲ್ಲಿರುವಾಗ, ಅದರಲ್ಲಿಯೂ ಒಬ್ಬ ಸ್ತ್ರೀಯ ಮುಂದೆ ಸುಳ್ಳಾಡಬೇಕೆಂದರೆ ಎಷ್ಟುಮಾತ್ರಕ್ಕಾದರೂ ಆತನ ಮನಸ್ಸು ಪ್ರವರ್ತಿಸುವುದೆ ? ಎಂದಿಗೂ ಪ್ರವರ್ತಿಸದು. ನಿಷ್ಕಪಟಸ್ವಭಾವವುಳ್ಳ ರಾಮನು ರಾಕ್ಷಸಿಯನ್ನು ಕುರಿತು “ಎಲೈ ! ದೇವತೆಗಳಂತೆ ಪರಾಕ್ರಮಿಯೆನಿಸಿಕೊಂಡಿದ್ದ ದಶರಥನೆಂಬ ರಾಜನೊಬ್ಬನಿದ್ದನು. ನಾನು ಆತನ ಹಿರಿಯ ಮಗನು. ಜನರು ನನ್ನನ್ನು ರಾಮನೆಂದು ಕರೆಯುವರು. ಇದೋ ನನ್ನ ತಮ್ಮನು. ಇವನಿಗೆ ಲಕ್ಷ್ಮಣನೆಂದು

ಹೆಸರು. ಇವನು ಯಾವಾಗಲೂ ನನ್ನನ್ನು ಅಗಲದೆ ನಿಯಮದಿಂದ ಅನುವರ್ತಿಸುತ್ತಿರುವನು. ನನ್ನ ತಾಯಿಯಾದ ಕೈಕೇಯಿಯ ಪ್ರೇರಣೆಯ ಮೇಲೆ ತಂದೆಯು ನನಗೆ ಕಾಡಿನಲ್ಲಿರಬೇಕೆಂದು ನಿಯಮಿಸಿರುವನು. ಪಿತೃವಾಕ್ಯ ಪರಿಪಾಲನವೆಂಬ ಆ ಧರ್ಮವನ್ನು ನಡೆಸಬೇಕೆಂಬುದಕ್ಕಾಗಿಯೇ ನಾನು ಈ ಕಾಡಿಗೆ ಬಂದೆನು. ಇದೋ! ಇವಳೇ ನನ್ನ ಹೆಂಡತಿಯು. ಇವಳು ವಿದೇಹ ರಾಜನ ಮಗಳು. ಇವಳಿಗೆ ಸೀತೆಯೆಂದು ಹೆಸರು. ನಾನು ತಪೋರೂಪವಾದ ಧರ್ಮವನ್ನು ಸಂಪಾದಿಸುವುದಕ್ಕಾಗಿಯೂ ಈ ಕಾಡಿನಲ್ಲಿರಬೇಕೆಂದು ಬಂದಿರುವೆನು. ಇನ್ನು ನಿನ್ನ ವೃತ್ತಾಂತವನ್ನು ತಿಳಿಯಬೇಕೆಂದು ನನಗೆ ಕುತೂಹಲವುಂಟಾಗಿರುವುದು. ನೀನೆಲ್ಲಿಯವಳು? ನಿನ್ನ ತಂದೆತಾಯಿಗಳಾರು? ಇಷ್ಟು [1]ಅಂದವಾದ ಅವಯವಗಳುಳ್ಳ ನೀನು ರಾಕ್ಷಸಿಯೆಂದು ನನಗೆ ತೋರಲಿಲ್ಲ. ನೀನು ಇಲ್ಲಿಗೆ ಬಂದುದೇಕೆ? ನಿಜವಾಗಿ ಹೇಳು" ಎಂದನು. ಅದಕ್ಕಾ ರಾಕ್ಷಸಿಯು ಪ್ರತ್ಯುತ್ತರವನ್ನು ಹೇಳತೊಡಗಿ ಮನಸ್ಸಿನಲ್ಲಿ ಕಾಮಪರವಶಳಾಗಿ "ಎಲೈ ರಾಮನೆ! ನಾನು ಯಥಾರ್ಥವಾಗಿಯೂ ನನ್ನ ವಿಷಯವನ್ನು ತಿಳಿಸುವೆನು ಕೇಳು. ನಾನು ಶೂರ್ಪಣಖಿಯೆಂಬ ರಾಕ್ಷಸಿಯು. ನಾನು ಇಷ್ಟಬಂದ ರೂಪವನ್ನು ಹೊಂದಬಲ್ಲೆನು. ನನ್ನ ಹೆಸರನ್ನು ಕೇಳಿದಮಾತ್ರಕ್ಕೆ ಎಲ್ಲರೂ ಭಯಪಡುವರು. ನಾನು ಒಂಟಿಯಾಗಿ ಈ ಕಾಡೆಲ್ಲವನ್ನೂ ಸುತ್ತುತ್ತಿರುವೆನು. ವಿಶ್ರವಸ್ಸಿಗೆ ಮಗನಾಗಿ ಹುಟ್ಟಿ, ಮಹಾವೀರನೆನಿಸಿಕೊಂಡು, ರಾಕ್ಷಸರೆಲ್ಲರಿಗೂ ಚಕ್ರವರ್ತಿಯಾದ ರಾವಣನೆಂಬವನನ್ನು ನೀನೂ ಕೇಳಿರಬಹುದು. ಆತನು ನನ್ನ ಒಡಹುಟ್ಟಿದವನು. ಯಾವಾಗಲೂ ನಿದ್ರೆಮಾಡುವ ಸ್ವಭಾವವುಳ್ಳ ಬಲಾಢ್ಯನಾದ ಕುಂಭಕರ್ಣನೆಂಬುವನೂ ನನಗೆ ಸಹೋದರನು. ಧರ್ಮಾತ್ಮನಾದ ವಿಭೀಷಣನೆಂಬವನೂ ನನ್ನ ಒಡಹುಟ್ಟಿದವನು. ಆತನಲ್ಲಿ ಮಾತ್ರ ರಾಕ್ಷಸವ್ಯಾಪಾರವಿಲ್ಲವು. ಇದಲ್ಲದೆ ಯುದ್ಧದಲ್ಲಿ ಮಹಾಪರಾಕ್ರಮಿಗಳೆಂದು ಪ್ರಖ್ಯಾತಿಹೊಂದಿದ ಖರದೂಷಣರೆಂಬ ಅಣ್ಣತಮ್ಮಂದಿರಿಬ್ಬರಿರುವರು. ಅವರೂ

---

1. ಇಲ್ಲಿ ಶೂರ್ಪಣಖೆಯು ಕಾಮರೂಪಿಣಿಯಾದುದರಿಂದ ರಾಮನನ್ನು ಮರುಳುಗೊಳಿಸುವುದಕ್ಕಾಗಿ ಸುಂದರಾಕಾರವನ್ನು ತಾಳಿ ಬಂದಿರುವಳು. ಅವಳ ವಾಸ್ತವ ರೂಪವನ್ನು ತಿಳಿಸುವುದಕ್ಕಾಗಿಯೇ ಕವಿಯು ಮೊದಲು ಅವಳನ್ನು ಹಾಗೆ ವಿಕಾರವೇಷದಿಂದ ವರ್ಣಿಸಿದುದಾಗಿ ಗ್ರಾಹ್ಯವು.

ನನಗೆ ಸಹೋದರರು. ಹೀಗಿದ್ದರೂ ನನ್ನನ್ನು ವರಿಸುವ ವಿಷಯದಲ್ಲಿ ಅವರಿಗಾಗಿ ನೀನು ಅಂಜಬೇಕಾದುದಿಲ್ಲ. ನಾನು ಅವರೆಲ್ಲರನ್ನೂ ಮೀರಿ ನನ್ನ ಇಷ್ಟ ಬಂದಂತೆ ನಡೆದುಕೊಳ್ಳುತ್ತಿರುವೆನು. ಆದುದರಿಂದ ನನ್ನನ್ನು ಅವರು ಯಾರೂ ತಡೆಯುವಹಾಗಿಲ್ಲ. ನಾನಾಗಿಯೇ ಅವರೆಲ್ಲರನ್ನೂ ಬಿಟ್ಟು, ಅಪೂರ್ವದರ್ಶನವುಳ್ಳವನಾಗಿಯೂ, ಪುರುಷಶ್ರೇಷ್ಠನಾಗಿಯೂ ಇರುವ ನಿನ್ನನ್ನು ಮನಃಪೂರ್ವಕವಾಗಿ ವರಿಸಬೇಕೆಂದು ಇಲ್ಲಿಗೆ ಬಂದಿರುವೆನು. ಆದರೆ ನೀನು ಈ ಸೀತೆಯೆಂಬ ಪತ್ನಿಯೊಬ್ಬಳನ್ನು ಕಟ್ಟಿಕೊಂಡಿರುವುದಕ್ಕಾಗಿ ನನ್ನನ್ನು ವರಿಸುವ ವಿಷಯದಲ್ಲಿ ಶಂಕಿಸಬಹುದು. ಇವಳಿಂದ ನಿನಗೆ ಪ್ರಯೋಜನವೇನು ? ನನ್ನ ಪ್ರಭಾವವಾದರೋ ಅದ್ಭುತವಾದುದು ! ನನ್ನ ಇಷ್ಟಬಂದಂತೆ ಬಲವನ್ನು ಪಡೆಯಬಲ್ಲೆನು. ಇಷ್ಟಬಂದಹಾಗೆ ಸಂಚರಿಸಬಲ್ಲೆನು. ಆದುದರಿಂದ ನೀನೇ ನನಗೆ ಚಿರಕಾಲದವರೆಗೆ ಗಂಡನಾಗಿರು. ಯಾವ ಕೆಲಸಕ್ಕೂ ಉಪಯೋಗವಿಲ್ಲದ ಈ ಸೀತೆಯನ್ನು ಬಿಟ್ಟುಬಿಡು. ಇವಳ ಮುಖವನ್ನು ನೋಡಿದಾಗಲೆ ಇವಳು ನಿನಗೆ ಅನುರೂಪಳಲ್ಲವೆಂದು ತೋರುವುದಿಲ್ಲವೇ ? ಇಷ್ಟು ವಿಕಾರವುಳ್ಳವಳಾಗಿಯೂ, ಕುರೂಪಿಣಿಯಾಗಿಯೂ ಇರುವ ಈಕೆಯು ನಿನಗೆ ತಕ್ಕವಳಲ್ಲ. ನಾನೇ ನಿನಗೆ ತಕ್ಕ ಹೆಂಡತಿಯು. ನನ್ನಲ್ಲಿ ಪತ್ನಿಯೆಂಬ ಭಾವವನ್ನಿಡು. ಒಂದುವೇಳೆ ನನ್ನನ್ನು ನೀನು ಮದುವೆಮಾಡಿಕೊಂಡರೆ, ಇವಳು ನಿನ್ನನ್ನು ನಿರ್ಬಂಧಿಸುವಳೆಂದು ಶಂಕಿಸಬಹುದು. ಕೆಟ್ಟನಡತೆಯುಳ್ಳವಳಾಗಿ, ಕುರೂಪಿಣಿಯಾಗಿ, ಕರಾಳಸ್ವರೂಪವುಳ್ಳವಳಾಗಿ, ಕಂದಿದ ನಡುವುಳ್ಳವಳಾಗಿರುವ ಈ ಮನುಷ್ಯಸ್ತ್ರೀಯನ್ನು, ಈ ನಿನ್ನ ತಮ್ಮನೊಡನೆ ಈಗಲೇ ಭಕ್ಷಿಸಿಬಿಡುವೆನು. ಎಲೈ ಪ್ರಿಯನೇ ! ನೀನು ನನ್ನನ್ನು ವರಿಸಿದಮೇಲೆ ನಾವಿಬ್ಬರೂ ಸೇರಿ, ಈ ಪರ್ವತಶಿಖರಗಳನ್ನೂ, ಬಗೆಬಗೆಯಾದ ಸರೋವರಗಳನ್ನೂ ವಿನೋದದಿಂದ ಸುತ್ತಿ ನೋಡುತ್ತ, ಈ ದಂಡಕಾರಣ್ಯದಲ್ಲಿ ಯಥೇಚ್ಛವಾಗಿ ವಿಹರಿಸಬಹುದು ” ಎಂದಳು. ಇದನ್ನು ಕೇಳಿ ಮಾತಿನಲ್ಲಿ ಚತುರನಾದ ರಾಮನು, ಆಕೆಯನ್ನು ನೋಡಿ ನಗುತ್ತ, ಒಂದಾನೊಂದು ಮಾತನ್ನು ಹೇಳುವನು.

ಇಲ್ಲಿಗೆ ಹದಿನೇಳನೆಯ ಸರ್ಗವು.

---

ರಾಮನು ಲಕ್ಷ್ಮಣನನ್ನು ವರಿಸೆಂದು ಶೂರ್ಪಣಖಿಗೆ ಹೇಳಿದುದು. ಲಕ್ಷ್ಮಣನು ತಾನು ರಾಮನಿಗೆ ದಾಸನಾದುದರಿಂದ ದಾಸಭಾರ್ಯೆಯಾಗಿರಬಾರದೆಂದೂ, ರಾಮನನ್ನು ವರಿಸುವುದೇ ಉತ್ತಮವೆಂದೂ ಹೇಳಿದುದು. ಆಗ ಶೂರ್ಪಣಖಿಯು ಕೋಪಿಸಿ ಸೀತೆಯ ಮೇಲೆ ಬೀಳುವುದಕ್ಕೆ ಹೋಗಲು, ರಾಮಾಜ್ಞೆಯಿಂದ ಲಕ್ಷ್ಮಣನು ಆಕೆಯ ಕಿವಿಮೂಗುಗಳನ್ನು ಕುಯ್ದುದು.

ಆಗ ಕಾಮಪಾಶಕ್ಕೆ ಸಿಕ್ಕಿದ ಶೂರ್ಪಣಖಿಯನ್ನು ನೋಡಿ ರಾಮನು, ನಗುತ್ತ, ಮೃದುವಾದ ಮಾತುಗಳಿಂದ ಸ್ಪಷ್ಟವಾಗಿ ತಿಳಿಯುವಂತೆ "ಅಯ್ಯೋ! ನಾನು ಮೊದಲೇ ಒಬ್ಬಳನ್ನು ಮದುವೆಯಾಗಿರುವೆನಲ್ಲಾ! ಇದೋ! ಇವಳೇ ನನ್ನ ಹೆಂಡತಿಯು. ನನಗಾದರೋ ಇವಳಲ್ಲಿ ಬಹಳ ಪ್ರೀತಿಯು ಹುಟ್ಟಿರುವುದು. ಆದುದರಿಂದ ಇವಳನ್ನು ನಾನು ಬಿಟ್ಟುಬಿಡಲಾರೆನು. ಒಂದುವೇಳೆ ನೀನು "ಅವಳೊಡನೆ ನನ್ನನ್ನೂ ಪತ್ನಿಯಾಗಿಟ್ಟುಕೊಳ್ಳಕೂಡದೇ?" ಎಂದು ಕೇಳಬಹುದು. ನಿನ್ನಂತಹ ಸಾಧುಸ್ತ್ರೀಯರಿಗೆ ಸವತಿಯ ಸಹವಾಸವಿರಬಾರದಲ್ಲವೆ? ಲೋಕದಲ್ಲಿ ಸವತಿಯರೊಡನೆ ಕೂಡಿ ಬಾಳುವುದು ಬಹಳ ಕಷ್ಟವು. ಈಗ ನಿನಗೊಂದುಪಾಯವನ್ನು ಹೇಳುವೆನು ಕೇಳು. ಅದೋ! ಅಲ್ಲಿ ನನ್ನ ತಮ್ಮನಿರುವನು. [1] ಅವನು ಸದಾಚಾರಸಂಪನ್ನನು. ನೋಡುವುದಕ್ಕೂ

1. ಇಲ್ಲಿ "ಶ್ರೀಮಾನಕೃತದಾರಶ್ಚ ಲಕ್ಷ್ಮಣೋ ನಾಮ ವೀರ್ಯವಾನ್ ‖ ಅಪೂರ್ವೀ ಭಾರ್ಯಯಾ ಚಾರ್ಥೀ ತರುಣಃ ಪ್ರಿಯದರ್ಶನಃ ‖ ಅನುರೂಪಶ್ಚ ತೇ ಭರ್ತಾ ರೂಪಸ್ಯಾಸ್ಯ ಭವಿಷ್ಯತಿ ‖" ಎಂದು ಮೂಲವು. ಇಲ್ಲಿನ ವಿಶೇಷಾರ್ಥವೇನೆಂದರೆ, ರಾಮನು "ನವಿತಥಾ ಪರಿಹಾಸಕಥಾಸ್ವಪಿ" ಎಂಬಂತೆಯೂ, "ಅನೃತಂ ನೋಕ್ತ ಪೂರ್ವಂ ಮೇ" ಎಂಬಂತೆಯೂ ಯಾವಾಗಲೂ ವ್ಯರ್ಥವಾಕ್ಯಗಳನ್ನಾಗಲಿ, ಸುಳ್ಳನ್ನಾಗಲಿ ಹೇಳುವವನಲ್ಲ. ಹೀಗಿರುವಾಗ ಇಲ್ಲಿ ವಿವಾಹಿತನಾದ ಲಕ್ಷ್ಮಣನನ್ನು "ಅಕೃತದಾರ" ಎಂದು ಹೇಳುವುದು ನ್ಯಾಯವೇ? ಇದರಿಂದ ರಾಮನು ಸುಳ್ಳಾಡಿದಂತಾಗಲಿಲ್ಲವೇ? ಎಂಬ ಆಕ್ಷೇಪವುಂಟಾಗಬಹುದು. ಇಲ್ಲಿ "ಅಕೃತದಾರಃ" ಎಂದರೆ ಮದುವೆಯಿಲ್ಲದವನೆಂದರ್ಥವಲ್ಲ. ಪತ್ನೀ ಸಮೇತನಾಗಿ ಬಂದವನಲ್ಲವೆಂದೇ ಅರ್ಥವನ್ನು ಗ್ರಹಿಸಬೇಕು. "ಅಪೂರ್ವೀ" ಎಂಬುದಕ್ಕೂ ಬಹುಕಾಲದಿಂದ ಭಾರ್ಯಸುಖವನ್ನು ಅನುಭವಿಸಿದವನಲ್ಲವೆಂದರ್ಥವು. ರಾಮನು ಅಸತ್ಯವನ್ನಾಡುವವನಲ್ಲವಾದುದರಿಂದ, ತದನುಗುಣವಾಗಿಯೇ, ಇಲ್ಲಿ ಲಕ್ಷ್ಮಣನು ಈಗ ಸ್ವಭಾರ್ಯಸುಖವನ್ನು ಕಾಣದಿರುವನೆಂದು ಹೇಳಿದುದಾಗಿ ಭಾವವು. ಶೂರ್ಪಣಖಿಗೆ ಭ್ರಾಂತಿಯನ್ನು ಹುಟ್ಟಿಸುವು

ಅಂದವಾಗಿರುವನು. ಭಾಗ್ಯವಂತನಾಗಿಯೂ ಇರುವನು. ಆತನಿಗೆ ಹೆಂಡತಿಯೂ ಪಕ್ಕದಲ್ಲಿಲ್ಲವು. ನಿನ್ನಂತೆಯೇ ಆತನೂ ಅದ್ಭುತವಾದ ವೀರ್ಯವುಳ್ಳವನು. ಇದುವರೆಗೆ ಆತನು ಪತ್ನೀಸುಖವನ್ನು ಕಂಡವನಲ್ಲ. ಈಗ ಅವನಿಗೂ ಹೆಂಡತಿಯೊಬ್ಬಳು ಬೇಕಾಗಿರುವುದು. ಒಳ್ಳೇ ಯೌವನದಿಂದಲೂ ಕೂಡಿರುವನು. ಆದುದರಿಂದ ನಿನ್ನ ರೂಪಕ್ಕೆ ತಕ್ಕಂತೆ ಆತನೇ ನಿನಗೆ ಪತಿಯಾಗಿರುವುದುಚಿತವು. ಎಲೆ ಸುಂದರಾಂಗಿ ನಾನೇನು ಹೇಳಲಿ! ವಿಸ್ತಾರವಾದ ನಿನ್ನ ಕಣ್ಣುಗಳೂ, [1]ಅಂದವಾದ ನಿನ್ನ ಹಿಂಭಾಗವೂ, ಎಂತವರಿಗೂ ಮೋಹವನ್ನು ಹುಟ್ಟಿಸದಿರ

---

ದಕ್ಕಾಗಿ “ಲಕ್ಷ್ಮಣನು ಇದುವರೆಗೆ ಯಾವುದೊಂದು ಸ್ತ್ರೀಯ ಸುಖವನ್ನೂ ಕಂಡವನಲ್ಲ” ವೆಂದು ಸೂಚಿಸುವುದಾಗಿ ತಿಳಿಯಬೇಕು. ಹಾಗೆಯೇ “ಭಾರ್ಯಯಾ ಚಾರ್ಥೀ” ಎಂಬುದಕ್ಕೂ ಸ್ವಭಾರ್ಯೆಯನ್ನು ಅಪೇಕ್ಷಿಸುತ್ತಿರುವನೆಂದು ರಾಮನ ಅಂತರಾಶಯವು. “ತೇ ಭರ್ತಾ” ಎಂಬಲ್ಲಿ “ತೇ ಅಭರ್ತಾ” ಎಂಬ ಪದಚ್ಛೇದವನ್ನು ಮಾಡಿ “ಈತನು ನಿನಗೆ ಎಂದಿಗೂ ಗಂಡನಾಗಲಾರನು” ಎಂದು ಆತನ ಅಂತರಾಶಯವನ್ನು ಗ್ರಹಿಸಬೇಕು. “ರೂಪಸ್ಯಾಸ್ಯ” ಎಂಬುದಕ್ಕೂ ಈ ನಿನ್ನ ಕುತ್ಸಿತರೂಪಕ್ಕೆ ಲಕ್ಷ್ಮಣನು ಅನುರೂಪನಾದ ಪತಿಯಲ್ಲವೆಂದು ರಾಮನ ಭಾವವು (ಗೋವಿಂದರಾಜೀಯವು).

ಅಥವಾ (ಅಕೃತದಾರಃ) ಎಂಬುದಕ್ಕೆ ಪರದಾರ ಪರಿಗ್ರಹವನ್ನು ಮಾಡದವನೆಂದೂ, (ಅಪೂರ್ವೀ ಭಾರ್ಯಯಾ ಚಾರ್ಥೀ) ಎಂಬುದಕ್ಕೆ ತನ್ನ ಪ್ರಥಮಭಾರ್ಯೆಯಿಂದಲೇ ಚರಿತಾರ್ಥನಾದವನೆಂದೂ (ಶೀಲವಾನ್) ಎಂಬುದಕ್ಕೆ ಏಕಪತ್ನೀವ್ರತಶೀಲನೆಂದೂ, ರಾಮನ ಅಂತರಾಶಯವು. (ಅನುರೂಪಸ್ಯ ತೇ ಭರ್ತಾ ರೂಪಸ್ಯಾಸ್ಯ ಭವಿಷ್ಯತಿ) ಎಂಬಲ್ಲಿ ಕಾಕ್ವರ್ಥವನ್ನು ಗ್ರಹಿಸಿ “ನಿನ್ನ ರೂಪಕ್ಕೆ ಆ ಲಕ್ಷ್ಮಣನು ಎಂದಿಗಾದರೂ ಅನುರೂಪನಾಗುವನೇ? ಎಂದಿಗೂ ಆಗಲಾರನು” ಎಂದು ಭಾವವು (ಮಹೇಶ್ವರತೀರ್ಥೀಯವು).

1. ಇಲ್ಲಿ “ಏನಂ ಭಜ ವಿಶಾಲಾಕ್ಷಿ ಭರ್ತಾರಂ ಭ್ರಾತರಂ ಮಮ । ಅಸಪತ್ನಾ ವರಾರೋಹೇ ಮೇರುಮರ್ಕಪ್ರಭಾ ಯಥಾ ॥” ಎಂದು ಮೂಲವು. ಇಲ್ಲಿ (ವಿಶಾಲಾಕ್ಷಿ) ಎಂಬುದಕ್ಕೆ ವಿಸ್ತಾರವಾದ ಕಣ್ಣುಳ್ಳವಳೆಂದು ಹೊರಗೆ ಕಾಣುವ ಸಾಮಾನ್ಯಾರ್ಥವಾದರೂ ಬಹಳ ದೊಡ್ಡದಾದ ಮತ್ತು ವರ್ತುಲವಾದ ಕಣ್ಣುಳ್ಳವಳೆಂದು ನಿಂದಾಪರವಾದ ಅರ್ಥವು ಸೂಚಿಸಲ್ಪಡುವುದು. ಹಾಗೆಯೇ (ಮೇರುಮರ್ಕಪ್ರಭಾ ಯಥಾ) ಎಂಬಲ್ಲಿ ಅರ್ಕಪ್ರಭೆಯು ಮೇರುವನ್ನು ಹೊಂದಿ ಹಿಂದಿರುಗುವಂತೆ, ಈತನಲ್ಲಿಗೆ ಹೋಗಿ ಆಶಾಭಂಗವನ್ನು ಹೊಂದಿ ಬಾರೆಂದು ಅರ್ಥಾಂತರವು. ರಾಮನು ಕೇವಲ ದಯಾಳುವಾದುದರಿಂದ, ಕಾಮಮೋಹಿತೆಯಾಗಿ ತನ್ನಲ್ಲಿಗೆ ಬಂದ ಸ್ತ್ರೀಯನ್ನು ಆಗಲೇ ಧಿಕ್ಕರಿಸಿ ದುಃಖಪಡಿಸಲಾರದೆ ಈ ವಿಧವಾದ ಪರಿಹಾಸವಾಕ್ಯಗಳನ್ನಾರಂಭಿಸಿದುದಾಗಿ ಗ್ರಹಿಸಬೇಕು (ಗೋವಿಂದರಾಜೀಯವು).

ಲಾರವು. ಆದುದರಿಂದ ಸೂರ್ಯಕಾಂತಿಯು ಮೇರು ಪರ್ವತವನ್ನು ಹೋಗಿ ಸೇರುವಂತೆ, ನೀನು ನನ್ನ ತಮ್ಮನನ್ನು ಸೇರಿ ಸವತಿಯರ ಕಾಟವಿಲ್ಲದಂತೆ ಸುಖವಾಗಿರು" ಎಂದನು. ಮೊದಲೇ ಕಾಮದಿಂದ ಮೈಮರೆತಿರುವ ಆ ರಾಕ್ಷಸಿಯು, ಈ ರಾಮನ ಮೃದುವಾಕ್ಯಕ್ಕೆ ಮರುಳಾಗಿ ಆಗಲೇ ಅಲ್ಲಿಂದ ಲಕ್ಷ್ಮಣನ ಕಡೆಗೆ ತಿರುಗಿ "ಎಲೈ ಲಕ್ಷ್ಮಣನೆ! ನಿನ್ನ ಈ ರೂಪಾತಿಶಯಕ್ಕೆ ಉತ್ತಮಜಾತಿ ಸ್ತ್ರೀಯಾದ ನಾನೇ ತಕ್ಕ ಭಾರ್ಯೆಯು. ನೀನು ನನ್ನೊಡಗೂಡಿ ಸುಖವಾಗಿ ಈ ದಂಡಕಾರಣ್ಯದೊಳಗೆಲ್ಲಾ ವಿಹರಿಸುತ್ತಿರು" ಎಂದಳು. ಇದನ್ನು ಕೇಳಿ ಲಕ್ಷ್ಮಣನು ಮಂದಹಾಸದಿಂದ ನಗುತ್ತ ಆ ರಾಕ್ಷಸಿಯನ್ನು ಕುರಿತು "ಇದೀಗ ಚೆನ್ನಾಯಿತು! ನಿನ್ನ ರೂಪವೇನು? ನಿನ್ನ ಸೌಂದರ್ಯಾತಿಶಯ ವೇನು? ಕಮಲದಂತೆ ಮೈಬಣ್ಣವುಳ್ಳವಳಾಗಿಯೂ, ವಿಸ್ತಾರವಾದ ಕಣ್ಣು ಗಳುಳ್ಳವಳಾಗಿಯೂ, ಇರುವ ನಿನಗೆ ನನ್ನಲ್ಲಿ ಹೇಗೆ ಮನಸ್ಸು ಹುಟ್ಟಿತು? ನನ್ನ ದುಃಸ್ಥಿತಿಯು ನಿನಗೆ ಇನ್ನೂ ತಿಳಿದಿಲ್ಲವೆಂದು ತೋರುವುದು. ನಾನು ಆರ್ಯನಾದ ಆ ರಾಮನಿಗೆ ದಾಸನು! ಆತನು ಹೇಳಿದ ಹಾಗೆ ನಡೆಯಬೇಕಾದ ಭೃತ್ಯನೇ ಹೊರತು ನಾನು ಸ್ವತಂತ್ರನಲ್ಲ. ಹೀಗೆ ದಾಸಭೂತನಾದ ನನಗೆ ಹೆಂಡತಿಯಾದರೆ ನೀನೂ ದಾಸಿಯೆನಿಸಿಕೊಳ್ಳುವುದಿಲ್ಲವೆ? ಆದುದರಿಂದ [1]ಸಮೃದ್ಧಭಾಗ್ಯವುಳ್ಳ ನನ್ನಣ್ಣನಾದ ರಾಮನನ್ನೇ ನೀನು ಕೈಹಿಡಿದು ಕೃತಾರ್ಥ

---

(ಭರ್ತಾರಂ ಭಜ) ಎಂಬಲ್ಲಿ ಪತಿಯನ್ನಾಗಿ ವರಿಸೆಂಬುದು ಹೊರಗಣ ಭಾವವು. "ನಮ್ಮೆಲ್ಲರಿಗೂ ಈತನೇ ಪೋಷಕನೆಂದು ತಿಳಿ" ಎಂಬುದು ರಾಮನ ಅಂತರಾಶಯವು. (ಮಾಹೇಶ್ವರತೀರ್ಥೀಯವು.)

1. ಇಲ್ಲಿ "ಸಮೃದ್ಧಾರ್ಥಸ್ಯ ಸಿದ್ಧಾರ್ಥಾಽಮುದಿತಾ ಮಲವರ್ಣಿನೀ। ಆರ್ಯಸ್ಯ ತ್ವಂ ವಿಶಾಲಾಕ್ಷಿ ಭಾರ್ಯಾ ಭವ ಯವೀಯಸೀ॥ ಏನಾಂ ವಿರೂಪಾಮಸತೀಂ ಕರಾಳಾಂ ನಿರ್ಣತೋದರೀಂ। ಭಾರ್ಯಾಂ ವೃದ್ಧಾಂ ಪರಿತ್ಯಜ್ಯ ತಾಮೇವೈಷ ಭಜಿಷ್ಯತಿ॥" ಎಂದು ಮೂಲವು. ಇದರ ಪ್ರಾತೀತಿಕಾರ್ಥವು ಮೇಲೆಯೇ ವ್ಯಕ್ತವಾಗಿರುವುದು. ಇಲ್ಲಿನ ವಾಸ್ತವಾರ್ಥವೇನೆಂದರೆ (ಸಿದ್ಧಾರ್ಥ) ಇಲ್ಲಿ ಅರ್ಥಶಬ್ದಕ್ಕೆ "ಅರ್ಥೋಽಭಿಧೇಯರೈವಸ್ತು ಪ್ರಯೋಜನ ನಿವೃತ್ತಿಷು" ಎಂಬುದಾಗಿ ನಿವೃತ್ತಿಯೆಂದರ್ಥವು. ಸಮೃದ್ಧಾರ್ಥನಾದ ರಾಮ ನಿಂದ ನಿನ್ನಂಥವಳಿಗೆ ನಿವೃತ್ತಿಯೆಂಬುದು ಸಿದ್ಧವೆಂದು ಭಾವವು. ಹಾಗೆಯೇ (ಅಮುದಿತಾಮಲ ವರ್ಣಿನೀ) ಎಂದು ಪದಚ್ಛೇದವನ್ನು ಮಾಡಿ "ನೀನು ದುಃಖಭಾಗಿಯಾಗುವೆಯೆಂದೂ, ಕೇವಲ ದುರ್ವರ್ಣವುಳ್ಳವಳೆಂದೂ ಅರ್ಥಾಂತರವನ್ನು ಗ್ರಹಿಸಬೇಕು. (ಯವೀಯಸೀ)

ಳಾಗಿ ಸಂತೋಷದಿಂದಿರು. ಆತನಿಗೆ ನೀನು ಎರಡನೆಯ ಭಾರ್ಯೆಯೆನಿಸಿಕೊಳ್ಳುವಳಾಗು. ನೀನು ಹೇಳಿದಂತೆ ವಿಕಾರರೂಪವುಳ್ಳವಳಾಗಿಯೂ, ಆಚಾರಹೀನಳಾಗಿಯೂ, ಭಯಂಕರಳಾಗಿಯೂ, ನಡುವಿಲ್ಲದವಳಾಗಿಯೂ ಇರುವ ಈ ಮುದಿ ಹೆಂಡತಿಯಾದ ಸೀತೆಯನ್ನು ಬಿಟ್ಟು, ರಾಮನು ನಿನ್ನನ್ನೇ ನಿಜವಾದ ಪತ್ನಿಯೆಂದು ಕೈಕೊಳ್ಳುವನು. ಕಾಲಕ್ರಮದಿಂದ ಆ ಸೀತೆಯನ್ನು ಬಿಟ್ಟೇ ಬಿಡುವನು. ಎಲೆ ಶೂರ್ಪಣಖಿ! ನೀನು ಉಷ್ಣ ಕಾಲದಲ್ಲಿ ಸುಖಶೀತಲವಾಗಿಯೂ, ಶೀತಕಾಲದಲ್ಲಿ ಸುಖೋಷ್ಣವಾಗಿಯೂ ಇರುವ ದೇಹವನ್ನು ಹೊಂದಿ ನಾಯಕನಿಗೆ ಅನುರಾಗವನ್ನು ಹೆಚ್ಚಿಸುವ ಉತ್ತಮಕಾಂತೆಯೆಂಬುದರಲ್ಲಿ ಸಂದೇಹವೇನಿದೆ? ಆಹ! ನಿನ್ನ ಸರ್ವೋತ್ತಮವಾದ ಈ ರೂಪವನ್ನು ನೋಡಿದ ಮೇಲೆ, ಬುದ್ಧಿಶಾಲಿಯಾದ ಯಾವ ಮನುಷ್ಯನು ತಾನೇ ನಿನ್ನನ್ನು ಬಿಟ್ಟು ಮನುಷ್ಯ ಸ್ತ್ರೀಯರಲ್ಲಿ ಮನಸ್ಸನ್ನಿಡುವನು?" ಎಂದನು. ಇದನ್ನು ಕೇಳಿ ಭಯಂಕರ ಸ್ವರೂಪವುಳ್ಳವಳಾಗಿಯೂ, ದೊಡ್ಡ ಹೊಟ್ಟೆಯುಳ್ಳವಳಾಗಿಯೂ ಇರುವ ಆ ರಾಕ್ಷಸಿಯು, ಪರಿಹಾಸದಿಂದಾಡಿದ ಆ ಮಾತಿನ ನಿಜವಾದ ಭಾವವನ್ನು ತಿಳಿದುಕೊಳ್ಳಲಾರದೆ, ಅವೆಲ್ಲವನ್ನೂ ಯಥಾರ್ಥವೆಂದೇ ತಿಳಿದು, ಪುನಃ ರಾಮನಿದ್ದ ಪರ್ಣಶಾಲೆಗೆ ಬಂದಳು. [1]ಅಲ್ಲಿ ಸೀತೆಯೊಡನೆ ಕುಳಿತಿದ್ದ ರಾಮನನ್ನು ನೋಡಿ

---

ಎಂಬುದಕ್ಕೆ ಹೀನಸ್ವಭಾವವುಳ್ಳವಳೆಂದರ್ಥವು ಮತ್ತು (ವಿರೂಪಾಮಸತೀಂ ಕರಾಳಾಂ ನಿರ್ಣತೋದರೀಂ | ವೃದ್ಧಾಂ ಚ ತ್ವಾಂ ಪರಿತ್ಯಜ್ಯ ಏನಾಂ ಭಾರ್ಯಾಮೇವ ಏಷ ಭಜಿಷ್ಯತಿ) ಎಂಬುದಾಗಿ, ಬೇರೆ ವಿಧದಿಂದ ಅನ್ವಯವನ್ನು ಮಾಡಿ, ವಿರೂಪತ್ವಾದಿ ದುರ್ಗುಣಗಳುಳ್ಳ ನಿನ್ನನ್ನು ಪರಿತ್ಯಜಿಸಿ, ಈ ರಾಮನು ಸ್ವಭಾರ್ಯೆಯಾದ ಸೀತೆಯನ್ನೇ ಗ್ರಹಿಸುವನು.) ಎಂದು ವಾಸ್ತವಾಂಶವನ್ನು ಗ್ರಹಿಸಬೇಕು (ಗೋವಿಂದರಾಜೀಯವು).

ಸೀತಾಪರವಾಗಿ (ವಿರೂಪಾಂ) ಎಂಬುದಕ್ಕೆ ವಿಶೇಷರೂಪವುಳ್ಳವಳೆಂದೂ (ಅಸತೀಂ) ಎಂಬುದಕ್ಕೆ ತನಗೆ ಸಮಾನರಾದ ಬೇರೆ ಪತಿವ್ರತಾಸ್ತ್ರೀಯರಿಲ್ಲದವಳೆಂದೂ (ಕರಾಳಾಂ) ಎಂಬುದಕ್ಕೆ (ಕರಾಳೋ ದಂತುರೇ ತುಂಗೇ ದಾರುಣೇಪಿ ಚ) ಎಂಬ ನಿಘಂಟು ಪ್ರಮಾಣದಿಂದ ಉನ್ನತಾಕಾರವುಳ್ಳವಳೆಂದೂ (ನಿರ್ಣತೋದರೀಂ) ಎಂಬುದಕ್ಕೆ ಸಣ್ಣನಡುವುಳ್ಳವಳೆಂದೂ (ವೃದ್ಧಾಂ) ಎಂಬುದಕ್ಕೆ ಜ್ಞಾನಶೀಲಾದಿಗಳಲ್ಲಿ ವೃದ್ಧಳೆಂದೂ ವಾಸ್ತವಾರ್ಥವು (ಮಹೇಶ್ವರತೀರ್ಥೀಯವು).

1. ಇಲ್ಲಿ ರಾಮನನ್ನು ಮಾತ್ರ ಪರ್ಣಶಾಲೆಯಲ್ಲಿದ್ದುದಾಗಿ ಕಾಣಿಸಿರುವುದರಿಂದ ಲಕ್ಷ್ಮಣನು ಹೊರಗಿದ್ದನೆಂದು ಸೂಚಿತವಾಗುವುದು.

“ ರಾಮಾ ! ಇದೇನು ? ನಾನು ಇಷ್ಟು ಹೇಳಿದರೂ ನಿನಗೆ ತಿಳಿಯಲಿಲ್ಲವೇ ? ವಿಕಾರರೂಪವುಳ್ಳ ಭಯಂಕರಾಕಾರೆಯಾದ ಈ ಮುದಿಹೆಂಡತಿಯನ್ನು ಕಟ್ಟಿ ಕೊಂಡು ಇನ್ನೂ ನನ್ನನ್ನು ಆದರಿಸದೆ ಇರುವೆಯಾ ? ಇವಳ ಬಲದಿಂದಲ್ಲವೇ ನೀನು ಹೀಗೆ ನನ್ನನ್ನು ಅಲಕ್ಷ್ಯವಾಗಿ ಕಾಣುತ್ತಿರುವೆ ! ಇರಲಿ ! ಇದೋ ! ಈಗ ನೀನು ನೋಡುತ್ತಿರುವ ಹಾಗೆಯೇ ಇವಳನ್ನು ಹಿಡಿದು ಭಕ್ಷಿಸಿಬಿಡುವೆನು. ಆಗಲೂ ನಾನು ಈ ಸವತಿಯ ಕಾಟವಿಲ್ಲದೆ ನಿನ್ನೊಡಗೂಡಿ ಸುಖವಾಗಿ ವಿಹರಿಸ ಬಹುದಲ್ಲವೇ ?” ಎಂದಳು. ಹೀಗೆಂದು ಹೇಳುತ್ತ ಆ ರಾಕ್ಷಸಿಯು, ಕೆಂಡದಂತೆ ಕೆಂಪಾದ ಕಣ್ಣುಗಳಿಂದ ಕೂಡಿದವಳಾಗಿ ಜಿಂಕೆಯ ಕಣ್ಣಿನಂತೆ ಭಯಚಂಚಲ ವಾದ ಕಣ್ಣುಳ್ಳ ಸೀತೆಯನ್ನು ನೋಡುತ್ತ ರೋಹಿಣಿಗಿದಿರಾಗಿ ಬೀಳುತ್ತಿರುವ ಉಲ್ಕಾಪಾತದಂತೆ ಬಹು ವೇಗದಿಂದ ಓಡಿಬಂದಳು. ಹೀಗೆ ಯಮಪಾಶದಂತೆ ಕ್ರೂರವಾಗಿ ಮೇಲೆ ಬೀಳುತ್ತಿರುವ ಆ ರಾಕ್ಷಸಿಯನ್ನು ನೋಡಿ ಬಲಾಢ್ಯನಾದ ರಾಮನು ಬಹಳ ಕುಪಿತನಾಗಿ ಅಡ್ಡಗಟ್ಟಿ ನಿಂತು, ಸಮೀಪದಲ್ಲಿದ್ದ ಲಕ್ಷ್ಮಣನನ್ನು ಕರೆದು “ ವತ್ಸ ಲಕ್ಷ್ಮಣನೆ ! ಕ್ರೂರಸ್ವಭಾವವುಳ್ಳ ದುರ್ಜನರಲ್ಲಿ ಹೇಗೂ ಪರಿಹಾಸವನ್ನು ಕೂಡ ಮಾಡಬಾರದು. ಸೀತೆಯು ಈ ರಾಕ್ಷಸಿಯ ಕ್ರೌರ್ಯ ವನ್ನು ನೋಡಿ ತತ್ತರಿಸುತ್ತಿರುವಳು. ಆದರೂ ಈಗ ಎಷ್ಟೋ ಪ್ರಯತ್ನದಿಂದ ಮನಸ್ಸಿಗೆ ಸ್ಥೈರ್ಯವನ್ನು ತಂದುಕೊಳ್ಳುತ್ತಿರುವಳು. ಅದು ಹಾಗಿರಲಿ ! ಮೊದಲೇ ವಿಕಾರರೂಪವುಳ್ಳ ಈ ದುಷ್ಟರಾಕ್ಷಸಿಗೆ ಮತ್ತಷ್ಟು ವಿಕಾರವನ್ನುಂಟು ಮಾಡಿ ಕಳುಹಿಸು. ಇವಳಾದರೋ ಬಹಳ ಕೊಬ್ಬಿ ಹೋಗಿರುವಳು ” ಎಂದನು. ಇದನ್ನು ಕೇಳಿ ಲಕ್ಷ್ಮಣನು ಕುಪಿತನಾಗಿ, ರಾಮನ ಪಕ್ಕದಲ್ಲಿದ್ದ ಕತ್ತಿಯನ್ನೇ ಕೈಗೆತ್ತಿಕೊಂಡು, ಆ ರಾಕ್ಷಸಿಯ ಕಿವಿಮೂಗುಗಳನ್ನು ಕುಯ್ದುಬಿಟ್ಟನು. ಇದರಿಂದ ಮೊದಲಿಗಿಂತಲೂ ಹೆಚ್ಚು ವಿಕಾರರೂಪವನ್ನು ಹೊಂದಿದ ಆ ರಾಕ್ಷಸಿಯು, ವಿಕಟಸ್ವರದಿಂದ ಗೋಳಿಡುತ್ತ, ತಾನು ಬಂದ ದಾರಿಯನ್ನು ಹಿಡಿದು ನಡುಕಾಡಿನ ಕಡೆಗೆ ಓಡಿಹೋದಳು. ಹೀಗೆ ಭಯಂಕರವಾದ ವಿಕಾರ ರೂಪವುಳ್ಳವಳಾಗಿ ಆ ರಾಕ್ಷಸಿಯು ಓಡಿಹೋಗುತ್ತಿರುವಾಗ ಅವಯವಗಳಲ್ಲಿ ಎಡೆಬಿಡದೆ ರಕ್ತವು ಸೋರುತ್ತಿರಲು ಮಳೆಗಾಲದ ಮೇಘದಂತೆ ಕಾಣುತ್ತ ನಾನಾವಿಧವಾಗಿ ಕೂಗಿಕೊಳ್ಳುತ್ತಿದ್ದಳು. ದಾರಿಯುದ್ದಕ್ಕೂ ರಕ್ತವು ಸುರಿಯು ತ್ತಿರಲು ಅವಳು ಎರಡು ತೋಳುಗಳನ್ನೂ ಮೇಲಕ್ಕೆತ್ತಿಕೊಂಡು, ಘೋರ

ಸ್ವರೂಪವುಳ್ಳವಳಾಗಿ ನಡುಕಾಡಿಗೆ ಪ್ರವೇಶಿಸಿದಳು. ಅಲ್ಲಿ ಅನೇಕ ರಾಕ್ಷಸ ಸಮೂಹದಿಂದ ಪರಿವೃತನಾಗಿ, ಭಯಂಕರಾಕಾರವುಳ್ಳವನಾಗಿ, ಜನಸ್ಥಾನ ವೆಂಬ ಪ್ರದೇಶದಲ್ಲಿದ್ದ ತನ್ನ ಸಹೋದರನಾದ ಖರನೆಂಬುವನ ಬಳಿಗೆ ಬಂದು, ಆಕಾಶದಿಂದ ಸಿಡಿಲು ಬಿದ್ದಂತೆ ಅವನ ಮುಂದೆ ದೊಪ್ಪನೆ ನೆಲದಮೇಲೆ ಬಿದ್ದಳು. ಆಗಲೂ ಭಯದಿಂದ ಮೈಮರೆತು ತತ್ತಳಿಸುತ್ತ, ಆ ರಾಕ್ಷಸಿಯು ರಕ್ತಧಾರೆ ಯಿಂದ ತೊಯ್ದು ಮೈಯುಳ್ಳವಳಾಗಿ ತನ್ನ ಸಹೋದರನಾದ ಖರನೆಂಬ ರಾಕ್ಷಸನಿಗೆ, ಸೀತಾಲಕ್ಷ್ಮಣರೊಡನೆ ರಾಮನು ಕಾಡಿಗೆ ಬಂದಿರುವ ವಿಷಯ ವನ್ನೂ, ತನಗೆ ಅವರಿಂದುಂಟಾದ ಆ ವಿಕಾರವನ್ನೂ ವಿಸ್ತರವಾಗಿ ತಿಳಿಸಿದಳು.

ಇಲ್ಲಿಗೆ ಹದಿನೆಂಟನೆಯ ಸರ್ಗವು.

---

ಶೂರ್ಪಣಖಿಯು ಖರನಿಗೆ ರಾಮಾದಿಗಳ ವೃತ್ತಾಂತವನ್ನು ತಿಳಿಸಿದುದು. ಖರನು ರಾಮನನ್ನು ಜಯಿಸುವುದಕ್ಕಾಗಿ ಹದಿನಾಲ್ಕು ಮಂದಿ ರಾಕ್ಷಸಾಧಿಪತಿಗಳನ್ನು ಕಳುಹಿಸಿದುದು. ಅವರು ಶೂರ್ಪಣಖಿಯೊಡಗೂಡಿ ರಾಮನಿರುವ ಸ್ಥಳಕ್ಕೆ ಬಂದುದು.

ಹೀಗೆ ವಿರೂಪೆಯಾಗಿ, ರಕ್ತತಿಗ್ದೆಯಾಗಿ, ನೆಲದಮೇಲೆ ಬಿದ್ದಿರುವ ತನ್ನ ತಂಗಿಯನ್ನು ನೋಡಿ ಖರನು, ಆಗಲೇ ಕೋಪೋದ್ರಿಕ್ತನಾಗಿ "ಎಲೆ ತಂಗಿ! ಏಳೇಳು! ನಿನ್ನ ಸಂಗತಿಯೇನು ಹೇಳು! ಗಾಬರಿ ಬೀಳಬೇಡ! ಮನಸ್ಸನ್ನು ಸಮಾಧಾನಕ್ಕೆ ತಂದುಕೊಳ್ಳುವಳಾಗು! ನಿನಗೆ ಹೀಗೆ ವಿಕಾರರೂಪವನ್ನುಂಟು ಮಾಡಿದವರಾರು? ಹೇಳು! ಅಬ್ಬಾ! ಕೋರೆಹಲ್ಲಿನ ಮಹಾ ಕ್ರೂರವಿಷ ವನ್ನು ತುಂಬಿಕೊಂಡಿರುವ ಒಂದು ಕಾಲಸರ್ಪವು ಯಾರಿಗೊಂದು ಕೇಡನ್ನೂ ಮಾಡದೆ ತನ್ನಷ್ಟಕ್ಕೆ ತಾನು ಹರಿದು ಬಂದು ಮುಂದೆ ಮಲಗಿದ್ದಾಗ ಕುಚೇಷ್ಟೆ ಗಾಗಿ ಅದನ್ನು ಬೆರಳಿನಿಂದ ಚುಚ್ಚುವಂತೆ ನಿನ್ನನ್ನು ಕೆಣಕಿದವನಾವನು? ಅಜ್ಞಾನವಶದಿಂದ ಹೀಗೆ ಮೃತ್ಯುಪಾಶವನ್ನು ಕೊರಲಿಗೆ ಸುತ್ತಿಕೊಂಡಿರುವವ ನಾವನು? ಅತಿಕ್ರೂರವಾದ ವಿಷವನ್ನು ಕುಡಿದವನಂತೆ ಈಗ ನಿನ್ನನ್ನು

ಕೆಣಕಿ ಮೃತ್ಯುವಿಗೀಡಾಗಿರುವವನಾವನು? ಆಃ! ನಿನ್ನ ಬಲವೇನು? ನಿನ್ನ ವೀರ್ಯವೇನು? ಮಾಯಾಶಕ್ತಿಯೇನು? ಹೀಗೆ ಮಹಾದ್ಭುತ ಶಕ್ತಿಯುಳ್ಳವಳಾಗಿ, ಕಾಮಚಾರಿಣಿಯಾಗಿ, ಕಾಮರೂಪಿಣಿಯಾಗಿ, ಮೃತ್ಯು ಸಮಾನಳಾಗಿರುವ ನಿನಗೂ ಈ ಅವಸ್ಥೆಯನ್ನುಂಟುಮಾಡಿದವನಾವನು? ಎಲೆ ತಂಗಿ! ದೇವತೆಗಳಾಗಿರಲಿ! ಗಂಧರ್ವರಾಗಿರಲಿ! ಭೂತಗಳಾಗಿರಲಿ! ಮಹಾಮಹಿಮೆಯುಳ್ಳ ಋಷಿಗಳಾಗಿರಲಿ! ಯಾರಾದರೇನು ಹೇಳು! ಹೀಗೆ ನಿನಗೆ ವಿರೂಪವನ್ನುಂಟುಮಾಡುವಷ್ಟು ಮಹಾವೀರ್ಯವುಳ್ಳವನಾವನು? ಲೋಕದಲ್ಲಿ ಪಾಕಾಸುರನನ್ನು ಕೊಂದು, ಸಹಸ್ರಾಕ್ಷನೆಂದು ಖ್ಯಾತಿಗೊಂಡ ಆ ದೇವೇಂದ್ರನೊಬ್ಬನು ಹೊರತು, ನನ್ನನ್ನು ಕೆಣಕಿ ಪ್ರತಿಭಟಿಸುವವರು ಬೇರೊಬ್ಬರೂ ಇಲ್ಲವು. ಹಂಸವು ನೀರಿನಲ್ಲಿ ಕಲಸಿಟ್ಟ ಹಾಲನ್ನು ಪ್ರತ್ಯೇಕಿಸಿ ಹೀರಿಬಿಡುವಂತೆ, ಇದೋ! ಈಗಲೇ ನನ್ನ ಬಾಣಗಳಿಂದ ಆತನ ಪ್ರಾಣಗಳನ್ನು ಹೀರಿಬಿಡುವೆನು. ಈ ನನ್ನ ಬಾಣಗಳು ಮರ್ಮಸ್ಥಾನದಲ್ಲಿ ನಾಟಿಕೊಳ್ಳುವುದರಿಂದ, ಯುದ್ಧದಲ್ಲಿ ಸತ್ತುಬಿದ್ದ ಯಾವನ ರಕ್ತವನ್ನು ಈ ಭೂಮಿಯು ಕುಡಿಯಬೇಕಾಗಿರುವುದು? ಯುದ್ಧದಲ್ಲಿ ನನ್ನಿಂದ ಹತನಾದ ಯಾವನ ದೇಹದಿಂದ ಮಾಂಸವನ್ನು ಕಿತ್ತು ಹಕ್ಕಿಗಳೆಲ್ಲವೂ ಸಂತೋಷದಿಂದ ತಿನ್ನಬೇಕಾಗಿರುವುದು? ಹೇಳು! ಎಲೆ ತಂಗಿ! ಈ ಯುದ್ಧದಲ್ಲಿ ನನ್ನ ಕೈಗೆ ಸಿಕ್ಕಿಬಿದ್ದವನನ್ನು ಬಿಡಿಸಿಕೊಳ್ಳುವುದಕ್ಕೆ ದೇವತೆಗಳಾಗಲಿ, ಪಿಶಾಚರಾಗಲಿ, ರಾಕ್ಷಸರಾಗಲಿ, ಯಾರೂ ಸಮರ್ಥರಾಗಲಾರರು! ಈ ಕಾಡಿನಲ್ಲಿ ಯಾವ ನೀಚನು ತನ್ನ ವೀರ್ಯದ ಕೊಬ್ಬಿನಿಂದ ನಿನಗೆ ಹೀಗೆ ಮಾಡಿದನೋ ಅವನನ್ನು ನನಗೆ ತಿಳಿಸು. ಮೆಲ್ಲಗೆ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡು ವಿಸ್ತರವಾಗಿ ಹೇಳು" ಎಂದನು. ಹೀಗೆ ಕೋಪಾತಿಶಯದಿಂದ ಆರ್ಭಟಿಸಿ ಕೇಳುತ್ತಿರುವ ಖರನನ್ನು ನೋಡಿ, ಶೂರ್ಪಣಖಿಯು ಕಣ್ಣೀರುಬಿಟ್ಟು ಗೋಳಿಡುತ್ತ, "ಅಣ್ಣಾ! ನಾನೇನು ಹೇಳಲಿ? [1]ಒಂದೇ ವಿಧವಾದ ನವಯೌವನವುಳ್ಳವರು! ಅಂದವಾದ ರೂಪಸಂಪತ್ತಿ

---

1. ಇಲ್ಲಿ "ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ । ಪುಂಡರೀಕವಿಶಾಲಾಕ್ಷೌ ಚೀರಕೃಷ್ಣಾಜಿನಾಂಬರೌ ॥" ಎಂದು ಮೂಲವು. ಇಲ್ಲಿನ ವಿಶೇಷಾರ್ಥಗಳೇನೆಂದರೆ:— ಖರನು ಶೂರ್ಪಣಖಿಯೆನ್ನು ಕುರಿತು "ನಿನ್ನನ್ನು ಹೀಗೆ ವಿರೂಪಮಾಡಿದವರಾರು?" ಎಂಬು ಆತ್ಯಾತುರದಿಂದಲೂ, ಕೋಪದಿಂದಲೂ ಪ್ರಶ್ನೆಮಾಡುತ್ತಿರುವಾಗ

ಯುಳ್ಳವರು ! ಕೋಮಲವಾದ ಮೈಯುಳ್ಳವರು ! ಹಾಗಿದ್ದರೂ ಬಹಳ

ಆ ಶೂರ್ಪಣಖಿಯು "ಪುತ್ರೌ ದಶರಥಸ್ಯಾಸ್ತಾಂ ಭ್ರಾತರೌ ರಾಮಲಕ್ಷ್ಮಣೌ", ದಶರಥನ ಮಕ್ಕಳಾದ ರಾಮಲಕ್ಷ್ಮಣರೆಂಬ ಅಣ್ಣತಮ್ಮಂದಿರಿಬ್ಬರಿರುವರು ಎಂಬುದಾಗಿ, ಆ ಪ್ರಶ್ನೆಗೆ ತಕ್ಕಂತೆ ಸರಿಯಾದ ಉತ್ತರವನ್ನು ಕೊಡಬೇಕಾಗಿದ್ದರೂ, ಅದನ್ನು ಬಿಟ್ಟು ಆರಂಭದಲ್ಲಿಯೇ "ತರುಣೌ ರೂಪಸಂಪನ್ನೌ" ಎಂಬುದಾಗಿ ರಾಮಲಕ್ಷ್ಮಣಾದಿಗಳ ಸೌಂದರ್ಯವನ್ನೇ ವರ್ಣಿಸಲಾರಂಭಿಸಿದುದೇಕೆ ? ಎಂದರೆ, ತನಗೆ ರಾಮಲಕ್ಷ್ಮಣರು ಹಾಗೆ ವಿರೂಪತ್ವವನ್ನುಂಟು ಮಾಡಿದ್ದರೂ, ಅವರಲ್ಲಿ ಅವಳು ದ್ವೇಷವನ್ನು ಮರೆತು ಮೋಹಪರವಶಳಾಗಿ, ತನ್ನ ಒಡ ಹುಟ್ಟಿದವರ ಸಮಕ್ಷದಲ್ಲಿಯೂ ಕೂಡ ಲಜ್ಜೆಯಿಲ್ಲದೆ, ತನ್ನ ಮನಸ್ಸಿನಲ್ಲಿರುವುದನ್ನೇ ಬಾಯಿಂದ ಆಡುತ್ತಿರುವಳೆಂದು ಭಾವವು. ಇದರಿಂದ ರಾಮನನ್ನು ಕಣ್ಣಾರೆ ಕಂಡವರಿಗೆ ಆತನು ಅನು ಕೂಲನಾಗಿದ್ದರೂ, ಪ್ರತಿಕೂಲನಾಗಿದ್ದರೂ ಅವನ ಗುಣಾನುವರ್ಣನವೇ ಸ್ವಭಾವವಾಗಿರುವು ದೆಂದು ಸೂಚಿತವು. ಇದರಂತೆಯೇ ಸುಂದರಕಾಂಡದಲ್ಲಿ ಸೀತೆಯು "ಯಾನಿ ರಾಮಸ್ಯ ಚಿಹ್ನಾನಿ" ರಾಮನ ಗುರುತುಗಳಾವುವು ? ಎಂದು ಕೇಳಲು, ಅದಕ್ಕೆ ಆಂಜನೇಯನು "ತ್ರಿಸ್ಥಿರಸ್ತ್ರಿಪ್ರಲಂಬಶ್ಚ" ಇತ್ಯಾದಿ ಪ್ರಕಾರದಿಂದ, ಅವನ ಅಸಾಧಾರಣ ಚಿಹ್ನೆಗಳನ್ನು ಹೇಳಬೇಕಾಗಿದ್ದರೂ, ಮೊದಲು ಹಾಗೆ ಹೇಳದೆ, ಆ ರಾಮನ ಸೌಂದರ್ಯಾತಿಶಯವನ್ನೇ ವರ್ಣಿಸಲಾರಂಭಿಸಿರುವನು. ಅಥವಾ ನಿದ್ರೆಯಲ್ಲಿಯೂ, ಪ್ರಮಾದದಲ್ಲಿಯೂ, ಕೋಪ ಕಾಲದಲ್ಲಿಯೂ ಜನರು ತಮ್ಮ ರಹಸ್ಯವನ್ನು ಹೊರಕ್ಕೆ ಬಿಟ್ಟುಬಿಡುವರೆಂಬ ನ್ಯಾಯದಿಂದ ಇಲ್ಲಿಯೂ ಕುಪಿತೆಯಾದ ಶೂರ್ಪಣಖಿಯು ರಾಮಲಕ್ಷ್ಮಣರಲ್ಲಿ ದ್ವೇಷಬುದ್ಧಿಯನ್ನು ಮರೆತು, ದುಃಖಪ್ರಮತ್ತೆಯಾಗಿ, ತನ್ನ ಹೃದಯದೊಳಗಿನ ಭಾವವನ್ನೇ ಬಾಯಿಂದ ಆಡು ತ್ತಿರುವಳೆಂದೂ ಗ್ರಹಿಸಬಹುದು. (ತರುಣೌ) ಎಂದರೆ ಎಳೆ ಯೌವನವುಳ್ಳವರೆಂದರ್ಥವು. ಸ್ತ್ರೀಯರಿಗೆ ಪುರುಷರ ವಯಸ್ಸೇ ಮೊದಲನೆಯ ಆಕರ್ಷಕವಾದುದರಿಂದ, ಇಲ್ಲಿ ಮೊದಲು ಅವರ ವಯಸ್ಸನ್ನು ಹೇಳಿದುದಾಗಿ ಗ್ರಾಹ್ಯವು. ಆದರೆ ಶೂರ್ಪಣಖಿಗೆ ಮೊದಲು ಮೋಹ ವುಂಟಾದುದು ರಾಮನಲ್ಲಿ. ಇವಳಿಗೆ ವಿರೂಪವನ್ನುಂಟುಮಾಡಿದವನು ಲಕ್ಷ್ಮಣನು. ಆದುದ ರಿಂದ ಆ ಇಬ್ಬರಲ್ಲಿ, ರಾಮನು ಈ ರಾಕ್ಷಸಿಯ ಅನುರಾಗಕ್ಕೂ, ಲಕ್ಷ್ಮಣನು ಅವಳ ದ್ವೇಷಕ್ಕೂ ಪಾತ್ರನಾಗಿರುವನು. ಇವಳು ಅನುರಾಗದಿಂದ ಸ್ತೋತ್ರಮಾಡಬೇಕಾಗಿದ್ದರೂ, ದ್ವೇಷದಿಂದ ನಿಂದಿಸಬೇಕಾಗಿದ್ದರೂ ಅವರಲ್ಲಿ ಒಬ್ಬನನ್ನೇ ನಿರ್ದೇಶಿಸಬೇಕಲ್ಲವೆ ? ಅದನ್ನು ಬಿಟ್ಟು ಇಲ್ಲಿ "ತರುಣೌ" ಇತ್ಯಾದಿ ದ್ವಿವಚನಗಳನ್ನು ಹೇಳಿ, ಇಬ್ಬರಿಗೂ ಪ್ರಾಧಾನ್ಯವನ್ನು ಕಲ್ಪಿಸಿದುದೇಕೆ ? ಎಂದರೆ, "ಅನ್ಯೋನ್ಯಸದೃಶೌ ವೀರೌ" ಎಂಬಂತೆ, ರಾಮಲಕ್ಷ್ಮಣ ರಿಬ್ಬರೂ ಈಕೆಯ ರಾಗದ್ವೇಷಗಳೆರಡಕ್ಕೂ ಸಮಭಾಗಿಗಳಾಗಿಯೇ ಇದ್ದರೆಂದು ಸೂಚಿಸುವು ದಕ್ಕಾಗಿಯೇ ಇಲ್ಲಿ ದ್ವಿವಚನಪ್ರಯೋಗವು. ಮೊದಲು ಶೂರ್ಪಣಖಿಯು ರಾಮನ ಬಳಿಗೆ ಮೋಹಿಸಿ ಬಂದಾಗ, ಆತನು ಲಕ್ಷ್ಮಣನನ್ನು ವರ್ಣಿಸಿ ಆತನ ಬಳಿಗೆ ಕಳುಹಿಸಿದನು. ಹಾಗೆಯೇ ಲಕ್ಷ್ಮಣನೂ ಅವಳು ತನ್ನ ಬಳಿಗೆ ಬಂದಾಗ, ರಾಮನನ್ನು ವರ್ಣಿಸಿ ಆತನ ಬಳಿಗೆ ಕಳುಹಿಸಿ

ಬಲಾಢ್ಯರು ! ಬಿಳೀ ನೈದಿಲೆಯನ್ನು ಹೋಲುವ ಅಗಲವಾದ ಕಣ್ಣುಗಳುಳ್ಳ

ದನು. ಹೀಗೆ "ಉಭಯಕೂಲಸಮುತ್ಥಿತ ಶಾದ್ವಲಭ್ರಮಗತಾಗತಖಿನ್ನ ಗವೀದಶಾಂ" ಎಂಬಂತೆ, ಭ್ರಾಂತಿಯಿಂದ ಚಂಚಲಚಿತ್ತಳಾಗಿ, ಅತ್ತಿತ್ತ ತಿರುಗುತ್ತಿದ್ದುದರಿಂದ, ಶೂರ್ಪ ಣಖಿಗೆ ಅವರಿಬ್ಬರಲ್ಲಿಯೂ ಸಮಾನವಾದ ಮೋಹವುಂಟಾಗಿತ್ತೆಂದು ಸ್ಪಷ್ಟವಾಗುವುದು. ಇದರಂತೆಯೇ ರಾಮನು ಲಕ್ಷ್ಮಣನನ್ನು ಕುರಿತು, "ವಿರೂಪಯಿತುಮರ್ಹಸಿ" ಎಂದು ನಿಯಮಿಸಿದುದರಿಂದ, ಆಕೆಯ ವೈರೂಪ್ಯಕ್ಕೆ ಪ್ರೇರಕ ಕರ್ತೃವಾಗಿರುವುದರಿಂದಲೂ, ಲಕ್ಷ್ಮಣನು ಸ್ವತಃ ಕರ್ತೃವಾಗಿರುವುದರಿಂದಲೂ, "ತಾಭ್ಯಾಮುಭಾಭ್ಯಾಮಿಮಾಮವಸ್ಥಾಂ ಸಂಪ್ರಾಪ್ತಾ" ಎಂದು ಆ ಇಬ್ಬರೂ ಅವಳ ಈ ದುರವಸ್ಥೆಗೆ ಕಾರಣಭೂತರಾಗಿರುವುದರಿಂದ, ಅವರಿಬ್ಬರೂ ಅವಳ ದ್ವೇಷಕ್ಕೂ ಸಮಭಾಗಿಗಳೆಂದೂ ಸ್ಪಷ್ಟವಾಗುವುದು. ಆದುದರಿಂದ ಶೂರ್ಪಣಖಿಯು ಮೊದಲು ಅವರಿಬ್ಬರಲ್ಲಿಯೂ ತನಗಿರುವ ಮೋಹಕಾರಣವನ್ನು ಈ ಶ್ಲೋಕದಿಂದ ವಿವರಿಸುವಳು. ಹೇಗೆಂದರೆ :—

(ತರುಣೌ) ನವಯೌವನವುಳ್ಳ ಆ ರಾಮಲಕ್ಷ್ಮಣರಿಬ್ಬರೂ ತನಗೆ ಒಂದೇ ವಿಧವಾದ ಮೋಹವನ್ನು ಹುಟ್ಟಿಸಿರುವರೆಂದು ಭಾವವು. ಆದರೆ ರಾಮಲಕ್ಷ್ಮಣರಿಬ್ಬರೂ ಪುನರ್ವಸೂ ಪುಷ್ಯ ನಕ್ಷತ್ರಗಳಲ್ಲಿ ಹುಟ್ಟಿದವರಾದುದರಿಂದ, ಆ ಇಬ್ಬರ ಯೌವನವೂ ಒಂದೇ ವಿಧವಾಗಿ ಮನಸ್ಸನ್ನು ಆಕರ್ಷಿಸಿರಬಹುದು. ಯೌವನದಲ್ಲಿ ಅವರಿಬ್ಬರೂ ತಾರತಮ್ಯವಿಲ್ಲದವರಾಗಿದ್ದರೂ ಅವರ ರೂಪದಲ್ಲಿಯಾದರೂ ಹೆಚ್ಚು ಕಡಿಮೆಯಿರಬಹುದಲ್ಲವೆ ? ಈ ಕಾರಣದಿಂದಲಾದರೂ ಅವಳ ಅನುರಾಗವು ಆ ಇಬ್ಬರಲ್ಲಿ ವ್ಯತ್ಯಾಸಪಡಲಾರದೆ ? ಎಂದರೆ (ರೂಪಸಂಪನ್ನೌ) ಇಬ್ಬರೂ ಒಂದೇ ವಿಧವಾದ ರೂಪಸಂಪತ್ತಿಯುಳ್ಳವರು. ಮನ್ಮಥಾದಿಗಳು ಕೂಡ ಯಾಚಿಸಿ ಪಡೆಯುವಷ್ಟು ನಿರತಿಶಯರೂಪಸಮೃದ್ಧಿಯುಳ್ಳವರೆಂದರ್ಥವು. ಮನ್ಮಥನು "ಅಂಗಾದಂಗಾತ್ಸಂಭವಸಿ" ಎಂಬಂತೆ ತಂದೆಯಾದ ರಾಮನ ದೇಹದ ಒಂದು ಭಾಗದಲ್ಲಿ ಹುಟ್ಟಿದವನಾದುದರಿಂದ, ರಾಮನ ಅಂಗಪ್ರತ್ಯಂಗ ಸೌಷ್ಠವಗಳಲ್ಲಿ ಲೇಶಮಾತ್ರವನ್ನು ಪಡೆದಿರುವುದರಿಂದಲೇ ಅಂತಹ ರೂಪಸಂಪತ್ತಿಯಿಂದ ಪ್ರಸಿದ್ಧನಾಗಿರುವನೆಂದು ಭಾವವು ಮತ್ತು (ರೂಪಸಂಪನ್ನೌ) "ಉತ್ಪನ್ನಂ ದ್ರವ್ಯಂ ಕ್ಷಣಂ ನಿರ್ಗುಣಂ ತಿಷ್ಠತಿ" ಎಂಬ ನ್ಯಾಯದಿಂದ ಯಾವ ವಸ್ತುವಿಗಾಗಲಿ ಹುಟ್ಟಿದಾಗಲೇ ಅದಕ್ಕಿರಬೇಕಾದ ಗುಣಗಳು ಬಾರವು. ಹೀಗಿದ್ದರೂ "ರೂಪದಾಕ್ಷಿಣ್ಯಸಂಪನ್ನಃ ಪ್ರಸೂತಃ" ಎಂಬಂತೆ ಹುಟ್ಟಿದಾಗಲೇ ರೂಪದಾಕ್ಷಿಣ್ಯಾದಿ ಗುಣಸಮೃದ್ಧಿಯಿಂದ ಕೂಡಿದವರೂ ಅವರಿಬ್ಬರೇ ಎಂದು ಭಾವವು. ಮತ್ತು "ರಾಮೇತಿ ರಾಮೇತಿ ಸದೈವ ಬುದ್ಧ್ಯಾ ವಿಚಿಂತ್ಯವಾಚಾ ಬ್ರುವತೀತಮೇವ" ಎಂಬಂತೆ ಸ್ತ್ರೀಜಾತಿಯಲ್ಲಿ ಹುಟ್ಟಿದವರು ಅವರನ್ನು ನೋಡಿದಮಾತ್ರಕ್ಕೆ ಮೋಹಾಕ್ರಾಂತರಾಗಿ, ತದೇಕಧ್ಯಾನದಿಂದ ಕೂಗಿಕೊಳ್ಳತಕ್ಕ ಸದ್ರೂಪಸಮೃದ್ಧಿಯುಳ್ಳವರೆಂದರ್ಥವು ! ಹೀಗೆ ರೂಪಯೌವನವುಳ್ಳವರಾಗಿದ್ದರೂ ಕಠಿನವಾದ ಮೈಯುಳ್ಳವರಾಗಿ, ಆಲಿಂಗನಾದಿಗಳಿಗೆ ಅರ್ಹರಲ್ಲದೆ ಇರಬಹುದಲ್ಲವೆ ? ಎಂದರೆ, ಅದೂ ಇಲ್ಲವೆಂಬುದಕ್ಕಾಗಿ (ಸುಕುಮಾರೌ) ಬಹಳ ಕೋಮಲವಾದ

ವರು. ಹೀಗೆ ಇಬ್ಬರು ರಾಜಕುಮಾರರಿರುವರು. ಅವರಿಬ್ಬರೂ ನಾರುಮಡಿ

---

ಮೈಯುಳ್ಳವರು. ಅಷ್ಟು ಸುಕುಮಾರವಾದ ಮೈಯುಳ್ಳವರಿಗೆ ತಮ್ಮಲ್ಲಿ ಕಾಮಮೋಹಿತೆಯರಾಗಿ ಬಂದ ನಿನ್ನಂತಹ ಒರಟುಮೈಯುಳ್ಳ ಸ್ತ್ರೀಯರನ್ನು ತೃಪ್ತಿಪಡಿಸುವ ಶಕ್ತಿಯೆಲ್ಲಿಯದು ? ಎಂದರೆ (ಮಹಾಬಲೌ) ಮಿತಿಮೀರಿದ ಬಲವುಳ್ಳವರು. ರಾಮನು (ಸೀತಯಾ ಸಾರ್ಧಂ ವಿಜಹಾರ ಬಹೂನ್ಯತೂನ್) ಎಂಬಂತೆ ಅವಿಚ್ಛಿನ್ನವಾಗಿ ಸ್ತ್ರೀಯರನ್ನನುಭವಿಸಿದರೂ ಅವರ ಬಲವು ಕುಂದದೆಂದು ಭಾವವು. ಇದರಿಂದ ರಾಕ್ಷಸಜಾತಿಯಲ್ಲಿ ಹುಟ್ಟಿ ಒರಟು ಮೈಯುಳ್ಳ ತನ್ನಂತಹ ಸ್ತ್ರೀಯರನ್ನು ಕೂಡ ಸಮರತಿಯಿಂದ ಜಯಿಸಬಲ್ಲ ಸಾಮರ್ಥ್ಯವುಳ್ಳವರೆಂದು ಭಾವವು. ಒಂದುವೇಳೆ ಸಮುದಾಯಶೋಭೆಯಿಂದ ಹೀಗೆ ಮೋಹಕರವಾಗಿದ್ದರೂ, ಅವಯವಶೋಭೆಗಳಲ್ಲಿ ವೈಕಲ್ಯವೇನಾದರೂ ಕಾಣಬಹುದೇ ? ಎಂದರೆ, ಅದೂ ಇಲ್ಲವೆಂಬುದಕ್ಕಾಗಿ (ಪುಂಡರೀಕ ವಿಶಾಲಾಕ್ಷೌ) ಬಿಳೀ ಕಮಲದಂತೆ ತೆಳುವಾದ ಕಣ್ಣುಳ್ಳವರು. ತಮೋಗುಣೋದ್ರೇಕದಿಂದ ನಿದ್ರಾಕಷಾಯಿತಗಳಲ್ಲದೆ, ರಜೋಗುಣೋದ್ರೇಕದಿಂದ ಕೋಪಸಂರಕ್ತಗಳೂ ಅಲ್ಲದೆ, ಸತ್ವಗುಣದಿಂದ ಯಾವಾಗಲೂ ಪ್ರಸನ್ನವಾಗಿರುವ ಕಣ್ಣುಗಳುಳ್ಳವರೆಂದರ್ಥವು. ಹಾಗಿದ್ದರೆ, ಇತರಾವಯವಗಳೆಲ್ಲವನ್ನೂ ಬಿಟ್ಟು ಕಣ್ಣುಗಳ ಅಂದವನ್ನು ಮಾತ್ರವೇ ಹೇಳುವುದೇಕೆ ? ಎಂದರೆ, ಇತರಾವಯವಗಳ ಸೌಂದರ್ಯವು ಸಮೀಪಕ್ಕೆ ಹೋದಾಗಲೇ ಚೆನ್ನಾಗಿ ಪ್ರಕಾಶಿಸುವುದು. ನೇತ್ರಸೌಂದರ್ಯವಾದರೋ ದೂರದಿಂದಲೇ ಸ್ಫುಟವಾಗಿ ಕಾಣುತ್ತಿದ್ದುದರಿಂದ, ಅದೇ ತನ್ನ ದೃಷ್ಟಿಗೆ ಮೊದಲು ಬಿದ್ದುದೆಂದು ಭಾವವು. ಮತ್ತು (ಪುಂಡರೀಕವಿಶಾಲಾಕ್ಷೌ) ಎಂಬುದರಿಂದ "ಆತ್ಮಾನಂ ಮಾನುಷಂ ಮನ್ಯೇ" ಎಂಬಂತೆ ರಾಮನು ತನ್ನನ್ನು ಕೇವಲ ಮನುಷ್ಯನನ್ನಾಗಿಯೇ ತಿಳಿದುಕೊಂಡು ತನ್ನ ಪರತ್ವವನ್ನೇ ಮರೆತುಹೋಗಿದ್ದರೂ "ಯಥಾ ಕಪ್ಯಾಸಂ ಪುಂಡರೀಕಮೇವ-ಮಕ್ಷಿಣೀ" ಎಂಬ ಶ್ರುತಿಯನ್ನನುಸರಿಸಿ, ಈ ಕಣ್ಣುಗಳೇ ಈತನಲ್ಲಿ ಅಡಗಿರುವ ಪರತ್ವವನ್ನು ಪ್ರಕಾಶಪಡಿಸುವುದೆಂದು ಭಾವವು. (ವಿಶಾಲಾಕ್ಷೌ) ಬದ್ಧಮುಕ್ತನಿತ್ಯಾತ್ಮಕಗಳೆಂದು ತ್ರಿವಿಧಕೋಟಿಗಳಾದ ಉಭಯವಿಭೂತಿಗಳನ್ನೂ ಒಂದಾಗಿ ಕಟಾಕ್ಷಿಸುವಷ್ಟು ವಿಶಾಲವಾದ ಕಣ್ಣುಗಳುಳ್ಳವರೆಂದು ಭಾವವು. (ಮಹಾಬಲೌ ಪುಂಡರೀಕವಿಶಾಲಾಕ್ಷೌ) ಇವರು ತಮ್ಮ ಬಲದಿಂದ ಶತ್ರುಗಳನ್ನು ನಿಗ್ರಹಿಸಿದಮೇಲೆ, ಅವರು ಶರಣಾಗತರಾಗಿ ಬಂದು ಸ್ತುತಿಸುವಾಗ, ಅವರನ್ನು ಪ್ರಸನ್ನದೃಷ್ಟಿಯಿಂದ ಅನುಗ್ರಹಿಸತಕ್ಕವರು. (ಸುಕುಮಾರೌ ಪುಂಡರೀಕ ವಿಶಾಲಾಕ್ಷೌ) "ಸು+ಕು+ಮಾರೌ" ಎಂದರೆ, ಉತ್ತಮವಾದ ಭೂಮಿಯ ಮನ್ಮಥರೆಂದರ್ಥವು. ದೇವಜಾತಿಯಲ್ಲಿ ಮನ್ಮಥನೊಬ್ಬನೇ ಪ್ರಸಿದ್ಧನಾಗಿರುವನು. ಇವರನ್ನು ನೋಡಿದರೆ ಭೂಮಿಯಲ್ಲಿ ಇಬ್ಬರು ಮನ್ಮಥರಿರುವಂತೆಯೇ ತೋರುವುದು. ಹೀಗೆ ಇವರು ಮನ್ಮಥರಾಗಿದ್ದ ಪಕ್ಷದಲ್ಲಿ ಪುಷ್ಪಬಾಣಗಳೆಲ್ಲಿ ? ಎಂದರೆ, (ಪುಂಡರೀಕ ವಿಶಾಲಾಕ್ಷೌ) ಪುಷ್ಪಬಾಣಗಳೇ ಇವರ ಕಣ್ಣುಗಳಾಗಿ ಪರಿಣಮಿಸಿರುವುವು. ತಾವರೆಗಳೇ ಮನ್ಮಥನ ಬಾಣ

**ಯನ್ನುಟ್ಟು ಕೃಷ್ಣಾಜಿನವನ್ನು ಹೊದೆದಿರುವರು. ಕಾಡಿನಲ್ಲಿ ಸಿಕ್ಕಿದ ಹಣ್ಣು**

---

ಗಳಲ್ಲವೇ ? ಅವುಗಳೇ ಇಲ್ಲಿ ನೇತ್ರರೂಪದಿಂದಿರುವುವೆಂದು ಭಾವವು. ಇದಲ್ಲದೆ ಅವರ ಅವಯವಶೋಭೆಯು ಮಾತ್ರವೇ ನನ್ನಂತಹ ಕಾಮುಕರ ಮನಸ್ಸನ್ನು ವಶಪಡಿಸಿಕೊಳ್ಳುವು ವೆಂದೆಣಿಸಲಾಗದು. ಅವರು ತಮ್ಮ ವೇಷದಿಂದಲೂ ಕೂಡ ವಶಪಡಿಸಿಕೊಳ್ಳುತ್ತಿರುವ ರೆಂಬುದಕ್ಕಾಗಿ (ಚೀರಕೃಷ್ಣಾಜಿನಾಂಬರೌ) ಆಭರಣಗಳೊಂದೂ ಇಲ್ಲದಿದ್ದರೂ "ಇಯ-ಮಧಿಕಮನೋಜ್ಞಾ ವಲ್ಕಲೇನಾಪಿ ತನ್ವೀ" ಎಂಬಂತೆ, ಚೀರಕೃಷ್ಣಾಜಿನಗಳನ್ನು ಧರಿಸಿದ್ದರೂ ಅವರ ಸೌಂದರ್ಯವು ಕುಂದದೆ, ಮತ್ತಷ್ಟು ಶೋಭಾತಿಶಯವನ್ನೇ ತೋರುವುದೆಂದು ಭಾವವು.

ಅಥವಾ, ಖರನು ಶೂರ್ಪಣಖೆಯನ್ನು ನೋಡಿ "ನಿನಗೆ ಈ ಯವಸ್ಥೆಯನ್ನು ತಂದಿಟ್ಟ ಮಹಾಪರಾಕ್ರಮಶಾಲಿ ಯಾವನು ?" ಎಂದು ಭಯದಿಂದ ಕೇಳಲು, ಆತನ ಭಯವನ್ನು ನೀಗಿಸುವುದಕ್ಕಾಗಿಯೂ, ಅವನಿಗೆ ಪ್ರೋತ್ಸಾಹವನ್ನು ಹುಟ್ಟಿಸುವುದಕ್ಕಾಗಿಯೂ ಈ ಶ್ಲೋಕದಿಂದ ಆ ರಾಮಲಕ್ಷ್ಮಣರ ದೌರ್ಬಲ್ಯವನ್ನು ಸೂಚಿಸುವಳೆಂದೂ ಗ್ರಹಿಸಬಹುದು. ಹೇಗೆಂದರೆ, (ತರುಣೌ) "ಊನಷೋಡಶವರ್ಷಃ" "ನವಯುದ್ಧಯೋಗ್ಯತಾಮಸ್ಯ ಪಶ್ಯಾಮಿ" ಎಂಬಂತೆ, ಯುದ್ಧಕ್ಕೆ ಯೋಗ್ಯತೆಯಿಲ್ಲದವರೆಂದರ್ಥವು. ಅಥವಾ "ಯೌವನೇ ವಿಷಯೈಷಿಣಾಂ" ಎಂಬಂತೆ, ಅವರು ವಿಷಯಪ್ರವಣವಾದ ವಯಸ್ಸುಳ್ಳವರೇ ಹೊರತು, ಯುದ್ಧಯೋಗ್ಯವಾದ ವಯಸ್ಸುಳ್ಳವರಲ್ಲವೆಂದೂ ಭಾವವು. (ರೂಪಸಂಪನ್ನೌ) "ಕನ್ಯಾ ಕಾಮಯತೇ ರೂಪಂ" ಎಂಬಂತೆಯೂ, "ರೂಪೇಣ ವನಿತಾಜನಂ" ಎಂಬಂತೆಯೂ, ಸ್ತ್ರೀಯರನ್ನು ವಶಪಡಿಸಿಕೊಳ್ಳುವುದಕ್ಕಾಗಿ ತಮ್ಮ ರೂಪಾತಿಶಯವನ್ನೇ ಪ್ರಕಾಶಿಸುತ್ತ, ತಿರುಗುತ್ತಿರುವರೇ ಹೊರತು, ಪುರುಷರನ್ನು ಜಯಿಸುವ ವೀರ್ಯವುಳ್ಳವರಲ್ಲವು. ಮತ್ತು (ರೂಪಸಂಪನ್ನೌ) ಇವರಲ್ಲಿ ಹೊರಗಿನ ರೂಪಸಂಪತ್ತಿಯು ಮಾತ್ರ ತುಂಬಿರುವುದೇ ಹೊರತು ಒಳಗೆ ಯಾವ ಸಾರವೂ ಇಲ್ಲವು. (ಸುಕುಮಾರೌ) ಅತಿಕೋಮಲವಾದ ದೇಹವುಳ್ಳವ ರಾದುದರಿಂದಲೇ ಸ್ವಲ್ಪವಾದರೂ ಶ್ರಮವನ್ನು ಸಹಿಸಲಾರರು. ಈ ನಿನ್ನ ಕೋಪಸಂರಕ್ತ ಗಳಾದ ಕಣ್ಣುಗಳನ್ನು ನೋಡುವುದಕ್ಕೂ ಅಶಕ್ತರಾಗಿರುವ ಆ ರಾಜಕುಮಾರರು, ನಿನ್ನ ಅತ್ಯುಗ್ರವಾದ ಆಯುಧ ಪರಂಪರೆಗಳನ್ನು ಹೇಗೆ ತಾನೇ ಸೈರಿಸಬಲ್ಲರು ? ಒಂದುವೇಳೆ ಆಕಾರವನ್ನು ನೋಡಿದಾಗ ದುರ್ಬಲರಂತೆ ತೋರಿದರೂ, ಕಾರ್ಯದಲ್ಲಿ ಸಮರ್ಥರಾಗಿರ ಬಾರದೆ ? ಎಂದರೆ, ಅದೂ ಇಲ್ಲವೆಂಬುದಕ್ಕಾಗಿ (ಮಹಾ + ಅಬಲೌ) ಕೇವಲ ದುರ್ಬಲರು, ಒಬ್ಬ ಸ್ತ್ರೀಗಾಗಿ ರಾಜ್ಯವನ್ನು ಬಿಟ್ಟು ಬಂದಿರುವುದರಿಂದಲೇ ಅವರ ದೌರ್ಬಲ್ಯವು ವ್ಯಕ್ತ ವಾಗುವುದೆಂದರ್ಥವು. (ಪುಂಡರೀಕ ವಿಶಾಲಾಕ್ಷೌ) ಮುಂದೆ ಬರಬಹುದಾದ ಪ್ರಮಾದವನ್ನು ತಿಳಿಯದೆ ಈ ನನ್ನ ಕಿವಿಮೂಗುಗಳನ್ನು ಕುಯ್ದು ಬಿಟ್ಟಿರುವುದರಿಂದ "ತಮಗೆ ಇನ್ನೇನು ವಿಪತ್ತು ಸಂಭವಿಸುವುದೋ !" ಎಂದು ಭಯಭ್ರಾಂತರಾಗಿ ಪೇಲವವಾದ ಕಣ್ಣುಗಳಿಂದ

ಗೆಡ್ಡೆಗಳನ್ನೇ ತಿನ್ನುತ್ತಿರುವರು. ಇಂದ್ರಿಯವನ್ನು ನಿಗ್ರಹಿಸಿ ತಪಸ್ವಿಗಳಾಗಿ

---

ನಾಲ್ಕು ಕಡೆಗಳನ್ನೂ ನೋಡುತ್ತಾ, ಎವೆಮುಚ್ಚದಂತೆ ಅಗಲವಾಗಿ ಕಣ್ಣುಗಳನ್ನು ಬಿಟ್ಟುಕೊಂಡು, ಈಗಲೂ ಸುತ್ತಲೂ ನೋಡಿ ತತ್ತಳಿಸುತ್ತಿರುವರೆಂದು ಭಾವವು ಅಥವಾ ತಾವರೆಯನ್ನು ಅದರ ಸ್ಥಾನದಿಂದ ಕಿತ್ತುಹಾಕಿದ ಮೇಲೆ, ಅದು ಕ್ಷಣಕಾಲದೊಳಗಾಗಿ ಕಂದಿಹೋಗುವಂತೆ, ಅವರು ಸ್ಥಾನಭ್ರಂಶವನ್ನು ಹೊಂದಿ ಈ ವನಪ್ರದೇಶದಲ್ಲಿರುವುದರಿಂದ, ಕೇವಲ ದುರ್ಬಲರಾಗಿರುವರೆಂಬುದನ್ನು ಅವರ ಕಣ್ಣುಗಳಿಂದಲೇ ತಿಳಿಯಬಹುದೆಂದೂ ಭಾವವು. "ಒಂದುವೇಳೆ ಅವರು ಅಶಕ್ತರಾಗಿದ್ದರೂ, ತಮ್ಮ ಭಾಗ್ಯಾತಿಶಯದಿಂದ ಸೈನ್ಯವನ್ನು ಸಂಪಾದಿಸಿ ಯುದ್ಧಮಾಡಲಾರರೆ?" ಎಂದರೆ ಅದಕ್ಕೂ ಅವಕಾಶವಿಲ್ಲವೆಂಬುದಕ್ಕಾಗಿ (ಚೀರಕೃಷ್ಣಾಜಿನಾಂಬರೌ) ಉಡುವುದಕ್ಕೆ ತಕ್ಕಬಟ್ಟೆಯೂ ಇಲ್ಲದೆ ಕಾಡಿನಲ್ಲಿ ಸಿಕ್ಕಿದ ಕೃಷ್ಣಾಜಿನವನ್ನೂ ನಾರುಮಡಿಯನ್ನೂ ಉಟ್ಟು ತಿರುಗುತ್ತಿರುವವರಿಗೆ ಇನ್ನು ಸೇನೆಯೆಲ್ಲಿಯದು? ಮತ್ತು (ಚೀರಕೃಷ್ಣಾಜಿನಾಂಬರೌ) ಅವರು ಉಟ್ಟಿರುವ ಬಟ್ಟೆಯಾಗಲಿ, ಹೊದೆದಿರುವ ಬಟ್ಟೆಯಾಗಲಿ ಒಂದೇ ವಿಧವಾದುದಲ್ಲ. ಅವೂ ಪೌರುಷದಿಂದ ಸಂಪಾದಿಸಿದುವಲ್ಲ. ಸ್ಥಾವರಗಳಾದ ವೃಕ್ಷಗಳಿಂದ ಕೆಲವನ್ನೂ, ಜಂಗಮಗಳಾದ ಮೃಗಗಳಿಂದ ಕೆಲವನ್ನೂ ಯಾಚಿಸಿ, ಅವುಗಳಿಂದ ತಮ್ಮ ದೇಹವನ್ನು ಮುಚ್ಚಿಕೊಂಡು ತಿರುಗುತ್ತಿರುವರು. ಹೀಗೆ ಎಲ್ಲಾ ವಿಧದಲ್ಲಿಯೂ ದುರ್ಬಲರಾಗಿರುವ ಆ ಬಾಲಕರಿಗೆ ನೀನು ಸ್ವಲ್ಪವೂ ಅಂಜಬೇಕಾದುದಿಲ್ಲವೆಂದು ಭಾವವು.

ಅಥವಾ, ಶೂರ್ಪಣಖೆಯು ಖರನನ್ನು ರೇಗಿಸುವುದಕ್ಕಾಗಿ, ರಾಮಲಕ್ಷ್ಮಣರ ಬಲಾತಿಶಯವನ್ನೇ ಈ ಶ್ಲೋಕದಿಂದ ಹೇಳುವಳೆಂದೂ ಗ್ರಹಿಸಬಹುದು- (ತರುಣೌ) ಅವರು ಕೇವಲ ಬಾಲ್ಯವಯಸ್ಸೂ ಇಲ್ಲದೆ, ಕೇವಲ ವೃದ್ಧರೂ ಅಲ್ಲದೆ ಯುದ್ಧದಲ್ಲಿ ಉತ್ಸಾಹವನ್ನು ಹುಟ್ಟಿಸತಕ್ಕ ನವಯವ್ವನವುಳ್ಳವರು. ಮತ್ತು (ಯೌವನೇ ವಿಜಿಗೀಷೂಣಾಂ) ಎಂಬಂತೆ ಅವರಿಗೆ ಈ ವಯಸ್ಸಿನಲ್ಲಿ ಶತ್ರುಗಳನ್ನು ಗೆಲ್ಲುವುದರಲ್ಲಿಯೇ ವಿಶೇಷಾಪೇಕ್ಷೆಯುಂಟು. (ತರುಣೌ) ಇಂತಹ ವಯಸ್ಸುಳ್ಳವನೊಬ್ಬನೇ ನಿನ್ನನ್ನು ಜಯಿಸುವುದಕ್ಕೆ ಸಾಕಾಗಿರುವನು. ಅಂತವರಿಬ್ಬರೂ, ಒಬ್ಬರಿಗೊಬ್ಬರು, ಬೆಂಬಲವಾಗಿ ಬಂದಿರುವಾಗ ಹೇಳಬೇಕಾದುದೇನು? (ರೂಪಸಂಪನ್ನೌ) ಅವರ ಎದೆ, ತೋಳು ಮುಂತಾದುವುಗಳನ್ನು ನೋಡಿದ ಮಾತ್ರದಿಂದಲೇ ಯಾವ ಶತ್ರುಗಳಾದರೂ ಭಯಪಟ್ಟು ಪಲಾಯನಮಾಡುವಷ್ಟು ವೀರರಸಸೂಚಕವಾದ ಮೈಕಟ್ಟುಳ್ಳವರು. ಅಥವಾ ವೀರಸ್ವರೂಪವುಳ್ಳವರು. ಮತ್ತು (ರೂಪಸಂಪನ್ನೌ) ರೂಪವೆಂದರೆ "ರೂಪ್ಯತೇ ಅನೇನ" ಎಂಬ ವ್ಯುತ್ಪತ್ತಿಯಿಂದ, ಅಸಾಧಾರಣ ನಿರತಿಶಯರೂಪವಿಶೇಷವೆಂದು ಗ್ರಾಹ್ಯವು. ಇದರಿಂದ ಇವರ ಪರಾಕ್ರಮವನ್ನು ನಿರೂಪಿಸುವುದಕ್ಕೆ ಇವರ ಯೌವನವು ಮಾತ್ರವೇ ಸಾಧನವಲ್ಲ. ಬಾಲ್ಯದಿಂದ ರಾಮನು "ಗತ್ವಾ ಸೌಮಿತ್ರಿ ಸಹಿತೋ ನಾವಿಜಿತ್ಯ ನಿವರ್ತತೇ"

*

ಧರ್ಮಾಚರಣೆಯಲ್ಲಿರುವರು. ಅವರಿಬ್ಬರೂ ಒಡಹುಟ್ಟಿದವರು. ಅವರಿಗೆ ರಾಮ

---

ಎಂಬಂತೆ, ಲಕ್ಷ್ಮಣನೊಡನೆ ಸೇರಿ ಹೊರಟು ಜಯವನ್ನು ಹೊಂದದೆ ಹಿಂತಿರುಗುವವನಲ್ಲ. ಹೀಗೆ ಮೊದಲಿನಿಂದಲೂ ಸುಬಾಹು ಮೊದಲಾದವರನ್ನು ನಿಗ್ರಹಿಸಿರುವುದರಿಂದ ಇದುವರೆಗೆ ಶತ್ರುಸಂಹಾರದಲ್ಲಿ ವಿಶೇಷ ಪ್ರಸಿದ್ಧಿಯನ್ನು ಹೊಂದಿರುವವರೆಂದು ಭಾವವು. ಹಾಗಿದ್ದರೂ ಇವರು ಶತ್ರುನಿರಸನಕ್ಕಾಗಿ ಬಹಳ ಶ್ರಮಪಡಬೇಕಾಗುವುದಲ್ಲವೆ ? ಎಂದರೆ (ಸುಕುಮಾರೌ) ಸು + ಕು + ಮಾರೌ—ಸುಲಭವಾಗಿಯೇ ಕುತ್ಸಿತ ಜನರನ್ನು ಕೊಲ್ಲುವ ಸಾಮರ್ಥ್ಯವುಳ್ಳವರು (ಮಹಾಬಲೌ) "ಸದೇವಗಂಧರ್ವಮನುಷ್ಯಪನ್ನಗಂ ಜಗತ್ಸಶೈಲಂ ಪರಿವರ್ತಯಾಮ್ಯಹಂ" ಎಂಬಂತೆಯೂ "ಮಹೀಂ ದಹತಿ ಕೋಪೇನ" ಎಂಬಂತೆಯೂ ಪ್ರಸಿದ್ಧವಾದ ಬಾಹುಬಲವುಳ್ಳವರು. ಇಲ್ಲಿನ ಮಹಚ್ಛಬ್ದದಿಂದ ಅವರಿಗೆ ಉಪಾಯಬಲಮನೋಬಲಗಳೆರಡೂ ತುಂಬಿರುವುದೆಂದೂ ಭಾವವು. ಮತ್ತು (ಮಹಾಬಲೌ) ಬಹುಕಾಲದವರೆಗೆ ಯುದ್ಧ ಮಾಡಿದರೂ ಶ್ರಮವನ್ನುಂಟುಮಾಡದ ಬಲಾತಿಬಲಗಳೆಂಬ ವಿದ್ಯೆಗಳುಳ್ಳವರು. (ಪುಂಡರೀಕ ವಿಶಾಲಾಕ್ಷೌ) ಅತಿ ಸಂಕಟವಾದ ವನಪ್ರದೇಶದಲ್ಲಿ ಸುತ್ತುತ್ತಿದ್ದರೂ, ಅವರ ನೇತ್ರಗಳು ಸ್ವಲ್ಪವೂ ಕಂದಿಕುಂದದೆ ಬಿಳೀ ಕಮಲದಂತೆ ಉಲ್ಲಾಸದಿಂದ ಪ್ರಸನ್ನಗಳಾಗಿರುವುದರಿಂದ, ಅವರಿಗೆ ಶ್ರಮವೆಂಬುದೇ ಉಂಟಾಗದೆಂದು ಭಾವವು ಮತ್ತು (ಪುಂಡರೀಕ ವಿಶಾಲಾಕ್ಷೌ) ಯುದ್ಧಾದಿಕಾಲಗಳಲ್ಲಿಯೂ ಶತ್ರುಗಳಲ್ಲಿ ಅಲಕ್ಷ್ಯಬುದ್ಧಿಯುಳ್ಳವರಾಗಿರುವುದರಿಂದ, ಅವರ ನೇತ್ರಗಳು ಸಂಕೋಚವಿಕಾಸಾದಿ ವಿಕಾರಗಳೊಂದೂ ಇಲ್ಲದೆ, ಅರಳಿದ ತಾವರೆಯಂತೆ ಪ್ರಸನ್ನಗಳಾಗಿರುವುವೆಂದೂ ಭಾವವು. ಆದರೆ ಯುದ್ಧಸನ್ನಾಹಕ್ಕೆ ತಕ್ಕಂತೆ ಕವಚಾದಿಗಳು ಸಿದ್ಧವಾಗಿರಬೇಕಲ್ಲವೆ? ಪ್ರಮಾದವಶರಾಗಿರುವಾಗ ಶತ್ರುಗಳು ಬಂದು ಮೇಲೆಬಿದ್ದರೆ ಅವರೇನು ಮಾಡಬಲ್ಲರು ? " ಎಂದರೆ (ಚೀರಕೃಷ್ಣಾಜಿನಾಂಬರೌ) ಯುದ್ಧಸನ್ನಾಹಸೂಚಕವಾಗಿ ತಾವು ಉಟ್ಟಿರುವ ನಾರುಬಟ್ಟೆಯನ್ನೇ ಎಳೆದು ಕಟ್ಟಿಕೊಂಡು ಚರ್ಮಕವಚಗಳ ಸ್ಥಾನದಲ್ಲಿ ಕೃಷ್ಣಾಜಿನವನ್ನು ಧರಿಸಿ ನಿಂತಿರುವರಲ್ಲವೆ ? ಮತ್ತು (ಚೀರಕೃಷ್ಣಾಜಿನಾಂಬರೌ) ಕಾಡಿನಲ್ಲಿ ಅವರು ಬೇಟೆಯಾಡುತ್ತ ಸಂಚರಿಸುವರಾದುದರಿಂದ, ತದನುರೂಪವಾಗಿಯೇ ಚೀರಕೃಷ್ಣಾಜಿನಗಳನ್ನುಟ್ಟಿರುವರೇ ಹೊರತು ಬೇರೆಯಲ್ಲವು ; "ಸತ್ಯೇನ ಲೋಕಾನ್ ಜಯತಿ ದೀನಾನ್ ದಾನೇನ ರಾಘವಃ । ಗುರೂನ್ ಶುಶ್ರೂಷಯಾ ವೀರೋ ಧನುಷಾಯುಧಿ ಶಾತ್ರವಾನ್ " ಎಂಬಂತೆ, ರಾಮನು ಸುಂದರರನ್ನು ಸೌಂದರ್ಯದಿಂದಲೂ, ವೀರರನ್ನು ವೀರ್ಯದಿಂದಲೂ, ದೀನರನ್ನು ಕೃಪಾರಸದಿಂದಲೂ ವಶೀಕರಿಸುವ ಸ್ವಭಾವವುಳ್ಳವನಾದುದರಿಂದ, ಆ ರಾಜಕುಮಾರರಿಬ್ಬರೂ ಕಾಲೋಚಿತವಾಗಿ ಅವರವರಿಗೆ ತಕ್ಕ ವೇಷಚೇಷ್ಟಾದಿಗಳುಳ್ಳವರು. ಆದುದರಿಂದ ನಾನು ಅವರನ್ನು ಕೆಣಕಿ ಮೂಗು ಕುಯ್ಸಿಕೊಂಡಂತೆ, ನೀನೂ ಅಲ್ಲಿ ಹೋಗಿ ತಲೆ ಕುಯ್ಸಿಕೊಳ್ಳಬೇಕೇ ಹೊರತು ನಿನ್ನ ಪ್ರಯತ್ನ ಸಾಗದೆಂದು ಹೇಳಿ ಶೂರ್ಪಣಖೆಯು ಖರನನ್ನು ರೇಗಿಸಿದುದಾಗಿಯೂ ಈ ಶ್ಲೋಕದ ಭಾವವು (ತನಿಶ್ಲೋಕಿ).

ಲಕ್ಷ್ಮಣರೆಂದು ಹೆಸರು. ಅವರು ದಶರಥರಾಜನ ಮಕ್ಕಳು. ಅವರಿಬ್ಬರೂ ಗಂಧರ್ವರಾಜರಂತೆಯೇ ಕಾಣುವರು ಅವರಲ್ಲಿ ಸಮಸ್ತ ರಾಜಲಕ್ಷಣಗಳೂ ಸಂಪೂರ್ಣವಾಗಿ ಕಾಣುತ್ತಿರುವುವು. ಅವರು ನಿಜವಾಗಿ ಮನುಷ್ಯರೋ ಅಥವಾ ದೇವತೆಗಳೋ ಎಂಬುದನ್ನು ಊಹಿಸಿ ತಿಳಿಯುವುದಕ್ಕೂ ಸಾಧ್ಯವಿಲ್ಲ. ಅವರಿಬ್ಬರ ನಡುವೆ ಎಳಯೌವನದಿಂದ ಶೋಭಿಸುವ ರೂಪವತಿಯಾದ ಸ್ತ್ರೀಯೊಬ್ಬಳಿರುವಳು. ಅವಳೂ ಸರ್ವಾಭರಣಭೂಷಿತೆಯಾಗಿರುವಳು. ಆ ಹೆಂಗಸಿಗಾಗಿ ಅವರಿಬ್ಬರೂ ಒಂದಾಗಿ ಸೇರಿ ನನಗೆ ಈ ಅವಸ್ಥೆಯನ್ನುಂಟುಮಾಡಿಬಿಟ್ಟರು. ಅವರಿಂದಲೇ ನಾನು ಹೀಗೆ ದಿಕ್ಕಿಲ್ಲದವಳಂತೆಯೂ, ಅಸತಿಯಂತೆಯೂ ಅವಮಾನಕ್ಕೆ ಗುರಿಯಾದೆನು. ಅಣ್ಣಾ ! ಹೀಗೆ ಕೆಟ್ಟನಡತೆಯುಳ್ಳ ಆ ಮೂವರೂ ಯುದ್ಧದಲ್ಲಿ ಹತರಾದಮೇಲೆ ನೊರೆಗಟ್ಟಿದ ಅವರ ದೇಹದ ರಕ್ತವನ್ನು ಮನಸ್ತೃಪ್ತಿಯಾಗುವಂತೆ ಕುಡಿಯಬೇಕೆಂಬುದೇ ಈಗ ನನ್ನ ಮೊದಲನೆಯ ಕೋರಿಕೆಯು. ಅಣ್ಣಾ ! ಈ ನನ್ನ ಕೋರಿಕೆಯನ್ನು ನೀನೇ ಈಡೇರಿಸಿಕೊಡಬೇಕು” ಎಂದಳು. ಇದನ್ನು ಕೇಳಿದೊಡನೆ ಖರನು ಕೋಪಾವಿಷ್ಟನಾಗಿ, ಯಮಸಮಾನರಾದ ಹದಿನಾಲ್ಕು ಮಂದಿ ರಾಕ್ಷಸಾಧಿಪರನ್ನು ಕರೆಸಿ, ಮಹಾಬಲಾಢ್ಯರಾದ ಅವರೆಲ್ಲರನ್ನೂ ನೋಡಿ “ಎಲೈ ವೀರರೆ ! ಅಲ್ಲಿ ಯಾರೋ ಇಬ್ಬರು ಮನುಷ್ಯರು ಆಯುಧಧಾರಿಗಳಾಗಿ ನಾರುಮಡಿಯನ್ನುಟ್ಟು, ಕೃಷ್ಣಾಜಿನವನ್ನು ಹೊದೆದು, ಒಬ್ಬ ಸ್ತ್ರೀಯೊಡನೆ ಈ ದಂಡಕಾರಣ್ಯಕ್ಕೆ ಬಂದಿರುವರಂತೆ ! [1]ಆ ಮನುಷ್ಯರಿಬ್ಬರನ್ನೂ, ದುರಾಚಾರೆಯಾದ ಆ ಸ್ತ್ರೀಯನ್ನೂ ಕೊಂದು ಇಲ್ಲಿಗೆ ತರಬೇಕು !

---

“ನ ತಂ ಪಶ್ಯಾಮ್ಯಹಂ ಲೋಕೇ ಪರೋಕ್ಷಮಪಿ ವಾ ನರಃ | ಸ್ವಮಿತ್ರೋಽಪಿ ನಿರಸ್ತೋಽಪಿ ಯೋಽಸ್ಯ ದೋಷಮುದಾಹರೇತ್ ||” ಎಂದು ರಾಮನಿಗೆ ಮಿತ್ರನಾಗಲಿ ಶತ್ರುವಾಗಲಿ, ಪ್ರತ್ಯಕ್ಷದಲ್ಲಿಯೋ ಅಥವಾ ಪರೋಕ್ಷದಲ್ಲಿಯೋ ಆತನಮೇಲೆ ದೋಷವನ್ನು ಹೇಳುವವನೊಬ್ಬನಾದರೂ ಲೋಕದಲ್ಲಿರುವುದಾಗಿ ನನಗೆ ಕಾಣಲಿಲ್ಲ” ಎಂದು ಹೇಳಿರುವಂತೆ, ಸರ್ವಲೋಕಸ್ಪೃಹಣೀಯವಾದ ಶ್ರೀರಾಮನ ದಿವ್ಯರೂಪಗಳು, ಮಿತ್ರರಿಗಾಗಲಿ, ಶತ್ರುಗಳಿಗಾಗಲಿ ಸಮವಾಗಿಯೇ ಆನಂದಕರವಾಗಿರುವುದರಿಂದ ಶೂರ್ಪಣಖೆಯು ಅವನಿಂದ ವಿರೂಪಿತೆಯಾಗಿದ್ದರೂ ಆತನ ರೂಪಗುಣಾದಿಗಳನ್ನು ವರ್ಣಿಸುತ್ತಿರುವಳು (ಮಹೇಶ್ವರತೀರ್ಥೀಯವು).

1. ಶೇಷಧರ್ಮದಲ್ಲಿ ಭೀಷ್ಮಯುಧಿಷ್ಠಿರಸಂವಾದದಲ್ಲಿ ಭೀಷ್ಮನು “ಯಾಜ್ಞವಲ್ಕ್ಯ-ಸುತಾ ರಾಜನ್ ತ್ರಯೋ ವೈ ಲೋಕವಿಶ್ರುತಾಃ | ಚಂದ್ರಕಾಂತಮಹಾಮೇಘ ವಿಜಯಾ ಬ್ರಾಹ್ಮಣೋತ್ತಮಾಃ || ಖರಶ್ಚ ದೂಷಣಶ್ಚೇತಿ ತ್ರಿಶಿರಾ ಬ್ರಹ್ಮವಿತ್ತಮಾಃ | ಆಸನ್ ತೇಷಾಂ ಚ

ನನ್ನ ತಂಗಿಯಾದ ಈ ಶೂರ್ಪಣಖೆಯು ಅವರ ರಕ್ತವನ್ನು ಕುಡಿಯಬೇಕೆಂದಿರುವಳು. ಇವಳ ಕೋರಿಕೆಯು ನನಗೂ ಸಮ್ಮತವಾಗಿರುವುದು. ಆದುದರಿಂದ ನೀವು ನಿಮ್ಮ ಶಕ್ತಿಯನ್ನುಪಯೋಗಿಸಿ, ಆ ಮೂವರನ್ನೂ ಕೊಂದು ನನ್ನ ತಂಗಿಯ ಕೋರಿಕೆಯನ್ನು ಈಡೇರಿಸಿಕೊಡಬೇಕು" ಎಂದಾಜ್ಞಾಪಿಸಿದನು. ಇದನ್ನು ಕೇಳಿ ಆ ಹದಿನಾಲ್ಕು ಮಂದಿ ರಾಕ್ಷಸಾಧಿಪತಿಗಳೂ ಶೂರ್ಪಣಖೆಯೊಡನೆ

---

ಚ ಶಿಷ್ಯಾಶ್ಚ ಚತುರ್ದಶಸಹಸ್ರಧಾ ॥" ಎಂಬುದಾಗಿ, ಯಾಜ್ಞ್ಯವಲ್ಕ್ಯನಿಗೆ ಚಂದ್ರಕಾಂತ ಮಹಾಮೇಧ ವಿಜಯರೆಂಡು ಪ್ರಸಿದ್ಧರಾದ ಮೂವರು ಬ್ರಾಹ್ಮಣೋತ್ತಮರು ಮಕ್ಕಳಾಗಿದ್ದರು. ಬ್ರಹ್ಮಜ್ಞಾನಿಗಳಾದ ಆ ಮೂವರೂ ಶಿವಶಾಪದಿಂದ ಖರ ದೂಷಣ ತ್ರಿಶಿರರೆಂಬ ರಾಕ್ಷಸರಾದರು. ಹಾಗೆಯೇ ಅವರ ಹದಿನಾಲ್ಕುಸಾವಿರ ಮಂದಿ ಶಿಷ್ಯರೂ ರಾಕ್ಷಸರಾದರು. ಅವರಲ್ಲಿ ಮೊದಲನೆಯವನಾದ ಚಂದ್ರಕಾಂತನೆಂಬುವನೇ ಖರನು. ಅವನಿಗೆ ಶಿವನು "ತಸ್ಮಾದ್ಯಃ ಕ್ರೂರರೂಪೇಣ ದೇಹೇನ ಹರತಾಮ್ಯತಂ । ವಿಷ್ಣುರ್ದಾಶರಥಿರ್ಭೂತ್ವಾ ಮೋಕ್ಷಯಿಷ್ಯತಿ ಸುವ್ರತ ॥" ಎಂದು ದಶರಥಪುತ್ರನಾದ ರಾಮನಿಂದ ಶಾಪವಿಮೋಚನೆಯಾಗುವಂತೆ ಅನುಗ್ರಹಿಸಿದ್ದನು. ಆದುದರಿಂದ ಆತನು ಶೂರ್ಪಣಖೆಯ ಮೂಲಕವಾಗಿ ರಾಮವೃತ್ತಾಂತವನ್ನು ಕೇಳಿದಮೇಲೆ, ಆತನೇ ವಿಷ್ಣುವೆಂಬುದನ್ನು ತಿಳಿದು, ತಾನು ಸಪರಿವಾರನಾಗಿ ರಾಮನಿಂದ ಮೃತಿಹೊಂದಬೇಕೆಂದಪೇಕ್ಷಿಸಿ, ಹೊರಗೆ ತನ್ನ ತಂಗಿಯ ಮನಸ್ಸಮಾಧಾನಾರ್ಥವಾಗಿ ತನ್ನ ಕಡೆಯ ರಾಕ್ಷಸರನ್ನು ಯುದ್ಧಸನ್ನದ್ಧರಾಗುವಂತೆ ನಿಯಮಿಸಿದನು ಎಂದು ಹೇಳಿರುವುದರಿಂದ ಈತನ ವಾಕ್ಯಗಳು ಹೊರಕ್ಕೆ ಕಠಿನವಾಗಿ ತೋರುತ್ತಿದ್ದರೂ, ಅವುಗಳ ಅಂತರಾಶಯವು ಸೌಮ್ಯರೂಪವಾಗಿಯೇ ಇರುವುದೆಂದು ಗ್ರಹಿಸಬೇಕು. ಹೇಗೆಂದರೆ:—

ಇಲ್ಲಿ "ತೌ ಹತ್ವಾ ತಾಂ ಚ ದುರ್ವೃತ್ತಾಮುಪಾವರ್ತಿತುಮರ್ಹಥ । ಇಯಂ ಚ ರುಧಿರಂ ತೇಷಾಂ ಭಗಿನೀ ಮಮ ಪಾಸ್ಯತಿ ॥ ಮನೋರಥೋಽಯಮಿಷ್ಟೋಽಸ್ಯಾ ಭಗಿನ್ಯಾ ಮಮ ರಾಕ್ಷಸಾಃ । ಶೀಘ್ರಂ ಸಂಪಾದ್ಯತಾಂ ತೌ ಚ ಪ್ರಮಥ್ಯ ಸ್ವೇನ ತೇಜಸಾ ॥" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ, (ರಾಕ್ಷಸಾಃ) ಎಲೈ ರಾಕ್ಷಸರೆ! (ಇಯಂ ಭಗಿನೀ) ಈ ನನ್ನ ತಂಗಿಯು, (ತೇಷಾಂ) ಆ ಸೀತಾರಾಮಲಕ್ಷ್ಮಣರ ಮುಂದೆ (ಪ್ರಮಥ್ಯ) ನನ್ನನ್ನು ಕೊಂದು, (ಮಮ ರುಧಿರಂ ಪಾಸ್ಯತಿ) ನನ್ನ ರಕ್ತವನ್ನೇ ಕುಡಿಯುವವಳಾಗಿರುವಳು. ಆದುದರಿಂದ ನೀವು ಹೋಗಿ (ಸ್ವತೇಜಸಾ) ನಿಮ್ಮ ವೀರ್ಯದಿಂದ (ಶೀಘ್ರೇಣ) ಶೀಘ್ರವಾಗಿ (ತೌ) ಆ ರಾಮಲಕ್ಷ್ಮಣರನ್ನೂ, (ದುರ್ವೃತ್ತಾಂ) ದುರ್ಲಭವಾದ ನಡತೆಯುಳ್ಳ (ತಾಂ) ಸೀತೆಯನ್ನೂ (ಹತ್ವಾ) ತಿಳಿದು, ಇಲ್ಲಿ 'ಹನ' ಧಾತುವಿಗೆ ಜ್ಞಾನಾರ್ಥವನ್ನು ಹೇಳಬೇಕು. (ಅಪಾವರ್ತಿತುಮರ್ಹಥ) ಹಿಂತಿರುಗಿ ಬನ್ನಿರಿ" ಎಂದು ಖರನು ಸೌಮ್ಯವಾಗಿ ಹೇಳಿರುವಂತೆ ಅರ್ಥಾಂತರವನ್ನು ಗ್ರಹಿಸಬೇಕು. "ಶೂರ್ಪಣಖೆಯ ಮನಸ್ಸಂತೋಷಾರ್ಥವಾಗಿ ನೀವು ಸುಮ್ಮನೆ ಅಲ್ಲಿಗೆ ಹೋಗಿಬನ್ನಿರಿ" ಎಂದು ಭಾವವು.

ಹೊರಟರು. ಅವಳೂ ಇವರಿಗೆ ದಾರಿಯನ್ನು ತೋರಿಸುತ್ತ ಮುಂದೆ ಹೊರಟಳು. ಆ ರಾಕ್ಷಸರೆಲ್ಲರೂ ತೀಕ್ಷ್ಣವಾದ ಬಾಣಗಳನ್ನು ಹಿಡಿದು ವಾಯುಪ್ರೇರಿತವಾದ ಮೇಘಪರಂಪರೆಯಂತೆ ಅತಿವೇಗದಿಂದ ರಾಮನಿರುವ ಸ್ಥಳಕ್ಕೆ ಬರುತ್ತಿದ್ದರು. ಇಷ್ಟರಲ್ಲಿಯೇ ತಮ್ಮನ್ನು ನೋಡಿ ಇದಿರುಗೊಂಡು ಬರುತ್ತಿರುವ ಮಹಾತೇಜಸ್ವಿಯಾದ ರಾಮನನ್ನು ಕಂಡು, ಕಾಡಾನೆಗಳು ಉರಿಯುವ ಕಾಡುಗಿಚ್ಚನ್ನು ಕಂಡು ಹೆದರುವಂತೆ ನಡುಗಿದವರಾಗಿ, ಆಗಲೇ ಆತನನ್ನಿದಿರಿಸಲಾರದೆ ಕ್ಷಣ ಕಾಲದವರೆಗೆ ಸ್ತಬ್ಧರಾಗಿ ನಿಂತಿದ್ದರು.

ಇಲ್ಲಿಗೆ ಹತ್ತೊಂಬತ್ತನೆಯ ಸರ್ಗವು.

---

ರಾಮನು ಆ ಹದಿನಾಲ್ಕುಮಂದಿ ರಾಕ್ಷಸಪ್ರಧಾನರನ್ನೂ ಕೊಂದುದು. ಶೂರ್ಪಣಖೆಯು ಭಯಪಟ್ಟು ಖರನ ಬಳಿಗೆ ಹಿಂದಿರುಗಿ ಹೋದುದು.

ಆಮೇಲೆ ಶೂರ್ಪಣಖೆಯು ರಾಮಾಶ್ರಮಕ್ಕೆ ಬಂದು, ತನ್ನ ಸಂಗಡ ಬಂದ ರಾಕ್ಷಸರಿಗೆ ಸೀತೆಯನ್ನೂ ರಾಮಲಕ್ಷ್ಮಣರನ್ನೂ ತೋರಿಸಿದಳು. ಆ ರಾಕ್ಷಸರೆಲ್ಲರೂ ಪರ್ಣಶಾಲೆಯಲ್ಲಿ ಸೀತಾಸಮೇತನಾಗಿ ಕುಳಿತಿರುವ ರಾಮನನ್ನೂ ಲಕ್ಷ್ಮಣನನ್ನೂ ಕಂಡರು. ಇಷ್ಟರಲ್ಲಿ ರಾಮನು, ಶೂರ್ಪಣಖೆಯೊಡನೆ ರಾಕ್ಷಸರು ಬರುತ್ತಿರುವುದನ್ನು ಕಂಡು, ತಮ್ಮನಾದ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣಾ! ನೀನು ಸ್ವಲ್ಪಕಾಲದವರೆಗೆ ಈ ಸೀತೆಯನ್ನು ನೋಡಿಕೊಳ್ಳುತ್ತಿರು! ನಾನು ಈ ಶೂರ್ಪಣಖೆಯೊಡನೆ ಬಂದಿರುವ ರಾಕ್ಷಸರನ್ನು ಕೊಂದು ಹಾಕಿ ಬರುವೆನು" ಎಂದು ಹೇಳಿ, ಧರ್ಮಾತ್ಮನಾದ ಆತನು ಚಿನ್ನದ ಕಟ್ಟುಳ್ಳ ತನ್ನ ಬಿಲ್ಲಿಗೆ ನಾಣೇರಿಸಿ, ಇದಿರಾಗಿ ಬರುತ್ತಿದ್ದ ರಾಕ್ಷಸರನ್ನು ನೋಡಿ "ಎಲೈ! ನಾವು ದಶರಥರಾಜನ ಮಕ್ಕಳು. ನಾವಿಬ್ಬರೂ ಸಹೋದರರು. ನಮಗೆ ರಾಮಲಕ್ಷ್ಮಣರೆಂದು ಹೆಸರು. ಇವಳನ್ನು ಸೀತೆಯೆನ್ನುವರು. ಏನೋ ಒಂದು ಕಾರಣಾಂತರದಿಂದ, ಅಬಲೆಯಾದ ಇವಳನ್ನೂ ಕರೆದುಕೊಂಡು ದುರ್ಗಮವಾದ ಈ ದಂಡಕಾರಣ್ಯಕ್ಕೆ ಬಂದಿರುವೆವು. ನಾವೆಲ್ಲರೂ ಫಲಮೂಲಾದಿಗಳನ್ನು

ತಿನ್ನುತ್ತ ಜಿತೇಂದ್ರಿಯರಾಗಿ, ತಪೋನಿರತರಾಗಿ ಇಲ್ಲಿ ಧರ್ಮವನ್ನಾಚರಿಸುತ್ತಿರುವೆವು. ಹೀಗಿರುವ ನಮ್ಮನ್ನು ನೀವೇಕೆ ಹಿಂಸಿಸುವಿರಿ? ನಾನಾದರೋ ಈಗ ಮಹರ್ಷಿಗಳ ಆಜ್ಞೆಯಿಂದ ಋಷಿಕಂಟಕರಾಗಿರುವ ಪಾಪಾತ್ಮರಾದ ನಿಮ್ಮಂಥವರನ್ನು ಕೊಲ್ಲುವುದಕ್ಕಾಗಿಯೇ ಧನುರ್ಬಾಣಗಳನ್ನು ಹಿಡಿದು ಇಲ್ಲಿಗೆ ಬಂದಿರುವೆನು. ಎಲೈ ದುಷ್ಟ ರಾಕ್ಷಸರೆ! ಅಲ್ಲಿಯೇ ನಿಲ್ಲಿರಿ! ದುರ್ಬುದ್ಧಿಯಿಂದ ಬಂದು ಮೇಲೆ ಬೀಳಬೇಡಿರಿ! ನಿಮಗೆ ಪ್ರಾಣದಮೇಲೆ ಆಸೆಯಿದ್ದರೆ ಓಡಿಹೋಗಬಹುದು" ಎಂದನು. ಬ್ರಾಹ್ಮಣಘಾತುಕರಾದ ಆ ಹದಿನಾಲ್ಕುಮಂದಿ ರಾಕ್ಷಸರೂ, ಹೀಗೆ ಮೃದುವಾಕ್ಯಗಳಿಂದಲೇ ಮರ್ಮಭೇದಕವಾಗಿ ಮಾತಾಡುತ್ತಿರುವ ರಾಮನನ್ನು ನೋಡಿ ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿದ್ದರು. ಅಪೂರ್ವ ಪರಾಕ್ರಮವುಳ್ಳ ರಾಮನೂ ಕೂಡ, ಭಯಂಕರಸ್ವರೂಪರಾದ ಆ ರಾಕ್ಷಸರನ್ನು ನೋಡಿ ಕೋಪದಿಂದ ಜ್ವಲಿಸುತ್ತಿದ್ದನು. ಆ ರಾಕ್ಷಸರು ಕೈಯಲ್ಲಿ ಶೂಲವನ್ನು ಹಿಡಿದು ಕುಪಿತರಾಗಿ ರಾಮನನ್ನು ನೋಡಿ [1]"ನಮ್ಮ ಪ್ರಭುವಾದ, ಮಹಾತ್ಮನಾದ

---

1. ಇಲ್ಲಿ "ಕ್ರೋಧಮುತ್ಪಾದ್ಯ ನೋ ಭರ್ತುಃ ಖರಸ್ಯ ಸುಮಹಾತ್ಮನಃ । ತ್ವಮೇವ ಹಾಸ್ಯಸೇ ಪ್ರಾಣಾನದ್ಯಾಸ್ಮಾಭಿರ್ಹತೋ ಯುಧಿ ॥ ಕಾ ಹಿ ತೇ ಶಕ್ತಿರೇಕಸ್ಯ ಬಹೂನಾಂ ರಣಮೂರ್ಧನಿ । ಅಸ್ಮಾಕಮಗ್ರತಸ್ಥಾತುಂ ಕಿಂ ಪುನರ್ಯೋದ್ಧುಮಾಹವೇ ॥ ಏಹಿ ಬಾಹುಪ್ರಯುಕ್ತೈರ್ನಃ ಪರಿಘೈಶ್ಶೂಲಪಟ್ಟಸೈಃ । ಪ್ರಾಣಾಂಸ್ತ್ಯಕ್ಷ್ಯಸಿ ವೀರ್ಯಂ ಚ ಧನುಶ್ಚ ಕರಪೀಡಿತಂ ।" ಎಂದು ಮೂಲವು. ಇದಕ್ಕೂ ಸೌಮ್ಯರೂಪವಾದ ವಾಸ್ತವಾರ್ಥವೇನೆಂದರೆ, (ಸುಮಹಾತ್ಮನಃ) ದೊಡ್ಡ ದೇಹವುಳ್ಳ (ಭರ್ತುಃ ಖರಸ್ಯ) ನಮ್ಮೊಡೆಯನಾದ ಖರನಿಗೆ (ಕ್ರೋಧಮುತ್ಪಾದ್ಯ) ಕೋಪವನ್ನು ಹುಟ್ಟಿಸಿ, (ಅಸ್ಮಾಭಿಃ) ನಮ್ಮಿಂದ (ಹತಃ) ಹೊಡೆಯಲ್ಪಟ್ಟರೂ, (ತ್ವಂ) ನೀನು (ಪ್ರಾಣಾನ್ ನೋಹಾಸ್ಯಸ ಏವ) ಪ್ರಾಣಗಳನ್ನು ಬಿಡುವವನಲ್ಲವೆಂಬುದೇ ನಿಜವು. ಏಕೆಂದರೆ, (ರಣಮೂರ್ಧನಿ) ರಣಾಗ್ರದಲ್ಲಿ (ಬಹೂನಾಮಪ್ಯಸ್ಮಾಕಂ) ನಾವು ಅನೇಕರಾಗಿದ್ದರೂ, (ಏಕಸ್ಯ ತೇ ಅಗ್ರತಸ್ಸ್ಥಾತುಂ ಕಾ ಶಕ್ತಿಃ) ನಿನ್ನ ಮುಂದೆ ನಿಲ್ಲುವುದಕ್ಕೆ ಶಕ್ತಿಯೆಲ್ಲಿಯದು? ಆದುದರಿಂದ (ಬಾಹುಪ್ರಯುಕ್ತೈಃ ಪರಿಘೈಶ್ಶೂಲಪಟ್ಟಸೈಃ) ನಮ್ಮ ಬಾಹುಪ್ರಯುಕ್ತಗಳಾದ ಪರಿಘಾದ್ಯಾಯುಧಗಳೊಡನೆಯೇ (ಅಸ್ಮಾಕಂ ಪ್ರಾಣಾನ್ ವೀರ್ಯಂ ಚ ತ್ಯಕ್ಷ್ಯಸಿ) ಇಲ್ಲಿ 'ತ್ಯಕ್ಷ್ಯಸಿ' ಎಂಬ ಕ್ರಿಯಾಪದಕ್ಕೆ ಪ್ರೇರಕಾರ್ಥವನ್ನು ಹೇಳಿಕೊಳ್ಳಬೇಕು. ನಮ್ಮ ಪ್ರಾಣವೀರ್ಯಾದಿಗಳೆಲ್ಲವನ್ನೂ ನೀಗಿಸುವೆ. ಆದುದರಿಂದ (ಏಹಿ) ಸಂದೇಹವಿಲ್ಲದೆ ಮುಂದೆ ಬಾ ಎಂದು ಸಂಬಂಧವನ್ನು ಕಲ್ಪಿಸಬೇಕು. ನಿನ್ನಿಂದ ನಾವು ಹಿಂತಿರುಗಿ ಹೋದರೆ, ನಮಗೆ ಖರನಿಂದ ವಧವುಂಟಾಗುವುದರಿಂದ, ನಿನ್ನ ಕೈಯಿಂದಲೇ ನಾವು ಹತರಾಗುವುದು ಮೇಲೆಂದು ಭಾವವು.

ಖರನಿಗೆ ಕೋಪವನ್ನು ಹುಟ್ಟಿಸಿದಮೇಲೆ ಇನ್ನು ನೀನು ಬದುಕುವುದೆಂದರೇನು ? ಈಗಿನ ಯುದ್ಧದಲ್ಲಿಯೇ ನೀನು ನಮ್ಮಿಂದ ಹತನಾಗಿ ಪ್ರಾಣವನ್ನು ಬಿಡುವೆ ! ಇದರಮೇಲೆ ನೀನು ಏಕಾಕಿಯಾಗಿರುವೆ ! ನಾವು ಬಹಳ ಮಂದಿಯಿರುವೆವು. ಯುದ್ಧದಲ್ಲಿ ನೀನೊಬ್ಬನು ನಮ್ಮೆಲ್ಲರ ಮುಂದೆ ನಿಲ್ಲಬಲ್ಲೆಯಾ ? ಮುಂದೆ ನಿಲ್ಲುವುದಕ್ಕೂ ಶಕ್ತಿಯಿಲ್ಲದ ನಿನಗೆ ಇನ್ನು ಯುದ್ಧದಾಸೆಯೇಕೆ ? ಅಥವಾ ಹಾಗೆ ನಿನಗೆ ಆಸೆಯಿದ್ದರೆ ಬಂದು ನಿಲ್ಲು ! ಇದೋ ! ನಮ್ಮ ಕೈಯಲ್ಲಿರುವ ಪರಿಘಪಟ್ಟಸಶೂಲಾದ್ಯಾಯುಧಗಳನ್ನು ನೋಡು ! ನಮ್ಮ ಬಾಹುಪ್ರಯುಕ್ತ ಗಳಾದ ಈ ಆಯುಧಗಳು ನಿಮಿಷಮಾತ್ರದಲ್ಲಿ ನಿನ್ನ ವೀರ್ಯವನ್ನಡಗಿಸಿ, ನಿನ್ನ ಕೈಯಲ್ಲಿರುವ ಧನುಸ್ಸನ್ನು ಖಂಡಿಸಿ, ನಿನ್ನ ಪ್ರಾಣವನ್ನೂ ನೀಗಿಸುವುವು" ಎಂದು ಹೇಳುತ್ತ, ಆ ರಾಕ್ಷಸರೆಲ್ಲರೂ ತಮ್ಮ ಕೈಯಲ್ಲಿದ್ದ ಶೂಲಗಳನ್ನು ಏಕಕಾಲ ದಲ್ಲಿ ರಾಮನ ಮೇಲೆ ಪ್ರಯೋಗಿಸಿದರು. ರಾಮನು ಆ ಹದಿನಾಲ್ಕು ಶೂಲ ಗಳನ್ನೂ ಚಿನ್ನದ ಹಿಡಿಗಳುಳ್ಳ ಅಷ್ಟೇ ಬಾಣಗಳಿಂದ ನಡುದಾರಿಯಲ್ಲೇ ಕತ್ತರಿಸಿ ಬಿಟ್ಟನು. ಆಮೇಲೆ ಮಹಾತೇಜಸ್ವಿಯಾದ ರಾಮನು ಕೋಪಾವಿಷ್ಟನಾಗಿ, ಸೂರ್ಯನಂತೆ ಜ್ವಲಿಸುತ್ತಿರುವ ತೀಕ್ಷ್ಣವಾದ ಬೇರೆ ಹದಿನಾಲ್ಕು ಬಾಣಗಳನ್ನು ತೆಗೆದುಕೊಂಡು, ಕಲ್ಲುಗಳನ್ನೂ ಭೇದಿಸುವಂತಿರುವ ಆ ಬಾಣಗಳನ್ನು ಧನುಸ್ಸಿ ನಲ್ಲಿ ಸಂಧಾನಮಾಡಿ, ಆಕರ್ಣಾಂತವಾಗಿ ಎಳೆದು, ಇಂದ್ರನು ವಜ್ರಾಯುಧ ವನ್ನು ಪ್ರಯೋಗಿಸುವಂತೆ ಆ ರಾಕ್ಷಸರಿಗೆ ಗುರಿಯಿಟ್ಟು ಹೊಡೆದನು. ಚಿನ್ನದ ಹಿಡಿಗಳಿಂದಲೂ, ಚಿನ್ನದ ಕಟ್ಟುಗಳಿಂದಲೂ ಅಲಂಕರಿಸಲ್ಪಟ್ಟು, ಅಗ್ನಿಯಂತೆ ಜ್ವಲಿಸುತ್ತಿರುವ ಆ ಬಾಣಗಳು, ರಾಕ್ಷಸರೆಲ್ಲರ ಎದೆಯನ್ನೂ ಸೀಳಿಕೊಂಡು, ಅವರ ಬೆನ್ನಿನಲ್ಲಿ ಹೊರಟು ರಕ್ತದಿಗ್ಧಗಳಾಗಿ, ಸಿಡಿಲಿನಂತೆ ಮೊಳಗುತ್ತ ನೆಲದ ಮೇಲೆ ಬಿದ್ದು, ಭೂಮಿಗೂ ನಾಟಿಕೊಂಡುವು. ಆಕ್ಷಣವೇ ರಾಕ್ಷಸರೆಲ್ಲರೂ ಸೀಳಿದ ಎದೆಯುಳ್ಳವರಾಗಿ, ಅಂಗಾಂಗಗಳಲ್ಲಿಯೂ ರಕ್ತಪ್ರವಾಹವನ್ನು ಸುರಿಸುತ್ತ. ಬುಡವನ್ನು ಕಡಿದ ಮರದಂತೆ ವಿಕೃತಾಕಾರದಿಂದ ನೆಲದಲ್ಲಿ ಬಿದ್ದು ಪ್ರಾಣವನ್ನು ಬಿಟ್ಟರು. ಹೀಗೆ ಸತ್ತುಬಿದ್ದ ತನ್ನ ಕಡೆಯ ರಾಕ್ಷಸರನ್ನು ನೋಡಿ ಶೂರ್ಪಣಖೆಯು ಕೋಪದಿಂದ ಮೈತಿಳಿಯದವಳಾಗಿ, ಹಿಂದುಮುಂದುತೋರದೆ, ಭಯಗ್ರಸ್ತೆಳಾಗಿ ವಿಕಟಸ್ವರದಿಂದ ಕೂಗಿಡುತ್ತಿದ್ದಳು. ಹೀಗೆ ಆ ರಾಕ್ಷಸಿಯು ಅರಚಿಕೊಳ್ಳುತ್ತ ಅತಿವೇಗದಿಂದ ಓಡಿ, ಪುನಃ ಖರನ ಬಳಿಗೆ ಬಂದು ಮುಂದೆ ನಿಂತಳು. ಇಷ್ಟರಲ್ಲಿ

ಅವಳ ಕಿವಿಮೂಗುಗಳ ಗಾಯದ ರಕ್ತವು ಒಣಗಿ ಗಡ್ಡೆಕಟ್ಟಿದ್ದುದರಿಂದ, ಅಲ್ಲಲ್ಲಿ ಅಂಟುಗಟ್ಟಿದ ಆನೆಬೇಲದಮರದ ಕೊಂಬೆಯಂತೆ ಕಾಣುತ್ತಿದ್ದಳು. ಅಲ್ಲಿ ಆ ರಾಕ್ಷಸಿಯು ಖರನ ಮುಂದೆ ನಿಂತು, ದುಃಖದಿಂದ "ಹೋ!" ಎಂದು ಗೋಳಿಡುತ್ತಾ, ಕಣ್ಣುಗಳಲ್ಲಿ ನೀರನ್ನು ಸುರಿಸಿ, ಕಂದಿದ ಮುಖವುಳ್ಳವಳಾಗಿದ್ದಳು. ಹೀಗೆ ಹದಿನಾಲ್ಕುಮಂದಿ ರಾಕ್ಷಸಪ್ರಧಾನರೂ ರಾಮನಿಂದ ಹತರಾದುದನ್ನು ನೋಡಿದೊಡನೆ, ಶೂರ್ಪಣಖೆಯು ಓಡಿಬಂದು, ಆ ಯುದ್ಧದಲ್ಲಿ ನಡೆದ ಅತ್ಯಾಹಿತಗಳೆಲ್ಲವನ್ನೂ ಖರನಿಗೆ ಕ್ರಮವಾಗಿ ವಿವರಿಸಿ ತಿಳಿಸಲಾರಂಭಿಸಿದಳು.

ಇಲ್ಲಿಗೆ ಇಪ್ಪತ್ತನೆಯ ಸರ್ಗವು.

---

{ ಶೂರ್ಪಣಖೆಯು ಹದಿನಾಲ್ಕುಮಂದಿ ರಾಕ್ಷಸಪ್ರಧಾನರ ವಧಕ್ರಮವನ್ನೂ ಖರನಿಗೆ ತಿಳಿಸಿದುದು. }

ಹೀಗೆ ಪುನಃ ತನ್ನ ಮುಂದೆ ಬಿದ್ದು ಗೋಳಿಡುತ್ತಿರುವ ತಂಗಿಯಾದ ಶೂರ್ಪಣಖೆಯನ್ನು ನೋಡಿ, ಖರನು ಕುಪಿತನಾಗಿ, ತಮ್ಮ ವಂಶನಾಶಕ್ಕಾಗಿಯೇ ಹುಟ್ಟಿರುವ ಆಕೆಯನ್ನು ಕುರಿತು, ಸಮಾಧಾನವಾಕ್ಯಗಳಿಂದ "ಎಲೆ ತಂಗಿ! ಇದೇನು? ನಿನ್ನ ಇಷ್ಟಸಿದ್ಧಿಗಾಗಿ ರಕ್ತಪಾಯಿಗಳಾದ ಅನೇಕ ರಾಕ್ಷಸವೀರರನ್ನು ಈಗಲೇ ನಿಯಮಿಸಿ ಕಳುಹಿಸಿದೆನಲ್ಲವೆ! ಇನ್ನೂ ನೀನು ಅಳುವುದೇಕೆ! ನಾನು ಈಗ ಕಳುಹಿಸಿದ ರಾಕ್ಷಸರೆಲ್ಲರೂ ನನ್ನಲ್ಲಿ ನಿಜವಾದ ಭಕ್ತಿಯುಳ್ಳವರು, ನನ್ನಲ್ಲಿ ಬಹಳ ಅನುರಾಗವುಳ್ಳವರು. ನನಗೆ ಯಾವಾಗಲೂ ಶ್ರೇಯಸ್ಸನ್ನು ಕೋರತಕ್ಕವರು. ಎಂತಹ ಶತ್ರುಗಳನ್ನಾದರೂ ಕೊಲ್ಲಬಲ್ಲವರು. ಅವರನ್ನು ಬೇರೆ ಯಾರೂ ಇದಿರಿಸಲಾರರು. ಅವರು ಎಂದಿಗೂ ನನ್ನ ಮಾತನ್ನು ನಡೆಸದಿರಲಾರರು. ಹೀಗಿದ್ದರೂ ನೀನು ಅವರನ್ನು ಬಿಟ್ಟು ಇಲ್ಲಿಗೆ ಬಂದು ಹೀಗೆ ಅಳುವುದೇಕೆ? ಹಾವಿನಂತೆ ನೆಲದ ಮೇಲೆ ಬಿದ್ದು ನೀನು ಹಾಹಾಕಾರದಿಂದ ಕೂಗಿ ಹೊರಳುತ್ತಿರುವೆಯಲ್ಲಾ! ನಿನ್ನನ್ನು ಕಾಪಾಡತಕ್ಕ ನಾನಿರುವಾಗಲೂ ದಿಕ್ಕಿಲ್ಲದವಳಂತೆ ನೀನು ಅಳುವುದೆಂದರೇನು? ಏಳೇಳು! ಹೆದರಬೇಡ! ಮನಸ್ಸಿ

ನಲ್ಲಿ ಕಳವಳವನ್ನು ಬಿಡು!" ಎಂದನು. ಹೀಗೆ ಖರನು ಮೃದುವಾಕ್ಯಗಳಿಂದ ಸಮಾಧಾನಪಡಿಸುತ್ತಿದ್ದರೂ, ಶೂರ್ಪಣಖೆಯು ದುಃಖವನ್ನು ತಡೆಯಲಾರದೆ ಸೆರಗಿನಿಂದ ಕಣ್ಣೀರನ್ನೊರೆಸಿಕೊಂಡು ಅಣ್ಣನಾದ ಖರನನ್ನು ಕುರಿತು, "ಅಣ್ಣಾ! ಇದಕ್ಕೆ ಮೊದಲು ನಾನು ಕಿವಿಮೂಗುಗಳನ್ನು ಹೋಗಲಾಡಿಸಿಕೊಂಡಾಗ, ಆ ರಕ್ತದೊಡನೆಯೇ ಬಂದು ನಿನ್ನಲ್ಲಿ ನನಗುಂಟಾದ ಅವಮಾನವನ್ನು ತಿಳಿಸಿಕೊಂಡೆನು. ನೀನೂ ನನ್ನನ್ನು ಸಮಾಧಾನಪಡಿಸಿ, ನನಗಾಗಿ ಆ ರಾಮಲಕ್ಷ್ಮಣರನ್ನು ಕೊಲ್ಲಬೇಕೆಂದು ಹದಿನಾಲ್ಕುಮಂದಿ ರಾಕ್ಷಸ ವೀರರನ್ನು ಕಳುಹಿಸಿದೆ. ಅವರೆಲ್ಲರೂ ಕೈಯಲ್ಲಿ ಶೂಲಪಟ್ಟಸಾದ್ಯಾಯುಧಗಳನ್ನು ಹಿಡಿದು ರಾಮನನ್ನಿದಿರಿಸಿದರು. ಆದರೇನು? ವೀರನಾದ ರಾಮನು ಮರ್ಮಭೇದಕಗಳಾದ ಬಾಣಗಳಿಂದ ಯುದ್ಧದಲ್ಲಿ ಅವರೆಲ್ಲರನ್ನೂ ಹೊಡೆದು ಕೊಂದುಬಿಟ್ಟನು. ಅವರೆಲ್ಲರೂ ಮಹಾಬಲಾಢ್ಯರಾಗಿದ್ದರೂ ಕ್ಷಣಮಾತ್ರದಲ್ಲಿ ಹತರಾಗಿ ಬಿದ್ದುದನ್ನೂ ರಾಮನ ಅಸಾಧಾರಣ ಪರಾಕ್ರಮವನ್ನೂ ನೋಡಿ ನನಗೆ ಬಹಳ ಭಯವುಂಟಾಗಿರುವುದು. ಈಗ ನನ್ನ ಭಯಕ್ಕೂ ದುಃಖಕ್ಕೂ ಪಾರವೇ ಇಲ್ಲದಿರುವುದು. ಎಲ್ಲೆಲ್ಲಿ ನೋಡಿದರೂ ರಾಮನೇ ನನ್ನ ಕಣ್ಣಿಗೆ ಬೀಳುವಂತೆ ನನಗೆ ಮಹಾಭೀತಿಯುಂಟಾಗಿರುವುದು. ಅದಕ್ಕಾಗಿ ಪುನಃ ನಿನ್ನಲ್ಲಿಯೇ ಬಂದು ಮರೆಹೊಕ್ಕಿರುವೆನು. ದುಃಖವೆಂಬ ಮೊಸಳೆಗಳಿಂದಲೂ, ಭಯವೆಂಬ ತರಂಗಪರಂಪರೆಗಳಿಂದಲೂ ಕೂಡಿದ ಶೋಕವೆಂಬ ಮಹಾಸಮುದ್ರದಲ್ಲಿ ನಾನು ಮುಳುಗಿಹೋಗುತ್ತಿರುವೆನು. ಹೀಗೆ ಮುಳುಗಿಹೋಗುತ್ತಿರುವ ನನ್ನನ್ನು ಉದ್ಧರಿಸಲಾರೆಯಾ! ಅಯ್ಯೋ! ನನ್ನನ್ನು ಹಿಂಬಾಲಿಸಿಬಂದ ರಾಕ್ಷಸರೆಲ್ಲರೂ ರಾಮಬಾಣದಿಂದ ಹತರಾಗಿ ಬಿದ್ದುಹೋದರಲ್ಲಾ? ಎಲೈ ರಾಕ್ಷಸೋತ್ತಮನೆ! ನಿನಗೆ ನಿಜವಾಗಿ ನನ್ನಲ್ಲಿ ದಯೆಯಿದ್ದರೆ, ಮತ್ತು ಆ ರಾಕ್ಷಸರಲ್ಲಿಯೂ ನಿನಗೆ ನಿಜವಾದ ವಿಶ್ವಾಸವಿದ್ದರೆ, ನೀನೂ ರಾಮನನ್ನಿದಿರಿಸಬಲ್ಲ ಶಕ್ತಿಯುಳ್ಳವನಾಗಿದ್ದರೆ, ಈಗಲೇ ದಂಡಕಾರಣ್ಯಕ್ಕೆ ಹೊರಟು ರಾಕ್ಷಸಕಂಟಕನಾದ ಆತನನ್ನು ಕೊಲ್ಲಬೇಕು. ನನಗೆ ಶತ್ರುವಾದ ಆತನನ್ನು ಈಗಲೇ ನೀನು ಕೊಲ್ಲದಿದ್ದರೆ ಹೀಗೆ ಕಿವಿಮೂಗುಗಳಿಲ್ಲದ ನಾನು ನಾಚಿಕೆಯನ್ನು ಬಿಟ್ಟು ಬದುಕಿರಲಾರೆನು. ನಿನ್ನಿದಿರಾಗಿಯೇ ಪ್ರಾಣವನ್ನು ಬಿಡುವೆನು. ಅಣ್ಣಾ! ನೀನು ಮಹಾತ್ಮನಾದ ಆ ರಾಮನಿದಿರಿಗೆ ಯುದ್ಧದಲ್ಲಿ ನಿನ್ನ ಸಮಸ್ತ ಸೈನ್ಯಗಳನ್ನೂ

ಕಟ್ಟಿಕೊಂಡುಹೋದರೂ, ಅವನನ್ನಿದಿರಿಸಲಾರೆಯೆಂದೇ ನನಗೆ ತೋರಿರುವುದು. ಕೇವಲ ಮನುಷ್ಯಮಾತ್ರರಾದ ಆ ರಾಮಲಕ್ಷ್ಮಣರನ್ನೇ ನೀನು ಕೊಲ್ಲಲಾರದೆ ಹೋದೆಯಲ್ಲಾ? ನಿನ್ನನ್ನು ನೀನೇ ಶೂರನೆಂದು ಹೇಳಿಕೊಳ್ಳಬೇಕೇ ಹೊರತು ಲೋಕದಲ್ಲಿ ಯಾರೂ ನಿನ್ನನ್ನು ನಿಜವಾದ ಶೂರನೆಂದು ಹೇಳಲಾರರು. ನಿನ್ನಷ್ಟಕ್ಕೆ ನೀನೇ ಇಲ್ಲದ ಪರಾಕ್ರಮವನ್ನು ನಿನ್ನಲ್ಲಿ ಆರೋಪಿಸಿಕೊಳ್ಳುತ್ತಿರುವೆ! ನಮ್ಮ ರಾಕ್ಷಸಕುಲಕ್ಕೇ ಅವಮಾನವನ್ನು ತರುವುದಕ್ಕಾಗಿ ನೀನು ಹುಟ್ಟಿದಂತಾಯಿತಲ್ಲವೆ? ನೀನು ನಿಜವಾಗಿ ರಾಮನಷ್ಟು ಬಲಪರಾಕ್ರಮವುಳ್ಳವನಾಗಿದ್ದರೆ ಈಗಲೇ ದಂಡಕಾರಣ್ಯಕ್ಕೆ ಹೊರಟು ಆತನನ್ನು ಕೊಂದು ಬಾ! ನೋಡುವೆನು! ನನಗೇನೋ ತೋರಲಿಲ್ಲವು! ನಿನಗೆ ಅಷ್ಟು ಶಕ್ತಿಯೆಲ್ಲಿಯದು? ನಿನ್ನ ವೀರ್ಯವೇ ಬಹಳ ಅಲ್ಪವಾದುದು! ಅಂಜುಕುಳಿಯಾದ ನೀನು, ಇಷ್ಟು ಭಯಂಕರವಾದ ಜನಸ್ಥಾನದಲ್ಲಿ ವಾಸಮಾಡುವುದೇ ಉಚಿತವಲ್ಲವೆಂದೂ ನನಗೆ ತೋರಿದೆ. ಆದುದರಿಂದ ಈಗಲೇ ನೀನು ನಿನ್ನ ಬಂಧುಗಳೊಡಗೂಡಿ ಇಲ್ಲಿಂದ ಬೇರೆಲ್ಲಿಗಾದರೂ ಓಡಿಹೋಗು! ಹಾಗಿಲ್ಲದೆ ನೀನು ಇಲ್ಲಿಯೇ ಇರುತ್ತಿದ್ದರೆ, ರಾಮನು ಬಂದು ನಿನ್ನನ್ನು ಧ್ವಂಸಮಾಡಿಬಿಡುವನು! ಆತನ ವೀರ್ಯಕ್ಕೆ ಸಿಕ್ಕಿ ನೀನು ಈಗಲೇ ಹತನಾಗಿ ಹೋಗುವೆ! ಆತನು ಯಾರೆಂದು ಬಲ್ಲೆಯಾ! ದಶರಥಮಹಾರಾಜನ ಕುಮಾರನು. ಮಹಾತೇಜಸ್ವಿಯು! ನನಗೆ ವಿರೂಪವನ್ನುಂಟುಮಾಡಿದ ಅವನ ತಮ್ಮನಾದ ಲಕ್ಷ್ಮಣನೋ ಅವನಿಗಿಂತಲೂ ಒಂದುಕೈ ಮೇಲಾದ ಪರಾಕ್ರಮವುಳ್ಳವನು" ಎಂದಳು. ದೊಡ್ಡ ಹೊಟ್ಟೆಯುಳ್ಳ ಆ ಕ್ರೂರರಾಕ್ಷಸಿಯು, ಹೀಗೆ ಖರನ ಮುಂದೆ ನಿಂತು ಅನೇಕ ವಿಧದಲ್ಲಿ ಪ್ರಲಾಪಿಸಿ, ಉಪಾಯದಿಂದ ಆತನನ್ನು ರೇಗಿಸಿ, ದುಃಖವನ್ನು ತಡೆಯಲಾರದೆ ಎರಡು ಕೈಗಳಿಂದಲೂ ಹೊಟ್ಟೆಯನ್ನು ಬಡಿದುಕೊಳ್ಳುತ್ತಾ, ಸಂಕಟದಿಂದ ಹಾಗೆಯೇ ಮೂರ್ಛೆಬಿದ್ದಳು.

ಇಲ್ಲಿಗೆ ಇಪ್ಪತ್ತೊಂದನೆಯ ಸರ್ಗವು.

## ಖರನು ಹದಿನಾಲ್ಕುಸಾವಿರ ಸಂಖ್ಯೆಯುಳ್ಳ ರಾಕ್ಷಸ ಸೈನ್ಯದೊಡನೆ ಯುದ್ಧಕ್ಕೆ ಹೊರಟುದು.

ಹೀಗೆ ಶೂರ್ಪಣಖೆಯು ರಾಕ್ಷಸರ ಮುಂದೆ ತನ್ನನ್ನು ಅವಮಾನಪಡಿಸಿ ಹೀಗಳೆಯುತ್ತಿರಲು ಖರನು ರೌದ್ರಾವೇಶದಿಂದ ಆ ಶೂರ್ಪಣಖೆಯನ್ನು ಕುರಿತು "ಎಲೆ ತಂಗಿ! ಈಗ ನಿನಗುಂಟಾದ ಅವಮಾನದಿಂದ ನನಗೆ ಮಿತಿ ಮೀರಿದ ಕೋಪವುಂಟಾಗಿದೆ. ಪರ್ವಕಾಲದಲ್ಲಿ ಉಕ್ಕಿಬರುವ ಸಮುದ್ರದಂತಿರುವ ಅದನ್ನು ನಾನು ತಡೆದು ನಿಲ್ಲಿಸಲಾರದಿರುವೆನು! ಕೇವಲ ಮನುಷ್ಯಮಾತ್ರನಾದ ಆ ರಾಮನು ನನಗೆ ಎಷ್ಟು ಮಾತ್ರದವನು! ಅವನ ಆಯುಸ್ಸು ತೀರುತ್ತಾ ಬಂದಿರುವುದು. ಅವನು ನನ್ನಿಂದಲೇ ಹತನಾಗಿ ಪ್ರಾಣವನ್ನು ಬಿಡಬೇಕಾಗಿ ಬಂದಿರುವುದು. ಎಲೆ ತಂಗಿ! ಕಣ್ಣೀರನ್ನೊರೆಸಿಕೊಂಡು ಮನಸ್ಸಿನ ಕಳವಳ ವನ್ನು ಬಿಡು! ಆ ರಾಮನನ್ನೂ, ಆತನ ತಮ್ಮನನ್ನೂ ಈಗಲೇ ಯಮಪುರಿಗೆ ಕಳುಹಿಸಿಬಿಡುವೆನು. ಎಲೆ ರಾಕ್ಷಸಿ! ಇದೋ! ಉತ್ಕ್ರಾಂತಿದಶೆಯಲ್ಲಿ ಅರ್ಧಪ್ರಾಣದಿಂದ ನರಳುತ್ತಿರುವ ಆತನ ಬಿಸಿಯಾದ ರಕ್ತವನ್ನೇ ನಿನಗೆ ಕುಡಿಸುವೆನು" ಎಂದನು. ಹೀಗೆ ಖರನ ಬಾಯಿಂದ ಹೊರಟುಬಂದ ವೀರವಾಕ್ಯ ಗಳನ್ನು ಕೇಳಿ, ಶೂರ್ಪಣಖೆಯು ಮೂರ್ಖಬುದ್ಧಿಯಿಂದ ಹಿಗ್ಗಿದವಳಾಗಿ, ರಾಕ್ಷಸಶ್ರೇಷ್ಠನಾದ ಆ ಖರನನ್ನು ಇನ್ನೂ ಸ್ತೋತ್ರಮಾಡಿ ಪ್ರೋತ್ಸಾಹಿ ಸುತ್ತಿದ್ದಳು. ಶೂರ್ಪಣಖೆಯು ಮೊದಲು ತನ್ನನ್ನು ಕ್ರೂರವಾಕ್ಯಗಳಿಂದ ಹೀಗಳೆದರೂ, ಈಗ ಪ್ರಶಂಸೆ ಮಾಡುತ್ತಿರುವುದನ್ನು ಕೇಳಿ ಖರನೂ ಉತ್ಸಾಹ ಗೊಂಡು ಸೇನಾಧಿಪತಿಯಾದ ದೂಷಣನೆಂಬವನನ್ನು ಕರೆದು, "ಎಲೈ ಸೌಮ್ಯನೆ! ಈಗ ನಾನು ದುಷ್ಟನಾದ ಆ ರಾಮನನ್ನು ಕೊಲ್ಲುವುದಕ್ಕಾಗಿ ಹೊರಡಬೇಕಾಗಿರುವುದು! ಆದುದರಿಂದ ಹದಿನಾಲ್ಕುಸಾವಿರ ಮಂದಿ ರಾಕ್ಷಸ ಸೈನಿಕರನ್ನು ನನಗೆ ಸಹಾಯಕರಾಗಿ ಬರುವಂತೆ ನಿಯಮಿಸು. ಒಬ್ಬೊಬ್ಬರೂ ನನ್ನ ಮನೋನುವರ್ತಿಗಳಾಗಿ ನಡೆಯತಕ್ಕವರಾಗಿರಬೇಕು. ಮಹಾವೇಗ ವುಳ್ಳವರಾಗಿರಬೇಕು! ಯುದ್ಧದಲ್ಲಿ ಹಿಂಜರಿಯದವರಾಗಿರಬೇಕು ಒಬ್ಬೊಬ್ಬರೂ ನೀಲಮೇಘದಂತೆ ಕಪ್ಪುಮೈಯುಳ್ಳವರಾಗಿ, ನೋಡುವಾಗಲೇ ಭಯವನ್ನು

ಹುಟ್ಟಿಸುವ ಘೋರಾಕೃತಿಯುಳ್ಳವರಾಗಿರಬೇಕು! ಕ್ರೂರಕಾರ್ಯಗಳಿಗೆ ಯಾವಾಗಲೂ ಹಿಂಜರಿಯದವರಾಗಿ ಪ್ರಾಣಿಹಿಂಸೆಗೆ ಸ್ವಲ್ಪವಾದರೂ ಮನಸ್ಸನ್ನು ಹಿಂತೆಗೆಯದೆ ಅದೇ ತಮಗೊಂದು ವಿನೋದವೆಂದು ತಿಳಿದು ಅದನ್ನು ನಡೆಸುವವರಾಗಿರಬೇಕು. ಒಬ್ಬೊಬ್ಬರೂ ಬಹಳ ಬಲವುಳ್ಳವರಾಗಿಯೂ ಕ್ರೂರಪರಾಕ್ರಮವುಳ್ಳವರಾಗಿಯೂ ಇರಬೇಕು. ಒಬ್ಬೊಬ್ಬರೂ ಹುಲಿಗಳಂತೆ ಕೊಬ್ಬಿದವರಾಗಿ ಮನುಷ್ಯದೇಹವನ್ನು ಒಟ್ಟಿಗೆ ನುಂಗಿಬಿಡುವಷ್ಟು ದೊಡ್ಡ ಬಾಯುಳ್ಳವರಾಗಿ ಮಹಾವೀರ್ಯವುಳ್ಳವರಾಗಿ ಗರ್ವಿಷ್ಠರಾಗಿರಬೇಕು. ಇಂತಹ ಹದಿನಾಲ್ಕು ಸಾವಿರಮಂದಿ ರಾಕ್ಷಸರನ್ನು ಸರ್ವಸನ್ನಾಹಗಳೊಡಗೂಡಿ ಈಗಲೇ ಹೊರಡುವಂತೆ ನಿಯಮಿಸು! ನನ್ನ ರಥವನ್ನೂ ಧನುಸ್ಸುಗಳನ್ನೂ, ನನ್ನ ಬಗೆಬಗೆಯ ಬಾಣಗಳನ್ನೂ, ಶಕ್ತಿಗಳನ್ನೂ ಮತ್ತು ತೀಕ್ಷ್ಣವಾದ ಶಸ್ತ್ರಾಯುಧಗಳೆಲ್ಲವನ್ನೂ ಇಲ್ಲಿಗೆ ತರಿಸಿಡು. [1]ಪುಲಸ್ತ್ಯ ವಂಶದಲ್ಲಿ ಹುಟ್ಟಿದ ಮಹಾದೇಹವುಳ್ಳ ಆ ರಾಕ್ಷಸರ ಸಮೂಹಕ್ಕೆ ನಾನೇ ಮುಂದಾಳಾಗಿ ಹೋಗುವೆನು" ಎಂದನು. ಹೀಗೆ ಹೇಳುತ್ತಿರುವಾಗಲೇ, ದೂಷಣನು ಚಿತ್ರವರ್ಣವುಳ್ಳ ಉತ್ತಮಾಶ್ವಗಳಿಂದ ಕೂಡಿ, ಸೂರ್ಯನಂತೆ ಜಾಜ್ವಲ್ಯಮಾನವಾದ ಒಂದು ದೊಡ್ಡ ರಥವನ್ನು ತಂದು ನಿಲ್ಲಿಸಿ "ಇದೋ! ರಥವು ಸಿದ್ಧವಾಗಿರುವುದು" ಎಂದು ಖರನಿಗೆ ತಿಳಿಸಿದನು. ಮೇರುಶಿಖರದಂತೆ ಉನ್ನತಾಕಾರವುಳ್ಳುದಾಗಿ, ಸುವರ್ಣದಿಂದ ಚಿತ್ರಿತವಾಗಿ, ಬಂಗಾರದ ಚಕ್ರಗಳುಳ್ಳುದಾಗಿ ಅತಿವಿಸ್ತಾರವಾಗಿ, ವೈಢೂರ್ಯಮಯವಾದ ನೊಗದಿಂದ ಪ್ರಕಾಶಿಸುತ್ತಿರುವ ಆ ರಥದಲ್ಲಿ ಖರನು ಬಂದು ಕುಳಿತನು. ಮಂಗಳಾರ್ಥವಾಗಿ ಆ ರಥದ ಸುತ್ತಲೂ ಅಲ್ಲಲ್ಲಿ ಸುವರ್ಣಮಯವಾದ ಮತ್ಸ್ಯಗಳೂ, ಪುಷ್ಪಗಳೂ, ವೃಕ್ಷಗಳೂ, ಪರ್ವತಗಳೂ, ಪಕ್ಷಿಸಮೂಹಗಳೂ, ನಕ್ಷತ್ರಗಳೂ ಚಿತ್ರಿಸಲ್ಪಟ್ಟಿದ್ದುವು. ಅದರ ಮೇಲೆ ಉನ್ನತವಾದ ಧ್ವಜವು ಕಟ್ಟಲ್ಪಟ್ಟು, ಸುತ್ತಲೂ ಅಲ್ಲಲ್ಲಿ ಯುದ್ಧಯೋಗ್ಯವಾದ ಖಡ್ಗಗಳು ತೂಗಿಡಲ್ಪಟ್ಟಿದ್ದುವು.

---

1. ಇಲ್ಲಿ "ಅಗ್ರೇ ನಿರ್ಯಾತುಮಿಚ್ಛಾಮಿ ಪುಲಸ್ತ್ಯಾನಾಂ ಮಹಾತ್ಮನಾಂ | ವಧಾರ್ಥಂ ದುರ್ವಿನೀತಸ್ಯ ರಾಮಸ್ಯ ರಣಕೋವಿದಃ" ಎಂದು ಮೂಲವು. ಇಲ್ಲಿನ ವಾಸ್ತವಾರ್ಥವೇನೆಂದರೆ:—(ರಾಮಸ್ಯಾಗ್ರೇ ಪೌಲಸ್ತ್ಯಾನಾಂ ರಾಕ್ಷಸಾನಾಂ ವಧಾರ್ಥಂ ನಿರ್ಯಾತುಮಿಚ್ಛಾಮಿ) ಎಂದು ದೂರಾನ್ವಯವನ್ನು ಮಾಡಿ "ರಾಮನ ಮುಂದೆ ರಾಕ್ಷಸವಧಕ್ಕಾಗಿ ಹೊರಡಬೇಕೆಂದಿರುವೆನು" ಎಂದು ಅರ್ಥಾಂತರವನ್ನು ಗ್ರಹಿಸಬೇಕು. (ಮಹೇಶ್ವರತೀರ್ಥೀಯವು)

ರಥದ ಸುತ್ತಲೂ ಕಿರುಗೆಜ್ಜೆಗಳು ತೂಗಾಡುತಿದ್ದುವು. ಹೀಗೆ ಅಲಂಕರಿಸಲ್ಪಟ್ಟು ಉತ್ತಮಾಶ್ವಗಳಿಂದ ಕೂಡಿದ ರಥವನ್ನು, ಖರನು ಏರಿ ಕುಳಿತೊಡನೆಯೇ, ಮಹಾಬಲಾಢ್ಯರಾದ ಕೆಲವುಮಂದಿ ರಾಕ್ಷಸ ಸೈನಿಕರು ಅದರ ಸುತ್ತಲೂ ಸಿದ್ಧವಾಗಿ ನಿಂತರು. ಹಾಗೆಯೇ ದೂಷಣನ ಸುತ್ತಲೂ ಕೆಲವು ರಾಕ್ಷಸರು ಸುತ್ತಿ ನಿಂತರು. ಹೀಗೆ ದೊಡ್ಡ ಬಿಲ್ಲನ್ನು ಹಿಡಿದು, ಘನವಾದ ಯುದ್ಧಕವಚವನ್ನು ತೊಟ್ಟು, ವಿವಿಧಾಯುಧಗಳನ್ನೂ ಧ್ವಜಗಳನ್ನೂ ಹಿಡಿದು ಸಿದ್ಧವಾಗಿ ನಿಂತಿರುವ ಆ ರಾಕ್ಷಸ ಸೈನ್ಯವನ್ನು ನೋಡಿ ಖರನು, ತಾನು ರಥದಲ್ಲಿ ಕುಳಿತಂತೆಯೇ ಆ ಸೇನೆಯನ್ನು ಮುಂದೆ ಹೊರಡುವಂತೆ ಆಜ್ಞಾಪಿಸಿದನು. ಆಯುಧಧಾರಿಗಳಾದ ರಾಕ್ಷಸರೆಲ್ಲರೂ ಮಹಾಧ್ವನಿಯನ್ನು ಮಾಡುತ್ತ, ಜನಸ್ಥಾನವನ್ನು ಬಿಟ್ಟು ಅತಿವೇಗದಿಂದ ಹೊರಟರು. ಹೀಗೆ ಖರನ ಮನೋನುವರ್ತಿಗಳಾಗಿ ನಡೆಯತಕ್ಕ ಹದಿನಾಲ್ಕುಸಾವಿರಮಂದಿ ಘೋರರಾಕ್ಷಸರು ಗುಂಪಾಗಿ, ತಮ್ಮ ತಮ್ಮ ಕೈಯಲ್ಲಿ ಲೋಹದ ಗದೆಗಳನ್ನೂ, ಪಟ್ಟಾಕತ್ತಿಗಳನ್ನೂ, ಶೂಲಗಳನ್ನೂ ಹರಿತವಾದ ಕೊಡಲಿಗಳನ್ನೂ, ಕತ್ತಿಗಳನ್ನೂ, ಚಕ್ರತೋಮರಭಿಂಡಿವಾಲಗಳನ್ನೂ, ಭಯಂಕರಗಳಾದ ಶಕ್ತ್ಯಾಯುಧಗಳನ್ನೂ, ಪರಿಘಗಳನ್ನೂ, ದೊಡ್ಡ ಬಿಲ್ಲುಗಳನ್ನೂ, ಗದೆ, ಕತ್ತಿ, ಈಟಿ ಮುಂತಾದ ಆಯುಧಗಳನ್ನೂ, ಅಷ್ಟಕೋಣಗಳುಳ್ಳ ಭಯಂಕರವಾದ ವಜ್ರವೆಂಬ ಆಯುಧವಿಶೇಷಗಳನ್ನೂ ಹಿಡಿದು ಜನಸ್ಥಾನದಿಂದ ಹೊರಟುಬರುತ್ತಿದ್ದರು. ಘೋರಪರಾಕ್ರಮವುಳ್ಳ ಈ ರಾಕ್ಷಸರು, ಯುದ್ಧಾಭಿಮುಖರಾಗಿ ಉತ್ಸಾಹದಿಂದ ಹೋಗುತ್ತಿರುವಾಗ, ಆ ಸೈನ್ಯದ ಗುಂಪಿನಲ್ಲಿ ಖರನ ರಥವು ಧಾರಾಳವಾಗಿ ಮುಂದುವರಿಯಲಾರದೆ, ಸ್ವಲ್ಪ ಹಿಂದಾಗಿ ನಿಂತಿತು. ಅಷ್ಟರಲ್ಲಿ ಸಾರಥಿಯು ಖರನ ಮನೋಭಿಪ್ರಾಯವನ್ನು ತಿಳಿದು, ಸುವರ್ಣಾಲಂಕೃತಗಳಾದ ರಥದ ಕುದುರೆಗಳನ್ನು ಸ್ವಲ್ಪ ವೇಗದಿಂದ ಮುಂದಕ್ಕೆ ಬಿಟ್ಟನು. ಹೀಗೆ ವೇಗದಿಂದ ನಡೆಸಲ್ಪಟ್ಟ ಆ ಖರನ ರಥವು ಓಡುತ್ತಿರುವಾಗ, ಆ ರಥವೇಗ ಧ್ವನಿಯು ಎಂಟುದಿಕ್ಕುಗಳನ್ನೂ ತುಂಬುವಂತೆ ವ್ಯಾಪಿಸಿತು. ಈ ಉತ್ಸಾಹದಲ್ಲಿ ಖರನೂ ಕೂಡ ಯಮನಂತೆ ನೋಡುವವರಿಗೆ ಭಯವನ್ನು ಹುಟ್ಟಿಸುತ್ತ, ಮಿತಿಮೀರಿದ ಕೋಪದಿಂದಾರ್ಭಟಿಸಿಕೊಂಡು, ಶತ್ರುವಧಾರ್ಥವಾಗಿ ಮುಂದೆ ಮುಂದೆ ಬರುತ್ತಿರುವಾಗ, ಜಂಝಾವಾತದಿಂದ ಪ್ರೇರಿತವಾಗಿ ಕಲ್ಲುಮಳೆಯನ್ನು ಸುರಿಸುತ್ತಿರುವ ಮಹಾಮೇಘವು ತನ್ನ

ಮುಂದಿರುವ ಇತರ ಮೇಘ ಪರಂಪರೆಯನ್ನು ನೂಕಿಕೊಂಡು ಬರುವಂತೆ ಮುಂದುವರಿದು, ಇನ್ನೂ ಬೇಗ ಬೇಗನೆ ರಥವನ್ನು ಬಿಡುವಂತೆ ಸಾರಥಿಗೆ ನಿಯಮಿಸಿದನು.

ಇಲ್ಲಿಗೆ ಇಪ್ಪತ್ತೆರಡನೆಯ ಸರ್ಗವು.

---

ಯುದ್ಧೋದ್ಯುಕ್ತನಾಗಿ ಹೊರಟ ಖರನು ದುಶ್ಶಕುನಗಳನ್ನು ಕಂಡುದು.

ಹೀಗೆ ರಾಕ್ಷಸಸೈನ್ಯವು ಜನಸ್ಥಾನವನ್ನು ಬಿಟ್ಟು ಹೊರಟಕೂಡಲೆ, ಕತ್ತೆಯಂತೆ ಬೂದುಬಣ್ಣವುಳ್ಳ ಮೇಘಗಳು ಆಕಾಶದಲ್ಲಿ ಸೇರಿ ಅಮಂಗಳ ಸೂಚಕವಾದ ರಕ್ತದ ಮಳೆಯನ್ನು ಕರೆಯಲಾರಂಭಿಸಿದುವು. ಮಹಾವೇಗವುಳ್ಳ ಆತನ ರಥದ ಕುದುರೆಗಳು, ಸಮಭೂಮಿಯಾದ ರಾಜಮಾರ್ಗದಲ್ಲಿ ಅಲ್ಲಲ್ಲಿ ಹೂಗಳನ್ನು ಚೆಲ್ಲಿ ಮೃದುವಾಗಿದ್ದರೂ, ಧಾರಾಳವಾಗಿ ನಡೆಯಲಾರದೆ ಇದ್ದಕ್ಕಿದ್ದ ಹಾಗೆ ಉರುಳಿಕೊಂಡುವು. ಆಕಾಶದಲ್ಲಿ ಸೂರ್ಯನ ಸುತ್ತಲೂ ಅಂಚಿನಲ್ಲಿ ಮಾತ್ರ ರಕ್ತವರ್ಣವುಳ್ಳ ಕಪ್ಪಾದ ಪರಿವೇಷವು ಚಿತ್ರಾಕಾರವಾದ ಕೊಳ್ಳಿಯಂತೆ ಕಾಣಿಸುತ್ತಿತ್ತು. ಮತ್ತು ಸುವರ್ಣದಂಡವುಳ್ಳ ಉನ್ನತವಾದ ಆ ಖರನ ಧ್ವಜದ ಮೇಲೆ, ಭಯಂಕರವಾದ ದೊಡ್ಡ ದೇಹವುಳ್ಳ ಒಂದು ಹದ್ದು ಕುಳಿತಿತ್ತು. ಜನಸ್ಥಾನದ ಸಮೀಪದಲ್ಲಿ ಮಾಂಸಭಕ್ಷಕಗಳಾದ ಅನೇಕ ಮೃಗ ಪಕ್ಷಿಗಳು ಅಲ್ಲಲ್ಲಿ ಗುಂಪುಗುಂಪಾಗಿ ಸೇರಿ, ಕ್ರೂರಧ್ವನಿಯಿಂದ ಕೂಗುತ್ತಿದ್ದುವು. ನರಿಗಳು ಸೂರ್ಯನಿರುವ ದಿಕ್ಕಿನ ಕಡೆಗೆ ತಿರುಗಿ ಬಾಯಿಂದ ಉರಿಯನ್ನು ಕಕ್ಕುತ್ತ, ಭಯಂಕರ ಧ್ವನಿಯಿಂದ ಅರಚಿಕೊಳ್ಳುತಿದ್ದುವು. ವಜ್ರಾಯುಧದಿಂದ ಭೇದಿಸಲ್ಪಟ್ಟ ಪರ್ವತಗಳಂತೆ ರಕ್ತಧಾರೆಯನ್ನು ಸುರಿಸುತ್ತ, ಅನೇಕ ಮೇಘಗಳು ಆಕಾಶದಗಲಕ್ಕೂ ತುಂಬಿಕೊಂಡುವು. ಇದ್ದಕ್ಕಿದ್ದ ಹಾಗೆ ಮಹಾಭಯಂಕರವಾದ ಅಂಧಕಾರವು ಸುತ್ತಲೂ ವ್ಯಾಪಿಸಿತು. ಈ ಮಹಾಂಧಕಾರದಲ್ಲಿ ದಿಕ್ಕುವಿದಿಕ್ಕು ಗಳೊಂದೂ ಕಾಣದಂತಾದುವು. ಸಂಧ್ಯಾಕಾಲಕ್ಕೆ ಮೊದಲೇ ಬಿಸಿಲು ರಕ್ತವರ್ಣ ವಾಗಿ ಅಕಾಲಸಂಧ್ಯೆಯಂತಾಯಿತು. ಭಯಂಕರರೂಪವುಳ್ಳ ಕ್ರೂರಮೃಗಗಳೂ, ಪಕ್ಷಿಗಳೂ, ಹದ್ದುಗಳೂ, ನರಿಗಳೂ, ಬಿಳೀ ಹದ್ದುಗಳೂ, ಖರನ ಕಡೆಗಿದಿರಾಗಿ ನಿಂತು ಭಯಂಕರವಾಗಿ ಕೂಗುತ್ತಿದ್ದುವು. ಯುದ್ಧಕಾಲದಲ್ಲಿ ಯಾವಾಗಲೂ

ಅಮಂಗಳವನ್ನೂ, ಭಯವನ್ನೂ ಸೂಚಿಸತಕ್ಕ ಗುಳ್ಳೆನರಿಗಳು, ಈ ಖರನ ಸೈನ್ಯಕ್ಕೆದಿರಾಗಿ ನಿಂತು, ಬಾಯಿಂದ ಉರಿಯನ್ನು ಕಕ್ಕುತ್ತಾ ಊಳಿಡುತ್ತಿದ್ದುವು. ಸೂರ್ಯಬಿಂಬ ಸಮೀಪದಲ್ಲಿ ಪರಿಘಾಕಾರವುಳ್ಳ ತಲೆಯಿಲ್ಲದ ಮುಂಡವೊಂದು ಕಾಣಿಸುತ್ತಿತ್ತು. ಪರ್ವಕಾಲವಿಲ್ಲದಿರುವಾಗಲೂ ರಾಹುಗ್ರಹವು ಸೂರ್ಯನನ್ನು ಹಿಡಿದಿರುವಂತೆ ಕಾಣಿಸಿತು. ಗಾಳಿಯು ಸ್ವಲ್ಪವಾದರೂ ಮಂದಸಂಚಾರವಿಲ್ಲದೆ ಮಹಾವೇಗದಿಂದ ಪ್ರತಿಕೂಲವಾಗಿ ಬೀಸಿತು. ಸೂರ್ಯನು ಕಾಂತಿಹೀನನಾದನು. ರಾತ್ರಿಯಿಲ್ಲದೆಯೇ ಆಕಾಶದಲ್ಲಿ ನಕ್ಷತ್ರಗಳು ಮಿಂಚುಹುಳುಗಳಂತೆ ಅಲ್ಲಲ್ಲಿ ಗೋಚರಿಸುತ್ತಿದ್ದುವು. ಈ ಸೈನ್ಯವು ಹೋಗುತ್ತಿರುವಾಗ ದಾರಿಯಲ್ಲಿದ್ದ ತಾವರೆಕೊಳಗಳಲ್ಲಿ ಇದ್ದಕ್ಕಿದ್ದಹಾಗೆ ಕಮಲಗಳೆಲ್ಲವೂ ಒಣಗಿ, ಜಲಜಂತುಗಳೂ ಮೌನದಿಂದ ಒಳಗಡಗಿರಲು, ಆ ಕೊಳಗಳು ಕೇವಲ ಕಾಂತಿಹೀನಗಳಾಗಿದ್ದುವು. ದಾರಿಯಲ್ಲಿ ಯಾವ ಗಿಡದಲ್ಲಿಯೂ ಹೂಗಳಾಗಲಿ, ಹಣ್ಣುಗಳಾಗಲಿ ಕಾಣಿಸಲಿಲ್ಲ. ಗಾಳಿಯಿಲ್ಲದಿದ್ದಾಗಲೂ ಮೇಘದಂತೆ ಧೂಮ್ರವರ್ಣವಾದ ನೆಲದ ಧೂಳು ಸುತ್ತಲೂ ವ್ಯಾಪಿಸಿತು. ಸಾರಿಕೆಗಳು ಸೌಮ್ಯಸ್ವರಗಳನ್ನು ಬಿಟ್ಟು “ವೀಚಿ ಸೂಚಿ” ಎಂದು ಅಲ್ಲಲ್ಲಿ ಕ್ರೂರಧ್ವನಿಯಿಂದ ಕೂಗುತ್ತಿದ್ದುವು. ಆಕಾಶದಿಂದ ಭಯಂಕರವಾದ ಉಲ್ಕಾನಿರ್ಘಾತಗಳೆಂಬ ಜ್ಯೋತಿರ್ವಾಯುಗಳು ನೆಲದ ಕಡೆಗೆ ಬೀಸುತ್ತಿದ್ದುವು. ಪರ್ವತಗಳಿಂದಲೂ, ವನಗಳಿಂದಲೂ ಕೂಡಿದ ಸಮಸ್ತ ಭೂಮಿಯೂ ನಡುಗಿತು. ಇದಲ್ಲದೆ, ಖರನು ರಥದಮೇಲೆ ಕುಳಿತು ರಣೋತ್ಸಾಹದಿಂದ ಗರ್ಜಿಸುತ್ತಿರಲು, ಆತನ ಎಡದ ತೋಳು ಅದಿರಿತು. ಅವನ ಕಂಠಧ್ವನಿಯು ಕುಗ್ಗಿತು. ಆತನು ಕಣ್ಣೆತ್ತಿ ಸುತ್ತಲೂ ನೋಡಿದಾಗ, ನಿಷ್ಕಾರಣವಾಗಿ ಆತನ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. ಆತನ ನೆತ್ತಿಯಲ್ಲಿ ಒಂದು ವಿಧವಾದ ನೋವು ಕಾಣಿಸಿತು. ಏನಾದರೇನು ? ಆ ಖರನು ಅಜ್ಞಾನದಿಂದ ಇದೊಂದನ್ನೂ ಲಕ್ಷ್ಯಮಾಡದೆ, ಅವುಗಳಿಗೆ ಸ್ವಲ್ಪವಾದರೂ ಹೆದರದೆ, ಆ ಉತ್ಪಾತಗಳನ್ನು ನೋಡಿ ನಗುತ್ತಾ, ತನ್ನ ಸುತ್ತಲೂ ಇದ್ದ ರಾಕ್ಷಸರನ್ನು ನೋಡಿ “ಎಲೈ ರಾಕ್ಷಸರೆ ! ಈಗ ಭಯಂಕರವಾದ ಮಹೋತ್ಪಾತಗಳು ಕಾಣಿಸುತ್ತಿರುವುವು. ಬಲಾಢ್ಯನಾದವನು ಅಲ್ಪಬಲವುಳ್ಳವರನ್ನು ತೃಣೀಕರಿಸುವಂತೆ, ನನ್ನ ವೀರ್ಯದ ಬಲವು ಈ ಉತ್ಪಾತಗಳನ್ನು ಎಷ್ಟುಮಾತ್ರಕ್ಕೂ ಲಕ್ಷ್ಯಮಾಡಲಾರವು. ನಾನು ಮಾತ್ರ ಕೋಪಿಸಿದರೆ, ನನ್ನ ತೀಕ್ಷ್ಣವಾದ

ಬಾಣಗಳಿಂದ ಈ ನಕ್ಷತ್ರಗಳನ್ನೆಲ್ಲಾ ಉದುರಿಸಿಬಿಡಬಲ್ಲೆನು! ಮರಣದೇವತೆಗೂ ಮರಣವನ್ನುಂಟುಮಾಡಬಲ್ಲೆನು. ಹೆಚ್ಚಾಗಿ ಹೇಳಿದುದರಿಂದೇನು! ಬಲಗರ್ವಿತನಾದ ಆ ರಾಮನನ್ನೂ, ಅವನ ತಮ್ಮನಾದ ಲಕ್ಷ್ಮಣನನ್ನೂ, ನಾನು ನನ್ನ ತೀಕ್ಷ್ಣ ಬಾಣಗಳಿಂದ ಕೊಲ್ಲದೆ ಎಷ್ಟುಮಾತ್ರಕ್ಕೂ ಹಿಂತಿರುಗಲಾರೆನು. ಮುಖ್ಯವಾಗಿ ಅವರ ರಕ್ತವನ್ನು ಕುಡಿಯಬೇಕೆಂಬುದೇ ನನ್ನ ತಂಗಿಯ ಕೋರಿಕೆಯು. ನಾನು ಅವಳ ಕೋರಿಕೆಯನ್ನು ಮಾತ್ರ ಈಡೇರಿಸದೆ ಬಿಡಲಾರೆನು. ಈಗ ಆ ರಾಮಲಕ್ಷ್ಮಣರ ನಾಶಕ್ಕೆ ನನ್ನ ತಂಗಿಯೇ ಮೂಲವೆಂದು ತಿಳಿಯಿರಿ! ನಾನು ಇದುವರೆಗೆ ಹಿಂದೆ ಯಾವ ಯುದ್ಧದಲ್ಲಿಯೂ, ಅಪಜಯವನ್ನು ಹೊಂದಿದವನಲ್ಲವೆಂಬುದು ನಿಮಗೂ ಚೆನ್ನಾಗಿ ತಿಳಿದಿರಬಹುದು. ನಾನು ಎಂದಿಗೂ ಸುಳ್ಳಾಡತಕ್ಕವನಲ್ಲ. ನನಗೆ ಮಾತ್ರ ಕೋಪವುಂಟಾದರೆ ವಜ್ರಾಯುಧವನ್ನು ಹಿಡಿದು ಐರಾವತವನ್ನೇರಿ ಹೋಗುತ್ತಿರುವ ದೇವೇಂದ್ರನನ್ನಾದರೂ ಯುದ್ಧದಲ್ಲಿ ಕೊಲ್ಲಬಲ್ಲೆನು. ಹೀಗಿರುವಾಗ ಕೇವಲ ಅಲ್ಪಮನುಷ್ಯರಾದ ಆ ಹುಡುಗರಿಬ್ಬರು ನನಗೆ ಎಷ್ಟುಮಾತ್ರದವರು?" ಎಂದನು. ಹೀಗೆ ಆರ್ಭಟಿಸಿ ಕೂಗುತ್ತಿರುವ ಖರನ ಮಾತನ್ನು ಕೇಳಿ ಅಲ್ಲಿದ್ದ ಸಮಸ್ತ ರಾಕ್ಷಸ ಸೈನಿಕರೂ, ತಾವು ಮೃತ್ಯುಪಾಶಕ್ಕೆ ಸಿಕ್ಕಿರುವುದನ್ನು ತಿಳಿಯದೆ ಸಂತೋಷದಿಂದುಬ್ಬುತ್ತಿದ್ದರು. ಅತ್ತಲಾಗಿ ಅಂತರಿಕ್ಷದಲ್ಲಿ ದೇವಗಂಧರ್ವಸಿದ್ಧಚಾರಣರೂ, ಮಹಾತ್ಮರಾದ ಋಷಿಗಳೂ, ಈ ಮಹಾಯುದ್ಧವನ್ನು ನೋಡಬೇಕೆಂಬ ಆಶೆಯಿಂದ ಅಲ್ಲಲ್ಲಿ ಗುಂಪುಕೂಡಿ ನಿಂತು ಒಬ್ಬರಿಗೊಬ್ಬರು "ಗೋಬ್ರಾಹ್ಮಣರಿಗೂ, ಲೋಕಹಿತವನ್ನು ಕೋರುವ ಮಹಾತ್ಮರಿಗೂ ಮಂಗಳವಾಗಲಿ! ಚಕ್ರಪಾಣಿಯಾದ ವಿಷ್ಣುವು ಯುದ್ಧದಲ್ಲಿ ದೈತ್ಯರನ್ನು ಕೊಂದಂತೆ, ಈ ಯುದ್ಧದಲ್ಲಿ ರಾಮನು ಪುಲಸ್ತ್ಯವಂಶಜರಾದ ಈ ರಾಕ್ಷಸರನ್ನು ಕೊಂದು ಜಯಶೀಲನಾಗಲಿ!" ಎಂದು ಆಶೀರ್ವಚನಗಳನ್ನು ಹೇಳುತ್ತಿದ್ದರು. ಹೀಗೆ ಅವರೆಲ್ಲರೂ ಅಲ್ಲಲ್ಲಿ ಸೇರಿ ಸಲ್ಲಾಪಗಳನ್ನು ಮಾಡುತ್ತ, ಯುದ್ಧವನ್ನು ನೋಡುವುದರಲ್ಲಿ ಅತ್ಯಾಶೆಯುಳ್ಳವರಾಗಿ, ವಿಮಾನದಲ್ಲಿ ಕುಳಿತು, ಅಲ್ಪಾಯುಸ್ಸುಳ್ಳ ಈ ರಾಕ್ಷಸ ಸೈನ್ಯವು ಬರುವುದನ್ನೇ ನೋಡುತ್ತಿದ್ದರು. ಭಯಂಕರವಾದ ಸೇನೆಯಿಂದ ಪರಿವೃತನಾದ ಖರನು, ರಥದಲ್ಲಿ ಕುಳಿತು ವೇಗದಿಂದ ಬರುತ್ತಿದ್ದನು. ರಥಗಮನವೇಗವನ್ನು ನೋಡಿ ಇತರ ರಾಕ್ಷಸರೂ ವೇಗದಿಂದ ಅವನನ್ನು ಹಿಂಬಾಲಿಸು

ತ್ತಿದ್ದರು. ಖರನ ಸುತ್ತಲೂ ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಖರವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲಿ, ಮಹಾಮಾಲಿ, ಸರ್ಪಮುಖ, ರುಧಿರಾಶನರೆಂಬ ಮಹಾವೀರರಾದ ಹನ್ನೆರಡು ಮಂದಿ ರಾಕ್ಷಸರು ಆಯುಧಧಾರಿಗಳಾಗಿ ಬರುತ್ತಿದ್ದರು. ಹಾಗೆಯೇ ದೂಷಣನ ಹಿಂದೆ ಮಹಾಕಪಾಲ, ಸ್ಥೂಲಾಕ್ಷ, ಪ್ರಮಾಥಿ, ತ್ರಿಶಿರಸ್ಸು ಎಂಬ ನಾಲ್ಕು ಮಂದಿ ಸೇನಾಧಿಪತಿಗಳು ಬರುತ್ತಿದ್ದರು. ಹೀಗೆ ಮಹಾವೇಗವುಳ್ಳವರಾಗಿಯೂ, ಅಸಾಧಾರಣಪರಾಕ್ರಮವುಳ್ಳವರಾಗಿಯೂ ಇರುವ ವೀರರಾಕ್ಷಸರು ಯುದ್ಧೋತ್ಸಾಹದಿಂದ ಹೊರಟು, ಅಂಗಾರಕಾದಿ ಗ್ರಹಗಳು ಚಂದ್ರಸೂರ್ಯರ ಬಳಿಗೆ ಬರುವಂತೆ ರಾಮಲಕ್ಷ್ಮಣರ ಕಡೆಗೆ ಬಂದರು.

ಇಲ್ಲಿಗೆ ಇಪ್ಪತ್ತಮೂರನೆಯ ಸರ್ಗವು.

---

ಅತ್ತಲಾಗಿ ರಾಮನು ಜಯಸೂಚಕವಾದ ಶುಭನಿಮಿತ್ತಗಳನ್ನು ಕಂಡುದು. ಸೀತೆಯನ್ನು ಒಂದು ಬೆಟ್ಟದ ಗುಹೆಯಲ್ಲಿರಿಸಿ ಅಲ್ಲಿ ಲಕ್ಷ್ಮಣನನ್ನು ಕಾವಲಿರಿಸಿ ಯುದ್ಧಸನ್ನದ್ಧನಾದುದು. ರಾಕ್ಷಸಸೈನ್ಯವು ರಾಮನನ್ನು ಸಮೀಪಿಸಿದುದು.

ಹೀಗೆ ಖರನು ರಾಮಾಶ್ರಮಕ್ಕಭಿಮುಖವಾಗಿ ಬರುತ್ತಿರುವಾಗ, ಅಲ್ಲಲ್ಲಿ ಕಾಣಿಸುತ್ತಿದ್ದ ಉತ್ಪಾತಗಳನ್ನು ರಾಮಲಕ್ಷ್ಮಣರೂ ಇತ್ತಲಿಂದ ನೋಡುತ್ತಿದ್ದರು. ರೋಮಾಂಚವನ್ನು ಹುಟ್ಟಿಸುವಂತೆ ಅತಿ ಕ್ರೂರವಾದ ಆ ಉತ್ಪಾತಗಳನ್ನು ನೋಡಿ ರಾಮನು, ಅಪಮೃತ್ಯುಸೂಚಕಗಳಾದ ಆ ದುರ್ನಿಮಿತ್ತಗಳನ್ನು ಲಕ್ಷ್ಮಣನಿಗೂ ತೋರಿಸುತ್ತ, "ವತ್ಸ! ಅಲ್ಲಿ ನೋಡು! ರಾಕ್ಷಸಕುಲವಿನಾಶಾರ್ಥವಾಗಿ ಅಲ್ಲಲ್ಲಿ ಏಳುತ್ತಿರುವ ಈ ಉತ್ಪಾತಗಳು, ಸಮಸ್ತಭೂತಗಳನ್ನೂ ನಿರ್ಮೂಲಮಾಡುವಂತೆ ಭಯಂಕರವಾಗಿರುವುದನ್ನು ನೋಡಿದೆಯಾ? ಕತ್ತೆಯ ಬಣ್ಣದಿಂದಿರುವ ಮೇಘಗಳು, ರಕ್ತಧಾರೆಯನ್ನು ಸುರಿಸಿ, ಘೋರಧ್ವನಿಯನ್ನು ಮಾಡುತ್ತ, ಆಕಾಶದಲ್ಲಿ ಸುತ್ತುತ್ತಿರುವುದನ್ನು ನೋಡು! ಆದರೆ! ಇತ್ತಲಾಗಿ ನನ್ನ ಬಾಣಗಳು ಹೊಗೆಯನ್ನುಗಿಯುತ್ತ ತಮ್ಮ ಯುದ್ಧೋತ್ಸಾಹವನ್ನು

ತೋರಿಸುತ್ತಿರುವುವು. ಬಂಗಾರದ ಕಟ್ಟುಳ್ಳ ಈ ನನ್ನ ಧನುಸ್ಸು, ಯುದ್ಧಾತುರದಿಂದ ತನಗೆ ತಾನೇ ಹೊರಳುತ್ತಿರುವುದನ್ನು ನೋಡು! ಈಗ ಅಲ್ಲಲ್ಲಿ ಕೂಗಿಡುತ್ತಿರುವ ವನಪಕ್ಷಿಗಳ ಕಠೋರವಾದ ಅಶುಭಧ್ವನಿಯನ್ನು ಕೇಳಿದರೆ, ಮುಂದೆ ನಮಗೆ ಯಾವುದೋ ಒಂದು ಮಹಾಭಯವೂ, ಪ್ರಾಣದಲ್ಲಿ ಸಂದೇಹವೂ ಉಂಟಾಗಬಹುದೆಂದೆಣಿಸಬೇಕಾಗಿದೆ. ಹೇಗಿದ್ದರೂ ಮಹಾಯುದ್ಧವು ಮಾತ್ರ ನಡೆಯುವುದರಲ್ಲಿ ಸಂದೇಹವಿಲ್ಲ. ಆದರೆ ಎಲೆ ವತ್ಸನೆ! ಇದೋ! ಈ ನನ್ನ ಬಲದ ಭುಜವು ಆಗಾಗ ಅದಿರುತ್ತಿರುವುದರಿಂದ, ಶೀಘ್ರದಲ್ಲಿಯೇ ನಮಗೆ ಜಯವೂ ಶತ್ರುಗಳಿಗೆ ಪರಾಜಯವೂ ಉಂಟಾಗುವುದೆಂಬುದನ್ನು ಸೂಚಿಸುವ ಹಾಗಿದೆ! ಮತ್ತು ಎಲೆ ವತ್ಸನೆ! ನಿನ್ನ ಮುಖದಲ್ಲಿ ಈಗ ಅಪೂರ್ವವಾದ ಒಂದು ಪ್ರಸನ್ನತೆಯು ತೋರುತ್ತಿರುವುದರೊಡನೆ, ಅದರಲ್ಲಿ ಒಂದು ಹೊಸ ಕಾಂತಿಯೂ ಹುಟ್ಟಿರುವುದು ಆದುದರಿಂದ ನಮಗೆ ಜಯವುಂಟಾಗುವುದರಲ್ಲಿ ಸಂದೇಹವಿಲ್ಲ. ಯುದ್ಧವು ಪ್ರಾಪ್ತವಾಗಿರುವಾಗ, ಯಾರ ಮುಖವು ಕಾಂತಿಹೀನವಾಗುವುದೋ, ಅವರಿಗೆ ಪ್ರಾಣಹಾನಿಯು ನಿಜವು. ಲಕ್ಷ್ಮಣಾ! ಅದೋ! ಅಲ್ಲಿ ಭಯಂಕರವಾದ ಸಿಂಹನಾದವೂ ಭೇರೀಧ್ವನಿಯೂ ಕೇಳಿಸುತ್ತಿರುವುದು. ರಾಕ್ಷಸರು ಬರುವಂತಿದೆ! ವತ್ಸ! ಆದರೇನು? ನಾವು ಮಾತ್ರ ಈಗ ಭಯಪಡಬಾರದು. ತನಗೆ ಕ್ಷೇಮವನ್ನು ಕೋರುವವನು, ಮುಂದೆ ತನಗೆ ಯಾವುದಾದರೂ ವಿಪತ್ತು ಸಂಭವಿಸಬಹುದೆಂದು ತೋರಿದಾಗ, ಅದು ಪ್ರಾಪ್ತವಾಗುವುದಕ್ಕೆ ಮೊದಲೇ ತಕ್ಕ ಪ್ರತೀಕಾರವನ್ನು ಯೋಚಿಸಬೇಕು. ಅಂತವನೇ ಬುದ್ಧಿಶಾಲಿಯು! ಆದುದರಿಂದ ನೀನು ನಿನ್ನ ಬಿಲ್ಲುಬಾಣಗಳನ್ನು ಸಿದ್ಧವಾಗಿಟ್ಟುಕೊಂಡು, ಈ ಸೀತೆಯನ್ನೂ ಕರೆದುಕೊಂಡು ಹೋಗಿ, ಇಲ್ಲಿ ಮರಗಳಿಂದ ಮರೆಯಾಗಿ ದುರ್ಗಮವಾದ ಯಾವುದಾದರೂ ಒಂದು ಗುಹೆಯನ್ನು ಸೇರಿ, ಅಲ್ಲಿ ಅವಳಿಗೆ ಕಾವಲಾಗಿರು! ಈ ಮಾತಿಗೆ ಮಾತ್ರ ನೀನು ಅಡ್ಡಿ ಹೇಳಬೇಡ! ನನ್ನ ಪಾದಗಳ ಮೇಲೆ ಆಣೆಯಿಟ್ಟಿರುವೆನು! ಸಾವಕಾಶಮಾಡದೆ ಹೊರಡು! ನೀನು ಶೂರನೆಂಬುದೇನೋ ನಿಜವು! ನಿನಗೆ ಅಸಾಧಾರಣವಾದ ಬಲವೂ ಉಂಟು! ಈ ರಾಕ್ಷಸರೆಲ್ಲರನ್ನೂ ನೀನು ಕೊಲ್ಲಬಲ್ಲೆಯೆಂಬುದೂ ನಿಜವು! ಇದರಲ್ಲಿ ಸಂದೇಹವಿಲ್ಲ. ಆದರೆ ಇವರೆಲ್ಲರನ್ನೂ ನಾನೇ ಕೊಲ್ಲಬೇಕೆಂದಿರುವೆನು. ನೀನು ಅಡ್ಡಮಾತಾಡಿ ನನಗಿರುವ ಈ ಆಸೆಯನ್ನು ಮಾತ್ರ ತಪ್ಪಿಸ

ಬೇಡ!” ಎಂದನು. ರಾಮಾಜ್ಞೆಯಂತೆಯೇ ಲಕ್ಷ್ಮಣನು ಧನುರ್ಬಾಣಗಳನ್ನು ಹಿಡಿದು, ಸೀತೆಯನ್ನೂ ಕರೆದುಕೊಂಡು, ಒಂದು ದುರ್ಗಮವಾದ ಗುಹೆಯನ್ನಾಶ್ರಯಿಸಿದನು. ಹೀಗೆ ಲಕ್ಷ್ಮಣನು ಸೀತೆಯೊಡನೆ ಹೊರಟು, ಗುಹೆಯನ್ನು ಸೇರಿದ ಮೇಲೆ, ಇತ್ತಲಾಗಿ ರಾಮನು ತನ್ನ ಮನಸ್ಸಿನಲ್ಲಿ “ಭಲೆ! ಈಗ ಮನಸ್ಸಿಗೆ ನೆಮ್ಮದಿಯಾಯಿತು!” ಎಂದು ತಿಳಿದು, ಆಗಲೇ ಯುದ್ಧಕವಚವನ್ನು ಮೈಗೆ ತೊಟ್ಟುಕೊಂಡನು. ಅಗ್ನಿಸಮಾನವಾದ ಆ ಕವಚದಿಂದಲಂಕರಿಸಲ್ಪಟ್ಟ ರಾಮನು, ಅಂಧಕಾರದಲ್ಲಿ ಹೊಗೆಯಿಲ್ಲದೆ ಉರಿಯುತ್ತಿರುವ ಅಗ್ನಿಯಂತೆ ಪ್ರಕಾಶಿಸುತ್ತಿದ್ದನು. ಆಮೇಲೆ ಆತನು ತನ್ನ ಧನುರ್ಬಾಣಗಳನ್ನು ಕೈಗೆ ತೆಗೆದುಕೊಂಡು, ದಿಕ್ಕುಗಳೆಲ್ಲವೂ ಮೊಳಗುವಂತೆ ಒಂದಾವರ್ತಿ ಆ ಧನುಸ್ಸನ್ನು ಟಂಕಾರಮಾಡಿದನು. ಈ ಮಹಾಯುದ್ಧವನ್ನು ನೋಡಬೇಕೆಂಬ ಕುತೂಹಲದಿಂದ ಸಿದ್ಧಚಾರಣ ಗಂಧರ್ವಾದಿ ದೇವತೆಗಳೆಲ್ಲರೂ ಅಂತರಿಕ್ಷದಲ್ಲಿ ಬಂದು ನೆರೆದರು. ಹಾಗೆಯೇ ಈ ಲೋಕದಲ್ಲಿ ತಮ್ಮ ಪುಣ್ಯಕರ್ಮಗಳಿಂದ ಮಹಾತ್ಮರೆಂದು ಪ್ರಸಿದ್ಧಿಗೊಂಡ ಅನೇಕ ಬ್ರಹ್ಮರ್ಷಿಗಳೂ ಅಲ್ಲಿಗೆ ಬಂದು ಕೂಡಿದರು. ಆ ಋಷಿಗಳು ಒಬ್ಬರಿಗೊಬ್ಬರು “ಗೋಬ್ರಾಹ್ಮಣರಿಗೆ ಸುಖವಾಗಲಿ! ಲೋಕಕ್ಷೇಮಚಿಂತಕರಾದವರಿಗೆ ಕ್ಷೇಮವುಂಟಾಗಲಿ! ಚಕ್ರಹಸ್ತನಾದ ವಿಷ್ಣುವು, ಯುದ್ಧದಲ್ಲಿ ದೈತ್ಯರನ್ನು ಕೊಂದು ಜಯಶೀಲನಾದಂತೆ, ಈ ರಾಮನು ಪುಲಸ್ತ್ಯವಂಶೋತ್ಪನ್ನರಾದ ಈ ರಾಕ್ಷಸರೆಲ್ಲರನ್ನೂ ಕೊಂದು ಜಯಶೀಲನಾಗಲಿ!” ಎಂದು ಮಂಗಳಾಶಾಸನವನ್ನು ಮಾಡುತ್ತಿದ್ದರು. ಆಮೇಲೆ ಪುನಃ ಆ ಋಷಿಗಳು ತಮ್ಮಲ್ಲಿ ಒಬ್ಬರನ್ನೊಬ್ಬರು ನೋಡಿ, ಮನಸ್ಸಿನಲ್ಲಿ ಭಯಾತುರರಾಗಿ “ಆಹಾ! ಇಲ್ಲಿನ ರಾಕ್ಷಸರಾದರೋ ಒಬ್ಬರಲ್ಲ! ಇಬ್ಬರಲ್ಲ!! ಹದಿನಾಲ್ಕುಸಾವಿರ ಮಂದಿಯಿರುವರು. ಇವರೆಲ್ಲರೂ ಬಹಳ ಕ್ರೌರ್ಯವುಳ್ಳವರು. ಧರ್ಮಾತ್ಮನಾದ ರಾಮನು ತಾನೊಬ್ಬನೇ ಏಕಾಏಕಿಯಾಗಿ ಇವರೊಡನೆ ಹೇಗೆ ಯುದ್ಧವನ್ನು ಮಾಡಬಲ್ಲನು?” ಎಂದು ಹೇಳಿ ಕಳವಳಿಸುತ್ತಿದ್ದರು. ಹಾಗೆಯೇ ಅಲ್ಲಿದ್ದ ರಾಜರ್ಷಿಗಳೂ, ಸಿದ್ಧರೂ, ಶಿಷ್ಯಸಹಿತರಾಗಿ ಬಂದಿದ್ದ ಬ್ರಾಹ್ಮಣರೂ, ವಿಮಾನಸಂಚಾರಿಗಳಾದ ದೇವತೆಗಳೂ ತತ್ತಳಿಸಿ ನೋಡುತ್ತಿದ್ದರು. ತೇಜೋವಿಶಿಷ್ಟನಾಗಿ ರಣರಂಗದಲ್ಲಿ ನಿಂತಿದ್ದ ರಾಮನನ್ನು ನೋಡಿ ಸಮಸ್ತಭೂತಗಳೂ ಭಯದಿಂದ ಕಳವಳಿಸುತ್ತಿದ್ದುವು. ಆ ಕಾಲದಲ್ಲಿ ರಾಮನ ರೂಪವಾದರೋ

ಕುಪಿತನಾದ ಕಾಲರುದ್ರನ ರೂಪದಂತೆ [1]ಎಣೆಯಿಲ್ಲದಷ್ಟು ಮಹಾಭಯಂಕರವಾಗಿ ಕಾಣುತ್ತಿತ್ತು. ಇಷ್ಟರಲ್ಲಿ ರಾಕ್ಷಸ ಸೈನ್ಯವು ಭಯಂಕರವಾದ ಯುದ್ಧಕವಚವನ್ನೂ, ಆಯುಧಗಳನ್ನೂ, ಧ್ವಜಗಳನ್ನೂ ಧರಿಸಿ, ಗಂಭೀರಧ್ವನಿಯನ್ನು ಮಾಡುತ್ತ ಸುತ್ತಲೂ ಮುತ್ತಿತು. ಆಗ ಸೈನ್ಯದಲ್ಲಿ ಸಿಂಹನಾದಗಳನ್ನು ಮಾಡುತ್ತಿದ್ದವರು ಕೆಲವರು! ಒಬ್ಬರಿಗೊಬ್ಬರು ಸ್ಪರ್ಧೆಯಿಂದ ಗರ್ಜಿಸುತ್ತಿದ್ದವರು ಕೆಲವರು! ಧನುಷ್ಟಂಕಾರ ಮಾಡುತ್ತಿದ್ದವರು ಕೆಲವರು! ವೀರವಾದದಿಂದ ಕೂಗುತ್ತಿದ್ದವರು ಕೆಲವರು! ದುಂದುಭಿಗಳನ್ನು ಬಾಜಿಸುತ್ತಿದ್ದವರು ಕೆಲವರು! ಹೀಗೆ ನಾನಾ ಕಡೆಗಳಲ್ಲಿಯೂ ರಾಕ್ಷಸ ಸೈನಿಕರು ಉತ್ಸಾಹದಿಂದುಕ್ಕುತ್ತಿರಲು, ಇವರ ಮಹತ್ತಾದ ಕಲಕಲವು, ಆ ಅರಣ್ಯವೆಲ್ಲವನ್ನೂ ವ್ಯಾಪಿಸಿತು. ಕಾಡಿನಲ್ಲಿದ್ದ ಕ್ರೂರ ಮೃಗಗಳೂ ಕೂಡ ಈ ಧ್ವನಿಗೆ ಹೆದರಿ, ಹಿಂದೆ ತಿರುಗಿ ನೋಡದೆ ಓಡಿಹೋಗಿ, ನಿಶ್ಶಬ್ದವಾದ ಪ್ರದೇಶದಲ್ಲಿ ಅಡಗಿಕೊಂಡವು. ರಾಕ್ಷಸ ಸೈನ್ಯವಾದರೋ ಸಮುದ್ರದಂತೆ ಅಪಾರವಾಗಿ, ಅತಿ ಭಯಂಕರವಾಗಿ ಕಾಣುತ್ತ, ಸಮಸ್ತವಿಧವಾದ ಶಸ್ತ್ರಾಸ್ತ್ರ ಸಮೃದ್ಧಿಯುಳ್ಳದಾಗಿ ವೇಗದಿಂದ ರಾಮನಿರುವ ಕಡೆಗೆ ಬಂದಿತು. ಇತ್ತಲಾಗಿ ರಣಪಂಡಿತನಾದ ರಾಮನೂ ಕೂಡ ನಾಲ್ಕು ಕಡೆಗಳಿಗೂ ಕಣ್ಣಿಟ್ಟು ಎಚ್ಚರಿಕೆಯಿಂದ ನೋಡುತ್ತ, ಯುದ್ಧಾತುರದಿಂದ ತನಗಿದಿರಾಗಿ ಬರುತ್ತಿದ್ದ ಖರಸೈನ್ಯವನ್ನು ಕಂಡನು. ಅದನ್ನು ಕಂಡೊಡನೆ ತನ್ನ ತೀವ್ರ ಧನುಸ್ಸನ್ನು ಸಿದ್ಧಪಡಿಸಿಕೊಂಡು, ಬತ್ತಳಿಕೆಯಿಂದ ಬಾಣಗಳನ್ನು ತೆಗೆದು ಹಿಡಿದು, ಆ ಸಮಸ್ತ ರಾಕ್ಷಸರನ್ನೂ ನಿರ್ಮೂಲಮಾಡುವುದಕ್ಕೆ ತಕ್ಕ ಕೋಪವನ್ನೂ ತಂದುಕೊಂಡನು. ಹೀಗೆ ರಾಮನು ಕೋಪಾವೇಶದಿಂದ ಪ್ರಳಯಾಗ್ನಿಯಂತೆ ಜ್ವಲಿಸುತ್ತಿರಲು,

---

1. ಖರಾದಿ ರಾಕ್ಷಸರನ್ನು ಕೊಲ್ಲುವಾಗ ರಾಮನಿಗೆ ಕಾಲರುದ್ರ ಸ್ವರೂಪವೇ ಪ್ರಾಪ್ತವಾಗಿದ್ದಿತೆಂದು ಗ್ರಾಹ್ಯವು. ಇದೇ ವಿಷಯವು ಸ್ಕಾಂದಪುರಾಣದಲ್ಲಿ "ರುದ್ರತೇಜೋವಿಲಸಿತಂ ದೃಷ್ಟ್ವಾ ರಾಮಕಳೇಬರಂ | ಶಂಖಂ ಚಕ್ರಂಚ ಶೂಲಂಚ ಪಿನಾಕಂ ಖೇಟಮೇವಚ | ಖಟ್ವಾಂ ಘಂಟಾಂಚ ಡಮರುಂ ಬಾಣಪಾಶಾಂಕುಶಂತಥಾ | ಚಾಪಂ ವಜ್ರಂಚ ಖಡ್ಗಂಚ ಪರಶುಂ ತ್ರಾಸಕಾರಣಂ | ಜಯಶ್ರಿಯಂಚ ಗಂಗಾಂಚ ದದೃಶುಸ್ಸಿದ್ಧಚಾರಣಾಃ ||" ಎಂಬುದಾಗಿ ಸಿದ್ಧಚಾರಣಾದಿಗಳೆಲ್ಲರೂ ರಾಮನಲ್ಲಿ ಪ್ರಳಯಕಾಲರುದ್ರನ ಲಕ್ಷಣಗಳೆಲ್ಲವನ್ನೂ ಕಂಡುದಾಗಿ ವಿವರಿಸಲ್ಪಟ್ಟಿರುವುದು.

ಆತನ ರೂಪವು ನೋಡುವುದಕ್ಕಸಾಧ್ಯವಾಗಿದ್ದಿತು. ಹೀಗೆ ದುರ್ನಿರೀಕ್ಷ್ಯನಾದ ರಾಮನನ್ನು ನೋಡಲಾರದೆ ವನದೇವತೆಗಳೂ ಹೆದರಿ ಓಡಿಹೋದರು. ಆಗ ರಾಮನ ಆಕಾರವು ದಕ್ಷಯಜ್ಞಧ್ವಂಸ ಕಾಲದಲ್ಲಿ ಕ್ರುದ್ಧನಾದ ರುದ್ರನ ಆಕೃತಿಯಂತೆ ಮಹಾ ಭಯಂಕರವಾಗಿತ್ತು. ಆ ರಾಮನ ಸ್ವರೂಪವನ್ನು ನೋಡಿ ಸಮಸ್ತ ಭೂತಗಳೂ ಭಯದಿಂದ ಪರವಶವಾಗಿದ್ದುವು. ಅತ್ತಲಾಗಿ ಬಿಲ್ಲುಗಳನ್ನೂ, ವೀರಭೂಷಣಗಳನ್ನೂ, ಧ್ವಜಗಳನ್ನೂ, ಅಗ್ನಿಯಂತೆ ಜ್ವಲಿಸುವ ಯುದ್ಧ ಕವಚಗಳನ್ನೂ ಧರಿಸಿ ಬರುತ್ತಿದ್ದ ರಾಕ್ಷಸ ಸೈನ್ಯವು ಸೂರ್ಯೋದಯ ಕಾಲದಲ್ಲಿ ಸಂಧ್ಯಾರಾಗದಿಂದ ಕೂಡಿದ [1]ನೀಲಮೇಘಪರಂಪರೆಯಂತೆ ಕಾಣಿಸುತ್ತಿತ್ತು.

ಇಲ್ಲಿಗೆ ಇಪ್ಪತ್ತನಾಲ್ಕನೆಯ ಸರ್ಗವು.

---

## ರಾಮ-ರಾಕ್ಷಸರ ತುಮುಲಯುದ್ಧವು

ಖರನು ತನ್ನ ರಾಕ್ಷಸಪರಿವಾರಗಳೊಡಗೂಡಿ ಆಶ್ರಮಕ್ಕೆ ಬಂದು, ಅಲ್ಲಿ ಕೋಪದಿಂದ ಶತ್ರುಸಂಹಾರಕ್ಕಾಗಿ ಧನುರ್ಧಾರಿಯಾಗಿ ನಿಂತಿರುವ ರಾಮನನ್ನು ನೋಡಿದನು. ಹೀಗೆ ಶಸ್ತ್ರಧಾರಿಯಾದ ರಾಮನನ್ನು ನೋಡಿದೊಡನೆ, ಅವನು ತನ್ನ ಧನುರ್ಬಾಣಗಳನ್ನೆತ್ತಿಹಿಡಿದು ಭಯಂಕರವಾದ ಟಂಕಾರಧ್ವನಿಯನ್ನು ಮಾಡಿ, ಸಾರಥಿಯನ್ನು ಕುರಿತು ರಾಮನಿಗಿದಿರಾಗಿ ರಥವನ್ನು ಬಿಡುವಂತೆ ನಿಯಮಿಸಿದನು. ಅದರಂತೆಯೇ ಸೂತನು ಕುದುರೆಗಳನ್ನು ತಟ್ಟಿ, ಏಕಾಕಿಯಾಗಿ ನಿಂತು ಧನುಷ್ಟಂಕಾರವನ್ನು ಮಾಡುತ್ತಿರುವ ಮಹಾಬಾಹುವಾದ ರಾಮನಿರುವ ಕಡೆಗೆ ರಥವನ್ನು ನಡೆಸಿಕೊಂಡು ಬಂದನು. ಇತರ ರಾಕ್ಷಸಪ್ರಮುಖರೆಲ್ಲರೂ ಮುಂದೆಬಂದು, ಅಲ್ಲಿ ಯುದ್ಧಸನ್ನದ್ಧನಾಗಿ ನಿಂತಿರುವ ರಾಮನನ್ನು ನೋಡಿ, ದೊಡ್ಡ ಸಿಂಹನಾದವನ್ನು ಮಾಡಿ ಸುತ್ತಲೂ ನಿಂತರು. ರಾಕ್ಷಸರನಡುವೆ ರಥದಲ್ಲಿ

---

1. ಇಲ್ಲಿ ಕ್ರಮವಾಗಿ ರಾಕ್ಷಸರಿಗೂ ನೀಲಮೇಘಗಳಿಗೂ, ಕವಚಕ್ಕೂ ಸೂರ್ಯಕಿರಣಗಳಿಗೂ, ಧನುಸ್ಸಿಗೂ ಇಂದ್ರಧನುಸ್ಸಿಗೂ, ಸೇನಾಧ್ವಜಗಳಿಗೂ ಮೇಘಮಂಡಲದಲ್ಲಿ ಕಾಣುವ ಉತ್ಪಾತಧ್ವಜಗಳಿಗೂ ಸಾಮ್ಯವನ್ನು ಗ್ರಹಿಸಬೇಕು.

ಕುಳಿತು ಬರುತ್ತಿದ್ದ ಖರನು ತಾರೆಗಳ ನಡುವೆ ಉದಿಸಿಬಂದಿರುವ ಬುಧಗ್ರಹದಂತೆ ಕಾಣುತ್ತ, ಯುದ್ಧೋದ್ಯುಕ್ತನಾಗಿ ನಿಂತು ಒಂದಾವರ್ತಿ ದೊಡ್ಡ ಸಿಂಹನಾದ ವನ್ನು ಮಾಡಿ, ಎಣೆಯಿಲ್ಲದ ತೇಜಸ್ಸಿನಿಂದ ಮುಂದೆ ನಿಂತಿರುವ ರಾಮನನ್ನು ಏಕಕಾಲದಲ್ಲಿ ಸಾವಿರ ಬಾಣಗಳಿಂದ ಹೊಡೆದನು. ಆಮೇಲೆ ಇತರ ರಾಕ್ಷಸರೂ ಕೂಡ ಕುಪಿತರಾಗಿ ಕೈಯಲ್ಲಿ ಭಯಂಕರವಾದ ಧನುಸ್ಸನ್ನು ಹಿಡಿದು, ಶತ್ರು ಗಳಿಗೆ ದುರ್ಜಯನಾಗಿ ನಿಂತಿರುವ ರಾಮನ ಮೇಲೆ ನಾನಾ ವಿಧವಾದ ಶಸ್ತ್ರಾಸ್ತ್ರ ಗಳನ್ನು ಸುರಿಸಿದರು. ಅವರಲ್ಲಿ ಕೆಲವರು ಮುದ್ಗರಗಳಿಂದಲೂ, ಕೆಲವರು ಪಟ್ಟಸ ಗಳಿಂದಲೂ, ಕೆಲವರು ಶೂಲಗಳಿಂದಲೂ, ಕೆಲವರು ಪ್ರಾಸಗಳಿಂದಲೂ, ಕೆಲವರು ಕತ್ತಿ ಕೊಡಲಿ ಮುಂತಾದ ಆಯುಧಗಳಿಂದಲೂ ರಾಮನನ್ನು ಹೊಡೆಯುತ್ತಿ ದ್ದರು. ಮೇಘದಂತೆ ಕಪ್ಪುಬಣ್ಣವುಳ್ಳವರಾಗಿಯೂ, ಕ್ರೂರಧ್ವನಿಯುಳ್ಳವರಾ ಗಿಯೂ, ಮಹಾವೀರ್ಯವಂತರಾಗಿಯೂ ಇರುವ ಕೆಲವು ರಾಕ್ಷಸರು ತಮ್ಮ ತಮ್ಮ ರಥಗಳನ್ನೂ, ಕುದುರೆಗಳನ್ನೂ, ಬೆಟ್ಟದಂತಿರುವ ಆನೆಗಳನ್ನೂ ಏರಿ ರಾಮನಿ ಗಿದಿರಾಗಿ ಓಡಿಬಂದು ಆತನನ್ನು ಕೊಲ್ಲುವುದಕ್ಕೆ ಪ್ರಯತ್ನಿಸಿದರು. ಆ ರಾಕ್ಷಸ ವೀರರೆಲ್ಲರೂ ಒಟ್ಟಾಗಿ, ಮೇಘಪರಂಪರೆಗಳು ಪರ್ವತದ ಮೇಲೆ ಮಳೆಯನ್ನು ಸುರಿಯುವಂತೆ ರಾಮನ ಮೇಲೆ ಬಾಣವರ್ಷಗಳನ್ನು ಕರೆದರು. ಭಯಂಕರ ಸ್ವರೂಪವುಳ್ಳ ಅನೇಕ ರಾಕ್ಷಸರು ರಾಮನನ್ನು ಸುತ್ತಿ ನಿಂತು ಹೊಡೆಯುತ್ತಿದ್ದರು. ಆದರೇನು ? ಮಹಾಸಮುದ್ರವು ತನ್ನಕಡೆಗೆ ವೇಗದಿಂದ ಬರುವ ಅನೇಕ ನದೀ ಪ್ರವಾಹಗಳನ್ನು ತಡೆದಿರುವಂತೆ, ರಾಮನು ಈ ರಾಕ್ಷಸರಿಂದ ಪ್ರಯೋಗಿಸಲ್ಪಟ್ಟ ಸಮಸ್ತ ಶಸ್ತ್ರಗಳನ್ನೂ ತಡೆದು ನಿಲ್ಲಿಸಿದನು. ಅನೇಕ ಘೋರ ಶಸ್ತ್ರಗಳಿಂದ ಹೊಡೆಯಲ್ಪಡುತ್ತಿದ್ದರೂ ಆತನ ದೇಹಕ್ಕೆ ಸ್ವಲ್ಪವಾದರೂ ನೋವು ಕಾಣಿಸಲಿಲ್ಲ. ಆದರೆ ಜ್ವಲಿಸುತ್ತಿರುವ ಶಸ್ತ್ರಗಳ ಹತಿಯಿಂದ ರಾಮನ ದೇಹದಲ್ಲಿ ಬಹಳ ಗಾಯಗಳು ಕಾಣಿಸಲು ವಜ್ರಾಹತಿಗೆ ಸಿಕ್ಕಿದ ಪರ್ವತದಂತೆ ತೋರುತ್ತಿದ್ದನು. ಆತನ ಸಮಸ್ತಾವಯವಗಳಿಂದಲೂ ರಕ್ತವು ಸುರಿಯುತ್ತಿರಲು, ಸಂಧ್ಯಾಕಾಲದ ಮೇಘಪರಂಪರೆಗಳಿಂದ ಪರಿವೃತನಾದ ಸೂರ್ಯನಂತೆಯೂ ಇದ್ದನು. ಹೀಗೆ ಸಾವಿರಾರು ಮಂದಿ ರಾಕ್ಷಸರು ಏಕಾಕಿಯಾದ ರಾಮನನ್ನು ಸುತ್ತಿಮುತ್ತಿ ಶಸ್ತ್ರಗಳಿಂದ ಹೊಡೆಯುತ್ತಿರುವುದನ್ನು ನೋಡಿ ದೇವಗಂಧರ್ವಸಿದ್ಧಾದಿಗಳೆಲ್ಲರೂ ಭಯದಿಂದ ತತ್ತಳಿಸುತ್ತಿದ್ದರು. ಇಷ್ಟರಲ್ಲಿ ರಾಮನು ಬಹಳ ಕೋಪಗೊಂಡವ

ನಾಗಿ ತನ್ನ ಧನುಸ್ಸನ್ನು ಆಕರ್ಣಾಂತವಾಗಿ ಸೆಳೆದು, ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಲಾರಂಭಿಸಿದನು. ಹೀಗೆ ರಾಮನು ಶತ್ರುಗಳಿಂದ ತಡೆಯಲಸಾಧ್ಯವಾಗಿಯೂ, ಯಮದಂಡಕ್ಕೆ ಸಮವಾಗಿಯೂ, ಗರಿಗಳುಳ್ಳದಾಗಿಯೂ, ಋಜುಗತಿಯುಳ್ಳದಾಗಿಯೂ ಇರುವ ಸಾವಿರಾರು ಬಾಣಗಳನ್ನು, ಕೇವಲ ಲೀಲಾಮಾತ್ರದಿಂದಲೇ ಪರಂಪರೆಯಾಗಿ ಎಡೆಬಿಡದೆ ಪ್ರಯೋಗಿಸುತ್ತಿರಲು, ಈ ಬಾಣಗಳೆಲ್ಲವೂ ಶತ್ರುಸೈನ್ಯವನ್ನು ಪ್ರವೇಶಿಸಿ, ಯಮಪಾಶದಂತೆ ರಾಕ್ಷಸರ ಮೇಲೆ ಬಿದ್ದು, ಅನೇಕ ರಾಕ್ಷಸರ ಪ್ರಾಣಗಳನ್ನು ನಿಮಿಷಮಾತ್ರದಲ್ಲಿ ನೀಗಿಸಿಬಿಟ್ಟವು. ಈ ಬಾಣಗಳು ರಾಕ್ಷಸರ ದೇಹವನ್ನು ಭೇದಿಸಿಕೊಂಡು, ಅವರ ರಕ್ತದಿಂದ ನೆನೆದು, ಉರಿಯುವ ಬೆಂಕಿಯಂತೆ ಅಂತರಿಕ್ಷದಲ್ಲಿ ಕಾಣುತ್ತಿದ್ದವು. ಹೀಗೆ ರಾಮನ ಧನುಸ್ಸಿನಿಂದ ಅಸಂಖ್ಯಾತವಾದ ಬಾಣಗಳು ಹೊರಟುಬಂದು, ಅನೇಕ ರಾಕ್ಷಸರ ಪ್ರಾಣಗಳನ್ನು ತೆಗೆದುಬಿಟ್ಟವು. ಹಾಗೆಯೇ ರಾಮನೂ ಮೇಲೆ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಾ, ಅನೇಕ ರಾಕ್ಷಸರ ಧನುಸ್ಸುಗಳನ್ನೂ ಧ್ವಜಗಳನ್ನೂ, ಕವಚಗಳನ್ನೂ, ಸರ್ವಾಭರಣಭೂಷಿತವಾದ ಅವರ ತಲೆ, ತೋಳು ಮುಂತಾದ ಅವಯವಗಳನ್ನೂ, ಆನೆಯ ಸೊಂಡಿಲಂತಿರುವ ಅವರ ತೊಡೆಗಳನ್ನೂ ಒಂದೊಂದಾಗಿ ಕತ್ತರಿಸುತ್ತಿದ್ದನು. ಸುವರ್ಣಾಭರಣದಿಂದ ಅಲಂಕರಿಸಲ್ಪಟ್ಟ ಕೆಲವು ರಥಾಶ್ವಗಳನ್ನೂ ಭೇದಿಸಿದನು. ಆ ರಥಗಳಲ್ಲಿರುವ ಸಾರಥಿಗಳನ್ನೂ ಕೊಂದನು. ಅಶ್ವಾರೋಹಕರನ್ನು ಅವರ ಕುದುರೆಗಳೊಡನೆ ಉರುಳಿಸಿದನು. ಆ ಸೈನ್ಯದಲ್ಲಿದ್ದ ಕಾಲಾಳು ಬಲವನ್ನು ನಿಮಿಷಮಾತ್ರದಲ್ಲಿ ಯಮಪುರಿಗೆ ಕಳುಹಿಸಿದನು. ಆಗ ರಾಮನು ಪ್ರಯೋಗಿಸುತ್ತಿದ್ದ ಬಾಣಗಳಲ್ಲಿ ಅಯೋಮಯವಾದವುಗಳು ಕೆಲವು ! ಉಕ್ಕಿನ ಅಲಗುಗಳುಳ್ಳವು ಕೆಲವು ! ಕೊನೆಯಲ್ಲಿ ಅಂಕುಶದಂತೆ ಕೊಕ್ಕೆಗಳುಳ್ಳವು ಕೆಲವು ! ಹೀಗೆ ವಿಚಿತ್ರಗಳಾದ ರಾಮಬಾಣಗಳಿಂದ ಭೇದಿಸಲ್ಪಟ್ಟ ರಾಕ್ಷಸರು, ಭಯಂಕರವಾದ ಆರ್ತಧ್ವನಿಯನ್ನು ಮಾಡುತ್ತ ಅಲ್ಲಲ್ಲಿ ಉರುಳುತ್ತಿದ್ದರು. ಹೀಗೆ ಮರ್ಮಭೇದಕಗಳಾದ ತೀಕ್ಷ್ಣ ಬಾಣಗಳಿಂದ ಭೇದಿಸಲ್ಪಡುತ್ತಿದ್ದ ಆ ರಾಕ್ಷಸಸೈನ್ಯವು ರಾಮನಿಗಿದಿರಾಗಿ ಬಂದು, ದವಾಗ್ನಿಯಿಂದಾವರಿಸಲ್ಪಟ್ಟ ಒಣಗಿದ ಕಾಡಿನಂತೆ ಶೂನ್ಯವಾಗುತ್ತಿತ್ತು. ಇಷ್ಟರಲ್ಲಿ ಬಲಾಢ್ಯರಾದ ಕೆಲವು ರಾಕ್ಷಸವೀರರು ಕತ್ತಿ, ಕೊಡಲಿ ಮೊದಲಾದ ಆಯುಧಗಳನ್ನು ಆತನ ಮೇಲೆ ಪ್ರಯೋಗಿಸಿದರು. ರಾಮನು

ಇವೆಲ್ಲವನ್ನೂ ತನ್ನ ಬಾಣಗಳಿಂದ ಅರ್ಧಮಾರ್ಗದಲ್ಲಿಯೇ ಖಂಡಿಸಿ, ಅವರ ತಲೆಯನ್ನು ಕತ್ತರಿಸಿ ಕೊಂದುಬಿಟ್ಟನು. ಹೀಗೆ ಕವಚವು ಹರಿದು, ಧನುಸ್ಸು ಮುರಿದು, ತಲೆಯು ಕತ್ತರಿಸಿ ಬಿದ್ದಮೇಲೆ ಉಳಿದ ಅವರ ಕಬಂಧಗಳು, ಗರುಡನು ಹೋಗುವಾಗ ಆತನ ಗರಿಯ ಗಾಳಿಯಿಂದ ಮುರಿದುಬೀಳುವ ಮರಗಳಂತೆ ನೆಲದಮೇಲೆ ಉರುಳಿದವು. ಹೀಗೆ ಅನೇಕ ರಾಕ್ಷಸರು ಸಾಯಲು, ಅವರಲ್ಲಿ ರಾಮಬಾಣದಿಂದ ಗಾಯಪಟ್ಟು, ತಲೆತಪ್ಪಿಸಿಕೊಂಡ ಕೆಲವರು, ಖರನ ಬಳಿಗೆ ಓಡಿಹೋಗಿ, ಆತನಲ್ಲಿ ಮರೆಹೊಕ್ಕರು. ಆಗ ದೂಷಣನು ಅವರಿಗೆ ಸಮಾಧಾನ ವನ್ನು ಹೇಳಿ, ಅವರನ್ನು ಹಿಂತಿರುಗಿಸಿ ಕರೆತಂದು, ಕುಪಿತನಾದ ಯಮನು ರುದ್ರನನ್ನಿದಿರಿಸುವಂತೆ, ರಾಮನನ್ನಿದಿರಿಸುವುದಕ್ಕೆ ಬಂದನು. ಹೀಗೆ ದೂಷಣನ ಆಶ್ರಯದಿಂದ ಕೆಲವು ರಾಕ್ಷಸರು ಭಯವನ್ನು ಬಿಟ್ಟು ಹಿಂತಿರುಗಿ ಬಂದು, ಸಾಲವೃಕ್ಷಗಳನ್ನೂ, ತಾಲವೃಕ್ಷಗಳನ್ನೂ, ಕಲ್ಲುಗಳನ್ನೂ ಆಯುಧಗಳನ್ನಾಗಿಟ್ಟು ಕೊಂಡು ತಿರುಗಿ ರಾಮನನ್ನಿದಿರಿಸಿದರು ಕೆಲವರು ಶೂಲಗಳನ್ನೂ, ಕೆಲವರು ಮುದ್ಗರಗಳನ್ನೂ ಹಿಡಿದು ಬಂದರು. ಹೀಗೆ ಗುಂಪುಗೂಡಿ ಬಂದ ರಾಕ್ಷಸರಲ್ಲಿ ರಾಮನಮೇಲೆ ಕೆಲವರು ಬಾಣವರ್ಷಗಳನ್ನೂ, ಕೆಲವರು ಶಸ್ತ್ರವರ್ಷಗಳನ್ನೂ ಕರೆದರು. ಕೆಲವರು ಮರಗಳನ್ನೂ, ಕೆಲವರು ಕಲ್ಲುಗಳನ್ನೂ ಎಸೆಯುತ್ತಿದ್ದರು. ಆಗಿನ ಯುದ್ಧವು ಅತ್ಯಾಶ್ಚರ್ಯಕರವಾಗಿ, ನೋಡುವವರ ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುತ್ತಿತ್ತು. ರಾಮನಿಗೂ ರಾಕ್ಷಸರಿಗೂ ನಡೆದ ಆ ತುಮುಲಯುದ್ಧವು ಮಹಾಭಯಂಕರವಾಗಿ ತೋರಿತು. ರಾಕ್ಷಸರೆಲ್ಲರೂ ಬಹಳ ಕೋಪಗೊಂಡವರಾಗಿ, ಬಾರಿಬಾರಿಗೂ ರಾಮನನ್ನು ಸುತ್ತಿ ಹೊಡೆಯುತ್ತಿದ್ದರು. ಹೀಗೆ ಎಂಟು ದಿಕ್ಕುಗಳಲ್ಲಿಯೂ ರಾಕ್ಷಸರು ಸುತ್ತಿ ನಿಂತು ಪ್ರಾಸಗಳಿಂದಲೂ, ಬಾಣವರ್ಷಗಳಿಂದಲೂ ತನ್ನನ್ನು ಹೊಡೆಯುತ್ತಿರಲು, ಮಹಾಬಲಾಢ್ಯನಾದ ರಾಮನು ಅತಿ ಕುಪಿತನಾಗಿ, ಭಯಂಕರವಾದ ಒಂದು ಸಿಂಹನಾದವನ್ನು ಮಾಡಿ, ಜಾಜ್ವಲ್ಯಮಾನವಾದ ಗಾಂಧರ್ವಾಸ್ತ್ರವನ್ನು ಅವರ ಮೇಲೆ ಪ್ರಯೋಗಿಸುವುದ ಕ್ಕಾಗಿ, ಧನುಸ್ಸಿನಲ್ಲಿ ಸಂಧಾನಮಾಡಿದನು. ಹೀಗೆ ಗಾಂಧರ್ವಾಸ್ತ್ರ ಹೂಡಿ ದೊಡನೆಯೇ ಆ ಧನುಸ್ಸಿನಿಂದ ಸಾವಿರಾರು ಸಂಖ್ಯೆಯುಳ್ಳ ಬಾಣಪರಂಪರೆಗಳು ಎಡೆಬಿಡದೆ ಹೊರಡಲಾರಂಭಿಸಿದುವು. ಸಮಸ್ತ ದಿಕ್ಕುಗಳೂ ಬಾಣದಿಂದಲೇ ಮುಚ್ಚಿಹೋದವು. ಆ ಕಾಲದಲ್ಲಿ ರಾಕ್ಷಸರು ತಮ್ಮಮೇಲೆ, ಆ ಬಾಣಗಳು

ಬಂದು ಬೀಳುವುದೊಂದನ್ನು ಮಾತ್ರವೇ ತಿಳಿಯುತ್ತಿದ್ದರೇ ಹೊರತು, ರಾಮನು ಬಾಣಸಂಧಾನಮಾಡುವುದನ್ನಾಗಲಿ, ನಾಣೆಳೆಯುವುದನ್ನಾಗಲಿ, ಆತನ ಬಾಣ ಪ್ರಯೋಗವನ್ನಾಗಲಿ ತಿಳಿಯಲಾರದಿದ್ದರು. ಈ ರಾಮಬಾಣದಿಂದ ಅಂತರಿಕ್ಷ ದಲ್ಲಿ ಮಹಾಂಧಕಾರವು ವ್ಯಾಪಿಸಿ ಸೂರ್ಯಮಂಡಲವನ್ನೂ ಮರೆಸಿತು. ಆಗ ರಾಮನು ಎಡೆಬಿಡದೆ ಬಾಣಗಳನ್ನು ಕಕ್ಕುವಂತೆ ತೋರುತ್ತಿದ್ದನು. ಆಗಾಗ ರಾಮಬಾಣಹತಿಯಿಂದ ಏಕಕಾಲದಲ್ಲಿ ತಂಡತಂಡವಾಗಿ ಉರುಳಿಬೀಳುತ್ತಿದ್ದ ವರೂ, ಉರುಳಿಬಿದ್ದವರೂ, ಗಾಯಪಟ್ಟವರೂ ಆ ರಣಭೂಮಿಯಲ್ಲಿ ಎಡೆಬಿಡದೆ ತುಂಬಿಹೋದರು. ಹೀಗೆ ಗಾಯಪಟ್ಟವರೂ, ಸತ್ತುಬಿದ್ದವರೂ, ಕಂಠಗತ ಪ್ರಾಣರಾಗಿ ನರಳುವವರೂ, ಎರಡುತುಂಡಾಗಿ ಕತ್ತರಿಸಲ್ಪಟ್ಟವರೂ, ಅಂಗಹೀನ ರಾದವರೂ, ಸೀಳಲ್ಪಟ್ಟವರೂ ಅಲ್ಲಲ್ಲಿ ಸಾವಿರಾರು ಸಂಖ್ಯೆಯಿಂದ ಬಿದ್ದಿದ್ದರು. ಆ ರಣಭೂಮಿಯಲ್ಲಿ ರಾಮಬಾಣಹತಿಯಿಂದ ನಡೆದ ಚಿತ್ರವಧವನ್ನು ಹೀಗೆಂದು ವರ್ಣಿಸಲು ಸಾಧ್ಯವೆ? ಸುತ್ತಿದ ಶಿರೋವಸ್ತ್ರಗಳೊಡನೆಯೇ, ಉರುಳಿಬಿದ್ದ ತಲೆಗಳು ಕೆಲವು! ಬರೀ ತಲೆಬುರುಡೆಗಳು ಕೆಲವು! ಅಂಗದಾದ್ಯಾಭರಣದಿಂದ ಕೂಡಿದ ತೋಳುಗಳು ಕೆಲವು! ಬರೀ ತೋಳುಗಳು ಕೆಲವು! ಒಂದು ಕಡೆಯಲ್ಲಿ ಮುರಿದ ತೊಡೆಗಳು! ಮತ್ತೊಂದು ಕಡೆಯಲ್ಲಿ ಮುರಿದುಬಿದ್ದ ಮೊಳಕಾಲು ಗಳು! ಹೀಗೆ ನಾನಾಲಂಕಾರಗಳಿಂದ ಕೂಡಿ ಭಿನ್ನಭಿನ್ನವಾದ ಅವಯವಗಳು ಅಲ್ಲಲ್ಲಿ ಬೇರೆಬೇರೆಯಾಗಿ ಬಿದ್ದಿದ್ದುವು. ಇದಲ್ಲದೆ ಅಲ್ಲಲ್ಲಿ ತುಂಡುತುಂಡಾಗಿ ಬಿದ್ದ ಆನೆ ಕುದುರೆಗಳೂ, ಪುಡಿಪುಡಿಯಾದ ರಥಗಳೂ, ಮುರಿದುಬಿದ್ದ ಶೂಲಪಟ್ಟಿಸ ಖಡ್ಗಾದ್ಯಾಯುಧಗಳೂ, ಅಲ್ಲಲ್ಲಿ ಕಡಿದುಬಿದ್ದ ಛತ್ರಚಾಮರ ವ್ಯಜನಾದಿಗಳೂ, ಅಲ್ಲಲ್ಲಿ ತುಂಡಾಗಿ ಬಿದ್ದಿರುವ ಕತ್ತಿ, ಕೊಡಲಿ ಮುಂತಾದುವುಗಳೂ, ಚೂರ್ಣಿತ ವಾದ ಶಿಲೆಗಳೂ, ಕತ್ತರಿಸಲ್ಪಟ್ಟ ನಾನಾಬಗೆಯ ಬಾಣಗಳೂ, ಆ ರಣರಂಗ ದಲ್ಲಿ ಎಡೆಬಿಡದೆ ತುಂಬಿಹೋಗಿ, ನೋಡುವವರಿಗೆ ಅತಿ ಘೋರವಾಗಿ ಕಾಣಿಸು ತ್ತಿದ್ದುವು.

ಇಲ್ಲಿಗೆ ಇಪ್ಪತ್ತೈದನೆಯ ಸರ್ಗವು.

## ದೂಷಣಾದಿಗಳ ವಧವು

ಹೀಗೆ ರಾಕ್ಷಸಸೈನ್ಯವು ನಾನಾ ಕಡೆಗಳಲ್ಲಿಯೂ ಹತವಾಗುವುದನ್ನು ನೋಡಿ ದೂಷಣನು, ಮಹಾವೇಗಶಾಲಿಗಳಾಗಿಯೂ, ಯುದ್ಧದಲ್ಲಿ ಹಿಂಜರಿಯದವರಾಗಿಯೂ, ಶತ್ರುಗಳಿಂದ ಇದಿರಿಸಲಸಾಧ್ಯರಾಗಿಯೂ ಇರುವ ಸಮರ್ಥರಾದ ಐದುಸಾವಿರ ಮಂದಿ ರಾಕ್ಷಸರನ್ನು ರಾಮನ ಮೇಲೆ ಯುದ್ಧ ಮಾಡುವುದಕ್ಕೆ ನಿಯಮಿಸಿದನು. ಅವರು ರಾಮನ ಸುತ್ತಲೂ ಸುತ್ತಿಕೊಂಡು ಶೂಲಗಳನ್ನೂ, ಪಟ್ಟಸಗಳನ್ನೂ, ಕತ್ತಿಗಳನ್ನೂ, ಕೈಗೆ ಸಿಕ್ಕಿದ ಕಲ್ಲು ಮರಗಳನ್ನೂ, ಬಾಣಗಳನ್ನೂ ಎಡೆಬಿಡದೆ ಪ್ರಯೋಗಿಸುತ್ತಿದ್ದರು. ಇವೆಲ್ಲವನ್ನೂ ರಾಮನು ತನ್ನ ತೀಕ್ಷ್ಣ ಬಾಣಗಳಿಂದ ನಡುದಾರಿಯಲ್ಲೇ ಕತ್ತರಿಸಿಬಿಟ್ಟನು. ಯಾವುದನ್ನೂ ಲಕ್ಷ್ಯಮಾಡದೆ ಮದದಿಂದ ಕಣ್ಣು ಮುಚ್ಚಿಕೊಂಡಿರುವ ಗೂಳಿಯಂತೆ, ರಾಮನು ರಾಕ್ಷಸರ ಶಿಲಾವರ್ಷಾದಿಗಳೊಂದಕ್ಕೂ ಲಕ್ಷ್ಯಮಾಡದೆ ಸುಮ್ಮನಿದ್ದನು. ಕೊನೆಗೆ ಅವರು ಮಿತಿಮೀರಿ ಬರಲು, ಆಗ ಸಮಸ್ತ ರಾಕ್ಷಸರನ್ನೂ ಕೊಲ್ಲಬೇಕೆಂಬ ಕೋಪೋದ್ರೇಕವು ಆತನ ಮನಸ್ಸಿಗೆ ಹುಟ್ಟಿತು. ರಾಮನು ಅತಿಕೋಪದಿಂದ ಜ್ವಲಿಸುವಂತೆ ತೋರುತ್ತ, ದೂಷಣನೊಡಗೂಡಿ ಬಂದ ಆ ಸೈನ್ಯದ ಸುತ್ತಲೂ ಬಾಣವರ್ಷಗಳನ್ನು ಕರೆದನು. ಇದನ್ನು ನೋಡಿ ಆ ರಾಕ್ಷಸಸೈನ್ಯಕ್ಕೆ ಪ್ರಮುಖನಾಗಿ ಬಂದಿದ್ದ ದೂಷಣನು ಅತಿಕುಪಿತನಾಗಿ, ರಾಮನ ಮೇಲೆ ಸಿಡಿಲಿಗೆ ಸಮಾನವಾದ ಬಾಣಗಳನ್ನು ಪ್ರಯೋಗಿಸಿದನು. ಅದನ್ನು ನೋಡಿ ರಾಮನು ಮತ್ತಷ್ಟು ಕುಪಿತನಾಗಿ, ಒಂದು ಸಣ್ಣ ಕತ್ತಿಯಿಂದ ಆತನ ಕೈಯಲ್ಲಿದ್ದ ಧನುಸ್ಸನ್ನೂ, ಬೇರೆ ನಾಲ್ಕು ಬಾಣಗಳಿಂದ ಆತನ ನಾಲ್ಕು ರಥಾಶ್ವಗಳನ್ನೂ ಕತ್ತರಿಸಿಬಿಟ್ಟನು. ಆಮೇಲೆ ಒಂದು ಅರ್ಧಚಂದ್ರಬಾಣದಿಂದ ಸಾರಥಿಯ ತಲೆಯನ್ನು ಕಡಿದು; ಕೊನೆಗೆ ಆ ರಾಕ್ಷಸನ ಎದೆಗೆ ಗುರಿಯಿಟ್ಟು ಮೂರು ಬಾಣಗಳನ್ನು ಹೊಡೆದನು. ಒಂದು ನಿಮಿಷಮಾತ್ರದಲ್ಲಿ ಆ ದೂಷಣನಿಗೆ ಕೈಯಲ್ಲಿದ್ದ ಧನಸ್ಸೂ ಮುರಿದುಹೋಯಿತು! ರಥವೂ ಪುಡಿಪುಡಿಯಾಯಿತು! ಕುದುರೆಗಳೂ ಸತ್ತುಬಿದ್ದವು! ಸಾರಥಿಯೂ ಸಂಹೃತನಾದನು. ಆಗ ದೂಷಣನು ತನಗಿದ್ದ ಸಮಸ್ತಸಾಧನಗಳೂ ಹೋದುದನ್ನು ನೋಡಿ, ಅತಿಕೋಪಗೊಂಡವನಾಗಿ, ನೋಡುವಾಗಲೇ ಮೈಯಲ್ಲಿ ರೋಮಾಂಚ ಹುಟ್ಟಿಸುವಷ್ಟು ಮಹಾ ಭಯಂಕರವಾಗಿಯೂ, ಪರ್ವತಾಕಾರವಾಗಿಯೂ, ಬಂಗಾರದ ಕಟ್ಟುಗಳುಳ್ಳ

ದಾಗಿಯೂ ಇದ್ದ ಒಂದು ದೊಡ್ಡ ಪರಿಘಾಯುಧವನ್ನು ಕೈಗೆ ತೆಗೆದು ಕೊಂಡನು. ಆ ಪರಿಘಾಯುಧದ ಕ್ರೌರ್ಯವನ್ನು ಅಷ್ಟಿಷ್ಟೆಂದು ಹೇಳಲ ಸಾಧ್ಯವು. ಇದುವರೆಗೆ ಎಷ್ಟೋ ದೇವಸೈನ್ಯವನ್ನು ಅರೆದಿಕ್ಕಿ, ಎಷ್ಟೋ ಶತ್ರುಗಳ ರಕ್ತದಲ್ಲಿ ತೊಯ್ದಿರುವುದು. ಅದರ ಸುತ್ತಲೂ ಉದ್ದಕ್ಕೂ ಅತಿ ತೀಕ್ಷ್ಣವಾದ ಉಕ್ಕಿನ ಮುಳ್ಳುಗಳು ನಾಟಲ್ಪಟ್ಟಿರುವುವು. ಅದನ್ನು ಕೈಯಿಂದ ಮುಟ್ಟಿದ ಮಾತ್ರಕ್ಕೆ ಸಿಡಿಲನ್ನು ಮುಟ್ಟಿದಂತಾಗುವುದು. ಹೀಗೆ ಅತಿಘೋರ ವಾಗಿ ಮಹಾವಿಷಸರ್ಪದಂತಿರುವ ಆ ಪರಿಘವನ್ನು ಎತ್ತಿಹಿಡಿದು, ದೂಷಣನು ರಾಮನಿಗಿದಿರಾಗಿ ಓಡಿಬಂದನು. ಹೀಗೆ ಮೇಲೆಬೀಳುವುದಕ್ಕೆ ಬರುತ್ತಿರುವ ದೂಷಣನನ್ನು ನೋಡಿ, ರಾಮನು ಆತನು ತನ್ನ ಸಮೀಪಕ್ಕೆ ಬರುವುದ ರೊಳಗಾಗಿ, ಎರಡು ಬಾಣಗಳನ್ನು ಪ್ರಯೋಗಿಸಿ ಆತನ ತೋಳುಗಳೆರಡನ್ನೂ ಕತ್ತರಿಸಿದನು. ಆ ಕ್ಷಣದಲ್ಲಿಯೇ ಆ ಎರಡು ತೋಳುಗಳೂ ಆಭರಣಸಹಿತವಾಗಿ ನೆಲದಮೇಲೆ ಬಿದ್ದುವು. ಆತನು ಕೈಯ್ಯಲ್ಲಿ ಹಿಡಿದಿದ್ದ ದೊಡ್ಡ ಪರಿಘವೂ ಕೂಡ, ಇಂದ್ರಧ್ವಜವು ಮುರಿದುಬೀಳುವಂತೆ ಕೈಯ್ಯಿಂದ ಜಾರಿ ಆ ರಣರಂಗ ದಲ್ಲಿ ಬಿದ್ದಿತು. ಆಗಲೇ ದೂಷಣನು ಕೊಂಬು ಮುರಿದ ಕಾಡಾನೆಯಂತೆ ತೋಳು ಮುರಿದು ಬಿದ್ದುಬಿಟ್ಟನು. ಹೀಗೆ ದೂಷಣನು ರಾಮಬಾಣದಿಂದ ಹೊಡೆಯಲ್ಪಟ್ಟು ಯುದ್ಧಭೂಮಿಯಲ್ಲಿ ಬಿದ್ದುದನ್ನು ನೋಡಿ ಅಲ್ಲಿದ್ದ ಸಮಸ್ತ ಭೂತಗಳೂ "ಭಲೆ, ಭಲೆ!" ಎಂದು ರಾಮನನ್ನು ಕೊಂಡಾಡುತ್ತಿದ್ದುವು. ಇಷ್ಟರೊಳಗಾಗಿ ದೂಷಣವಧವನ್ನು ನೋಡುತ್ತಿದ್ದ ಮಹಾಕಪಾಲನು, ಸ್ಥೂಲಾಕ್ಷನು, ಪ್ರಮಾಥಿ ಎಂಬ ಮೂರುಮಂದಿ ರಾಕ್ಷಸ ಸೇನಾಧಿಪತಿಗಳು ಅತಿಕುಪಿತರಾಗಿ ಒಟ್ಟುಗೂಡಿ, ತಾವು ಮೃತ್ಯುಪಾಶಕ್ಕೆ ಸಿಕ್ಕುವುದನ್ನು ತಿಳಿಯದೆ ರಾಮನ ಮೇಲೆ ಬೀಳುವುದಕ್ಕೆ ಬಂದರು. ಅವರಲ್ಲಿ ಮಹಾಕಪಾಲನೆಂಬುವನು ಒಂದು ದೊಡ್ಡ ಶೂಲವನ್ನೂ, ಸ್ಥೂಲಾಕ್ಷನು ಪಟ್ಟಸವನ್ನೂ, ಪ್ರಮಾಥಿಯು ಒಂದು ಕೊಡಲಿಯನ್ನೂ ಹಿಡಿದು, ರಾಮನನ್ನಿದಿರಿಸಿದರು. ಹೀಗೆ ತನ್ನ ಮೇಲೆ ಬೀಳುವುದಕ್ಕೆ ಬರುವ ಆ ಮೂರುಮಂದಿ ರಾಕ್ಷಸರನ್ನೂ ರಾಮನು ತೀಕ್ಷ್ಣವಾದ ಮೂರು ಬಾಣಗಳಿಂದ ತಡೆದು, ಅಭ್ಯಾಗತರಾದ ಅತಿಥಿಗಳನ್ನು ಉಪಚಾರ ಗಳಿಂದ ಮನ್ನಿಸುವಂತೆ ಬಾಣಗಳಿಂದಲೇ ಆ ಮೂವರನ್ನೂ ಪ್ರತಿಗ್ರಹಿಸಿದನು. ಆಮೇಲೆ ತೀಕ್ಷ್ಣವಾದ ಕೆಲವು ಬಾಣಗಳಿಂದ ಮಹಾಕಪಾಲನ ಶಿರವನ್ನು

ಕತ್ತರಿಸಿ; ಹಾಗೆಯೇ ಅಸಂಖ್ಯಾತವಾದ ಬಾಣಸಮೂಹಗಳಿಂದ ಪ್ರಮಾಥಿಯನ್ನೂ ಹೊಡೆದನು. ಈ ರಾಮಬಾಣದಿಂದ ಪೀಡಿತನಾದ ಪ್ರಮಾಥಿಯು ಅನೇಕ ಶಾಖೆಗಳಿಂದ ಕೂಡಿದ ದೊಡ್ಡ ಮರವು ಉರುಳಿ ಬೀಳುವಂತೆ ನೆಲದ ಮೇಲೆ ಬಿದ್ದನು. ಆಮೇಲೆ ಸ್ಥೂಲಾಕ್ಷನ ಕಣ್ಣುಗಳೆರಡನ್ನೂ ತೀಕ್ಷ್ಣವಾದ ಬಾಣಗಳಿಂದ ತುಂಬಿದುವಲ್ಲದೆ, ಇದನ್ನು ನೋಡಿ ಕೋಪದಿಂದ ತನ್ನನ್ನಿದಿರಿಸುವುದಕ್ಕೆ ಬಂದ ದೂಷಣನ ಕಡೆಯ ಐದುಸಾವಿರ ಮಂದಿ ರಾಕ್ಷಸರನ್ನೂ ಐದುಸಾವಿರ ಬಾಣಗಳಿಂದ ಯಮಪುರಿಗೆ ಕಳುಹಿಸಿಬಿಟ್ಟನು. ಹೀಗೆ ದೂಷಣನೂ ಆತನ ಸೈನಿಕರೂ ಹತರಾದುದನ್ನು ನೋಡಿ ಖರನಿಗೆ ಮಹಾಕೋಪವುಂಟಾಯಿತು. ಆಗ ಆತನು ಬಲಾಢ್ಯರಾದ ಕೆಲವು ರಾಕ್ಷಸಸೇನಾಧಿಪತಿಗಳನ್ನು ಕರೆದು "ಎಲೈ ರಾಕ್ಷಸವೀರರೆ! ಅದೋ! ದೂಷಣನೂ, ಆತನ ಸೈನಿಕರೂ ಯುದ್ಧದಲ್ಲಿ ಹತರಾದರು. ಇನ್ನು ಸುಮ್ಮನಿರುವುದಕ್ಕೆ ಇದು ಕಾಲವಲ್ಲ. ನೀವು ವೀರರಾಕ್ಷಸರಾದರೂ ದೊಡ್ಡಸೇನೆಯನ್ನು ತೆಗೆದುಕೊಂಡುಹೋಗಿ, ಅಲ್ಪಮನುಷ್ಯನಾದ ಆ ರಾಮನೊಡನೆ ಯುದ್ಧ ಮಾಡಬೇಕಾಗಿರುವುದು. ಹೇಗಾದರೂ ನಮ್ಮ ಕಡೆಯ ರಾಕ್ಷಸರೆಲ್ಲರೂ ಸೇರಿ, ನಾನಾವಿಧಗಳಾದ ಶಸ್ತ್ರಗಳಿಂದ ಆತನನ್ನು ಕೊಲ್ಲುವ ಪ್ರಯತ್ನಮಾಡಿರಿ!" ಎಂದು ಹೇಳಿ, ತಾನೇ ಮುಂದಾಗಿ ರಾಮನಿರುವ ಕಡೆಗೆ ಬಂದನು. ಈತನೊಡನೆ ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಪರುಷ, ಕರವೀರಾಕ್ಷ, ಕಾಲಕಾರ್ಮುಕ, ಮೇಘಮಾಲಿ, ಮಹಾಮಾಲಿ, ಸರ್ಪಾಸ್ಯ, ರುಧಿರಾಶನರೆಂಬ ಹನ್ನೆರಡು ಮಂದಿ ರಾಕ್ಷಸಸೇನಾಧಿಪತಿಗಳು ತಮ್ಮ ತಮ್ಮ ಸೇನೆಯೊಡನೆ ಬಂದು ರಾಮನ ಮೇಲೆ ಶರವರ್ಷಗಳನ್ನು ಕರೆಯುತ್ತಿದ್ದರು. ಆಗ ರಾಮನು ಚಿನ್ನದ ಕಟ್ಟುಗಳಿಂದಲೂ, ವಜ್ರದಿಂದಲೂ ಅಲಂಕೃತಗಳಾಗಿ ಅಗ್ನಿಯಂತೆ ಜ್ವಲಿಸುತ್ತಿರುವ ಬಾಣಗಳಿಂದ ಉಳಿದ ಆ ಸಮಸ್ತಸೈನ್ಯವನ್ನೂ ಕ್ಷಣಮಾತ್ರದಲ್ಲಿ ಕೊಂದುಬಿಟ್ಟನು. ಕಪ್ಪಾದ ಉಕ್ಕಿನ ಅಲಗುಗಳಿಂದಲೂ ಚಿನ್ನದ ಹಿಡಿಗಳಿಂದಲೂ ಕೂಡಿದ ಆ ರಾಮಬಾಣಗಳು, ಹೊಗೆಯನ್ನು ಕಕ್ಕುವ ಅಗ್ನಿಜ್ವಾಲೆಗಳಂತೆ ಕಾಣುತ್ತ, ಆ ರಾಕ್ಷಸರ ಮೇಲೆ ಬೀಳಲು, ಸಿಡಿಲಿನಿಂದ ಹೊಡೆಯಲ್ಪಟ್ಟ ದೊಡ್ಡ ಮರಗಳಂತೆ ಆ ರಾಕ್ಷಸರೆಲ್ಲರೂ ಆಗಲೇ ಸತ್ತುಬಿದ್ದರು. ಆ ರಣರಂಗದಲ್ಲಿ ರಾಮನು ಕರ್ಣಾಕಾರವಾದ ಕೆಲವು ಬಾಣಗಳನ್ನು ಪ್ರಯೋಗಿಸುತ್ತಾ, ಆಯಾ ರಾಕ್ಷಸರ ಸಂಖ್ಯೆಗೆ ತಕ್ಕಂತೆ,

ನೂರು ಮಂದಿಯನ್ನು ನೂರು ಬಾಣಗಳಿಂದಲೂ, ಸಾವಿರ ಮಂದಿಯನ್ನು ಸಾವಿರ ಬಾಣಗಳಿಂದಲೂ ಕೊಲ್ಲುತ್ತಿದ್ದನು. ಈ ರಾಮಬಾಣಗಳಿಂದ ಹೊಡೆಯಲ್ಪಟ್ಟ ರಾಕ್ಷಸರ ಧನುಸ್ಸು, ಕವಚ, ಮುಂತಾದುವುಗಳೆಲ್ಲವೂ ಮುರಿದುವಲ್ಲದೆ, ಅವರೂ ರಕ್ತಮಯವಾದ ದೇಹವುಳ್ಳವರಾಗಿ ನೆಲದ ಮೇಲೆ ಉರುಳುತ್ತಿದ್ದರು. ಹೀಗೆ ಮೈಯ್ಯಿಂದ ರಕ್ತವು ಸುರಿಯುತ್ತಿರಲು, ಬಿಚ್ಚಿದ ತಲೆಯುಳ್ಳವರಾಗಿ ಸತ್ತು ಬಿದ್ದಿರುವ ಆ ರಾಕ್ಷಸರಿಂದ ರಣಭೂಮಿಯೆಲ್ಲವೂ ದರ್ಭೆಗಳನ್ನು ಹರಡಿದ ದೊಡ್ಡ ಯಜ್ಞವೇದಿಕೆಯಂತೆ ಕಾಣುತ್ತಿತ್ತು. ಹೀಗೆ ರಕ್ತಮಾಂಸಗಳ ಕೆಸರಿನಿಂದ ತುಂಬಿದ ಆ ರಣಭೂಮಿಯೆಲ್ಲವೂ ರಾಕ್ಷಸರ ಮೃತದೇಹದಿಂದಲೂ ನಿಬಿಡವಾಗಿ ನರಕದಂತೆ ಮಹಾಘೋರವಾಗಿ ಕಾಣಿಸುತ್ತಿತ್ತು. ಕ್ರೂರಕರ್ಮಿಗಳಾದ ಆ ಹದಿನಾಲ್ಕುಸಾವಿರಮಂದಿ ರಾಕ್ಷಸರೂ, ಕೇವಲ ಮನುಷ್ಯಮಾತ್ರನಾಗಿ, ರಥ ತುರಗಾದಿ ಸಹಾಯಗಳೊಂದೂ ಇಲ್ಲದೆ ಪದಾತಿಯಾಗಿದ್ದ ರಾಮನೊಬ್ಬನಿಂದಲೇ ಕ್ಷಣಮಾತ್ರದಲ್ಲಿ ಧ್ವಂಸಮಾಡಲ್ಪಟ್ಟರು. ಈ ಮಹಾಯುದ್ಧವು ಮುಗಿದ ಮೇಲೆ ನೋಡಿದಾಗ ರಾಕ್ಷಸಸೇನೆಯಲ್ಲಿ ಮಹಾರಥನಾದ ಖರನೊಬ್ಬನೂ, ತ್ರಿಶಿರಸ್ಸೆಂಬ ರಾಕ್ಷಸನೊಬ್ಬನೂ, ಇತ್ತಲಾಗಿ ರಾಮನೊಬ್ಬನೂ ಈ ಮೂವರೇ ಉಳಿದರು. [1]ಮಹಾವೀರ್ಯವುಳ್ಳ ಉಳಿದ ರಾಕ್ಷಸರೆಲ್ಲರೂ ಹತರಾದರು. ಭಯಂಕರ ಸ್ವರೂಪವುಳ್ಳವರಾಗಿ, ಯಾರಿಂದಲೂ ತಡೆಯಲಸಾಧ್ಯವಾದ ಪರಾಕ್ರಮವುಳ್ಳವರಾಗಿದ್ದ ಆ ರಾಕ್ಷಸರೆಲ್ಲರೂ, ಲಕ್ಷ್ಮಣಾಗ್ರಜನಾದ ಈ ರಾಮನ ವೀರ್ಯಕ್ಕಿದಿರಾಗಲಾರದೆ ಸಂಹೃತರಾದರು. ಹೀಗೆ ಆ ಯುದ್ಧದಲ್ಲಿ ಭಯಂಕರವಾದ ರಾಕ್ಷಸಸೈನ್ಯವೆಲ್ಲವೂ ರಾಮನಿಂದ ಹತವಾದುದನ್ನು ನೋಡಿ ಖರನು ಅತಿ ಕುಪಿತನಾಗಿ, ಒಂದು ದೊಡ್ಡ ರಥವನ್ನೇರಿ ಇಂದ್ರನು ವಜ್ರಾಯುಧವನ್ನೆತ್ತಿಕೊಂಡು ಬರುವಂತೆ ಶಸ್ತ್ರಧಾರಿಯಾಗಿ ರಾಮನಿದಿರಿಗೆ ವೇಗದಿಂದ ಬರುತ್ತಿದ್ದನು.

ಇಲ್ಲಿಗೆ ಇಪ್ಪತ್ತಾರನೆಯ ಸರ್ಗವು.

---

1. ಇಲ್ಲಿ ಬಲಾಢ್ಯರೆಲ್ಲರೂ ಹತರಾದರೆಂಬುದರಿಂದ, ಕೇವಲ ದುರ್ಬಲರಾದ ಕೆಲವು ರಾಕ್ಷಸರು ಪಲಾಯಿತರಾಗಿ ಬದುಕಿಕೊಂಡರೆಂದು ಗ್ರಹಿಸಬೇಕು. ಮುಂದಿನ ಸರ್ಗದಲ್ಲಿ ಇವರನ್ನೇ ಹತಶೇಷರೆಂದು ಹೇಳಿದುದಾಗಿಯೂ ಗ್ರಾಹ್ಯವು.

## ತ್ರಿಶಿರಸ್ಸಿನ ವಧವು

ಹೀಗೆ ಖರನು ರಾಮನಿಗಿದಿರಾಗಿ ಬರುತ್ತಿರುವುದನ್ನು ನೋಡಿ, ತ್ರಿಶಿರಸ್ಸೆಂಬ ರಾಕ್ಷಸಸೇನಾಧಿಪತಿಯು ಖರನ ಬಳಿಗೆ ಬಂದು, ಆತನನ್ನು ತಡೆದು [1] "ಎಲೈ, ವೀರನೆ! ಇದೇನು! ಈ ಸಾಹಸವು ನಿನಗೇಕೆ? ಈ ಕಾರ್ಯಕ್ಕೆ ನನ್ನನ್ನು ನಿಯಮಿಸಬಾರದೆ? ಯುದ್ಧದಲ್ಲಿ ಆ ರಾಮನನ್ನು ನಾನು ಈಗಲೇ ಕೆಳಗೆ ಕೆಡಹುವುದನ್ನು ನೋಡುತ್ತಿರು! ಇದೋ! ಈ ಆಯುಧವನ್ನು ಮುಟ್ಟಿ

---

1. ಇಲ್ಲಿ "ಮಾಂ ನಿಯೋಜಯ ವಿಕ್ರಾಂತ ಸನ್ನಿವರ್ತಸ್ವ ಸಾಹಸಾತ್ । ಪಶ್ಯ ರಾಮಂ ಮಹಾಬಾಹುಂ ಸಂಯುಗೇ ವಿನಿಪಾತಿತಂ ॥ ಪ್ರತಿಜಾನಾಮಿ ತೇ ಸತ್ಯಮಾಯುಧಂ ಚಾಹಮಾಲಭೇ । ಯಥಾ ರಾಮಂ ವಧಿಷ್ಯಾಮಿ ವಧಾರ್ಹಂ ಸರ್ವರಕ್ಷಸಾಂ ॥ ಅಹಂ ವಾಸ್ಯ ರಣೇ ಮೃತ್ಯುರೇಷ ವಾ ಸಮರೇ ಮಮ । ವಿನಿವೃತ್ಯ ರಣೋತ್ಸಾಹಾನ್ಮುಹೂರ್ತಂ ಪ್ರಾಶ್ನಿಕೋ ಭವ॥ ಪ್ರಹೃಷ್ಟೋ ವಾ ಹತೇ ರಾಮೇ ಜನಸ್ಥಾನಂ ಪ್ರಯಾಸ್ಯಸಿ। ಮಯಿ ವಾ ನಿಹತೇ ರಾಮಂ ಸಂಯುಗಾಯೋಪಯಾಸ್ಯಸಿ ॥" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ:— (ಹೇವಿಕ್ರಾಂತ! ಸಂಯುಗೇ ರಾಮಂ ವಿನಿಪಾತಿತಂ ಚ ಪಶ್ಯ) ಎಲೈ ಖರನೆ! ಯುದ್ಧರಂಗದಲ್ಲಿ ರಾಮನನ್ನೂ, ಅವನಿಂದ ಹತವಾದ ನಮ್ಮ ಸೈನ್ಯವನ್ನೂ ನೋಡು. ಆದುದರಿಂದ (ಸಾಹಸಾನ್ನಿವರ್ತಸ್ವ, ಮಾಂ ಚ ನಿಯೋಜಯ) ನೀನೂ ಸಾಹಸದಿಂದ ವಿಮುಖನಾಗಿ ನನ್ನನ್ನೂ ಈ ಸಾಹಸಕ್ಕೆ ಪ್ರವರ್ತಿಸದಂತೆ ನಿಯಮಿಸು. (ಸರ್ವರಕ್ಷಸಾಂ ವಧಾರ್ಹಂ ರಾಮಂ ಅಹಂ ಯಥಾ ಪ್ರತಿಜಾನಾಮಿ) ಸಮಸ್ತರಾಕ್ಷಸವಧವನ್ನೇ ಉದ್ದೇಶವಾಗಿ ಉಳ್ಳ ರಾಮನನ್ನು ನಾನು ಯಥಾಸ್ಥಿತಸ್ವರೂಪದಿಂದಲೇ ಬಲ್ಲೆನು. (ಆಯುಧಂಚಾಹಮಾಲಭೇ ಯಥಾರಾಮಂ ವಧಿಷ್ಯಾಮಿ) ರಾಮನನ್ನು ಕೊಲ್ಲುವುದಕ್ಕಾಗಿ ಅದಕ್ಕೆ ತಕ್ಕಂತೆಯೇ ಆಯುಧಗಳನ್ನೂ ಹಿಡಿದು ನಾನು ಸಿದ್ಧವಾಗಿ ಹೋಗುವೆನು. ಆದರೇನು? (ಅಹಂ ವಾಸ್ಯ ರಣೇ ಮೃತ್ಯುಃ?) ಇಲ್ಲಿ "ವಾ" ಎಂಬುದು ಪ್ರಶ್ನಾರ್ಥಕವು. ನಾನು ಆತನಿಗೆ ಯುದ್ಧದಲ್ಲಿ ಮೃತ್ಯುವಾಗುವೆನೆ? ಎಂದಿಗೂ ಇಲ್ಲವು. (ಏಷ ವಾ ಸಮರೇ ಮಮ) ಇಲ್ಲಿ "ವಾ" ಎಂಬುದು ಅವಧಾರಣಾರ್ಥಕವು. ಆತನೇ ನನಗೆ ಮೃತ್ಯುವು. ಆದುದರಿಂದ (ಮಹೋತ್ಸಾಹಾನ್ನಿವರ್ತಸ್ವ) ನೀನು ಈ ಉತ್ಸಾಹದಿಂದ ನಿವೃತ್ತನಾಗು? (ಮುಹೂರ್ತಂಪ್ರಾಶ್ನಿಕೋಭವ) ಕ್ಷಣಕಾಲದವರೆಗೆ ನಮ್ಮ ಯುದ್ಧದ ಜಯಾಪಜಯವನ್ನು ನೋಡುತ್ತಿರು (ರಾಮೇ ಅಹತೇ ಮಯಿಚ ನಿಹತೇಸತಿ) ರಾಮನು ಸಾಯದೆ ನಾನು ಹತನಾದ ಮೇಲೆ (ತ್ವಂ ಪ್ರಹೃಷ್ಟಃ ಜನಸ್ಥಾನಂ ಪ್ರಯಾಸ್ಯಸಿ) ನೀನು ಸಂತೋಷದಿಂದ ಜನಸ್ಥಾನಕ್ಕೆ ಹಿಂತಿರುಗಿ ಹೋಗಬಹುದು. ಅಥವಾ (ತ್ವಂ ಪ್ರಹೃಷ್ಟಃ ಸಂಯುಗಾಯ ಉಪಯಾಸ್ಯಸಿ) ನೀನು ಸಂತೋಷದಿಂದ ರಾಮನೊಡನೆ ಯುದ್ಧಕ್ಕಾದರೂ ನಿಂತು ಅವನ ಕೈಯಿಂದ ಸಾಯಬಹುದು" ಎಂದು ಅರ್ಥಾಂತರವು.

ಆಣೆಯಿಟ್ಟು ಹೇಳುವೆನು. ರಾಕ್ಷಸರೆಲ್ಲರೂ ಸೇರಿ ಕೊಲ್ಲಬೇಕೆಂದಿರುವ ಈ ರಾಮನನ್ನು ನಾನೊಬ್ಬನೇ ಕೊಲ್ಲುವೆನು. ಈ ಯುದ್ಧದಲ್ಲಿ ನಾನಾದರೂ ಅವನನ್ನು ಕೊಲ್ಲುವೆನು ಅಥವಾ ಅವನಾದರೂ ನನ್ನನ್ನು ಕೊಲ್ಲಲಿ! ನೀನು ನನ್ನ ಮೇಲೆ ಕೃಪೆಯಿಟ್ಟು ಈ ಯುದ್ಧಪ್ರಯತ್ನವನ್ನು ಬಿಟ್ಟು, ಒಂದು ಮುಹೂರ್ತಕಾಲದವರೆಗೆ ನಮ್ಮ ಜಯಾಪಜಯಗಳಿಗೆ ಸಾಕ್ಷಿಯಾಗಿ ದೂರದಲ್ಲಿ ನಿಂತು ನೋಡುತ್ತಿರು! ರಾಮನು ನನ್ನಿಂದ ಹತನಾದರೆ ನೀನು ಸಂತೋಷದಿಂದ ಜನಸ್ಥಾನಕ್ಕೆ ಹಿಂತಿರುಗಬಹುದು. ಅಥವಾ ನಾನೇ ಆತನಿಂದ ಸಂಹೃತನಾದ ಪಕ್ಷದಲ್ಲಿ, ನೀನು ಮುಂದೆ ಬಂದು ಆತನೊಡನೆ ಯುದ್ಧಮಾಡಬೇಕೆಂಬುದು ಸಿದ್ಧವಾಗಿಯೇ ಇರುವುದಲ್ಲವೆ ? " ಎಂದನು. ಹೀಗೆ ಮೃತ್ಯುಲೋಭದಿಂದ ಪರವಶನಾದ ತ್ರಿಶಿರಸ್ಸು ತನ್ನನ್ನು ಸಮಾಧಾನಪಡಿಸಲು, ಖರನು ಅದಕ್ಕೊಪ್ಪಿ "ಸರಿ! ನೀನೇ ಹೋಗಿ ಯುದ್ಧಮಾಡು" ಎಂದನು. ಹೀಗೆ ಆತನು ಅನುಮತಿಯನ್ನು ಕೊಟ್ಟೊಡನೆಯೇ, ತ್ರಿಶಿರಸ್ಸು ಉತ್ತಮವಾದ ಕುದುರೆಗಳಿಂದ ಹೂಡಿದ ಒಂದು ರಥವನ್ನೇರಿ, ಮೂರು ಶಿಖರಗಳಿಂದ ಕೂಡಿದ ದೊಡ್ಡ ಬೆಟ್ಟದಂತೆ ಮೂರು ದೊಡ್ಡ ತಲೆಗಳುಳ್ಳವನಾಗಿ ರಾಮನನ್ನಿದಿರಿಸುವುದಕ್ಕೆ ಬಂದನು. ದಾರಿಯಲ್ಲಿ ಬರುತ್ತಿರುವಾಗಲೇ ಮೇಘವು ಮಳೆಯನ್ನು ಕರೆಯುವಂತೆ ರಾಮನ ಮೇಲೆ ಬಾಣವರ್ಷಗಳನ್ನು ಸುರಿಸಿದನು. ನೀರಿನಲ್ಲಿ ನೆನೆದ ದುಂಬಿಯಂತೆ ಘೋರಸ್ವರದಿಂದ ಕೂಗುತ್ತಾ ತನಗಿದಿರಾಗಿ ಬರುತ್ತಿರುವ ಆ ರಾಕ್ಷಸನನ್ನು ನೋಡಿ ರಾಮನು, ತಾನೂ ತೀಕ್ಷ್ಣವಾದ ಬಾಣಗಳನ್ನು ಆತನಮೇಲೆ ಪ್ರಯೋಗಿಸಲಾರಂಭಿಸಿದನು. ಹೀಗೆ ರಾಮನಿಗೂ ತ್ರಿಶಿರಸ್ಸಿಗೂ ನಡೆದ ಆಗಿನ ತುಮುಲಯುದ್ಧವು, ಮಹಾಬಲವುಳ್ಳ ಸಿಂಹಕ್ಕೂ ಆನೆಗೂ ನಡೆಯುವ ಹೋರಾಟದಂತೆ ನೋಡುವವರಿಗೆ ಕೌತುಕವನ್ನುಂಟುಮಾಡುತಿತ್ತು. ಆಮೇಲೆ ತ್ರಿಶಿರಸ್ಸು ಮೂರು ಬಾಣಗಳನ್ನು ರಾಮನ ಹಣೆಗೆ ಗುರಿಯಿಟ್ಟು ಹೊಡೆಯಲು, ರಾಮನು ಅತಿಕೋಪಾವಿಷ್ಟನಾಗಿ ಆ ರಾಕ್ಷಸನನ್ನು ಕುರಿತು ನಗುತ್ತಾ "ಭಲೆ! ರಾಕ್ಷಸನಾದ ನಿನಗೂ ಇಷ್ಟೊಂದು ಬಲವುಂಟೆ ? ನೀನು ಶೂರನೆಂಬುದೇ ನಿಜವು. ಆಹಾ! ಕೋಮಲವಾದ ಪುಷ್ಪಗಳಿಂದ ಹೊಡೆಯುವಂತೆ ನನ್ನ ಹಣೆಯ ಮೇಲೆ ನಿನ್ನ ಮೃದುವಾದ ಬಾಣಗಳಿಂದ ಹೊಡೆದೆಯಲ್ಲವೆ ? ಇದೋ! ನನ್ನ ಧನುಸ್ಸಿನ ನಾಣಿನಿಂದ ಹೊರಟುಬರುವ ಬಾಣಗಳನ್ನು ನೋಡು!" ಎಂದು

ಹೇಳುತ್ತ, ಕೋಪಗೊಂಡು ಸರ್ಪದಂತೆ ಕ್ರೂರವಾದ ಹದಿನಾಲ್ಕು ಬಾಣಗಳನ್ನು ಮೊದಲು ಆ ತ್ರಿಶಿರಸ್ಸಿನ ಎದೆಗೆ ಗುರಿಯಿಟ್ಟು ಹೊಡೆದನು. ಆಮೇಲೆ ಋಜುವಾದ ಗಿಣ್ಣುಗಳುಳ್ಳ ನಾಲ್ಕು ಬಾಣಗಳಿಂದ ಆತನ ನಾಲ್ಕು ರಥಾಶ್ವಗಳನ್ನೂ ಕೊಂದು ನೆಲಕ್ಕೆ ಕೆಡಹಿದನು. ಆಮೇಲೆ ಎಂಟು ಬಾಣಗಳನ್ನು ಬಿಟ್ಟು ಸಾರಥಿಯನ್ನು ರಥದಿಂದ ಕೆಡಹಿದನು. ಒಂದು ಬಾಣದಿಂದ ಆತನ ಧ್ವಜವನ್ನು ಕಡಿದನು. ಆಗ ರಾಕ್ಷಸನು ತನ್ನ ರಥವು ನಿಷ್ಪ್ರಯೋಜಕವಾಗಿಹೋದುದನ್ನು ನೋಡಿ, ಅದರಿಂದ ಕೆಳಕ್ಕೆ ಹಾರಿ ಮುಂದೆ ಬರುತ್ತಿರಲು, ರಾಮನು ಪುನಃ ಕೆಲವು ಬಾಣಗಳನ್ನು ಆತನ ಎದೆಗೆ ಗುರಿಯಿಟ್ಟು ಹೊಡೆದನು. ಈ ಬಾಣಗಳ ಪೆಟ್ಟನ್ನು ತಡೆದುಕೊಳ್ಳಲಾರದೆ ರಾಕ್ಷಸನು ನಿಶ್ಚೇಷ್ಟಿತನಾಗಿ ಮೂರ್ಛೆ ಬಿದ್ದಂತಾಗಲು, ಆಗ ಅಪ್ರಮೇಯವಾದ ಬಲವುಳ್ಳ ರಾಮನು ತೀವ್ರವಾದ ಮೂರು ಬಾಣಗಳಿಂದ ಆತನ ತಲೆಗಳನ್ನು ಕತ್ತರಿಸಿಬಿಟ್ಟನು. ಹೀಗೆ ರಾಮಬಾಣದಿಂದ ತಲೆಗಳು ಕತ್ತರಿಸಲ್ಪಟ್ಟೊಡನೆಯೇ ತ್ರಿಶಿರಸ್ಸು ರಕ್ತವನ್ನು ಕಾರುತ್ತ ನೆಲದಮೇಲೆ ಬಿದ್ದನು. ಖರನ ಕಡೆಯಲ್ಲಿ ಸತ್ತುಳಿದ ಕೆಲವು ರಾಕ್ಷಸರು, ಈ ತ್ರಿಶಿರಸ್ಸಿನ ವಧವನ್ನು ನೋಡಿ, ಹುಲಿಯನ್ನು ನೋಡಿದ ಕ್ಷುದ್ರ ಮೃಗಗಳಂತೆ ಹೆದರಿ, ನಿಮಿಷಮಾತ್ರವೂ ಆ ರಣರಂಗದಲ್ಲಿ ನಿಲ್ಲಲಾರದೆ ಭಯದಿಂದ ದಿಕ್ಕುದಿಕ್ಕಿಗೆ ಓಡಿದರು. ಆಗ ಖರನು ತಡೆಯಲಾರದ ಕೋಪಾವೇಶವುಳ್ಳವನಾಗಿ, ಭಯದಿಂದ ಓಡುತ್ತಿರುವ ಆ ರಾಕ್ಷಸರನ್ನು ಹಿಂತಿರುಗಿಸಿ, ರಾಹುವು ಚಂದ್ರನನ್ನಿದಿರಿಸುವುದಕ್ಕೆ ಬರುವಂತೆ ತಾನೇ ರಾಮನಿಗಿದಿರಾಗಿ ಬಂದನು.

ಇಲ್ಲಿಗೆ ಇಪ್ಪತ್ತೇಳನೆಯ ಸರ್ಗವು.

---

ರಾಮನು ಖರನ ರಥಾದಿಗಳನ್ನು ಮುರಿದುದು.

ಹೀಗೆ ದೂಷಣ ತ್ರಿಶಿರಸ್ಸುಗಳಿಬ್ಬರೂ ಹತರಾಗಲು, ರಾಮನ ಪರಾಕ್ರಮವನ್ನು ನೋಡಿ ಖರನಿಗೂ ಮನಸ್ಸಿನಲ್ಲಿ ಭಯವು ಹುಟ್ಟಿತು. ಶತ್ರುಗಳಿಂದ ತಡೆಯಲಸಾಧ್ಯವಾದ ಅಷ್ಟು ರಾಕ್ಷಸಸೈನ್ಯವೂ, ದೂಷಣ ತ್ರಿಶಿರಸ್ಸುಗಳೆಂಬ

ಅಂತಹ ರಾಕ್ಷಸವೀರರೂ ಏಕಾಕಿಯಾದ ರಾಮನೊಬ್ಬನಿಂದಲೇ ಹತರಾದುದನ್ನು ನೋಡಿದೊಡನೆ ಖರನಿಗಿದ್ದ ಕೊಬ್ಬೆಲ್ಲವೂ ಅಡಗಿಹೋಯಿತು. ಹೀಗಿದ್ದರೂ ಆತನು ಹಗೆ ತೀರಿಸಿಕೊಳ್ಳಬೇಕೆಂಬ ದುರ್ಬುದ್ಧಿಯಿಂದ, ನಮುಚಿಯು ಇಂದ್ರನನ್ನಿದಿರಿಸುವಂತೆ ರಾಮನನ್ನಿದಿರಿಸಿ ನಿಂತನು. ಹೀಗೆ ಮುಂದೆ ನಿಂತು, ರಕ್ತದಿಗ್ಧಗಳಾಗಿಯೂ, ಕೋಪಗೊಂಡ ಸರ್ಪಗಳಂತೆ ಮಹಾಕ್ರೂರಗಳಾಗಿಯೂ ಇರುವ ಬಾಣಗಳನ್ನು ಸಂಧಾನಮಾಡಿ, ಆಕರ್ಣಾಂತವಾಗಿ ಧನುಸ್ಸನ್ನೆಳೆದು ರಾಮನ ಮೇಲೆ ಪ್ರಯೋಗಿಸಿದನು. ರಥದಲ್ಲಿ ಕುಳಿತಹಾಗೆಯೇ ಖರನು, ಆಗಾಗ ಧನುಸ್ಸಿನ ನಾಣನ್ನೊದರಿ ಟಂಕಾರಮಾಡುತ್ತಾ, ತನ್ನ ವಿಧವಿಧವಾದ ಅಸ್ತ್ರ ಪ್ರಯೋಗ ಚಾತುರ್ಯದಿಂದ ಧನುರ್ವಿದ್ಯಾಕೌಶಲವನ್ನು ತೋರಿಸುತ್ತಿದ್ದನು. ಖರನು ಹೀಗೆ ತನ್ನಮೇಲೆ ಬಾಣಪ್ರಯೋಗಮಾಡುವುದನ್ನು ನೋಡಿ ರಾಮನು ತನ್ನ ಮಹಾಧನುಸ್ಸಿನಿಂದ ಬಾಣಗಳನ್ನು ಪ್ರಯೋಗಿಸಲಾರಂಭಿಸಿ, ದಿಕ್ಕು ವಿದಿಕ್ಕುಗಳನ್ನೆಲ್ಲಾ ತುಂಬಿಬಿಟ್ಟನು. ಮೇಘದಿಂದುಂಟಾದ ಜಲವರ್ಷದಂತೆ, ಈ ಬಾಣಸಮೂಹಗಳಿಂದ ಆಕಾಶವೆಲ್ಲವೂ ಎಡೆಬಿಡದೆ ತುಂಬಿಹೋಯಿತು. ಇತ್ತಲಾಗಿ ರಾಮನೂ, ಅತ್ತಲಾಗಿ ಖರನೂ ಎಡೆಬಿಡದೆ ಬಾಣಗಳನ್ನು ಬಿಡುತ್ತಿರಲು, ಆ ರಣರಂಗದ ಸುತ್ತಲಿನ ಅಂತರಾಳವೆಲ್ಲವೂ ಕೇವಲ ಬಾಣಮಯವಾದಂತೆಯೇ ತೋರುತ್ತಿತ್ತು. ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಸ್ಪರ್ಧೆಯಿಂದ ಹೋರಾಡುತ್ತಿರುವ ಅವರಿಬ್ಬರ ಬಾಣಪರಂಪರೆಗಳಿಂದ ಸೂರ್ಯಬಿಂಬವೇ ಮರೆಸಿಹೋಯಿತು. ಆಮೇಲೆ ಖರನು ಕಾಡಾನೆಯನ್ನು ಕಶೆಯಿಂದ ಹೊಡೆಯುವಂತೆ, ತೀಕ್ಷ್ಣವಾದ ಅಲಗುಗಳುಳ್ಳ ಕಾರ್ಣಾಕಾರವಾದ ಕೋಲುಬಾಣಗಳಿಂದ ರಾಮನನ್ನು ಹೊಡೆದನು. ಹೀಗೆ ಖರನು ರಥದಲ್ಲಿ ಕುಳಿತು ಧನುರ್ಧಾರಿಯಾಗಿ ಬಂದು ರಾಮನನ್ನು ಹೊಡೆಯುತ್ತಿರುವಾಗ, ಅಲ್ಲಿದ್ದ ಸಮಸ್ತ ಭೂತಗಳಿಗೂ ಅವನು ಪಾಶಹಸ್ತನಾದ ಯಮನಂತೆಯೇ ಕಾಣುತ್ತಿದ್ದನು. ರಾಮನು ಮಹಾಬಲಾಢ್ಯನಾಗಿಯೂ, ಸ್ಥಿರಪರಾಕ್ರಮಿಯಾಗಿಯೂ ಇದ್ದರೂ, ಇದುವರೆಗೆ ಅನೇಕ ರಾಕ್ಷಸಸೈನ್ಯಗಳನ್ನು ಕೊಂದುದರಿಂದ ಬಹಳವಾಗಿ ಬಳಲಿರಬಹುದೆಂದು ಖರನ ಮನಸ್ಸಿಗೆ ತೋರಿತು. ಇದರಿಂದ ಮನಸ್ಸಿನಲ್ಲಿ ಧೈರ್ಯವನ್ನು ತೆಗೆದುಕೊಂಡು ಉತ್ಸಾಹದಿಂದ ಸಿಂಹದಂತೆ ಮುಂದೆ ನುಗ್ಗಿದನು. ಹೀಗೆ ಸಿಂಹದಂತೆ ಗಂಭೀರವಾಗಿ ಅಲಕ್ಷ್ಯದಿಂದ ಬರುತ್ತಿರುವ ಆತನನ್ನು ನೋಡಿ ರಾಮನು,

ಆತನು ಹೀಗೆ ತನಗಿದಿರಾಗಿ ಬರುತ್ತಿರುವುದು, ಕೇವಲ ಕ್ಷುದ್ರಮೃಗವೊಂದು ಸಿಂಹಕ್ಕೆದಿರಾಗಿ ಬರುವಂತೆ ಎಣಿಸಿಕೊಂಡನು. ಆಗ ಖರನು ಸೂರ್ಯ ಸಮಾನವಾದ ತನ್ನ ದೊಡ್ಡ ರಥದಲ್ಲಿ ಕುಳಿತು, ಅಗ್ನಿಗಿದಿರಾಗಿ ಬರುವ ಪತಂಗದ ಹುಳದಂತೆ ರಾಮನಿಗಿದಿರಾಗಿ ಬಂದು ನಿಂತು, ಮೊದಲು ತನ್ನ ಬಾಣಪ್ರಯೋಗಚಾತುರ್ಯವನ್ನು ತೋರಿಸುತ್ತಾ, ಒಂದು ಬಾಣವನ್ನು ಪ್ರಯೋಗಿಸಿ, ಅದರಿಂದ ರಾಮನ ಕೈಯಲ್ಲಿದ್ದ ಬಾಣಸಹಿತವಾದ ಬಿಲ್ಲನ್ನು ಅದರ ಮುಷ್ಟಿಪ್ರದೇಶಕ್ಕೆ ಸರಿಯಾಗಿ ಕತ್ತರಿಸಿಬಿಟ್ಟನು. ಆಮೇಲೆ ಸಿಡಿಲಿಗೆ ಸಮಾನವಾಗಿ ಜ್ವಲಿಸುತ್ತಿರುವ ಬೇರೆ ಏಳು ಬಾಣಗಳನ್ನು ತೆಗೆದು ರಾಮನ ಕವಚಕ್ಕೆ ಪ್ರಯೋಗಿಸಿದನು. ಹೀಗೆ ಖರನಿಂದ ಬಿಡಲ್ಪಟ್ಟ ತೀಕ್ಷ್ಣವಾದ ಬಾಣಗಳು ರಾಮನ ಕವಚದ ಮೇಲೆ ಬಿದ್ದೊಡನೆಯೇ ಆ ಕವಚವು ಹರಿದು ನೆಲಕ್ಕೆ ಬಿದ್ದಿತು. ಅಷ್ಟಕ್ಕೂ ಬಿಡದೆ ಖರನು ಎಣೆಯಿಲ್ಲದ ಮಹಾ ತೇಜಸ್ಸುಳ್ಳ ಆ ರಾಮನ ಮೇಲೆ ಒಂದೇ ಕಾಲದಲ್ಲಿ ಸಾವಿರ ಬಾಣಗಳನ್ನು ಪ್ರಯೋಗಿಸಿದನು. ಈ ಬಾಣದಿಂದ ಮುಚ್ಚಲ್ಪಟ್ಟ ರಾಮನನ್ನು ನೋಡಿ ತನಗೆ ಜಯವುಂಟಾಯಿತೆಂಬ ಮಹೋತ್ಸಾಹದಿಂದ, ಖರನು ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ಆಗ ರಾಮನು ತನ್ನ ಸರ್ವಾವಯವಗಳನ್ನೂ ಖರನು ಬಾಣಗಳಿಂದ ಮುಚ್ಚಿದುದನ್ನು ನೋಡಿ ಮಿತಿಮೀರಿದ ಕೋಪವುಳ್ಳವ ನಾಗಿ, ಹೊಗೆಯಿಲ್ಲದೆ ಉರಿಯುತ್ತಿರುವ ಬೆಂಕಿಯಂತೆ ಜ್ವಲಿಸುತ್ತಿದ್ದನು. ಆಮೇಲೆ ಶತ್ರುಸಂಹಾರಕನಾದ ಆ ರಾಮನು ಖರನನ್ನು ಹೇಗಾದರೂ ಶೀಘ್ರದಲ್ಲಿ ಕೊನೆ ಗಾಣಿಸಿಬಿಡಬೇಕೆಂದು ಸಂಕಲ್ಪಿಸಿಕೊಂಡು, ಮಹಾಧ್ವನಿಯುಳ್ಳ ಬೇರೊಂದು ಧನುಸ್ಸನ್ನು ತೆಗೆದುಕೊಂಡು ಅದಕ್ಕೆ ನಾಣೇರಿಸಿಟ್ಟನು. ಇದೇ ಪೂರ್ವದಲ್ಲಿ ಅವನಿಗೆ ಅಗಸ್ತ್ಯಮಹರ್ಷಿಯು ಅನುಗ್ರಹಿಸಿಕೊಟ್ಟ ಮಹತ್ತಾದ ವೈಷ್ಣವ ಧನುಸ್ಸಾಗಿತ್ತು. ಆ ಸರ್ವೋತ್ತಮವಾದ ಧನುಸ್ಸನ್ನು ತೆಗೆದುಕೊಂಡು ಖರನಿ ಗಿದಿರಾಗಿ ನಿಂತು ಚಿನ್ನದ ಹಿಡಿಗಳುಳ್ಳ ಬಾಣಗಳನ್ನು ಬಿಟ್ಟು ಮೊದಲು ಆತನ ಧ್ವಜವನ್ನು ಕತ್ತರಿಸಿದನು. ರಾಮಬಾಣದಿಂದ ಕತ್ತರಿಸಲ್ಪಟ್ಟ ಸುವರ್ಣಮಯ ವಾದ ಆ ಧ್ವಜವು, ದೇವತೆಗಳ ಶಾಪದಿಂದ ಭೂಮಿಗೆ ಬಿದ್ದ ಸೂರ್ಯಬಿಂಬ ದಂತೆ ಆ ರಣರಂಗದಲ್ಲಿ ಬಿದ್ದು ಹೊಳೆಯುತ್ತಿತ್ತು. ಇದನ್ನು ನೋಡಿ ಖರನು ಕೋಪಗೊಂಡು ನಾಲ್ಕು ಬಾಣಗಳನ್ನು ತೆಗೆದು ರಾಮನ ದೇಹದ ಮರ್ಮಸ್ಥಾನ

ವನ್ನು ನೋಡಿ, ಅಂಕುಶದಿಂದ ಆನೆಯನ್ನು ಹೊಡೆಯುವಂತೆ ಬಾಣಗಳನ್ನು ಪ್ರಯೋಗಿಸುತ್ತಾ ಬರಲು, ರಾಮನು ಆ ಖರನ ಬಾಣಗಳಿಂದ ಗಾಯಪಟ್ಟ ಮೈಯುಳ್ಳವನಾಗಿ, ತನ್ನ ದೇಹದಲ್ಲಿ ರಕ್ತವು ಸೋರುತ್ತಿರುವುದನ್ನು ನೋಡಿದನು. ಆಗ ಆತನಿಗೆ ತಡೆಯಲಾರದಷ್ಟು ಕೋಪವುಂಟಾಯಿತು. ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡ ರಾಮನು ತನ್ನ ಕೈಯಲ್ಲಿದ್ದ ಆ ವೈಷ್ಣವಧನುಸ್ಸನ್ನು ಪಟ್ಟಾಗಿ ಹಿಡಿದು, ಕ್ರೂರವಾದ ಆರು ಬಾಣಗಳನ್ನು ಅದರಲ್ಲಿ ಸಂಧಾನಮಾಡಿ, ಒಂದು ಬಾಣವನ್ನು ಆ ರಾಕ್ಷಸನ ತಲೆಗೆ ಹೊಡೆದನು. ಆತನ ಎರಡು ತೋಳುಗಳಿಗೆ ಗುರಿಯಿಟ್ಟು ಎರಡು ಬಾಣಗಳನ್ನು ಹೊಡೆದನು. ಅರ್ಧಚಂದ್ರಾಕಾರವುಳ್ಳ ಮೂರು ಬಾಣಗಳನ್ನು ಆ ರಾಕ್ಷಸನ ಎದೆಗೆ ಹೊಡೆದನು. ಆಮೇಲೆ ಆ ರಾಕ್ಷಸನನ್ನು ಆಗಲೇ ಕೊಂದುಬಿಡಬೇಕೆಂಬ ಪ್ರಯತ್ನದಿಂದ ಸೂರ್ಯನಂತೆ ಜ್ವಲಿಸುತ್ತಿರುವ ಬೇರೆ ಹದಿಮೂರು ಬಾಣಗಳನ್ನು ತೆಗೆದು, ಅವುಗಳಲ್ಲಿ ಒಂದು ಬಾಣವನ್ನು ಆತನ ರಥದ ನೊಗಕ್ಕೂ, ನಾಲ್ಕು ಬಾಣಗಳನ್ನು ಆತನ ರಥಾಶ್ವಗಳಿಗೂ, ಆರನೆಯ ಬಾಣವನ್ನು ಸಾರಥಿಯ ತಲೆಗೂ ಗುರಿಯಿಟ್ಟು ಹೊಡೆದು ಕೆಡಹಿದನು. ಆಮೇಲೆ ಮೂರು ಬಾಣಗಳಿಂದ ಆ ರಥದ ಮೂಕಿಯನ್ನು ಕಡಿದನು. ಎರಡು ಬಾಣಗಳಿಂದ ಆ ರಥದ ಅಚ್ಚನ್ನು ಮುರಿದನು. ಹನ್ನೆರಡನೆಯ ಬಾಣದಿಂದ ಖರನ ಕೈಯಲ್ಲಿದ್ದ ಧನುರ್ಬಾಣಗಳೆರಡನ್ನೂ ಏಕಕಾಲದಲ್ಲಿ ಖಂಡಿಸಿಬಿಟ್ಟನು. ಕೊನೆಯ ಬಾಣವನ್ನು ಆ ಖರನ ಮೈಗೆ ಗುರಿಯಿಟ್ಟು ಅದರಿಂದ ಅವನ ದೇಹವು ಜರ್ಝರಿತವಾಗುವಂತೆ ಮಾಡಿದನು. ಹೀಗೆ ರಾಮಬಾಣದಿಂದ ಧನುಸ್ಸು, ರಥ, ಕುದುರೆ, ಸಾರಥಿ ಮುಂತಾದ ಸಮಸ್ತ ಸಾಧನಗಳೂ ಭಗ್ನವಾಗಲು, ಖರನು ಕೈಗೆ ಗದೆಯನ್ನು ತೆಗೆದುಕೊಂಡು ರಥದಿಂದ ಧುಮುಕಿ, ಪಾದಚಾರಿಯಾಗಿಯೇ ಯುದ್ಧಕ್ಕೆ ನಿಂತನು. ಹೀಗೆ ಮಹಾರಥನಾದ ರಾಮನು ಆ ಯುದ್ಧದಲ್ಲಿ ತೋರಿಸಿದ ಅದ್ಭುತ ಪರಾಕ್ರಮವನ್ನು ನೋಡಿ, ದೇವತೆಗಳೂ, ಮಹರ್ಷಿಗಳೂ ಪರಮಸಂತುಷ್ಟರಾಗಿ, ಎಲ್ಲರೂ ಒಟ್ಟುಗೂಡಿ ರಾಮನಿಗೆ ಕೈಮುಗಿದು ಆತನನ್ನು ಪೂಜಿಸಿದರು.

ಇಲ್ಲಿಗೆ ಇಪ್ಪತ್ತೆಂಟನೆಯ ಸರ್ಗವು.

ರಾಮನು [1]ಮೃದುವಾಕ್ಯಗಳಿಂದ ಖರನನ್ನು ನಿಂದಿಸಿದುದು.
ಖರನು ರಾಮನ ಮೇಲೆ ಗದೆಯನ್ನು ಬೀಸಿದುದು.
ಆ ಗದೆಯನ್ನು ರಾಮನು ಖಂಡಿಸಿದುದು.

ಹೀಗೆ ಖರನು ವಿರಥನಾಗಿ ಗದೆಯನ್ನು ಹಿಡಿದು ನಿಂತಿರುವುದನ್ನು ನೋಡಿ, ಮಹಾತೇಜಸ್ವಿಯಾದ ರಾಮನು ಅವನನ್ನು ಕುರಿತು ಮರ್ಮೋದ್ಘಾಟಕವಾದ ಮೃದುವಾಕ್ಯಗಳಿಂದ “ಎಲೈ ರಾಕ್ಷಸಶ್ರೇಷ್ಠನೆ! ರಥಗಜತುರಗಾದಿಗಳಿಂದ ತುಂಬಿದ ಇಷ್ಟು ದೊಡ್ಡ ಸೈನ್ಯಕ್ಕೂ ನೀನು ಅಧಿಪತಿಯಾಗಿರುವೆ! ಹೀಗಿದ್ದರೂ ಸಮಸ್ತಲೋಕಕ್ಕೂ ಜಿಗುಪ್ಸೆಯನ್ನುಂಟುಮಾಡುವ ಈ ಕ್ರೂರಕಾರ್ಯಕ್ಕೆ ಪ್ರಯತ್ನಿಸಬಹುದೆ? ಪ್ರಾಣಿಗಳಿಗೆ ಯಾವಾಗಲೂ ದುಃಖವನ್ನುಂಟುಮಾಡುವ ಘಾತುಕ ಸ್ವಭಾವವುಳ್ಳವನಾಗಿಯೂ, ಪಾಪಕಾರ್ಯಗಳಿಗೆ ಹಿಂಜರಿಯದವನಾಗಿಯೂ ಇರುವವನು, ತಾನೇ ಮೂರು ಲೋಕಕ್ಕೂ ಒಡೆಯನೆನೆಸಿಕೊಂಡಿದ್ದರೂ ಬದುಕಿರಲಾರನು. ಎಲೆ ರಾಕ್ಷಸನೆ! ಎಷ್ಟೇ ದಯಾಳುಗಳಾದರೂ, ಕೆಟ್ಟ ಹಾವನ್ನು ಕಂಡರೆ ಕೊಲ್ಲದೆ ಬಿಡುವರೇ? ಹಾಗೆಯೇ ಲೋಕವಿರುದ್ಧವಾದ ಕಾರ್ಯವನ್ನು ಮಾಡುವ ಕ್ರೂರಸ್ವಭಾವವುಳ್ಳವನನ್ನು ಸಮಸ್ತಜನವೂ ಕಂಡಕಂಡ ಕಡೆಯಲ್ಲಿ ಕೊಲ್ಲದೆ ಬಿಡರು. ಲೋಕದಲ್ಲಿ ಯಾವನು ಲೋಭದಿಂದಾಗಲಿ, ಕಾಮದಿಂದಲಾಗಲಿ, ಪಾಪಕಾರ್ಯಗಳನ್ನು ಮಾಡಿ, ಕೊನೆಗೆ ಅದು ಪಾಪಕಾರ್ಯವೆಂದು ತನಗೆ ತಿಳಿದರೂ ಪಶ್ಚಾತ್ತಾಪಪಡದಿರುವನೋ, ಅವನು ಹೀನದಶೆಯನ್ನು ಹೊಂದಿ [2]ಆಲಿಕಲ್ಲನ್ನು ತಿಂದ ಹಾವರಣೆಯಂತೆ ಎಂದಾದರೂ ಅದಕ್ಕೆ ತಕ್ಕ ಫಲವನ್ನು ಅನುಭವಿಸದಿರನು. ಎಲೆ ರಾಕ್ಷಸನೆ! ಈ ದಂಡಕಾರಣ್ಯದಲ್ಲಿ ಕೇವಲ ಧರ್ಮನಿರತರಾಗಿ, ಮಹಾತ್ಮರಾಗಿ, ತಪಸ್ಸಿನಲ್ಲಿರುವ ಋಷಿಗಳನ್ನು ಕೊಲ್ಲುವುದರಿಂದ ನಿನಗೆ ಬಂದ ಫಲವೇನು? ಲೋಕದಲ್ಲಿ ಪಾಪಕರ್ಮಿಗಳಾಗಿ,

1. ಖರನಿಗೆ ಸಮಸ್ತ ಸಾಧನಗಳೂ ಹೋದಮೇಲೆ, ರಾಮನಿಗೆ ಆತನಲ್ಲಿ ಪಶ್ಚಾತ್ತಾಪವು ಹುಟ್ಟಲು, ಆಗಲಾದರೂ ಅವನು ಯುದ್ಧೋದ್ಯೋಗವನ್ನು ಬಿಟ್ಟು ಅನುಕೂಲನಾಗಿ ಬರುವನೋ ಎಂಬುದಾಗಿ ಅವನ ಮನಸ್ಸನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ ರಾಮನು ಈ ಬುದ್ಧಿವಾದಗಳನ್ನು ಹೇಳುವುದಾಗಿ ತಿಳಿಯಬೇಕು.

2. ಹಾವರಣೆಗಳು ಆಲಿಕಲ್ಲನ್ನು ನುಂಗಿದರೆ, ಆ ಕ್ಷಣವೇ ಸಾಯುವುವೆಂದು ಪ್ರಸಿದ್ಧಿಯುಂಟು.

ಕ್ರೂರರಾಗಿ, ಜನರಿಗೆ ಅಸಹ್ಯವನ್ನುಂಟುಮಾಡುವ ದುಶ್ಚರ್ಯೆಯುಳ್ಳವರು, ತಾವು ಪೂರ್ವಜನ್ಮದಲ್ಲಿ ಮಾಡಿದ ಪುಣ್ಯಲೇಶದಿಂದ ಅಲ್ಪಸ್ವಲ್ಪವಾದ ಐಶ್ವರ್ಯ ವನ್ನು ಪಡೆದಿದ್ದರೂ, ಬಹುಕಾಲದವರೆಗೆ ಅದನ್ನುಳಿಸಿಕೊಂಡಿರಲಾರರು. ಬೇರನ್ನು ಕಿತ್ತ ಮರದಂತೆ ಕ್ರಮಕ್ರಮವಾಗಿ ಕಂದಿ ಶೀಘ್ರದಲ್ಲಿಯೇ ಅಧೋ ಗತಿಯನ್ನು ಹೊಂದುವರು ಪಾಪಕಾರ್ಯಕ್ಕೆ ತಕ್ಕ ಫಲವನ್ನು ಮನುಷ್ಯನು ಅನುಭವಿಸಿಯೇ ತೀರಬೇಕು. ಗಿಡಗಳು ಆಯಾ ಋತುಧರ್ಮಕ್ಕೆ ತಕ್ಕ ಪುಷ್ಪಫಲಗಳನ್ನು ಹೊಂದುವಂತೆ, ಕಾಲವು ಬಂದಾಗ ಪಾಪಪುಣ್ಯಗಳಿಗೆ ತಕ್ಕ ಫಲವು ತೋರದಿರವು. ಎಲೆ ರಾಕ್ಷಸನೆ! ನಿನಗೊಂದು ರಹಸ್ಯವನ್ನು ತಿಳಿಸುವೆನು ಕೇಳು! ಲೋಕದಲ್ಲಿ ಯಾರು ಯಾರು ಘೋರ ಪಾಪಗಳನ್ನು ಮಾಡುವರೋ, ಯಾರು ಯಾರು ಜನಗಳಿಗೆ ಕೇಡನ್ನು ಕೋರುವರೋ, ಅಂತವರನ್ನು ಕೊಲ್ಲುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿರುವೆನೆಂದು ತಿಳಿ! ಇದಕ್ಕಾಗಿಯೇ ನನ್ನ ತಂದೆಯಾದ ದಶರಥರಾಜನು ನನ್ನನ್ನು ನಿಯಮಿಸಿ ಕಳುಹಿಸಿರುವನು. ಇದೋ! ಈಗ ಸುವರ್ಣಮಯವಾದ ನನ್ನ ಬಾಣಗಳಿಂದ ನಿನ್ನ ಪ್ರಾಣವನ್ನು ನೀಗಿಸುವೆನು. ಈ ಬಾಣಗಳು ನಿನ್ನ ದೇಹವನ್ನು ಭೇದಿಸಿ ಕೊಂಡುಹೋಗಿ, ಹಾವುಗಳು ಹುತ್ತದಲ್ಲಿ ಸೇರುವಂತೆ ವೇಗದಿಂದ ನೆಲದಲ್ಲಿ ನಾಟಿಕೊಳ್ಳುವುದನ್ನೂ ನೋಡು. [1]ನೀನು ಇದುವರೆಗೆ ಈ ದಂಡಕಾರಣ್ಯದಲ್ಲಿ ಧರ್ಮಚಾರಿಗಳಾದ ಯಾವ ಯಾವ ಋಷಿಗಳನ್ನು ಕೊಂದು ತಿಂದಿರುವೆಯೋ, ಅವರನ್ನೇ ನೀನೂ ನಿನ್ನ ಸೈನ್ಯವೂ ಹಿಂಬಾಲಿಸಿ ಹೋಗುವಂತೆ ಮಾಡುವೆನು! ನೀನು ಇದುವರೆಗೆ ಯಾವ ಯಾವ ದೇವತೆಗಳನ್ನೂ, ಋಷಿಗಳನ್ನೂ ಹಿಂಸಿಸು ತ್ತಿದ್ದೆಯೋ, ಅವರೆಲ್ಲರೂ ಈಗ ಅಂತರಿಕ್ಷದಲ್ಲಿ ವಿಮಾನಾರೂಢರಾಗಿ ಬಂದು, ನನ್ನ ಬಾಣಗಳಿಂದ ಸತ್ತುಬಿದ್ದ ನಿನ್ನನ್ನು ನೋಡಿ ಸಂತೋಷಿಸುವರು! ಎಲೆ ಕುಲಾಧಮನೆ! ನೀನೂ ನಿನ್ನ ಕೈಲಾದಷ್ಟು ಪ್ರಯತ್ನಿಸು! ನಿನಗಿಷ್ಟಬಂದಂತೆ

---

1. ಪಾಪಿಗಳೂ ಕೂಡ ರಾಮಬಾಣದಿಂದ ಹತರಾಗಿ ಉತ್ತಮ ಲೋಕವನ್ನು ಹೊಂದುವರೆಂದು ಇದರಿಂದ ಸೂಚಿತವಾಗುವುದು. ಇದೇ ವಿಷಯವು ಸ್ಕಾಂದಪುರಾಣದಲ್ಲಿ "ರಾಮವಿದ್ಧಾ ನಿಶಿಚರಾ ಬಾಣೈರ್ಮಮ ಸುತಾಡಿತಾಃ । ನಾಮಮಾಸಾದ್ಯ ಸಮರೇ ಸಾಯುಜ್ಯಪದವೀಂ ಗತಾಃ ॥" ಎಂದು ರಾಕ್ಷಸರೂ ಕೂಡ ರಾಮನಿಂದ ಹತರಾಗಿ ಸಾಯುಜ್ಯಪದವಿಯನ್ನು ಹೊಂದಿದುದಾಗಿ ಕಾಣಿಸಲ್ಪಟಿದ್ದೆ.

ನನ್ನ ಮೇಲೆ ಬಾಣಗಳನ್ನು ಬಿಟ್ಟು ಪ್ರಹರಿಸು! ನಾನೂ ನನ್ನ ಶಕ್ತಿಯನ್ನು ನಿನಗೆ ತೋರಿಸುವೆನು. ಮರದಿಂದ ತಾಳೆಯ ಹಣ್ಣನ್ನು ಕೆಡಹುವಂತೆ ಈಗಲೇ ನಿನ್ನ ತಲೆಯನ್ನು ಕೆಡಹುವೆನು" ಎಂದನು. ಈ ಮಾತನ್ನು ಕೇಳಿದೊಡನೆ ಖರನಿಗೆ ಸಹಿಸಲಾರದ ಕೋಪವುಂಟಾಯಿತು. ಅವನ ಕಣ್ಣುಗಳೆರಡೂ ಕೆಂಡದಂತೆ ಕೆಂಪಾದುವು. ಹೀಗೆ ಕೋಪದಿಂದ ಮೈ ತಿಳಿಯದವನಾಗಿ, ರಾಮನನ್ನು ನೋಡಿ ಮುಗುಳ್ನಗೆಯನ್ನು ನಗುತ್ತ, ಆತನ ಪರುಷವಾಕ್ಯಗಳಿಗೆ ಪ್ರತ್ಯುತ್ತರವನ್ನು ಹೇಳಲಾರಂಭಿಸಿದನು. "ಎಲೈ ದಶರಥಪುತ್ರನೆ! ನೀನು ಯುದ್ಧದಲ್ಲಿ ಸಾಮಾನ್ಯರಾದ ಯಾರೋ ಕೆಲವು ರಾಕ್ಷಸರನ್ನು ಕೊಂದಮಾತ್ರಕ್ಕೆ, ಹೊಗಳಬಾರದ ನಿನ್ನನ್ನು ನೀನೇ ಹೊಗಳಿಕೊಳ್ಳುವೆಯಾ ? ಇದರಿಂದ ನಿನಗೆ ಯಾವುದೊಂದು ಪ್ರಶಂಸೆಯೂ ಬರಲಾರದು. ನಿಜವಾಗಿ ಪರಾಕ್ರಮಿಗಳಾಗಿಯೂ, ಬಲಾಢ್ಯರಾಗಿಯೂ ಇರುವ ಪುರುಷಶ್ರೇಷ್ಠರು ತಮ್ಮ ಪ್ರತಾಪಕ್ಕೆ ತಾವೇ ಹಿಗ್ಗಿ ಎಷ್ಟುಮಾತ್ರವೂ ಹೆಮ್ಮೆಯನ್ನು ಕೊಚ್ಚಿಕೊಳ್ಳಲಾರರು. ಕೇವಲ ಅಲ್ಪಬುದ್ಧಿಯುಳ್ಳವರಾಗಿಯೂ, ಹೇಡಿಗಳಾಗಿಯೂ ಇರುವ ಕ್ಷತ್ರಿಯಾಧಮರು ಮಾತ್ರವೇ ನಿನ್ನಂತೆ ಹೀಗೆ ನಿರರ್ಥಕವಾಗಿ ತಮ್ಮನ್ನು ತಾವೇ ಹೊಗಳಿಕೊಳ್ಳುವರು. ಯಾವ ವೀರನುತಾನೇ ಯುದ್ಧದಲ್ಲಿ ಮರಣಕಾಲವು ಸಂಭವಿಸಿರುವಾಗ, ನಿರರ್ಥಕವಾಗಿ ತನ್ನ ವಂಶೋನ್ನತಿ ಮೊದಲಾದುವುಗಳನ್ನು ಹೇಳಿ ಆತ್ಮಸ್ತುತಿಯನ್ನು ಮಾಡಿಕೊಳ್ಳುವನು? ನೀನು ನಿನ್ನನ್ನು ಹೀಗೆ ಹೊಗಳಿಕೊಳ್ಳುವುದರಿಂದಲೇ ನಿನ್ನ ಅಲ್ಪಸ್ವಭಾವವು ಸ್ಪಷ್ಟವಾಗುವುದು. [1]ದರ್ಭೆಯ ಹುಲ್ಲಿಗೆ

---

1. ಇಲ್ಲಿ "ಸುವರ್ಣಪ್ರತಿರೂಪೇಣ ತಪ್ತೇನೇವ ಕುಶಾಗ್ನಿನಾ" ಎಂದು ಮೂಲವು. ಇದಕ್ಕೆ ಗೋವಿಂದರಾಜೀಯ ವ್ಯಾಖ್ಯಾನುಸಾರವಾದ ಅರ್ಥವು ಮೇಲೆ ವಿವರಿಸಲ್ಪಟ್ಟಿದೆ. ಮಹೇಶ್ವರತೀರ್ಥದ ವ್ಯಾಖ್ಯಾನವೇನೆಂದರೆ, (ಕುಶಾಗ್ನಿನಾ) ಸುವರ್ಣಶೋಧಕವಾದ ಅಗ್ನಿಯಿಂದ (ತಪ್ತೇನ) ಕಾಯಿಸಲ್ಪಟ್ಟ (ಸುವರ್ಣಪ್ರತಿರೂಪೇಣ) ಬಂಗಾರದಂತಿರುವ ಹಿತ್ತಾಳೆ ಮೊದಲಾದ ಲೋಹದಿಂದ (ಲಘುತ್ವಂ) ಹೀನತೆಯು, ಅಥವಾ ದೋಷವು ಹೊರಗೆ ಕಾಣುವಂತೆ ನಿನ್ನ ಆತ್ಮಸ್ತುತಿಯಿಂದ ನಿನ್ನ ಲಘುತ್ವವೂ ಹೊರಬೀಳುವುದೆಂದು ಭಾವವು. ಇಲ್ಲಿ "ಸುವರ್ಣಪ್ರತಿರೂಪೇಣ ತಪ್ಯತೇ ನಾತ್ಮನಾಗ್ನಿನಾ" ಎಂಬ ಪಾಠಾಂತರವೂ ಉಂಟು. ಇದರ ಅರ್ಥಭೇದವೇನೆಂದರೆ— (ಆತ್ಮನಾಗ್ನಿನಾ ಸುವರ್ಣಪ್ರತಿರೂಪೇಣ ನ ತಪ್ಯತೇ) "ಬಂಗಾರದಂತೆ ಕಲ್ಲಿನಲ್ಲಿರುವ ಅಗ್ನಿರೂಪದಿಂದ ಯಾವ ವಸ್ತುವೂ ದಹಿಸಲ್ಪಡಲಾರದು" ಎಂದು ಭಾವವು.

ಅಂಟಿಕೊಂಡಿರುವ ಬೆಂಕಿಯು ಚಿನ್ನದಂತೆ ಕ್ಷಣಕಾಲದವರೆಗೆ ಹೊಳೆಯುತಿದ್ದರೂ, ಆಗಲೇ ಆರಿಹೋಗುವುದಲ್ಲದೆ, ಅದು ಬೇರೆ ಯಾವ ವಸ್ತುವನ್ನು ತಾನೇ ದಹಿಸಬಲ್ಲುದು? [1]ಎಲೈ ಕ್ಷತ್ರಿಯನೆ! ಧಾತುಗಳಿಂದ ಕೂಡಿ ನಿಶ್ಚಲವಾಗಿ ನಿಂತಿರುವ ಬೆಟ್ಟದಂತೆ, ಅನೇಕ ಶತ್ರುಗಳ ರಕ್ತದಿಂದ ಕೆಂಪಾದ ಗದೆಯನ್ನು ಕೈಯಲ್ಲಿ ಹಿಡಿದು, ನಿನ್ನ ಮುಂದೆ ನಿಂತಿರುವ ನಾನು ಇನ್ನೂ ನಿನ್ನ ಕಣ್ಣಿಗೆ ಬೀಳಲಿಲ್ಲವೇ? ಎಲೆ ರಾಮನೆ! ನನಗೆ ಈ ಗದೆಯೊಂದೇ ಸಾಕು. ಇದೊಂದರಿಂದಲೇ ನಿನ್ನ ಪ್ರಾಣವನ್ನು ತೆಗೆಯಬಲ್ಲೆನು. ಕೇವಲ ಮನುಷ್ಯಮಾತ್ರನಾದ ನಿನ್ನ ವಿಷಯವು ಹಾಗಿರಲಿ! ಪಾಶಹಸ್ತನಾದ ಯಮನಂತೆ ನಾನು, ಈ ಗದೆಯಿಂದಲೇ ಮೂರು ಲೋಕಗಳನ್ನೂ ಧ್ವಂಸಮಾಡಬಲ್ಲೆನು! ಎಲೆ ರಾಮನೆ! ನಾನು ಆತ್ಮಸ್ತುತಿಯನ್ನು ಮಾಡಿಕೊಳ್ಳಬೇಕೆಂದರೆ, ಇನ್ನೂ ಹೇಳಬೇಕಾದ ವಿಷಯವು ಎಷ್ಟೋ ಇರುವುದು. ಆದರೆ ನಿನ್ನ ಮುಂದೆ ಈಗ ಅದೊಂದನ್ನೂ ಹೇಳಲಾರೆನು. [2]ಇದೋ! ಸೂರ್ಯನು ಅಸ್ತಂಗತನಾಗುತ್ತಿರುವನು. ಈ ಆತ್ಮಸ್ತುತಿಯಿಂದಲೇ ಕಾಲವನ್ನು ಕಳೆಯುತ್ತಿದ್ದರೆ ನಮ್ಮ ಯುದ್ಧವು ನಿಂತುಹೋಗುವುದು. [3]ನೀನು

---

1. ಇಲ್ಲಿ "ಪರ್ಯಾಪ್ತೋಽಹಂ ಗದಾಪಾಣಿರ್ಹನ್ತುಂ ಪ್ರಾಣಾನ್ ರಣೇ ತವ | ತ್ರಯಾಣಾಮಪಿ ಲೋಕಾನಾಂ ಪಾಶಹಸ್ತ ಇವಾಂತಕಃ" ಎಂದು ಮೂಲವು. ಇದಕ್ಕೆ ಸೌಮ್ಯರೂಪವಾದ ವಾಸ್ತವಾರ್ಥವೇನೆಂದರೆ:—(ಗದಾಪಾಣಿಃ ಅಹಂ) ಗದಾಧಾರಿಯಾದ ನಾನು (ಪಾಶಹಸ್ತಃ ಅಂತಕ ಇವ) ಪಾಶಹಸ್ತನಾದ ಯಮನಂತೆ (ತವ ತ್ರಯಾಣಾಮಪಿ ಲೋಕಾನಾಂ) ನಿನ್ನಿಂದ ಸೃಷ್ಟವಾಗಿ, ನಿನ್ನ ಅಧೀನರಾಗಿರುವ ಈ ಮೂರು ಲೋಕಗಳ (ಪ್ರಾಣಾನ್) ಪ್ರಾಣಗಳನೂ, (ಹಂತುಂ ಸಮರ್ಥಃ) ಕೊಲ್ಲಬಲ್ಲೆನು. ಆದರೂ ಇಲ್ಲಿ ನಿನ್ನ ಮುಂದೆ ನಾನು ಗದೆಯನ್ನು ಕೈಯಲ್ಲಿ ಹಿಡಿದಿದ್ದರೂ ಏನೊಂದೂ ತೋರದೆ ಬೆಟ್ಟದಂತೆ ಸ್ತಬ್ಧನಾಗಿ ನಿಂತುಬಿಟ್ಟೆನೆಂದು ಪೂರ್ವವಾಕ್ಯದೊಡನೆ ಅನ್ವಯವು.

2. ಇಲ್ಲಿ ರಾಕ್ಷಸನಾದ ಖರನು ತನಗೆ ರಾತ್ರಿಯಲ್ಲಿ ಬಲವು ಹೆಚ್ಚಾಗಬಹುದಾಗಿದ್ದರೂ ಆ ರಾತ್ರಿಕಾಲದಲ್ಲಿ ಅಶಕ್ತನಾದ ಮನುಷ್ಯನನ್ನು ಕೊಲ್ಲುವುದು ತನಗೆ ಯಶಸ್ಕರವಲ್ಲವೆಂಬ ಅಭಿಪ್ರಾಯದಿಂದ ಹೀಗೆ ಹೇಳಿರುವನು.

3. ಇಲ್ಲಿ "ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ ಹತಾನಿ ತೇ | ತದ್ವಿನಾಶಾತ್ಕರೋಮ್ಯೇಷ ತೇಷಾಮಶ್ರುಪ್ರಮಾರ್ಜನಂ ||" ಎಂದು ಮೂಲವು. ಇಲ್ಲಿಯೂ ನಿನ್ನಿಂದ ಹದಿನಾಲ್ಕುಸಾವಿರ ರಾಕ್ಷಸರು ಹತರಾಗಿರುವರು. ಹಾಗೆಯೇ (ತ್ವತ್ + ವಿನಾಶಾತ್) ನಿನ್ನಿಂದ ಉಂಟಾಗುವ ನಾಶದಿಂದ ನಾನೂ, (ತೇಷಾಮಶ್ರುಪ್ರಮಾರ್ಜನಂ ಕರೋಮಿ) ಅವರ ಕಣ್ಣೀರನ್ನೊರೆಸುವೆನು. ಅವರೆಲ್ಲರ ಮರಣಕ್ಕೆ ಮುಖ್ಯಕಾರಣನಾದ ನಾನು ಸತ್ತರೆ ದುಃಖೋಪಶಮನವಾಗುವುದೆಂದು ಅರ್ಥಾಂತರವು.

ಇದುವರೆಗೆ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನು ಕೊಂದಿರುವೆಯಲ್ಲವೆ? ಈಗ ನಾನೂ ನಿನ್ನನ್ನು ಕೊಂದು ಅದರಿಂದ ಅವರ ಬಂಧುಗಳ ಕಣ್ಣೀರನ್ನೊರೆಸುವೆನು" ಎಂದನು. ಹೀಗೆಂದು ಹೇಳಿ ಖರನು, ಕೋಪದಿಂದ ಗದೆಯನ್ನು ತೆಗೆದುಕೊಂಡು, ಸಿಡಿಲಿನಂತಿರುವ ಆ ಗದೆಯನ್ನು ರಾಮನ ಮೇಲೆ ಪ್ರಯೋಗಿಸಿದನು. ಖರನಿಂದ ಪ್ರಯೋಗಿಸಲ್ಪಟ್ಟ ಆ ಮಹಾಗದೆಯು ಜಾಜ್ವಲ್ಯಮಾನವಾಗಿ ಹೊರಟುಬರುವಾಗ, ಆ ಜ್ವಾಲೆಗೆ ಸುತ್ತಲೂ ಇದ್ದ ಮರಗಿಡಗಳೆಲ್ಲವೂ ಸುಟ್ಟು ಬೂದಿಯಾದುವು. ಅಂತಹ ತೀಕ್ಷ್ಣವಾದ ಗದೆಯು ಮೃತ್ಯುಪಾಶದಂತೆ ತನ್ನಿದಿರಾಗಿ ಬರುತ್ತಿರುವುದನ್ನು ನೋಡಿ ರಾಮನು, ಅನೇಕ ಬಾಣಗಳನ್ನು ಪ್ರಯೋಗಿಸಿ, ಅದು ಅರ್ಧ ದಾರಿಯಲ್ಲಿ ಬರುತ್ತಿರುವಾಗಲೇ ಪುಡಿಪುಡಿಯಾಗುವಂತೆ ಕತ್ತರಿಸಿಬಿಟ್ಟನು. ಹೀಗೆ ರಾಮಬಾಣದಿಂದ ಭಗ್ನವಾದ ಆ ಗದೆಯು, ಮಂತ್ರೌಷಧಗಳ ಬಲದಿಂದ ಕೆಡಹಲ್ಪಟ್ಟ ಕಾಳಸರ್ಪದಂತೆ ಮುರಿದು ನೆಲದ ಮೇಲೆ ಬಿದ್ದಿತು.

ಇಲ್ಲಿಗೆ ಇಪ್ಪತ್ತೊಂಬತ್ತನೆಯ ಸರ್ಗವು.

---

ಗದೆಯು ಮುರಿದುದನ್ನು ನೋಡಿ ರಾಮನು ಖರನಲ್ಲಿ ಪಶ್ಚಾತ್ತಾಪಪಟ್ಟು ಆತನಿಗೆ ವಿವೇಕವನ್ನು ಹೇಳಿದುದು. ಖರನು ಆತನ ಬುದ್ಧಿವಾದವನ್ನು ಕೇಳದೆ ಸಾಲವೃಕ್ಷವನ್ನು ಹಿಡಿದು ರಾಮನ ಮೇಲೆ ಯುದ್ಧಕ್ಕೆ ಬಂದುದು. ರಾಮನು ಅಗಸ್ತ್ಯದತ್ತ ಬಾಣದಿಂದ ಖರನ ಹೃದಯವನ್ನು ಭೇದಿಸಿದುದು. ಮಹರ್ಷಿಗಳ ಸ್ತೋತ್ರವು. ಸೀತೆಯು ಸಂತೋಷದಿಂದ ಬಂದು ರಾಮನನ್ನಾಲಂಗಿಸಿದುದು.

ರಾಮನು ತನ್ನ ಬಾಣಗಳಿಂದ ಆತನ ಗದೆಯನ್ನು ಮುರಿದಮೇಲೆ, ಆತನಲ್ಲಿ ತನಗೆ ಪಶ್ಚಾತ್ತಾಪವು ಹುಟ್ಟಲು, ತಾನು ಧರ್ಮವತ್ಸಲನಾದುದರಿಂದ ಆಗಲೂ ಆತನಿಗೆ ಬುದ್ಧಿವಾದಗಳನ್ನು ಹೇಳಲಾರಂಭಿಸಿ, ನಿರಾಯುಧನಾದ ಆತನೊಡನೆ ಯುದ್ಧಮಾಡಲೊಲ್ಲದೆ, ಮುಗುಳ್ನಗೆಯಿಂದ ನಗುತ್ತಾ, ಆತನನ್ನು

ಕುರಿತು ಒಂದಾನೊಂದು ಮಾತನ್ನು ಹೇಳುವನು. "ಎಲೈ ರಾಕ್ಷಸಾಧಮನೆ! ನನ್ನೊಡನೆ ನಿನಗಿದ್ದ ಸಮಸ್ತ ಶಕ್ತಿಯನ್ನೂ ತೋರಿಸಿದುದಾಯಿತಲ್ಲವೆ ? ಇನ್ನು ನೀನೇನು ಮಾಡಬಲ್ಲೆ ! ನೀನು ನನಗಿಂತಲೂ ಬಲದಲ್ಲಿ ಹೀನನಾಗಿದ್ದರೂ, ವ್ಯರ್ಥವಾಗಿ ಗರ್ವಪಟ್ಟು ಹೆಮ್ಮೆಯನ್ನು ಕೊಚ್ಚಿಕೊಳ್ಳುತ್ತಿರುವೆ. ಇನ್ನೂ ನಿನಗೆ ಭ್ರಾಂತಿಯು ಬಿಡಲಿಲ್ಲವೆ ? ಬಾಯಾಡಿಯಾದ ನೀನು ಇಷ್ಟು ಸಾಹಸವನ್ನೇಕೆ ಮಾಡಿದೆ ? ಇದುವರೆಗೆ ನಿನ್ನ ಗದೆಯು ನಿನ್ನ ಶತ್ರುಗಳಲ್ಲಿ ಅನೇಕರನ್ನು ಕೊಂದಿರಬಹುದು. ಆ ನಂಬಿಕೆಯಿಂದ ನನ್ನೊಡನೆಯೂ ಹೋರಾಡುವುದಕ್ಕೆ ಬಂದೆಯಾ ? ಇದೋ ! ನಿನ್ನ ಗದೆಯ ಅವಸ್ಥೆಯನ್ನು ನೋಡು ! ಅದು ನನ್ನ ಬಾಣಗಳಿಂದ ಪುಡಿಪುಡಿಯಾಗಿ ನೆಲದಮೇಲೆ ಬಿದ್ದಿರುವುದು. ನೀನು ನನ್ನೊಡನೆ ಮೊದಲು ಹೇಳಿದುದೇನು ? ನನ್ನನ್ನು ಕೊಂದು, ಇಲ್ಲಿ ಹತರಾದ ರಾಕ್ಷಸರ ಬಂಧುಗಳ ಕಣ್ಣೀರನ್ನೊರಸುವುದಾಗಿ ಹೇಳಿದೆಯಲ್ಲವೆ? ಆ ಮಾತೂ ಈಗ ಸುಳ್ಳಾಯಿತು. ವ್ಯರ್ಥವಾಗಿ ಹೆಮ್ಮೆಯನ್ನು ಕೊಚ್ಚಿಕೊಳ್ಳುವ ನಿನಗಿಂತಲೂ ಅಲ್ಪರಾರುಂಟು ? ಹೀಗೆ ನೀಚಸ್ವಭಾವವುಳ್ಳವನಾಗಿಯೂ, ಸದಾಚಾರವಿಲ್ಲದ ರಾಕ್ಷಸನಾಗಿಯೂ ಇರುವ ಈ ನಿನ್ನ ಪ್ರಾಣಗಳನ್ನು, ಗರುಡನು ಅಮೃತವನ್ನಪಹರಿಸಿದಂತೆ ನಾನು ಅಪಹರಿಸುವುದರಲ್ಲಿ ಸಂದೇಹವಿಲ್ಲ. ಈಗಲೇ ನನ್ನ ಬಾಣಗಳಿಂದ ನಿನ್ನ ತಲೆಯನ್ನು ಕಡಿದು ನೊರೆಯಾಡುವ ನಿನ್ನ ರಕ್ತವನ್ನು ಈ ಭೂಮಿಗೆ ಕುಡಿಸುವೆನು. ಇನ್ನು ಕ್ಷಣಕಾಲದೊಳಗಾಗಿ ನೀನು ಈ ನೆಲದ ಮಣ್ಣಿನಮೇಲೆ ಹೊರಳಬೇಕಾಗುವುದು. ನೀನು ಈಗ ನನ್ನ ಬಾಣಗಳಿಂದ ಹತನಾಗಿ, ಕೈಕಾಲುಗಳನ್ನು ನೀಡಿ ನೆಲದಮೇಲೆ ಬಿದ್ದು, ಒಳ್ಳೇ ಪ್ರಾಯವುಳ್ಳವನಿಗೆ ದುರ್ಲಭವಾದ ಸ್ತ್ರೀಯೊಬ್ಬಳು ಸಿಕ್ಕಿದಾಗ ಆಕೆಯನ್ನು ಬಿಗಿಯಾಗಿ ಅಪ್ಪಿಕೊಳ್ಳುವಂತೆ ಈ ಭೂಮಿಯನ್ನಪ್ಪಿಕೊಂಡು ದೀರ್ಘನಿದ್ರೆಯನ್ನು ಮಾಡುವುದರಲ್ಲಿಯೂ ಸಂದೇಹವಿಲ್ಲ. ರಾಕ್ಷಸಾಧಮನಾದ ನೀನು ಹೀಗೆ ದೀರ್ಘನಿದ್ರೆಯಿಂದ ಮಲಗಿದಮೇಲೆ, ಅನಾಥರಾದ ಈ ಋಷಿಗಳಿಗೆ ದಂಡಕಾರಣ್ಯವು ಸುಖವಾದ ವಾಸಸ್ಥಾನವಾಗುವುದು. ಎಲೆ ರಾಕ್ಷಸನೆ ! ನನ್ನ ಬಾಣಗಳಿಂದ ಇಲ್ಲಿನ ರಾಕ್ಷಸ ಸಮೂಹವೆಲ್ಲವೂ ಹತವಾದಮೇಲೆ, ನಿರಪಾಯವಾದ ಈ ಜನಸ್ಥಾನದಲ್ಲಿ, ಇಲ್ಲಿನ ಋಷಿಗಳು ಎಲ್ಲಿ ಬೇಕಾದರೂ ನಿರ್ಭಯವಾಗಿ ಸಂಚರಿಸಬಹುದು. ಇದುವರೆಗೆ ದರ್ಶನಮಾತ್ರದಿಂದಲೇ ಇತರರನ್ನು ನಡುಗಿಸುತ್ತಿದ್ದ ರಾಕ್ಷಸ

ಸ್ತ್ರೀಯರು ಈಗ ತಮ್ಮ ಬಂಧುವರ್ಗವೆಲ್ಲವೂ ಸತ್ತುಬಿದ್ದಿರುವುದನ್ನು ನೋಡಿ, ಎಡೆಬಿಡದೆ ಕಣ್ಣೀರುಬಿಡುತ್ತಾ ಬಹು ದೀನರಾಗಿ ಯಾರನ್ನು ಕಂಡರೂ ಭಯ ದಿಂದ ನಡುಗುತ್ತಾ ಓಡಿಹೋಗಬೇಕಾಗಿರುವುದು. ಪಾಪಿಯಾದ ನಿನ್ನ ಗುಣಕ್ಕೆ ತಕ್ಕಂತೆ ನಿನ್ನ ಪತ್ನಿಯರೂ ಪಾಪಕೃತ್ಯದಲ್ಲಿಯೇ ನಿರತರಾಗಿರುವರು. ಇದು ವರೆಗೆ ದುಃಖವೆಂಬುದನ್ನೇ ಕಂಡರಿಯದ ಆ ಸ್ತ್ರೀಯರಿಗೆ, ಈಗ ಶೋಕರಸದ ಅನುಭವವು ಚೆನ್ನಾಗಿ ತಿಳಿದುಬರುವುದು. ಇದುವರೆಗೆ ಅವರು ಮನಸ್ಸಿನಲ್ಲಿ ಕೋರುತ್ತಿದ್ದ ಕೋರಿಕೆಗಳೆಲ್ಲವೂ ಈಗ ನಿರರ್ಥಕವಾಗುವುವು. ಎಲೆ ಘಾತುಕನೆ! ಎಲೆ, ನೀಚನೆ! ಎಲೈ ಅಲ್ಪಬುದ್ಧಿಯುಳ್ಳವನೆ! ನೀನು ಬ್ರಾಹ್ಮಣರನ್ನು ಹಿಂಸಿಸದ ದಿನವಿಲ್ಲ! ಇಲ್ಲಿನ ಮಹರ್ಷಿಗಳು ವೇದಮಂತ್ರಗಳನ್ನು ಹೇಳಿ ಹವಿಸ್ಸನ್ನು ಅಗ್ನಿಯಲ್ಲಿ ಹೋಮ ಮಾಡುವಾಗಲೂ, ನಿನ್ನ ಭಯಕ್ಕಾಗಿ ಆ ವೇದಮಂತ್ರಗಳನ್ನೂ ಮರೆತು, ನಿನ್ನ ಸ್ಮರಣೆಯಿಂದಲೇ ಕೈಯಲ್ಲಿ ಹಿಡಿದಿರುವ ಹವಿಸ್ಸುಗಳನ್ನು ಅಗ್ನಿಯಲ್ಲಿ ಹಾಕಿಬಿಡುತ್ತಿದ್ದರಲ್ಲವೆ? ಇಂತಹ ಮಹಾಪಾಪಿ ಯಾದ ನಿನ್ನನ್ನು ಕೊಂದರೆ ನಿನ್ನ ಹೆಂಡತಿಯರು ತಾನೇ ಏಕೆ ದುಃಖಿಸುವರೋ ತಿಳಿಯದು" ಎಂದನು. ಹೀಗೆ ರಾಮನು ಕ್ರೂರವಾಕ್ಯಗಳಿಂದ ತನ್ನನ್ನು ನಿಂದಿಸುತ್ತಿರಲು, ಖರನು ಅತಿಕೋಪವುಳ್ಳವನಾಗಿ, ಘೋರವಾದ ಗರ್ಜನೆ ಯನ್ನು ಮಾಡಿ, ರಾಮನನ್ನು ಹೆದರಿಸುತ್ತಾ "ಎಲೈ ಕ್ಷತ್ರಿಯ ಬಾಲಕನೆ! ನೀನು ಬಹಳವಾಗಿ ಕೊಬ್ಬಿರುವೆ! ಭಯಪಡಬೇಕಾದ ಸಂದರ್ಭಗಳಲ್ಲಿಯೂ ನೀನು ನಿರ್ಭಯನಾಗಿ ನನ್ನ ಮುಂದೆ ನಿಂತು "ಇದನ್ನಾಡಬಹುದು, ಇದನ್ನಾಡ ಬಾರದು" ಎಂಬ ವಿವೇಚನೆಯೂ ಇಲ್ಲದೆ ಮಾತಾಡುತ್ತಿರುವೆಯಾ? ಮೃತ್ಯು ವಶನಾದವನಿಗೆ ಹೇಗೆ ತಾನೇ ಯುಕ್ತಾಯುಕ್ತವು ತೋರುವುದು. ಲೋಕದಲ್ಲಿ ಯಾವ ಮನುಷ್ಯರು ಕಾಲಪಾಶದಲ್ಲಿ ಸಿಕ್ಕಿರುವರೋ ಅವರು ಕಾರ್ಯಾಕಾರ್ಯ ಗಳನ್ನೇ ತಿಳಿಯಲಾರರು. ಅವರಿಗೆ ಇಂದ್ರಿಯ ವ್ಯಾಪಾರಗಳೂ ವಿಪರೀತವಾಗಿ ಪ್ರವರ್ತಿಸುವುವು. ಅದರಂತೆ ನಿನಗೂ ಈಗ ವಿನಾಶಕಾಲವು ಬಂದಿರುವುದರಿಂದ ಈ ವಿಪರೀತ ಬುದ್ಧಿಯು ಹುಟ್ಟಿರುವುದು" ಎಂದನು. ಹೀಗೆಂದು ಹೇಳುತ್ತಾ ಖರನು ಹಣೆಯಲ್ಲಿ ಭಯಂಕರವಾದ ಹುಬ್ಬುಗಂಟನ್ನು ಕಾಣಿಸಿ, ರಾಮನನ್ನು ತಡೆದು, ತನ್ನ ಕೈಯ್ಯಲ್ಲಿ ಯಾವುದೊಂದಾಯುಧವೂ ಇಲ್ಲದುದಕ್ಕಾಗಿ ನಾಲ್ಕು ಕಡೆಗೂ ತಿರುಗಿನೋಡಿ, ಸಮೀಪದಲ್ಲಿದ್ದ ಒಂದು ಸಾಲವೃಕ್ಷವನ್ನು ಕಂಡನು.

ಒಡನೆಯೇ ಆ ಮರದ ಬಳಿಗೆ ಬಂದು, ಬಲವಾಗಿ ಬೇರೂರಿರುವ ಆ ಮರವನ್ನು ಕೀಳುವುದಕ್ಕಾಗಿ ಅತಿ ಪ್ರಯಾಸಪಟ್ಟು ತುಟಿಯನ್ನು ಕಚ್ಚುತ್ತಾ, ಕೊನೆಗೆ ತನ್ನ ಎರಡು ತೋಳುಗಳಿಂದಲೂ ಅದನ್ನಾಡಿಸಿ ಕಿತ್ತುಬಿಟ್ಟನು. ಆಮೇಲೆ ಅದನ್ನು ಎರಡು ಕೈಗಳಿಂದಲೂ ಎತ್ತಿಕೊಂಡು, ಭಯಂಕರವಾದ ಸಿಂಹನಾದ ವನ್ನು ಮಾಡುತ್ತ ಬಂದು, ಅದನ್ನು ರಾಮನ ಮೇಲೆ ಬೀಸಿ, "ಇದೋ! ಈಗ ನೀನು ಇದರಿಂದ ಸತ್ತ ಹಾಗೆಯೇ ತಿಳಿ" ಎಂದನು. ಮಹಾಪರಾಕ್ರಮಿಯಾದ ರಾಮನು ತನಗಿದಿರಾಗಿ ಬರುತ್ತಿರುವ ಆ ಮರವನ್ನು ತನ್ನ ಬಾಣಗಳಿಂದ ಅರ್ಧ ದಾರಿಯಲ್ಲೇ ಕತ್ತರಿಸಿ ತುಂಡುಮಾಡಿ ಕೆಡಹಿದನು. ಕೊನೆಗೆ ಆ ರಾಮನು ಯುದ್ಧದಲ್ಲಿಯೇ ಹೇಗಾದರೂ ಖರನನ್ನು ಸಂಹರಿಸಿಬಿಡಬೇಕೆಂದು ಕಲ್ಪಿಸಿ ಕೊಂಡು, ತೀವ್ರವಾದ ಕೋಪವನ್ನು ತಾಳಿ, ಮೈಯಲ್ಲಿ ಬೆವರು ಸೋರುತ್ತಿರಲು, ಕೆಂಪಾದ ಕಣ್ಣುಗಳಿಂದ ಕೂಡಿ, ಏಕಕಾಲದಲ್ಲಿ ಆ ಖರನ ಮೇಲೆ ಸಾವಿರ ಬಾಣಗಳನ್ನು ಪ್ರಯೋಗಿಸಿದನು. ಈ ಬಾಣಗಳು ಖರನ ಅಂಗಾಂಗಗಳೊಳ ಗೆಲ್ಲಾ ಬಲವಾಗಿ ನಾಟಿಕೊಂಡು, ಪರ್ವತದಿಂದ ತೊರೆಗಳು ಹರಿಯುವಂತೆ ಅವನ ಮೈಯಿಂದ ನೊರೆನೊರೆಯಾಗಿ ದೊಡ್ಡ ರಕ್ತಪ್ರವಾಹವು ಸುರಿಯಲಾ ರಂಭಿಸಿತು. ಹೀಗೆ ರಾಮನ ಬಾಣಗಳ ಹತಿಯಿಂದ ತನ್ನ ದೇಹವು ಜರ್ಝರಿತ ವಾಗಿ ರಕ್ತವು ಸುರಿಯುತ್ತಿರುವುದನ್ನು ನೋಡಿ ಖರನು ಮೈತಿಳಿಯದಷ್ಟು ಕೋಪಾವೇಶದಿಂದ, ರಾಮನ ಮೇಲೆ ಬೀಳುವುದಕ್ಕೆ ಅತಿವೇಗದಿಂದ ಬಂದನು. ಅವನ ದೇಹದಿಂದ ಸೋರುತ್ತಿದ್ದ ರಕ್ತದ ದುರ್ವಾಸನೆಯು ಸುತ್ತಲೂ ವ್ಯಾಪಿಸಿತು. ಹೀಗೆ ಮೈಯಲ್ಲಿ ರಕ್ತವು ಸುರಿಯುತ್ತಿರುವ ಹಾಗೆಯೇ ಕೋಪದಿಂದ ತನಗಿದಿರಾಗಿ ಓಡಿಬರುತ್ತಿರುವ ಆ ರಾಕ್ಷಸನನ್ನು ನೋಡಿ ರಾಮನು, ಆತನ ರಕ್ತದ ದುರ್ಗಂಧ ವನ್ನು ಸಹಿಸಲಾರದೆಯೂ, ತಾನು ಬಾಣಸಂಧಾನಮೋಕ್ಷಗಳನ್ನು ಮಾಡುವು ದಕ್ಕೆ ಧಾರಾಳವಾದ ಅವಕಾಶವಿಲ್ಲದೆ ಹೋಗುವುದೆಂಬ ಆಲೋಚನೆಯಿಂದಲೂ, ಬೇಗಬೇಗನೆ [1]ಹಿಂದಕ್ಕೆ ಒಂದೆರಡು ಹೆಜ್ಜೆಗಳನ್ನಿಟ್ಟು ಸರಿದನು. ಆಮೇಲೆ ಆ ಖರನನ್ನು ಕೊಲ್ಲುವುದಕ್ಕಾಗಿ, ಅಗ್ನಿಯಂತೆ ಜಾಜ್ವಲ್ಯಮಾನವಾಗಿ

1. ಅತಿ ಸಂಕಟವಾದ ದೇಶಕಾಲಗಳಲ್ಲಿ, ವೀರಾಗ್ರೇಸರನೆನಿಸಿಕೊಂಡರೂ ಕೂಡ ಸ್ವಲ್ಪ ಹಿಂದೆ ಸರಿಯುವುದುಂಟು. ಇದೇ ವಿಷಯದಲ್ಲಿ "ಕ್ವಚಿದಪಿ ಸಂಕಟವಿಷಯೇ ಸುಭಟಾನಾಮಭಿಮತೋಯಮಪಸರ್ಪಃ" ಎಂದು ವೇದಾಂತಾಚಾರ್ಯರೂ ಹೇಳಿರುವರು.

ಬೇರೊಂದು ಬ್ರಹ್ಮದಂಡದಂತಿರುವ ಒಂದು ಬಾಣವನ್ನು ಕೈಗೆ ತೆಗೆದು ಕೊಂಡನು. ಪೂರ್ವದಲ್ಲಿ ದೇವೇಂದ್ರನು ಈ ಭವಿಷ್ಯದ್ವೃತ್ತಾಂತವನ್ನು ತಿಳಿದೇ ಅಗಸ್ತ್ಯಮಹಾಮುನಿಯ ಮೂಲಕವಾಗಿ ರಾಮನಿಗೆ ಇದೇ ಬಾಣವನ್ನು ಅನುಗ್ರಹಿಸಿ ಕೊಟ್ಟಿದ್ದನು. ಆ ಬಾಣವನ್ನೇ ಈಗ ರಾಮನು ಧನುಸ್ಸಿನಲ್ಲಿ ಸಂಧಾನಮಾಡಿ ಖರನ ಮೇಲೆ ಪ್ರಯೋಗಿಸಿದನು. ರಾಮನು ಆಕರ್ಣಾಂತ ವಾಗಿ ಬಿಲ್ಲನ್ನೆಳೆದು, ಖರನ ಮೇಲೆ ಬಾಣವನ್ನು ಬಿಟ್ಟೊಡನೆಯೇ ಅದು ಸಿಡಿಲಿನಂತೆ ಆರ್ಭಟಿಸುತ್ತಾ ಬಂದು ಖರನ ಎದೆಯಲ್ಲಿ ನಾಟಿತು. ಈ ಬಾಣವು ಬಂದು ಎದೆಗೆ ನಾಟಿದೊಡನೆಯೇ ಖರನು, ರುದ್ರನ ನೇತ್ರಾಗ್ನಿಯಿಂದ ಶ್ವೇತಾರಣ್ಯದಲ್ಲಿ ದಗ್ಧನಾಗಿ ಬಿದ್ದ ಅಂತಕನಂತೆ, ಆ ಬಾಣಾಗ್ನಿಯಿಂದ ದಗ್ಧನಾಗಿ ನೆಲದಮೇಲೆ ಬಿದ್ದನು. ವಜ್ರಾಯುಧದಿಂದ ಹೊಡೆಯಲ್ಪಟ್ಟ ವೃತ್ರಾಸುರ ನಂತೆಯೂ, ನೊರೆಯಿಂದ ಹತನಾದ ನಮುಚಿಯಂತೆಯೂ, ಇಂದ್ರಾಯುಧ ದಿಂದ ಹೊಡೆಯಲ್ಪಟ್ಟ ಬಲಾಸುರನಂತೆಯೂ ಆತನು ಆಗಲೇ ಸತ್ತುಬಿದ್ದನು. ಆಗ ಅಲ್ಲಿದ್ದ ರಾಜರ್ಷಿಗಳೂ, ಮಹರ್ಷಿಗಳೂ ಪರಮಸಂತೋಷದಿಂದ ರಾಮನ ಬಳಿಗೆ ಬಂದು ಅವನನ್ನು ಪೂಜಿಸಿ "ಎಲೈ ಮಹಾತೇಜಸ್ವಿಯಾದ ರಾಮನೆ! ಈ ಕಾರ್ಯನಿರ್ವಹಣಕ್ಕಾಗಿಯೇ ಮಹೇಂದ್ರನು ಪವಿತ್ರವಾದ ಶರಭಂಗಾ ಶ್ರಮಕ್ಕೆ ಬಂದಿದ್ದನು. ಕ್ರೂರರಾಗಿಯೂ, ಪಾಪಕರ್ಮಿಗಳಾಗಿಯೂ ಇರುವ ಈ ರಾಕ್ಷಸರನ್ನು ನಿನ್ನಿಂದ ಕೊಲ್ಲಿಸುವುದಕ್ಕಾಗಿಯೇ ಮಹರ್ಷಿಗಳೂ ನಿನ್ನನ್ನು ಉಪಾಯದಿಂದ ಇಲ್ಲಿಗೆ ಕರೆತಂದು, ಈ ಪ್ರದೇಶಕ್ಕೆ ಸೇರಿಸಿದರು. ಎಲೈ ದಶರಥಪುತ್ರನೆ! ನೀನು ನಮಗೆ ನಡೆಸಿಕೊಡಬೇಕಾದ ಕೋರಿಕೆಯು ಈಗಲೇ ಈಡೇರಿತು. ಇನ್ನುಮೇಲೆ ಈ ದಂಡಕಾರಣ್ಯದಲ್ಲಿ ಮಹರ್ಷಿಗಳು ಸುಖವಾಗಿ ತಮ್ಮ ತಮ್ಮ ಧರ್ಮವನ್ನು ನಡೆಸಬಲ್ಲರು" ಎಂದು ರಾಮನನ್ನು ಅನೇಕ ವಿಧದಲ್ಲಿ ಕೊಂಡಾಡುತ್ತಿದ್ದರು. ಇಷ್ಟರಲ್ಲಿ ಆಕಾಶದಿಂದ ದೇವತೆಗಳು ಚಾರಣರೊಡಗೂಡಿ ಸಂತೋಷದಿಂದ ದೇವದುಂದುಭಿಯನ್ನು ಬಾರಿಸುತ್ತ, ರಾಮನ ಮೇಲೆ ಪುಷ್ಪ ವರ್ಷವನ್ನು ಕರೆದು, ತಮ್ಮೊಳಗೆ ಒಬ್ಬರಿಗೊಬ್ಬರು "ಆಹಾ! ಏನಾಶ್ಚರ್ಯವು! ಈ ಮಹಾಯುದ್ಧದಲ್ಲಿ ರಾಮನು ತಾನು ಏಕಾಕಿಯಾಗಿದ್ದರೂ ಮೂರು ಗಳಿಗೆ ಯೊಳಗಾಗಿ ಘೋರಪರಾಕ್ರಮಿಗಳಾದ ಹದಿನಾಲ್ಕುಸಾವಿರಮಂದಿ ರಾಕ್ಷಸ ರನ್ನೂ ಕೊಂದನು. ಖರದೂಷಣರೇ ಮೊದಲಾದ ಮಹಾವೀರರೂ ಈತನಿಂದ

ಹತರಾದರು. ಮಹಾತ್ಮನಾದ ರಾಮನ ಸಾಹಸವು ಲೋಕಾದ್ಭುತವಾಗಿರುವುದು. ಅಬ್ಬಾ! ಈತನ ವೀರ್ಯವೇನು! ಈತನ ಸಾಮರ್ಥ್ಯವೇನು! ಇವನ ವೀರ್ಯವನ್ನು ನೋಡಿದರೆ ಸಾಕ್ಷಾನ್ಮಹಾವಿಷ್ಣುವಿನ ವೀರ್ಯದಂತೆ ಅಚಿಂತ್ಯವಾಗಿರುವುದಲ್ಲಾ" ಎಂದು ಹೇಳುತ್ತಾ ಅವರೆಲ್ಲರೂ ತಮ್ಮ ತಮ್ಮ ದಾರಿಯನ್ನು ಹಿಡಿದು ಹಿಂತಿರುಗಿದರು. ಅಷ್ಟರಲ್ಲಿ ಪರ್ವತ ಗುಹೆಯಿಂದ ಸೀತೆಯನ್ನು ಕರೆದುಕೊಂಡು ವೀರನಾದ ಲಕ್ಷ್ಮಣನೂ ಬಂದು ಸೇರಿದನು. ಇತ್ತಲಾಗಿ ಮಹರ್ಷಿಗಳೂ ಜಯಶೀಲನಾದ ರಾಮನನ್ನು ಅನೇಕ ವಿಧದಲ್ಲಿ ಪೂಜಿಸುತ್ತಿದ್ದರು. ಲಕ್ಷ್ಮಣನು ರಾಮನನ್ನಿದಿರುಗೊಂಡು ಆತನನ್ನಾದರಿಸಿದನು. ಎಲ್ಲರೂ ಆಶ್ರಮಕ್ಕೆ ಹೊರಟರು. [1]ಹೀಗೆ ಸಮಸ್ತ ಶತ್ರುಗಳನ್ನೂ ನಿಗ್ರಹಿಸಿ, ಋಷಿಗಳಿಗೆ

---

1. ಇಲ್ಲಿ "ತಂ ದೃಷ್ಟ್ವಾ ಶತ್ರುಹಂತಾರಂ ಮಹರ್ಷೀಣಾಂ ಸುಖಾವಹಂ | ಬಭೂವ ಹೃಷ್ಟಾ ವೈದೇಹೀ ಭರ್ತಾರಂ ಪರಿಷಸ್ವಜೇ ||" ಎಂದು ಮೂಲವು. "ಏಕಾಕಿಯಾದ ರಾಮನು ಹದಿನಾಲ್ಕುಸಾವಿರ ರಾಕ್ಷಸರೊಡನೆ ಹೇಗೆ ಎಂತು ಯುದ್ಧ ಮಾಡಬಲ್ಲ ?" ಎಂದು ಕಳವಳಿಸುತ್ತಿದ್ದ ಸೀತೆಯು, ರಾಮನು ಜಯಶೀಲನಾಗಿ ಬಂದುದನ್ನು ನೋಡಿ, ತಾನು ವೀರ ಕ್ಷತ್ರಿಯಕುಲದಲ್ಲಿ ಹುಟ್ಟಿದವಳಾದುದರಿಂದ ಆ ಸ್ವಭಾವಕ್ಕೆ ತಕ್ಕಂತೆ ಪತಿಯ ವೀರ್ಯಕ್ಕೆ ಮೆಚ್ಚಿ ಗೌರವದಿಂದ ಬಂದು ಆತನನ್ನಾಲಂಗಿಸಿದುದಾಗಿ ಈ ಶ್ಲೋಕಾರ್ಥವು. ಇಲ್ಲಿನ ವಿಶೇಷಾರ್ಥಗಳೇನೆಂದರೆ, (ತಂ) ಹಾಗೆ ಮಹಾಯುದ್ಧವನ್ನು ಮಾಡಿ ಬಂದು ನಿಂತಿರುವವನನ್ನು ಎಂದರೆ, "ವೀರವ್ರಣೇನ ವಿಗಳದ್ರುಧಿರೇಣ ರೋಮಕೂಪೋಲ್ಲಸದ್ಭಿರಪಿ ಘರ್ಮಪಯಃ ಕಣೌಘೈಃ | ಕೋದಣ್ಡದಂಡಮವಲಂಬ್ಯ ವಿನೀಯವರ್ಮ ಕಿಂಚಿತ್ಪರಿಶ್ರಮಭೃತಂ ಪ್ರಿಯಮೀಕ್ಷಮಾಣಾ ||" ರಕ್ತವನ್ನು ಕಾರುತ್ತಿರುವ ವೀರವ್ರಣದಿಂದಲೂ, ರೋಮಕೂಪಗಳಲ್ಲಿ ಜಿನುಗುತ್ತಿರುವ ಸ್ವೇದಬಿಂದುಗಳಿಂದಲೂ ಕೂಡಿ, ತನ್ನ ಬಿಲ್ಲಿನ ಕೊನೆಯನ್ನು ನೆಮ್ಮಿ ನಿಂತು, ಯುದ್ಧಕವಚವನ್ನು ಸ್ವಲ್ಪವಾಗಿ ಸಡಿಲಿಸಿ, ದಣಿವಾರಿಸಿಕೊಳ್ಳುತ್ತಿರುವ ತನ್ನ ಪ್ರಿಯಪತಿಯನ್ನು ನೋಡುತ್ತಿದ್ದಳೆಂದು ಭಾವವು. (ತಂ ದೃಷ್ಟ್ವಾ) ಇದುವರೆಗೆ ಆ ಮಹಾಯುದ್ಧದಲ್ಲಿ ದೃಷ್ಟಿಗೆ ಬೀಳದಿದ್ದು ಈಗಲೇ ಕಣ್ಣೆದುರಿಗೆ ಗೋಚರಿಸಿದನೆಂದರ್ಥವು. (ತಂ ದೃಷ್ಟ್ವಾ) ಮೊದಲು ಈತನು ವೀರನೆಂಬುದನ್ನು ಕಿವಿಯಿಂದ ಕೇಳಿದ್ದುದು ಮಾತ್ರವೇ ಹೊರತು, ಈಗಲೇ ಆತನು ತನ್ನ ವೀರಕೃತ್ಯವನ್ನು ಪ್ರತ್ಯಕ್ಷದಲ್ಲಿ ತೋರಿಸಿದನೆಂದೂ ಭಾವವು. (ಶತ್ರುಹಂತಾರಂ) ಯುದ್ಧದಲ್ಲಿ ಈತನ ಹನನವ್ಯಾಪಾರವೇ ಕಂಡುಬರುತ್ತಿತ್ತೇ ಹೊರತು ಬಾಣಸಂಧಾನ ಮೋಕ್ಷಗಳೊಂದೂ ಕಾಣುತ್ತಿರಲಿಲ್ಲವೆಂದರ್ಥವು. (ಶತ್ರುಹಂತಾರಂ) ದೇವಗಂಧರ್ವಾದಿಗಳನೇಕರಿದ್ದರೂ ಲೋಕಕಂಟಕರಾದ ರಾಕ್ಷಸರನ್ನೇ ಕೊಂದನೆಂಬುದರಿಂದ, ಇವನು ನಡೆಸಿದ ದುಷ್ಟನಿಗ್ರಹವನ್ನು ಹೇಳಿದಂತಾಯಿತು. ಇನ್ನು ಶಿಷ್ಟ

ಸೌಖ್ಯವನ್ನುಂಟುಮಾಡಿದ ಪತಿಯಾದ ರಾಮನನ್ನು ನೋಡಿ ಸೀತೆಯು ಪರಮ ಸಂತೋಷದಿಂದ ಆತನನ್ನು ಬಿಗಿಯಾಗಿ ಅಪ್ಪಿಕೊಂಡಳು. ಅಲ್ಲಿ ಸತ್ತುಬಿದ್ದಿರುವ

---

ಪರಿಪಾಲನವನ್ನು ಹೇಳುವರು. (ಮಹರ್ಷೀಣಾಂ ಸುಖಾವಹಂ) ಇಲ್ಲಿ (ಮಹರ್ಷೀಣಾಂ) ಎಂಬುದರಿಂದ ತಮ್ಮ ತಪೋಲೇಶದಿಂದಲೇ ಋಷಿಗಳು ರಾಕ್ಷಸರನ್ನು ಕೊಲ್ಲಬಲ್ಲವರಾಗಿದ್ದರೂ, ಹಾಗೆ ತಮ್ಮನ್ನೇ ತಾವು ರಕ್ಷಿಸಿಕೊಳ್ಳುವುದರಿಂದ, ತಮ್ಮನ್ನು ರಕ್ಷಿಸುವುದಕ್ಕಾಗಿ ಸಿದ್ಧನಾಗಿರುವ ಭಗವಂತನ ರಕ್ಷಕಸ್ವರೂಪಕ್ಕೂ, ತಮ್ಮ ರಕ್ಷ್ಯತಾಸ್ವರೂಪಕ್ಕೂ ಹಾನಿಬರುವುದೆಂದೆಣಿಸಿ, ರಕ್ಷಕನಾದ ಶ್ರೀರಾಮನನ್ನೇ ಇದಿರುನೋಡುತ್ತ, ಅವನ ಪ್ರತಿಜ್ಞೆಯನ್ನು ಕಾಪಾಡಬೇಕೆಂಬ ಮಹಾಜ್ಞಾನವುಳ್ಳ ಋಷಿಗಳೆಂದು ಭಾವವು. (ಸುಖಾವಹಂ) ತನ್ನ ಮುಂದೆ ನಿಂತು "ಏಹಿ ಪಶ್ಯ ಶರೀರಾಣಿ" ಎಂಬುದಾಗಿ ತಮ್ಮ ದೇಶದ ಪ್ರಜೆಗಳನ್ನು ತೋರಿಸಿ ಮೊರೆಯಿಟ್ಟ ಆ ಮಹರ್ಷಿಗಳಿಗೆ ದುಃಖಲೇಶವಾದರೂ ಇಲ್ಲದಂತೆ ಮಾಡಿ ಕ್ಷೇಮವನ್ನುಂಟುಮಾಡಿದವನು. ಇಂತಹ ರಾಮನನ್ನು ನೋಡಿ (ವೈದೇಹೀ) ಸೀತೆಯು (ಬಭೂವ) ಇದ್ದಳು. ಭೂಧಾತುವು ಸತ್ತಾವಾಚಕವಾದುದರಿಂದ, ಸತ್ತೆಯನ್ನು ಹೊಂದಿದಳೆಂದರ್ಥವು. ಎಂದರೆ ಏಕಾಕಿಯಾಗಿ ಅನೇಕ ರಾಕ್ಷಸರ ನಡುವೆ ಸಿಕ್ಕಿಬಿದ್ದ ರಾಮನ ಸ್ಥಿತಿಯನ್ನು ನೋಡಿ ಸೀತೆಯು ಇದುವರೆಗೆ ಸತ್ತೆಯಿಲ್ಲದವಳಂತಿದ್ದು, ಈಗ ಜಯಶೀಲನಾಗಿ ರಾಮನನ್ನು ನೋಡಿದಮೇಲೆಯೇ ಸತ್ತ್ವವುಳ್ಳವಳಾದಳೆಂದು ಭಾವವು. ರಾಮನು ಸಮಸ್ತ ಜಗತ್ತಿಗೂ ಪ್ರಾಣಭೂತನಾದುದರಿಂದ, ಪ್ರಾಣಗಳಿಗೆ ಸತ್ತ್ವವಿದ್ದಾಗಲೇ ಪ್ರಾಣಿಗೂ ಸತ್ತ್ವವುಂಟಾಗುವಂತೆ, ರಾಮನ ಸ್ಥಿತಿಯನ್ನು ನೋಡಿದಮೇಲೆ ಆತನನ್ನೇ ಪ್ರಾಣಭೂತವಾಗಿವುಳ್ಳ ಸೀತೆಗೂ ಸತ್ತ್ವವುಂಟಾಯಿತೆಂದು ಗ್ರಾಹ್ಯವು. ಅಥವಾ "ಆತ್ಮಾ ವೈ ಪುರುಷಸ್ಯ ದಾರಾಃ" ಎಂಬುದಾಗಿ ಪುರುಷನಿಗೆ ಭಾರ್ಯೆಯೇ ಆತ್ಮವೆಂದು ಹೇಳಲ್ಪಟ್ಟಿರುವುದರಿಂದ, ರಾಮನಿಗೆ ಸತ್ತ್ವವು ಲಭಿಸಿದುದರಿಂದಲೇ ತದಾತ್ಮಭೂತೆಯಾದ ತನಗೂ ಸತ್ತ್ವವುಂಟಾಯಿತೆಂದೂ ಭಾವವು. ಅಥವಾ "ಭೂಪ್ರಾಪ್ತೌ" ಎಂಬುದಾಗಿ ಭೂಧಾತುವಿಗೆ ಪ್ರಾಪ್ತ್ಯರ್ಥವೂ ಇರುವುದರಿಂದ, ಸೀತೆಯು ಪತಿಯನ್ನು ನೋಡಿ ಅತ್ಯಾತುರದಿಂದ ಗುಹೆಯನ್ನು ಬಿಟ್ಟು ರಾಮನ ಸಮೀಪಕ್ಕೆ ಬಂದಳೆಂದೂ ಅರ್ಥವು. (ಹೃಷ್ಟಾ) ಹರ್ಷವನ್ನು ಹೊಂದಿದಳು. ಎಂದರೆ "ಸತಿ ಧರ್ಮಿಣಿ ಧರ್ಮಾಃ" ಎಂಬ ನ್ಯಾಯದಿಂದ ರಾಮರೂಪವಾದ ಧರ್ಮಿಯು ಲಭಿಸಿದ ಮೇಲೆಯೇ ತದ್ಧರ್ಮವಾದ ಹರ್ಷವೂ ಲಭಿಸಿತೆಂದರ್ಥವು. ಮತ್ತು (ಹೃಷ್ಟಾ) ರೋಮಾಂಚಿತಳಾದಳು. ತನಗೆ ಪತಿಯಲ್ಲಿರುವ ಅಸಾಧಾರಣವಾದ ಪ್ರೀತಿಲತೆಯ ಮೊಳಕೆಗಳಂತೆ ಅವಳ ದೇಹವು ಪುಳಕಿತವಾಯಿತೆಂದೂ ಭಾವವು. ಶೌರ್ಯವ್ಯಾಪಾರವನ್ನೇ ಕಂಡರಿಯದ ಸ್ತ್ರೀಮಾತ್ರಳಾದ ಸೀತೆಗೆ, ರಾಮನ ಶೌರ್ಯವನ್ನು ನೋಡಿ ಅದನ್ನಭಿನಂದಿಸುವ ಬುದ್ಧಿಯು ಹುಟ್ಟಿದುದು ಹೇಗೆ? ಎಂದರೆ, (ವೈದೇಹೀ) "ಮಿಥಿಲಾಧಿಪತಿರ್ವೀರಃ" ಎಂಬ ಲೋಕಪ್ರಸಿದ್ಧ ವೀರಕುಲದಲ್ಲಿ ಹುಟ್ಟಿದವಳಾದುದರಿಂದಲೇ ಈಕೆಗೆ ಕ್ಷತ್ರಿಯರ ವೀರ್ಯವನ್ನು ನೋಡಿ

ರಾಕ್ಷಸಸಮೂಹವನ್ನೂ, ಜಯಶೀಲನಾಗಿ ನಿಂತಿರುವ ತನ್ನ ಪತಿಯನ್ನೂ ನೋಡಿದಾಗ, ಆಕೆಗುಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಹೀಗೆ ರಾಕ್ಷಸ

---

ಅಭಿನಂದಿಸತಕ್ಕ ಸ್ವಭಾವವು ಜನ್ಮಸಿದ್ಧವಾಗಿರುವುದೆಂದು ಭಾವವು. (ಭರ್ತಾರಂ ಪರಿಷಸ್ವಜೇ) ತಾನಾಗಿಯೇ ಹೋಗಿ ಪತಿಯನ್ನು ಪ್ರೇಮದಿಂದ ಅಪ್ಪಿಕೊಂಡಳೆಂದು ಭಾವವು. ಮತ್ತು (ಭರ್ತಾರಂ ಪರಿಷಸ್ವಜೇ) ಶ್ರೀರಾಮನು ಸರ್ವಲೋಕವನ್ನೂ ಭರಿಸತಕ್ಕವನಾದುದರಿಂದಲೂ, ತಾನು ಸರ್ವಲೋಕಮಾತೆಯಾದುದರಿಂದಲೂ, ತನಗೆ ಪುತ್ರಪ್ರಾಯವಾದ ಸಮಸ್ತ ಲೋಕವನ್ನೂ ಅಪಾಯವಿಲ್ಲದೆ ರಕ್ಷಿಸಿದುದನ್ನು ನೋಡಿ (ಪರಿಷಸ್ವಜೇ) ಚೆನ್ನಾಗಿ ಆಲಿಂಗಿಸಿದಳು. ಅಥವಾ ಪತಿಯಾದ ರಾಮನ ದೇಹದಲ್ಲಿ ಆಯುಧಹತಿಯಿಂದುಂಟಾದ ಗಾಯಗಳ ನೋವನ್ನಾರಿಸುವುದಕ್ಕಾಗಿ, ಶಾಖಕೊಡುವಂತೆ, ಸುಖೋಷ್ಣವಾದ ತನ್ನ ಸ್ತನಗಳನ್ನೊತ್ತಿ ಅಪ್ಪಿಕೊಂಡಳೆಂದು ಭಾವವು. (ಪರಿ+ಸ್ವಜೇ) ಸುತ್ತಲೂ ಚೆನ್ನಾಗಿ ಒತ್ತಿದಳೆಂದರ್ಥವು. ಆದರೆ ಯುದ್ಧದಲ್ಲಿ ಶತ್ರುಗಳಿಗೆ ಬೆನ್ನುಕೊಟ್ಟೋಡದೆ ಅಭಿಮುಖವಾಗಿಯೇ ಎದೆಯನ್ನು ಕೊಟ್ಟು ಯುದ್ಧಮಾಡುವವನಿಗೆ ದೇಹದ ಸುತ್ತಲೂ ಗಾಯಗಳ ಪ್ರಸಕ್ತಿಯೆಲ್ಲಿಯದು ? ಎಂದರೆ, ತನ್ನ ಸುತ್ತಲೂ ಮುತ್ತಿಗೆ ಹಾಕಿ ನಿಂತ ಶತ್ರುಗಳಲ್ಲಿ, ತನ್ನ ಬಾಣಪ್ರಯೋಗ ಚಾತುರ್ಯವನ್ನು ತೋರಿಸುವುದಕ್ಕಾಗಿಯೂ, ತನ್ನ ಪರಿಕ್ರಮಣ ಕೌಶಲ್ಯದಿಂದ ಅವರ ಬಾಣಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೂ ಹಿಂದುಮುಂದಾಗುವುದುಂಟು. ಇದರಿಂದ ದೇಹದ ಸುತ್ತಲೂ ವ್ರಣಪ್ರಸಕ್ತಿಯಿರಬಹುದಾದುದರಿಂದ ಅವನ ಸಮಸ್ತಾವಯವಗಳಿಗೂ ಸುಖೋಷ್ಣವಾದ ಶಾಖವನ್ನು ಕೊಡುವಂತೆ ತನ್ನ ಮೈಯನ್ನೊತ್ತಿದಳೆಂದು ಗ್ರಾಹ್ಯವು.

ಇಲ್ಲಿ ರಾಮನನ್ನಗಲಿದ್ದ ಸೀತೆಯು, ಅಲ್ಲಿಂದ ಹಿಂತಿರುಗಿ ಬಂದು ಶತ್ರುಗಳನ್ನು ಹುಟ್ಟಡಗಿಸಿ ಬಂದ ರಾಮನನ್ನು ಆಲಿಂಗಿಸಿದುದಾಗಿ ಹೇಳಿರುವುದರಿಂದ, ಹೃದಯಗುಹೆಯಲ್ಲಿರುವ ಜೀವಾತ್ಮನು ಪರತಂತ್ರನಾಗಿ ಆಚಾರ್ಯಮುಖದಿಂದ ತನಗೆ ಶೇಷಿ (ಸ್ವಾಮಿ)ಯಾದ ಪರಮಾತ್ಮನನ್ನು ಕಂಡು, ಅವನಿಂದ ಸಕಲ ವಿರೋಧಿವರ್ಗವೂ ನಿರಾಸಿತವಾಗಲು, ಆ ಗುಹೆಯನ್ನು ಬಿಟ್ಟು ಹೊರಟುಬಂದು, ನಿತ್ಯಸೂರಿಗಳ ಸಭೆಯ ನಡುವೆ ಆ ಪರಮಾತ್ಮನನ್ನು ಸೇರಿ. ತದ್ಭೋಗಪರೀವಾಹವನ್ನನುಭವಿಸುವನೆಂಬ ರಹಸ್ಯಾರ್ಥವು ಧ್ವನಿತವಾಗುವುದು. (ಗೋವಿಂದರಾಜೀಯವು.)

ಅಥವಾ (ತಂ) ಅಂತಹ ರಾಮನನ್ನು ಎಂದರ್ಥವು. ರಾಮನೆಂತವನು ? ಎಂದರೆ, ಮೊದಲು ಸೀತೆಯು "ರಾಮಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ" ಎಂಬುದಾಗಿ ಪುರುಷಾಕಾರದಿಂದಿರುವ ಕೇವಲ ಸ್ತ್ರೀಯೆಂದು ಹೇಳಿ, ಯಾವನನ್ನು ಹೀಗಳಿಸಿ

ಸಮೂಹವೆಲ್ಲವನ್ನೂ ಧ್ವಂಸಮಾಡಿ, ಅಲ್ಲಿದ್ದ ಮಹರ್ಷಿಗಳಿಂದ ಪೂಜಿತನಾಗಿ ಪ್ರಕಾಶಿಸುತ್ತಿರುವ ರಾಮನನ್ನು ನೋಡಿ, ಚಂದ್ರಮುಖಿಯಾದ ಸೀತೆಯು ಪರಮಸಂತೋಷದಿಂದ ಬಂದು, ಆತನನ್ನು ಬಾರಿಬಾರಿಗೂ ಅಪ್ಪಿಕೊಳ್ಳುತ್ತ ಆನಂದಭರಿತಳಾಗಿದ್ದಳು.

[1] ಇಲ್ಲಿಗೆ ಮೂವತ್ತನೆಯ ಸರ್ಗವು.

---

ಷ್ಟಳೋ ಆ ರಾಮನು ಮತ್ತು (ತಂ) "ತೇ ತು ಯಾವಂತ ಏವಾಸನ್ ತಾವಾಂಸ್ತು ದದೃಶೇ ಸತ್ಯೇ" ತಾನೂ ರಾಕ್ಷಸರ ಸಂಖ್ಯೆಗೆ ತಕ್ಕಷ್ಟೇ ಆಕಾರವನ್ನು ಹೇಳಿ, ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನೂ, ಹದಿನಾಲ್ಕುಸಾವಿರ ದಿವ್ಯಾಕೃಗಳಿಂದ ಕೊಂಡುಬಂದ ಮಹಾವೀರನು ಮತ್ತು (ತಂ) ಇಂದ್ರಾದಿದೇವತೆಗಳೆಲ್ಲರೂ ಒಟ್ಟುಗೂಡಿ ಬಂದರೂ ಜಯಿಸಬಲ್ಲ ಮಹಾವೀರವುಳ್ಳ ಹದಿನಾಲ್ಕುಸಾವಿರಮಂದಿ ರಾಕ್ಷಸರನ್ನೂ ತಾನೊಬ್ಬನೇ ಇದಿರಿಸಿ ನಿಂತು, ಮೂರು ಗಳಿಗೆಯ ಕಾಲದೊಳಗಾಗಿ ಅವರೆಲ್ಲರನ್ನೂ ಲೀಲಾಮಾತ್ರದಿಂದ ಕೊಂದ ಅದ್ಭುತ ಪರಾಕ್ರಮವುಳ್ಳವನು. ಮತ್ತು (ತಂ) "ತೈರ್ಧನೂಂಸಿ ಧ್ವಜಾಗ್ರಾಣಿ ವರ್ಮಾಣಿ ಚ ಶಿರಾಂಸಿ ಚ। ಬಾಹೂನ್ ಸಮಸ್ತಾಭರಣಾನ್ ಊರೂನ್ ಕರಿಕರೋಪಮಾನ್। ಚಿಚ್ಛೇದ ಸಮರೇ ರಾಮಃ" ಎಂಬಂತೆ ಆ ರಾಕ್ಷಸರ ಒಂದೊಂದು ಸಾಧನಗಳನ್ನೂ ತುಂಡು ತುಂಡಾಗಿ ಕತ್ತರಿಸಿದ ಮಹಾದ್ಭುತವಾದ ಧನುರ್ವಿದ್ಯಾಕೌಶಲ್ಯವುಳ್ಳವನು. ಈ ವಿಧವಾದ ಅಸಾಧಾರಣ ಪರಾಕ್ರಮವುಳ್ಳವನೆಂಬುದೇ ಇಲ್ಲಿನ ತಚ್ಛಬ್ದಾರ್ಥವು. ಮತ್ತು (ಶತ್ರುಹಂತಾರಂ ಮಹರ್ಷೀಣಾಂ ಚ ಸುಖಾವಹಂ) ಶತ್ರುಗಳನ್ನು ಹುಟ್ಟಡಗಿಸಿ, ಸಾಧುಗಳಾದ ಋಷಿಗಳನ್ನು ಕಾಪಾಡಿದನು. "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದು ಮೊದಲು ತಾನು ಮಾಡಿದ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿಯೇ ಅವತರಿಸಿದವನೆಂದೂ ಭಾವವು. (ಮಹೇಶ್ವರತೀರ್ಥರು)

1. ಈ ಸರ್ಗದ ವಿಷಯವಾಗಿ ಸ್ಕಾಂದಪುರಾಣದಲ್ಲಿ "ಶ್ರುತ್ವಾ ಶ್ರೀರಾಮ ವಿಜಯಂ ಪಾಪಬಂಧಾತ್ಪ್ರಮುಚ್ಯತೇ। ತಥೈವ ಶೃಂಖಲಾ ಬಂಧಾದೃಣಬಂಧಾದಿ ಮುಚ್ಯತೇ॥

ಶ್ರುತ್ವಾ ಪುಷ್ಪವತೀ ನಾರೀ ತನಯಂ ವಂಶವರ್ಧನಂ | ಲಭತೇ ರಾಘವೇಂದ್ರಸ್ಯ ಪ್ರಸಾದಾ-
ತ್ಕೀರ್ತಿವರ್ಧನಂ " ಇತ್ಯಾದಿ ಪ್ರಕಾರವಲ್ಲಿ, ಈ ಸರ್ಗಶ್ರವಣದಿಂದ ಸರ್ವಾಭೀಪ್ಸಿತಗಳೂ
ದ್ಧಿಸುವುವೆಂದು ಫಲಶ್ರುತಿಯೂ ಹೇಳಲ್ಪಟ್ಟಿರುವುದರಿಂದ, ರಾಮಾಯಣದಲ್ಲಿ ಈ ಸರ್ಗಕ್ಕೆ
ಶೇಷ ಪ್ರಾಧಾನ್ಯವುಂಟೆಂದು ಗ್ರಹಿಸಬೇಕು.

ರಾಮಾಯಣವು ಶರಣಾಗತಿಮಂತ್ರ ವಿವರಣರೂಪವಾದುದೆಂದು ಪ್ರಸಿದ್ಧಿಯು.
ಮಂತ್ರದಲ್ಲಿನ ಉತ್ತರಖಂಡಾರ್ಥವು ಇದುವರೆಗಿನ ಗ್ರಂಥದಿಂದ ಹೇಳಲ್ಪಟ್ಟಿದೆ. ಇನ್ನು
ಮುಂದಿನ ಗ್ರಂಥಗಳಿಂದ ಪೂರ್ವಖಂಡಾರ್ಥವು ವಿವರಿಸಲ್ಪಡುವುದು. ಅನುಷ್ಠಾನದಶೆ
ುಲ್ಲಿರುವಾಗಲೇ ಪೂರ್ವಖಂಡಾರ್ಥವು ಪ್ರಧಾನವು. ವ್ಯುತ್ಪತ್ತಿದಶೆಯಲ್ಲಿ ಉತ್ತರ
ಖಂಡಾರ್ಥವೇ ಪ್ರಧಾನವಾದುದರಿಂದ, ವ್ಯುತ್ಪತ್ತಿಗಾಗಿ ಮೊದಲಿಂದ ಇದುವರೆಗೆ ಉತ್ತರ
ಖಂಡಾರ್ಥವೇ ವಿವರಿಸಲ್ಪಟ್ಟಿತೆಂದು ಗ್ರಹಿಸಬೇಕು.

ಅದರಲ್ಲಿ ಮೊದಲು ಬಾಲಕಾಂಡದಿಂದ ಪ್ರಥಮಪದಕ್ಕೆ ಅರ್ಥಭೂತವಾದ ಪುರುಷ
ಕಾರಯೋಗವು ಹೇಳಲ್ಪಟ್ಟಿತು. ಅಯೋಧ್ಯಾಕಾಂಡದಲ್ಲಿ ದ್ವಿತೀಯ ಪದಾರ್ಥವಾದ
ಸೌಲಭ್ಯಾದಿಗುಣಯೋಗವು ತೋರಿಸಲ್ಪಟ್ಟಿತು. ಅರಣ್ಯಕಾಂಡದಲ್ಲಿ ಶೂರ್ಪಣಖೆಯು
ಬರುವುದಕ್ಕೆ ಮೊದಲು ನಡೆದ ವೃತ್ತಾಂತದಿಂದ ಮಂತ್ರದಲ್ಲಿನ ಚತುರ್ಥೀವಿಭಕ್ತ್ಯರ್ಥ
ಭೂತವಾದ ಕಿಂಕರವೃತ್ತಿಯು ಹೇಳಲ್ಪಟ್ಟಿರುವುದು. ಆಮೇಲೆ ಖರವಧದವರೆಗಿರುವ
ವೃತ್ತಾಂತದಿಂದ ಚರಮಪದಾರ್ಥಭೂತವಾದ ವಿರೋಧಿನಿವೃತ್ತಿಯು ಹೇಳಲ್ಪಟ್ಟಿರುವು
ದೆಂದೂ ಗ್ರಹಿಸಬೇಕು. ಇನ್ನುಮೇಲೆ ಉಳಿದಿರುವ ಗ್ರಂಥಶೇಷದಿಂದ ಪೂರ್ವಖಂಡಾ
ರ್ಥವು ನಿರೂಪಿಸಲ್ಪಡುವುದು. ಅದರಲ್ಲಿ ಮುಂದೆ ಉಳಿದಿರುವ ಅರಣ್ಯಕಾಂಡದ ಶೇಷ
ದಿಂದ, ವಿಭೀಷಣನಿಗೆ ಪುರುಷಾಕಾರ ಸಾನ್ನಿಧ್ಯವು ಹೇಳಲ್ಪಡುವುದು. ಕಿಷ್ಕಿಂಧಾ
ಕಾಂಡದಿಂದ ನಾರಾಯಣಪದಕ್ಕೆ ಅರ್ಥಭೂತವಾದ ವಾತ್ಸಲ್ಯವು ಸೂಚಿಸಲ್ಪಡುವುದು.
ಸುಂದರಕಾಂಡದಿಂದ ಚರಣಶಬ್ದದಲ್ಲಿ ಹೇಳಲ್ಪಟ್ಟ ದಿವ್ಯಮಂಗಲ ವಿಗ್ರಹವಿಶಿಷ್ಟತ್ವವು
ವಿವರಿಸಲ್ಪಡುವುದು. ಯುದ್ಧಕಾಂಡದಲ್ಲಿ ಶರಣಾಗತಿಯು ವಿವರಿಸಲ್ಪಡುವುದು. ಉತ್ತರ
ಕಾಂಡದಿಂದ ಪ್ರಸನ್ನಚರ್ಯೆಯು ಬೋಧಿಸಲ್ಪಡುವುದೆಂದೂ ಗ್ರಾಹ್ಯವು.

*

ಅಕಂಪನನೆಂಬ ರಾಕ್ಷಸನು ಜನಸ್ಥಾನದಲ್ಲಿ ನಡೆದ ಈ ರಾಕ್ಷಸವಧವನ್ನು ಲಂಕೇಶ್ವರನಾದ ರಾವಣನಿಗೆ ತಿಳಿಸಿದುದು. ರಾವಣನು ಮಾರೀಚನ ಸಹಾಯವನ್ನು ಕೇಳಿದುದು. ಮಾರೀಚನು ರಾಮನ ಮಹಿಮೆಯನ್ನು ಬೋಧಿಸಲು, ರಾವಣನು ಲಂಕೆಗೆ ಹಿಂತಿರುಗಿದುದು.

ಜನಸ್ಥಾನದಲ್ಲಿ ನಡೆದ ಆ ಮಹಾಯುದ್ಧದಲ್ಲಿ ಅಕಂಪನನೆಂಬ ರಾಕ್ಷಸನೊಬ್ಬನು ಮಾತ್ರ ಹೇಗೋ ತಲೆತಪ್ಪಿಸಿಕೊಂಡಿದ್ದನು. ಇವನು ರಾವಣನ ಕಡೆಯ ಚಾರನು. ಅಲ್ಲಿ ಸಮಸ್ತ ರಾಕ್ಷಸರೂ ಹತರಾದುದನ್ನು ನೋಡಿ ಅವನು ಅಲ್ಲಿಂದ ಲಂಕೆಗೆ ಓಡಿಹೋಗಿ, ಅಲ್ಲಿನ ದೊರೆಯಾದ ರಾವಣನನ್ನು ನೋಡಿ "ಎಲೈ ಮಹಾರಾಜನೆ! ಜನಸ್ಥಾನದಲ್ಲಿದ್ದ ರಾಕ್ಷಸರೆಲ್ಲರೂ ನಿಶ್ಶೇಷರಾಗಿ ಹತರಾದರು. ಖರದೂಷಣ ತ್ರಿಶಿರಸ್ಸುಗಳು ಮೂವರೂ ಕೊಲ್ಲಲ್ಪಟ್ಟರು. ನಾನು ಮಾತ್ರ [1]ಹೇಗೋ ಪ್ರಯಾಸದಿಂದ ತಲೆ ತಪ್ಪಿಸಿಕೊಂಡು ಬಂದಿರುವೆನು" ಎಂದನು. ರಾವಣನಾದರೋ ಸಹಜವಾಗಿಯೇ ಕೋಪಸ್ವಭಾವವುಳ್ಳವನು. ಅವನಿಗೆ ಕೋಪವೆಂಬುದು ಮೂಗಿನಮೇಲೆಯೇ ಇರುವದು. ಕೋಪವಿದ್ದರೂ ಇಲ್ಲದಿದ್ದರೂ ಅವನ ಕಣ್ಣು ಯಾವಾಗಲೂ ಕೆಂಡದಂತೆ ಕೆಂಪಾಗಿ ಉರಿಯುತ್ತಿರುವುವೇ ಹೊರತು, ಅವುಗಳಿಗೆ ತಿಳಿವೆಂಬುದೇ ಇಲ್ಲ. ಈಗ ಅಕಂಪನನು ಬಂದು

---

1. ಇಲ್ಲಿ ಅಕಂಪನನು "ಹೇಗೋ ತಲೆತಪ್ಪಿಸಿಕೊಂಡು ಬಂದೆ" ನೆಂದು ಹೇಳಿದುದರಿಂದ ಅವನು ಸ್ತ್ರೀ ವೇಷದಿಂದಲೇ ಯುದ್ಧರಂಗದಿಂದ ತಪ್ಪಿಸಿಕೊಂಡುಬಂದುದಾಗಿ ಗ್ರಹಿಸಬೇಕು. ಇದರಂತೆಯೇ ಶೂರ್ಪಣಖೆಯೂ " ಏಕಾ ಕಥಂಚಿನ್ಮುಕ್ತಾಹಂ ಪರಿಭೂಯ ಮಹಾತ್ಮನಾ | ಸ್ತ್ರೀವಧಂ ಶಂಕಮಾನೇನ ರಾಘವೇಣ " ಎಂಬುದಾಗಿ ತಾನು ಸ್ತ್ರೀಯಾದುದರಿಂದ ಸ್ತ್ರೀಹತ್ಯೆಯನ್ನು ಮಾಡಬಾರದೆಂಬ ಬುದ್ಧಿಯುನ್ನಿಟ್ಟು ನನ್ನೊಬ್ಬಳನ್ನು ಮಾತ್ರ ರಾಮನು ಬಿಟ್ಟನೆಂದು ಹೇಳಿರುವಳು. ಆದುದರಿಂದ ಈ ಅಕಂಪನನೂ ಸ್ತ್ರೀವೇಷದಿಂದಲೇ ಯುದ್ಧರಂಗದಿಂದ ತಪ್ಪಿಸಿಕೊಂಡು ಬಂದಿರಬೇಕೆಂದು ಊಹ್ಯವು. ಲಜ್ಜಾಸ್ಪದವಾದ ಈ ವಿಷಯವನ್ನು ರಾವಣನ ಸಭೆಯ ಮುಂದೆ ಹೇಳುವುದಕ್ಕೆ ನಾಚಿಕೆಗೊಂಡು, ತಾನು ಹೇಗೋ ತಪ್ಪಿಸಿಕೊಂಡು ಬಂದುದಾಗಿ ಹೇಳಿರುವನು. (ತನಿಶ್ಲೋಕಿ) ಹೀಗೆ ಪ್ರಸಂಗ ಸಂಗತಿಯಿಂದ ಬಂದ ಮಹರ್ಷಿಗಳ ಶರಣಾಗತಿಯನ್ನು, ದೇವತೆಗಳ ಶರಣಾಗತಿಗಾಗಿ ಮಾಡಬೇಕಾದ ರಾವಣವಧಕ್ಕೆ ಅಂಗವಾಗಿ ಹೇಳಿ, ಅಂಗಿಯಾದ ರಾವಣವಧಕ್ಕೆ ಮುಖ್ಯ ನಿಮಿತ್ತವಾಗಿರುವ ಸೀತಾಪಹಾರವೆಂಬ ಬೀಜವನ್ನು ಇನ್ನುಮೇಲೆ ಉಪಕ್ಷೇಪಿಸುವರು.

ಈ ಅತ್ಯಾಹಿತವನ್ನೂ ತಿಳಿದಮೇಲೆ, ಇನ್ನು ಅವನ ಕೋಪಾವೇಶವನ್ನು ಹೇಳತಕ್ಕುದೇನು? ಆ ರಾಜಾಸ್ಥಾನವನ್ನೆಲ್ಲಾ ತನ್ನ ನೋಟದಿಂದಲೇ ದಹಿಸಿಬಿಡುವಂತೆ ದುರುದುರನೆ ನೋಡುತ್ತ, ಚಾರನನ್ನು ಕುರಿತು, “ಏನು? ಅದೇನು ಹೇಳಿದೆ? ನಮ್ಮ ಜನಸ್ಥಾನವನ್ನು ಹಾಳುಮಾಡಿದನೆ? ಅಬ್ಬಾ? ಯಾವನು? ಅಷ್ಟು ಮಿತಿಮೀರಿ ಬಂದನೆ? ಅವನಿಗೆ ಜನಸ್ಥಾನವು ನನ್ನದೆಂದು ತಿಳಿಯದೆ ಹೋಯಿತೆ? ಪ್ರಾಣವನ್ನು ಕಳೆದುಕೊಳ್ಳಬೇಕೆಂಬ ಉದ್ದೇಶದಿಂದಲೇ ಅವನು ಈ ಕಾರ್ಯವನ್ನು ಮಾಡಿದಂತಿದೆ! ಇನ್ನು ಯಾವ ಲೋಕವನ್ನು ಹೊಕ್ಕರೆ ತಾನೇ ಅವನಿಗೆ ಉಳಿಗಾಲವುಂಟು? ನನಗೆ ಅಪ್ರಿಯವನ್ನುಂಟುಮಾಡಿದ ಮೇಲೆ ದೇವೇಂದ್ರನಾದರೂ ಸುಖದಿಂದ ಬದುಕಬಲ್ಲನೆ? ಕುಬೇರನಾಗಲಿ, ಯಮನಾಗಲಿ, ವಿಷ್ಣುವಾಗಲಿ, ನನಗೆ ವಿರೋಧವನ್ನುಂಟುಮಾಡಿದ ಮೇಲೆ ಬದುಕುವುದೆಂದರೇನು? ಕೊಲ್ಲುವ ಯಮನನ್ನೂ ನಾನು ಕೊಲ್ಲಬಲ್ಲೆನು! ಸುಡುವ ಬೆಂಕಿಯನ್ನೂ ಸುಡಬಲ್ಲೆನು! ಮೃತ್ಯುವಿಗೂ ನಾನು ಮರಣವನ್ನುಂಟುಮಾಡಬಲ್ಲೆನು. ನನಗೆ ಕೋಪಬಂದರೆ ಸೂರ್ಯಚಂದ್ರರನ್ನೂ ನನ್ನ ತೇಜಸ್ಸಿನಿಂದ ಸುಟ್ಟುಬಿಡಬಲ್ಲೆನು! ಪ್ರಳಯಕಾಲದ ಮಾರಿಯ ವೇಗವನ್ನೂ ನಾನು ತಡೆದು ನಿಲ್ಲಿಸುವೆನು” ಎಂದನು. ಹೀಗೆ ಮಿತಿಮೀರಿ ಕೋಪಗೊಂಡಿರುವ ರಾವಣನನ್ನು ನೋಡಿ, ಅಕಂಪನನು ಭಯದಿಂದ ನಡುಗುತ್ತ ಕೈಮುಗಿದು ತೊದಲುಮಾತುಗಳಿಂದ ಆತನಲ್ಲಿ ಅಭಯುವನ್ನು ಪ್ರಾರ್ಥಿಸಿದನು. ರಾವಣನು “ಆತನಿಗೆ ಹೆದರಬೇಡ” ವೆಂದು ಅಭಯುವನ್ನು ಕೊಟ್ಟು ಸಮಾಧಾನಪಡಿಸಿದ ಮೇಲೆ, ಅಕಂಪನನು ಧೈರ್ಯವನ್ನು ತಂದುಕೊಂಡು, ನಡೆದ ವೃತ್ತಾಂತವನ್ನು ಆತನಿಗೆ ವಿವರವಾಗಿ ತಿಳಿಸಲಾರಂಭಿಸಿದನು. “ಮಹಾರಾಜನೆ! ದಶರಥನೆಂಬ ರಾಜನ ಮಗನು, ಸಿಂಹದಂತೆ ಮೈಕಟ್ಟುಳ್ಳವನು! ಇನ್ನೂ ನಡುಪ್ರಾಯದವನು. ಅವನಿಗೆ ರಾಮನೆಂದು ಹೆಸರು. ಗೂಳಿಯಂತೆ ಉಬ್ಬಿದ ಹೆಗಲುಳ್ಳವನು. ಆತನ ಭುಜಗಳೆರಡೂ ದುಂಡಾಗಿ ಉದ್ದವಾಗಿರುವುವು. ಆತನು ಮಹಾವೀರನು. ಅವನ ಕೀರ್ತಿಯು ಎಲ್ಲೆಲ್ಲಿಯೂ ಪ್ರಖ್ಯಾತವಾಗಿರುವುದು. ಅತ್ಯುತ್ತಮವಾದ ದೇಹಕಾಂತಿಯುಳ್ಳವನು. ಅವನ ಬಲಪರಾಕ್ರಮಗಳಿಗೆ ಎಣೆಯೇ ಇಲ್ಲವು. ಅವನೇ ನಮ್ಮ ಜನಸ್ಥಾನವನ್ನು ಹಾಳುಮಾಡಿಬಿಟ್ಟನು. ನಮ್ಮ ಖರದೂಷಣರನ್ನೂ ಅವನೇ ಕೊಂದನು” ಎಂದನು. ಅಕಂಪನನು ಹೇಳಿದ ಈ ಮಾತನ್ನು ಕೇಳಿ

ರಾಕ್ಷಸಚಕ್ರವರ್ತಿಯಾದ ರಾವಣನು. ಹಾವಿನಂತೆ ಕೋಪದಿಂದ ಬುಸು ಗುಟ್ಟುತ್ತ, ಆ ಅಕಂಪನನನ್ನು ನೋಡಿ "ಎಲೈ, ಚಾರನೆ! ಆ ರಾಮನೆಂಬವನು ಏಕಾಕಿಯಾಗಿ ಬಂದಿರುವನೆ? ಅಥವಾ ದೇವತೆಗಳ ಸಹಾಯದಿಂದ ಬಂದಿರುವನೆ? ಆತನು ಜನಸ್ಥಾನಕ್ಕೆ ಬಂದಾಗ ಇಂದ್ರನೂ ಅವನೊಡನೆ ಕೂಡಿಬಂದಿದ್ದನೆ? ಅವೆಲ್ಲವನ್ನೂ ವಿವರವಾಗಿ ಹೇಳು" ಎಂದನು. ಅದಕ್ಕೆ ಆ ಚಾರನು, ಮಹಾತ್ಮನಾದ ರಾಮನ ಬಲಪರಾಕ್ರಮಗಳನ್ನು ಇನ್ನೂ ವಿವರವಾಗಿ ತಿಳಿಸಲಾರಂಭಿಸಿ "ಎಲೈ ರಾಜಾಧಿರಾಜನೆ! ಆ ರಾಮನು ಮಹಾತೇಜಸ್ವಿಯು. ಧನುರ್ಧಾರಿಗಳಲ್ಲಿ ತಾನೇ ಮೇಲೆನಿಸಿಕೊಂಡಿರುವನು. ಸಮಸ್ತ ದಿವ್ಯಾಸ್ತ್ರಗಳೂ ಆತನಿಗೆ ವಶವಾಗಿರುವುವು. ಯುದ್ಧಕಾಲದಲ್ಲಿ ತಾನೇ ಇಂದ್ರಸಮಾನನಾಗಿರುವಾಗ, ಆತನಿಗೆ ಬೇರೆ ಇಂದ್ರನ ಸಹಾಯವೇಕೆ? ಆ ರಾಮನಿಗೆ ತಕ್ಕಂತೆಯೇ ಮಹಾ ಬಲಾಢ್ಯನಾದ ಲಕ್ಷ್ಮಣನೆಂಬ ಆತನ ತಮ್ಮನೊಬ್ಬನಿರುವನು. ಆತನೂ ರಾಮನಂತೆಯೇ ರೂಪಾತಿಶಯವುಳ್ಳವನಾಗಿರುವನು. ಕಮಲದಂತೆ ಕೆಂಪಾದ ಕಣ್ಣುಳ್ಳವನು. ದುಂದುಂಬಿಯಂತೆ ಗಂಭೀರವಾದ ಕಂಠಸ್ವರವುಳ್ಳವನು. ಚಂದ್ರನಂತೆ ಆಹ್ಲಾದಕರವಾದ ಮುಖಕಾಂತಿಯುಳ್ಳವನು. ಹೀಗೆ ಆ ಅಣ್ಣತಮ್ಮಂದಿರಿಬ್ಬರೂ ಬೆಂಕಿಯೊಡನೆ ಗಾಳಿಯು ಸೇರಿದಂತೆ ಒಬ್ಬರಿಗೊಬ್ಬರು ಬೆಂಬಲವಾಗಿರುವರು. ಕ್ಷತ್ರಿಯ ಶ್ರೇಷ್ಠನಾದ ರಾಮನೇ ನಮ್ಮ ಜನಸ್ಥಾನವನ್ನು ಹಾಳು ಮಾಡಿಬಿಟ್ಟನು. ಈ ವಿಷಯದಲ್ಲಿ ದೇವತೆಗಳು ಯಾವ ವಿಧದಲ್ಲಿಯೂ ಸಹಾಯ ಮಾಡಿದವರಲ್ಲ. ನೀನು ಅವರ ವಿಷಯದಲ್ಲಿ ಸ್ವಲ್ಪವೂ ಸಂದೇಹಪಡಬೇಕಾದುದಿಲ್ಲ. ಎಲೈ ರಾಜನೆ! ಆ ರಾಮನ ಬಾಣಗಳ ಮಹಿಮೆಯನ್ನು ನಾನೇನೆಂದು ಹೇಳಲಿ! ಚಿನ್ನದ ಹಿಡಿಗಳಿಂದಲೂ, ಗರಿಗಳಿಂದಲೂ ಕೂಡಿದ ಬಾಣಗಳನ್ನು ಆತನು ತನ್ನ ಧನುಸ್ಸಿನಿಂದ ಪ್ರಯೋಗಿಸಿದೊಡನೆಯೇ, ಅವು ಐದೈದು ಹೆಡೆಗಳುಳ್ಳ ಸರ್ಪಗಳಂತೆ ಬಂದು ನಮ್ಮ ರಾಕ್ಷಸವೀರರೆಲ್ಲರನ್ನೂ ನುಂಗಿಬಿಡುತ್ತಿದ್ದುವು. ಆ ಯುದ್ಧದಲ್ಲಿ ರಾಕ್ಷಸರು ಭಯದಿಂದ [1]ಯಾವಯಾವ ದಿಕ್ಕಿಗೆ ಓಡಿ

1. ಎಲ್ಲೆಲ್ಲಿಯೂ ರಾಮನೇ ರಾಕ್ಷಸರ ಕಣ್ಣಿಗೆ ಕಾಣುತ್ತಿದ್ದನೆಂಬುದರಿಂದ, ಅವರ ಭಯಾತಿಶಯವು ವ್ಯಕ್ತವಾಗುವುದಲ್ಲದೆ, ಇದರಿಂದ ರಾಮನು ಆ ರಾಕ್ಷಸರೊಡನೆ ಯುದ್ಧ ಮಾಡುವ ಕಾಲದಲ್ಲಿ, ಒಬ್ಬೊಬ್ಬ ರಾಕ್ಷಸನಿಗೂ ಒಬ್ಬೊಬ್ಬ ರಾಮನಂತೆ ಅನೇಕಾಕೃತಿಗಳನ್ನು ಪರಿಗ್ರಹಿಸಿದುದಾಗಿಯೂ ಧ್ವನಿತವಾಗುವುದು.

ಹೋದರೂ, ಅಲ್ಲಿಯೂ ಅವರಿಗೆ ರಾಮನೇ ಕಣ್ಣಿಗಿದಿರಾಗಿ ಬಂದು ನಿಂತಂತೆ ತೋರುತ್ತಿತ್ತು. ಈ ರೀತಿಯಲ್ಲಿ ರಾಮನು ನಮ್ಮ ಜನಸ್ಥಾನವೆಲ್ಲವನ್ನೂ ಕೇವಲ ಶೂನ್ಯಪ್ರದೇಶವನ್ನಾಗಿ ಮಾಡಿಬಿಟ್ಟನು" ಎಂದನು. ಇದನ್ನು ಕೇಳಿ ರಾವಣನು "ಎಲೈ ಚಾರನೆ! ಸರಿ! ಹಾಗಾದರೆ ಆ ರಾಮಲಕ್ಷ್ಮಣರಿಬ್ಬರನ್ನೂ ಕೊಂದುಬರುವುದಕ್ಕಾಗಿ ನಾನು ಈಗಲೇ ಜನಸ್ಥಾನಕ್ಕೆ ಹೊರಡುವೆನು" ಎಂದನು. ಆಗ ಅಕಂಪನನು "ಮಹಾರಾಜನೆ! [1]ಇನ್ನೂ ಆ ರಾಮನ ಮಹಿಮೆಯನ್ನು ವಿವರವಾಗಿ ತಿಳಿಸುವೆನು ಕೇಳು. ಆತುರಪಡಬೇಡ. [2]ಆತನಿಗೆ ಮಾತ್ರ ಕೋಪವುಂಟಾಗಿ ಅವನು ತನ್ನ ಪರಾಕ್ರಮವನ್ನು ತೋರಿಸುವುದಕ್ಕೆ ಪ್ರಯತ್ನಿಸಿದರೆ, ಯಾರೂ ಅವನಿದಿರಿಗೆ ನಿಲ್ಲಲಾರರು. ಅವನು ನಮ್ಮ ರಾಕ್ಷಸರನ್ನು ಕೊಂದ ವಿಷಯವು ಹಾಗಿರಲಿ! ಅವನು ಕೋಪಗೊಂಡರೆ ಉಕ್ಕಿ ಬರುತ್ತಿರುವ [3]ಮಹಾನದಿಯ ಪ್ರವಾಹವೇಗವನ್ನಾದರೂ ತನ್ನ ಬಾಣಗಳಿಂದ ತಡೆದುನಿಲ್ಲಿಸ

---

1. ಇಲ್ಲಿ "ಶೃಣು ರಾಜನ್ ಯಥಾವೃತ್ತಂ ರಾಮಸ್ಯ ಬಲಪೌರುಷಂ" ಎಂದು ಮೂಲವು. (ರಾಮಸ್ಯ ವೃತ್ತಂ ಯಥಾ ಶೃಣು) ಇತಿಹಾಸಪುರಾಣಗಳಲ್ಲಿ ನಿರೂಪಿಸಲ್ಪಟ್ಟಿರುವ ರಾಮನ ಪೂರ್ವಚರಿತ್ರವನ್ನೂ ಕೇಳೆಂದು ಅಂತರಾಶಯವು. ಇದರಿಂದ ಪೂರ್ವದಲ್ಲಿ ವರಾಹಾದ್ಯವತಾರಗಳನ್ನೆತ್ತಿದ ಶ್ರೀ ಮಹಾವಿಷ್ಣುವೇ ರಾಮರೂಪದಿಂದ ಬಂದಿರುವನೆಂಬ ಭಾವವು ಸೂಚಿತವು. ಆದುದರಿಂದ ಮುಂದಿನ ವಾಕ್ಯಗಳಲ್ಲಿ ಶ್ರೀ ಮಹಾವಿಷ್ಣುವಿನ ಕೆಲವು ಅವತಾರ ವಿಶೇಷಗಳು ಧ್ವನಿತವಾಗುವುವು. ಹೇಗೆಂದರೆ,

2. ಇಲ್ಲಿ "ಅಸಾಧ್ಯಃ ಕುಪಿತೋ ರಾಮೋ ವಿಕ್ರಮೇಣ ಮಹಾಯಶಾಃ" ಎಂದು ಮೂಲವು. ಇಲ್ಲಿ "ವಿಕ್ರಮೇಣ ಅಸಾಧ್ಯಃ" ಎಂಬುದರಿಂದ ತ್ರಿವಿಕ್ರಮಾವತಾರವು ಸೂಚಿತವು.

3. ಇಲ್ಲಿ "ಆಪಗಾಯಾಸ್ಸುಪೂರ್ಣಾಯಾ ವೇಗಂ ಪರಿಹರೇತ್" ಎಂದು ಮೂಲವು. ಇದರಲ್ಲಿ ಹಿಂದಿನ ಕಲ್ಪದಲ್ಲಿ ನಡೆದ ಕೃಷ್ಣಾವತಾರವಾಗಲಿ, ಅಥವಾ ಮುಂದೆ ನಡೆಯಬೇಕಾದ ಕೃಷ್ಣಾವತಾರವಾಗಲಿ ಸೂಚಿತವೆಂದು ಗ್ರಹಿಸಬೇಕು. "ಭಯಾನಕಾವರ್ತಶತಾಕುಲಾನದೀಮಾರ್ಗಂ ದದೌ ಸಿಂಧುರಿವ ಶ್ರಿಯಃಪತೇಃ"! ಎಂಬುದಾಗಿ ಭಾಗವತದಲ್ಲಿ ಹೇಳಲ್ಪಟ್ಟ ಕಥಾಸಂದರ್ಭವು ಇಲ್ಲಿ ಅನುಸಂಧೇಯವು.

ಬಲ್ಲನು. ನವಗ್ರಹಗಳನ್ನಾದರೂ ಆಕಾಶದಿಂದ ಕೆಳಕ್ಕಿಳಿಸಿಬಿಡುವನು. [1]ಇತರ ಜ್ಯೋತಿರ್ಮಂಡಲಗಳೊಡನೆ ಇಪ್ಪತ್ತೇಳು ತಾರೆಗಳನ್ನಾದರೂ ನೆಲಕ್ಕುದಿರಿಸ ಬಲ್ಲನು. ಒಂದುವೇಳೆ ಈ ಭೂಮಿಯು ಸಮುದ್ರದಲ್ಲಿ ಮುಳುಗಿಹೋದರೂ ಅದನ್ನು ಕೂಡ ತನ್ನ ಬಾಣಗಳಿಂದ ಮೇಲಕ್ಕೆತ್ತಿ ನಿಲ್ಲಿಸಬಲ್ಲನು. ! [2]ಸಮುದ್ರದ ದಡವನ್ನು ಮುರಿದು ಈ ಸಮಸ್ತಲೋಕಗಳನ್ನೂ ಅದರ ಜಲಪ್ರವಾಹದಲ್ಲಿ ತೇಲಾಡಿಸಿಬಿಡುವನು ! ಸಮುದ್ರದ ವೇಗವನ್ನಾದರೂ ತನ್ನ ಬಾಣಗಳಿಂದ ತಡೆಯಬಲ್ಲನು. ಗಾಳಿಯನ್ನಾದರೂ ಅಡ್ಡಿಮಾಡಬಲ್ಲನು ! ಎಲೈ ರಾಜನೆ ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು ! ಮಹಾಯಶಸ್ವಿಯಾದ ಆ ಪುರುಷ ಸಿಹ್ಮನು [3]ಸಮಸ್ತಲೋಕಗಳನ್ನೂ ತನ್ನ ಪರಾಕ್ರಮದಿಂದ ಸಂಹರಿಸಿ, ಪುನಃ ಮೊದಲಿನಿಂದ ಪ್ರಜೆಗಳನ್ನು ಸೃಷ್ಟಿಸುವುದಕ್ಕೂ ಸಮರ್ಥನು ! [4]ಎಲೈ

---

1. ಇಲ್ಲಿ "ಸತಾರಗ್ರಹನಕ್ಷತ್ರಂ ನಭಶ್ಯಾಪ್ಯವಸಾದಯೇತ್ | ಅಸೌ ರಾಮಸ್ತು ಸೀದಂತೀಂ ಶ್ರೀಮಾನಭ್ಯುದರೇನ್ಮಹೀಂ" ಎಂದು ಮೂಲವು. ಇಲ್ಲಿನ ಪೂರ್ವಾರ್ಧದಿಂ ದಲೂ ತ್ರಿವಿಕ್ರಮಾವತಾರವೇ ಧ್ವನಿತವಾಗುವುದು. ಉತ್ತರಾರ್ಧದಿಂದ ಭೂಮ್ಯುದ್ಧರ ವನ್ನು ಮಾಡಿದ ವರಾಹಾವತಾರಪ್ರಸಂಗವು ಸೂಚಿತವು. ಮತ್ತು ಇಲ್ಲಿ "ಸೀದಂತೀಂ ಶ್ರೀಮಾನಭ್ಯುದ್ಧರೇನ್ಮಹೀಂ" ಎಂಬುದರಿಂದ, ವರಾಹಾದ್ಯವತಾರಗಳಲ್ಲಿಯೂ ಈತನಿಗೆ ಲಕ್ಷ್ಮಿಯು ಅನಪಾಯನಿಯಳಾಗಿರುವಳೆಂದೂ, ಹೀಗೆ ಲಕ್ಷ್ಮೀವಿಶಿಷ್ಟನಾದ ಶ್ರೀಮನ್ನಾರಾ ಯಣನು ಸಂಸಾರಸಾಗರದಲ್ಲಿ ಬಿದ್ದು ಸಂಕಟಪಡುತ್ತಿರುವ ಚೇತನರಿಗೆ ಮೋಕ್ಷವನ್ನು ಕೊಟ್ಟು ಅನುಗ್ರಹಿಸುವನೆಂದೂ ಭಾವವು.

2. ಇಲ್ಲಿ "ಭಿತ್ವಾ ವೇಲಾನ್ ಸಮುದ್ರಸ್ಯ ಲೋಕಾನಾಪಾವಯೇದ್ವಿಭುಃ" ಎಂದು ಮೂಲವು. ಇದರಿಂದ ಸಂಕರ್ಷಣಾವತಾರವು ಧ್ವನಿತವಾಗುವುದು.

3. ಇಲ್ಲಿ "ಸಂಹೃತ್ಯ ವಾ ಪುನರ್ಲೋಕಾನ್ ವಿಕ್ರಮೇಣ ಮಹಾಯಶಾಃ | ಶಕ್ತಸ್ಸ ಪುರುಷವ್ಯಾಘ್ರಃ ಸ್ರಷ್ಟುಂ ಪುನರಪಿ ಪ್ರಜಾಃ" ಎಂದು ಮೂಲವು. ಇದರಿಂದ ಸೃಷ್ಟಿಸ್ಥಿತಿ ಸಂಹಾರಾದಿಗಳಿಗೆ ಈತನೇ ಕರ್ತೃವೆಂದು ಧ್ವನಿತವು.

4. ಇಲ್ಲಿ "ದಶಗ್ರೀವನೇ !" ಎಂದು ಸಂಬೋಧಿಸಿರುವುದರಿಂದ ಲೋಕದಲ್ಲಿ "ಯಾರಿಗೂ ಇಲ್ಲದ ಹತ್ತುತಲೆಗಳನ್ನು ನಾನು ಪಡೆದಿರುವೆನೆಂದು ನೀನು ಗರ್ವಪಡಬೇಡ. ಆ ರಾಮನೂ ಅವನ ತಮ್ಮನೂ ನಿನಗಿಂತಲೂ ನೂರುಮಡಿ ಹೆಚ್ಚಾದ ಎಂದರೆ ಸಾವಿರ ತಲೆಯುಳ್ಳವರು. "ಸಹಸ್ರಶೀರ್ಷಾ ಪುರುಷಃ" ಎಂಬಂತೆ ರಾಮನು ವಿಶ್ವರೂಪಿಯೆಂದೂ ಲಕ್ಷ್ಮಣನು ಸಾವಿರ ತಲೆಗಳುಳ್ಳ ಆದಿಶೇಷ ಸ್ವರೂಪನೆಂದೂ ತಿಳಿದು ನಿನ್ನ ಗರ್ವವನ್ನು ಬಿಡು" ಎಂದು ಅಕಂಪನನು ರಾವಣನನ್ನು ಹಾಸ್ಯಮಾಡಿದುದಾಗಿ ಭಾವವು.

ದಶಗ್ರೀವನೇ ! ಪಾಪಿಗಳಿಗೆ ಸ್ವರ್ಗವು ಹೇಗೆ ದುರ್ಲಭವೋ, ಹಾಗೆ ನಿನಗಾಗಲಿ, ನಮ್ಮ ಇತರ ರಾಕ್ಷಸರಿಗಾಗಲಿ ರಾಮನು ವಶನಾಗತಕ್ಕವನಲ್ಲ. [1]ದೇವದಾನವರೆಲ್ಲರೂ ಒಂದಾಗಿ ಸೇರಿ ಬಂದರೂ ಆತನನ್ನು ಕೊಲ್ಲಲಾರರೆಂದೇ ನನಗೆ ತೋರಿರುವುದು. ಆದರೆ ಅವನನ್ನು ಕೊಲ್ಲುವುದಕ್ಕೆ ಬೇರೊಂದು ಉಪಾಯವುಂಟು. ನೀನು ಗಮನಿಸಿ ಕೇಳುವುದಾದರೆ ಹೇಳುವೆನು. ಆತನಿಗೆ ಸೀತೆಯೆಂಬ ಪತ್ನಿಯೊಬ್ಬಳಿರುವಳು. ಆಕೆಯು ಉತ್ತಮಜಾತಿಯ ಹೆಂಗಸು. ಬಹಳ ಅಂದವಾದ ನಡುವುಳ್ಳವಳು. ಶ್ಯಾಮಲವಾದ ಮೈಬಣ್ಣವುಳ್ಳವಳು. ಅವಳ ಅವಯವಸನ್ನಿವೇಶಗಳು ಒಂದಕ್ಕೊಂದಕ್ಕೆ ಬಹಳ ಅನುರೂಪವಾಗಿರುವುವು. ಸ್ತ್ರೀಯರಿಗೆಲ್ಲಾ ಆಕೆಯೊಂದು ರತ್ನವೆಂದು ಹೇಳಬಹುದು. ಅನೇಕ ರತ್ನಾಭರಣಗಳಿಂದ ಭೂಷಿತೆಯಾಗಿರುವಳು. ದೇವತೆಗಳಲ್ಲಿಯಾಗಲಿ, ಗಂಧರ್ವರಲ್ಲಿಯಾಗಲಿ, ಅಪ್ಸರಸ್ಸುಗಳಲ್ಲಿಯಾಗಲಿ, ದಾನವರಲ್ಲಿಯಾಗಲಿ, ಯಾವಳೊಬ್ಬಳೂ ಆಕೆಗೆ ಎಣೆಯಾಗಳು. ಇನ್ನು ಮನುಷ್ಯಸ್ತ್ರೀಯರಲ್ಲಿ ಆಕೆಗೆ ಸಮಾನಳಾದ ಸ್ತ್ರೀಯೇ ಇಲ್ಲವೆಂಬುದನ್ನು ಹೇಳಬೇಕಾದುದೇನು ? ಆಕೆಯನ್ನು ರಾಮನು ಕ್ಷಣವೂ ಅಗಲಿರಲಾರನು. ನೀನು ಜನಸ್ಥಾನಕ್ಕೆ ಹೋಗಿ ರಾಮನಿಗೆ ತಿಳಿಯದಂತೆ ಆ

---

1. ಅಕಂಪನನು ರಾಮನನ್ನು ಇಷ್ಟು ವಿಧವಾಗಿ ಸ್ತೋತ್ರಮಾಡುತ್ತಿರುವುದರಿಂದ, ಆತನಿಗೆ ರಾಮನ ವಿಷಯವಾದ ಪರತ್ವಜ್ಞಾನವಿದ್ದಿರಬಹುದೆಂದೇ ಊಹ್ಯವು. ಇವನಿಗೆ ಸನತ್ಕುಮಾರಾದಿಗಳು ಹೇಳಿದ ಇತಿಹಾಸಗಳನ್ನು ಆಗಾಗ ಕೇಳುತ್ತಿದ್ದುದರಿಂದಾಗಲಿ, ಮಾಲ್ಯವನೇ ಮೊದಲಾದವರು, ಸುಮಾಲಿ, ಮಾಲಿ ಮೊದಲಾದವರ ವಧಾದಿ ವೃತ್ತಾಂತಗಳನ್ನು ಇವನ ಮುಂದೆ ಹೇಳುತ್ತಿದ್ದುದರಿಂದಾಗಲಿ, ರಾಮನು ಖರಾದಿಗಳಾದ ಹದಿನಾಲ್ಕು ಸಾವಿರ ಮಂದಿ ರಾಕ್ಷಸರೊಡನೆ ಯುದ್ಧಮಾಡುವಾಗ ವಿಶ್ವರೂಪವನ್ನು ತಾಳಿದಂತೆ ಅನೇಕಾಕೃತಿಗಳನ್ನು ತೋರಿಸಲು, ಅದನ್ನು ನೋಡಿದ ಪುಣ್ಯವಿಶೇಷದಿಂದಲಾಗಲಿ, ಈ ಜ್ಞಾನವು ಹುಟ್ಟಿರಬಹುದೆಂಬ ಸಂಭವವುಂಟು. ಇದಕ್ಕಾಗಿಯೇ ಇಲ್ಲಿ "ನ ತಂ ವಧ್ಯಮಹಂ ಮನ್ಯೇ" ಎಂಬ ಮೂಲವಾಕ್ಯಕ್ಕೆ "ನಾನು ರಾಕ್ಷಸಜನ್ಮದಲ್ಲಿ ಹುಟ್ಟಿದ್ದರೂ ಸುಕೃತಪರಿಪಾಕದಿಂದ ನನಗೆ ಆ ರಾಮನ ಪರತ್ವಜ್ಞಾನವು ಹುಟ್ಟಿರುವುದು. ನಿನಗಾದರೋ "ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ" ಎಂಬ ವಚನಾನುಸಾರವಾಗಿ ಇನ್ನೂ ಜ್ಞಾನಪರಿಪಾಕವುಂಟಾಗಲಿಲ್ಲವು" ಎಂದು ಆತನು ರಾವಣನನ್ನು ಕುರಿತು ಹೇಳಿದುದಾಗಿ ಅರ್ಥಾಂತರವು ಧ್ವನಿತವು. ಅಥವಾ ವಾಲ್ಮೀಕಿಯು ಅಕಂಪನನ ಮುಖದಿಂದ ತಾನೇ ರಾಮನ ಪರತ್ವವನ್ನು ಹೇಳಿರುವನೆಂದೂ ಗ್ರಹಿಸಬಹುದು.

ಸೀತೆಯನ್ನು ಬಲಾತ್ಕಾರದಿಂದ ಕದ್ದು ತಂದುಬಿಡು. ಆಗ ರಾಮನು ಆವಳನ್ನಗಲಿ ಬದುಕಿರಲಾರದೆ ಪ್ರಾಣವನ್ನು ಬಿಡುವನು" ಎಂದನು. ಅದನ್ನು ಕೇಳಿ ರಾವಣನು ಸ್ವಲ್ಪಹೊತ್ತು ಮನಸ್ಸಿನಲ್ಲಿ ಚೆನ್ನಾಗಿ ಪರ್ಯಾಲೋಚಿಸಿಕೊಂಡು, [1]ಅಕಂಪನನ

---

1. ಇಲ್ಲಿ "ಅರೋಚಯತ ತದ್ವಾಕ್ಯಂ ರಾವಣೋ ರಾಕ್ಷಸಾಧಿಪಃ । ಚಿಂತಯಿತ್ವಾ ಮಹಾಬಾಹುರಕಂಪನಮುವಾಚ ಹ ॥" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ, "ರಾವಣನು ಅಕಂಪನನಿಂದ ರಾಮವೃತ್ತಾಂತವನ್ನು ಕೇಳಿದಮೇಲೆ, (ಚಿಂತಯಿತ್ವಾ) ಸ್ವಲ್ಪಹೊತ್ತಿನವರೆಗೆ ಆಲೋಚಿಸಿ, (ತದ್ವಾಕ್ಯಂ ಅರೋಚಯತ) ಆ ಮಾತನ್ನು ಒಪ್ಪಿದನು ಎಂದು ಭಾವವು. ಪೂರ್ವದಲ್ಲಿ ರಾವಣನು ಸನತ್ಕುಮಾರನ ಮುಖದಿಂದ, ತ್ರೇತಾಯುಗದಲ್ಲಿ ವಿಷ್ಣುವು ರಾಮರೂಪದಿಂದವತರಿಸುವನೆಂಬ ಭವಿಷ್ಯದ್ವೃತ್ತಾಂತವನ್ನು ಕೇಳಿದ್ದನು. ಈಗ ಅಕಂಪನನ ಮೂಲವಾಗಿ ರಾಮನ ಮಹಿಮೆಯನ್ನು ಕೇಳಿದ ಮೇಲೆ, ಆ ವಿಷಯವು ಅವನ ಸ್ಮರಣೆಗೆ ಬಂದಿತು. ಇದರಿಂದ ತನಗೆ ಶಾಪವಿಮೋಚನ ಕಾಲವೊದಗಿತೆಂದು ತಿಳಿದು, ತಾನು ರಾಮನ ಕೈಯಿಂದ ಸಾಯುವುದಕ್ಕೆ ಅಕಂಪನನು ಹೇಳಿದ ಸೀತಾಪಹರಣವೇ ಅನುಕೂಲವಾದ ಉಪಾಯವೆಂದು ಅಂಗೀಕರಿಸಿದುದಾಗಿ ಭಾವವು. ರಾವಣನಿಗೆ ಸನತ್ಕುಮಾರರು ಹೇಳಿದ ಈ ರಾಮಾವತಾರ ವೃತ್ತಾಂತವು. ಉತ್ತರ ರಾಮಾಯಣದಲ್ಲಿ ಅಗಸ್ತ್ಯರಾಮಸಂವಾದದಲ್ಲಿ ವಿವರಿಸಲ್ಪಟ್ಟಿರುವುದು. ಮೊದಲು ಕೃತಯುಗದಲ್ಲಿ ರಾವಣನು ಬ್ರಹ್ಮಪುತ್ರನಾದ ಸನತ್ಕುಮಾರನನ್ನು ನೋಡಿ, ಯುದ್ಧದಲ್ಲಿ ಹತರಾದ ದೈತ್ಯರೂ, ದಾನವರೂ, ರಾಕ್ಷಸರೂ ಯಾವ ಗತಿಯನ್ನು ಹೊಂದಿರುವರು? ವಿಷ್ಣುವು ಅವರನ್ನು ಕೊಂದುದೇಕೆ?" ಎಂದು ಕೇಳಲು, ಅದಕ್ಕೆ ಆ ಸನತ್ಕುಮಾರನು "ವಿಷ್ಣುವಿನಿಂದ ಹತರಾದ ರಾಕ್ಷಸರೆಲ್ಲರೂ ಉತ್ತಮಗತಿಯನ್ನೇ ಪಡೆದಿರುವರು. ಆ ಶ್ರೀಮನ್ನಾರಾಯಣನ ಕೋಪವೂ ಅನುಗ್ರಹಕ್ಕೆ ಸಮಾನವಾದುದೇ" ಎಂದನು. ಇದನು ಕೇಳಿ ರಾವಣನು ಆಶ್ಚರ್ಯಪಟ್ಟು "ಆ ಮಹಾವಿಷ್ಣುವಿನೊಡನೆ ತನಗೆ ಯುದ್ಧವು ಯಾವಾಗ ಸಂಭವಿಸಬಹುದು"? ಎಂದನು. ಅದಕ್ಕಾ ಸನತ್ಕುಮಾರನು ಮುಂದೆ ನಡೆಯುವ ರಾಮಾವತಾರಪ್ರಸಕ್ತಿಯನ್ನು ಹೇಳಲು, ಅದನ್ನು ಕೇಳಿ, ರಾವಣನು ರಾಮನೊಡನೆ ವಿರೋಧವನ್ನು ಬೆಳೆಸಬೇಕೆಂಬ ಕಾಲನಿರೀಕ್ಷಣೆಯಿಂದಲೇ ಇದ್ದು, ಈಗ ಅಕಂಪನನು ಹೇಳಿದ ಉಪಾಯವೇ ತನ್ನ ಕಾರ್ಯಸಿದ್ಧಿಗೆ ಅನುಕೂಲವೆಂದು ನಿಶ್ಚಯಿಸಿದುದಾಗಿ ಗ್ರಹಿಸಬೇಕು. ಇದರಿಂದ ರಾವಣನು ಸೀತಾರಾಮರನ್ನು ಕುರಿತು ಹೇಳುವ ಮಾತುಗಳು ಮೇಲಕ್ಕೆ ದುರ್ಭಾಷೆಗಳಂತೆ ತೋರಿದರೂ, ವಾಸ್ತವಾರ್ಥವನ್ನು ವಿಮರ್ಶಿಸಿದರೆ, ಸ್ತುತಿಪರವಾಗಿಯೇ ಇರುವುವೆಂದು ತಿಳಿಯಬೇಕು. ಅಲ್ಲಲ್ಲಿ ಅನ್ವಯಭೇದದಿಂದಲೂ, ವ್ಯುತ್ಪತ್ತಿಭೇದದಿಂದಲೂ, ಪದವಿಭಾಗ ಭೇದದಿಂದಲೂ, ಅದರ ತತ್ವಾರ್ಥವನ್ನು ಗ್ರಹಿಸಬಹುದು. (ಮಹೇಶ್ವರ ತೀರ್ಥರು).

ಆಲೋಚನೆಯನ್ನಂಗೀಕರಿಸಿ, "ಒಳ್ಳೇದು! ನೀನು ಹೇಳಿದಂತೆಯೇ ಮಾಡುವೆನು. ಇದಕ್ಕಾಗಿ ನಮಗೆ ಬೇರೆ ಸನ್ನಾಹವೇನೂ ಬೇಕಾದುದಿಲ್ಲ. ನಾಳೆ ಬೆಳಗಾಗುವಷ್ಟರೊಳಗಾಗಿ ನಾನೊಬ್ಬನೇ ಸಾರಥಿಯನ್ನು ಕರೆದುಕೊಂಡು ಜನಸ್ಥಾನಕ್ಕೆ ಹೋಗಿ ಅವಳನ್ನು ಈ ಲಂಕೆಗೆ ತಂದುಬಿಡುವೆನು" ಎಂದನು. ರಾವಣನು ಮರುದಿನದ ಪ್ರಾತಃಕಾಲದಲ್ಲಿ ಎದ್ದು, ಸೂರ್ಯನಂತೆ ಹೊಳೆಯುತ್ತಿರುವ ತನ್ನ ಜಯರಥಕ್ಕೆ ವೇಗವತ್ತಾದ ಎರಡು ಕತ್ತೆಗಳನ್ನು ಕಟ್ಟಿಸಿ, ಆ ರಥವನ್ನೇರಿ ಹೊರಟನು. ರಾಕ್ಷಸಚಕ್ರವರ್ತಿಯಾದ ಆ ರಾವಣನ ರಥವು ಮೇಘಮಂಡಲದಲ್ಲಿ ತಿರುಗುವ ಚಂದ್ರಬಿಂಬದಂತೆ ನೆಲವನ್ನು ಮುಟ್ಟದೆ ಆಕಾಶ ಮಾರ್ಗದಲ್ಲಿಯೇ, ಅತಿವೇಗದಿಂದ ನಡೆಯುತ್ತಿತ್ತು. ಕೊನೆಗೆ ರಾವಣನು ಮಾರೀಚಾಶ್ರಮವನ್ನು ಸೇರಿ, ಅಲ್ಲಿ ರಥದಿಂದಿಳಿದು, ತಾಟಕಾಪುತ್ರನಾದ ಆ ರಾಕ್ಷಸನ ಬಳಿಗೆ ಹೋದನು. ಅಲ್ಲಿ ಮಾರೀಚನು ರಾಕ್ಷಸಪ್ರಭುವಾದ ರಾವಣನು ತನ್ನಲ್ಲಿಗೆ ಅಭ್ಯಾಗತನಾಗಿ ಬಂದುದಕ್ಕೆ ಬಹಳ ಸಂತೋಷಗೊಂಡು ಮನುಷ್ಯದುರ್ಲಭಗಳಾದ ಅನೇಕ ಭಕ್ಷ್ಯಭೋಜ್ಯಾದಿಗಳನ್ನು ತಂದುಕೊಟ್ಟು, ಅರ್ಘ್ಯಾದಿಗಳಿಂದ ಸತ್ಕರಿಸಿ, ಅವನನ್ನು ಕುರಿತು, "ಎಲೈ ರಾಕ್ಷಸರಾಜನೆ! ರಾಕ್ಷಸರೆಲ್ಲರಿಗೂ ಕ್ಷೇಮವೇ? ನೀನು ಆಕಸ್ಮಿಕವಾಗಿ ಇಷ್ಟಾತುರದಿಂದ ಬಂದುದನ್ನು ನೋಡಿ ನನ್ನ ಮನಸ್ಸಿಗೆ ಸಂದೇಹವುಂಟಾಗಿರುವುದು?" ಎಂದನು. ಇದನ್ನು ಕೇಳಿ ಸಮಯೋಚಿತವಾದ ಮಾತುಗಳನ್ನಾಡುವುದರಲ್ಲಿ ಚತುರನಾದ ರಾವಣನು, ಆ ಮಾರೀಚನನ್ನು ಕುರಿತು, "ಅಯ್ಯಾ! ಮಾರೀಚನೆ! ನಾನೇನು ಹೇಳಲಿ! ಕೇವಲ ಮನುಷ್ಯಮಾತ್ರನಾದ ರಾಮನೆಂಬುವನು, ನಮ್ಮಲ್ಲಿ ಮಹಾವೀರನೆನಿಸಿಕೊಂಡಿದ್ದ ಖರನನ್ನು ಕೊಂದುದಲ್ಲದೆ ನಮ್ಮ ಜನಸ್ಥಾನದಲ್ಲಿದ್ದ ಇತರ ರಾಕ್ಷಸರೆಲ್ಲರನ್ನೂ ಕೊಂದು ಆ ಪ್ರದೇಶವನ್ನೇ ಹಾಳುಮಾಡಿಬಿಟ್ಟನು. ಅದಕ್ಕಾಗಿ ಈಗ ನಾನು ಅವನ ಹೆಂಡತಿಯನ್ನು ಕದ್ದುತರಬೇಕೆಂದಿರುವೆನು. ಹೀಗೆ ಬಂಧುಗಳನ್ನು ಕಳೆದುಕೊಂಡು ದುಃಖಕ್ಕೀಡಾಗಿರುವ ನನಗೆ ನೀನು ಈ ವಿಷಯದಲ್ಲಿ ಸಹಾಯಕನಾಗಿರಬೇಕು" ಎಂದನು. ಅದನ್ನು ಕೇಳಿ ಮಾರೀಚನು, ಹಾಗೆಯೇ ಬೆಜ್ಜರಬಿದ್ದಂತಾಗಿ ರಾವಣನನ್ನು ನೋಡಿ, "ಅಯ್ಯಾ! ರಾಕ್ಷಸಕುಲೋತ್ತಮನೆ! ಭಲೆಭಲೆ! ಒಳ್ಳೇ ಆಲೋಚನೆಯನ್ನು ಮಾಡಿದೆ! ನಿನಗೆ ಆ ಸೀತೆಯ ಹೆಸರನ್ನು ತಿಳಿಸಿ ಈ ದುರಾಲೋಚನೆಯನ್ನು ಹೇಳಿಕೊಟ್ಟವರಾರು? ಮೊದಲು ಅದನ್ನು ನನಗೆ

ಹೇಳು ! ಅವನು ನಿಜವಾಗಿ ನಿನಗೆ ಮಿತ್ರನೆ? ಅಥವಾ ಶತ್ರುವೆ ? ಅವನೇನೋ ನಿನಗೆ ನಿಜವಾದ ಮಿತ್ರನಾಗಿರಲಾರನು. ನಿನ್ನಲ್ಲಿ ಮಿತ್ರನಂತೆ ನಟಿಸಿದರೂ ಅವನನ್ನು ಶತ್ರುವೆಂದೇ ಎಣಿಸಬೇಕಾಗಿದೆ! ಹಿಂದೆ ನಿನ್ನಿಂದ ತಿರಸ್ಕೃತನಾದ ಯಾವನೋ ಒಬ್ಬನು, ಆ ಕೋಪವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದು, ನಿನ್ನನ್ನು ಕೆಡಿಸುವುದಕ್ಕಾಗಿಯೇ ಈ ದುರಾಲೋಚನೆಯನ್ನು ಹೇಳಿರಬಹುದು. ನಿನ್ನ ಮಹಾಭಾಗ್ಯವನ್ನು ನೋಡಿ ಸಹಿಸಲಾರದೆ ಹೀಗೆ ನಿನಗೆ ಸೀತೆಯನ್ನು ಕದ್ದು ತರಬೇಕೆಂದು ಯಾವನು ಹೇಳಿದನು? ರಾಕ್ಷಸಕುಲಕ್ಕೆ ಶಿಖರದಂತಿರುವ ನಿನ್ನನ್ನು ಕೆಡಿಸಬೇಕೆಂದು ಈ ಆಲೋಚನೆಯನ್ನು ಮಾಡಿದವನಾವನು? ನಿನಗೆ ಈ ದುರ್ಮಂತ್ರವನ್ನು ಹೇಳಿಕೊಟ್ಟವನು ನಿಜವಾಗಿ ನಿನಗೆ ಆಜನ್ಮಶತ್ರುವಾಗಿಯೇ ಇರಬೇಕು! ಇದರಲ್ಲಿ ಸಂದೇಹವೇ ಇಲ್ಲ! ಕೋರೆಹಲ್ಲನ್ನು ಕೀಳುವುದಕ್ಕಾಗಿ ಕ್ರೂರಸರ್ಪದ ಬಾಯಿಗೆ ಕೈಯಿಕ್ಕಿಸುವಂತೆ, ಪ್ರಾಣಾಪಾಯವನ್ನುಂಟು ಮಾಡತಕ್ಕ ಈ ಕ್ರೂರಕಾರ್ಯಕ್ಕೆ ನಿನ್ನನ್ನು ಪ್ರೇರಿಸಿದವನಾವನು? ಯಾವನು ನಿನ್ನನ್ನು ಈ ಕೆಟ್ಟದಾರಿಗೆಳೆದಿರುವನು? ಅಯ್ಯೋ ಪಾಪವೆ! ಸುಖವಾಗಿ ಮಲಗಿರುವ ನಿನ್ನನ್ನು ಹೀಗೆ ತಲೆಯಮೇಲೆ ಹೊಡೆದೆಬ್ಬಿಸಿದವನಾವನೋ ಕಾಣೆನಲ್ಲಾ! ಎಲೈ ರಾವಣನೆ! ನೀನು ಆ ರಾಮನನ್ನು ಯಾವನೋ ಸಾಮಾನ್ಯ ಮನುಷ್ಯನೆಂದು ತಿಳಿದೆಯಾ? ಅವನನ್ನು ಕೊಬ್ಬಿದ ಕಾಡಾನೆ ಯೆಂದೇ ಹೇಳಬೇಕು! ಪವಿತ್ರವಾದ ವಂಶೋನ್ನತಿಯೆಂಬ ಸುಂಡಿಲಿನಿಂದಲೂ, ತೇಜಸ್ಸೆಂಬ ಮದದಿಂದಲೂ, ತೋಳುಗಳೆಂಬ ಕೊಂಬುಗಳಿಂದಲೂ ಕೂಡಿದ ಮಹಾಬಲವುಳ್ಳ ರಾಮನೆಂಬ ಗಂಧಗಜವು, ರಣರಂಗದಲ್ಲಿ ಬಂದು ನಿಂತಾಗ ಕಣ್ಣಿಂದ ನೋಡುವುದಕ್ಕಾದರೂ ಸಾಧ್ಯವೆ? ಚೆನ್ನಾಗಿ ಕೊಬ್ಬಿದ ಕಾಡಾನೆಯು ಬರುತ್ತಿರುವಾಗ, ಅದರ ಮದಗಂಧವು ಹೊರಟುಬಂದಾಗಲೇ ಇತರ ಗಜಗಳು ಪಲಾಯಿತವಾಗುವಂತೆ, ಆ ರಾಮನು ಯುದ್ಧಕ್ಕೆ ಬರುವನೆಂಬ ಸುದ್ದಿಯು ಕಿವಿಗೆ ಬಿದ್ದಮಾತ್ರಕ್ಕೇ ನಾವು ಪಲಾಯನಮಾಡಬೇಕಾಗಿರುವುದಲ್ಲವೆ? ಇನ್ನು ನಮಗೆ ಅವನೊಡನೆ ಯುದ್ಧವೆಂದರೇನು? ಅಯ್ಯಾ! ರಾವಣಾ! ಆ ರಾಮನಿಗೆ ಈಗ ನಾನು ಹೇಳಿದ ಆನೆಯ ಸಾಮ್ಯವೇ ಸಾಲದು. ಅವನನ್ನು ಕೊಬ್ಬಿದ ಒಂದು ಸಿಂಹವೆಂದೂ ಹೇಳಬಹುದು. ಮನುಷ್ಯರಲ್ಲಿ ಸಿಂಹದಂತಿರುವ ಆ ರಾಮನು, ರಣರಂಗದಲ್ಲಿ ಬಂದು ನಿಂತಾಗಲೇ ಕೋಪಗೊಂಡ ಸಿಂಹದ ವಾಲ

ಚಲನವನ್ನು ನೋಡಿದವರಂತೆ ನಾವು ಪಲಾಯನಮಾಡಬೇಕಾಗುವುದು. ಆ ಸಿಂಹಕ್ಕೆ ನಿನ್ನಂತಹ ರಾಕ್ಷಸರೆಲ್ಲರೂ ಕೇವಲ ಕ್ಷುದ್ರಮೃಗಪ್ರಾಯರು! ಬಾಣ ಗಳೇ ಅದರ ಅವಯವಗಳೆಂದೂ, ತೀಕ್ಷ್ಣವಾದ ಕತ್ತಿಯೇ ಅದರ ಕೋರೆದಾಡೆ ಯೆಂದೂ ತಿಳಿ! ರಾಮನೆಂಬ ಇಂತಹ ಕ್ರೂರಸಿಂಹವು ಮಲಗಿರುವಾಗ, ಅದನ್ನು ನೀನು ಹೊಡೆದು, ಎಬ್ಬಿಸುವುದಕ್ಕೆ ಪ್ರಯತ್ನಿಸುವೆಯಾ? ಇದು ನಿನಗೆ ಎಂದಿಗೂ ಉಚಿತವಲ್ಲ. ಒಂದುವೇಳೆ ಸಿಂಹದ ಕಣ್ಣಿಗೆ ಬಿದ್ದರೂ ಉಪಾಯದಿಂದ ತಪ್ಪಿಸಿಕೊಂಡು ಬರಬಹುದು! ಆತನನ್ನು ಕೆಣಕಿದ ಮೇಲೆ ಬದುಕಿ ಬರುವ ಆಸೆಯೇನು? ಆ ರಾಮನಿರುವ ರಣರಂಗವನ್ನು ಘೋರವಾದ ಪಾತಾಳವೆಂದೇ ಹೇಳಬೇಕು! ಮಹಾಧನುಸ್ಸೆಂಬ ಮೊಸಳೆಯಿಂದಲೂ, ಬಾಣಪ್ರಯೋಗ ಚಾತುರ್ಯವೆಂಬ ಕೆಸರಿನಿಂದಲೂ, ಬಾಣಗಳೆಂಬ ಅಲೆಗಳ ಪರಂಪರೆಯಿಂದಲೂ, ಕೂಡಿದ ಯುದ್ಧವೆಂಬ ಮಹಾಪ್ರವಾಹದಲ್ಲಿ ನೀನು ಜಾರಿಬಿದ್ದ ಮೇಲೆ ಬದುಕಿ ಬರುವುದೆಂದರೇನು? ರಾಮನೆಂಬ ಮಹಾಬಿಲದಲ್ಲಿ ಬಿದ್ದಮೇಲೆ ಅಧೋಗತಿ ಯಲ್ಲದೆ ಬೇರೆಯೇನು? ರಾಕ್ಷಸೇಂದ್ರನೆ! ಬೇಡ! ಈ ದುರಾಲೋಚನೆಯನ್ನು ಬಿಡು! ಇದು ನಿನಗೆ ತರವಲ್ಲ! ಹೀಗೆ ಹೇಳಿದೆನೆಂದು ಕೋಪಿಸಬೇಡ! ಮನ್ನಿಸು! ಈಗಲೇ ನೀನು ಸುಖವಾಗಿ ಹೋಗಿ ಲಂಕೆಯನ್ನು ಸೇರು! ಲಂಕಾ ರಾಜ್ಯದಲ್ಲಿ ಅಂತಃಪುರ ಸ್ತ್ರೀಯರೊಡನೆ ರಾಜಭೋಗದಿಂದಿರುವ ನಿನಗೆ, ಹೆಂಡತಿ ಯನ್ನು ಕಟ್ಟಿಕೊಂಡು ಕಾಡುಗುಡ್ಡಗಳಲ್ಲಿ ಅಲೆಯುತ್ತಿರುವ ರಾಮನೊಡನೆ ಸ್ಪರ್ಧೆಯೇನು? ನಿನ್ನ ಪಾಡಿಗೆ ನೀನು ಲಂಕೆಯಲ್ಲಿ ಸುಖವಾಗಿರು! ರಾಮನು ತನ್ನ ಪಾಡಿಗೆ ತಾನು ಸೀತೆಯೊಡನೆ ಕಾಡುಗಳಲ್ಲಿ ಸುತ್ತುತ್ತಿರಲಿ!" ಎಂದನು. ಇದನ್ನು ಕೇಳಿ ರಾವಣನಿಗೆ ಮೊದಲಿದ್ದ ಕೋಪಾವೇಶವು ತಗ್ಗಿ, ಅವನ ಮನಸ್ಸಿಳಿಯಿತು. ಆಗಲೇ ಅವನು ಹಿಂತಿರುಗಿ ಲಂಕೆಯನ್ನು ಸೇರಿ ತನ್ನ ಅರಮನೆಯನ್ನು ಪ್ರವೇಶಿಸಿದನು.

ಇಲ್ಲಿಗೆ ಮೂವತ್ತೊಂದನೆಯ ಸರ್ಗವು.

## ಶೂರ್ಪಣಖೆಯು ರಾವಣನ ಬಳಿಗೆ ಬಂದುದು

ಇತ್ತಲಾಗಿ ಶೂರ್ಪಣಖೆಯು ಜನಸ್ಥಾನದಲ್ಲಿ ಮಹಾಪರಾಕ್ರಮಿಗಳಾದ ಹದಿನಾಲ್ಕುಸಾವಿರಮಂದಿ ರಾಕ್ಷಸರೂ, ಖರದೂಷಣ ತ್ರಿಶಿರಸ್ಸುಗಳೆಂಬ ಮಹಾ ವೀರರೂ, ಏಕಾಕಿಯಾದ ರಾಮನೊಬ್ಬನಿಂದ ಹತರಾಗಿ ಬಿದ್ದಿರುವುದನ್ನು ನೋಡಿ, ಸಹಿಸಲಾರದ ಸಂಕಟದಿಂದ, ಮೇಘಗಳು ಗುಡುಗುವಂತೆ ಭಯಂಕರ ವಾದ ಧ್ವನಿಯಿಂದ ' ಹೋ ' ಎಂದು ಅರಚಿಕೊಳ್ಳುತ್ತ, ಇತರರಿಗೆ ಸಾಧ್ಯವಲ್ಲದ ಆ ರಾಮನ ಸಾಹಸಕ್ಕೆ ಅರಚಿದವಳಾಗಿ, ಅಲ್ಲಿಂದ ಲಂಕೆಗೆ ಓಡಿದಳು. ಅಲ್ಲಿ ರಾವಣನು ಅನೇಕ ರಾಕ್ಷಸಮಂತ್ರಿಗಳಿಂದ ಪರಿವೃತನಾಗಿ, ದೇವತೆಗಳ ಮಧ್ಯ ಗತನಾದ ಇಂದ್ರನಂತೆ ತೇಜಸ್ಸಿನಿಂದ ಜ್ವಲಿಸುತ್ತ ಪುಷ್ಪಕವಿಮಾನದಲ್ಲಿ ಕುಳಿತಿ ದ್ದನು. ಸೂರ್ಯನಂತೆ ಜ್ವಲಿಸುತ್ತಿರುವ ಸುವರ್ಣಪೀಠದ ಮೇಲೆ ಕುಳಿತಿದ್ದ ಆ ರಾವಣನು, ಚಿನ್ನದ ವೇದಿಕೆಯಲ್ಲಿ ಆಜ್ಯಾಹುತಿಯಿಂದ ಜ್ವಲಿಸುತ್ತಿರುವ ಅಗ್ನಿಯಂತೆಯೇ ತೋರುತಿದ್ದನು, ದೇವತೆಗಳಾಗಲಿ, ಗಂಧರ್ವರಾಗಲಿ, ಮಹರ್ಷಿಗಳಾಗಲಿ, ಇತರ ಭೂತಗಳಾಗಲಿ ಯಾರೂ ಅವನನ್ನು ಯುದ್ಧದಲ್ಲಿ ಜಯಿಸಲಾರರು. ಲೋಕೈಕ ವೀರನೆಂದರೆ ಅವನಿಗೇ ಸಲ್ಲುವುದು ! ಬಾಯಿ ಬಿಟ್ಟುಕೊಂಡುಬರುವ ಯಮನಂತೆಯೇ ತೋರುತ್ತಿರುವನು. ದೇವಾಸುರ ಯುದ್ಧಗಳಲ್ಲಿ ಆತನ ಮೈಮೇಲೆ ಇಂದ್ರನ ವಜ್ರಾಹತಿಯಿಂದಲೂ, ಐರಾವತದ ಕೊಂಬಿನ ತಿವಿತದಿಂದಲೂ ಉಂಟಾದ ಗಾಯಗಳು ಜಿಡ್ಡುಗಟ್ಟಿ, ಅವನ ಅಂಗಾಂಗವೆಲ್ಲವೂ ಒರಟುಬಿದ್ದುಹೋಗಿರುವುವು. ಲೋಕವಿಲಕ್ಷಣ ಸ್ವರೂಪವುಳ್ಳ ಆತನ ಇಪ್ಪತ್ತು ತೋಳುಗಳೂ, ಹತ್ತು ತಲೆಗಳೂ ನೋಡುವಾಗಲೇ ಭಯ ವನ್ನುಂಟುಮಾಡುತ್ತಿದ್ದರೂ, ಛತ್ರ ಚಾಮರಾದ್ಯಂಗಗಳಿಂದ ಕೂಡಿದ ಆತನ ಸಾಮ್ರಾಜ್ಯವೈಭವವು ನೋಡುವವರಿಗೆ ಆಸೆಯನ್ನುಂಟುಮಾಡುತ್ತಿರುವುದು. ಅವನ ಆಭರಣದ ವೈಡೂರ್ಯಕಾಂತಿಯೂ, ಅವನ ಚಿನ್ನದ ಕಡಕುಗಳ ಕಾಂತಿಯೂ ಅವನ ತೇಜಸ್ಸನ್ನು ಮತ್ತಷ್ಟು ಹೆಚ್ಚಿಸಿ ಕಾಣಿಸುತಿದ್ದುವು. ರಾಜಲಕ್ಷಣಗಳಿಂದ ಕೂಡಿದ ಆತನ ದುಂಡಾದ ತೋಳುಗಳೂ, ಬಿಳುಪಾದ ಹಲ್ಲುಗಳೂ, ನೋಡುವುದಕ್ಕೆ ಆಹ್ಲಾದವನ್ನುಂಟುಮಾಡುತಿದ್ದರೂ, ಅವನ ಅಗಲವಾದ ಬಾಯಿಯೂ, ಬೆಟ್ಟದಂತೆ ಉದ್ದವಾದ ಆಕೃತಿಯೂ ಭಯಂಕರವಾಗಿ ಕಾಣುತ್ತಿದ್ದುವು. ದೇವತೆಗಳೊಡನೆ ಯುದ್ಧಮಾಡುವಾಗ, ಶ್ರೀ ಮಹಾ

ವಿಷ್ಣುವಿನ ಚಕ್ರಾಯುಧದಿಂದಲೂ, ದೇವತೆಗಳ ಇತರ ಶಸ್ತ್ರಾಸ್ತ್ರಗಳಿಂದಲೂ ಅನೇಕಾವರ್ತಿ ಪೆಟ್ಟುತಿಂದು ಪಟ್ಟುಗಟ್ಟಿ ಕೊಬ್ಬಿದ ಆತನ ದೇಹದಲ್ಲಿ, ಎಷ್ಟೇ ಪ್ರಬಲವಾದ ದೇವಾಸ್ತ್ರಗಳೂ ಹಾಯಲಾರವು. ಅವನು ಅಕ್ಷೋಭ್ಯವಾದ ಸಮುದ್ರಗಳನ್ನೂ ಕ್ಷೋಭೆ ಹೊಂದಿಸಬಲ್ಲನು. ತೋರಿದ ಕಾರ್ಯಗಳನ್ನು ಕ್ಷಣವೇ ಸಾಧಿಸಬಲ್ಲ ಮಹಾಸಾಹಸಿಯು, ಕುಲಪರ್ವತಗಳನ್ನಾದರೂ ಕಿತ್ತು ಬಿಸುಡುವನು. ದೇವತೆಗಳನ್ನು ತಲೆಯೆತ್ತದಂತೆ ಅಡಗಿಸಿದ ಮಹಾಧೀರನು. ಇದುವರೆಗೆ ಎಷ್ಟೋ ಧರ್ಮಕಾರ್ಯಗಳನ್ನು ಮುರಿದಿಕ್ಕಿರುವನು. ಎಷ್ಟೋ ಮಂದಿ ಪರಸ್ತ್ರೀಯರನ್ನು ಕೆಡಿಸಿರುವನು. ಎಷ್ಟೋ ಯಜ್ಞಗಳನ್ನು ಹಾಳು ಮಾಡಿರುವನು. ಆತನಿಗೆ ತಿಳಿಯದ ದಿವ್ಯಾಸ್ತ್ರಗಳಿಲ್ಲ. ಅವನು ಇಷ್ಟಬಂದಾಗ ಇದ್ದಕ್ಕಿದ್ದಹಾಗೆ ಪಾತಾಳದಲ್ಲಿರುವ ಭೋಗವತೀ ಪಟ್ಟಣವನ್ನು ಪ್ರವೇಶಿಸಿ, ಅಲ್ಲಿ ಸರ್ಪರಾಜನಾದ ವಾಸುಕಿಯನ್ನು ಜಯಿಸಿ, ತಕ್ಷಕನ ಪ್ರಿಯಪತ್ನಿಯನ್ನು ಬಲಾತ್ಕಾರದಿಂದ ತಂದುಬಿಡುವನು. ಕೈಲಾಸಪರ್ವತಕ್ಕೆ ಹೋಗಿ ಕುಬೇರನನ್ನು ಜಯಿಸಿ ಕಾಮಗಮನವುಳ್ಳ ಆತನ ಪುಷ್ಪಕವಿಮಾನವನ್ನೇ ತಂದಿರುವನು. ಕುಬೇರನ ಉದ್ಯಾನವನವಾದ ಚೈತ್ರರಥವನ್ನೂ, ಅವನ ಕಮಲ ಸರೋವರ ವನ್ನೂ, ಇಂದ್ರನ ನಂದನವನವನ್ನೂ, ಇತರ ದೇವತೆಗಳ ವಿಹಾರೋದ್ಯಾನ ಗಳನ್ನೂ ಇಷ್ಟಬಂದಾಗ ಕೆಡಿಸಿಬರುವನು. ಇವೆಲ್ಲವೂ ಹಾಗಿರಲಿ! ಚಂದ್ರ ಸೂರ್ಯರು ಉದಿಸುತ್ತಿರುವಾಗ, ಆತನು ಪರ್ವತ ಶಿಖರದಂತೆ ಅಡ್ಡಗಟ್ಟಿ ನಿಂತು, ತನ್ನ ತೋಳುಗಳಿಂದಲೇ ತಡೆದು ನಿಲ್ಲಿಸಿಬಿಡುವನು. ಆ ಧೀರನು ಪೂರ್ವದಲ್ಲಿ ಹತ್ತುಸಾವಿರ ವರುಷಗಳವರೆಗೆ ಮಹಾವನದಲ್ಲಿ ತಪಸ್ಸುಮಾಡಿ, ತಾನೇ ತನ್ನ ಹತ್ತು ತಲೆಗಳನ್ನೂ ಕಡಿದು, ಬ್ರಹ್ಮದೇವನಿಗೆ ಪೂಜೋಪಕರಣ ಗಳನ್ನಾಗಿ ಮಾಡಿ, ಆತನನ್ನು ಸಂತೋಷಪಡಿಸಿರುವನು. ಮನುಷ್ಯರಿಂದ ಹೊರತು ಆತನಿಗೆ ದೇವತೆಗಳಿಂದಾಗಲಿ, ದಾನವರಿಂದಾಗಲಿ, ಗಂಧರ್ವರಿಂದಾ ಗಲಿ, ಪಿಶಾಚರಿಂದಾಗಲಿ, ಪತಗರಿಂದಾಗಲಿ, ನಾಗರಿಂದಾಗಲಿ, ಮರಣ ಭಯ ವೆಂಬುದೇ ಇಲ್ಲವು. ಆತನು ಯಾಗಕಾಲಗಳಲ್ಲಿ ಹವಿಶ್ಶಾಲೆಗಳಿಗೆ ಹೋಗಿ, ಬ್ರಾಹ್ಮಣರಿಂದ ಮಂತ್ರಿತವಾಗಿ ಪವಿತ್ರವಾಗಿರುವ ಸೋಮರಸವನ್ನು ನಾಶ ಮಾಡುವನು. ಯಾಗವೆಲ್ಲವೂ ಮುಗಿದು ದಕ್ಷಿಣೆಯನ್ನು ಕೊಡುವ ಕಾಲದಲ್ಲಿ ಅದನ್ನು ಕೆಡಿಸುವನು. ಬಹಳ ಕ್ರೂರಸ್ವಭಾವವುಳ್ಳವನು. ಅನೇಕ ಬ್ರಹ್ಮಹತ್ಯೆ

ಗಳನ್ನು ನಡೆಸಿದವನು. ಅವನಿಗೆ ದಯೆಯೆಂಬುದೇ ಇಲ್ಲವು. ಪ್ರಜೆಗಳನ್ನು ಹಿಂಸಿಸಿ ಗೋಳಾಡಿಸುವುದೇ ಅವನಿಗೊಂದು ವಿನೋದವು. ಸಮಸ್ತಲೋಕವೂ ಆತನನ್ನು ಕಂಡರೆ ಹೆದರುವುದು. ಹೀಗೆ ಕ್ರೂರಸ್ವಭಾವವುಳ್ಳ ತನ್ನ ಒಡಹುಟ್ಟಿದ ರಾವಣನನ್ನು ಶೂರ್ಪಣಖೆಯು ಕಂಡಳು. ದಿವ್ಯವಾದ ವಸ್ತ್ರಾಭರಣಗಳನ್ನುಟ್ಟು ದಿವ್ಯವಾದ ಪುಷ್ಪಮಾಲಿಕೆಯನ್ನು ಧರಿಸಿ, ದಿವ್ಯಾಸನದಲ್ಲಿ ಕುಳಿತು, ಯಮ ನಿಗೂ ಯಮನಂತೆ ತೋರುತ್ತಿರುವ ಪುಲಸ್ತ್ಯಂಶೋತ್ಪನ್ನನಾದ ಆ ರಾಕ್ಷಸ ಚಕ್ರವರ್ತಿಯು, ಆ ಆಸನದಲ್ಲಿ ಕುಳಿತಿರುವಾಗ, ಅನೇಕ ಮಂತ್ರಿಗಳು ಆತನ ಸುತ್ತಲೂ ಸೇರಿ ಸೇವಿಸುತಿದ್ದರು. ಈ ಸಂದರ್ಭದಲ್ಲಿ ಶೂರ್ಪಣಖೆಯು ಭಯ ದಿಂದ ನಡುಗುತ್ತ ಮುಂದೆ ಬಂದು, ತಾನೂ ಲೋಕದಲ್ಲಿ ಯಾರಿಗೂ ಅಂಜದವ ಳಾಗಿದ್ದರೂ, ಮಹಾತ್ಮನಾದ ರಾಮನು ತನಗುಂಟುಮಾಡಿದ ಭಂಗವನ್ನು ನೆನೆಸಿಕೊಂಡ ಹಾಗೆಲ್ಲಾ ಭಯದಿಂದ ಮೂರ್ಛೆಹೋದಂತೆ ಮೈ ತಿಳಿಯದವ ಳಾಗಿ, ಆ ರಾವಣನ ಮುಂದೆ ನಿಂತು ಕ್ರೂರವಾಕ್ಯವನ್ನಾಡತೊಡಗಿದಳು.

ಇಲ್ಲಿಗೆ ಮೂವತ್ತೆರಡನೆಯ ಸರ್ಗವು.

---

ತನ್ನ ಕಿವಿ ಮೂಗುಗಳನ್ನು ನೋಡಿಯೂ ರಾವಣನು
ಸುಮ್ಮನಿದ್ದುದನ್ನು ನೋಡಿ ಶೂರ್ಪಣಖೆಯು
ಕೋಪಗೊಂಡು, ಆತನನ್ನು ನಿಂದಿಸಿದುದು.

ಹೀಗೆ ತನ್ನ ರೂಪಹಾನಿಯನ್ನು ನೋಡಿಯೂ ರಾವಣನು ಅಲಕ್ಷ್ಯದಿಂದ ಸುಮ್ಮನಿದ್ದುದನ್ನು ನೋಡಿ, ಶೂರ್ಪಣಖೆಯು ದುಃಖಗೊಂಡು, ಮಂತ್ರಿಗಳ ನಡುವೆ ಕುಳಿತಿದ್ದ ರಾವಣನನ್ನು ಕುರಿತು, ಕ್ರೂರವಾಕ್ಯಗಳಿಂದ “ಅಣ್ಣಾ ! ಇದೀಗ ಬಹಳ ಚೆನ್ನಾಯಿತು ! ಯಾರ ತಡೆಯೂ ಇಲ್ಲದೆ ಯಥೇಚ್ಛವಾಗಿ ಕಾಮೋಪಭೋಗಗಳಲ್ಲಿ ಮುಳುಗಿ ಮತ್ತನಾಗಿರುವ ನಿನಗೆ ಈ ಲೋಕವ್ಯಾಪಾರ ವೇನು ತಿಳಿಯುವುದು? ಅಯ್ಯೋ! ಅತ್ಯವಶ್ಯವಾಗಿ ತಿಳಿಯಬೇಕಾದ ಈಗಿನ ಮಹಾಭಯವೂ ನಿನಗೆ ತಿಳಿಯದೆಹೋಯಿತೆ? ಯಾವಾಗಲೂ ಕಾಮೋಪ ಭೋಗದಲ್ಲಿಯೇ ನಿರತನಾಗಿ, ಕೇವಲ ಗ್ರಾಮ್ಯಭೋಗಗಳನ್ನು ಇಷ್ಟಬಂದಂತೆ

ಅನುಭವಿಸುತ್ತಿರುವ ಲುಬ್ಧನಾದ ರಾಜನನ್ನು ಪ್ರಜೆಗಳು ಶ್ಮಶಾನದ ಬೆಂಕಿಯಂತೆ ಹೀನವಾಗಿ ಕಾಣುವರು. ಆತನನ್ನು ಯಾರೂ ರಾಜನೆಂದು ಗೌರವಿಸುವುದಿಲ್ಲ. ಯಾವ ರಾಜನು ತಕ್ಕ ಕಾಲಗಳಲ್ಲಿ ತನ್ನ ಕಾರ್ಯಗಳನ್ನು ತಾನೇ ನಡೆಸಿ ಕೊಳ್ಳುವುದಿಲ್ಲವೋ, ಆತನಿಗೆ ಆ ಕಾರ್ಯಗಳು ಕೆಟ್ಟುಹೋಗುವುದೊಂದಲ್ಲದೆ, ಆತನಿಗೂ ಹಾನಿಯುಂಟಾಗುವುದು. ಯುಕ್ತಾಯುಕ್ತವನ್ನರಿಯದೆ, ಸ್ವದೇಶ ಪರದೇಶ ವೃತ್ತಾಂತಗಳನ್ನು ತಿಳಿಯುವುದಕ್ಕಾಗಿ ಚಾರರನ್ನಿಟ್ಟುಕೊಳ್ಳದೆ, ಉಚಿತ ಕಾಲಗಳಲ್ಲಿ ಪ್ರಜೆಗಳಿಗೆ ದರ್ಶನವನ್ನು ಕೊಡದೆ, ಸ್ವಬುದ್ಧಿಯಿಲ್ಲದೆ ಸ್ತ್ರೀಯರಿಗೆ ಸ್ವಾಧೀನನಾಗಿ ನಡೆಯುತ್ತಿರುವ ರಾಜನನ್ನು, ಸಂಚಾರ ಯೋಗ್ಯ ವಲ್ಲದೆಯೂ, ಕಣ್ಣಿಗೆ ಕಾಣದೆಯೂ ಇರುವ ನದಿಯ ಕೆಸರನ್ನು ಕಂಡ ಆನೆಗಳು ಹೇಗೋ ಹಾಗೆ ಪ್ರಜೆಗಳು ದೂರದಲ್ಲಿಯೇ ತ್ಯಜಿಸುವರು. ಯಾವ ರಾಜನು ಸ್ವಬುದ್ಧಿಯಿಲ್ಲದೆ ಸ್ತ್ರೀಯರಿಗೆ ಪರತಂತ್ರನಾಗಿ ದೇಶವನ್ನು ಚೆನ್ನಾಗಿ ಪಾಲಿಸುವು ದಿಲ್ಲವೋ, ಅವನು ಎಷ್ಟೇ ಉಚ್ಚಸ್ಥಿತಿಯಲ್ಲಿದ್ದರೂ, ಸಮುದ್ರದಲ್ಲಿ ಮುಳುಗಿದ ಬೆಟ್ಟದಂತೆ ಅವನ ಮೇಲ್ಮೆಯು ಹೊರಕ್ಕೆ ಕಾಣಿಸದು. ದೇವಗಂಧರ್ವದಾನ ವಾದಿಗಳೆಲ್ಲರೂ ಸಮಯಬಂದಾಗ ನಿನ್ನನ್ನು ಕೆಡಿಸಬೇಕೆಂದೇ ಕಾದಿರುವರು. ನೀನಾದರೋ ತಕ್ಕಗೂಢಚಾರರ ಮೂಲಕವಾಗಿ ಆಯಾ ರಾಜಕಾರ್ಯಗಳನ್ನು ತಿಳಿದುಕೊಳ್ಳದೆ ವಿಷಯಲೋಲನಾಗಿರುವೆ. ಹೀಗೆ ನೀನು ಈ ಶತ್ರುಮಧ್ಯ ದಲ್ಲಿರುವಾಗಲೂ ಚಪಲಬುದ್ಧಿಯುಳ್ಳವನಾಗಿದ್ದರೆ, ನಿನ್ನ ರಾಜಪದವಿಯನ್ನು ಹೇಗೆ ತಾನೇ ಉಳಿಸಿಕೊಳ್ಳಬಲ್ಲೆ? ಇನ್ನೂ ನಿನಗೆ ಹುಡುಗತನವು ಬಿಟ್ಟಿಲ್ಲ! ವಿವೇಕವೆಂಬುದು ನಿನ್ನಲ್ಲಿ ಲೇಶಮಾತ್ರವೂ ಇಲ್ಲ. ರಾಜನಾದವನು ಯಾವ ಯಾವ ವಿಷಯಗಳನ್ನು ತಿಳಿದುಕೊಳ್ಳಬೇಕೋ ಅದನ್ನೂ ನೀನು ತಿಳಿಯೆ! ಹೀಗಿರತಕ್ಕ ನೀನು ಹೇಗೆ ತಾನೇ ರಾಜನೆನಿಸಿಕೊಳ್ಳುವೆ? ಯಾವ ರಾಜರಿಗೆ ಚಾರರು, ಬೊಕ್ಕಸ, ರಾಜನೀತಿ ಎಂಬಿವು ಮೂರೂ ಸ್ವಾಧೀನವಾಗಿರುವು ದಿಲ್ಲವೋ, ಅವರು ಕೇವಲ ಪ್ರಾಕೃತಜನರಿಗೆ ಸಮಾನರೇ ಹೊರತು ಅವರನ್ನು ರಾಜನೆನಲಾಗದು. ರಾಜರು ಚಾರರಿಂದ ಬಹುದೂರದಲ್ಲಿ ನಡೆದ ವಿಷಯಗಳೆಲ್ಲ ವನ್ನೂ ಕಂಡುಕೊಳ್ಳಬೇಕಾಗಿರುವುದು. ಇಂತಹ ಚಾರರನ್ನು ವಶದಲ್ಲಿರಿಸಿ ಕೊಂಡಿರುವ ರಾಜರೇ ದೀರ್ಘಚಕ್ಷುಗಳೆನಿಸುವರು. ಕೇವಲ ಮುಖಸ್ತುತಿ ಪರಾಯಣರಾಗಿ ಸುತ್ತಲೂ ಸೇರಿಕೊಂಡು ನಿನ್ನನ್ನು ಕಿತ್ತು ತಿನ್ನುವ ಕೆಲವು

ಮಂತ್ರಿಗಳನ್ನು ಮಾತ್ರ ನೀನಿಟ್ಟುಕೊಂಡಿರುವೆಯೋ ಹೊರತು, ನಿನ್ನಲ್ಲಿ ತಕ್ಕ ಚಾರರೇ ಇಲ್ಲವೆಂದೆಣಿಸಬೇಕಾಗಿದೆ. ಕ್ರೂರ ಕರ್ಮವುಳ್ಳ ಹದಿನಾಲ್ಕುಸಾವಿರ ಮಂದಿ ರಾಕ್ಷಸರೂ ಏಕಾಕಿಯಾದ ರಾಮನಿಂದ ಹತರಾದರು! ಖರದೂಷಣರೂ ಸಂಹೃತರಾದರು! ನಮ್ಮ ಜನಸ್ಥಾನವೂ ಹಾಳುಬಿದ್ದಿತು! ಇದುವರೆಗೆ ನೀನು ಇದೊಂದನ್ನೂ ತಿಳಿಯದೆಹೋದೆಯಲ್ಲಾ! ಕೇವಲ ಮನುಷ್ಯಮಾತ್ರನಾದ ರಾಮನೇ ನಿನಗಿಂತಲೂ ಎಷ್ಟೋ ಮೇಲಾದವನೆಂದು ಹೇಳಬೇಕಾಗಿದೆ. ಅವನು ಮೊದಲು ಋಷಿಗಳಿಗೆ ಅಭಯವನ್ನು ಕೊಟ್ಟನು. ಆದರಂತೆ ನಮ್ಮ ಜನಸ್ಥಾನ ವೆಲ್ಲವನ್ನೂ ರಾಕ್ಷಸಶೂನ್ಯವನ್ನಾಗಿ ಮಾಡಿ ನಿರಾತಂಕವಾಗಿರುವಂತೆ ಮಾಡಿ ಕೊಟ್ಟನು. ನೀನಾದರೋ ಪರಮಲುಬ್ಧನು! ಚಾರರಿಗೆ ತಕ್ಕಷ್ಟು ದ್ರವ್ಯವನ್ನೂ ಕೊಡುವುದಿಲ್ಲ. ಕೇವಲ ಮತ್ತನಾಗಿ ಯಾವುದನ್ನೂ ಎಚ್ಚರಿಕೆಯಿಂದ ನೋಡು ವವನಲ್ಲ! ಸ್ವಬುದ್ಧಿಯಿಂದ ಕೆಲಸಮಾಡುವವನಲ್ಲ. ನಿನ್ನ ದೇಶದಲ್ಲಿ ನಡೆಯುವ ಅತ್ಯಾಹಿತಗಳನ್ನೇ ನೀನು ತಿಳಿಯದಿರುವೆ! ಕ್ರೂರನಾಗಿಯೂ, ಲುಬ್ಧನಾಗಿಯೂ ಮತ್ತನಾಗಿಯೂ, ಗರ್ವಿಷ್ಠನಾಗಿಯೂ, ಮೂರ್ಖನಾಗಿಯೂ ಇರುವ ರಾಜನು ದೈವಿಕವಾಗಿ ಯಾವುದಾದರೂ ಒಂದು ವಿಪತ್ತಿನಲ್ಲಿ ಸಿಕ್ಕಿಬಿದ್ದಾಗ, ಅವನನ್ನು ಯಾರೂ ಲಕ್ಷ್ಯಮಾಡುವುದಿಲ್ಲ. ಅವನಿಗಾಗಿ ಯಾವ ಪ್ರಾಣಿಗಳೂ ಪಶ್ಚಾತ್ತಾಪಪಡುವುದಿಲ್ಲ. ಬಹಳ ಅಹಂಕಾರವುಳ್ಳವನಾಗಿ, ಸಜ್ಜನರಿಗೂ ಅನಾದರಣೀಯನಾಗಿ, ತನ್ನನ್ನು ತಾನೇ ಹೊಗಳಿಕೊಳ್ಳುವ ಸ್ವಭಾವವುಳ್ಳವ ನಾಗಿ, ಯಾವಾಗಲೂ ಕೋಪಸ್ವಭಾವದಿಂದಿರುವ ರಾಜನಿಗೆ ಕಷ್ಟಕಾಲವು ಬಂದಾಗ, ಸ್ವಜನರೇ ಅವನಿಗೆ ವಿರೋಧಿಗಳಾಗಿ ನಿಂತು ಅವನನ್ನು ಕೊಲ್ಲುವರು. ಉಚಿತ ಕಾಲಗಳಲ್ಲಿ ಕಾರ್ಯಗಳನ್ನು ನಡೆಸದೆಯೂ, ಭಯಕಾಲಗಳಲ್ಲಿ ಭಯ ಪಡದೆಯೂ ಇರುವ ರಾಜನು ರಾಜ್ಯಭ್ರಷ್ಟನಾಗುವುದಲ್ಲದೆ ಪ್ರಜೆಗಳಿಂದ ತೃಣಕ್ಕೆ ಸಮಾನವಾಗಿ ಎಣಿಸಲ್ಪಡುವನು. ಒಣಗಿದ ಕಡ್ಡಿಗಳಿಂದಾಗಲಿ, ಮಣ್ಣು ಹೆಂಟೆಗಳಿಂದಾಗಲಿ, ಕೊನೆಗೆ ಗಾಳಿಗೆ ಹಾರಿಬರುವ ಧೂಳಿನಿಂದಲಾಗಲಿ ಯಾವುದಾದರೂ ಪ್ರಯೋಜನವುಂಟಾಗಬಹುದು. ರಾಜ್ಯಭ್ರಷ್ಟನಾದ ರಾಜನಾದರೋ ಯಾವ ಕಾರ್ಯಕ್ಕೂ ಉಪಯೋಗವಿಲ್ಲದವನಾಗುವನು. ಉಟ್ಟು ಮಾಸಿದ ಬಟ್ಟೆಗಳಂತೆಯೂ, ಮುಡಿದು ಬಾಡಿದ ಪುಷ್ಪದಂತೆಯೂ, ರಾಜ್ಯಭ್ರಷ್ಟನಾದ ರಾಜನು ಸಮರ್ಥನಾಗಿದ್ದರೂ ಕೆಲಸಕ್ಕೆ ಬಾರನು. ಯಾವ

ರಾಜನು ಪ್ರಮಾದವಶನಾಗದೆ, ದೇಶದ ವ್ಯಾಪಾರಗಳೆಲ್ಲವನ್ನೂ ತಿಳಿದು, ಜಿತೇಂದ್ರಿಯನಾಗಿ, ಕೃತಜ್ಞನಾಗಿ ಧರ್ಮಶೀಲನಾಗಿರುವನೋ ಆತನು ಬಹು ಕಾಲದವರೆಗೆ ರಾಜ್ಯವನ್ನಾಳುವನು. ಆ ರಾಜನು ಚರ್ಮಮಯವಾದ ಈ ಕಣ್ಣುಗಳನ್ನು ಮುಚ್ಚಿಕೊಂಡು ಮಲಗಿದ್ದರೂ, ನೀತಿಯೆಂಬ ಕಣ್ಣುಗಳಿಂದ ಸಮಸ್ತವನ್ನೂ ನೋಡುತ್ತಿರುವನು. ಯಾವನ ಕೋಪವಾಗಲಿ, ಅನುಗ್ರಹ ವಾಗಲಿ ಗುಪ್ತವಾಗಿರದೆ ಸ್ಪಷ್ಟವಾಗಿ ಹೊರಗೆ ಕಾಣುವುದೋ ಆತನನ್ನು ಜನರೆಲ್ಲರೂ ಪೂಜಿಸುವರು. ಎಲೆ ರಾವಣನೆ ! ನೀನಾದರೋ ಕೇವಲ ದುರ್ಬುದ್ಧಿ ಯುಳ್ಳವನು. ರಾಜಯೋಗ್ಯವಾದ ಈ ಗುಣಗಳಲ್ಲಿ ಒಂದಾದರೂ ನಿನ್ನಲ್ಲಿ ಕಾಣುವುದಿಲ್ಲ. ಈಗ ನಮ್ಮ ಕಡೆಯ ರಾಕ್ಷಸರಿಗುಂಟಾದ ಮಹಾವಧವನ್ನೂ ಕೂಡ ನೀನು ಚಾರರಿಂದ ತಿಳಿಯದೆ ಹೋದೆಯಲ್ಲಾ ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು ! ಮುಖ್ಯವಾಗಿ ನೀನು ಶತ್ರುಗಳ ವಿಷಯದಲ್ಲಿ ಉದಾಸೀನ ನಾಗಿರತಕ್ಕವನು. ಇತರರನ್ನವಮಾನಪಡಿಸುವುದೇ ನಿನ್ನ ಸ್ವಭಾವವು. ವಿಷಯೋಪಭೋಗಗಳಲ್ಲಿ ಮುಳುಗಿಹೋಗಿರುವೆ! ದೇಶಕಾಲಭೇದಗಳ ತತ್ವ ವನ್ನೂ ತಿಳಿದವನಲ್ಲ. ಯುಕ್ತಾಯುಕ್ತಗಳನ್ನು ವಿಮರ್ಶಿಸುವ ಬುದ್ಧಿಯೂ ನಿನಗೆ ಸಾಲದು. ಆದುದರಿಂದ ನೀನು ಶೀಘ್ರದಲ್ಲಿಯೇ ರಾಜ್ಯವನ್ನು ಹೋಗ ಲಾಡಿಸಿಕೊಂಡು, ವಿಪತ್ತಿಗೊಳಗಾಗುವೆ" ಎಂದಳು. ಐಶ್ವರ್ಯದಿಂದಲೂ, ಕೆಚ್ಚಿ ನಿಂದಲೂ, ಬಲದಿಂದಲೂ ಕೊಬ್ಬಿದ ಆ ರಾವಣನು, ಹೀಗೆ ಶೂರ್ಪಣಖೆಯು ಎತ್ತಿ ಹೇಳಿದ ತನ್ನ ದೋಷಗಳನ್ನು ತಾನೇ ಮನಸ್ಸಿನಲ್ಲಿ ಸ್ವಬುದ್ಧಿಯಿಂದ ಪರ್ಯಾಲೋಚಿಸಿ, ಬಹಳ ಹೊತ್ತಿನವರೆಗೆ ಚಿಂತಿಸುತಿದ್ದನು.

ಇಲ್ಲಿಗೆ ಮೂವತ್ತುಮೂರನೆಯ ಸರ್ಗವು.

---

ಶೂರ್ಪಣಖೆಯು ರಾಮಲಕ್ಷ್ಮಣರ ರೂಪಸೌಂದರ್ಯ ಪರಾಕ್ರಮಾದಿ ಗಳನ್ನೂ, ಸೀತೆಯ ರೂಪಾತಿಶಯವನ್ನೂ ರಾವಣನಿಗೆ ವರ್ಣಿಸಿ ಸೀತೆಯನ್ನು ಕದ್ದು ತರುವಂತೆ ಬೋಧಿಸಿದುದು.

ಹೀಗೆ ಶೂರ್ಪಣಖೆಯು ಕೋಪದಿಂದ ಹೇಳಿದ ಕ್ರೂರವಾಕ್ಯವನ್ನು ಕೇಳಿ ರಾವಣನಿಗೂ ಮನಸ್ಸಿನಲ್ಲಿ ಕೋಪವು ಹುಟ್ಟಿತು. ಆಗ ಅವನು

*

ಮಂತ್ರಿಗಳ ಮಧ್ಯದಲ್ಲಿ ಆ ಶೂರ್ಪಣಖೆಯನ್ನು ಕುರಿತು "ಎಲೆ ತಂಗಿ! ರಾಮನೆಂಬನಾವನು? ಅವನ ವೀರ್ಯವೇನು? ಅವನ ರೂಪವು ಹೇಗಿರುವುದು? ಅವನ ಪರಾಕ್ರಮವೇನು? ದುರ್ಗಮವಾದ ಈ ದಂಡಕಾರಣ್ಯಕ್ಕೆ ಅವನು ಬಂದುದೇಕೆ? ಅವನು ರಾಕ್ಷಸರನ್ನು ಕೊಂದ ಆಯುಧವಾವುದು? ಖರದೂಷಣರನ್ನು ಹೇಗೆ ಕೊಂದನು?" ಎಂದು ಕೇಳಿದನು. ಅದನ್ನು ಕೇಳಿ ರಾಕ್ಷಸಿಯು ರಾವಣನಿಗೆ ಅವೆಲ್ಲವನ್ನೂ ವಿಸ್ತಾರವಾಗಿ ಹೇಳತೊಡಗಿ, "ಅಣ್ಣಾ! ಮೊದಲು ಆ ರಾಮನ ಸ್ವರೂಪವನ್ನು ಹೇಳುವೆನು ಕೇಳು! ಉದ್ದವಾದ ತೋಳುಗಳುಳ್ಳವನು. ಅಗಲವಾದ ಕಣ್ಣುಳ್ಳವನು. ಅವನು ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಉಟ್ಟಿದ್ದರೂ ಮನ್ಮಥನಂತೆ ತೋರುತ್ತಿರುವನು. ಅವನು ದಶರಥರಾಜನ ಮಗನು. ಆತನು ಕೈಯಲ್ಲಿ ಇಂದ್ರಧನುಸ್ಸಿನಂತಿರುವ ಚಿನ್ನದಕಟ್ಟುಳ್ಳ ಒಂದು ಬಿಲ್ಲನ್ನು ಹಿಡಿದಿರುವನು. ಅದರಲ್ಲಿ ವಿಷಸರ್ಪಗಳಂತಿರುವ ಬಾಣಗಳನ್ನು ಸಂಧಾನಮಾಡಿ, ಆಕರ್ಣಾಂತವಾಗಿ ಎಳೆದುಬಿಡುವನು. ಅವನು ಬತ್ತಳಿಕೆಯಿಂದ ಬಾಣಗಳನ್ನು ತೆಗೆಯುವುದಾಗಲಿ, ಬಿಲ್ಲನ್ನೆಳೆಯುವುದಾಗಲಿ, ಬಾಣಗಳನ್ನು ಪ್ರಯೋಗಿಸುವುದಾಗಲಿ ಇದೊಂದೂ ನನ್ನ ಕಣ್ಣಿಗೆ ಕಾಣಲಿಲ್ಲ. ಪೈರುಗಳು ಇಂದ್ರಪ್ರಯುಕ್ತವಾದ ಆಲಿಕಲ್ಲಿನ ಮಳೆಯಿಂದ ಅಲ್ಲಲ್ಲಿ ಸತ್ತು ಮಲಗುವಂತೆ ರಾಮನ ಶರವರ್ಷಗಳಿಂದ ರಾಕ್ಷಸಸೈನ್ಯವು ಸತ್ತುಬೀಳುವುದು ಮಾತ್ರ ನನ್ನ ಕಣ್ಣಿಗೆ ಗೋಚರಿಸಿತು. ಭಯಂಕರಾಕಾರವುಳ್ಳ ಹದಿನಾಲ್ಕುಸಾವಿರಮಂದಿ ರಾಕ್ಷಸರನ್ನೂ ಪದಾತಿಯಾದ ರಾಮನೊಬ್ಬನೇ ತನ್ನ ತೀಕ್ಷ್ಣವಾದ ಬಾಣಗಳಿಂದ ಕೊಂದುಬಿಟ್ಟಿರುವನು. ಒಂದೂವರೆ ಮುಹೂರ್ತಕಾಲದೊಳಗಾಗಿ ಇಷ್ಟು ಸೈನ್ಯವೂ ಹತವಾದುದಲ್ಲದೆ, ಖರದೂಷಣರೆಂಬ ಮಹಾವೀರರೂ ಅಲ್ಲಿಯೇ ಐಕ್ಯಹೊಂದಿಬಿಟ್ಟರು. ಏನಾದರೇನು? ಅವನು ಋಷಿಗಳಿಗೆ ಮಾತುಕೊಟ್ಟಿದ್ದಂತೆ ದಂಡಕಾರಣ್ಯವನ್ನು ಅವರಿಗೆ ನಿರಾತಂಕವಾಗಿ ಮಾಡಿಕೊಟ್ಟುಬಿಟ್ಟನು. ಆದರೆ ಆತನು ಸಮಸ್ತ ಧರ್ಮಗಳನ್ನೂ ತಿಳಿದ ಮಹಾತ್ಮನಾದುದರಿಂದ, ಸ್ತ್ರೀಹತ್ಯೆಯನ್ನು ಮಾಡಬಾರದೆಂದೆಣಿಸಿ, ನನ್ನೊಬ್ಬಳನ್ನು ಮಾತ್ರ ಬಿಟ್ಟುಬಿಟ್ಟನು. ಆದರೇನು? ನನ್ನನ್ನಾದರೂ ಸುಮ್ಮನೆ ಬಿಟ್ಟನೆ? ಇದೋ ನೋಡು! ನನ್ನ ಕಿವಿ ಮೂಗುಗಳನ್ನು ಹರಿದು ಮಾನಭಂಗಮಾಡಿ ಕಳುಹಿಸಿರುವನು. ಆ ರಾಮನಿಗೆ

ತಮ್ಮನೊಬ್ಬನಿರುವನು. ಅವನೂ ರಾಮನಂತೆಯೇ ಮಹಾ ತೇಜಸ್ಸುಳ್ಳವನು. ಗುಣಗಳಲ್ಲಿಯೂ, ಪರಾಕ್ರಮಗಳಲ್ಲಿಯೂ ಆತನನ್ನೇ ಹೋಲುವನು. ಅವನು ಅಣ್ಣನಲ್ಲಿ ಪರಮಪ್ರೇಮವನ್ನಿಟ್ಟು ಭೃತ್ಯನಂತಿರುವನು. ಅವನಿಗೆ ಲಕ್ಷ್ಮಣನೆಂದು ಹೆಸರು. ಬಹಳ ವೀರ್ಯವಂತನು. ಕೋಪವುಳ್ಳವನು. ಯಾರಿಂದಲೂ ಅವನನ್ನು ಜಯಿಸುವುದಕ್ಕೆ ಸಾಧ್ಯವಿಲ್ಲ. ಎಂತವರನ್ನಾದರೂ ಸೋಲಿಸುವನು. ಬಹಳ ಪರಾಕ್ರಮಶಾಲಿಯು. ಆತನಲ್ಲಿ ದೇಹಬಲಕ್ಕೆ ತಕ್ಕಂತೆ ಬುದ್ಧಿಬಲವೂ ಇರುವುದು. ರಾಮನಿಗೆ ಬಲದ ಭುಜದಂತಿರುವನು. ಮತ್ತು ಅವನು ಆ ರಾಮನಿಗೆ ಹೊರಗೆ ಸಂಚರಿಸುವ ಪ್ರಾಣದಂತೆ ಪ್ರೀತಿಪಾತ್ರನಾಗಿರುವನು. ಅಲ್ಲಿ ರಾಮನಿಗೆ ಹೆಂಡತಿಯೊಬ್ಬಳಿರುವಳು. ಅವಳು ಆತನಿಗೆ ಧರ್ಮಪತ್ನಿ ಯೆನಿಸಿಕೊಂಡಿರುವಳು. ಅವಳು ವಿಸ್ತಾರವಾದ ಕಣ್ಣುಳ್ಳವಳು. ಅವಳ ಮುಖವು ಪೂರ್ಣಚಂದ್ರನನ್ನು ಹೋಲುತ್ತಿರುವುದು. ಅವಳು ಯಾವಾಗಲೂ ಪತಿಗೆ ಪ್ರಿಯವನ್ನೇ ಕೋರುತ್ತ, ಆತನಿಗೆ ಹಿತವಾದ ಕಾರ್ಯಗಳಲ್ಲಿಯೇ ನಿರತಳಾಗಿ ರುವಳು. ಅಂದವಾದ ಕುರುಳುಗಳಿಂದಲೂ, ಎಸಳಾದ ಮೂಗಿನಿಂದಲೂ, ನುಣುಪಾದ ತೊಡೆಗಳಿಂದಲೂ ಕೂಡಿದ ಆಕೆಯ ರೂಪವು ಲೋಕಾದ್ಭುತ ವಾಗಿರುವುದು. ಲೋಕದಲ್ಲಿ ಎಲ್ಲೆಲ್ಲಿಯೂ ಅವಳ ಖ್ಯಾತಿಯು ಕೊಂಡಾಡ ಲ್ಪಡುತ್ತಿರುವುದು. ಅವಳನ್ನು ನೋಡಿದರೆ ಆ ದಂಡಕಾರಣ್ಯದ ವನದೇವತೆಯೋ ಅಥವಾ ಎರಡನೆಯ ಲಕ್ಷ್ಮಿಯೋ ಎಂಬಂತೆ ತೋರುವಳು. ಅವಳ ಮೈಬಣ್ಣವು ಪುಟಹಾಕಿದ ಚಿನ್ನದಂತಿರುವುದು. ಅವಳ ನಖಗಳು ಕೆಂಪಾಗಿ ನೀಡಿರುವುವು. ಅವಳಿಗೆ ಸೀತೆಯೆಂದು ಹೆಸರು. ಅವಳು ವಿದೇಹರಾಜನ ಮಗಳು. ಹಿಡಿನಡುವುಳ್ಳ ಆ ಸೀತೆಗೆ ಸಮಾನಳಾದವಳು ದೇವತೆಗಳಲ್ಲಿಯಾಗಲಿ, ಗಂಧರ್ವರಲ್ಲಿಯಾಗಲಿ, ಕಿನ್ನರರಲ್ಲಿಯಾಗಲಿ, ಯಕ್ಷರಲ್ಲಿಯಾಗಲಿ ಸಿಕ್ಕುವುದಿಲ್ಲ. ಇಷ್ಟು ರೂಪವತಿಯಾದ ಸ್ತ್ರೀಯನ್ನು ನಾನು ಇದುವರೆಗೆ ನೋಡಿದುದಿಲ್ಲ. ಯಾವ ಪುರುಷನಿಗೆ ಸೀತೆ ಯೆಂಬವಳು ಪತ್ನಿಯಾಗಿರುವಳೋ, ಯಾವನನ್ನು ಅವಳು ಸಂತೋಷದಿಂದ ಆಲಿಂಗಿಸಿಕೊಳ್ಳುವಳೋ, ಅಂತಹ ಪುಣ್ಯಪುರುಷನೇ ಸಮಸ್ತಲೋಕಗಳಲ್ಲಿಯೂ ಮೇಲಾದ ಸುಖಜೀವನವುಳ್ಳವನೆನಿಸುವನು. ಇಂದ್ರನ ಭೋಗಕ್ಕಿಂತಲೂ ಅವನ ಭೋಗವೇ ಮೇಲೆಂದು ಹೇಳಬೇಕು. ಎಲೆ ರಾವಣನೆ! ಅವಳು ಬಹಳ ಸುಸ್ವಭಾವವುಳ್ಳವಳು. ಅವಳ ದೇಹಸೌಂದರ್ಯವನ್ನು ಎಷ್ಟು ಹೊಗಳಿದರೂ

ಸಾಲದು. ಅವಳಂತೆ ರೂಪವತಿಯು ಈ ಭೂಲೋಕದಲ್ಲಿಯೇ ಇಲ್ಲವು. ಅವಳೇ ನಿನಗೆ ತಕ್ಕ ಭಾರ್ಯೆಯು. ನೀನೇ ಅವಳಿಗೆ ತಕ್ಕ ಗಂಡನು. ವಿಸ್ತಾರವಾದ ಜಘನದಿಂದಲೂ, ಉಬ್ಬಿದ ಸ್ತನಗಳಿಂದಲೂ ಕೂಡಿದ ಆ ಸುಂದರಿಯನ್ನು ನಿನಗೆ ತಂದುಕೊಟ್ಟು ಮದುವೆ ಮಾಡುವುದಕ್ಕಾಗಿಯೇ ನಾನು ಪ್ರಯತ್ನಿಸಿದೆನು. ಕ್ರೂರನಾದ ಲಕ್ಷ್ಮಣನು ನನಗೆ ಹೀಗೆ ವಿರೂಪವನ್ನು ಮಾಡಿ ಕಳುಹಿಸಿದನು. ಪೂರ್ಣಚಂದ್ರನಂತೆ ಮುಖವುಳ್ಳ ಆ ಸೀತೆಯನ್ನು ನೀನು ಒಂದಾವರ್ತಿ ನೋಡಿದೆಯಾದರೆ, ಆ ಕ್ಷಣವೇ ನೀನು ಮನ್ಮಥಬಾಣಗಳಿಗೆ ವಿಧೇಯನಾಗಿಬಿಡುವೆ! ನಿನಗೆ ಆ ಸೀತೆಯನ್ನು ಪತ್ನಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆಯಿದ್ದರೆ, ಈಗಲೇ ನೀನು ಆ ರಾಮಲಕ್ಷ್ಮಣರನ್ನು ಜಯಿಸುವುದಕ್ಕಾಗಿ ಶೀಘ್ರದಲ್ಲಿ ನಿನ್ನ ಬಲದ ಕಾಲನ್ನೆತ್ತಿಡು! ಇದರಿಂದ ನಿನ್ನ ಕೋರಿಕೆಯು ಕೈಗೂಡುವುದೊಂದಲ್ಲದೆ, ಆ ಆಶ್ರಮದಲ್ಲಿರುವ ಘಾತುಕನಾದ ರಾಮನನ್ನು ಕೊಲ್ಲುವುದರಿಂದ ನಮ್ಮ ಕಡೆಯ ರಾಕ್ಷಸರಿಗೂ ಪ್ರಿಯವನ್ನುಂಟುಮಾಡಿದಂತಾಗುವುದು. ಆ ರಾಮನನ್ನೂ, ಮಹಾರಥನಾದ ಲಕ್ಷ್ಮಣನನ್ನೂ ತೀಕ್ಷ್ಣವಾದ ನಿನ್ನ ಬಾಣಗಳಿಂದ ಕೊಂದು, ಆ ಸೀತೆಯನ್ನು ಮೊದಲು ದಿಕ್ಕಿಲ್ಲದಂತೆ ಮಾಡಿಬಿಟ್ಟೆಯಾದರೆ, ನೀನು ಸುಖವಾಗಿ ಅವಳನ್ನು ಮನೆಗೆ ತಂದು ಯಥೇಚ್ಛವಾಗಿ ಅನುಭವಿಸಬಹುದು. ಎಲೈ ರಾಕ್ಷಸೇಂದ್ರನೆ! ಈಗ ನಾನು ಹೇಳಿದ ವಿಷಯವು ನಿನಗೆ ಅಭಿಮತವಾಗಿದ್ದ ಪಕ್ಷದಲ್ಲಿ, ನಿರ್ಭಯವಾಗಿ ಈಗಲೇ ಆ ಕಾರ್ಯಕ್ಕೆ ಪ್ರಯತ್ನಿಸಿ ನನ್ನ ಮಾತಿನಂತೆ ನಡೆಸು. ಮೊದಲು ನಿನ್ನ ಬಲಾಬಲವನ್ನು ಚೆನ್ನಾಗಿ ಪರ್ಯಾಲೋಚಿಸಿ ನೋಡಿಕೊಂಡು ಅವಳನ್ನು ಬಲಾತ್ಕಾರದಿಂದ ತಂದುಬಿಡು! ಯಾವ ಅವಯವಗಳಲ್ಲಿಯೂ ಕಂದುಕುಂದಿಲ್ಲದ ಆ ಸೀತೆಯನ್ನು ನಿನ್ನ ಪತ್ನಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕಾದುದೇ ಈಗ ನೀನು ಮಾಡಬೇಕಾದ ಅವಶ್ಯಕಾರ್ಯವು. ಆದರೆ ಮೊದಲು ನೀನು ನಮ್ಮ ಜನಸ್ಥಾನದಲ್ಲಿ ರಾಮನು ರಾಕ್ಷಸರನ್ನು ಕೊಂದ ರೀತಿಯನ್ನೂ, ಖರದೂಷಣರ ವಧವನ್ನೂ ಚೆನ್ನಾಗಿ ಪರ್ಯಾಲೋಚಿಸಿ ಮುಂದೆ ಈ ವಿಷಯದಲ್ಲಿ ಹೇಗೆ ಮಾಡುವುದುತ್ತಮವೆಂಬುದನ್ನು ನಿಶ್ಚೈಸಿಕೊಂಡು ಹೊರಡುವುದುತ್ತಮವು" ಎಂದಳು.

ಇಲ್ಲಿಗೆ ಮೂವತ್ತನಾಲ್ಕನೆಯ ಸರ್ಗವು.

---

### ರಾವಣನು ಮಾರೀಚನ ಬಳಿಗೆ ಬಂದುದು

ಹೀಗೆ ಶೂರ್ಪಣಖೆಯು, ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಂತೆ ಅತಿ ಭಯಂಕರವಾದ ಮಾತನ್ನು ಹೇಳಲು, ಅದನ್ನು ಕೇಳಿ ರಾವಣನು, ಮಂತ್ರಿಗಳನ್ನು ಕರೆದು, ಮೊದಲು ಅವರೊಡನೆ ರಾಜಕಾರ್ಯವನ್ನಾಲೋಚಿಸಿ, ಅವರನ್ನು ಹಿಂದಕ್ಕೆ ಕಳುಹಿಸಿ, ತಾನು ಇತ್ತಲಾಗಿ ತನ್ನ ಅಂತಃಪುರಕ್ಕೆ ಹೊರಟುಹೋದನು. ಆಮೇಲೆ ತಾನೊಬ್ಬನೇ ಏಕಾಂತದಲ್ಲಿ [1] ಸೀತೆಯನ್ನು ಹೇಗೆ ಕದ್ದು ತರಬೇಕೆಂಬುದನ್ನು ಕುರಿತು ಪರ್ಯಾಲೋಚಿಸಿ, ಆ ಕಾರ್ಯವನ್ನು ಚೆನ್ನಾಗಿ ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ಪುನಃ ಅದರಿಂದುಂಟಾಗಬಹುದಾದ ಗುಣದೋಷಗಳ ಬಲಾಬಲವನ್ನು ವಿಮರ್ಶಿಸಿ, ಕೊನೆಗೆ ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿಕೊಂಡು, ಮನಸ್ಸನ್ನು ಸ್ತಿಮಿತಮಾಡಿ, ಆಗಲೇ ಅಲ್ಲಿಂದ ಹೊರಟು, ರಮಣೀಯವಾದ ತನ್ನ ಕುದುರೆಯ ಲಾಯಕ್ಕೆಬಂದನು. ತಾನು ಉದ್ದೇಶಿಸಿರುವ ಕಾರ್ಯವು ತನ್ನ ಪತ್ನಿಯಾದ ಮಂಡೋದರಿ ಮುಂತಾದವರಿಗೆ ಈಗಲೇ ತಿಳಿದರೆ, ಅವರು ತನ್ನನ್ನು ತಡೆಯಬಹುದೆಂಬ ಶಂಕೆಯಿಂದ ಯಾರಿಗೂ ತಿಳಿಯದಂತೆಯೇ ತನ್ನ ಲಾಯಕ್ಕೆ ಬಂದನು. ಅಲ್ಲಿದ್ದ ತನ್ನ ಸಾರಥಿಯನ್ನು ನೋಡಿ, ರಥವನ್ನು ಸಿದ್ಧಪಡಿಸಿಡುವಂತೆ ಆತನಿಗೆ ನಿಯಮಿಸಿದನು. ಆ ಕ್ಷಣವೇ ಸಾರಥಿಯು ರಾವಣನ ಮನಸ್ಸಿಗೊಪ್ಪುವಂತೆ ಒಂದು ಉತ್ತಮವಾದ ರಥವನ್ನು ಸಿದ್ಧಪಡಿಸಿತಂದನು. ಶ್ರೀಮಂತನಾದ ರಾವಣನು, ಸುವರ್ಣಮಯವಾಗಿಯೂ, ರತ್ನಖಚಿತವಾಗಿಯೂ, ಇಷ್ಟಬಂದಂತೆ ಸಂಚರಿಸತಕ್ಕ ಶಕ್ತಿಯುಳ್ಳದಾಗಿಯೂ, ಸುವರ್ಣಾಲಂಕೃತಗಳಾಗಿ, ಪಿಶಾಚಮುಖವುಳ್ಳ ಕತ್ತೆಗಳಿಂದ ಕಟ್ಟಲ್ಪಟ್ಟುದಾಗಿಯೂ ಇರುವ ಆ ರಥದಲ್ಲಿ ಮೇಘದಂತೆ ಗಂಭೀರಧ್ವನಿಯನ್ನು ಮಾಡುತ್ತ ಏರಿ ಕುಳಿತು, ಸಮುದ್ರತೀರಕ್ಕೆ ಬಂದನು. ರಾಜಚಿಹ್ನವಾದ ಶ್ವೇತಚ್ಛತ್ರ

---

1. ರಾವಣನು "ಈಗ ತಾನು ಉದ್ದೇಶಿಸಿರುವ ಸೀತಾಪಹರಣಕಾರ್ಯವನ್ನು ಪೌರುಷದಿಂದ ಮಾಡುವುದುತ್ತಮವೆ? ಅಥವಾ ತಂತ್ರದಿಂದ ಮಾಡುವುದುತ್ತಮವೆ? ಯಾವ ಪಕ್ಷದಲ್ಲಿ ದೋಷವು ಅಲ್ಪವಾಗಿಯೂ, ಗುಣವು ಹೆಚ್ಚಾಗಿಯೂ ಇರುವುದು?" ಎಂದು ಗುಣದೋಷಗಳ ಪ್ರಾಬಲ್ಯ ದೌರ್ಬಲ್ಯಗಳನ್ನು ತನ್ನ ಮನಸ್ಸಿನಲ್ಲಿಯೇ ಚೆನ್ನಾಗಿ ಪರ್ಯಾಲೋಚಿಸಿ ಕೊನೆಗೆ ಖರಾದಿ ರಾಕ್ಷಸರನ್ನು ಕೊಂದ ರಾಮನೊಡನೆ ಯುದ್ಧಕ್ಕೆ ನಿಲ್ಲುವುದು ಅಪಾಯಹೇತುವೆಂದೆಣಿಸಿ, ತಂತ್ರೋಪಾಯವೇ ಸುಕರವೆಂದು ನಿಶ್ಚಯಿಸಿದುದಾಗಿ ಭಾವವು.

ಚಾಮರಗಳನ್ನು ಹಿಡಿಸಿಕೊಂಡು, ವೈಡೂರ್ಯದಂತೆ ಹೊಳೆಯುವ ದೇಹಚ್ಛಾಯೆ ಯಿಂದ ಕೂಡಿ, ಜಾಜ್ವಲ್ಯಮಾನವಾದ ಕರ್ಣಕುಂಡಲಗಳನ್ನು ಧರಿಸಿ, ಇಪ್ಪತ್ತು ತೋಳುಗಳಿಂದಲೂ, ಹತ್ತು ತಲೆಗಳಿಂದಲೂ ಕೂಡಿದವನಾಗಿ, ರಥವನ್ನೇರಿ ಬರುತ್ತಿರುವ ಆ ರಾವಣನ ಅಟ್ಟಹಾಸವನ್ನು ಹೇಳತಕ್ಕುದೇನು ? ದೇವತೆಗಳಿಗೆ ತಾನೇ ಮುಖ್ಯಶತ್ರುವೆನಿಸಿಕೊಂಡು, ಅನೇಕ ಮಹರ್ಷಿಗಳ ಪ್ರಾಣವನ್ನು ಹೀರಿದ ಆ ರಾವಣನು, ಹತ್ತು ತಲೆಗಳೊಡನೆ ಉನ್ನತವಾದ ರಥವನ್ನೇರಿ ಬರುತ್ತಿರುವಾಗ, ಆಕಾಶದಲ್ಲಿ ಬಲಾಕಸಮೂಹದಿಂದ ಕೂಡಿ ಮಿಂಚುಗಳನ್ನು ಹೊರಡಿಸುತ್ತಿರುವ ಮೇಘದಂತೆಯೇ ತೋರುತ್ತಿದ್ದನು. ಹೀಗೆ ವೀರ್ಯ ವಂತನಾದ ಆ ರಾವಣನು ರಥದಮೇಲೆ ಕುಳಿತು, ಅನೇಕ ಪರ್ವತಗಳಿಂದ ಕೂಡಿದುದಾಗಿಯೂ, ಪುಷ್ಪಫಲಸಮೃದ್ಧವಾದ ಬಗೆಬಗೆಯ ವೃಕ್ಷಸಮೂಹ ದಿಂದ ತುಂಬಿದುದಾಗಿಯೂ ಇರುವ ಸಮುದ್ರತೀರಪ್ರದೇಶವನ್ನು ನೋಡುತ್ತ ಮುಂದೆಮುಂದೆ ಹೋದನು. ಆ ತೀರಪ್ರದೇಶದಲ್ಲಿ ನಾಲ್ಕು ಕಡೆಗಳಲ್ಲಿಯೂ ಶೀತಲವಾದ ನೀರಿನಿಂದ ತುಂಬಿದ ತಾವರೆಕೊಳಗಳು ಅನೇಕವಾಗಿದ್ದುವು. ಸುತ್ತಲೂ ಅನೇಕ ಯಾಗವೇದಿಕೆಗಳಿಂದ ಕೂಡಿದ ವಿಸ್ತಾರವಾದ ಋಷ್ಯಾಶ್ರಮ ಸಮೂಹಗಳು ತುಂಬಿದ್ದುವು. ಬಾಳೆ, ತೊಗರಿ ಮುಂತಾದ ಸಸ್ಯಗಳು ದಟ್ಟವಾಗಿ ಬೆಳೆದಿದ್ದುವು. ಅಲ್ಲಲ್ಲಿ ತೆಂಗಿನಮರಗಳು ಶೋಭಿಸುತಿದ್ದುವು. ಪುಷ್ಪಿತಗಳಾದ ಸಾಲೆ, ತಾಳೆ, ಹೊನ್ನೆ ಮುಂತಾದ ವೃಕ್ಷಗಳು ಸುತ್ತಲೂ ತುಂಬಿ ಬೆಳೆದಿದ್ದುವು. ನಾಗರೂ, ಗರುತ್ಮಂತರೂ, ಗಂಧರ್ವರೂ, ಕಿನ್ನರರೂ, ಅಲ್ಲಲ್ಲಿ ಸಾವಿರಾರುಸಂಖ್ಯೆಯಿಂದ ತಿರುಗುತಿದ್ದರು. ಅಲ್ಲಿನ ಋಷಿಗಳಲ್ಲಿ ಅಯೋನಿಜರೂ, ಬ್ರಹ್ಮನ ನಖದಿಂದ ಹುಟ್ಟಿದವರೂ, ಮಾಷಗೋತ್ರದಲ್ಲಿ ಹುಟ್ಟಿದವರೂ, ಸೂರ್ಯಚಂದ್ರರ ಕಿರಣಗಳನ್ನೇ ತಮಗೆ ಆಹಾರವನ್ನಾಗಿ ತೆಗೆದುಕೊಂಡು ಜೀವಿಸುವವರೂ, ವಾಲಖಿಲ್ಯಕುಲದವರೂ, ಅಲ್ಲಲ್ಲಿ ಅನೇಕ ವಾಗಿ ನೆರೆದಿದ್ದರು. ಕಾಮವನ್ನು ಜಯಿಸಿ, ಜಿತೇಂದ್ರಿಯರಾದ ಸಿದ್ಧಚಾರ ಣಾದಿಗಳು ಅಲ್ಲಲ್ಲಿ ವಿನೋದಿಸುತಿದ್ದರು. ದಿವ್ಯಾಭರಣಗಳನ್ನೂ, ಪುಷ್ಪ ಮಾಲಿಕೆಗಳನ್ನೂ ಧರಿಸಿ, ದಿವ್ಯರೂಪದಿಂದ ಕೂಡಿ, ಬಗೆಬಗೆಯ ರತಿಕ್ರೀಡೆ ಗಳಲ್ಲಿ ಚತುರರಾದ ಅಪ್ಸರಸ್ತ್ರೀಯರು ಆ ತೀರಪ್ರದೇಶದಲ್ಲಿ ಸಾವಿರಾರು ಸಂಖ್ಯೆ ಯಿಂದ ಕಾಣಿಸುತಿದ್ದರು. ಭಾಗ್ಯವತಿಯರಾದ ಅನೇಕ ದೇವಪತ್ನಿಯರು ಅಲ್ಲಲ್ಲಿ

ವಿನೋದದಿಂದಿರುತಿದ್ದರು. ಆ ಪ್ರದೇಶವು ಅದ್ಭುತವಾದ ಒಂದು ದಿವ್ಯಕಾಂತಿ ಯಿಂದ ಕೂಡಿದಂತೆಯೂ ಕಾಣಿಸುತಿತ್ತು. ದೇವದಾನವರೂ, ಅಮೃತಾಶನ ರಾದ ಬೇರೆ ಕೆಲವು ದಿವ್ಯಪುರುಷರೂ, ಅಲ್ಲಲ್ಲಿ ಗುಂಪಾಗಿ ಸಂಚರಿಸುತಿದ್ದರು. ಸುತ್ತಲೂ ಹಂಸಕಾರಂಡವಾದಿಗಳೂ ಕ್ರೌಂಚಪಕ್ಷಿಗಳೂ ತುಂಬಿದ್ದುವು. ಸಾರಸ ಪಕ್ಷಿಗಳು ಕಿವಿಗಿಂಪಾದ ಕಲಕಲ ಧ್ವನಿಯನ್ನು ಮಾಡುತ್ತಿದ್ದುವು. ಅಲ್ಲಲ್ಲಿ ವೈಡೂರ್ಯಮಣಿಗಳು ಕಾಂತಿವಿಶಿಷ್ಟವಾಗಿ ಹೊಳೆಯುತಿದ್ದುವು. ಸ್ವಭಾವ ದಿಂದಲೇ, ರಮಣೀಯವಾದ ಆ ಪ್ರದೇಶವು ಸಮುದ್ರಕಾಂತಿಯಿಂದ ಮತ್ತಷ್ಟು ರಮಣೀಯವಾಗಿ ತೋರುತಿತ್ತು. ಹೀಗೆ ಅತಿರಮ್ಯವಾದ ಆ ಸಮುದ್ರತೀರ ವನ್ನು ನೋಡುತ್ತ, ರಾವಣನು ಮುಂದೆ ಮುಂದೆ ಬರುವಾಗ, ದಾರಿಯಲ್ಲಿ ಶುಭ್ರವರ್ಣವುಳ್ಳದಾಗಿಯೂ, ವಿಸ್ತಾರವಾಗಿಯೂ, ದಿವ್ಯಪುಷ್ಪಮಾಲಿಕೆಗಳಿಂ ದಲಂಕರಿಸಲ್ಪಟ್ಟದಾಗಿಯೂ, ಗಾನ ಧ್ವನಿಗಳಿಂದಲೂ ತೂರ್ಯಘೋಷಗಳಿಂ ದಲೂ ಕೂಡಿದುದಾಗಿಯೂ, ಇರುವ ವಿಮಾನಸಮೂಹವು ಸುತ್ತಲೂ ಸಂಚ ರಿಸುತ್ತಿರುವುದನ್ನೂ, ಆ ವಿಮಾನಗಳಲ್ಲಿ ತಮ್ಮ ತಪೋಬಲದಿಂದ ಅನೇಕ ದಿವ್ಯಲೋಕಗಳನ್ನು ಸಾಧಿಸಿದ ಸಿದ್ಧಪುರುಷರು ಸಂಚರಿಸುತ್ತಿರುವುದನ್ನೂ ನೋಡಿದನು. ಅಲ್ಲಲ್ಲಿ ಗಂಧರ್ವರೂ, ಅಪ್ಸರಸ್ಸುಗಳೂ ಗೋಚರಿಸುತಿದ್ದರು. ಮತ್ತು ಇಂಗಿನಂತಿರುವ ಒಂದು ಬಗೆಯ ರಸವನ್ನು ಕಾರುವ ಮೂಲವೆಂಬ ಓಷಧಿ ವಿಶೇಷಗಳಿಂದಲೂ, ಸಾವಿರಾರು ಗಂಧದ ಮರಗಳಿಂದಲೂ ತುಂಬಿ ಸುವಾಸನೆಯನ್ನುಂಟುಮಾಡುತ್ತಿರುವ ರಮಣೀಯಗಳಾದ ವನಪ್ರದೇಶಗಳು ಸಾಲಾಗಿ ಕಾಣುತಿದ್ದುವು. ಮತ್ತು ಅಲ್ಲಿ ಉತ್ತಮವಾದ ಅಗರು ವೃಕ್ಷ ಗಳಿಂದಲೂ, ತಕೋಲ ವೃಕ್ಷಗಳಿಂದಲೂ, ಸುವಾಸನೆಯುಳ್ಳ ಜಾಜಿಕಾಯಿಯ ಗಿಡಗಳಿಂದಲೂ ತುಂಬಿದ ವನಗಳನ್ನೂ, ಉಪವನಗಳನ್ನೂ ಕಂಡನು. ಅಲ್ಲಲ್ಲಿ ಹೊಂಗೆಯ ಹೂಗಳನ್ನೂ ಮೆಣಸಿನ ಬಳ್ಳಿಗಳನ್ನೂ ಸಮುದ್ರತೀರದಲ್ಲಿ ಬಿದ್ದು ಒಣಗುತ್ತಿರುವ ಮುತ್ತಿನ ಸಮೂಹಗಳನ್ನೂ, ಶಂಖದ ರಾಶಿಗಳನ್ನೂ, ಹವಳದ ಕುಡಿಗಳನ್ನೂ, ಬೆಳ್ಳಿ ಬಂಗಾರಗಳ ಬೆಟ್ಟಗಳನ್ನೂ ಕಂಡನು. ಅಲ್ಲಲ್ಲಿ ಮನೋಹರವಾದ ಗಿರಿನದಿಗಳೂ ನಿರ್ಮಲವಾದ ಮಡುಗಳೂ ಕಾಣುತಿದ್ದುವು. ಮತ್ತು ಧನಧಾನ್ಯಗಳಿಂದ ತುಂಬಿ, ಉತ್ತಮ ಸ್ತ್ರೀಯರಿಂದೊಪ್ಪುತ್ತ, ರಥ ಗಜತುರಗಾದಿಗಳಿಂದ ನಿಬಿಡವಾದ ಅನೇಕ ಪಟ್ಟಣಗಳ ಸಮೂಹವೂ ನಡು

ನಡುವೆ ನೇತ್ರಾನಂದಕರವಾಗಿ ತೋರುತಿತ್ತು. ಹಳ್ಳತಿಟ್ಟುಗಳಿಲ್ಲದೆ ಸಮಭೂಮಿಯುಳ್ಳುದಾಗಿ, ಸುಖಸ್ಪರ್ಶವುಳ್ಳ ಮಂದಮಾರುತದಿಂದ ಮನಸ್ಸಂತೋಷಕರವಾಗಿ, ಸ್ವರ್ಗಲೋಕದಂತೆ ಸುಂದರವಾದ ಆ ತೀರಪ್ರದೇಶವನ್ನು ರಾವಣನು ನಟ್ಟಕಣ್ಣಿನಿಂದ ನೋಡುತ್ತಿರುವಾಗ, ಅಲ್ಲಿ ಮಹಾಮೇಘದಂತೆ ಒಂದಾನೊಂದು ಆಲದಮರವು ಗೋಚರಿಸಿತು. ಅದರ ಸುತ್ತಲೂ ಅನೇಕ ಋಷಿಗಳು ನೆರೆದಿದ್ದರು. ಅದರ ಕೊಂಬೆಗಳು ಸುತ್ತಲೂ ನೂರು ಯೋಜನಗಳ ವರೆಗೆ ಉದ್ದವಾಗಿ ಬೆಳೆದಿದ್ದುವು. ಪೂರ್ವದಲ್ಲಿ ಮಹಾಬಲಾಢ್ಯನಾದ ಗರುಡನು, ಲೋಕಾದ್ಭುತವಾದ ದೊಡ್ಡ ದೇಹವುಳ್ಳ ಒಂದಾನೆಯನ್ನೂ, ಒಂದಾಮೆಯನ್ನೂ ಹಿಡಿದುತಂದು, ಅದನ್ನು ತಿನ್ನುವುದಕ್ಕಾಗಿ ಈ ಆಲದಮರದ ಕೊಂಬೆಯ ಮೇಲೆ ಬಂದು ಕುಳಿತನು. ಆ ಭಾರಕ್ಕೆ ತಡೆಯಲಾರದೆ ಆ ಮರದ ಕೊಂಬೆಯು ತಟ್ಟನೆ ಮುರಿಯಿತು. ಆಗ ಆ ಶಾಖೆಯ ಕೆಳಗೆ ವೈಖಾನಸರೆಂದೂ, ಮಾಷರೆಂದೂ, ಅಜರೆಂದೂ, ವಾಲಖಿಲ್ಯರೆಂದೂ, ಮರೀಚಿಪರೆಂದೂ, ಧೂಮ್ರರೆಂದೂ, ಪ್ರಸಿದ್ಧರಾದ ಬೇರೆ ಬೇರೆ ಕುಲಕ್ಕೆ ಸೇರಿದ ಅನೇಕ ಮಹರ್ಷಿಗಳು ತಪಸ್ಸು ಮಾಡುತಿದ್ದರು. ಆಗ ಗರುಡನು ಆ ಋಷಿಗಳಲ್ಲಿ ಮರುಕಗೊಂಡು, ಅವರಿಗುಂಟಾಗುತಿದ್ದ ಅಪಾಯವನ್ನು ತಪ್ಪಿಸುವುದಕ್ಕಾಗಿ, ತಾನು ಮೊದಲು ಹಿಡಿದಿದ್ದ ಗಜಕಚ್ಛಪಗಳೊಡನೆ, ನೂರು ಗಾವುದವುದ್ದವುಳ್ಳ ಆ ದೊಡ್ಡ ಕೊಂಬೆಯನ್ನೂ ತನ್ನ ಒಂದೇ ಕಾಲಿನಿಂದೆತ್ತಿಕೊಂಡು, ಆ ಸ್ಥಳವನ್ನು ಬಿಟ್ಟು ಅತಿ ವೇಗದಿಂದ ಹೊರಟನು. ಆಮೇಲೆ ಧರ್ಮಾತ್ಮನಾದ ಆತನು ಆ ಗಜಕಚ್ಛಪಗಳ ಮಾಂಸವನ್ನು ಆಕಾಶಮಾರ್ಗದಲ್ಲಿಯೇ ತಿಂದು, ಆ ಮರದ ಕೊಂಬೆಯನು ಒಂದು ಬೇಡರ ಹಳ್ಳಿಯ ಮೇಲೆ ಹಾಕಿದನು. ಆ ಗ್ರಾಮದ ಬೇಡರೆಲ್ಲರೂ ಇದರಿಂದ ಹತರಾದರು. ಅವರನ್ನೂ ಭಕ್ಷಿಸಿದನು. ಹೀಗೆ ಗರುಡನು ಋಷಿಗಳಿಗುಂಟಾಗುತ್ತಿದ್ದ ಬಾಧೆಯನ್ನೂ ತಪ್ಪಿಸಿ ಸಂತೋಷದಿಂದಿದ್ದನು. ಈ ಸಂತೋಷದಿಂದ ಅವನ ದೇಹವು ಮೊದಲಿಗಿಂತಲೂ ಉಬ್ಬಿತು. ಆತನ ಪರಾಕ್ರಮವು ಇಮ್ಮಡಿಯಾಯಿತು. ಆತನು ಕಾಲೋಚಿತವಾದ ಬುದ್ಧಿಯುಳ್ಳವನಾದುದರಿಂದ, ತನ್ನ ಸಾಹಸ ಕಾರ್ಯಕ್ಕೆ ಇದೇ ತಕ್ಕ ಸಮಯವೆಂದು ತಿಳಿದು, ಸ್ವರ್ಗಲೋಕದಿಂದ ಅಮೃತವನ್ನು ತರಬೇಕೆಂದು ಉದ್ದೇಶಿಸಿದನು. ಆಗಲೇ ಅಲ್ಲಿಂದ ಹೊರಟು ಇಂದ್ರನ ಅರಮನೆಯ ಬಳಿಗೆ ಬಂದು, ಅಲ್ಲಿದ್ದ ಉಕ್ಕಿನ ಗವಾಕ್ಷಗಳನ್ನು ಮುರಿದು,

ರತ್ನಮಯವಾದ ಗೋಡೆಗಳನ್ನು ಕೆಡಹಿ, ಯಾರಿಗೂ ತಿಳಿಯದಂತೆ ಆ ಇಂದ್ರನ ಮನೆಯಲ್ಲಿ ಸುರಕ್ಷಿತವಾಗಿದ್ದ ಅಮೃತವನ್ನು ತಂದುಬಿಟ್ಟನು. ಹೀಗೆ ಗರುಡ ನಿಂದ ಮುರಿಯಲ್ಪಟ್ಟ ಅಸಾಧಾರಣ ಚಿಹ್ನವುಳ್ಳುದಾಗಿಯೂ, ಅನೇಕ ಮಹರ್ಷಿ ಗಳಿಂದ ಸೇವಿಸಲ್ಪಟ್ಟುದಾಗಿಯೂ ಇರುವ ಸುಭದ್ರವೆಂಬ ಹೆಸರುಳ್ಳ ಆ ಆಲದ ಮರವನ್ನು ರಾವಣನು ಕಂಡು, ಅಲ್ಲಿಯೇ ಸಮುದ್ರ ತೀರದಲ್ಲಿಳಿದು, ಅಲ್ಲಿ ವಿವಿಕ್ತವಾಗಿಯೂ, ರಮಣೀಯವಾಗಿಯೂ, ಪವಿತ್ರವಾಗಿಯೂ ಇರುವ ವನ ಮಧ್ಯದಲ್ಲಿ ಒಂದಾನೊಂದು ಆಶ್ರಮವನ್ನು ಕಂಡನು. ಅಲ್ಲಿ ಕೃಷ್ಣಾಜಿನ ವನ್ನೂ, ಜಟಾವಲ್ಕಲಗಳನ್ನೂ ಧರಿಸಿ ನಿಯತಾಹಾರನಾಗಿದ್ದ ಮಾರೀಚನೆಂಬ ರಾಕ್ಷಸನನ್ನು ನೋಡಿ, ಆತನ ಸಮೀಪಕ್ಕೆ ಬಂದನು. ಆ ಮಾರೀಚನು ರಾವಣನನ್ನು ನೋಡಿ ಸಂತೋಷದಿಂದ ಮನುಷ್ಯರಿಗೆ ದುರ್ಲಭವಾದ ಅನೇಕ ಭೋಜ್ಯಪದಾರ್ಥಗಳಿಂದ ಆ ರಾಕ್ಷಸರಾಜನನ್ನು ಪೂಜಿಸಿದನು. ಹೀಗೆ ರಾವಣ ನಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಭೋಜನವನ್ನು ಮಾಡಿಸಿದಮೇಲೆ, ಮಾರೀಚನು ಅವನನ್ನು ಕುರಿತು “ಎಲೆ ರಾಕ್ಷಸೇಂದ್ರನೆ! ಲಂಕೆಯಲ್ಲಿ ಎಲ್ಲರೂ ಕ್ಷೇಮದಿಂದಿರುವರಲ್ಲವೆ? ಇದೇನು? ನೀನೊಬ್ಬನೇ ಏಕಾಕಿಯಾಗಿ ಪುನಃ ಇಲ್ಲಿಗೆ ಬಂದ ಕಾರಣವೇನು?” ಎಂದನು. ಇದನ್ನು ಕೇಳಿ ಮಹಾತೇಜಸ್ವಿ ಯಾದ ರಾವಣನು ಸಮಯೋಚಿತವಾದ ಮಾತುಗಳಿಂದ ಆತನನ್ನು ಕುರಿತು ಹೇಳತೊಡಗಿದನು.

ಇಲ್ಲಿಗೆ ಮೂವತ್ತೈದನೆಯ ಸರ್ಗವು.

---

ರಾವಣನು ಜನಸ್ಥಾನವೃತ್ತಾಂತವನ್ನು ಮಾರೀಚನಿಗೆ ತಿಳಿಸಿ, ಸೀತೆಯನ್ನು ಕದ್ದು ತರುವುದಕ್ಕಾಗಿ ಮೃಗರೂಪದಿಂದ ತನಗೆ ಸಹಾಯಕನಾಗಬೇಕೆಂದು ಆತನನ್ನು ಬೇಡುವುದು.

“ಅಯ್ಯಾ! ಮಾರೀಚನೆ! ನಾನು ಹೇಳುವ ಮಾತನ್ನು ಚೆನ್ನಾಗಿ ಲಾಲಿಸಿ ಕೇಳಬೇಕು. ಈಗ ನಾನು ಬಹಳ ಕಷ್ಟಕ್ಕೆ ಸಿಕ್ಕಿರುವೆನು. ನೀನಲ್ಲದೆ ನನಗೆ ಬೇರೆ ದಿಕ್ಕಿಲ್ಲ. ನನ್ನ ತಮ್ಮಂದಿರಾದ ಖರದೂಷಣರೂ, ನನ್ನ ತಂಗಿ ಯಾದ ಶೂರ್ಪಣಖೆಯೂ, ಮಾಂಸಾಹಾರಿಯಾಗಿ ಮಹಾತೇಜಸ್ವಿಯೆನಿಸಿ

ಕೊಂಡಿದ್ದ ತ್ರಿಶಿರನೂ, ಮತ್ತು ಇನ್ನೂ ಶೌರ್ಯದ ಕೆಚ್ಚಿನಿಂದ ಯುದ್ಧಕ್ಕೆ ಆತುರಪಡುತ್ತಿರುವ ಅನೇಕ ರಾಕ್ಷಸಸೈನಿಕರೂ ನನ್ನ ಆಜ್ಞೆಯಿಂದ ಜನಸ್ಥಾನ ದಲ್ಲಿದ್ದುಕೊಂಡು, ಯಾವಾಗಲೂ ದಂಡಕಾರಣ್ಯದಲ್ಲಿ ಧರ್ಮಚಾರಿಗಳಾದ ಋಷಿ ಗಳನ್ನು ಬಾಧಿಸುತ್ತಾ, ಕಾವಲಿರುವರೆಂಬುದನ್ನು ನೀನೂ ಬಲ್ಲೆಯಷ್ಟೆ ? ಮತ್ತು ಭಯಂಕರವಾದ ಕಾರ್ಯವನ್ನು ನಡೆಸುವುದರಲ್ಲಿ ನಿಪುಣರಾಗಿಯೂ, ಮಹಾ ಶೂರರಾಗಿಯೂ, ಯುದ್ಧದಲ್ಲಿ ಅತ್ಯಾತುರವುಳ್ಳವರಾಗಿಯೂ, ಖರನ ಮನೋನು ವರ್ತಿಗಳಾಗಿಯೂ ಇರುವ ಹದಿನಾಲ್ಕು ಸಾವಿರ ಮಂದಿ ರಾಕ್ಷಸ ಸೈನಿಕರೂ, ಅಲ್ಲಿ ನಿತ್ಯವಾಸವನ್ನು ಮಾಡುತ್ತಿರುವರಲ್ಲವೆ! ಮಹಾಬಲಾಢ್ಯರಾದ ಆ ಖರಾದಿ ರಾಕ್ಷಸರೆಲ್ಲರೂ, ನಾನಾವಿಧಗಳಾದ ಆಯುಧಗಳನ್ನು ಹಿಡಿದು ಸನ್ನದ್ಧರಾಗಿ ರಾಮನೊಡನೆ ಯುದ್ಧವನ್ನಾರಂಭಿಸಿದರು. ಇದರಿಂದ ರಾಮನು ಕೋಪ ಗೊಂಡು ಆ ಯುದ್ಧರಂಗದಲ್ಲಿ ಬಾಯಿಂದ ಯಾವುದೊಂದು ಪರುಷವಾಕ್ಯ ಗಳನ್ನೂ ಆಡದೆ ಗಾಂಭೀರ್ಯವನ್ನೇ ತೋರಿಸುತ್ತ, ಧನುರ್ಬಾಣಗಳನ್ನು ಹಿಡಿದು ತನ್ನ ಕೈಯ್ಯ ಚಮತ್ಕಾರವೆಲ್ಲವನ್ನೂ ತೋರಿಸಿಬಿಟ್ಟನು. ಅಯ್ಯಾ ಮಾರೀಚಾ! ನಾನೇನು ಹೇಳಲಿ! ಕೇವಲ ಮನುಷ್ಯಮಾತ್ರನೊಬ್ಬನು, ಪದಾತಿಯಾಗಿದ್ದು, ತನ್ನ ತೀಕ್ಷ್ಣವಾದ ಬಾಣಗಳಿಂದ ಮಹಾತೇಜಸ್ವಿಗಳಾದ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನೂ ಕೊಂದುಬಿಟ್ಟನು. ಆ ಯುದ್ಧದಲ್ಲಿ ಖರನೂ ಸತ್ತನು. ದೂಷಣನೂ ಸತ್ತನು. ವೀರನಾದ ತ್ರಿಶಿರನೂ ಹತನಾದನು. ಈಗ ದಂಡ ಕಾರಣ್ಯವು ನಿರ್ಭಯವಾಗಿ ಮಾಡಲ್ಪಟ್ಟಿತು. [1] ಕುಪಿತನಾದ ತಂದೆಯಿಂದ

---

1. ಇಲ್ಲಿ "ಪಿತ್ರಾ ನಿರಸ್ತಃ ಕ್ರುದ್ಧೇನ ಸಭಾರ್ಯಃ ಕ್ಷೀಣಜೀವಿತಃ | ಸ ಹಂತಾ ತಸ್ಯ ಸೈನ್ಯಸ್ಯ ರಾಮಃ ಕ್ಷತ್ರಿಯಪಾಂಸನಃ ‖ ದುಃಶೀಲಃ ಕರ್ಕಶಸ್ತೀಕ್ಷ್ಣೋ ಮೂರ್ಖೋ ಲುಬ್ಧೋಽಜಿತೇಂದ್ರಿಯಃ | ತ್ಯಕ್ತಧರ್ಮೋ ಹ್ಯಧರ್ಮಾತ್ಮಾ ಭೂತಾನಾಮಹಿತೇ ರತಃ" ಎಂದು ಮೂಲವು. ಇಲ್ಲಿನ ವಾಸ್ತವಾರ್ಥವೇನೆಂದರೆ—ನಿಂದಾಪರವಾದ ಇಲ್ಲಿನ ಕೆಲವು ವಿಶೇಷಣಗಳನ್ನು ಕಾಕುವೆಂದು ಗ್ರಹಿಸಬೇಕು. ಹೇಗೆಂದರೆ, (ಸಭಾ ಆರ್ಯಃ) ಯಾವ ಸಭೆಗಳಲ್ಲಿಯೂ ಪೂಜ್ಯನಾದ ಆ ರಾಮನು (ಪಿತ್ರಾ ನಿರಸ್ತಃ ಕಿಂ) ತಂದೆಯಿಂದೋಡಿಸ ಲ್ಪಟ್ಟನೆ? ಎಂದಿಗೂ ಇಲ್ಲವು. (ತಸ್ಯ ಸೈನ್ಯಸ್ಯ ಹಂತಾ ಸಃ ಕ್ಷೀಣಾ ಜೀವಿತಃ ಕಿಂ) ಮಹಾವೀರ್ಯವುಳ್ಳ ಆ ರಾಕ್ಷಸ ಸೈನ್ಯವನ್ನು ಕೊಂದವನು ಕ್ಷೀಣಜೀವಿತನೆನಿಸುವನೆ ? ಅದೂ ಇಲ್ಲವು. (ಕ್ಷತ್ರಿಯಪಶ್ಚಾಸೌ ಅಂಸನಶ್ಚ, ಕ್ಷತ್ರಿಯಪಾಂಸನಃ) ಅವನು ಕ್ಷತ್ರಿಯರೆಲ್ಲರನ್ನೂ ಪಾಲಿಸತಕ್ಕವನಲ್ಲದೆ ಅವರ ಶತ್ರುಗಳನ್ನೂ ಹುಟ್ಟಡಗಿಸಬಲ್ಲವನು. ಇಂತಹ ರಾಮನು

ಹೊರಡಿಸಲ್ಪಟ್ಟು, ದೇಶಭ್ರಷ್ಟನಾಗಿ ತನ್ನ ಹೆಂಡತಿಯನ್ನು ಕಟ್ಟಿಕೊಂಡು ಕಾಡಿನಲ್ಲಿ ಅಲೆಯುತ್ತಿರುವ ಕ್ಷತ್ರಿಯಾಧಮನಾದ ಆ ರಾಮನೆಂಬವನು, ತನ್ನ ಆಯುಸ್ಸನ್ನು ತೀರಿಸಿಕೊಳ್ಳುವುದಕ್ಕಾಗಿಯೇ ಹೀಗೆ ನಮ್ಮ ಕಡೆಯ ಅಷ್ಟು ರಾಕ್ಷಸಸೈನ್ಯವನ್ನೂ ಕೊಂದಿರುವನು. ಅಬ್ಬಾ! ಆ ರಾಮನನ್ನು ನೀನೇನೆಂದು ತಿಳಿದಿರುವೆ? ಬಹಳ ಕೆಟ್ಟ ನಡತೆಯುಳ್ಳವನು! ಆತನಿಗೆ ಮರುಕವೆಂಬುದೇ ಇಲ್ಲ! ಬಹಳ ಕ್ರೂರಸ್ವಭಾವವುಳ್ಳವನು. ಮೂರ್ಖನು! ಲುಬ್ಧನು! ಇಂದ್ರಿಯಲೋಲನು! ಧರ್ಮವನ್ನು ಬಿಟ್ಟು ಅಧರ್ಮದಲ್ಲಿಯೇ ಪ್ರವರ್ತಿಸ ತಕ್ಕವನು. ಪ್ರಾಣಿಗಳಿಗೆ ಕೇಡನ್ನುಂಟುಮಾಡುವುದರಲ್ಲಿಯೇ ಆಸಕ್ತಿಯುಳ್ಳ ವನು. ಯಾವುದೊಂದು ವೈರಕಾರಣವೂ ಇಲ್ಲದೆ, ಧರ್ಮದಲ್ಲಿಯೂ ದೃಷ್ಟಿ ಯಿಡದೆ, ತನ್ನ ಬಲದ ಕೊಬ್ಬಿನಿಂದ ಆ ದಂಡಕಾರಣ್ಯದಲ್ಲಿ ನನ್ನ ತಂಗಿಯ ಕಿವಿ ಮೂಗುಗಳನ್ನು ಕುಯ್ದು ಅವಮಾನವನ್ನುಂಟುಮಾಡಿದವನಿಗೆ ತಕ್ಕ ಪ್ರತೀಕಾರವನ್ನು ಮಾಡಬೇಕಲ್ಲವೆ! ಈ ವಿಷಯದಲ್ಲಿ ನೀನು ನನಗೆ ಸಹಾಯ ವನ್ನು ಮಾಡಬೇಕು. ಆತನಿಗೆ ದೇವಕನ್ಯೆಯಂತಿರುವ ಸೀತೆಯೆಂಬ ಹೆಂಡತಿ ಯೊಬ್ಬಳಿರುವಳು. ಅವಳನ್ನು ಸಾಹಸದಿಂದ ತಂದುಬಿಡಬೇಕೆಂದಿರುವೆನು. ಇದಕ್ಕಾಗಿ ನಿನ್ನ ಸಹಾಯವನ್ನು ಅಪೇಕ್ಷಿಸಬೇಕಾಗಿದೆ. ನೀನಾದರೋ ಮಹಾ ಬಲಾಢ್ಯನು. ಆದುದರಿಂದ ನೀನೂ ನನ್ನ ತಮ್ಮಂದಿರೂ ನನಗೆ ಪಕ್ಕದಲ್ಲಿ ಸಹಾಯಕರಾಗಿದ್ದ ಪಕ್ಷದಲ್ಲಿ, ದೇವತೆಗಳೆಲ್ಲರೂ ಒಂದಾಗಿ ಬಂದು ನನ್ನನ್ನಿದಿ ರಿಸಿದರೂ ನಾನು ಲಕ್ಷ್ಯಮಾಡತಕ್ಕವನಲ್ಲ. ಎಲೈ ರಾಕ್ಷಸಶ್ರೇಷ್ಠನೆ! ಈ ಸಮಯದಲ್ಲಿ ನೀನು ನನಗೆ ಸಹಾಯವನ್ನು ಮಾಡದೆ ಕೈಬಿಡಬಹುದೆ? ಮುಖ್ಯವಾಗಿ ವೀರ್ಯದಲ್ಲಿಯಾಗಲಿ, ಯುದ್ಧದಲ್ಲಿಯಾಗಲಿ, ದರ್ಪದಲ್ಲಿಯಾಗಲಿ

---

(ದುಶ್ಶೀಲಃ ಕಿಂ) ದುಶ್ಶೀಲನೆನಿಸುವನೆ? ಎಂದಿಗೂ ಇಲ್ಲವು. ಆದರೆ (ಕರ್ಕಶಃ) ಶತ್ರುಗಳ ವಿಷಯದಲ್ಲಿ ಕಠಿನನು (ತೀಕ್ಷ್ಣಃ) ಕಾರ್ಯಗಳಲ್ಲಿ ಚುರುಕುಳ್ಳವನು. ಅಮೂರ್ಖನು. ಅಲುಬ್ಧನು. ಜಿತೇಂದ್ರಿಯನು. ವಿರುದ್ಧ ಧರ್ಮಗಳನ್ನು ತ್ಯಜಿಸಿದವನು. ಇಂತಹ ರಾಮನು [ಅಧರ್ಮಾತ್ಮಾ] (ಅ + ಧರ್ಮ + ಆತ್ಮಾ) ವಿಷ್ಣುಧರ್ಮಾತ್ಮಕನಾದವನು. ಆದುದರಿಂದಲೇ (ಭೂತಾನಾಂ+ಅಹಿತೇ+ಅರತಃ) ಪ್ರಾಣಿಗಳಿಗೆ ಅಹಿತವನ್ನು ಮಾಡು ವುದರಲ್ಲಿ ಸ್ವಲ್ಪವೂ ಮನಸ್ಸಿಲ್ಲದವನು. ಎಂದರೆ, ಲೋಕರಕ್ಷಣವೇ ಶ್ರೀವಿಷ್ಣುವಿನ ಸತ್ವಗುಣ ಧರ್ಮವಾದುದರಿಂದ, ಆ ವಿಷ್ಣುವಿನ ಅಂಶದಿಂದವತರಿಸಿರುವ ರಾಮನೂ, ಪ್ರಾಣಿವರ್ಗ ಗಳನ್ನು ರಕ್ಷಿಸುವುದರಲ್ಲಿಯೇ ನಿತ್ಯಾಸಕ್ತನಾಗಿರುವನೆಂದು ಭಾವವು. (ಮಹೇಶ್ವರತೀರ್ಥರು).

ನಿನಗೆ ಯಾರೂ ಸಮಾನರಿಲ್ಲ. ನಿನಗೆ ತಿಳಿಯದ ಉಪಾಯಗಳಿಲ್ಲ. ಶೂರರಿಗೆಲ್ಲಾ ನೀನೇ ಮೇಲೆನಿಸಿಕೊಂಡಿರುವೆ. ಸಮಸ್ತಮಾಯೆಗಳಲ್ಲಿಯೂ ನೀನು ನಿಪುಣನಾಗಿರುವೆ! ಇದಕ್ಕಾಗಿಯೇ ನಾನು ನಿನ್ನನ್ನೇ ಹುಡುಕಿಕೊಂಡು ಬರಬೇಕಾಯಿತು ನೀನು ಈಗ ನನಗೆ ಮಾಡಬೇಕಾದ ಸಹಾಯವೇನೆಂಬುದನ್ನೂ ತಿಳಿಸುವೆನು ಕೇಳು. ಬೆಳ್ಳಿಯ ಚುಕ್ಕೆಗಳಿಂದ ವಿಚಿತ್ರವಾದ ಒಂದು ಸುವರ್ಣಮೃಗದ ರೂಪವನ್ನು ಧರಿಸು! ಈ ರೂಪದಿಂದ ರಾಮಾಶ್ರಮಕ್ಕೆ ಹೋಗಿ ಸೀತೆಯ ಮುಂದೆ ನಲಿದಾಡಿದರೆ, ಆ ನಿನ್ನ ದಿವ್ಯರೂಪವನ್ನು ನೋಡಿದೊಡನೆಯೇ ಸೀತೆಗೆ ಆಸೆ ಹುಟ್ಟುವುದು. ನಿನ್ನನ್ನು ಹಿಡಿದುತರುವುದಕ್ಕಾಗಿ ಪತಿಯಾದ ರಾಮನನ್ನೂ ಲಕ್ಷ್ಮಣನನ್ನೂ ನಿರ್ಬಂಧಿಸಿ ಕಳುಹಿಸುವಳು. ಅವರಿಬ್ಬರೂ ನಿನ್ನನ್ನು ಹಿಂಬಾಲಿಸಿ ಬರುವರು. ಶೂನ್ಯವಾದ ಆ ಆಶ್ರಮಪ್ರದೇಶದಲ್ಲಿ ಆಗ ಸೀತೆಯೊಬ್ಬಳೇ ಇರುವಳು ಹೀಗೆ ನಡೆಯುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಆ ಸಮಯದಲ್ಲಿ ರಾಹುವು ಚಂದ್ರಪ್ರಭೆಯನ್ನು ಹಿಡಿಯುವಂತೆ ನಾನು ಸುಖವಾಗಿ ಅವಳನ್ನು ಕದ್ದು ತಂದುಬಿಡುವೆನು. [1] ಆಮೇಲೆ ರಾಮನು ಪತ್ನೀವಿಯೋಗವನ್ನು ತಡೆಯಲಾರದೆ ದುಃಖದಿಂದ ಕಂದಿ, ಕುಂದಿ ಕೃಶನಾಗಿ ಹೋಗುವನು. ಆಗ ರಾಮನೊಡನೆ ನನಗೆ ಯುದ್ಧವು ಸಂಭವಿಸಿದರೂ ನಾನು ನಿರ್ಭಯವಾಗಿ ಯುದ್ಧಕ್ಕೆ ನಿಂತು ಬಲಹೀನನಾದ ಅವನನ್ನು

---

1. ಇಲ್ಲಿ "ತತಃ ಪಶ್ಚಾತ್ಸುಖಂ ರಾಮೇ ಭಾರ್ಯಾಹರಣಕರ್ಶಿತೇ । ವಿಶ್ರಬ್ಧಃ ಪ್ರಹರಿಷ್ಯಾಮಿ ಕೃತಾರ್ಥೇನಾಂತರಾತ್ಮನಾ ॥" ಎಂದು ಮೂಲವು. ಇದಕ್ಕೆ ಆಪಾತದಿಂದ ತೋರುವ ಸಾಮಾನ್ಯಾರ್ಥವು ಮೇಲೆಯೇ ಕಾಣಿಸಲ್ಪಟ್ಟಿದೆ. ಆಂತರ್ಯವಾದ ಇದರ ತತ್ವಾರ್ಥವೇನೆಂದರೆ:—ಇಲ್ಲಿ 'ಮಯಿ' ಎಂಬುದು ಅಧ್ಯಾಹಾರ್ಯವು. "ರಾಮೇ ಭಾರ್ಯಾಹರಣಕರ್ಶಿತೇ" ಎಂಬುದೊಂದೇ ಸಮಾಸಪದವು. (ಮಯಿ ರಾಮೇ ಭಾರ್ಯಾ-ಹರಣಕರ್ಶಿತೇ ಸತಿ) "ರಾಮ + ಇಭ + ಆರ್ಯಾ + ಹರಣ + ಕರ್ಶಿತೇ" ನಾನು ಪುರುಷರಲ್ಲಿ ಆನೆಯಂತಿರುವ ರಾಮನ ಪತ್ನಿಯನ್ನು ಅಪಹರಿಸಿ, ಅದರಿಂದ ಹಾನಿಯನ್ನು ಹೊಂದಿದ ಪಕ್ಷದಲ್ಲಿ (ತತಃ ಪಶ್ಚಾತ್) ಅದಕ್ಕೆ ಮೇಲೆ, (ಕೃತಾರ್ಥೇನಾಂತರಾತ್ಮನಾ) ಕೃತಾರ್ಥವಾದ ಮನಸ್ಸಿನಿಂದ (ವಿಶ್ರಬ್ಧಃ ಸುಖಂ ಪ್ರಹರಿಷ್ಯಾಮಿ) ನಿಶ್ಚಯವಾಗಿಯೂ ಮೋಕ್ಷಸುಖವನ್ನು ಸಂಪಾದಿಸಬಹುದು. ಎಂದರೆ, ಶ್ರೀರಾಮನ ಪತ್ನಿಯನ್ನಪಹರಿಸಿ ಆತನಿಂದ ತಾನು ಸಂಹೃತನಾದಮೇಲೆಯೇ ತನಗೆ ನಿಜವಾದ ಮೋಕ್ಷಸುಖವುಂಟೆಂದೂ ಆಗಲೇ ತಾನು ಕೃತಾರ್ಥನೆಂದೂ ಭಾವವು.

ಸುಖವಾಗಿ ಕೊಂದುಬಿಡುವೆನು” ಎಂದನು. ಹೀಗೆ ರಾವಣನು ಹೇಳಿದ ಮಾತನ್ನು ಕೇಳುತ್ತಿರುವಾಗ, ರಾಮನೆಂಬ ಹೆಸರನ್ನು ಕೇಳಿದೊಡನೆಯೇ ಮಹಾತ್ಮನಾದ ಮಾರೀಚನಿಗೆ ಮಿತಿಮೀರಿದ ಭಯವುಂಟಾಯಿತು. ಅವನ ಮುಖವು ಬಾಡಿತು. ತುಟಿಗಳೆರಡೂ ಒಣಗಿದುವು. ಹೀಗೆ ಒಣಗಿದ ತುಟಿಗಳನ್ನು ನಾಲಗೆಯಿಂದ ಆಗಾಗ ನಕ್ಕಿಕೊಳ್ಳುತ್ತಾ, ಎವೆಯಿಲ್ಲದಂತೆ ಬಿಟ್ಟ ಕಣ್ಣುಗಳು ಬಿಟ್ಟಹಾಗೆಯೇ ಇರಲು, ಪ್ರಜ್ಞೆತಪ್ಪಿ ಸತ್ತವನಂತಾಗಿ ನಟ್ಟ ಕಣ್ಣಿನಿಂದ ರಾವಣನನ್ನು ನೋಡುತಿದ್ದನು. ಆ ಮಾರೀಚನು ಮೊದಲೇ ರಾಮನ ಪರಾಕ್ರಮವನ್ನು ಬಲ್ಲವನಾದುದರಿಂದ, ರಾಮನೆಂಬ ಹೆಸರನ್ನು ಕೇಳಿದೊಡನೆಯೇ ಎದೆಗುಂದಿ ತತ್ತಳಿಸುತ್ತ, ರಾವಣನ ಮುಂದೆ ಕೈಮುಗಿದು ನಿಂತು, ತನಗೂ ಆತನಿಗೂ ಶ್ರೇಯಸ್ಕರವಾದ ಬುದ್ಧಿವಾದವನ್ನು ಹೇಳಲಾರಂಭಿಸಿದನು.

ಇಲ್ಲಿಗೆ ಮೂವತ್ತಾರನೆಯ ಸರ್ಗವು.

---

ಸೀತಾಪಹರಣವೇ ರಾಕ್ಷಸಕುಲನಾಶಕ್ಕೆ ಮೂಲವಾಗು
ವುದೆಂದು ಹೇಳಿ, ಮಾರೀಚನು ರಾವಣನಿಗೆ
ಹಿತೋಪದೇಶವನ್ನು ಮಾಡಿದುದು.

ಮಾತಿನಲ್ಲಿ ನಿಪುಣನಾಗಿಯೂ, ಪ್ರಾಜ್ಞನಾಗಿಯೂ ಇರುವ ಮಾರೀಚನು, ರಾವಣನ ಮಾತನ್ನು ಕೇಳಿ ಅವನನ್ನು ಕುರಿತು “ಎಲೈ ರಾಜನೆ! ತನ್ನ ಪ್ರಭುವಿಗೆ ಯಾವಾಗಲೂ ಪ್ರಿಯವನ್ನೇ ನುಡಿಯುತ್ತ, ಆತನ ಹಾನಿವೃದ್ಧಿಗಳಲ್ಲಿ ದೃಷ್ಟಿಯಿಡದೆ ಮುಖಸ್ತುತಿ ಮಾಡತಕ್ಕ ಮನುಷ್ಯರು ಯಾವಾಗಬೇಕಾದರೂ ಬೇಕಾದಷ್ಟು ಮಂದಿ ದೊರೆಯುವರು. ತತ್ಕಾಲಕ್ಕೆ ಅಪ್ರಿಯವಾಗಿ ತೋರಿದರೂ, ಕಾಲಾಂತರದಲ್ಲಿ ಹಿತವನ್ನುಂಟುಮಾಡುವ ಬುದ್ಧಿವಾದವನ್ನು ಹೇಳತಕ್ಕವರಾಗಲಿ, ಆ ಹಿತವಾದವನ್ನು ಕಿವಿಗೊಟ್ಟು ಕೇಳತಕ್ಕ ಪ್ರಭುಗಳಾಗಲಿ ಲೋಕದಲ್ಲಿ ದೊರಕುವುದು ದುರ್ಲಭವು. ಎಲೈ ರಾಕ್ಷಸೇಂದ್ರನೆ! ನೀನು ರಾಮನ ವೀರ್ಯಾತಿಶಯವನ್ನೂ, ಆತನ ಗುಣಗಳನ್ನೂ ಕೇಳಿಲ್ಲವೆಂದು ತೋರುತ್ತಿದೆ. ನೀನು ಚಾರರನ್ನು ಕಳುಹಿಸಿ ಶತ್ರುಗಳ ಜಾಡೆಯನ್ನು ತಿಳಿದುಕೊಂಡವನಲ್ಲ. ನಿನ್ನ ಬುದ್ಧಿಯೂ ಬಹಳ ಚಪಲವಾದುದೆಂದು ತೋರುತ್ತಿದೆ. ಆ ರಾಮನು

ಸಾಕ್ಷಾನ್ಮಹೇಂದ್ರ ವರುಣರಿಗೆ ಸಾಟಿಯೆಂಬುದನ್ನು ನೀನು ನಿಜವಾಗಿ ತಿಳಿಯದೆ ಹೋದೆಯಲ್ಲಾ? ಅಯ್ಯೋ! ಇನ್ನುಮೇಲೆ ಭೂಮಿಯಲ್ಲಿ ರಾಕ್ಷಸರಿಗೆ ಕ್ಷೇಮ ವುಂಟಾಗುವುದೆ? ರಾಮನು ಕುಪಿತನಾದ ಮೇಲೆ ಲೋಕದಲ್ಲಿ ರಾಕ್ಷಸ ಕುಲವೇ ಇಲ್ಲದಂತೆ ಮಾಡದಿರುವನೆ? ಜನಕಪುತ್ರಿಯಾದ ಸೀತೆಯು ನಿನ್ನ ಪ್ರಾಣ ಗಳನ್ನು ಕೊನೆಮುಟ್ಟಿಸುವುದಕ್ಕಾಗಿಯೇ ಹುಟ್ಟಿದಂತಿದೆ. ಸೀತಾ ನಿಮಿತ್ತವಾಗಿ ಇನ್ನುಮೇಲೆ ನನಗೆ ವ್ಯಸನವು ಸಂಭವಿಸದಿರುವುದೆಂದರೇನು? ಮನಸ್ಸಿಗೆ ತೋರಿದಂತೆ ನಿರಂಕುಶವಾಗಿ ನಡೆಯುತ್ತಿರುವ ನೀನು ಪ್ರಭುವಾಗಿದ್ದ ಮೇಲೆ, ನಮ್ಮ ಲಂಕಾಪಟ್ಟಣವು ಅಲ್ಲಿನ ಸಮಸ್ತ ರಾಕ್ಷಸಕುಲದೊಡನೆ ನಾಶಹೊಂದ ದಿರುವುದೆ? ಯಾವನು ನಿನ್ನಂತೆ ಸ್ವೇಚ್ಛೆಯಿಂದ ನಡೆದುಕೊಳ್ಳುತ್ತ, ದುಶ್ಶೀಲ ನಾಗಿ, ದುರಾಲೋಚನೆಗಳನ್ನು ನಡೆಸುತ್ತಿರುವನೋ, ಅಂತಹ ದುರ್ಬುದ್ಧಿ ಯುಳ್ಳ ರಾಜನು ತನ್ನನ್ನೂ ತನ್ನ ಬಂಧುಗಳನ್ನೂ, ರಾಜ್ಯವನ್ನೂ ಕೆಡಿಸಿ ಕೊಳ್ಳದಿರಲಾರನು. ಎಲೈ ರಾವಣನೆ! ರಾಮನು ತಂದೆಯಿಂದ ಹೊರಡಿ ಸಲ್ಪಟ್ಟು ಕಾಡುಪಾಲಾಗಿ ಬಂದಿರುವನೆಂದು ಹೇಳಿದೆಯಲ್ಲವೆ? ಎಂದಿಗೂ ಹಾಗೆಣಿಸಬೇಡ! ಆತನು ತಂದೆಯಿಂದ ಹೊರಡಿಸಲ್ಪಟ್ಟವನೂ ಅಲ್ಲ. ಆತನು ಲುಬ್ಧನೂ ಅಲ್ಲ! ದುಸ್ಸ್ವಭಾವವುಳ್ಳವನೂ ಅಲ್ಲ! ಆತನನ್ನು ಹೀನಕ್ಷತ್ರಿಯ ನೆಂದೂ ನೀನು ತಿಳಿಯಬೇಡ! ಧರ್ಮವಾಗಲಿ, ಗುಣಗಳಾಗಲಿ, ಆತನಲ್ಲಿ ಲೇಶಮಾತ್ರವೂ ಲೋಪಹೊಂದಿರುವುವೆಂದೆಣಿಸಬೇಡ! ಆತನಲ್ಲಿ ಅಂತಹ ಕ್ರೂರಸ್ವಭಾವವೇ ಕಾಣುವುದಿಲ್ಲ. ಕೌಸಲ್ಯೆಗೆ ಆನಂದವರ್ಧಕನಾದ ಆತನು ಲೋಕದಲ್ಲಿ ಯಾವ ಪ್ರಾಣಿಗಳಿಗೂ ಕೇಡನ್ನು ಬಯಸಿದವನಲ್ಲ. ಎಲೈ ರಾಕ್ಷಸೇಶ್ವರನೆ! ಆ ರಾಮನು ಈ ಕಾಡಿಗೆ ಬಂದುದಕ್ಕೆ ಕಾರಣವೇ ಬೇರೆ! ತನ್ನ ತಂದೆಯು ಕೈಕೇಯಿಯ ವಂಚನೆಗೆ ಸಿಕ್ಕಿ ಸತ್ಯಪಾಶಕ್ಕೆ ಕಟ್ಟುಬಿದ್ದಿರು ವುದನ್ನು ನೋಡಿ, ಧರ್ಮಾತ್ಮನಾದ ರಾಮನು ಆ ಕೈಕೇಯಿಯ ಕೋರಿಕೆ ಯನ್ನು ತೀರಿಸುವುದಕ್ಕಾಗಿಯೂ, ತಂದೆಯ ಸತ್ಯವನ್ನು ಕಾಪಾಡುವುದಕ್ಕಾ ಗಿಯೂ, ತಾನೇ ರಾಜ್ಯವನ್ನು ಬಿಟ್ಟುಬಂದು ಹೀಗೆ ಕಾಡಿನಲ್ಲಿ ಸುತ್ತುತ್ತಿರುವನು. ಅವನು ತನ್ನ ತಂದೆಯಾದ ದಶರಥನಿಗೂ, ಬಲತಾಯಿಯಾದ ಕೈಕೇಯಿಗೂ ಪ್ರಿಯವನ್ನುಂಟುಮಾಡುವುದಕ್ಕಾಗಿಯೇ ರಾಜ್ಯವನ್ನೂ, ಭೋಗಗಳನ್ನೂ ಬಿಟ್ಟು ಈ ದಂಡಕಾರಣ್ಯಕ್ಕೆ ಬಂದಿರುವನೇ ಹೊರತು ಬೇರೆಯಲ್ಲ. ಅಯ್ಯಾ!

ಆ ರಾಮನನ್ನು ಸಾಮಾನ್ಯನೆಂದು ತಿಳಿಯಬೇಡ! ಆತನು ಕ್ರೂರನೂ ಅಲ್ಲ! ಮೂರ್ಖನೂ ಅಲ್ಲ! ಇಂದ್ರಿಯಚಾಪಲ್ಯವುಳ್ಳವನೂ ಅಲ್ಲ. ಆದುದರಿಂದ ಚಾಡಿಕಾರರು ಹೇಳುವ ಸುಳ್ಳುಮಾತುಗಳನ್ನೂ, ಕಪಟದ ಮಾತುಗಳನ್ನೂ ಕೇಳಿಕೊಂಡು ನೀನು ಹೀಗೆ ಹೇಳುವುದುಚಿತವಲ್ಲ. ಲೋಕದಲ್ಲಿ ಧರ್ಮವೇ ರಾಮರೂಪವನ್ನೆತ್ತಿ ಹುಟ್ಟಿರುವುದೆಂದು ತಿಳಿ! ಆತನು ಬಹಳ ಸಾಧು ಸ್ವಭಾವವುಳ್ಳವನು! ಸತ್ಯಪರಾಕ್ರಮನು. ದೇವತೆಗಳಿಗೆ ಇಂದ್ರನಂತೆ ಸಮಸ್ತಜನಗಳಿಗೂ ಆತನೇ ಪ್ರಭುವು. ಅವನ ಪತ್ನಿಯಾದ ಸೀತೆಯು ತನ್ನ ಪಾತಿವ್ರತ್ಯಪ್ರಭಾವದಿಂದಲೇ ಸುರಕ್ಷಿತೆಯಾಗಿರುವಳು. ಅಂತಹ ಪತಿವ್ರತೆಯನ್ನು ನೀನು ಬಲಾತ್ಕಾರದಿಂದ ಕದ್ದು ತರುವ ಈ ದುರಾಲೋಚನೆಯನ್ನು ಮಾಡಬಹುದೇ? ಸೂರ್ಯಪ್ರಭೆಯನ್ನು ಕದ್ದುತರಬೇಕೆಂದರೆ ಯಾರಿಂದ ಸಾಧ್ಯವು? ಇತರರಿಂದ ತಡೆಯಲಸಾಧ್ಯವಾದ ಬಾಣಗಳೆಂಬ ಜ್ವಾಲೆಯಿಂದಲೂ, ಖಡ್ಗಚಾಪಗಳೆಂಬ ಕಟ್ಟಿಗೆಗಳಿಂದಲೂ ತುಂಬಿ, ರಣರಂಗದಲ್ಲಿ ಜಾಜ್ವಲ್ಯಮಾನವಾಗಿ ಉರಿಯುತ್ತಿರುವ ಆ ರಾಮನೆಂಬ ಕಾಲಾಗ್ನಿಯನ್ನು ನೀನೇಕೆ ಪ್ರವೇಶಿಸುವೆ? ಆ ರಾಮನನ್ನು ಯಾರೆಂದು ಬಲ್ಲೆ? ಬಾಗಿದ ಬಿಲ್ಲೆಂಬ ದೊಡ್ಡ ಬಾಯನ್ನು ತೆರೆದುಕೊಂಡು, ಅದರಿಂದ ಬಾಣಗಳೆಂಬ ಉರಿಯನ್ನು ಕಕ್ಕುತ್ತ ಲೋಕಸಂಹಾರಾರ್ಥವಾಗಿ ಕೋಪಗೊಂಡುಬರುತ್ತಿರುವ ಪಾಶಹಸ್ತನಾದ ಕಾಲಾಂತಕನೇ ಈ ರೂಪದಿಂದ ಶತ್ರುಸಂಹಾರಕ್ಕಾಗಿ ಬರುತ್ತಿರುವನೆಂದು ತಿಳಿ! ಅಯ್ಯಾ ರಾವಣಾ! ಈಗ ನೀನು ನಿನ್ನ ರಾಜ್ಯವನ್ನೂ ಭೋಗವನ್ನೂ ಪ್ರಾಣವನ್ನೂ ಕಳೆದುಕೊಂಡು, ಅವನ ಬಾಯಲ್ಲಿ ಬೀಳುವುದಕ್ಕೆ ಹೋಗುವುದುಂಟೆ? ಇದು ನಿನಗೆ ತರವಲ್ಲ. ಸೀತಾನಾಯಕನಾದ ಆತನ ಪ್ರಭಾವವು ಅಪ್ರಮೇಯವಾದುದಲ್ಲವೆ? ಆತನ ಮಹಾಧನುಸ್ಸಿನ ರಕ್ಷಣೆಯಲ್ಲಿರುವ ಜನಕಪುತ್ರಿಯನ್ನು ಕದ್ದುತರಬೇಕೆಂದರೆ ನಿನಗೆ ಸಾಧ್ಯವೆ! ಸಿಂಹದಂತೆ ವಿಶಾಲವಕ್ಷಸ್ಥಲವುಳ್ಳ ಪುರುಷ ಸಿಂಹನಾದ ರಾಮನು, ಆ ರಮಣಿಯನ್ನು ತನ್ನ ಪ್ರಾಣಕ್ಕಿಂತಲೂ ಪ್ರಿಯವಾಗಿ ಪೋಷಿಸುತ್ತಿರುವನು. ಆಕೆಯೂ ಯಾವಾಗಲೂ ತನ್ನ ಪತಿಯಾದ ರಾಮನನ್ನೇ ಅನುವರ್ತಿಸುತ್ತಿರುವಳು. ಉರಿಯುತ್ತಿರುವ ಅಗ್ನಿಜ್ವಾಲೆಯನ್ನು ಕೈಯಿಂದ ಹಿಡಿಯುವಂತೆ, ಮಹಾತೇಜಸ್ವಿಯಾದ ಆ ರಾಮನ ಪ್ರಿಯಪತ್ನಿಯನ್ನು ನೀನು ಮುಟ್ಟಿ ಬದುಕಬಲ್ಲೆಯಾ! ವ್ಯರ್ಥವಾದ ಈ ಪ್ರಯತ್ನದಿಂದ ನಿನಗೆ ಫಲವೇನು?

ಯುದ್ಧರಂಗದಲ್ಲಿ ನೀನು ಆ ರಾಮನ ಕಣ್ಣಿಗೆ ಬಿದ್ದರೆ ಸಾಕು! ಅದೇ ನಿನ್ನ ಪ್ರಾಣಗಳಿಗೆ ಕೊನೆಯೆಂದು ತಿಳಿ! ಮುಖ್ಯವಾಗಿ ನೀನು ನಿನ್ನ ಪ್ರಾಣವನ್ನೂ, ಇತರರಿಗೆ ದುರ್ಲಭವಾದ ನಿನ್ನ ರಾಜ್ಯಭೋಗಾದಿಗಳನ್ನೂ ಇನ್ನೂ ಬಹುಕಾಲದ ವರೆಗೆ ಅನುಭವಿಸಬೇಕೆಂದಿದ್ದರೆ, ಆ ರಾಮನಿಗೆ ಕೇಡನ್ನು ಬಯಸಬೇಡ! ಮೊದಲು ಧರ್ಮಾತ್ಮರಾದ ವಿಭೀಷಣಾದಿ ಮಂತ್ರಿಗಳೊಡನೆ ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸು! ಆಮೇಲೆ ನಿನ್ನ ಮನಸ್ಸಿನಲ್ಲಿಯೂ ಚೆನ್ನಾಗಿ ವಿಚಾರಿಸು! ಅದರ ಗುಣದೋಷಗಳನ್ನೂ, ಬಲಾಬಲಗಳನ್ನೂ ನಿರ್ಣಯಿಸಿ ಕೊಂಡು, ನಿನಗೂ ಮತ್ತು ರಾಮನಿಗೂ ಇರುವ ಶಕ್ತಿತಾರತಮ್ಯವನ್ನೂ ವಿಮರ್ಶಿಸು. ಮುಂದೆ ಬರಬಹುದಾದ ಹಾನಿವೃದ್ಧಿಗಳನ್ನೂ ಚಿಂತಿಸು! ಆಮೇಲೆ ನಿನಗೆ ಯುಕ್ತತೋರಿದಂತೆ ನಡೆಸು. ನೀನು ರಾಮನೊಡನೆ ಯುದ್ಧಕ್ಕೆ ನಿಲ್ಲುವುದು ನನಗಂತೂ ಯುಕ್ತವೆಂದು ತೋರುವುದಿಲ್ಲ. ಅಯ್ಯಾ ರಾವಣಾ! ನಾನು ಸಾರಿಸಾರಿಗೂ ಹೇಳುವೆನು. ಈ ದುರಾಲೋಚನೆಯನ್ನು ಬಿಡು, ಯುಕ್ತಿಯುಕ್ತವಾಗಿಯೂ ಕಾಲೋಚಿತವಾಗಿಯೂ ಇರುವ ನನ್ನ ಬುದ್ಧಿವಾದ ಗಳನ್ನು ಕೇಳು" ಎಂದನು.

ಇಲ್ಲಿಗೆ ಮೂವತ್ತೇಳನೆಯ ಸರ್ಗವು.

---

{ ಹಿಂದೆ ಬಾಲನಾದ ರಾಮನಿಂದ ತನಗುಂಟಾದ ಸಂಕಟವನ್ನು ಮಾರೀಚನು ರಾವಣನೊಡನೆ ಹೇಳಿದುದು. }

"ಅಯ್ಯಾ! ನಾನು ಹಿಂದೆ ಒಂದಾನೊಂದು ಕಾಲದಲ್ಲಿ ವೀರ್ಯದ ಕೆಚ್ಚಿನಿಂದ ಈ ಭೂಮಿಯನ್ನೆಲ್ಲಾ ಸುತ್ತುತಿದ್ದೆನು. ಆಗ ನನಗೆ ಸಾವಿರಾನೆಗಳ ಬಲವಿತ್ತು. ನನ್ನ ಆಕಾರವಾದರೋ ದೊಡ್ಡ ಬೆಟ್ಟದಂತೆಯೇ ತೋರುತಿತ್ತು. ಕಾಳಮೇಘದಂತೆ ಕಪ್ಪಾದ ಮೈಬಣ್ಣವುಳ್ಳವನಾಗಿ ಸುವರ್ಣ ಕುಂಡಲಗಳನ್ನೂ, ಕಿರೀಟವನ್ನೂ ಧರಿಸಿ, ಕೈಯ್ಯಲ್ಲಿ ಪರಿಘಾಯುಧವನ್ನು ಹಿಡಿದು ಲೋಕದ ಜನರಿಗೆಲ್ಲಾ ಭಯವನ್ನು ಹುಟ್ಟಿಸುವಂತಿದ್ದೆನು. ಹೀಗೆ ಭಯಂಕರ ಸ್ವರೂಪ ದಿಂದ ಕೂಡಿದ ನಾನು, ಋಷಿಮಾಂಸವನ್ನು ಭಕ್ಷಿಸುತ್ತ, ದಂಡಕಾರಣ್ಯದಲ್ಲಿ

ತಿರುಗುತ್ತಿದ್ದೆನು. ಧರ್ಮಾತ್ಮನಾದ ವಿಶ್ವಾಮಿತ್ರ ಮಹಾಮುನಿಯು ನನಗಂಜಿ ದವನಾಗಿ ದಶರಥರಾಜನ ಬಳಿಗೆ ಹೋಗಿ "ಎಲೈ ರಾಜೇಂದ್ರನೆ! ಈಗ ನನಗೆ ಮಾರೀಚನೆಂಬ ರಾಕ್ಷಸನಿಂದ ಮಹತ್ತರವಾದ ಭಯವುಂಟಾಗಿರುವುದು! ಈ ಪರ್ವಕಾಲದಲ್ಲಿ ನನ್ನ ಯಜ್ಞವನ್ನು ರಕ್ಷಿಸುವುದಕ್ಕಾಗಿ ನಿನ್ನ ಮಗನಾದ ರಾಮನನ್ನು ನನ್ನೊಡನೆ ಕಳುಹಿಸಿಕೊಡಬೇಕು" ಎಂದು ಪ್ರಾರ್ಥಿಸಿದನು. ಇದನ್ನು ಕೇಳಿ ಧರ್ಮಬುದ್ಧಿಯುಳ್ಳ ದಶರಥನು, ಮುನಿಶ್ರೇಷ್ಠನಾದ ವಿಶ್ವಾ-ಮಿತ್ರನನ್ನು ಕುರಿತು "ಎಲೈ ಮಹರ್ಷಿಯೆ! ನನ್ನ ಮಗನಾದ ರಾಮನು ಇನ್ನೂ ಹನ್ನೆರಡು ವರ್ಷದ ಬಾಲನು. ಅವನಿಗೆ ಅಸ್ತ್ರವಿದ್ಯೆಯಲ್ಲಿಯೂ ಚೆನ್ನಾಗಿ ಪರಿಚಯವಿಲ್ಲ. ಆದುದರಿಂದ ನನ್ನ ಚತುರಂಗ ಸೈನ್ಯವೆಲ್ಲವನ್ನೂ ಸಂಗಡ ಕರೆದುಕೊಂಡು ನಾನೇ ನಿನ್ನೊಡನೆ ಬರುವೆನು. ನಿನಗೆ ಶತ್ರುಗಳಾದ ಆ ರಾಕ್ಷಸ ರೆಲ್ಲರನ್ನೂ ನಿನ್ನ ಇಷ್ಟಾನುಸಾರವಾಗಿ ನಾನೇ ಕೊಂದು ಬರುವೆನು" ಎಂದನು. ಇದನ್ನು ಕೇಳಿ ಆ ಋಷಿಯು ರಾಜನನ್ನು ಕುರಿತು, "ಅಯ್ಯಾ ರಾಜನೆ! ಲೋಕದಲ್ಲಿ ಆ ರಾಕ್ಷಸನನ್ನು ಅಡಗಿಸುವುದಕ್ಕೆ ರಾಮನು ಹೊರತು ಬೇರೆ ಯಾವ ಸೈನ್ಯವೂ ಸಮರ್ಥವಾಗಲಾರದು. ಆದರೆ ನೀನು ಕೈಲಾಗದವನೆಂದು ನನ್ನ ಅಭಿಪ್ರಾಯವಲ್ಲ. ನೀನು ಅನೇಕ ಯುದ್ಧಗಳಲ್ಲಿ ದೇವತೆಗಳನ್ನು ಕೂಡ ಅಪಾಯದಿಂದ ತಪ್ಪಿಸಿರುವೆ. ನೀನು ನಡೆಸಿರತಕ್ಕ ಸಾಹಸಕಾರ್ಯಗಳು ಮೂರು ಲೋಕದಲ್ಲಿಯೂ ಪ್ರಖ್ಯಾತವಾಗಿರುವುವು. ನಿನ್ನಲ್ಲಿ ದೊಡ್ಡ ಸೇನೆ ಯಿರುವುದೂ ನಿಜವು. ಆ ಸೈನ್ಯವೂ ನಿನ್ನೊಡನೆ ಇಲ್ಲಿಯೇ ಇರಲಿ! ನಿನ್ನ ಮಗನಾದ ರಾಮನು ಬಾಲನಾಗಿದ್ದರೂ ಮಹಾತೇಜಸ್ವಿಯು. ಮಾರೀಚನನ್ನು ನಿಗ್ರಹಿಸುವುದಕ್ಕೆ ಆತನೇ ಸಮರ್ಥನು. ಆದುದರಿಂದ ನಾನು ರಾಮನನ್ನೇ ಕರೆದುಕೊಂಡು ಹೋಗುವೆನು. ನಿನಗೆ ಶುಭವಾಗಲಿ!" ಎಂದು ಹೇಳಿ ವಿಶ್ವಾಮಿತ್ರನು ರಾಮನನ್ನು ಬಿಡದೆ ತನ್ನೊಡನೆ ಕರೆದುಕೊಂಡು, ಸಂತೋಷ ದಿಂದ ತನ್ನಾಶ್ರಮಕ್ಕೆ ಬಂದನು. ಆಗ ದಂಡಕಾರಣ್ಯದಲ್ಲಿ ಯಾಗದೀಕ್ಷಿತನಾಗಿ ನಿಂತ ಆ ವಿಶ್ವಾಮಿತ್ರನಿಗೆ ರಾಮನು ಬೆಂಗಾವಲಾಗಿ ನಿಂತು, ಚಿತ್ರವಿಚಿತ್ರವಾಗಿ ತನ್ನ ಧನುಸ್ಸನ್ನು ಟಂಕಾರಮಾಡುತ್ತ ಅವನ ಸಮೀಪದಲ್ಲಿಯೇ ಇರುತಿದ್ದನು. ಇನ್ನೂ ಆಗ ರಾಮನ ದೇಹದಲ್ಲಿ ಪ್ರಾಯದ ಗುರುತುಗಳೊಂದಾದರೂ ಹುಟ್ಟಿರ ಲಿಲ್ಲ. ಆದರೆ ಅವನ ಮುಖದಲ್ಲಿ ಒಂದು ಪ್ರಸನ್ನವಾದ ಕಾಂತಿವಿಶೇಷವು

ತೋರುತಿತ್ತು. ಅವನ ಕಣ್ಣುಗಳು ತಾವರೆಯೆಸಳಿನಂತಿದ್ದುವು. ಒಂದೇ ಬಟ್ಟೆಯನ್ನುಟ್ಟು, ಕೈಯಲ್ಲಿ ಧನುಸ್ಸನ್ನು ಹಿಡಿದು, ಶಿಖೆಯನ್ನು ಮೇಲಕ್ಕೆ ಕಟ್ಟಿ, ಸ್ವರ್ಣಮಾಲಿಕೆಯನ್ನು ಕೊರಲಿಗೆ ಹಾಕಿಕೊಂಡು, ಜ್ವಲಿಸುತ್ತಿರುವ ತನ್ನ ದಿವ್ಯತೇಜಸ್ಸಿನಿಂದ ಆ ದಂಡಕಾರಣ್ಯವೆಲ್ಲವನ್ನೂ ಬೆಳಗುತಿದ್ದನು. ನೋಡುವವರ ಕಣ್ಣಿಗೆ ಉದಿಸಿ ಬಂದಿರುವ ಬಾಲಚಂದ್ರನಂತೆಯೇ ತೋರುತಿದ್ದನು. ಈ ಸಂದರ್ಭದಲ್ಲಿ ಮೇಘದಂತೆ ಕಪ್ಪು ಬಣ್ಣದ ಮೈಯುಳ್ಳವನಾಗಿಯೂ, ಉರಿಯುವ ಕೆಂಡದಂತಿರುವ ಚಿನ್ನದ ಹತ್ತು ಕಡುಕುಗಳುಳ್ಳವನಾಗಿಯೂ ಇರುವ ನಾನು, ವರದ ಬಲದಿಂದ ಸಾವಿರಾನೆಗಳ ಬಲವನ್ನು ಹೊಂದಿ, ಆ ಕೆಚ್ಚಿನಿಂದ ವಿಶ್ವಾಮಿತ್ರಾಶ್ರಮಕ್ಕೆ ಬಂದೆನು. ಆಯುಧವನ್ನೆತ್ತಿ ಹಿಡಿದು ಅತಿ ವೇಗದಿಂದ ಬರುತ್ತಿದ್ದ ನನ್ನನ್ನು ರಾಮನೂ ನೋಡಿದನು. ನನ್ನ ಭೀಕರ ಸ್ವರೂಪವನ್ನು ನೋಡಿಯೂ ಆ ರಾಮನು ಸ್ವಲ್ಪವೂ ಹೆದರದೆ, ತನ್ನ ಧನುಸ್ಸಿಗೆ ನಾಣೇರಿಸಿ ಸಿದ್ಧವಾಗಿ ನಿಂತನು. ಆಗ ನಾನಾದರೋ ಅಜ್ಞಾನದಿಂದ ಆ ರಾಮನಲ್ಲಿ ಕೇವಲ ಬಾಲನೆಂಬ ಅಲಕ್ಷ್ಯಭಾವವನ್ನಿಟ್ಟು, ವೇಗದಿಂದ ಮುಂದೆ ಹೋಗಿ ವಿಶ್ವಾಮಿತ್ರನ ಯಜ್ಞವೇದಿಕೆಯಮೇಲೆ ನುಗ್ಗಿದೆನು. ಆಗ ರಾಮನೇ ಶತ್ರುಸಂಹಾರಕವಾದ ತನ್ನ ತೀಕ್ಷ್ಣಬಾಣವನ್ನು ನನ್ನ ಮೇಲೆ ಪ್ರಯೋಗಿಸಿದನು. ಆ ಬಾಣವು ನನ್ನನ್ನು ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ನೂರುಯೋಜನಗಳ ದೂರದಿಂದಾಚೆಗೆ ತಳ್ಳಿತು. ವೀರನಾದ ರಾಮನು ಆಗಲೇ ನನ್ನನ್ನು ಕೊಲ್ಲುವುದಕ್ಕಿಷ್ಟಪಡದೆ ಜೀವದಿಂದುಳಿಸಿರುವನು. ಆದರೆ, ಆಗ ನಾನು ಅವನ ಬಾಣವೇಗಕ್ಕೆ ಸಿಕ್ಕಿ ಪ್ರಜ್ಞೆ ತಪ್ಪಿ, ಆಳವಾದ ಸಮುದ್ರದಲ್ಲಿ ಬಿದ್ದುಬಿಟ್ಟೆನು. ಬಹಳ ಹೊತ್ತಿನಮೇಲೆ ಪುನಃ ಪ್ರಜ್ಞೆಯನ್ನು ತಂದುಕೊಂಡು ಲಂಕೆಗೆ ಹಿಂತಿರುಗಿ ಹೋದೆನು. ಹೀಗೆ ನಾನೊಬ್ಬನು ತಲೆಯನ್ನು ತಪ್ಪಿಸಿಕೊಂಡು ಬಂದೆನು. ನನ್ನೊಡನಿದ್ದ ಇತರ ರಾಕ್ಷಸರೆಲ್ಲರನ್ನೂ, ಶಸ್ತ್ರಾಸ್ತ್ರಗಳಲ್ಲಿ ಚೆನ್ನಾಗಿ ಬಳಕೆಯಿಲ್ಲದ ಹುಡುಗನಾದ ಆ ರಾಮನೊಬ್ಬನೇ ಕೊಂದುಬಿಟ್ಟನು. ಅಯ್ಯಾ ರಾವಣಾ! ನಾನು ಇಷ್ಟು ವಿಧವಾಗಿ ಹೇಳಿ ತಡೆದರೂ ನೀನು ಲಕ್ಷ್ಯಮಾಡದೆ ಆ ರಾಮನೊಡನೆ ಯುದ್ಧಕ್ಕೆ ನಿಲ್ಲುವೆಯಾದರೆ ಶೀಘ್ರದಲ್ಲಿಯೇ ನಿನಗೆ ಮಹಾಭಯಂಕರವಾದ ವಿಪತ್ತು ಸಂಭವಿಸದೆ ಬಿಡದು! ಇದು ನಿಜವು! ನೀನು ಕೆಡುವುದೊಂದೇ ಅಲ್ಲದೆ, ಈಗ ನಾನಾವಿಧವಾದ ರತಿಕ್ರೀಡೆಗಳಿಂದಲೂ,

ಉತ್ಸವಗಳಿಂದಲೂ, ವಿನೋದಗೋಷ್ಠಿಗಳಿಂದಲೂ, ಆನಂದಿಸುತ್ತಿರುವ ಸಮಸ್ತ ರಾಕ್ಷಸರಿಗೂ ಕೂಡ ಮಹಾವಿಪತ್ತನ್ನು ತಂದಿಟ್ಟಹಾಗಾಗುವುದು. ಮೇಲು ಮನೆಗಳಿಂದಲೂ, ಉಪ್ಪರಿಗೆಗಳಿಂದಲೂ ನಿಬಿಡವಾಗಿ, ನಾನಾ ರತ್ನಗಳಿಂದಲಂ ಕರಿಸಲ್ಪಟ್ಟ ನಮ್ಮ ಲಂಕಾನಗರಿಯೂ ಕೂಡ, ಸೀತಾನಿಮಿತ್ತವಾಗಿ ಹಾಳು ಬೀಳುವುದನ್ನು ನಿನ್ನ ಕಣ್ಣುಗಳಿಂದ ನೀನೇ ನೋಡಬೇಕಾಗುವುದು. ಕೇವಲ ಸಾಧುಜಂತುಗಳಾದ ಮತ್ಸ್ಯಗಳೂ ಕೂಡ, ಸರ್ಪಗಳಿಗೆ ವಾಸಸ್ಥಾನವಾದ ಮಡುವಿನಲ್ಲಿರುವುದರಿಂದ, ಗರುಡನ ಬಾಯಿಗೆ ತುತ್ತಾಗುವಂತೆ, ಪಾಪಕಾರ್ಯ ವನ್ನೇ ತಿಳಿಯದ ಶುದ್ಧಾತ್ಮರೂ, ಪಾಪಿಗಳ ಸಹವಾಸದಿಂದ ಅವರ ಪಾಪ ದೋಷಕ್ಕೆ ಸಿಕ್ಕಿ ನಾಶಹೊಂದುವರು. ದಿವ್ಯಚಂದನವನ್ನು ಮೈಗೆ ಲೇಪಿಸಿ ಕೊಂಡು, ದಿವ್ಯಾಭರಣದಿಂದಲಂಕರಿಸಲ್ಪಟ್ಟವರಾಗಿ, ಈಗ ಸಂತೋಷದಿಂದಿ ರುವ ನಮ್ಮ ಕಡೆಯ ರಾಕ್ಷಸರೆಲ್ಲರೂ ಈ ನಿನ್ನ ಅಕೃತ್ಯದ ದೋಷದಿಂದ ರಾಮಬಾಣಕ್ಕೆ ಸಿಕ್ಕಿ ಹತರಾಗಿ ಬೀಳುವುದನ್ನು ನೀನೇ ನೋಡಬೇಕಾಗುವುದು. ಅಥವಾ ಕೆಲವರು ರಾಮಬಾಣಕ್ಕೆ ಸಿಕ್ಕದೆ ತಲೆಯನ್ನು ತಪ್ಪಿಸಿಕೊಂಡರೂ, ಅವರು ಅನಾಥರಾಗಿ ದಿಕ್ಕುತೋರದೆ ನಾನಾ ದಿಶೆಗಳಿಗೂ ಓಡಿ, ತಮ್ಮ ತಮ್ಮ ಹೆಂಡಿರೊಡನೆ ಅಲೆದಾಡುತ್ತಿರುವುದನ್ನೂ ನೋಡುವೆ! ಅಯ್ಯೋ ರಾವಣಾ! ನಮ್ಮ ಲಂಕಾನಗರಿಯೆಲ್ಲವೂ ರಾಮನ ಬಾಣಪರಂಪರೆಯಿಂದುಂಟಾದ ಅಗ್ನಿ ಜ್ವಾಲೆಗೆ ಸಿಕ್ಕಿ, ಅಲ್ಲಿನ ಮನೆಗಳೆಲ್ಲವೂ ಆ ಉರಿಯಿಂದ ದಗ್ಧವಾಗುವುದನ್ನೂ ನೀನೇ ನೋಡಬೇಕಾಗುವುದು. ಇದರಲ್ಲಿ ಸಂಶಯವಿಲ್ಲ! ಲೋಕದಲ್ಲಿ ಪರಸ್ತ್ರೀಯ ರನ್ನು ಮುಟ್ಟುವುದಕ್ಕಿಂತಲೂ ಕ್ರೂರವಾದ ಪಾಪಕೃತ್ಯವು ಬೇರೊಂದೂ ಇಲ್ಲವು. ಅಯ್ಯೋ! ಈಗ ನೀನು ಮದುವೆಯಾಗಿರುವ ಉತ್ತಮಸ್ತ್ರೀಯರೇ ಸಾವಿರಾರು ಮಂದಿಯಿರುವರಲ್ಲವೆ? ಆ ಸ್ತ್ರೀಯರೆಲ್ಲರನ್ನೂ ಬಿಟ್ಟು ಪರಸ್ತ್ರೀಯ ರಲ್ಲಿ ನೀನೇಕೆ ಈ ದುರಾಸೆಯನ್ನು ಮಾಡುವೆ? ನೀನು ಸ್ವಭಾರ್ಯಾಸಕ್ತ ನಾಗಿಯೇ ಇದ್ದು ನಿನ್ನ ವಂಶವನ್ನು ಕಾಪಾಡಿಕೊಳ್ಳುವವನಾಗು! ನಿನ್ನ ಮಾನವನ್ನೂ, ಐಶ್ವರ್ಯಸಮೃದ್ಧಿಯನ್ನೂ, ರಾಜ್ಯವನ್ನೂ, ಪ್ರಿಯವಾದ ಜೀವಿತವನ್ನೂ ಸ್ಥಿರವಾಗಿ ಪಾಲಿಸು. ರೂಪಸಂಪತ್ತಿಯುಳ್ಳ ನಿನ್ನ ಪತ್ನಿಯ ರನ್ನೂ, ನಿನ್ನ ಮಿತ್ರವರ್ಗಗಳನ್ನೂ ಕೂಡಿ, ನೀನು ಇನ್ನೂ ಬಹುಕಾಲದವರೆಗೆ ಸೌಖ್ಯದಿಂದಿರಬೇಕಾಗಿದ್ದರೆ ರಾಮನಿಗೆ ಮಾತ್ರ ಕೇಡನ್ನು ಬಯಸಬೇಡ!

ನಿನ್ನ ಶ್ರೇಯಃಕಾಂಕ್ಷಿಯಾಗಿ ನಾನು ನಿನಗೆ ಇಷ್ಟು ಮಾತನ್ನು ಹೇಳಿ ತಡೆದರೂ ಕೇಳದೆ, ನೀನು ಬಲಾತ್ಕಾರದಿಂದ ಸೀತೆಯನ್ನು ಮುಟ್ಟಿದೆಯಾದರೆ, ರಾಮ ಬಾಣಕ್ಕೆ ಸಿಕ್ಕಿ ಸತ್ತು, ಬಂಧುಬಳಗದೊಡನೆ ಯಮಪುರಿಗೆ ಸೇರುವುದರಲ್ಲಿ ಸಂದೇಹವಿಲ್ಲ " ಎಂದನು.

ಇಲ್ಲಿಗೆ ಮೂವತ್ತೆಂಟನೆಯ ಸರ್ಗವು.

---

{ ಮಾರೀಚನು ರಾವಣನಿಗೆ ಬೇರೊಂದು ವೃತ್ತಾಂತದಿಂದ ರಾಮನ ಮಹಿಮೆಯನ್ನು ತಿಳಿಸಿದುದು. }

" ಅಯ್ಯಾ ! ರಾವಣಾ ! ನಾನು ಆ ಯುದ್ಧದಲ್ಲಿ ರಾಮನಿಂದ ಹೇಗೋ ತಲೆಯನ್ನು ತಪ್ಪಿಸಿಕೊಂಡು ಬದುಕಿ ಬಂದೆನಲ್ಲವೆ? ಈಗ ಕೆಲವು ದಿನಗಳ ಕೆಳಗೆ ನಡೆದ ಮತ್ತೊಂದು ವೃತ್ತಾಂತವನ್ನೂ ಹೇಳುವೆನು ಕೇಳು. ನಾನು ಹೇಳುವಾಗ ಅಡ್ಡಮಾತುಗಳನ್ನಾಡದೆ ಸಾವಧಾನವಾಗಿ ಗಮನಿಸು. ನಾನು ಮೊದಲು ಆ ರಾಮನ ಕೈಗೆ ಸಿಕ್ಕಿ ಅಷ್ಟು ದುರವಸ್ಥೆಗೆ ಈಡಾಗಿದ್ದರೂ ಆತನಲ್ಲಿ ನನಗಿದ್ದ ದ್ವೇಷಬುದ್ಧಿಯು ಹೋಗಲಿಲ್ಲ. ಮೃಗರೂಪವುಳ್ಳ ರಾಕ್ಷಸರಿಬ್ಬರೊಡನೆ ಸೇರಿ ಪುನಃ ದಂಡಕಾರಣ್ಯವನ್ನು ಪ್ರವೇಶಿಸಿದೆನು. ನಾನೂ ಒಂದು ಮೃಗಸ್ವರೂಪವನ್ನೇ ಧರಿಸಿ ಉರಿಯನ್ನು ಕಕ್ಕುವಂತಿರುವ ನಾಲಿಗೆಯುಳ್ಳವನಾಗಿ, ದೊಡ್ಡ ದೇಹವನ್ನು ಧರಿಸಿ, ತೀಕ್ಷ್ಣವಾದ ಕೋರೆಹಲ್ಲುಗಳುಳ್ಳವನಾಗಿ, ಬಹಳ ಬಲಾಢ್ಯನಾಗಿ, ಆ ದಂಡಕಾರಣ್ಯದಲ್ಲಿ ಮಾಂಸಾಹಾರಿಯಾಗಿ ಸುತ್ತುತ್ತಿದ್ದೆನು. ಅಗ್ನಿಹೋತ್ರಗಳಲ್ಲಿಯೂ, ತೀರ್ಥಗಳಲ್ಲಿಯೂ, ದೇವಗೃಹಗಳಲ್ಲಿಯೂ ವೃಕ್ಷಗಳಲ್ಲಿಯೂ ಪ್ರವೇಶಿಸಿ, ಅಲ್ಲಲ್ಲಿದ್ದ ತಾಪಸರನ್ನು ಭಂಗಪಡಿಸುತ್ತಾ ಅತ್ಯಂತ ಘೋರಸ್ವರೂಪವುಳ್ಳವನಾಗಿಯೇ ಸಂಚರಿಸುತಿದ್ದೆನು. ಆ ದಂಡಕಾರಣ್ಯದಲ್ಲಿ ಧರ್ಮಚಾರಿಗಳಾದ ಅನೇಕ ಋಷಿಗಳನ್ನು ಕೊಂದು, ಅವರ ರಕ್ತವನ್ನು ಕುಡಿದು, ಅವರ ಮಾಂಸವನ್ನೇ ಭಕ್ಷಿಸಿ ಅದರಿಂದಲೇ ಜೀವಿಸುತಿದ್ದೆನು. ಹೀಗೆ ಅತಿಕ್ರೂರನಾಗಿ, ಕಾಡಿನಲ್ಲಿ ಋಷಿಗಳೆಲ್ಲರಿಗೂ ಭಯವನ್ನು ಹುಟ್ಟಿಸುತ್ತ, ಅವರ ರಕ್ತಪಾನದಿಂದಲೇ ಕೊಬ್ಬಿದ ಮೈಯುಳ್ಳವನಾಗಿ,

ಅವರ ಧರ್ಮಗಳನ್ನು ಕೆಡಿಸುತ್ತಾ ಸ್ವೇಚ್ಛೆಯಿಂದ ತಿರುಗುತ್ತಿರುವಾಗ, ಅಲ್ಲಿಯೂ ತಾಪಸಸ್ವರೂಪದಿಂದ ಧರ್ಮಾಚರಣೆಯಲ್ಲಿದ್ದ ಈ ರಾಮನನ್ನೇ ಕಂಡೆನು. ಮಹಾಭಾಗೆಯಾದ ಸೀತೆಯೂ ಮಹಾರಥನಾದ ಲಕ್ಷ್ಮಣನೂ ಆ ರಾಮನೊಡನೆಯೇ ಇರುತ್ತಿದ್ದರು. ತಪಸ್ವಿಯಾಗಿ, ಆಹಾರನಿಯಮವುಳ್ಳವನಾಗಿ, ಸಮಸ್ತಪ್ರಾಣಿಗಳಿಗೂ ಹಿತವನ್ನುಂಟುಮಾಡುವುದರಲ್ಲಿಯೇ ನಿರತನಾಗಿ, ಕಾಡಿನಲ್ಲಿ ಸುತ್ತುತ್ತಿದ್ದ ಮಹಾಬಲಾಢ್ಯನಾದ ಆ ರಾಮನನ್ನು ನೋಡಿ ನಾನು ಪುನಃ ಅವನನ್ನು ಕೋಪದಿಂದ ಇದಿರಿಸಲಾರಂಭಿಸಿದೆನು. ಹಿಂದೆ ನಾನು ಅವನಿಂದ ಭಂಗವನ್ನು ಹೊಂದಿದ್ದರೂ ಈಗ ಅವನು ತಾಪಸ ವೇಷದಿಂದಿರುವುದನ್ನು ಕಂಡು ಅಶಕ್ತನಾಗಿರಬಹುದೆಂದೆಣಿಸಿ, ಪೂರ್ವ ವೈರವನ್ನೇ ಸ್ಮರಿಸಿಕೊಂಡು ತೀಕ್ಷ್ಣವಾದ ಕೊಂಬುಗಳಿಂದ ಕೂಡಿದ ಆ ಮೃಗಾಕಾರದಿಂದಲೇ ಅತಿಕೋಪದೊಡನೆ ಆತನ ಮೇಲೆ ನುಗ್ಗಿದೆನು. ಹಿಂದೆ ಆತನಿಂದ ನನಗುಂಟಾದ ಭಂಗವು ನನ್ನ ಸ್ಮರಣೆಗೆ ಬಂದಿದ್ದರೂ ಬುದ್ಧಿಯಿಲ್ಲದವನಾಗಿ ಆತನನ್ನು ಕೊಲ್ಲಬೇಕೆಂದೇ ಹೋದೆನು. ಆಗ ರಾಮನು ತನ್ನ ಧನುಸ್ಸನ್ನು ಆಕರ್ಣಾಂತವಾಗಿ ಎಳೆದು, ಶತ್ರುಸಂಹಾರಕಗಳಾದ ಮೂರು ತೀಕ್ಷ್ಣಬಾಣಗಳನ್ನು ತೆಗೆದು, ಅದರಲ್ಲಿ ಸಂಧಾನಮಾಡಿ ಪ್ರಯೋಗಿಸಿದನು. ಗರುಡನಂತೆಯೂ, ವಾಯುವಿನಂತೆಯೂ ಮಹಾ ವೇಗವುಳ್ಳವುಗಳಾಗಿ, ವಜ್ರಸಮಾನಗಳಾಗಿ, ಭಯಂಕರವಾದ ಧ್ವನಿಯುಳ್ಳವುಗಳಾಗಿ, ಬಗ್ಗಿದ ಗಿಣ್ಣುಗಳುಳ್ಳವುಗಳಾಗಿ, ಇದುವರೆಗೆ ಎಷ್ಟೋ ಶತ್ರುಗಳ ರಕ್ತವನ್ನು ಕುಡಿದು ಕೊಬ್ಬಿದ ಆ ಮೂರು ಬಾಣಗಳೂ ಒಟ್ಟಾಗಿ ಸೇರಿ ಬರುತಿದ್ದುವು. ನಾನಾದರೋ ಮೊದಲೇ ರಾಮನ ಪರಾಕ್ರಮವನ್ನು ಚೆನ್ನಾಗಿ ಬಲ್ಲೆನು. ಆತನ ಬಾಣದಿಂದುಂಟಾದ ಭಯವನ್ನೂ ನಾನು ಮೊದಲೇ ಅನುಭವಿಸಿ ತಿಳಿದಿರುವೆನು. ಆದುದರಿಂದ ಹೇಗೋ ತಲೆ ತಪ್ಪಿಸಿಕೊಂಡು ಓಡಿಹೋದೆನು. ಇದನ್ನು ತಿಳಿಯದ ಆ ರಾಕ್ಷಸರಿಬ್ಬರೂ ಆ ಬಾಣಗಳಿಂದಲೇ ಹತರಾದರು. ಹೀಗೆ ನಾನು ರಾಮಬಾಣಕ್ಕೆ ತಪ್ಪಿಸಿಕೊಂಡು ಎಷ್ಟೋ ಪ್ರಯತ್ನದಿಂದ ಬದುಕಿಬಂದು, ದುಷ್ಕೃತ್ಯಗಳಲ್ಲಿ ಜಿಹಾಸೆಯನ್ನು ಹೊಂದಿ, ಇಲ್ಲಿ ತಪೋನಿಷ್ಠನಾಗಿ, ಮನಸ್ಸನ್ನು ಸ್ಥಿರಪಡಿಸಿಕೊಂಡಿರುವೆನು. ಅಯ್ಯಾ, ರಾವಣಾ! ನಾನೇನು ಹೇಳಲಿ! ಈಗಲೂ ನನಗೆ ಈ ರಾಮನೆಂಬ ಬೆಜ್ಜರವು ತಪ್ಪಿದುದಿಲ್ಲ! ಇಲ್ಲಿನ ಮರಮರಗಳಲ್ಲಿಯೂ ಕೃಷ್ಣಾಜಿನವನ್ನೂ

ನಾರುಮುಡಿಯನ್ನೂ ಧರಿಸಿ, ಕೈಯಲ್ಲಿ ಧನುಸ್ಸನ್ನು ಹಿಡಿದು ಪಾಶಹಸ್ತನಾದ ಯಮನಂತೆ ಆ ರಾಮನೇ ನನ್ನ ದೃಷ್ಟಿಗೆ ಬೀಳುತ್ತಿರುವನು! ಸುತ್ತಲೂ ಸಾವಿರಾರುಮಂದಿ ರಾಮರೇ ತುಂಬಿರುವಂತೆ ತೋರುತ್ತಿರುವುದು! ನನ್ನ ಭಯಕ್ಕೆ ಪಾರವೇ ಇಲ್ಲದಿರುವುದು. ಮುಖ್ಯವಾಗಿ ಈ ಅರಣ್ಯ ಪ್ರದೇಶವೆಲ್ಲವೂ ರಾಮಮಯವಾಗಿರುವಂತೆಯೇ ತೋರುವುದು. ಎಲೈ ರಾಕ್ಷಸೇಂದ್ರನೇ! ರಾಮನಿಲ್ಲದ ಕಡೆಯಲ್ಲಿಯೂ ಆ ರಾಮನೇ ನನ್ನ ಕಣ್ಣಿಗೆ ಬೀಳುತ್ತಿರುವನು. ಆಗಾಗ ನಾನು ಸ್ವಪ್ನದಲ್ಲಿಯೂ ರಾಮನನ್ನು ಕಂಡು, ಹಾಗೆಯೇ ಪ್ರಜ್ಞೆತಪ್ಪಿ ಹುಚ್ಚನಂತೆ ಕನವರಿಸುತ್ತಿರುವೆನು. ಅಯ್ಯಾ ರಾವಣಾ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ರತ್ನ, ರಥ, ಮೊದಲಾಗಿ ರೇಫವನ್ನು ಮೊದಲಲ್ಲಿ ಉಳ್ಳ ಹೆಸರುಗಳನ್ನು ಕೇಳಿದಮಾತ್ರಕ್ಕೆ ನನ್ನ ಎದೆಯು ನಡುಗುತ್ತಿರುವುದಲ್ಲಾ! ರಾಮನಿಂದ ನನಗೆ ಹೀಗೆ ಮಿತಿಮೀರಿದ ಭಯವುಂಟಾಗಿರುವುದು. ಆತನ ಮಹಿಮೆಯನ್ನು ನಾನು ಚೆನ್ನಾಗಿ ಬಲ್ಲೆನು. ಅಂಥವನೊಡನೆ ಯುದ್ಧವು ಎಂದಿಗೂ ನಿನಗೆ ಯೋಗ್ಯವಲ್ಲ. ರಘುವಂಶೋದ್ಧಾರಕನಾದ ಆತನು ನಮ್ಮ ರಾಕ್ಷಸವಂಶದಲ್ಲಿ ಎಣೆಯಿಲ್ಲದ ವೀರ್ಯವುಳ್ಳವರೆಂದು ಪ್ರಸಿದ್ಧಿ ಹೊಂದಿದ್ದ ಬಲಿಯನ್ನಾಗಲಿ, ನಮುಚಿಯನ್ನಾಗಲಿ ನಿಮಿಷಮಾತ್ರದಲ್ಲಿ ಕೊಂದುಬಿಡಬಲ್ಲನು. ಇನ್ನು ನಿನ್ನ ಪಾಡೇನು? ಒಂದುವೇಳೆ ನಿನಗೆ ರಾಮನಲ್ಲಿ ದ್ವೇಷಬುದ್ಧಿಯೇ ಸ್ಥಿರವಾಗಿದ್ದ ಪಕ್ಷದಲ್ಲಿ, ಅವನೊಡನೆ ಯುದ್ಧಕ್ಕೆ ನಿಂತು ನಿನ್ನ ವೀರ್ಯವನ್ನು ತೋರಿಸು! ಅಥವಾ ನಿನ್ನ ಕೈ ಸಾಗದೆಂದು ತೋರಿದ ಪಕ್ಷದಲ್ಲಿ, ಕಳೆದುಹೋದ ರಾಕ್ಷಸವಧಕ್ಕಾಗಿ ನಿನ್ನ ಮನಸ್ಸಿನಲ್ಲಿರುವ ಚಿಂತೆಯನ್ನು ಬಿಟ್ಟು ಸಮಾಧಾನದಿಂದಿರು! ಈ ಚೌರ್ಯ ವ್ಯಾಪಾರವನ್ನು ಮಾತ್ರ ಬಿಟ್ಟುಬಿಡು. ನೀನಾಗಲಿ ನಾನಾಗಲಿ ಇನ್ನೂ ಕೆಲವು ಕಾಲದವರೆಗೆ ಬದುಕಿರಬೇಕೆಂಬ ಆಸೆಯಿದ್ದರೆ, ಇನ್ನು ಮೇಲೆ ಆ ರಾಮನ ಪ್ರಸಂಗವನ್ನೇ ಎತ್ತದಿರು! ಲೋಕದಲ್ಲಿ ಎಷ್ಟೋ ಮಂದಿ ಸಾಧುಗಳು ಸದಾಚಾರಪರರಾಗಿ ಧರ್ಮವನ್ನನುಷ್ಠಿಸುತ್ತಿದ್ದರೂ, ಇತರರ ಅಪರಾಧದಿಂದ ಸಪರಿವಾರರಾಗಿ ನಾಶಹೊಂದಿರುವರು. ಈಗಲೂ ನಿನ್ನ ಅಪರಾಧದಿಂದ ನಾನೂ ನಾಶಹೊಂದಬೇಕಾಗಿರುವುದಲ್ಲವೇ? ಇದರಮೇಲೆ ನಿನಗೆ ಯುಕ್ತವೆಂದು ತೋರಿದ ಮಾರ್ಗವನ್ನು ನೀನು ಅವಲಂಬಿಸು. ನಾನು ಎಂದಿಗೂ ನಿನ್ನ ಮಾರ್ಗವನ್ನವಲಂಬಿಸುವವನಲ್ಲ. ಆ ರಾಮನನ್ನು

ನೀನೇನೆಂದು ಬಲ್ಲೆ ? ಮಹಾತೇಜಸ್ವಿಯು ! ಅಸಾಧಾರಣವಾದ ಬುದ್ಧಿಬಲವುಳ್ಳವನು ! ಎಣೆಯಿಲ್ಲದ ದೇಹಬಲವುಳ್ಳವನು ! ಆತನು ನಮ್ಮ ರಾಕ್ಷಸಕುಲಕ್ಕೆ ಯಮನಾಗಿರುವನಲ್ಲದೆ ಬೇರೆಯಲ್ಲ. ಖರಾದಿ ರಾಕ್ಷಸರ ವಧಕ್ಕಾಗಿ ನಿನ್ನ ಮನಸ್ಸಿನಲ್ಲಿ ಕೋಪವಿರಬಹುದು. ಆ ಕೋಪಕ್ಕೆ ಸ್ವಲ್ಪವೂ ಕಾರಣವಿಲ್ಲ. ಶೂರ್ಪಣಖೆಯಿಂದ ದುರ್ಬೋಧಿತನಾದ ಖರನು ಜನಸ್ಥಾನದಿಂದ ಹೊರಟು, ಅವಿವೇಕದಿಂದ ರಾಮನನ್ನಿದಿರಿಸಿದುದಕ್ಕೆ ಫಲರೂಪವಾಗಿ ಅವನ ಕೈಯಿಂದಲೇ ಮರಣವನ್ನು ಹೊಂದಿರುವನು. ಇಲ್ಲಿ ರಾಮನಿಂದ ನಡೆದ ತಪ್ಪೇನೆಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ ನೋಡು ! ಅಯ್ಯಾ ರಾವಣಾ ! ನಮ್ಮ ಬಂಧುಮಿತ್ರ ಪರಿವಾರಗಳೆಲ್ಲಕ್ಕೂ ಹಿತವನ್ನು ಕೋರಿಯೇ ನಾನು ನಿನಗೆ ಈ ಬುದ್ಧಿವಾದಗಳನ್ನು ಹೇಳಿರುವೆನು. ನಾನು ಹೇಳಿದ ಈ ತತ್ವವನ್ನೂ ಅಂಗೀಕರಿಸದೆ ನೀನು ರಾಮನೊಡನೆ ವೈರವನ್ನೇ ಬಳೆಸಿದ ಪಕ್ಷದಲ್ಲಿ, ಅವನ ಬಾಣಗಳಿಗೆ ಗುರಿಯಾಗಿ, ನಿನ್ನ ಬಂಧುಗಳೊಡನೆ ನೀನೂ ಯುದ್ಧದಲ್ಲಿ ಸಾಯುವುದೇ ನಿಜವು ” ಎಂದನು.

ಇಲ್ಲಿಗೆ ಮೂವತ್ತೊಂಬತ್ತನೆಯ ಸರ್ಗವು.

---

ರಾವಣನು ಮಾರೀಚನ ಬುದ್ಧಿವಾದವನ್ನು ನಿರಾಕರಿಸಿ,
ತನಗೆ ಸಹಾಯಮಾಡಿಯೇ ತೀರಬೇಕೆಂದು
ಆತನನ್ನು ಬಲಾತ್ಕರಿಸಿದುದು.

ತನಗೆ ಮಾರೀಚನು ಹೀಗೆ ಯುಕ್ತಿಯುಕ್ತವಾದ ಅನೇಕ ಬುದ್ಧಿವಾದಗಳನ್ನು ಹೇಳಿ ತಡೆದರೂ, ಸಾಯುವವನು ಔಷಧವನ್ನು ನಿರಾಕರಿಸುವಂತೆ, ರಾವಣನು ಆತನ ಮಾತನ್ನು ಅಂಗೀಕರಿಸಲೇ ಇಲ್ಲವು. ಆ ರಾಕ್ಷಸೇಶ್ವರನು ಕಾಲಚೋದಿತನಾಗಿದ್ದುದರಿಂದ ತನಗೆ ಅಪಾಯವಿಲ್ಲದೆ ಸೌಖ್ಯವನ್ನುಂಟುಮಾಡುವ ಮಾತುಗಳನ್ನು ಮಾರೀಚನು ಎಷ್ಟೆಷ್ಟು ವಿಧದಲ್ಲಿ ಹೇಳಿದರೂ ಗಮನಿಸದೆ ಕ್ರೂರ ವಾಕ್ಯಗಳಿಂದ ಆತನನ್ನು ಕುರಿತು “ ಎಲೈ ಮಾರೀಚನೆ ! ಪ್ರಭುವಾದ ನನ್ನಲ್ಲಿಯೂ ನೀನು ಸ್ವಲ್ಪವೂ ಗೌರವವನ್ನಿಡದೆ ನನ್ನ ಮನಸ್ಸಿಗೆ ವಿರುದ್ಧವಾಗಿ

ಅಯುಕ್ತವಾದ ಮಾತುಗಳನ್ನಾಡುತ್ತಿರುವೆಯಾ! ಊಷರ ಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆ ನಿಷ್ಫಲವಾದ ಈ ಮಾತಿನಿಂದ ಪ್ರಯೋಜನವೇನು? ಆ ರಾಮನಾದರೋ ನಿಷ್ಕಾರಣವಾಗಿ ನಮ್ಮ ಕಡೆಯ ರಾಕ್ಷಸರನ್ನು ಕೊಂದ ಮಹಾಪಾಪಿಯು, ಮೂರ್ಖಸ್ವಭಾವವುಳ್ಳವನು. ಕೇವಲ ಮನುಷ್ಯಮಾತ್ರನಾದವನು. ಅಂತವನೊಡನೆ ಇದಿರಾಗಿ ನಿಂತು ಯುದ್ಧಮಾಡುವುದು. ನಮ್ಮಂತಹ ವೀರರಾದ ರಾಕ್ಷಸರಿಗೆ ಯೋಗ್ಯವೇ? ಈ ವಿಷಯದಲ್ಲಿ ನೀನು ನನಗೆ ಬುದ್ಧಿವಾದ ಹೇಳಿದ ಮಾತ್ರಕ್ಕೆ ನಾನು ಕೇಳುವೆನೇ? ನನ್ನ ಸಂಕಲ್ಪವನ್ನು ತಪ್ಪಿಸುವುದಕ್ಕೆ ಎಂದಿಗೂ ನಿನ್ನಿಂದ ಸಾಧ್ಯವಿಲ್ಲ. ಈಗ ಆ ಸೀತೆಯನ್ನು ಕದ್ದುತರುವುದೇ ನೀಚನಾದ ರಾಮನಿಗೆ ತಕ್ಕ ಪ್ರತೀಕಾರವಲ್ಲದೆ ಬೇರೆಯಿಲ್ಲ. ಅವನು ಮೂರ್ಖನೆಂಬುದಕ್ಕೆ ನಮಗೆ ಬೇರೆ ದೃಷ್ಟಾಂತವೇಕೆ? ಕೆಲಸಕ್ಕೆ ಬಾರದ ಒಬ್ಬ ಹೆಂಗಸಿನ ಮಾತಿಗಾಗಿ ಆ ಕ್ಷಣದಲ್ಲಿಯೇ ತನ್ನ ಮಿತ್ರರನ್ನೂ, ತನ್ನ ರಾಜ್ಯವನ್ನೂ, ತನ್ನ ತಾಯಿ ತಂದೆಗಳನ್ನೂ ತೊರೆದು ಕಾಡುಪಾಲಾಗಿ ಬಂದಿರುವುದೇ ಅವನ ಮೂರ್ಖ ಸ್ವಭಾವವನ್ನು ಚೆನ್ನಾಗಿ ತೋರಿಸುವುದಲ್ಲವೇ? ಖರಾದಿರಾಕ್ಷಸರನ್ನು ಕೊಂದ ಘಾತುಕನಾದ ಆ ರಾಮನಿಗೆ ಈಗ ಅವಶ್ಯವಾಗಿ ನಾನು ತಕ್ಕ ಪ್ರತೀಕಾರವನ್ನು ಮಾಡಬೇಕಾದರೆ, ಅವನಿಗೆ ಪ್ರಾಣಕ್ಕಿಂತಲೂ ಪ್ರಿಯವಾದ ಸೀತೆಯನ್ನು ಕದ್ದುತರುವುದಲ್ಲದೆ ಬೇರೆಯಿಲ್ಲ. ಈ ಕೆಲಸವನ್ನು ನಿನ್ನ ಕಣ್ಣಿದಿರಾಗಿಯೇ ನಾನು ನಡೆಸದೇ ಬಿಡುವವನಲ್ಲ. ನಾನು ಮೊದಲೇ ಈ ಅಭಿಪ್ರಾಯವನ್ನು ನನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಬಿಟ್ಟಿರುವೆನು. ಈ ನನ್ನ ಸಂಕಲ್ಪವನ್ನು ತಪ್ಪಿಸುವುದಕ್ಕೆ ದೇವಾಸುರರಿಂದೊಡಗೂಡಿದ ಇಂದ್ರನಿಗೂ ಸಾಧ್ಯವಲ್ಲ. ನಾನು ನಿಶ್ಚಯಿಸಿರುವ ಈ ಕಾರ್ಯದ ವಿಷಯದಲ್ಲಿ ನಿನ್ನಲ್ಲಿಗೆ ಬಂದು ಗುಣದೋಷಗಳನ್ನೂ, ಅದರಿಂದುಂಟಾಗುವ ಅಪಾಯವನ್ನೂ, ಅದನ್ನು ಸಾಧಿಸುವುದಕ್ಕೆ ಬೇಕಾದ ಉಪಾಯವನ್ನೂ ಕೇಳಿದ್ದ ಪಕ್ಷದಲ್ಲಿ, ಆಗ ನೀನು ನಿನಗೆ ತೋರಿದ ಬುದ್ಧಿವಾದಗಳನ್ನು ಹೇಳಬಹುದಾಗಿತ್ತು! ಪ್ರಭುವಿಗೆ ಶ್ರೇಯಸ್ಸನ್ನು ಕೋರುವ ಮಂತ್ರಿಯು ಬುದ್ಧಿಶಾಲಿಯಾಗಿದ್ದ ಪಕ್ಷದಲ್ಲಿ, ರಾಜನು ತನ್ನನ್ನು ಪ್ರಶ್ನೆ ಮಾಡಿದಾಗ ತನಗೆ ತೋರಿದುದನ್ನು ವಿನಯಪೂರ್ವಕವಾಗಿ ಕೈಮುಗಿದು ರಾಜನಲ್ಲಿ ವಿಜ್ಞಾಪಿಸಬೇಕೇ ಹೊರತು, ಸ್ವತಂತ್ರಿಸಿ ಯಾವ ಮಾತನ್ನೂ ಹೇಳಬಾರದು. ಮಂತ್ರಿಯಾದವನು ರಾಜನಿಗೆ ಹಿತವನ್ನು ಹೇಳಬೇಕಾದರೂ

ಅವನ ಮನಸ್ಸಿಗೆ ವಿರೋಧವಲ್ಲದಂತೆ ಮೃದುವಾಗಿಯೂ, ಉಪಚಾರಪೂರ್ವಕವಾಗಿಯೂ ಇರುವ ಮಾತುಗಳನ್ನೇ ಹೇಳಬೇಕು. ಎಲೈ ಮಾರೀಚನೆ! ಮಂತ್ರಿಯಾದವನು ಹಿತವನ್ನೇ ಹೇಳಿದರೂ ಮೃದುತ್ವವನ್ನು ಬಿಟ್ಟು ತಿರಸ್ಕಾರದಿಂದ ಹೇಳಿದ ಪಕ್ಷದಲ್ಲಿ, ಮರ್ಯಾದೆಯಿಲ್ಲದ ಆ ಮಾತನ್ನು ಗೌರವವುಳ್ಳ ರಾಜನು ಎಂದಿಗೂ ಆದರಿಸಲಾರನು. ತೇಜಸ್ವಿಗಳಾದ ರಾಜರು ಅಗ್ನಿ, ಇಂದ್ರ, ಚಂದ್ರ, ಯಮ, ವರುಣ, ಈ ಐದುಮಂದಿ ದೇವತೆಗಳ ಸ್ವರೂಪವನ್ನು ಹೊಂದಿರುವವರು. ಇದರಿಂದ ರಾಜರಲ್ಲಿ ಅಗ್ನಿಯಲ್ಲಿರುವ ಉಷ್ಣತೆಯೂ, ಇಂದ್ರನಲ್ಲಿರುವ ಪರಾಕ್ರಮವೂ, ಚಂದ್ರನಲ್ಲಿರುವ ಸೌಮ್ಯತೆಯೂ, ಯಮನಲ್ಲಿರುವ ತೀಕ್ಷ್ಣದಂಡನೆಯೂ, ವರುಣನಲ್ಲಿರುವ ಪ್ರಸನ್ನತೆಯೂ ಒಂದಾಗಿ ಕಲೆತಿರುವುವು. ಆದುದರಿಂದ ರಾಜರು ಸರ್ವಾವಸ್ಥೆಗಳಲ್ಲಿಯೂ, ಗೌರವಕ್ಕೂ, ಪೂಜ್ಯತೆಗೂ ಅರ್ಹರಾಗಿರುವರು. ನೀನಾದರೋ ಧರ್ಮವನ್ನು ತಿಳಿಯದೆ ಕೇವಲ ಮೋಹದಿಂದ ಈ ಮಾತುಗಳನ್ನಾಡುತ್ತಿರುವೆ. ನಾನು ರಾಜಾಧಿರಾಜನೆನಿಸಿಕೊಂಡಿದ್ದರೂ ಸೌಲಭ್ಯದಿಂದ ನಿನ್ನಲ್ಲಿಗೆ ಬಂದಿರುವಾಗ, ನನ್ನೊಡನೆಯೇ ಈ ಕ್ರೂರವಾಕ್ಯಗಳನ್ನಾಡಿ ನಿನ್ನ ದುಸ್ಸ್ವಭಾವವನ್ನು ತೋರಿಸುತ್ತಿರುವೆಯಾ? ಎಲೆ ಮಾರೀಚನೆ! ನಾನು ನಿನ್ನಲ್ಲಿ ಗುಣದೋಷಗಳನ್ನು ಕೇಳುವುದಕ್ಕೆ ಬಂದವನಲ್ಲ. ಇದರೊಳಗಿನ ಯುಕ್ತಾಯುಕ್ತಗಳನ್ನೂ ನೀನು ನನಗೆ ಹೇಳಬೇಕಾದುದಿಲ್ಲ. ನಾನು ಯಾವುದೋ ಒಂದು ಕಾರ್ಯವನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಆ ವಿಷಯದಲ್ಲಿ ನೀನು ಮಾಡಬೇಕಾದ ಕೆಲಸವನ್ನು ಆಜ್ಞಾಪಿಸಿರುವೆನು. ಈ ದೊಡ್ಡ ಕಾರ್ಯಕ್ಕೆ ನೀನು ಸಹಾಯಕನಾಗಿದ್ದು ನಿರ್ವಹಿಸಬೇಕಾದುದೊಂದೇ ನಿನ್ನ ಕೆಲಸವೇ ಹೊರತು, ನನಗೆ ಅಡ್ಡಮಾತುಗಳನ್ನಾಡಿ ಬುದ್ಧಿವಾದವನ್ನು ಹೇಳುವುದಲ್ಲ! ನನಗೆ ನೀನು ಈಗ ಮಾಡಬೇಕಾದ ಸಹಾಯವೇನೆಂಬುದನ್ನೂ ಹೇಳುವೆನು ಕೇಳು. ನೀನು ಬೆಳ್ಳಿಯ ಚುಕ್ಕೆಗಳಿಂದ ವಿಚಿತ್ರವಾದ ಒಂದು ಸುವರ್ಣಮೃಗದ ರೂಪವನ್ನು ಧರಿಸಿ ಆ ರಾಮಾಶ್ರಮಕ್ಕೆ ಹೋಗಿ. ಅಲ್ಲಿ ಸೀತೆಯ ಮುಂದೆ ನಲಿದಾಡುತ್ತ, ಅವಳಿಗೆ ಆಸೆಯನ್ನು ಹುಟ್ಟಿಸಿ ಅಲ್ಲಲ್ಲಿ ಸ್ವೇಚ್ಛೆಯಾಗಿ ತಿರುಗುತ್ತಿರಬೇಕು. ಸುವರ್ಣಮಯವಾದ ಆ ನಿನ್ನ ಮೃಗರೂಪವನ್ನು ಕಂಡೊಡನೆಯೇ ಸೀತೆಯು ಅದನ್ನು ತಂದು ಕೊಡಬೇಕೆಂದು ರಾಮನನ್ನು ನಿರ್ಬಂಧಿಸುವಳು. ರಾಮನು ನಿನ್ನನ್ನು ಹಿಡಿಯುವುದಕ್ಕಾಗಿ

ನೀನು ಹೋದದಾರಿಯನ್ನೇ ಹಿಂಬಾಲಿಸಿ ಆಶ್ರಮದಿಂದ ಹೊರಟು ಬರುವನು. ಆ ರಾಮನನ್ನು ನೀನು ಬಹುದೂರಕ್ಕೆ ಕರೆದುಕೊಂಡು ಹೋಗಿ ರಾಮನ ಕೂಗಿನಂತೆಯೇ "ಅಯ್ಯೋ ಸೀತೇ! ಅಯ್ಯೋ ಲಕ್ಷ್ಮಣಾ!" ಎಂದು ದೀನಸ್ವರದಿಂದ ಪ್ರಲಾಪಿಸು. ಈ ಧ್ವನಿಯನ್ನು ಕೇಳಿ ಸೀತೆಗೆ ಭೀತಿ ಹುಟ್ಟು ವುದು. ಆಗ ಸೀತೆಯು ರಾಮನನ್ನು ನೋಡಿಬರುವುದಕ್ಕಾಗಿ ಲಕ್ಷ್ಮಣನನ್ನು ನಿರ್ಬಂಧಿಸಿ ಕಳುಹಿಸುವಳು. ಆಗ ಲಕ್ಷ್ಮಣನೂ ಬೆಜ್ಜರಬಿದ್ದು, ರಾಮ ನಲ್ಲಿರುವ ಸ್ನೇಹದಿಂದ ಆತನನ್ನು ಹುಡುಕಿಕೊಂಡು ಹೋಗುವನು. ಹೀಗೆ ರಾಮಲಕ್ಷ್ಮಣರಿಬ್ಬರೂ ಆಶ್ರಮವನ್ನು ಬಿಟ್ಟು ಹೋಗಿರುವಾಗ, ಇಂದ್ರನು ಶಚಿಯನ್ನು ತರುವಂತೆ ನಾನು ಸುಖವಾಗಿ ಸೀತೆಯನ್ನು ತಂದುಬಿಡುವೆನು. ನೀನು ನನಗಾಗಿ ಈ ಕಾರ್ಯವನ್ನು ಮಾತ್ರ ಮಾಡಿ, ಆಮೇಲೆ ನಿನಗೆ ಇಷ್ಟ ಬಂದಕಡೆಗೆ ಹೋಗಬಹುದು. ಎಲೈ ಮಾರೀಚನೆ! ನನಗೆ ಮಾಡುವ ಈ ಸಹಾಯವು ನಿಷ್ಪ್ರಯೋಜನವಾಗಿ ಹೋಗುವುದೆಂದೆಣಿಸಬೇಡ! ಈ ಕೆಲಸವಾದ ಮೇಲೆ ನನ್ನ ಅರ್ಧರಾಜ್ಯವನ್ನೇ ನಿನಗೆ ಕೊಟ್ಟುಬಿಡುವೆನು. ಎಲೈ ಸಾಧು ಶಿರೋಮಣಿಯೆ! ಈ ಕಾರ್ಯಸಿದ್ಧಿಗಾಗಿ ನೀನು ಈಗಲೇ ಮೃಗರೂಪವನ್ನು ಧರಿಸು! ದಂಡಕಾರಣ್ಯಕ್ಕೆ ಹೊರಡು! ನಾನೂ ನಿನ್ನೊಡನೆಯೇ ಈ ರಥದಲ್ಲಿ ಕುಳಿತುಬರುವೆನು. ರಾಮನೊಡನೆ ನಮಗೆ ಯುದ್ಧವೇಕೆ? ಕೇವಲ ಮನುಷ್ಯ ಮಾತ್ರನಾದ ಆತನೊಡನೆ ವೀರರಾದ ನಮ್ಮಂತಹ ರಾಕ್ಷಸರು ಯುದ್ಧಕ್ಕೆ ನಿಲ್ಲುವುದು ಗೌರವವಲ್ಲ. ಆದುದರಿಂದ ಆತನನ್ನು ವಂಚಿಸಿಯೇ ಸೀತೆ ಯನ್ನು ತರಬೇಕು. ಆ ಸೀತೆಯನ್ನು ಕದ್ದುಕೊಂಡು ಲಂಕೆಗೆ ಹೊರಟು ಹೋದಮೇಲೆ ನಾವಿಬ್ಬರೂ ಕೃತಾರ್ಥರಾಗುವೆವು. ಎಲೆ ಮಾರೀಚನೆ! ನಾನು ಇಷ್ಟು ವಿಧದಲ್ಲಿ ನಿನಗೆ ಬುದ್ಧಿವಾದಗಳನ್ನು ಹೇಳಿದರೂ ನೀನು ನಿನ್ನ ದುರ್ಬುದ್ಧಿಯನ್ನೇ ತೋರಿಸಿ, ಈ ಕೆಲಸವನ್ನು ಮಾಡದಿದ್ದ ಪಕ್ಷದಲ್ಲಿ, ಇಲ್ಲಿಯೇ ನಿನ್ನನ್ನು ಕೊಂದುಬಿಡುವೆನು. ನನ್ನ ಬಲಾತ್ಕಾರಕ್ಕಾದರೂ ನೀನು ಈ ಕಾರ್ಯ ವನ್ನು ಅವಶ್ಯವಾಗಿ ನಡೆಸಿಯೇ ತೀರಬೇಕು. ಮುಖ್ಯವಾಗಿ ರಾಜನ ಮನಸ್ಸಿಗೆ ಪ್ರತಿಕೂಲನಾಗಿ ನಡೆಯುವವನು ಎಂದಿಗೂ ಸೌಖ್ಯದಿಂದಿರಲಾರನೆಂಬುದನ್ನು ಚೆನ್ನಾಗಿ ತಿಳಿ! ನೀನು ಆ ರಾಮನಲ್ಲಿಗೆ ಹೋದಮೇಲೆ ಬದುಕಿಬರುವೆನೋ ಇಲ್ಲವೋ ಎಂದು ಸಂದೇಹಪಡಬಹುದು. ಅಲ್ಲಿಗೆ ಹೋದರೆ ಒಂದುವೇಳೆ

ಬದುಕಿಬರಬಹುದೆಂಬ ಸಂದೇಹವಾದರೂ ಉಂಟಲ್ಲವೆ? ಇಲ್ಲಿ ನನ್ನೊಡನೆ ವಿರೋಧಿಸಿದ ಪಕ್ಷದಲ್ಲಿ ನಿನಗೆ ಮರಣವೆಂಬುದೇ ನಿಜವು. ಆದುದರಿಂದ ಈ ಎರಡರಲ್ಲಿ ಯಾವುದು ಉತ್ತಮವೆಂಬುದನ್ನು ನೀನೇ ಪರ್ಯಾಲೋಚಿಸು. ಇವುಗಳಲ್ಲಿ ನಿನಗೆ ಪಥ್ಯವಾಗಿ ತೋರಿದ ಮಾರ್ಗವನ್ನನುಸರಿಸು " ಎಂದನು.

ಇಲ್ಲಿಗೆ ನಾಲ್ವತ್ತನೆಯ ಸರ್ಗವು.

---

ಮಾರೀಚನು ರಾವಣನಿಗೆ ಪುನಃ ಹಿತವನ್ನು ಬೋಧಿಸಿದುದು.

ರಾವಣನು ತನ್ನ ಪ್ರಭುತ್ವದ ಹೆಮ್ಮೆಗೆ ತಕ್ಕಂತೆ " ಈ ಕೆಲಸವನ್ನು ನೀನು ಮಾಡಿಯೇ ತೀರಬೇಕು " ಎಂದು ತನಗೆ ಪ್ರತಿಕೂಲವಾಗಿ ಆಜ್ಞೆ ಮಾಡಿದುದನ್ನು ಕೇಳಿ, ಮಾರೀಚನು ಕೋಪಗೊಂಡು, ರಾವಣನನ್ನು ಕುರಿತು ಕ್ರೂರವಾಕ್ಯಗಳಿಂದ " ಅಯ್ಯಾ! ರಾವಣಾ! ಯಾವ ಪಾಪಕರ್ಮಿಯು ನಿನಗೆ ಈ ದುರ್ಮಾರ್ಗವನ್ನುಪದೇಶಿಸಿದನೋ ಕಾಣೆನಲ್ಲಾ! ಪುತ್ರಮಿತ್ರಾದಿಗಳನ್ನೂ ರಾಜ್ಯವನ್ನೂ, ಅಮಾತ್ಯಾದಿ ರಾಜ್ಯಾಂಗಗಳನ್ನೂ ನಿರ್ಮೂಲಮಾಡತಕ್ಕ ಈ ಕಾರ್ಯವನ್ನು ನಿನಗೆ ಹೇಳಿದವನಾವನು? ಅಯ್ಯೋ! ನೀನು ಸುಖವಾಗಿ ರಾಜ್ಯಭೋಗಗಳನ್ನನುಭವಿಸುತ್ತಿರುವುದನ್ನು ನೋಡಿ ಸಹಿಸಲಾರದ ಯಾವ ಪಾಪಿಯು ಈ ಉಪಾಯವನ್ನು ನಿನಗೆ ಹೇಳಿಕೊಟ್ಟನು? ಮೃತ್ಯುವಿಗೆ ದ್ವಾರದಂತಿರುವ ಈ ದುಷ್ಕಾರ್ಯವನ್ನು ನಿನಗೆ ಬೋಧಿಸಿದ ಮಹಾಪಾಪಿ ಯಾರು? ಕೈಲಾಗದ ರಾಕ್ಷಸರಾರೋ ನಿನಗೆ ಶತ್ರುಗಳಾಗಿ ನಿನ್ನಲ್ಲಿ ಸೇರಿಕೊಂಡು, ನಿನಗೆ ಈ ದುರ್ಮಾರ್ಗವನ್ನು ಬೋಧಿಸಿದಂತಿದೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನಿನಗಿಂತಲೂ ಬಲಾಢ್ಯನಾದ ಆ ರಾಮನ ಕೈಗೆ ನಿನ್ನನ್ನು ಸಿಕ್ಕಿಸಿ ಕೊಲ್ಲಿಸಬೇಕೆಂಬುದಕ್ಕಾಗಿಯೇ ನಿನಗೆ ಈ ಉಪಾಯವನ್ನು ಬೋಧಿಸಿರುವರು. ಕೇವಲ ಶತ್ರುವಾದವನೂ ಹೀಗೆ ಮಾಡಿರಲಾರನು. ಅದರಲ್ಲಿಯೂ ಅಲ್ಪಬುದ್ಧಿಯುಳ್ಳವನಾಗಿರುವುದರಿಂದಲೇ ಈ ದುರ್ಮಾರ್ಗವನ್ನು ನಿನಗೆ ತೋರಿಸಿರುವನು. ನಿನ್ನಷ್ಟಕ್ಕೆ ನೀನೇ ಪ್ರಯತ್ನಪಟ್ಟು ಸಾಯುವಂತೆ ಮಾಡುವುದಕ್ಕಾಗಿ ನಿನ್ನ ಶತ್ರುವಾವನೋ ಹೀಗೆ ಉಪದೇಶಿಸಿರುವನು. ಅದೂ ಹೋಗಲಿ! ಲೋಕನೀತಿಗೂ

ಶಾಸ್ತ್ರಕ್ಕೂ ವಿರುದ್ಧವಾದ ಈ ದುರ್ಮಾರ್ಗದಲ್ಲಿ ಪ್ರವರ್ತಿಸಿರುವ ನಿನ್ನನ್ನು, ನಿನ್ನ ಮಂತ್ರಿಗಳಾದರೂ ನಿಗ್ರಹಿಸಬೇಡವೆ? ಅಂತಹ ದುರ್ಮಂತ್ರಿಗಳನ್ನು ನೀನು ನಿನ್ನ ಕೈಯಿಂದಲೇ ಚಿತ್ರವಧೆಮಾಡಿ ಕೊಲ್ಲಬೇಕಲ್ಲವೆ! ಈ ದುರ್ಮಾರ್ಗ ದಲ್ಲಿ ಬಿದ್ದ ನಿನ್ನನ್ನು ನಿನ್ನ ಮಂತ್ರಿಗಳೊಬ್ಬರೂ ತಡೆಯಲಾರದೆಹೋದರೆ? ಎಲೈ, ಜಯಶೀಲನೆ! ಮಂತ್ರಿಗಳು ಧರ್ಮವನ್ನಾಗಲಿ, ಅರ್ಥವನ್ನಾಗಲಿ, ಯಶಸ್ಸನ್ನಾಗಲಿ ಪ್ರಭುವಿನ ಅನುಗ್ರಹದಿಂದಲೇ ಪಡೆಯಬೇಕಾಗಿರುವುದು. ರಾಜನು ನಿರ್ದೋಷಿಯಾಗಿದ್ದ ಹೊರತು ಇವು ಬಾರವು. ರಾಜನು ಗುಣಹೀನ ನಾಗಿದ್ದ ಪಕ್ಷದಲ್ಲಿ ಅವೆಲ್ಲವೂ ವ್ಯರ್ಥವಾಗುವುವು. ರಾಜನ ಅವಿವೇಕದಿಂದಲೇ ಪ್ರಜೆಗಳಿಗೂ ವ್ಯಸನವುಂಟಾಗುವುದು. ಧರ್ಮಕ್ಕೂ ರಾಜನೇ ಮೂಲವು. ಜಯಕ್ಕೂ ರಾಜನೇ ಮೂಲವು. ಆದುದರಿಂದ ಸರ್ವಾವಸ್ಥೆಗಳಲ್ಲಿಯೂ ರಾಜನನ್ನು ಸನ್ಮಾರ್ಗದಲ್ಲಿರಿಸಿ ಸುರಕ್ಷಿತವಾಗಿ ಕಾಪಾಡಬೇಕಾದುದು ಅವನಿಗೆ ಸೇರಿದವರ ಮುಖ್ಯ ಕರ್ತವ್ಯವು. ಎಲೈ ರಾಕ್ಷಸೇಂದ್ರನೆ! ಲೋಕದಲ್ಲಿ ಕ್ರೂರ ಸ್ವಭಾವವುಳ್ಳವನಾಗಲಿ, ಪ್ರಜೆಗಳಿಗೆ ಪ್ರತಿಕೂಲನಾದವನಾಗಲಿ, ಇಂದ್ರಿಯ ನಿಗ್ರಹವಿಲ್ಲದವನಾಗಲಿ, ವಿನಯಗುಣವಿಲ್ಲದವನಾಗಲಿ ಎಂದಿಗೂ ರಾಜ್ಯವನ್ನು ಪಾಲಿಸುವುದಕ್ಕರ್ಹನಲ್ಲ. ಚತುರನಾದ ಸಾರಥಿಯಿಲ್ಲದಿದ್ದ ಪಕ್ಷದಲ್ಲಿ, ರಥದ ಕುದುರೆಗಳು ಹಳ್ಳತಿಟ್ಟುಗಳಲ್ಲಿ ಬಿದ್ದು, ವೇಗದಿಂದೋಡಿ ಸಾರಥಿಯೊಡನೆ ತಾವೂ ಅಪಾಯಕ್ಕೀಡಾಗುವಂತೆ, ಉಪಾಯಶೀಲರಲ್ಲದ ಮಂತ್ರಿಗಳು ರಾಜನನ್ನು ಕೆಡಿಸುವರಲ್ಲದೆ ತಾವೂ ಕೆಡುವರು. ಲೋಕದಲ್ಲಿ ನೀತಿಮಾರ್ಗನಿಷ್ಠರಾಗಿ ಧರ್ಮ ವನ್ನು ತಪ್ಪದೆ ನಡೆಸತಕ್ಕ ಸತ್ಪುರುಷರನೇಕರುಂಟು. ಇಂತವರೂ ಕೂಡ ಇತರ ರನ್ನು ನಂಬಿ ಅವರ ದೋಷದಿಂದ ತಾವೂ ಪರಿವಾರಸಹಿತರಾಗಿ ನಾಶವನ್ನು ಹೊಂದಿರುವರು. ಕುರಿಗಳು ತಮ್ಮ ಮಾಂಸವನ್ನು ಭಕ್ಷಿಸುವುದಕ್ಕಾಗಿಯೇ ಕಾದಿರುವ ತೋಳಗಳ ರಕ್ಷಣಕ್ಕೆ ಸಿಕ್ಕಿದಾಗ ಅವುಗಳಿಗೆ ಎಂದಾದರೂ ಅಪಾಯವು ತಪ್ಪುವುದುಂಟೆ? ಹಾಗೆಯೇ ಪ್ರಜೆಗಳು ತಮಗೆ ಪ್ರತಿಕೂಲನಾದ ರಾಜನ ಕೈಕೆಳಗೆ ಸಿಕ್ಕಿ ಎಂದಿಗೂ ಮೇಲ್ಮೆಯನ್ನು ಪಡೆಯಲಾರರು. ಅಯ್ಯಾ, ರಾವಣಾ! ಹೀಗೆ ಕ್ರೂರಸ್ವಭಾವವುಳ್ಳವನಾಗಿ, ದುರ್ಬುದ್ಧಿಯುಳ್ಳವನಾಗಿ ಇಂದ್ರಿಯವನ್ನು ಜಯಿಸುವ ಸಾಮರ್ಥ್ಯವಿಲ್ಲದ ನೀನು ರಾಜನಾಗಿರುವುದರಿಂದ, ರಾಕ್ಷಸರೆಲ್ಲರೂ ಅವಶ್ಯವಾಗಿ ನಾಶವನ್ನು ಹೊಂದದಿರಲಾರರು. ನನಗಾದರೋ ದೈವಿಕವಾಗಿ

ಮಹಾಭಯಂಕರವಾದ ಈ ಅಕಾರ್ಯವು ಬಂದು ಸೇರಿರುವುದು. ನಿನ್ನಂತೆ ನಾನು ಸ್ವಬುದ್ಧಿಯಿಂದ ದುರ್ಮಾರ್ಗಕ್ಕೆ ಬಿದ್ದು ಸಾಯುವವನಲ್ಲ. ನನ್ನ ಸಾವಿಗಾಗಿ ನಾನು ದುಃಖಪಡಬೇಕಾದುದೂ ಇಲ್ಲ! ನೀನಾದರೋ ಸ್ವಬುದ್ಧಿಪೂರ್ವಕ ವಾಗಿಯೇ ಈಗ ಮಹಾವಿಪತ್ತನ್ನು ತಂದುಕೊಳ್ಳುತ್ತಿರುವುದರಿಂದ ನಿನ್ನ ಸ್ಥಿತಿ ಗಾಗಿಯೇ ನಾನು ಪರಿತಪಿಸಬೇಕಾಗಿರುವುದು. ನೀನೊಬ್ಬನೇ ಅಲ್ಲದೆ ನಿನ್ನ ಬಂಧುವರ್ಗಗಳೆಲ್ಲವನ್ನೂ ನಿನ್ನ ಸಮಸ್ತ ಸೈನ್ಯವನ್ನೂ ಕೆಡಿಸುವ ಪ್ರಯತ್ನವನ್ನು ಮಾಡಿರುವೆಯಲ್ಲಾ! ರಾಮನು ನನ್ನನ್ನು ಕೊಂದಮೇಲೆ ಶೀಘ್ರದಲ್ಲಿಯೇ ನಿನ್ನನ್ನೂ ಕೊಲ್ಲದಿರನು. ಮುಖ್ಯವಾಗಿ ಆ [1]ರಾಮನ ಕೈಯ್ಯಿಂದ ಸತ್ತು ಕೃತಾರ್ಥನಾಗಬೇಕೆಂಬುದೇ ನನ್ನ ಕೋರಿಕೆ. ಅದರಲ್ಲಿಯೂ ನಿನ್ನನ್ನು ಕೊಲ್ಲ ತಕ್ಕ, ಆ ರಾಮನ ಕೈಯ್ಯಿಂದಲೇ ಸಾಯುವುದು ನನಗೆ ಮತ್ತಷ್ಟು ಸಂತೋಷ ಕರವು. ರಾಮನು ನನ್ನನ್ನು ಶಸ್ತ್ರದಿಂದಲೇ ಕೊಲ್ಲಬೇಕಾದುದಿಲ್ಲ. ಆತನನ್ನು ನೋಡಿದ ಮಾತ್ರದಿಂದಲೇ ನಾನು ಸತ್ತಂತೆ ತಿಳಿ! ಆ ಸೀತೆಯನ್ನು ಕದ್ದು ತರುವುದೇ ಸಪರಿವಾರನಾದ ನಿನ್ನ ಸಾವಿಗೆ ಮೂಲವೆಂಬುದನ್ನೂ ತಿಳಿ! ಅಯ್ಯಾ! ರಾವಣಾ! ಮುಖ್ಯವಾಗಿ ಒಂದೇ ನಿಜಾಂಶವನ್ನು ಹೇಳುವೆನು ಕೇಳು! ನೀನು ನನ್ನೊಡನೆ ರಾಮಾಶ್ರಮದಿಂದ ಸೀತೆಯನ್ನು ತಂದುಬಿಟ್ಟಿ ಯಾದರೆ, ಆಮೇಲೆ ನೀನೆಲ್ಲಿ? ನಾನೆಲ್ಲಿ? ಲಂಕೆಯೆಲ್ಲಿ? ರಾಕ್ಷಸರೆಲ್ಲಿ! ಇವೆಲ್ಲವೂ ನಿರ್ನಾಮವಾಗಿ ಹೋಗುವುದೊಂದಲ್ಲದೆ ಬೇರೆ ಗತಿಯಿಲ್ಲ. ಎಲೈ ರಾಕ್ಷಸನೆ! ನಿನ್ನ ಹಿತವನ್ನು ಕೋರಿಯೇ ನಾನು ಎಷ್ಟು ಹೇಳಿದರೂ ನೀನು ನನ್ನ ಮಾತನ್ನು

---

1. ಇಲ್ಲಿ ಮಾರೀಚನು ವಿಶ್ವಾಮಿತ್ರನ ಯಾಗರಕ್ಷಣವೇ ಮೊದಲಾಗಿ ಖರಾದಿವಧದ ವರೆಗೆ ರಾಮನು ತೋರಿಸಿದ ಅತಿಮಾನುಷ ಚಾರಿತ್ರಗಳನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡೇ ಆತನು ಅಸಾಧಾರಣ ಮಹಿಮೆಯುಳ್ಳವನೆಂದೂ, ಆತನೇ ಪರಮಪುರುಷನೆಂದೂ ನಿಶ್ಚಯಿಸಿ, ಆತನ ಕೈಯಿಂದಲೇ ಮರಣವನ್ನು ಹೊಂದುವುದು ತನಗೆ ಪರಮಪುರುಷಾರ್ಥವೆಂದೆಣಿಸಿ ಈ ಮಾತನ್ನು ಹೇಳಿರುವನು. ಇದೇ ವಿಷಯವು ನೃಸಿಂಹಪುರಾಣದಲ್ಲಿ “ರಾಮಾದಪಿ ಹಿ ಮರ್ತವ್ಯಂ ಮರ್ತವ್ಯಂ ರಾವಣಾದಪಿ। ಉಭಯೋರಪಿ ಮರ್ತವ್ಯೇ ವರಂ ರಾಮಾನ್ನ ರಾವಣಾತ್” ಎಂಬುದಾಗಿ, ತಾನು ಇಲ್ಲಿದ್ದರೆ ರಾವಣನ ಕೈಯಿಂದ ಸಾಯಬೇಕಾಗುವುದು. ಅಲ್ಲಿ ಹೋದರೆ ರಾಮನ ಕೈಯಿಂದ ಸಾಯಬೇಕು. ಹೇಗಿದ್ದರೂ ತನಗೆ ಸಾವು ನಿಶ್ಚಯ ವಾಗಿರುವಾಗ ರಾಮನ ಕೈಯಿಂದಲೇ ಸಾಯುವುದು ಮೇಲಲ್ಲವೆ? ಎಂದು ಮಾರೀಚನು ರಾಮನಿಂದುಂಟಾಗತಕ್ಕ ವಧವನ್ನೇ ಅಂಗೀಕರಿಸಿದುದಾಗಿ ಹೇಳಲ್ಪಟ್ಟಿರುವುದು.

ಕೇಳದಿರುವೆ! ಲೋಕದಲ್ಲಿ ಯಾರಾದರೇನು? ಆಯುಸ್ಸು ತೀರಿ ಮರಣವು ಸಮೀಪಿಸಿರುವಾಗಲೇ ಮನುಷ್ಯರು ಹೆಣದಂತಾಗಿಬಿಡುವರು. ಆದುದರಿಂದಲೇ ಅವರಿಗೆ ಹಿತೈಷಿಗಳಾದ ಮಿತ್ರರು ಹೇಳುವ ಬುದ್ಧಿವಾದಗಳೊಂದೂ ಕಿವಿಗೇರುವುದಿಲ್ಲವು" ಎಂದನು.

ಇಲ್ಲಿಗೆ ನಾಲ್ವತ್ತೊಂದನೆಯ ಸರ್ಗವು.

---

ಮಾರೀಚನು ರಾವಣನೊಡನೆ ರಥದಲ್ಲಿ ಹೊರಟು, ನಾನಾ ನಗರಾದಿಗಳನ್ನು ನೋಡುತ್ತ, ದಂಡಕಾರಣ್ಯದಲ್ಲಿ ರಾಮಾಶ್ರಮಕ್ಕೆ ಹೋಪುದು. ಅಲ್ಲಿ ವಿಚಿತ್ರ ಮೃಗರೂಪವನ್ನು ಧರಿಸಿ ನಲಿದಾಡುತ್ತಿರುವಾಗ, ಪುಷ್ಪಾಪಚಯಕ್ಕಾಗಿ ಬಂದ ಸೀತೆಯು ಅದನ್ನು ನೋಡಿ ಆಶ್ಚರ್ಯಗೊಂಡುದು.

ಹೀಗೆ ಮಾರೀಚನು ಪರುಷವಾಕ್ಯಗಳನ್ನಾಡಿದರೂ ಕೊನೆಗೆ ರಾಕ್ಷಸರಾಜನಾದ ಆ ರಾವಣನಿಗಂಜಿ ದೈನ್ಯದಿಂದ "ಹಾಗಾದರೆ ಹೋಗುವೆನೆಂ" ದೊಪ್ಪಿಕೊಂಡನು. ಆಗ ರಾವಣನನ್ನು ಕುರಿತು, "ಅಯ್ಯಾ ರಾವಣಾ! ಧನುರ್ಬಾಣಗಳನ್ನು ಹಿಡಿದು ನನ್ನನ್ನು ಕೊಲ್ಲುವುದಕ್ಕಾಗಿ ನಿಂತಿರುವ ಆ ರಾಮನು ನನ್ನನ್ನು ನೋಡಿದ ಮಾತ್ರದಲ್ಲಿಯೇ ನನ್ನ ಜೀವವು ದೇಹವನ್ನು ಬಿಟ್ಟು ಹೋಗುವುದು. ಅವನು ನನ್ನಮೇಲೆ ಶಸ್ತ್ರವನ್ನು ಪ್ರಯೋಗಿಸಬೇಕಾದುದೇ ಇಲ್ಲ. ಇನ್ನು ನಾನು ಸತ್ತಂತೆಯೇ ತಿಳಿ! ರಾಮನನ್ನಿದಿರಿಸಿದಮೇಲೆ ಬದುಕಿ ಬರುವುದೆಂದರೇನು? ನಾನೂ ನಿನ್ನಂತೆಯೇ ಯಮದಂಡಕ್ಕೆ ಸಿಕ್ಕಿ ಸಾಯಬೇಕಾಗಿ ಬಂದಿರುವುದು. ನಿನಗೆ ಈ ದುರ್ಬುದ್ಧಿಯೇ ಸ್ಥಿರವಾಗಿ ಬಂದೊದಗಿರುವಾಗ ನಾನೇನು ಮಾಡಬಲ್ಲೆನು? ಇದೋ ನಾನು ಸಿದ್ಧವಾಗಿ ಹೊರಟಿರುವೆನು. ನಿನಗೆ ಮಂಗಳವಾಗಲಿ" ಎಂದನು. ಈ ಮಾತನ್ನು ಕೇಳಿ ರಾವಣನಿಗೆ ಪರಮಾನಂದವುಂಟಾಯಿತು. ಆಗ ಮಾರೀಚನನ್ನು ಸಂತೋಷದಿಂದ ಬಿಗಿಯಾಗಿ ಅಪ್ಪಿಕೊಂಡು "ಅಯ್ಯಾ ಮಿತ್ರನೆ? ಈಗಲೀಗ ಸರಿ!

[1]ನಿನ್ನ ವೀರ್ಯಕ್ಕೆ ತಕ್ಕ ಮಾತನ್ನೇ ಆಡಿದೆ! ನನ್ನಂತವನು ಹೇಳಬೇಕಾದ ಮಾತನ್ನೇ ನೀನೂ ಈಗ ಆಡಿದಂತಾಯಿತು! ಈಗಲೀಗ ನೀನು ಮಾರೀಚ ನೆಂಬುದು ನಿಜವು! ಇದುವರೆಗೆ ನೀನು ಅನಾಮಧೇಯನಾದ ಯಾವನೋ ಒಬ್ಬ ರಾಕ್ಷಸನಂತಿದ್ದೆಯಲ್ಲವೆ? ಅದೊ! ಅಲ್ಲಿ ರತ್ನಾಲಂಕೃತವಾಗಿ, ಪಿಶಾಚ ಮುಖವುಳ್ಳ ಕತ್ತೆಗಳನ್ನು ಹೂಡಿರುವ ಆ ರಥವನ್ನು ನೀನೂ ನನ್ನೊಡನೆ ಏರು! ಮೊದಲು ಸೀತೆಯ ಮುಂದೆ ನಲಿದಾಡಿ, ಅವಳಿಗೆ ಆಸೆಯನ್ನು ಹುಟ್ಟಿಸಿ ನಿನ್ನ ಇಷ್ಟಬಂದ ಕಡೆಗೆ ಹೊರಟುಹೋಗು! ರಾಮಲಕ್ಷ್ಮಣರಿಬ್ಬರೂ ಇಲ್ಲದೆ, ಆಶ್ರಮವು ಶೂನ್ಯವಾಗಿರುವ ಸಮಯವನ್ನು ನೋಡಿ, ನಾನು ಸೀತೆಯನ್ನು ತಂದುಬಿಡುವೆನು" ಎಂದನು. ಆಮೇಲೆ ಅವರಿಬ್ಬರೂ ವಿಮಾನದಂತಿರುವ ಆ ರಥವನ್ನೇರಿ ಮಾರೀಚಾಶ್ರಮದಿಂದ ಹೊರಟು ವೇಗದಿಂದ ಬರುತಿದ್ದರು. ಇಬ್ಬರೂ ರಥಾರೂಢರಾಗಿ, ದಾರಿಯುದ್ಧಕ್ಕೂ [2]ನಗರಗಳನ್ನೂ, ಉದ್ಯಾನ ವನಗಳನ್ನೂ, ಜನಭರಿತಗಳಾದ ಪುರಗಳನ್ನೂ, ರಮ್ಯವಾದ ಪರ್ವತ ಶ್ರೇಣಿ ಗಳನ್ನೂ, ನದಿಗಳನ್ನೂ, ಬೇರೆ ಬೇರೆ ರಾಜ್ಯಗಳನ್ನೂ, ಸಣ್ಣ ಪಟ್ಟಣಗಳನ್ನೂ ನೋಡುತ್ತ ಬಂದರು. ಕೊನೆಗೆ ದಂಡಕಾರಣ್ಯವನ್ನು ಸೇರಿ ಅಲ್ಲಿ ರಾಮಾಶ್ರಮ ವನ್ನು ಕಂಡರು. ಅಲ್ಲಿ ರಾವಣನು ಸುವರ್ಣಾಲಂಕೃತವಾದ ತನ್ನ ರಥದಿಂದಿಳಿದು, ಮಾರೀಚನ ಕೈಯನ್ನು ಹಿಡಿದುಕೊಂಡು, "ಮಿತ್ರನೆ! ಅದೋ ಬಾಳೆಯ

---

1. ಇಲ್ಲಿ "ಏತಚ್ಛೌಂಡೀರ್ಯಯುಕ್ತಂ ತೇ ಮಚ್ಛಂದಾದಿವ ಭಾಷಿತಂ" ಎಂದು ಮೂಲವು. ಇದಕ್ಕೆ "ನನ್ನ ಮನೋಭಿಪ್ರಾಯಕ್ಕೆ ತಕ್ಕಂತೆ ನೀನು ಹೇಳಿದ ಈ ವಾಕ್ಯವೇ ಈಗ ನಿನ್ನ ವೀರ್ಯವನ್ನು ಚೆನ್ನಾಗಿ ಹೊರಪಡಿಸುತ್ತಿರುವು"ದೆಂದೂ ಭಾವವು.

2. ನಗರಗಳಿಗೂ, ಪಟ್ಟಣಗಳಿಗೂ, ಪುರಗಳಿಗೂ ಪರಸ್ಪರ ಭೇದಗಳುಂಟು. ಇವುಗಳ ಭೇದವು ವಾಸ್ತುಶಾಸ್ತ್ರದಲ್ಲಿ ವಿವರಿಸಲ್ಪಟ್ಟಿರುವುದು. "ಗ್ರಾಮಶ್ಚ ನಗರಂ ಚೈವ ಪಟ್ಟಣಂ ಖರ್ವಟಂ ಪುರಂ। ಖೇಟಕಂ ಕುಸುಮಂ ಚೈವ ಶಿಬಿರಂ ರಾಜವಾಸಿಕಂ। ಸೇನಾ-ಮುಖಮಿತಿ ತ್ವೇವಂ ದಶಧಾ ಕೀರ್ತಿತಂ ಬುಧೈಃ" ಎಂಬುದಾಗಿ ಹತ್ತು ವಿಧಗಳುಂಟು. ಇವುಗಳಲ್ಲಿ ಗ್ರಾಮವೆಂಬುದರ ಲಕ್ಷಣವೇನೆಂದರೆ, "ವಿಪ್ರಾಣಾಂ ಚ ಸಭೃತ್ಯಾನಾಂ ವಾಸೋ ಗ್ರಾಮ ಇತೀರಿತಃ। ಸ ಏವ ವಿಪ್ರೈರಾಕೀರ್ಣಸ್ತ್ವಗ್ರಹಾರ ಇತಿ ಸ್ಮೃತಃ". ಭೃತ್ಯವರ್ಗ ದೊಡಗೂಡಿದ ಬ್ರಾಹ್ಮಣರಿರುವ ಸ್ಥಲವು ಗ್ರಾಮವೆನಿಸುವುದು. ಕೇವಲ ಬ್ರಾಹ್ಮಣರೇ ತುಂಬಿರುವ ಊರು ಅಗ್ರಹಾರವೆನಿಸುವುದು. "ಕುಟುಂಬಬೇಧೈರೇಕೋನತ್ರಿಂಶದ್ಭಿಶ್ಚ ಸಮನ್ವಿತಃ" ಅಗ್ರಹಾರವೆಂಬುದರಲ್ಲಿ ಇಪ್ಪತ್ತೊಂಬತ್ತು ಬಗೆಯ ಬೇರೆಬೇರೆ ಕುಟುಂಬಕ್ಕೆ

ತೋಟದಿಂದ ಪರಿವೃತವಾದ ರಾಮಾಶ್ರಮವು ಕಾಣುತ್ತಿರುವುದು ನೋಡು! ಇನ್ನು ನೀನು ಇಲ್ಲಿ ನಡೆಸಬೇಕಾದ ಕೆಲಸವನ್ನು ಶೀಘ್ರದಲ್ಲಿಯೇ ನಡೆಸಬೇಕು" ಎಂದನು. ಇದನ್ನು ಕೇಳಿ ಮಾರೀಚನು ಆಗಲೇ ಮೃಗರೂಪವನ್ನು ಧರಿಸಿ, ಆ ಆಶ್ರಮದ ಮುಂದೆ ಸುತ್ತಲಾರಂಭಿಸಿದನು ಆಗ ಮಾರೀಚನು ಧರಿಸಿದ್ದ ದೊಡ್ಡ ಮೃಗರೂಪವು ನೋಡುವವರಿಗೆ ಅತ್ಯಾಶ್ಚರ್ಯವನ್ನು ಉಂಟು ಮಾಡುತಿತ್ತು. ಕೊಂಬುಗಳೆರಡೂ ಇಂದ್ರನೀಲಮಣಿಯಿಂದ ಮಾಡಲ್ಪಟ್ಟಂತಿದ್ದುವು. ಮುಖದಲ್ಲಿ ಬಿಳುಪು, ಮತ್ತು ಕಪ್ಪುಬಣ್ಣಗಳುಳ್ಳ ರೇಖೆಗಳು ಶೋಭಿಸುತ್ತಿದ್ದುವು. ಮತ್ತು ಮುಖದಲ್ಲಿ ಕೆಂದಾವರೆಯನ್ನೂ, ಕರೀನೈದಿಲೆಯನ್ನೂ ಹೋಲುವ ಮಚ್ಚೆಗಳು ಕಾಣಿಸುತ್ತಿದ್ದುವು ಕಿವಿಗಳೆರಡೂ ಕರೀನೈದಿಲೆಹೂವಿನ ಆಕಾರವುಳ್ಳವುಗಳಾಗಿಯೂ ಇಂದ್ರನೀಲದ ಬಣ್ಣವುಳ್ಳವುಗಳಾಗಿಯೂ ಇದ್ದುವು. ಅದು ಕೊರಲನ್ನು ಸ್ವಲ್ಪವಾಗಿ ಮೇಲಕ್ಕೆತ್ತಿ, ಇಂದ್ರನೀಲದಳದಂತಿರುವ ತುಟಿಯಿಂದ ಕೂಡಿ, ಸೊಬಗಿನಿಂದ ಅಲ್ಲಲ್ಲಿ ನಲಿಯಲಾರಂಭಿಸಿತು. ಮತ್ತು ಆ ಮೃಗದ ಉದರಪ್ರದೇಶವು ಮೊಲ್ಲೆಯ ಹೂವಿನಂತೆಯೂ, ಚಂದ್ರನಂತೆಯೂ, ವಜ್ರಮಣಿಯಂತೆಯೂ ಬಿಳುಪಾಗಿ ಹೊಳೆಯುತಿತ್ತು. ಅದರ ಪಕ್ಕೆಗಳಲ್ಲಿ ಹಿಪ್ಪೆಯ ಹೂವಿನಂತೆ ಅದ್ಭುತವಾದ ಕಾಂತಿಯು ಥಳಿಥಳಿಸುತಿತ್ತು. ಉಳಿದ ಅವಯವಗಳೆಲ್ಲವೂ ತಾವರೆಯ ಕುಸುರಿಗಳಂತೆ ಶೋಭಿಸುತಿದ್ದುವು. ಅದರ

---

ಸೇರಿದ ಬ್ರಾಹ್ಮಣರಿರಬೇಕು. ನಗರವೆಂದರೆ, "ಅನೇಕ ನಾರೀ ಸಂಬದ್ಧಂ ನಾನಾಶಿಲ್ಪಿಗಣೈರ್ವೃತಂ। ಕ್ರಯವಿಕ್ರಯಿಕೈಃ ಕೀರ್ಣಂ ಸರ್ವದೇವೈಸ್ಸಮನ್ವಿತಂ। ನಗರಂ ತ್ವಿತಿ ವಿಖ್ಯಾತಂ" ಅನೇಕ ಸ್ತ್ರೀಯರಿಂದಲೂ, ಬಗೆಬಗೆಯ ಕೈಗಾರಿಕೆಯನ್ನು ತಿಳಿದ ಶಿಲ್ಪಿಗಳಿಂದಲೂ, ಕ್ರಯವಿಕ್ರಯಾದಿ ವ್ಯವಹಾರಗಳನ್ನು ಮಾಡುವ ವರ್ತಕರಿಂದಲೂ, ಅನೇಕ ದೇವಾಲಯಗಳಿಂದಲೂ ತುಂಬಿದುದು ನಗರವೆನಿಸುವುದು. ಪಟ್ಟಣವೆಂದರೆ "ದ್ವೀಪಾಂತರಾಗತದ್ರವ್ಯಕ್ರಯವಿಕ್ರಯಿಕೈರ್ಯುತಂ। ಪಟ್ಟಣಂ ತ್ವಬ್ಧಿತೀರೇ ಸ್ಯಾತ್" ಸಮುದ್ರತೀರದಲ್ಲಿದ್ದು ದ್ವೀಪಾಂತರಗಳೊಡನೆ ದೊಡ್ಡ ವ್ಯಾಪಾರವನ್ನು ನಡೆಸುವುದು ಪಟ್ಟಣವು. "ತಯೋರ್ಮಿಶ್ರಂ ತು ಖರ್ವಟಂ" ನಗರಲಕ್ಷಣವೂ, ಪಟ್ಟಣ ಲಕ್ಷಣವೂ, ಸೇರಿದ ಕಡೆಯು ಖರ್ವಟವೆನಿಸುವುದು. "ಕ್ರಯವಿಕ್ರಯಿಕೈರ್ಯುಕ್ತಂ ನಾನಾಜಾತಿಸಮನ್ವಿತಂ। ತಂತುವಾಯಸಮಾಯುಕ್ತಂ ತತ್ಪುರಂ ತ್ವಿತಿ ಕಥ್ಯತೇ" ಕ್ರಯವಿಕ್ರಯಾದಿಗಳನ್ನು ನಡೆಸುವ ವ್ಯಾಪಾರಿಗಳಿಂದ ಕೂಡಿ ನಾನಾಜಾತಿಯ ಜನಗಳಿಂದ ತುಂಬಿ, ನೇಯ್ಗೆಯವರಿಂದ ವಿಶೇಷ ನಿಬಿಡವಾದ ಸ್ಥಳವು ಪುರವೆನಿಸುವುದು.

ಗೊರಸಲುಗಳು ವೈಢೂರ್ಯಮಯವಾದಂತೆ ಕಾಣುತಿದ್ದುವು. ಮೊಳಕಾಲುಗಳೆಲ್ಲವೂ ಸೂಕ್ಷ್ಮವಾಗಿದ್ದರೂ ಆ ಅವಯವದ ಸಂಧಿಬಂಧಗಳು ಬಹಳ ದೃಢವಾಗಿದ್ದುವು ಅದರ ಬಾಲವು ಇಂದ್ರಧನುಸ್ಸಿನಂತೆ ಬಾಗಿ ವಿಚಿತ್ರವರ್ಣದಿಂದ ಕೂಡಿತ್ತು. ಹೀಗೆ ಬಹಳ ಮನೋಹರವಾಗಿ, ನುಣುಪಾದ ಮೈಯ್ಯುಳ್ಳದಾಗಿ ನವರತ್ನಖಚಿತವಾದಂತೆ ಬಗೆಬಗೆಯ ಬಣ್ಣಗಳುಳ್ಳ ಮಚ್ಚೆಗಳಿಂದ ಕೂಡಿದ ಆ ಮೃಗದ ಅವಯವವು ಲೋಕಮೋಹಕವಾಗಿರುವಂತೆ ಕಾಣುತಿತ್ತು. ಕ್ಷಣಮಾತ್ರದಲ್ಲಿಯೇ ಮಾರೀಚನು ಆ ವನಪ್ರದೇಶವೆಲ್ಲವನ್ನೂ ಬೆಳಗುವಂತೆ ವಿಚಿತ್ರವಾದ ಈ ಮೃಗರೂಪವನ್ನು ತನ್ನ ಮಾಯೆಯಿಂದ ಧರಿಸಿಬಿಟ್ಟನು. ಹೀಗೆ ನೋಡುವವರಿಗೆ ಆಸೆಯನ್ನು ಹುಟ್ಟಿಸುವ ವಿಚಿತ್ರ ವರ್ಣವುಳ್ಳ ಮನೋಹರವಾದ ಮೃಗರೂಪವನ್ನು ಧರಿಸಿ, ಸೀತೆಯನ್ನು ಮೋಸಗೊಳಿಸುವುದಕ್ಕಾಗಿ ಬಂದು, ಆ ಆಶ್ರಮದ ಮುಂದಿರುವ ಗರಿಕೆಯ ಹುಲ್ಲನ್ನು ಮೇಯುತ್ತ, ಅಲ್ಲಲ್ಲಿ ಸುತ್ತಲೂ ಸಂಚರಿಸುತಿದ್ದನು. ಬೆಳ್ಳಿಯಂತಿರುವ ಬಿಳೀಮಚ್ಚೆಗಳಿಂದ ಕೂಡಿ, ವಿಚಿತ್ರವಾದ ರೂಪವನ್ನು ತೋರಿಸುತ್ತಾ, ಆ ಆಶ್ರಮದಲ್ಲಿ ಅಲ್ಲಲ್ಲಿ ಬೆಳೆದಿರುವ ಗಿಡಗಳ ಎಳೇ ಚಿಗುರುಗಳನ್ನು ಮುರಿದು ಮೆಲುಕಿಡುತ್ತ, ಅಲ್ಲಲ್ಲಿ ವಿಹಾರಾರ್ಥವಾಗಿ ಮಾಡಿರುವ ಕದಳೀ ಗೃಹಗಳಲ್ಲಿ ಪ್ರವೇಶಿಸಿ, ಅಲ್ಲಲ್ಲಿರುವ ಕರ್ಣಿಕಾರದ ಗಿಡಗಳಲ್ಲಿ ಸುತ್ತಿ ಮೆಲ್ಲಗೆ ಅಡಿಗಳನ್ನಿಡುತ್ತ, ಅತ್ತಿತ್ತ ತಿರುಗುತಿದ್ದು, ಕೊನೆಗೆ ಸೀತೆಯ ಕಣ್ಣಿಗೆ ಬೀಳುವಂತೆ ಅನುಕೂಲವಾದ ಸ್ಥಳವನ್ನು ನೋಡಿ ಅಲ್ಲಿಗೆ ಬಂದು ಸೇರಿತು. ತಾವರೆಯಂತೆ ವಿಚಿತ್ರವಾದ ಬೆನ್ನುಳ್ಳ ಆ ಮಹಾಮೃಗವು ರಾಮಾಶ್ರಮದ ಮುಂದೆ ಸ್ವೇಚ್ಛೆಯಿಂದ ಸಂಚರಿಸಲಾರಂಭಿಸಿತು. ಒಂದಾವೃತ್ತಿ ಮುಂದೆ ಹೋಗುವುದು. ಅಲ್ಲಿಂದ ಹಿಂತಿರುಗಿ ಬರುವುದು. ಪುನಃ ಮುಂದೆ ಹೋಗುವುದು. ಅಲ್ಲಲ್ಲಿ ಸ್ವಲ್ಪ ಹೊತ್ತಿನವರೆಗೆ ನಿಂತು ಇದ್ದಕ್ಕಿದ್ದ ಹಾಗೆ ಹಿಂದಿರುಗಿ ಓಡುವುದು. ಹೀಗೆ ನಾನಾ ವಿಧದಲ್ಲಿ ಯಾತಾಯಾತಗಳನ್ನು ಮಾಡಿ ಅಲ್ಲಲ್ಲಿ ನಲಿದಾಡುತ್ತಿದ್ದು, ಕೊನೆಗೆ ಬಹಳವಾಗಿ ಬಳಲಿದಂತೆ ನೆಲದ ಮೇಲೆ ಮಲಗುವುದು. ಆಶ್ರಮದ ಬಾಗಿಲಿಗೆ ಹೋಗಿ ಅಲ್ಲಿಂದ ತಟ್ಟನೆ ಹಿಂದಿರುಗಿ ಓಡಿಬಂದು ಅಲ್ಲಿನ ಇತರ ಮೃಗಗಳ ಗುಂಪಿನಲ್ಲಿ ಸೇರುವುದು. ಆ ಮೃಗಗಳ ಗುಂಪಿನಲ್ಲಿ ಕಲೆತು ತಿರಿಗಿ ಆಶ್ರಮ ದ್ವಾರಕ್ಕೆ ಬರುವುದು. ಹೀಗೆ ಮೃಗರೂಪವನ್ನು ಧರಿಸಿದ ಮಾರೀಚನು ಹೇಗಾದರೂ ತಾನು ಸೀತೆಯ ಕಣ್ಣಿಗೆ

*

ಬೀಳಬೇಕೆಂಬ ಆಸೆಯಿಂದ ಮಂಡಲಾಕಾರವಾದ ವಿಚಿತ್ರಗತಿಗಳನ್ನು ತೋರಿಸಿ ತಿರುಗುತ್ತಿದ್ದನು. ಕಾಡಿನಲ್ಲಿರುವ ಇತರ ಮೃಗಗಳೆಲ್ಲವೂ ಈ ವಿಚಿತ್ರ ಮೃಗವನ್ನು ನೋಡಿ ಆಸೆಯಿಂದ ಇದರ ಸಮೀಪಕ್ಕೆ ಬಂದು, ಇದರ ಮೈಯನ್ನು ಮೂಸಿನೋಡಿ, ತಮಗೆ ವೈರಿಯಾದ ರಾಕ್ಷಸನೆಂಬುದನ್ನು ಹೇಗೋ ತಿಳಿದುಕೊಂಡು ಭಯಪಟ್ಟು ದಿಕ್ಕುದಿಕ್ಕಾಗಿ ಓಡುತ್ತಿರುವುವು. ಈ ರಾಕ್ಷಸನು ಮೃಗಗಳನ್ನು ಕೊಲ್ಲುವ ಸ್ವಭಾವವುಳ್ಳವನಾಗಿದ್ದರೂ, ತನ್ನ ದುಸ್ಸ್ವಭಾವವನ್ನು ಮರೆಸಿಡುವುದಕ್ಕಾಗಿ ಆ ಕಾಡುಮೃಗಗಳು ಬಂದು ಮುಟ್ಟಿದಾಗಲೂ ಅವುಗಳನ್ನು ಕೊಲ್ಲದೆ ಸಾಧುತ್ವವನ್ನೇ ತೋರಿಸುತ್ತಿರುವನು. ಹೀಗಿರುವಷ್ಟರಲ್ಲಿ ಇತ್ತಲಾಗಿ ಸೀತೆಯು ಆ ವನದಲ್ಲಿ ಹೂಗಳನ್ನು ಕುಯ್ಯುವುದಕ್ಕಾಗಿ ಅಲ್ಲಲ್ಲಿರುವ ಹೂಗಿಡಗಳನ್ನು ಸುತ್ತಿಬರುತ್ತಿದ್ದಳು. ಅಲ್ಲಲ್ಲಿ ಬೆಟ್ಟದಾವರೆ, ಅಸುಗೆ, ಮಾವು ಮುಂತಾದ ಗಿಡಗಳಲ್ಲಿ ಹೂಗಳನ್ನು ಕುಯ್ಯುತ್ತಾ ಉಲ್ಲಾಸದಿಂದ ಪ್ರಸನ್ನಮುಖವುಳ್ಳವಳಾಗಿ ಅಲ್ಲಲ್ಲಿ ಸಂಚರಿಸುತ್ತ ಬಂದಳು. ಒಂದು ಹೂಗಿಡದ ಬಳಿಗೆ ಹೋದಾಗ ಅರಣ್ಯವಾಸಕ್ಕೆ ಯೋಗ್ಯಳಲ್ಲದ ಸುಕುಮಾರಿಯಾದ ಸೀತೆಗೆ ರತ್ನಮಯವಾದ ಈ ಮೃಗವು ಗೋಚರಿಸಿತು. ಮುತ್ತಿನ ಮಣಿಗಳಿಂದ ಬಿಗಿದಂತೆ ವಿಚಿತ್ರವಾದ ಮೈಯುಳ್ಳ ಆ ಮೃಗವನ್ನು ಕಣ್ಣಿಟ್ಟು ನೋಡಿದಳು. ಬೆಳ್ಳಿ ಮೊದಲಾದ ಉತ್ತಮ ಲೋಹಗಳಿಂದಲೂ, ಗೈರಿಕಾದಿ ಧಾತುಗಳಿಂದಲೂ ಮಾಡಿಟ್ಟಂತೆ ಹೊಳೆಪಿನಿಂದ ಕೂಡಿದ ಮೈಕೂದಲುಗಳುಳ್ಳ ಆ ಮೃಗವನ್ನು ನೋಡಿದೊಡನೆಯೇ ಸೀತೆಗೆ ಅದರಲ್ಲಿ ಒಂದು ವಿಧವಾದ ಅಸಾಧಾರಣ ಸ್ನೇಹವುಂಟಾಯಿತು. ಆಸೆಯಿಂದಲೂ, ಆಶ್ಚರ್ಯದಿಂದಲೂ ಅರಳಿದ ಕಣ್ಣುಳ್ಳವಳಾಗಿ, ನಟ್ಟ ದೃಷ್ಟಿಯಿಂದ ಅದನ್ನೇ ನೋಡುತ್ತಿದ್ದಳು. ಆ ಮಾಯಾಮೃಗವೂ ಕೂಡ ರಾಮನ ಪ್ರಿಯಪತ್ನಿಯಾದ ಸೀತೆಯು ತನ್ನನ್ನು ಆಸೆಯಿಂದ ನೋಡುವುದನ್ನು ಕಂಡು, ಅವಳಿಗೆ ಮತ್ತಷ್ಟು ಆಸೆಯನ್ನು ಹೆಚ್ಚಿಸುವುದಕ್ಕಾಗಿ ಚಿತ್ರವಿಚಿತ್ರಗತಿಯನ್ನು ತೋರಿಸುತ್ತ, ತನ್ನ ದೇಹಕಾಂತಿಯಿಂದ ಆ ವನವೆಲ್ಲವನ್ನೂ ಬೆಳಗಿಸಿತು. ಜನಕಪುತ್ರಿಯಾದ ಆ ಸೀತೆಯಾದರೋ, ತಾನು ಹಿಂದೆ ಯಾವಾಗಲೂ ಕಂಡು ಕೇಳದ ನವರತ್ನಮಯವಾದ ಈ ಜಿಂಕೆಯನ್ನು ಕಂಡು ಪರಮಾಶ್ಚರ್ಯದಿಂದಿದ್ದಳು.

ಇಲ್ಲಿಗೆ ನಾಲ್ವತ್ತೆರಡನೆಯ ಸರ್ಗವು.

ಸೀತೆಯು ಮಾಯಾಮೃಗವನ್ನು ನೋಡಿ, ಅದನ್ನು ಹಿಡಿದುಕೊಡಬೇಕೆಂದು ರಾಮಲಕ್ಷ್ಮಣರನ್ನು ಪ್ರಾರ್ಥಿಸಿದುದು. ಲಕ್ಷ್ಮಣನು ಅದು ರಾಕ್ಷಸನ ಮಾಯೆಯೆಂದು ಹೇಳಿ ತಡೆದುದು. ರಾಮನು ಹೇಗಿದ್ದರೂ ಅದನ್ನು ಹಿಡಿದು ತರುವುದಾಗಿ ಸೀತೆಗೆ ಕಾವಲಾಗಿ ಲಕ್ಷ್ಮಣನನ್ನಿರಿಸಿ ಆ ಮೃಗವನ್ನು ಹಿಂಬಾಲಿಸಿ ಹೋದುದು.

ಸುವರ್ಣಚ್ಛಾಯೆಯಂತಿರುವ ದೇಹಕಾಂತಿಯುಳ್ಳವಳಾಗಿಯೂ, ಕಂದು ಕುಂದಿಲ್ಲದ ಅವಯವಗಳುಳ್ಳವಳಾಗಿಯೂ ಇರುವ ಆ ಸೀತೆಯು, ಹೂಗಳನ್ನು ಕುಯ್ಯುತ್ತ, ಅಪೂರ್ವಾಕಾರವುಳ್ಳ ಆ ಮೃಗವನ್ನು ನೋಡಿದಳು. ಒಂದು ಪಕ್ಕದಲ್ಲಿ ಸುವರ್ಣಚ್ಛಾಯೆಯಿಂದಲೂ, ಮತ್ತೊಂದು ಪಕ್ಕದಲ್ಲಿ ಬೆಳ್ಳಿಯ ಕಾಂತಿಯಿಂದಲೂ, ಥಳಥಳಿಸುತಿದ್ದ ಆ ಮಾಯಾಮೃಗವನ್ನು ನೋಡಿ ದೊಡನೆಯೇ ಅವಳಿಗೆ ಪರಮಾಶ್ಚರ್ಯವೂ ಸಂತೋಷವೂ ಉಂಟಾಯಿತು. ಆಗ ಪತಿಯಾದ ರಾಮನನ್ನೂ, ಲಕ್ಷ್ಮಣನನ್ನೂ ಆಯುಧಧಾರಿಯಾಗಿ ಬರುವಂತೆ ಕೂಗಿಕೊಂಡಳು. ಹೀಗೆ ಸೀತೆಯು ಸಂಭ್ರಮದಿಂದ ಗಟ್ಟಿಯಾಗಿ ಕೂಗುತ್ತಿರುವುದನ್ನು ನೋಡಿ ರಾಮಲಕ್ಷ್ಮಣರಿಬ್ಬರೂ ತಟ್ಟನೆ ಹಿಂದಿರುಗಿ ನೋಡಿದರು. ಅಲ್ಲಿ ಈ ಸುವರ್ಣಮೃಗವು ಅವರ ಕಣ್ಣಿಗೂ ಗೋಚರಿಸಿತು. ಅದರ ವಿಚಿತ್ರರೂಪವನ್ನು ನೋಡಿದಾಗಲೇ ಲಕ್ಷ್ಮಣನ ಮನಸ್ಸಿಗೆ ಶಂಕೆ ಯುಂಟಾಯಿತು. ಆಗ ಲಕ್ಷ್ಮಣನು ರಾಮನನ್ನು ಕುರಿತು "ಅಣ್ಣಾ! ಈಗಲೂ ಆ ಮಾರೀಚನೆಂಬ ರಾಕ್ಷಸನೇ ಮೃಗರೂಪದಿಂದ ಬಂದಿರುವನೆಂದು ನನ್ನ ಮನಸ್ಸಿಗೆ ತೋರುವುದು. ಕಾಮರೂಪಿಯಾದ ಮಾರೀಚನು ಆಗಾಗ ಮೃಗರೂಪವನ್ನು ಧರಿಸಿ, ಆ ವ್ಯಾಜದಿಂದ ಕಾಡಿನಲ್ಲಿ ಬೇಟೆಗೋಸ್ಕರ ಬಂದ ಅನೇಕ ರಾಜರನ್ನು ಕೊಂದಿರುವನು. ಮಾಯೆಯಲ್ಲಿ ನಿಪುಣನಾದ ಆ ಮಾರೀಚನೇ ಹೀಗೆ ಮಾಯಾಮೃಗಸ್ವರೂಪದಿಂದ ಬಂದಿರುವನೆಂಬುದರಲ್ಲಿ ಸಂದೇಹವಿಲ್ಲ! ಈ ಮೃಗದ ಆಕೃತಿಯನ್ನು ನೋಡಿದಾಗಲೇ ಅದು ವ್ಯಕ್ತ ವಾಗುವುದು. ಅದರ ದೇಹದಲ್ಲಿ ಹೊಳೆಯುತ್ತಿರುವ ಕಾಂತಿಯನ್ನು ನೋಡು. [1]ಗಂಧರ್ವನಗರದಂತೆ ಕ್ಷಣಕ್ಷಣಕ್ಕೂ ಬಗೆಬಗೆಯಾದ ಅದ್ಭುತಕಾಂತಿಯನ್ನು

1. ಗಂಧರ್ವನಗರವೆಂದರೆ ಮೇಘಗಳಲ್ಲಿ ಕ್ಷಣಕ್ಷಣಕ್ಕೂ ಚಿತ್ರವಿಚಿತ್ರವಾಗಿ ಬೇರೆ ಬೇರೆ ಆಕಾರದಿಂದ ಕಾಣುವ ಪ್ರಾಸಾದಗೋಪುರಾದ್ಯಾಕೃತಿಗಳು. ಇವು ಕ್ಷಣಕ್ಷಣಕ್ಕೂ ಬದಲಾಯಿಸುತ್ತಿರುವುದರಿಂದ ಕ್ಷಣಭಂಗುರಗಳೆನಿಸುವುವು.

ತೋರಿಸುವುದಲ್ಲವೆ? ಎಲೈ ಪುರುಷಶ್ರೇಷ್ಠನೆ! ನವರತ್ನಗಳಿಂದ ವಿಚಿತ್ರಿತ ವಾದ ಇಂತಹ ಮೃಗವು ಪ್ರಪಂಚದಲ್ಲಿ ಎಲ್ಲಿಯಾದರೂ ಉಂಟೇ? ಇದು ಮಾಯೆಯೆಂಬುದರಲ್ಲಿ ಸಂದೇಹವೇ ಇಲ್ಲ" ಎಂದನು. ಈ ಮಾತನ್ನು ಕೇಳುತ್ತಿದ್ದ ಸೀತೆಯು ಮುಗುಳ್ನಗೆಯಿಂದ ನಗುತ್ತ, ಲಕ್ಷ್ಮಣನ ಮಾತನ್ನು ತಡೆದು, ಆ ಮಾಯಾಮೃಗದ ಚರ್ಮದ ಹೊಳೆಪಿಗೆ ಮರುಳಾಗಿ, ತನ್ನ ಪತಿ ಯಾದ ರಾಮನನ್ನು ಕುರಿತು, "ಎಲೈ ಆರ್ಯಪುತ್ರನೇ! ಆ ಮೃಗದ ಸೌಂದರ್ಯವನ್ನು ನೋಡಿದೆಯಾ? ಇದು ನನ್ನ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿಬಿಟ್ಟಿರುವುದು. ಹೇಗಾದರೂ ಅದನ್ನು ಹಿಡಿದು ನನಗೆ ತಂದು ಕೊಡುವೆಯಾ! ಇದು ನನಗೆ ಕ್ರೀಡಾರ್ಥವಾಗಿ ಉಪಯೋಗಪಡುವುದು. ಮಹಾಭುಜನೆನಿಸಿಕೊಂಡ ನಿನಗೆ ಇದೇನೂ ಅಸಾಧ್ಯವಲ್ಲವಷ್ಟೆ! ಎಲೈ ಆರ್ಯನೆ! ಇಲ್ಲಿ ನಮ್ಮಾಶ್ರಮದಲ್ಲಿ ಕಣ್ಣಿಗೆ ಅಂದವಾದ ಮೃಗಗಳು ಹೇರಳ ವಾಗಿರುವುವು. ಚಮರಮೃಗಗಳೂ, ಕರಡಿಗಳೂ, ಜಿಂಕೆಗಳೂ, ಕಪಿಗಳೂ, ನೋಡುವವರ ಮನಸ್ಸನ್ನಾಕರ್ಷಿಸುವಂತೆ ಗುಂಪುಗುಂಪಾಗಿ ತಿರುಗುತ್ತಿರುವುವು. ಎಷ್ಟಿದ್ದರೇನು? ಇದಕ್ಕೆ ಸಮಾನವಾದ ಮೃಗವನ್ನು ಹಿಂದೆ ನಾನು ಎಂದೂ ನೋಡಿದುದಿಲ್ಲ. ಇದರ ತೇಜಸ್ಸೇ ಬೇರೆ! ಇದರ ತಾಳ್ಮೆಯೇ ಬೇರೆ! ಇದರ ಕಾಂತಿಯೇ ಬೇರೆಯಾಗಿರುವುದು! ಬಗೆಬಗೆಯ ಬಣ್ಣಗಳಿಂದಲೂ ರತ್ನಮಯವಾದ ಮಚ್ಚೆಗಳಿಂದಲೂ, ಚಿತ್ರವಿಚಿತ್ರವಾದ ಮೈಯುಳ್ಳ ಈ ಮೃಗವು, ಇಲ್ಲಿಗೆ ಬಂದಿರುವುದರಿಂದ, ಚಂದ್ರೋದಯವಾದಂತೆ ಈ ವನಕ್ಕೇ ಒಂದು ವಿಧವಾದ ಶೋಭಾತಿಶಯವುಂಟಾಗಿರುವುದನ್ನು ನೋಡಿದೆಯಾ? ಆಹಾ! ಅದರ ರೂಪವೇನು? ಅದರ ಕಾಂತಿಯೇನು! ಇಂಪಾದ ಅದರ ಕಂಠಸ್ವರವೇನು? ವಿಚಿತ್ರವಾದ ಮೈಯಿಂದ ಲೋಕಾದ್ಭುತವೆನಿಸಿಕೊಂಡ ಈ ಮೃಗವು ನನ್ನ ಮನಸ್ಸನ್ನು ಚೆನ್ನಾಗಿ ಆಕರ್ಷಿಸಿಬಿಟ್ಟಿರುವುದು. ನೀನು ಮಾತ್ರ ಈ ಮೃಗವನ್ನು ಜೀವಸಹಿತವಾಗಿಯೇ ಹಿಡಿದು ತಂದರೆ, ನಾವು ಇನ್ನೂ ಎಷ್ಟೋ ಆಶ್ಚರ್ಯಗಳನ್ನು ನೋಡಬಹುದು. ಎಲೈ ಪ್ರಿಯನೆ! ಅದು ಹಾಗಿರಲಿ! ನಾವು ವನವಾಸವನ್ನು ಮುಗಿಸಿಕೊಂಡು ನಮ್ಮ ರಾಜ್ಯಕ್ಕೆ ಹೋದಮೇಲೆ, ಈ ಮೃಗವನ್ನು ನಮ್ಮ ಅರಮನೆಯಲ್ಲಿಟ್ಟರೆ, ನಮ್ಮ ಅಂತಃ ಪುರಕ್ಕೇ ಒಂದು ಅಲಂಕಾರವಲ್ಲವೆ? ಆರ್ಯನಾದ ಭರತನೂ ನಮ್ಮ ಅತ್ತೆಯ

ವರೂ ಇದರ ರೂಪವನ್ನು ನೋಡಿದ ಪಕ್ಷದಲ್ಲಿ ಎಷ್ಟೋ ಆಶ್ಚರ್ಯಪಡುವರು. ಅವರಿಗೆ ನಾವು ಈ ಅಪೂರ್ವವಸ್ತುವನ್ನು ತೋರಿಸಬೇಡವೆ? ಒಂದು ವೇಳೆ ನೀನು ಇದನ್ನು ಜೀವಸಹಿತವಾಗಿಯೇ ಹಿಡಿಯಲಾರದೆ ಹೋದರೂ ಚಿಂತೆಯಿಲ್ಲ! ಲೋಕಾದ್ಭುತವಾದ ಇದರ ಚರ್ಮವನ್ನಾದರೂ ನಾವು ಇಟ್ಟಿರಬಹುದಲ್ಲವೆ? ಎಲೈ ಪ್ರಿಯನೆ! ಈ ಮೃಗವನ್ನು ನೀನು ಕೊಂದು ನನಗೆ ತಂದುಕೊಟ್ಟೆಯಾದರೆ, ಈ ವನದಲ್ಲಿರುವ ಎಳೇ ಗರುಕೆಯ ಮೇಲೆ, ಸುವರ್ಣಮಯವಾದ ಇದರ ಚರ್ಮವನ್ನು ಹಾಸಿ, ಅದರಲ್ಲಿ ನಿನ್ನೊಡನೆ ಕುಳ್ಳಿರಬೇಕೆಂದು ನನಗೆ ಬಹಳ ಕುತೂಹಲವಿರುವುದು ಎಲೈ ಆರ್ಯನೆ! ಸ್ತ್ರೀಯರಿಗೆ ಹೀಗೆ ಸ್ವೇಚ್ಛೆಯಾಗಿ ತಮ್ಮ ಪತಿಗಳನ್ನು ನಿರ್ಬಂಧಿಸುವುದೇನೋ ನ್ಯಾಯವಲ್ಲ. ಸ್ತ್ರೀಯರು ಇಷ್ಟುಮಟ್ಟಿಗೆ ಸ್ವತಂತ್ರಿಸುವುದೂ ಉಚಿತವಲ್ಲವೆಂಬುದನ್ನು ನಾನು ಬಲ್ಲೆನು. ಆದರೆ ಇದರ ಆಕಾರವನ್ನು ನೋಡಿ ನನಗೆ ಎಂದೂ ಇಲ್ಲದ ಕುತೂಹಲವು ಹುಟ್ಟಿರುವುದು. ಈಗ ನನ್ನ ಮನಸ್ಸನ್ನು ತಡೆದಿಡುವುದಕ್ಕೂ ಅಶಕ್ತಳಾಗಿರುವೆನು” ಎಂದಳು. ಬಂಗಾರದ ಕೂದಲುಗಳಿಂದಲೂ, ರತ್ನದ ಕೊಂಬುಗಳಿಂದಲೂ ಕೂಡಿ, ಬಾಲಸೂರ್ಯನಂತೆ ಹೊಳೆಯುತ್ತ, ನಕ್ಷತ್ರ ಸಮೂಹದಿಂದ ಶೋಭಿತವಾದ ಆಕಾಶದಂತಿರುವ ಆ ಮೃಗವನ್ನು ನೋಡಿ, ರಾಮನ ಮನಸ್ಸಿಗೂ ಅತ್ಯಾಶ್ಚರ್ಯವುಂಟಾಯಿತು. ಇದರ ಮೇಲೆ ಸೀತೆಯೂ ಬಹಳವಾಗಿ ಪ್ರೋತ್ಸಾಹಿಸುತ್ತಿರಲು, ಅವನಿಗೂ ಅದರಲ್ಲಿ ಆಸೆ ಹುಟ್ಟಿತು. ಆಗ ಅತಿಸಂತೋಷದಿಂದ ತಮ್ಮನಾದ ಲಕ್ಷ್ಮಣನನ್ನು ಕುರಿತು “ವತ್ಸ ಲಕ್ಷ್ಮಣನೆ! ಸೀತೆಗೆ ಈ ಮೃಗದಲ್ಲಿರುವ ಆಸೆಯನ್ನು ನೋಡಿದೆಯಾ? ನಿಜವಾಗಿ ಈ ವಿಚಿತ್ರಮೃಗವು ಯಾರ ಮನಸ್ಸನ್ನಾದರೂ ಆಕರ್ಷಿಸುವಂತೆಯೇ ಇರುವುದು. ಇಷ್ಟು ಸರ್ವೋತ್ತಮವಾದ ರೂಪವುಳ್ಳ ಮೃಗವು ಇನ್ನೆಲ್ಲಿಯೂ ನಮಗೆ ಸಿಕ್ಕಲಾರದು. ಈ ಕಾಲದಲ್ಲಿ ಇಂತಹ ಮೃಗವೇ ದುರ್ಲಭವು. ಇದಕ್ಕೆ ಸಮಾನವಾದ ಮೃಗವು ಇಂದ್ರನ ನಂದನವನದಲ್ಲಿಯಾಗಲಿ, ಕುಬೇರನ ಚೈತ್ರರಥವೆಂಬ ಉದ್ಯಾನದಲ್ಲಿಯಾಗಲಿ ಸಿಕ್ಕಲಾರದು. ಇನ್ನು ಭೂಮಿಯಲ್ಲಿ ಇಂತಹ ಸರ್ವೋತ್ತಮವಾದ ಮೃಗವು ಸಿಕ್ಕುವುದೆಂದರೇನು? ಇದರ ದೇಹದಲ್ಲಿ ಒಂದಕ್ಕೊಂದಕ್ಕೆ ಹೆಣೆದಿಟ್ಟಂತೆ ನೇರವಾಗಿಯೂ, ಅಡ್ಡಲಾಗಿಯೂ, ಬೆಳೆದಿರುವ ಕೂದಲಿನ ಸಾಲುಗಳು ಅಲ್ಲಲ್ಲಿ ಬಂಗಾರದ ಚುಕ್ಕೆಗಳಿಂದ ವಿಚಿತ್ರವಾಗಿ, ಹೇಗೆ

ಹೊಳೆಯುತ್ತಿರುವುದು, ನೋಡು! ಈ ಜಿಂಕೆಯು ಆಕಳಿಸುವಾಗ, ಅದರ ಬಾಯಿಯಲ್ಲಿ, ಮೇಘದಿಂದ ಹೊರಡುವ ಮಿಂಚಿನಂತೆ ಅಗ್ನಿಜ್ವಾಲೆಗೆ ಸಮಾನವಾಗಿ ಹೊರಟುಬರುತ್ತಿರುವ ನಾಲಗೆಯನ್ನು ನೋಡಿದೆಯಾ? ಪಚ್ಚೆಮಣಿಯ ಬಟ್ಟಲಿನಂತಿರುವ ಅದರ ಪುಟ್ಟ ಬಾಯಿಯನ್ನು ನೋಡು. ಶಂಖದಂತೆಯೂ, ಮುತ್ತಿನಂತೆಯೂ ಸ್ವಚ್ಛವಾಗಿ ಹೊಳೆಯುತ್ತಿರುವ ಅದರ ಹೊಟ್ಟೆಯು ಎಷ್ಟು ಮನೋಹರವಾಗಿರುವುದು ನೋಡು. ಇದರ ಸೌಂದರ್ಯವನ್ನು ಅಷ್ಟಿಷ್ಟೆಂದು ವರ್ಣಿಸಲಸಾಧ್ಯವಾಗಿದೆ. ಇಂತಹ ಅಪೂರ್ವವಾದ ಮೃಗವು ಯಾರ ಮನಸ್ಸನ್ನು ತಾನೇ ಆಕರ್ಷಿಸದು? ರತ್ನದ ಚುಕ್ಕೆಗಳಿಂದ ಕೆತ್ತಲ್ಪಟ್ಟ ಸುವರ್ಣಮಯವಾದ ಈ ದಿವ್ಯಮೃಗವನ್ನು ನೋಡಿ ಯಾರ ಮನಸ್ಸಿನಲ್ಲಿ ತಾನೇ ಆಶ್ಚರ್ಯವುಂಟಾಗದು? ಸ್ತ್ರೀಯರಿಗೆ ಸ್ವಾಭಾವಿಕವಾಗಿಯೇ ಚಾಪಲ್ಯವು ಹೆಚ್ಚು. ಅದರ ಮೇಲೆ ಬಾಲೆಯಾಗಿಯೂ ಇರುವ ಈ ಸೀತೆಗೆ ಇದರಲ್ಲಿ ಆಸೆಯುಂಟಾಗುವುದೇನಾಶ್ಚರ್ಯವು? ರಾಜರು ಅರಣ್ಯದಲ್ಲಿ ಮಾಂಸಸಂಗ್ರಹಣಾರ್ಥವಾಗಿಯೂ, ತಮ್ಮ ಧನುರ್ವಿದ್ಯೆಯ ಚಮತ್ಕಾರವನ್ನು ತೋರಿಸಿ ವಿನೋದಿಸುವುದಕ್ಕಾಗಿಯೂ ಆಗಾಗ ಬೇಟೆಗೆ ಹೊರಟು, ಮೃಗಗಳನ್ನು ಕೊಲ್ಲುವರಲ್ಲವೆ? ಹೀಗಿರುವಾಗ ಇಂತಹ ವಿಚಿತ್ರವಸ್ತುವು ತಾನಾಗಿ ದೊರಕಿರುವ ಕಾಲದಲ್ಲಿ ಬಿಡುವರೇ? ರಾಜರು ಬೇಟೆಯ ನೆವದಿಂದ ಕಾಡಿಗೆ ಹೊರಟು, ಅಲ್ಲಲ್ಲಿ ಆನೆಯ ತಲೆಯಲ್ಲಿರುವ ಮುತ್ತು ಮೊದಲಾದ ಬೆಲೆಯುಳ್ಳ ವಸ್ತುಗಳನ್ನೂ, ವಿಚಿತ್ರರತ್ನಗಳಿಂದಲೂ, ಸುವರ್ಣದಿಂದಲೂ ಕೂಡಿದ ಬಗೆಬಗೆಯ ಧಾತುಗಳನ್ನೂ ಸಂಗ್ರಹಿಸಿ ತರುವರು. ಇದಕ್ಕಾಗಿ ಎಷ್ಟೋ ಶ್ರಮಪಟ್ಟು ಬೇಟೆಯಾಡುವರು. ಈ ಮೃಗವೂ ಕೂಡ ನಮಗೆ ಈ ವನದಲ್ಲಿ ಸಿಕ್ಕಿದ ಒಂದು ಮಹಾಧನವೆಂದೇ ಹೇಳಬೇಕಲ್ಲವೆ? ಇದನ್ನು ನಾವು ಸಂಗ್ರಹಿಸದೆ ಬಿಡಬಾರದು. ವತ್ಸ ಲಕ್ಷ್ಮಣಾ! [1]ಬೇರೆ ಧನರಾಶಿಗಿಂತಲೂ ಹೀಗೆ ಕಾಡಿನಲ್ಲಿ ಸಿಕ್ಕುವ ಅಪೂರ್ವವಸ್ತುವೇ ಸಾರವಾದುದು. ಇಂತಹ

---

1. ಇಲ್ಲಿ "ಧನಾನಿ ವ್ಯವಸಾಯೇನ ವಿಚೀಯಂತೇ ಮಹಾವನೇ । ಧಾತವೋ ವಿವಿಧಾಶ್ಚಾಪಿ ಮಣಿರತ್ನಸುವರ್ಣಿನಃ । ತತ್ಸಾರಮಖಿಲಂ ನೃಣಾಂ ಧನಂ ನಿಚಯವರ್ಧನಂ । ಮನಸಾ ಚಿಂತಿತಂ ಸರ್ವಂ ಯಥಾ ಶುಕ್ರಸ್ಯ ಲಕ್ಷ್ಮಣ ॥" ಎಂದು ಮೂಲವು. ಇದರ ಮುಖ್ಯಾರ್ಥವೇನೆಂದರೆ:— "ರಾಜರು ಎಷ್ಟೋ ಶ್ರಮದಿಂದ ಬೇಟೆ ಮುಂತಾದುವುಗಳನ್ನಾಡಿ ಕಾಡಿನಲ್ಲಿ ಸಿಕ್ಕುವ ರತ್ನಸುವರ್ಣಗಳೇ ಮೊದಲಾದ ಖನಿಜಪದಾರ್ಥಗಳನ್ನೂ, ಆನೆಯ ತಲೆ

ಅಮೂಲ್ಯವಸ್ತುಗಳೇ ಮನುಷ್ಯರ ಬಂಡಾರವನ್ನು ಹೆಚ್ಚಿಸುವುದು. ಶುಕ್ರನು ತನ್ನ ಮನಸ್ಸಿನಲ್ಲಿ ಕೋರಿದ ಧನವೆಲ್ಲವೂ ಆ ಕ್ಷಣವೇ ನಿಜವಾಗಿ ಬಂದು ಆತನ ಬಂಡಾರವನ್ನು ತುಂಬುವುದೆಂಬ ಪ್ರಸಿದ್ಧಿಯುಂಟು. ಹಾಗೆಯೇ ಮನುಷ್ಯರು ತಮ್ಮ ಮನಸ್ಸಿಗೆ ಸಾರವೆಂದು ತೋರಿದ ವಸ್ತುವನ್ನು ಆಗಾಗಲೇ ಸಂಗ್ರಹಿಸಿಬಿಡಬೇಕು. (ಮನುಷ್ಯರು ತಮ್ಮ ಮನಸ್ಸಿನಲ್ಲಿ ತಾವು ಕೋರುವ ವ್ಯರ್ಥವಾದ ಮನೋರಥಗಳೆಲ್ಲವೂ ಶುಕ್ರನ ಬಂಡಾರವನ್ನು ಹೆಚ್ಚಿಸುವುದೆಂದು ಪ್ರಸಿದ್ಧಿಯುಂಟು. ಆದುದರಿಂದ ಮನುಷ್ಯನು ತನ್ನ ಮನಸ್ಸಿಗೆ ತೋರಿದಾಗ ಯಾವುದನ್ನು ಸಂಗ್ರಹಿಸಿಡುವನೋ ಅದೇ ಸಾರವಾದುದು) ಆದರೆ ಯಾವ ಕೆಲಸವನ್ನಾದರೂ ಚೆನ್ನಾಗಿ ವಿಚಾರಮಾಡದೆ ಆತುರದಿಂದ ನಡೆಸಬಾರದೆಂದು ನೀನು ಹೇಳಬಹುದು. ಮನುಷ್ಯನು ಯಾವ ವಸ್ತುವನ್ನಪೇಕ್ಷಿಸಿ ಅದರ ಗುಣಕ್ಕೆ ಪರವಶನಾಗಿ ಹಿಂದುಮುಂದನ್ನು ವಿಚಾರಿಸದೆ ಅದನ್ನು ಸಂಗ್ರಹಿಸುವುದಕ್ಕೆ ಆತುರಪಡುವನೋ ಆ ವಸ್ತುವೇ ಅರ್ಥವೆನಿಸುವುದು.

---

ಯಲ್ಲಿರುವ ಮುತ್ತುಗಳೇ ಮೊದಲಾದ ಬೆಲೆಯುಳ್ಳ ಪದಾರ್ಥಗಳನ್ನೂ ತಂದು ಸಂಗ್ರಹಿಸುವರು. ಈ ಸಾರವಸ್ತುಗಳೆಲ್ಲವೂ ಮನುಷ್ಯನ ಬಂಡಾರವನ್ನು ಹೆಚ್ಚಿಸುವುವು. ಆದುದರಿಂದ ಶುಕ್ರನು ಮನಸ್ಸಿನಲ್ಲಿ ಉದ್ದೇಶಿಸಿದ ವಸ್ತುವು ಅದೇ ಆಯಾ ಕ್ಷಣದಲ್ಲಿಯೇ ಸ್ವರೂಪದಿಂದ ಬಂದು ಅವನ ಬಂಡಾರದಲ್ಲಿ ತುಂಬುವಂತೆ ಮನಸ್ಸಿಗೆ ತೋರಿದುದನ್ನು ಆಗಾಗಲೇ ಸಂಗ್ರಹಿಸಿಡಬೇಕೆಂದು ಇದರ ಮುಖ್ಯ ಭಾವವು. ಶುಕ್ರನು ಮನಸ್ಸಿನಲ್ಲಿ ಯಾವ ವಸ್ತುವನ್ನು ಚಿಂತಿಸಿದರೂ ಆಯಾ ವಸ್ತುವು ಆಗಾಗಲೇ ಅವನ ಬಂಡಾರದಲ್ಲಿ ತುಂಬುತ್ತಿತ್ತೆಂದು ಪ್ರಸಿದ್ಧಿಯುಂಟು. ಅಥವಾ ಇದಕ್ಕೆ ಬೇರೆ ವಿಧವಾಗಿಯೂ ಅರ್ಥವನ್ನು ಹೇಳಬಹುದು. ಶ್ರೀ ಮಹಾಭಾರತದ ಉದ್ಯೋಗಪರ್ವದಲ್ಲಿ—"ಮನುಷ್ಯೇಭ್ಯಸ್ಸಮಾಧತ್ತೇ ಶುಕ್ರಶ್ಚಿಂತಾರ್ಜಿತಂ ಧನಂ" ಎಂಬುದಾಗಿ, ಮನುಷ್ಯರು ಮನಸ್ಸಿನಲ್ಲಿ ವ್ಯರ್ಥವಾಗಿ ಯೋಚಿಸುವ ಮನೋರಥಗಳೆಲ್ಲವೂ ಶುಕ್ರನ ಬಂಡಾರವನ್ನು ಹೆಚ್ಚಿಸುವುವೆಂದು ಹೇಳಲ್ಪಟ್ಟಿರುವುದು. ಆದುದರಿಂದ ಮನುಷ್ಯನು ಮನಸ್ಸಿನಲ್ಲಿ ಕೋರುವ ವಸ್ತುಗಳಿಂದ ಶುಕ್ರನು ತನ್ನ ಕೋಶವನ್ನು ತುಂಬಿಕೊಳ್ಳುವಂತೆ, ಕಾಡಿನಲ್ಲಿ ಆಗಾಗ ಕಣ್ಣಿಗೆ ಕಂಡ ಸಾರವಸ್ತುಗಳಿಂದ ರಾಜನು ತನ್ನ ಬಂಡಾರವನ್ನು ತುಂಬಿಸಬೇಕೆಂದು ಭಾವವು. ಮತ್ತು ರಾಜರ ಬಂಡಾರವನ್ನು ಹೆಚ್ಚಿಸತಕ್ಕ ಅನೇಕ ಧನಗಳಲ್ಲಿ ಕಾಡಿನಲ್ಲಿ ಸಿಕ್ಕುವ ಅಮೂಲ್ಯವಾದ ಇಂತಹ ವಸ್ತುವೇ ಸಾರವಾದುದೆಂದೂ, ಜಾನಪದಾದಿಗಳು ಕೊಡುವ ಧನಕ್ಕಿಂತಲೂ ಈ ವನ್ಯಧನವೇ ಮೇಲಾದುದರಿಂದ ಇಂತಹವುಗಳನ್ನು ಸಂಗ್ರಹಿಸಿಟ್ಟು, ತಾವು ವನವಾಸವನ್ನು ಮುಗಿಸಿಕೊಂಡು ಪಟ್ಟಣಕ್ಕೆ ಹಿಂದಿರಿಗಿ ಹೋಗುವಾಗ ಇವುಗಳನ್ನೂ ತೆಗೆದುಕೊಂಡು ಹೋಗಬೇಕೆಂದೂ ಭಾವವು.

ಎಂದರೆ. ಅದೇ ಆಶೆಪಡತಕ್ಕ ವಸ್ತುವೆಂದು ಅರ್ಥಶಾಸ್ತ್ರಜ್ಞರು ಹೇಳುವರು. ಇದೂ ಅಂತದೇ ಆದುದರಿಂದ ಇಲ್ಲಿ ನಾವು ವಿಚಾರಿಸಬೇಕಾದುದೊಂದೂ ಇಲ್ಲವು. ಈ ಸರ್ವೋತ್ತಮವಾದ ಜಿಂಕೆಯ ಚರ್ಮದ ಮೇಲೆ ಸೀತೆಯು ನನ್ನೊಡನೆ ಕುಳ್ಳಿರಬೇಕೆಂಬ ಆಸೆಯನ್ನು ತೀರಿಸಿಕೊಳ್ಳದೆ ಬಿಡಳು ವತ್ಸ ಲಕ್ಷ್ಮಣನೆ! ಲೋಕದಲ್ಲಿ, ಕದಳಿ, ಪ್ರಿಯಕಿ, ಪ್ರವೇಣಿ, ಆವಿ, ಮೊದಲಾದ ಉತ್ತಮಜಾತಿ ಮೃಗಗಳ ಚರ್ಮಾಸ್ತರಣವೂ ಕೂಡ ಇದರ ಚರ್ಮದಷ್ಟು ಸುಖಸ್ಪರ್ಶವನ್ನುಂಟುಮಾಡುವುದಿಲ್ಲವೆಂದೇ ನನಗೆ ತೋರುವುದು. ಎಲೆ ವತ್ಸನೆ! ಭೂಮಿಯಲ್ಲಿ ಕಾಂತಿಯುಕ್ತವಾದ ಈ ಮೃಗವೊಂದು ; ಆಕಾಶದಲ್ಲಿ ನಕ್ಷತ್ರಗಳ ನಡುವೆ ಇರುವ ಮೃಗಶೀರ್ಷವೆಂಬ ಮೃಗವೊಂದು ; ಇವೆರಡೇ ಲೋಕಕ್ಕೆ ಅಲಂಕಾರಭೂತಗಳೆಂದು ತಿಳಿ! ಒಂದು ವೇಳೆ ನೀನು ಇದನ್ನು ರಾಕ್ಷಸನ ಮಾಯೆಯೆಂದು ಹೇಳಿದಂತೆಯೇ ನಿಜವಾಗಿದ್ದರೂ ನಾವು ಅವನನ್ನು ಕೊಲ್ಲಲೇ ಬೇಕಲ್ಲವೆ? ಘಾತುಕನಾದ ಮಾರೀಚನು ಪೂರ್ವದಲ್ಲಿ ಈ ಕಾಡಿನಲ್ಲಿ ಸಂಚರಿಸುತ್ತ ಅನೇಕ ಋಷಿಶ್ರೇಷ್ಠರನ್ನು ಹಿಂಸಿಸಿರುವನು. ಮತ್ತು ಅವನು ಈ ಕಾಡಿನಲ್ಲಿ ಬೇಟೆಗೋಸ್ಕರ ಬಂದ ಧನುರ್ಧಾರಿಗಳಾದ ಅನೇಕ ರಾಜರನ್ನೂ ಕೊಂದಿರುವ ನಲ್ಲವೆ? ಆದುದರಿಂದ ಇವನನ್ನು ನಾವು ಈಗ ಕೊಂದುಬಿಡಬೇಕಾದುದೇ ನ್ಯಾಯವು. ಮತ್ತು ಈ ಕಾಡಿನಲ್ಲಿ ವಾತಾಪಿಯೆಂಬ ರಾಕ್ಷಸನು ತನ್ನ ಮಾಯೆಯಿಂದ ಋಷಿಗಳ ದೇಹದಲ್ಲಿ ಪ್ರವೇಶಿಸಿ, ಚೇಳು ([1]ಅಶ್ವತರಿ) ಗಳನ್ನು ಅವುಗಳ ಹೊಟ್ಟೆಯಲ್ಲಿ ಬೆಳೆದ ಗರ್ಭವೇ ಕೊಲ್ಲುವಂತೆ ಅನೇಕ ಮಹರ್ಷಿ ಗಳನ್ನು ಕೊಂದಿರುವನು. ಆ ವಾತಾಪಿಯು ಹಿಂದೆ ಒಂದಾನೊಂದು ಕಾಲದಲ್ಲಿ ಅಗಸ್ತ್ಯನನ್ನೂ ಕೊಲ್ಲಬೇಕೆಂಬ ಆಶೆಯಿಂದ, ತೇಜಸ್ವಿಯಾದ ಆತನಲ್ಲಿಯೂ ಇದೇ ಮಾಯೆಯನ್ನಾರಂಭಿಸಿ, ಆತನಿಗೆ ಆಹಾರವಾಗಿ ಅವನ ಹೊಟ್ಟೆಯನ್ನು ಪ್ರವೇಶಿಸಿದನು. ಆಮೇಲೆ ರಾಕ್ಷಸನು ತನ್ನ ನಿಜರೂಪದಿಂದ ಆತನ ಹೊಟ್ಟೆ

1. ಅಶ್ವತರಿಯೆಂದರೆ ಕುದುರೆಯಲ್ಲಿ ಕತ್ತೆಯ ಬೀಜಕ್ಕೆ ಹುಟ್ಟಿದ ಮೃಗಜಾತಿಗೂ ಹೆಸರು. ಇದರ ಸ್ವರೂಪವೇನೆಂದರೆ:— "ಖರರೂಕ್ಷಸ್ಸ್ವರಾಸ್ತೀಕ್ಷ್ಣಃ ಖರಶೀಲಾಃ ಖರಾಂಘ್ರಯಃ" ಕತ್ತೆಯಂತೆ ಕ್ರೂರಧ್ವನಿಯನ್ನೂ ಕತ್ತೆಯಂತೆ ಸ್ವಭಾವವನ್ನೂ, ಕತ್ತೆ ಯಂತೆ ಕಾಲುಗಳನ್ನೂ ಪಡೆದು ಹುಟ್ಟಿದ ಸಂಕರಜಾತಿಯ ಕುದುರೆಗೆ ಅಶ್ವತರಿಯೆಂದು ಹೆಸರು. ಇವುಗಳ ಹೊಟ್ಟೆಯಲ್ಲಿ ಗರ್ಭವು ಬೆಳೆದು ಬಲಿತಮೇಲೆ ಪ್ರಸವಕಾಲದಲ್ಲಿ ಅವು ಸಾಯುವುವೆಂದು ಪ್ರಸಿದ್ಧಿಯು.

ಯನ್ನು ಸೀಳಿ ಹೊರಕ್ಕೆ ಬರುವ ಪ್ರಯತ್ನದಲ್ಲಿರಲು, ಅದನ್ನು ತಿಳಿದು ಪೂಜ್ಯನಾದ ಅಗಸ್ತ್ಯನು ಮುಗುಳ್ನಗೆಯಿಂದ ನಗುತ್ತ, ಆ ವಾತಾಪಿಯನ್ನು ಕುರಿತು, "ಎಲೆ ರಾಕ್ಷಸನೆ! ನೀನು ಯುಕ್ತಾಯುಕ್ತ ವಿಚಾರವಿಲ್ಲದೆ ಅನೇಕ ಬ್ರಾಹ್ಮಣರನ್ನು ಕೊಂದೆಯಲ್ಲವೆ? ಈಗ ಅದಕ್ಕೆ ಫಲವಾಗಿ ನನ್ನ ಜಠರದಲ್ಲಿ ಜೀರ್ಣವಾಗಬೇಕಾಯಿತು" ಎಂದು ಹೇಳಿ, ಆತನನ್ನು ತನ್ನ ಜಠರದಲ್ಲಿಯೇ ಭಸ್ಮಮಾಡಿದನು. ವತ್ಸ ಲಕ್ಷ್ಮಣನೆ! ಈತನೂ ಆ ವಾತಾಪಿಯಂತೆಯೇ ಪರಮದುಷ್ಟನೆಂದು ಹೇಳಬೇಕಲ್ಲವೆ? ಧರ್ಮನಿರತನಾಗಿ ಜಿತೇಂದ್ರಿಯನಾಗಿರುವ ನನ್ನಲ್ಲಿಯೂ ಈತನು ಆ ವಿಧವಾದ ಅಕೃತ್ಯವನ್ನಾರಂಭಿಸಿದ್ದ ಪಕ್ಷದಲ್ಲಿ, ಅಗಸ್ತ್ಯನು ಮೃಗರೂಪದಿಂದಿದ್ದ ವಾತಾಪಿಯನ್ನು ಕೊಂದಂತೆ, ನಾನೂ ಮೃಗ ರೂಪವುಳ್ಳ ಇವನನ್ನು ಕೊಲ್ಲಬೇಕಲ್ಲವೆ? ಆದುದರಿಂದ ನೀನು ಇಲ್ಲಿಯೇ ಎಚ್ಚರಿಕೆಯಿಂದ ಈ ಸೀತೆಯನ್ನು ನೋಡುತ್ತಿರು! ನಾವು ಯಾವ ಕೆಲಸವನ್ನು ಮಾಡಬೇಕಾದರೂ ಈ ಸೀತೆಗಾಗಿಯೇ ಹೊರತು ಬೇರೆಯಲ್ಲ. ಇವಳ ಮನೋನುವರ್ತಿಗಳಾಗಿ, ಇವಳನ್ನು ನೋಯಿಸದೆ ಕಾಪಾಡಬೇಕಾದುದೇ ನಮ್ಮ ಮುಖ್ಯ ಕರ್ತವ್ಯವು. ಈ ಮೃಗವನ್ನು ನಾನು ಈಗಲೇ ಕೊಂದು ಬರುವೆನು. ಅಥವಾ ಜೀವಸಹಿತವಾಗಿ ಹಿಡಿದು ತರುವೆನು. ಇವಳಿಗೆ ಆ ಮೃಗದ ಚರ್ಮದಲ್ಲಿ ಬಹಳ ಆಸೆಯಿರುವುದು. ನಾನು ಅಲ್ಲಿ ಹೋಗಿ ಬರುವವರೆಗೂ ನೀನು ಇವಳಿಗೆ ಕಾವಲಾಗಿರು. ನಮಗೆ ಮುಖ್ಯವಾಗಿ ಈ ಮೃಗದ ಚರ್ಮವೇ ಬೇಕಾಗಿರುವುದರಿಂದ ಇದನ್ನು ಕೊಂದೇ ಬರುವೆನು. ನೀನು ಸೀತೆಯೊಡನೆ ಈ ಆಶ್ರಮದಲ್ಲಿ ಬಹಳ ಜಾಗರೂಕತೆಯಿಂದಿರಬೇಕು. ಈ ಮೃಗವನ್ನು ಒಂದೇ ಬಾಣದಿಂದ ನಾನು ಕೊಂದು ಅಮೂಲ್ಯವಾದ ಅದರ ಚರ್ಮವನ್ನೂ ತೆಗೆದು ಕೊಂಡು ಶೀಘ್ರದಲ್ಲಿಯೇ ಬಂದುಬಿಡುವೆನು. ಕಾರ್ಯದಲ್ಲಿ ಸಮರ್ಥನಾಗಿಯೂ, ಬಲಾಢ್ಯನಾಗಿಯೂ, ಬುದ್ಧಿವಂತನಾಗಿಯೂ, ಇರುವ ಈ ಜಟಾಯುವೆಂಬ ಪಕ್ಷಿಯು ನಿನಗೆ ಸಹಾಯಕನಾಗಿ ಇಲ್ಲಿಯೇ ಇರುವನು. ನೀನು ಈ ಸೀತೆಯನ್ನು ಸಮೀಪದಲ್ಲಿಯೇ ಇಟ್ಟುಕೊಂಡು ಬಹಳ ಎಚ್ಚರಿಕೆಯಿಂದ ಕಾವಲಿರಬೇಕು. ನಾಲ್ಕುಕಡೆಗಳನ್ನೂ ಗಮನಿಸುತ್ತಿರು! ಒಂದು ಕ್ಷಣವಾದರೂ ಮೈಮರೆತಿರ ಬೇಡ! ಸುತ್ತಲೂ ಕಣ್ಣಿಟ್ಟು ನೋಡುತ್ತಿರು! ಈ ವನವಾದರೋ ಬಹಳ ಅಪಾಯಪ್ರಚುರವಾದುದು. ಜೋಕೆ! ಜೋಕೆ!! ಜೋಕೆ!!!" ಎಂದನು.

ಇಲ್ಲಿಗೆ ನಲವತ್ತುಮೂರನೆಯ ಸರ್ಗವು.

ರಾಮನು ಮಾಯಾಮೃಗವನ್ನು ಬಹುದೂರದವರೆಗೆ ಹಿಂಬಾಲಿಸಿದರೂ ಅದು ಕೈಗೆ ಸಿಕ್ಕದಿರಲು ಕೋಪದಿಂದ ಬಾಣವನ್ನು ಬಿಟ್ಟುದು. ಅದು ರಾಕ್ಷಸ ರೂಪವನ್ನು 'ಹೊಂದಿ ರಾಮನಂತೆ ದೀನಧ್ವನಿಯಿಂದ ಕೂಗಿದುದು.

ರಾಮನು ಹೀಗೆಂದು ಲಕ್ಷ್ಮಣನಿಗೆ ಹೇಳಿ, ಚಿನ್ನದ ಹಿಡಿಗಳುಳ್ಳ ತನ್ನ ಕತ್ತಿಯನ್ನು ನಡುವಿಗೆ ಕಟ್ಟಿಕೊಂಡು, ತನಗೆ ಅಲಂಕಾರಭೂತವಾದ ಮೂರು ಬಾಗುಗಳುಳ್ಳ ಧನುಸ್ಸನ್ನು ಕೈಯಲ್ಲಿ ಹಿಡಿದು, ಎರಡು ಬತ್ತಳಿಕೆಗಳನ್ನು ಹೆಗಲಿನಲ್ಲಿ ಕಟ್ಟಿಕೊಂಡು, ಗಂಭೀರವಾದ ನಡಿಗೆಯಿಂದ ಮುಂದಕ್ಕೆ ಹೊರಟನು. ಹೀಗೆ ಸನ್ನದ್ಧನಾಗಿ ಬರುತ್ತಿರುವ ರಾಮನನ್ನು ಕಂಡೊಡನೆಯೇ ಮಾಯಾಮೃಗವು ಆತನನ್ನು ವಂಚಿಸುವುದಕ್ಕಾಗಿ, ಭಯದಿಂದ ಅಲ್ಲಲ್ಲಿ ಹುದುಗಿಕೊಳ್ಳುವಂತೆ ನಟಿಸುತ್ತ, ಇದ್ದಕ್ಕಿದ್ದಹಾಗೆಯೇ ಕಣ್ಮರೆಯಾಗಿ, ಪುನಃ ಈತನ ದೃಷ್ಟಿಗೆ ಬೀಳುತ್ತಿತ್ತು. ರಾಮನಾದರೋ ಖಡ್ಗಧಾರಿಯಾಗಿ ಕೈಯಲ್ಲಿ ಧನುಸ್ಸನ್ನು ಹಿಡಿದು ಆ ಮೃಗವನ್ನೇ ಹಿಂಬಾಲಿಸಿ ಓಡಲಾರಂಭಿಸಿದನು. ರಾಮನನ್ನು ವಂಚಿಸುವುದಕ್ಕಾಗಿ, ಆ ಮೃಗವು ಆಗಾಗ ಪ್ರಕಾಶಮಾನವಾದ ತನ್ನ ರೂಪವನ್ನು ತೋರಿಸುತ್ತಿರುವುದು. ಆಗಾಗ ಹಿಂದೆ ತಿರುಗಿ ಇವನ ಕೈಯಲ್ಲಿದ್ದ ಬಿಲ್ಲನ್ನು ನೋಡಿ ಭಯದಿಂದ ಓಡುವಂತೆ ನಟಿಸುವುದು. ಇವನ ಬಾಣದ ಗುರಿಗೆ ಸಿಕ್ಕದೆ ಬಹುದೂರದಲ್ಲಿರುವಂತೆ ಕಾಣಿಸುವುದು. ಮಹಾಭಯದಿಂದ ಆಕಾಶದಲ್ಲಿ ಹಾರಿಹೋಗುವಂತೆ ತೋರುವುದು. ಒಂದಾವರ್ತಿ ಕಣ್ಣೆದಿರಾಗಿ ಬಂದು ನಿಲ್ಲುವುದು! ಉತ್ತರಕ್ಷಣದಲ್ಲಿಯೇ ಆ ಕಾಡುಗಳಲ್ಲಿ ಅವಿತುಕೊಂಡಂತೆ ಇದ್ದಕ್ಕಿದ್ದಹಾಗೆ ಕಣ್ಮರೆಯಾಗುವುದು. ಆಗಾಗ ಕೈಗೆ ಸಿಕ್ಕಿಬಿಟ್ಟಂತೆ ತೋರಿ ಅವನನ್ನು ವಂಚಿಸುವುದು. ಕ್ಷಣಮಾತ್ರದಲ್ಲಿ ಬಹುದೂರದಲ್ಲಿ ಕಾಣುವುದು. ಮೇಘಸಮೂಹದಲ್ಲಿ ಮರೆಸಿಕೊಂಡ ಚಂದ್ರನಂತೆ ಆ ಕಾಡುಗಳ ನಡುವೆ ಅಲ್ಲಲ್ಲಿ ಮರೆಸಿಕೊಂಡು ಪುನಃ ದೃಷ್ಟಿಗೆ ಬೀಳುವುದು. ಹೀಗೆ ಮೃಗಸ್ವರೂಪವುಳ್ಳ ಮಾರೀಚನು ತನ್ನ ಮಾಯೆಯಿಂದ ಒಮ್ಮೆ ಕಣ್ಣಿಗೆ ಕಾಣುತ್ತಲೂ, ಒಡನೆಯೇ ಅದೃಶ್ಯನಾಗುತ್ತಲೂ ರಾಮನನ್ನು ಆ ಆಶ್ರಮದಿಂದ ಬಹುದೂರಕ್ಕೆಳೆದುಕೊಂಡು ಹೋದನು. ರಾಮನಿಗೆ ಒಂದೊಂದು ವೇಳೆ ಅದು ಕಣ್ಮರೆಯಾದಾಗ, ಮೈಮರೆಯುವಷ್ಟು ಕೋಪವುಂಟಾಗುವುದು. ಇದಿರಿಗೆ ಕಾಣಿಸಿಕೊಂಡಾಗ ಅದನ್ನು ಹಿಡಿಯಬೇಕೆಂಬ ಕುತೂಹಲವುಂಟಾಗುವುದು. ಹೀಗೆ ಸಂಪೂರ್ಣವಾಗಿ

ಆ ಮೃಗದ ವಂಚನೆಗೆ ಸಿಕ್ಕಿಬಿಟ್ಟ ರಾಮನು ಅದನ್ನು ಹಿಂಬಾಲಿಸಿ ಓಡಿಯೋಡಿ ಸಾಕಾಗಿ, ಕೊನೆಗೆ ಬಹಳವಾಗಿ ಬಳಲಿ ಹಿಂದುಮುಂದು ತೋರದೆ ಸಮೀಪದಲ್ಲಿದ್ದ ಒಂದು ಮರದ ಕೆಳಗೆ ಹಸುರುಹುಲ್ಲಿನ ಮೇಲೆ ವಿಶ್ರಾಂತಿಗಾಗಿ ಕುಳಿತುಬಿಟ್ಟನು. ಮಾರೀಚನು ಪುನಃ ರಾಮನಿಗೆ ಆಸೆಯನ್ನು ಹುಟ್ಟಿಸುವುದಕ್ಕಾಗಿ ಅಲ್ಲಿದ್ದ ಬೇರೆ ಕೆಲವು ಕಾಡುಜಿಂಕೆಗಳೊಡನೆ ಕಲೆತು, ರಾಮನಿಗೆ ಸಮೀಪದಲ್ಲಿ ಕಾಣಿಸಿ ಕೊಂಡನು. ಪುನಃ ರಾಮನಿಗೆ ಅದನ್ನು ಹಿಡಿಯಬೇಕೆಂಬ ಆಸೆ ಹುಟ್ಟಿತು. ಅದನ್ನು ಹಿಂಬಾಲಿಸಿ ಓಡಿದನು. ಮೊದಲಿನಂತೆಯೇ ಮೃಗವೂ ಓಡಲಾರಂಭಿ ಸಿತು. ಹೀಗೆ ರಾಮನು ಬೆನ್ನಟ್ಟಿ ಬರುವಾಗ ಆ ಮಾಯಾಮೃಗವು ಕೈಗೆ ಸಿಕ್ಕಿಬಿಡುವಂತೆ ತೋರಿ, ಆ ಕ್ಷಣದಲ್ಲಿಯೇ ಭಯದಿಂದ ಕಣ್ಮರೆಯಾಯಿತು. ಪುನಃ ಯಾವುದೋ ಒಂದು ಗಿಡದ ಪೊದೆಯಿಂದ ಹೊರಟು ಮುಂದೆ ಓಡುತ್ತಿದ್ದ ಆ ಮೃಗವನ್ನು ರಾಮನು ಕಂಡನು. ಆಗ ಆತನಿಗೆ ತಡೆಯಲಾರದಷ್ಟು ಕೋಪವುಂಟಾಯಿತು. ಆಗಲೇ ಅದನ್ನು ಕೊಂದುಬಿಡಬೇಕೆಂದು ನಿಶ್ಚಯಿಸಿ ಕೊಂಡನು ಸೂರ್ಯನಂತೆ ಅತಿ ಜಾಜ್ವಲ್ಯಮಾನವಾದ ಒಂದು ಬಾಣವನ್ನು ತೆಗೆದು, ಅದನ್ನು ಧನುಸ್ಸಿನಲ್ಲಿ ಸಂಧಾನಮಾಡಿ, ಬಲವಾಗಿ ನಾಣೆಳೆದು ಆ ಮೃಗಕ್ಕೆ ಗುರಿಯಿಟ್ಟು ಹೊಡೆದನು. ಬ್ರಹ್ಮನಿರ್ಮಿತವಾದ ಆ ಮಹಾಸ್ತ್ರವು ಉರಿಯನ್ನು ಕಕ್ಕುವಂತೆ ಜ್ವಲಿಸುತ್ತ, ಬುಸುಗುಟ್ಟುತ್ತಿರುವ ವಿಷಸರ್ಪದಹಾಗೆ ಮಹಾವೇಗದಿಂದ ಬಂದು, ಮೊದಲು ಮೇಲೆ ಕಾಣುತ್ತಿದ್ದ ಆ ಮೃಗಶರೀರವನ್ನು ಭೇದಿಸಿ, ಕೊನೆಗೆ ಅದರಲ್ಲಿ ಹುದುಗಿದ್ದ ಮಾರೀಚನ ಹೃದಯವನ್ನೂ ಭೇದಿಸಿತು. ಸಿಡಿಲಿಗೆ ಸಮಾನವಾದ ಆ ಬಾಣವು ತಾಗಿದೊಡನೆಯೇ ಮಾರೀಚನು ಒಂದು ತಾಳೆಯ ಮರದಷ್ಟು ಎತ್ತರಕ್ಕೆ ಮೇಲೆ ಹಾರಿ, ಕಠೋರಸ್ವರದಿಂದ ಕೂಗುತ್ತ, ಬಾಣಸಹಿತವಾಗಿಯೇ ನೆಲಕ್ಕೆ ಬಿದ್ದನು. (ಪ್ರಾಣೋತ್ಕ್ರಮಣ ದೆಸೆಯಲ್ಲಿರು ವಾಗಲೇ ಆತನಿಗೆ ಮೃಗಸ್ವರವು ಹೋಗಿ ನಿಜರೂಪವುಂಟಾಯಿತು. ರಾವಣನು ತನಗೆ ಮೊದಲು ಹೇಳಿದ್ದ ಮಾತುಗಳು ಆತನ ಸ್ಮರಣೆಗೆ ಬಂದುವು ) ಸೀತೆಯು ಲಕ್ಷ್ಮಣನನ್ನು ಆಶ್ರಮದಿಂದ ಹೊರಡಿಸುವುದಕ್ಕೂ, ಏಕಾಕಿನಿಯಾದ ಸೀತೆ ಯನ್ನು ರಾವಣನು ಕದ್ದುತರುವುದಕ್ಕೂ ತಕ್ಕ ಉಪಾಯವೇನೆಂದು ಚಿಂತಿಸಿದನು. ಕೊನೆಗೆ ರಾವಣನು ಹೇಳಿದ ಉಪಾಯವೇ ಕಾಲೋಚಿತವಾದುದೆಂದು ನಿಶ್ಚಯಿಸಿ ಕೊಂಡು ದೀನಧ್ವನಿಯಿಂದ ಕೂಗಲಾರಂಭಿಸಿದನು. ಆಗಲೂ ತನ್ನ ಮಾಯಾ

ಬಲದಿಂದ ರಾಮನ ಕೂಗಿನಂತೆಯೇ "ಹಾ ಸೀತೇ! ಹಾ ಲಕ್ಷ್ಮಣಾ!" ಎಂದು ಉಚ್ಚಸ್ವರದಿಂದ ಕೂಗಿದನು. ಮರ್ಮಸ್ಥಾನದಲ್ಲಿ ನಾಟಿದ ರಾಮನ ಬಾಣದಿಂದ ಭೇದಿಸಲ್ಪಟ್ಟವನಾಗಿ, ಪ್ರಾಣವನ್ನು ಬಿಡುವಾಗ ಮೃಗರೂಪವನ್ನು ಬಿಟ್ಟು, ತನ್ನ ನಿಜವಾದ ರಾಕ್ಷಸರೂಪವನ್ನು ಹೊಂದಿ ದೊಡ್ಡ ದೇಹವನ್ನು ತಾಳಿದನು. ಆಗ ವಿಚಿತ್ರವಾದ ತೋಳ್ಬಳೆಗಳಿಂದಲೂ, ಸುವರ್ಣಮಾಲಿಕೆಯಿಂದಲೂ ಇನ್ನೂ ಬೇರೆ ಬೇರೆ ಆಭರಣಗಳಿಂದಲೂ ಅಲಂಕರಿಸಲ್ಪಟ್ಟು, ದೊಡ್ಡ ಕೋರೆದಾಡೆಗಳಿಂದ ಕೂಡಿದ ಆ ರಾಕ್ಷಸದೇಹವು ಆ ರಾಮಬಾಣದೊಡನೆಯೇ ನೆಲದ ಮೇಲೆ ಬಿದ್ದಿತು ಹೀಗೆ ಘೋರಾಕಾರದಿಂದ ನೆಲದ ಮೇಲೆ ಬಿದ್ದು, ರಕ್ತದಿಂದ ತೊಯ್ದ ಮೈಯುಳ್ಳವನಾಗಿ ಸಂಕಟದಿಂದ ಹೊರಳುತ್ತಿರುವ ಆ ರಾಕ್ಷಸನನ್ನು ನೋಡಿದೊಡನೆಯೇ ಲಕ್ಷ್ಮಣನು ಹೇಳಿದ ಮಾತುಗಳು ರಾಮನ ಸ್ಮರಣೆಗೆ ಬಂದುವು. ಆಗ ತನ್ನ ಮನಸ್ಸಿನಲ್ಲಿ ತಾನು "ಆಹಾ! ಇದು ಮಾರೀಚನ ಮಾಯೆಯೇ ನಿಜವು! ಈ ವಿಷಯವನ್ನು ಮೊದಲೇ ಲಕ್ಷ್ಮಣನು ಹೇಳಿದ್ದನು! ಅವನು ಹೇಳಿದಂತೆಯೇ ಆಯಿತು! ಇಲ್ಲಿ ನನ್ನ ಬಾಣಕ್ಕೆ ಸಿಕ್ಕಿ ಸತ್ತುಬಿದ್ದಿರುವವನೇ ಮಾರೀಚನು! ಆದರೆ ಈತನು ಸಾಯುವಾಗ ದೀನಸ್ವರದಿಂದ "ಹಾ ಸೀತೇ! ಹಾ ಲಕ್ಷ್ಮಣಾ!" ಎಂದು ಕೂಗುತ್ತ ಪ್ರಾಣವನ್ನು ಬಿಟ್ಟಿರುವನಲ್ಲಾ! ಇದನ್ನು ಕೇಳಿದ್ದರೆ ಸೀತೆಯು ಏನಾಗುವಳೋ! ಹಾಗೆಯೇ ಲಕ್ಷ್ಮಣನಿಗೂ ಇದು ಕಿವಿಗೆ ಬಿದ್ದಿದ್ದರೆ ಅವನ ಗತಿಯೇನು?" ಎಂದು ನಾನಾವಿಧವಾಗಿ ಮನಸ್ಸಿನಲ್ಲಿ ಚಿಂತಿಸುತ್ತಾ ಹಿಂದುಮುಂದು ತೋರದೆ ಸ್ತಬ್ಧನಾದನು. ಭಯದಿಂದ ಆತನ ಮೈಯೆಲ್ಲವೂ ಪುಳಕಿತವಾಯಿತು. ಆತನ ಮನಸ್ಸಿನಲ್ಲಿ ಅತಿ ತೀವ್ರವಾದ ಭಯವುಂಟಾಯಿತು. ಸೀತಾಲಕ್ಷ್ಮಣರ ಸ್ಥಿತಿಯನ್ನು ನೆನೆಸಿಕೊಂಡು ಒಂದು ವಿಧವಾದ ದುಃಖವೂ ಅಂಕುರಿಸಿತು. ಆದರೂ ರಾಮನು ಧೈರ್ಯವನ್ನು ಬಿಡದೆ, ಆ ವನದಲ್ಲಿ ಬೇರೊಂದು ಕಾಡು ಜಿಂಕೆಯನ್ನು ಹೊಡೆದು, ಅದರ ಮಾಂಸವನ್ನು ತೆಗೆದುಕೊಂಡು ಅತಿವೇಗದಿಂದ ಆ ಸ್ಥಳವನ್ನು ಬಿಟ್ಟು, ಜನಸ್ಥಾನಕ್ಕಭಿಮುಖನಾಗಿ ಹೊರಟು, ತನ್ನ ಆಶ್ರಮಕ್ಕೆ ಬರುತ್ತಿದ್ದನು.

ಇಲ್ಲಿಗೆ ನಾಲ್ವತ್ತುನಾಲ್ಕನೆಯ ಸರ್ಗವು.

ಸೀತೆಯು ಮಾರೀಚನ ದೀನಧ್ವನಿಯನ್ನು ಕೇಳಿ ಭಯಪಟ್ಟು ಲಕ್ಷ್ಮಣನನ್ನು ರಾಮನ ಸಮೀಪಕ್ಕೆ ಹೋಗೆಂದು ನಿರ್ಬಂಧಿಸಿದುದು. ಲಕ್ಷ್ಮಣನು ರಾಮನಿಗೆ ಯಾವ ಭಯವೂ ಉಂಟಾಗಲಾರದೆಂದು ಸೀತೆಗೆ ಧೈರ್ಯವನ್ನು ಹೇಳಿದುದು. ಸೀತೆಯು ಲಕ್ಷ್ಮಣನನ್ನು ನಿಂದಿಸಿದುದು. ಅದನ್ನು ಸಹಿಸಲಾರದೆ ಲಕ್ಷ್ಮಣನು ರಾಮನನ್ನು ಹುಡುಕಿಕೊಂಡು ಹೊರಟುದು.

ಮಾರೀಚನು ಕೂಗಿಕೊಂಡ ಆರ್ತಸ್ವರವು ಸೀತೆಯ ಕಿವಿಗೆ ಬಿದ್ದಿತು. ಪತಿಯಾದ ರಾಮನೇ ಹೀಗೆ ಕೂಗಿಕೊಳ್ಳುತ್ತಿರುವನೆಂದು ಅವಳಿಗೆ ಭ್ರಾಂತಿಯುಂಟಾಯಿತು. ಹಾಗೆಯೇ ಅವಳು ಬೆಜ್ಜರಬಿದ್ದು ಲಕ್ಷ್ಮಣನನ್ನು ನೋಡಿ "ಆರ್ಯ ಲಕ್ಷ್ಮಣನೆ! ಹೋಗು, ಅದೇನೆಂದು ತಿಳಿದು ಬಾ! ರಾಮನು ಕೂಗಿಕೊಳ್ಳುವಂತಿದೆ! ಆತನೆಲ್ಲಿರುವನೆಂದು ನೋಡು! ಆ ಧ್ವನಿಯನ್ನು ಕೇಳಿದಾಗಿನಿಂದ ನನ್ನ ಪ್ರಾಣವೂ, ಜೀವವೂ ಒಂದು ಸ್ತಿಮಿತದಲ್ಲಿ ನಿಲ್ಲುವ ಹಾಗಿಲ್ಲ. ರಾಮನು ಏನೋ ದುಃಖದಿಂದ ಕೂಗಿಕೊಳ್ಳುವಂತಿದೆ! ಹೀಗೆ ಕಾಡಿನಲ್ಲಿ ಅಪಾಯಕ್ಕೆ ಸಿಕ್ಕಿ ಕೂಗುತ್ತಿರುವ ನಿನ್ನ ಸಹೋದರನನ್ನು ರಕ್ಷಿಸಬೇಡವೆ? ಬೇಗ ಓಡಿಹೋಗಿ ಆತನನ್ನು ಅಪಾಯದಿಂದ ತಪ್ಪಿಸು! ಸಿಂಹಗಳ ನಡುವೆ ಸಿಕ್ಕಿಬಿದ್ದ ಎತ್ತಿನಂತೆ ರಾಕ್ಷಸರ ನಡುವೆ ಸಿಕ್ಕಿ ಶರಣಾರ್ಥಿಯಾಗಿ ಕೂಗುತ್ತಿರುವ ಆ ನಿನ್ನ ಸಹೋದರನನ್ನು ರಕ್ಷಿಸು! ತಡಮಾಡದೆ ಬೇಗ ಹೊರಡು" ಎಂದಳು. ಸೀತೆಯು ಈ ಮಾತನ್ನು ಹೇಳುತ್ತಿದ್ದರೂ, ಲಕ್ಷ್ಮಣನು ಅದನ್ನು ಗಮನಿಸದೆ, ಅಣ್ಣನಾದ ರಾಮನು ಸೀತೆಗೆ ಕಾವಲಾಗಿರೆಂದು ತನಗೆ ನಿಯಮಿಸಿದ ಆಜ್ಞೆಯಲ್ಲಿಯೇ ದೃಷ್ಟಿಯಿಟ್ಟು, ಅಲ್ಲಿಂದ ಕದಲದೆ ಸುಮ್ಮನಿದ್ದನು. ಇದನ್ನು ನೋಡಿ ಸೀತೆಗೆ ಕೋಪವುಂಟಾಯಿತು. ಆಗ ಅವಳು ಲಕ್ಷ್ಮಣನನ್ನು ಕುರಿತು "ಲಕ್ಷ್ಮಣಾ! ಏನು? ನಾನು ಹೇಳಿದ ಮಾತು ನಿನ್ನ ಕಿವಿಗೆ ಬೀಳಲಿಲ್ಲವೆ? ರಾಮನು ನಿನಗೆ ಒಡಹುಟ್ಟಿದವನಲ್ಲವೆ? ಆತನು ಅಪಾಯಕ್ಕೆ ಸಿಕ್ಕಿ ಕೂಗುತ್ತಿರುವಾಗಲೂ ನೀನು ಹೀಗೆ ಅಲಕ್ಷ್ಯದಿಂದಿರುವುದೆಂದರೇನು? ಇದನ್ನು ನೋಡಿದರೆ ನನಗೇನೋ ಸಂದೇಹವು ತೋರುತ್ತಿದೆ! ನೀನು ಹೊರಗೆ ಮಾತ್ರ ಅವನಲ್ಲಿ ಸ್ನೇಹಭಾವವನ್ನು ತೋರಿಸುತ್ತಿದ್ದರೂ ನಿಜವಾಗಿ ಶತ್ರುವೆಂದೇ ಎಣಿಸಬೇಕಾಗಿದೆ. ನೀನು ನಿಜವಾಗಿ ಅವನಿಗೆ ಮಿತ್ರನಾಗಿದ್ದರೆ ಹೀಗಿರುತ್ತಿದ್ದೆಯಾ? ಈ ಅವಸ್ಥೆಯಲ್ಲಿಯೂ ನೀನು ಅಣ್ಣನೆಂಬ ಮರುಕವನ್ನು ಸ್ವಲ್ಪವಾದರೂ

ತೋರಿಸದಿರುವೆಯಲ್ಲಾ! ಮಹಾತೇಜಸ್ವಿಯಾದ ಆತನಿಗೆ ಈ ವಿಪತ್ತು ಬಂದೊದಗಿರುವಾಗಲೂ, ಹೀಗೆ ನಿಶ್ಚಿಂತನಾಗಿರುವೆಯಾ? ಓಹೋ! ಈಗ ತಿಳಿಯಿತು ನೀನು ಏನೋ ದುರಾಸೆಯಿಂದ ರಾಮನು ಸಾಯುವುದನ್ನೇ ನಿರೀಕ್ಷಿಸುವಂತಿದೆ! ಆ ದುರಾಸೆಯಿಂದಲೇ ನೀನು ಈ ಸ್ಥಳವನ್ನು ಬಿಟ್ಟು ಕದಲದೆ ಇಲ್ಲಿಯೇ ನಿಂತಿರುವಂತಿದೆ. ರಾಮನ ಕಷ್ಟವನ್ನು ನೋಡುವುದೇ ನಿನಗೆ ಇಷ್ಟವೆಂದೂ ತೋರಿರುವುದು. ಹಾಗಿಲ್ಲದಿದ್ದರೆ ಒಡಹುಟ್ಟಿದವನಲ್ಲಿ ಸ್ವಲ್ಪವಾದರೂ ಮರುಕಪನ್ನು ತೋರಿಸದಿರುವೆಯಾ? ಆತನು ಮಹಾವಿಪತ್ತಿದಲ್ಲಿ ಸಿಕ್ಕಿಬಿದ್ದಿರುವಾಗಲೂ ನೀನು ಹೋಗಿ ನೋಡದೆ ನೆಮ್ಮದಿಯಿಂದಿರುವೆ! ಒಂದುವೇಳೆ ನೀನು ನನಗೆ ಕಾವಲಾಗಿರುವೆನೆಂಬ ವ್ಯಾಜವನ್ನಿಟ್ಟುಕೊಂಡು ಇಲ್ಲಿಂದ ಕದಲದಿರಬಹುದು! ಲಕ್ಷ್ಮಣಾ! ನೀನು ನನಗಾಗಿ ಈ ಕಾಡಿಗೆ ಬಂದವನಲ್ಲ! ಮುಖ್ಯವಾಗಿ ರಾಮನಿಗೋಸ್ಕರವೇ ನೀನು ಇಲ್ಲಿಗೆ ಬಂದವನಂತೆ ನಟಿಸುವೆಯಲ್ಲವೆ! ಅಂತಹ ರಾಮನಿಗೆ ಪ್ರಾಣಸಂಕಟವುಂಟಾಗಿರುವಾಗ ಈ ಆಶ್ರಮದಲ್ಲಿ ನಾವು ಬದುಕಿದ್ದು ಮಾಡಬೇಕಾದುದೇನು? ನನಗಾಗಿ ನೀನು ಇಲ್ಲಿ ನಿಲ್ಲಬೇಕಾದುದೇ ಇಲ್ಲ! ನನ್ನನ್ನು ನೀನು ರಕ್ಷಿಸಬೇಕಾದುದೂ ಇಲ್ಲ. ಅಲ್ಲಿ ಹೋಗಿ ನೋಡು" ಎಂದಳು. ಕಣ್ಣುಗಳಲ್ಲಿ ಧಾರೆಧಾರೆಯಾಗಿ ನೀರನ್ನು ಬಿಡುತ್ತ, ಹೆಣ್ಣು ಜಿಂಕೆಯಂತೆ ಭಯದಿಂದ ನಡುಗಿ, ಈ ದುರ್ಭಾಷೆಗಳನ್ನಾಡುತ್ತಿರುವ ಸೀತೆಯನ್ನು ನೋಡಿ, ಲಕ್ಷ್ಮಣನು ಸಮಾಧಾನ ವಾಕ್ಯಗಳಿಂದ ಆಕೆಯನ್ನು ಕುರಿತು "ಎಲೆ ಆರ್ಯೆ! ಇದೇನು! ನೀನೇಕೆ ಹೀಗೆ ಭಯಪಡುವೆ? ನಿನ್ನ ಪತಿಯಾದ ರಾಮನನ್ನು ಜಯಿಸುವುದಕ್ಕೆ ದೇವತೆಗಳಿಂದಾಗಲಿ, ರಾಕ್ಷಸರಿಂದಾಗಲಿ, ಗಂಧರ್ವರಿಂದಾಗಲಿ, ಮನುಷ್ಯರಿಂದಾಗಲಿ ಯಾರಿಂದಲೂ ಸಾಧ್ಯವಿಲ್ಲ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನನ್ನ ಮಾತನ್ನು ನಂಬು! ಎಲೆ ದೇವಿ! ದೇವತೆಗಳಲ್ಲಿಯಾಗಲಿ, ಗಂಧರ್ವರಲ್ಲಿಯಾಗಲಿ, ಮನುಷ್ಯರಲ್ಲಿಯಾಗಲಿ, ಪತಗರಲ್ಲಿಯಾಗಲಿ, ರಾಕ್ಷಸರಲ್ಲಿಯಾಗಲಿ, ಪಿಶಾಚರಲ್ಲಿಯಾಗಲಿ, ಕಿನ್ನರರಲ್ಲಿಯಾಗಲಿ, ಮೃಗಜಾತಿಯಲ್ಲಿಯಾಗಲಿ, ನಮ್ಮ ಆರ್ಯನಾದ ರಾಮನನ್ನು ಇದಿರಿಸುವಷ್ಟು ಶಕ್ತಿಯುಳ್ಳವರಾರುಂಟು! ಘೋರದಾನವರಲ್ಲಿಯೂ ಕೂಡ ಯಾರೊಬ್ಬರೂ ಆತನಿಗಿದಿರಾಗಿ ಯುದ್ಧಕ್ಕೆ ನಿಲ್ಲಲಾರರು. ಆತನನ್ನು ಕೊಲ್ಲುವುದೆಂದರೇನು? ಯಾರಿಂದಲೂ ಸಾಧ್ಯವಿಲ್ಲ! ನೀನು ಈ ಮಾತನ್ನಾಡ

ಬಾರದು ! ಆತನಿಗೆ ಎಂದಿಗೂ ಅಪಾಯವಿಲ್ಲ ! ಈ ವಿಷಯದಲ್ಲಿ ನನಗೆ ಚೆನ್ನಾಗಿ ನಂಬಿಕೆಯುಂಟು ! ಇದಲ್ಲದೆ ಈ ಕಾಡಿನಲ್ಲಿ ಏಕಾಕಿನಿಯಾಗಿರುವ ನಿನ್ನನ್ನು ರಾಮನೂ ಇಲ್ಲದ ವೇಳೆಯಲ್ಲಿ ನಾನು ಹೇಗೆ ಬಿಟ್ಟುಹೋಗಲಿ ? ರಾಮನ ಶಕ್ತಿಯು ಅನಿವಾರ್ಯವಾದುದು ! ಲೋಕದಲ್ಲಿ ಎಷ್ಟೇ ಬಲಶಾಲಿಗಳಾಗಿದ್ದರೂ ಆತನನ್ನಿದಿರಿಸಲಾರರು ! ಎಷ್ಟೇ ಸೈನ್ಯವಿದ್ದರೂ ಅವನ ಮುಂದೆ ನಿಲ್ಲಲಾರರು. ಅಷ್ಟೇಕೆ ? ದೇವತೆಗಳೆಲ್ಲರೂ ಇಂದ್ರನನ್ನು ಮುಂದಿಟ್ಟುಕೊಂಡು, ಈ ಮೂರು ಲೋಕವನ್ನೂ ಸಹಾಯಕ್ಕೆ ಕರೆದುಕೊಂಡು ಬಂದರೂ ರಾಮನನ್ನಿದಿರಿಸುವುದು ಸಾಧ್ಯವಲ್ಲ. ಮನಸ್ಸಿನಲ್ಲಿ ಧೈರ್ಯವನ್ನು ಹೊಂದು ! ನಿಷ್ಕಾರಣವಾದ ಈ ಸಂತಾಪವನ್ನು ಬಿಟ್ಟುಬಿಡು ! ನಿನ್ನ ಪತಿಯಾದ ರಾಮನು ಇನ್ನು ಕ್ಷಣಕಾಲ ದೊಳಗಾಗಿಯೇ ಹಿಂತಿರುಗಿ ಬರುವನು. ಆ ಮೃಗವನ್ನೂ ಕೊಂದು ತರುವನು. ಈಗ ನೀನು ಕೇಳಿದ ಆರ್ತಧ್ವನಿಯು ರಾಮನ ಕೂಗೆಂದು ತಿಳಿಯಬೇಡ. ಯಾವನೋ ಮಾಯೆಯಿಂದ ನಮ್ಮನ್ನು ವಂಚಿಸಬೇಕೆಂದು ಹೀಗೆ ಮಾಡಿರು ವನು. ಮುಖ್ಯವಾಗಿ ಆ ಮಾರೀಚನೇ ಬಹಳ ಮಾಯಾವಿಯು. ಆ ರಾಕ್ಷಸನ ಮಾಯೆಯನ್ನು ಈ ಬಗೆಯೆಂದು ನಿರ್ಣಯಿಸುವುದಕ್ಕಿಲ್ಲ. ಗಂಧರ್ವನಗರದಂತೆ ಕ್ಷಣಕ್ಷಣಕ್ಕೂ ವಿಚಿತ್ರ ವಿಚಿತ್ರವಾಗಿ ಮಾರ್ಪಡುವುದು. ಎಲೆ, ವೈದೇಹಿ ! ಅದೆಲ್ಲವೂ ಹಾಗಿರಲಿ ! ಮಹಾತ್ಮನಾದ ರಾಮನು ನಿನ್ನನ್ನು ನನ್ನ ವಶದಲ್ಲಿರಿಸಿ, ನಿನಗೆ ಕಾವಲಿರುವಂತೆ ಆಜ್ಞೆ ಮಾಡಿರುವನು. ಹೀಗೆ ನನ್ನಲ್ಲಿ ನ್ಯಾಸಭೂತೆ ಯಾಗಿ ಇಡಲ್ಪಟ್ಟಿರುವ ನಿನ್ನನ್ನು ನಾನು ಬಿಟ್ಟುಹೋಗಬಹುದೆ ? ನಾನು ಎಂದಿಗೂ ಈ ಶೂನ್ಯದಲ್ಲಿ ನಿನ್ನನ್ನು ಬಿಟ್ಟು ಹೋಗಲಾರೆನು. ನಾನು ಹಾಗೆ ಬಿಟ್ಟುಹೋದರೆ ಅಣ್ಣನಾಜ್ಞೆಯನ್ನು ಉಲ್ಲಂಘಿಸಿದಂತಾಗುವುದಿಲ್ಲವೆ ? ಇದರ ಮೇಲೆ ಇಲ್ಲಿ ನಾವು ಅನೇಕ ರಾಕ್ಷಸರನ್ನು ಕೊಂದುಬಿಟ್ಟಿರುವೆವು. ಅವರಿಗೆ ನಮ್ಮಲ್ಲಿ ಸಂಪೂರ್ಣವಾದ ವೈರವು ಬೆಳೆದುಹೋಗಿರುವುದು. ಖರನನ್ನು ಕೊಂದುದಲ್ಲದೆ ಜನಸ್ಥಾನವನ್ನೂ ನಿಶ್ಶೇಷವಾಗಿ ಹಾಳುಮಾಡಿಬಿಟ್ಟಿರುವೆವು. ಇಲ್ಲಿನ ರಾಕ್ಷಸರೆಲ್ಲರೂ ನಮ್ಮಲ್ಲಿ ಸಂಪೂರ್ಣವಾದ ದ್ವೇಷವನ್ನಿಟ್ಟು, ಹೇಗಾದರೂ ನಮ್ಮನ್ನು ವಂಚಿಸಬೇಕೆಂದಿರುವರು. ಪ್ರಾಣಿಹಿಂಸೆಯೆಂಬುದೇ ಅವರಿಗೊಂದು ವಿನೋದವಾಗಿರುವುದು. ನಮ್ಮನ್ನು ಮೋಸಪಡಿಸುವುದಕ್ಕಾಗಿ ಬಗೆಬಗೆಯಾದ ಮಾತುಗಳನ್ನಾಡುವರು. ಬಗೆಬಗೆಯ ವೇಷದಿಂದ ಬರುವರು. ಇದೆಲ್ಲವನ್ನೂ

ನೀನು ತಿಳಿದಿದ್ದರೂ ಯುಕ್ತಾಯುಕ್ತವನ್ನು ವಿಚಾರಿಸದೆ ಚಿಂತಿಸುತ್ತಿರುವೆ ಯಲ್ಲಾ? ಈ ಭ್ರಾಂತಿಯನ್ನು ಬಿಟ್ಟುಬಿಡು!" ಎಂದನು. ಲಕ್ಷ್ಮಣನು ಈ ಮಾತುಗಳನ್ನು ಹೇಳಿದೊಡನೆಯೇ ಸೀತೆಗೆ ಮತ್ತಷ್ಟು ಕೋಪವು ಹೆಚ್ಚಿತು. ಅವಳ ಕಣ್ಣುಗಳೆರಡೂ ಕೆಂಡದಂತೆ ಕೆಂಪಾದವು ಆತನು ಹೇಳುವುದು ಸತ್ಯ ವೆಂದು ತಿಳಿಯದೆ ಹೋಯಿತು. ಅವನೊಡನೆ ಕ್ರೂರವಾಕ್ಯವನ್ನು ನುಡಿಯಲಾ ರಂಭಿಸಿದಳು. "ಛಿ, ಅನಾರ್ಯನೆ! ಛೀ, ನಿರ್ಘೃಣನೆ! ಛೀ, ಘಾತುಕನೆ! ಈ ಅಕಾರ್ಯಕ್ಕಾರಂಭಿಸಿದೆಯಾ? ಎಲೆ, ಘಾತುಕನೆ! ಎಲೆ ಕುಲಗೇಡಿಯೆ! ನನ್ನ ಪತಿಯಾದ ರಾಮನಿಗೆ ಈ ಮಹಾವ್ಯಸನವು ಬಂದಿರುವುದನ್ನು ನೋಡಿಯೂ, ನೀನು ಹೀಗೆ ಅಲಕ್ಷ್ಯದಿಂದಿರುವುದರಿಂದ ಆತನ ವ್ಯಸನವೇ ನಿನಗೆ ಪ್ರಿಯವೆಂದು ತೋರುವುದು. ಅದರಿಂದಲೇ ನೀನು ರಾಮನು ಇಷ್ಟು ವ್ಯಸನದಲ್ಲಿ ಸಿಕ್ಕಿರುವುದನ್ನು ತಿಳಿದೂ ಆತನನ್ನು ರಕ್ಷಿಸಬೇಕೆಂಬ ಆತುರವಿಲ್ಲದೆ ಈ ಕುಯುಕ್ತಿಗಳನ್ನು ನುಡಿಯುತ್ತಿರುವೆ. ಇದೇನೂ ಆಶ್ಚರ್ಯವಲ್ಲ! ನೀನು ಆತನಿಗೆ ಒಡಹುಟ್ಟಿದವನಲ್ಲವೆ? ಅವನಲ್ಲಿ ನಿನಗೆ ದಾಯಾದದ್ವೇಷವಿರುವುದರಲ್ಲಿ ಸಂದೇಹವೇನು? ಹೊರಗೆಮಾತ್ರ ಮಿತ್ರನಂತೆ ನಟಿಸಿ, ಅವಕಾಶವು ದೊರೆತಾಗ ಆತನನ್ನು ಕೆಡಿಸಿಬಿಡಬೇಕೆಂಬ ನಿರೀಕ್ಷಣೆಯಿಂದಲೇ ಹಿಂದೆ ಮುಂದೆ ತಿರುಗುತ್ತಿ ರುವ ನಿನ್ನಂತವನಿಗೆ ಈ ಪಾಪಬುದ್ಧಿಯುಂಟಾಗುವುದೇನೂ ಅತಿಶಯವಲ್ಲ! ಈಗ ನಿನ್ನ ದೌಷ್ಟ್ಯವು ಚೆನ್ನಾಗಿ ಹೊರಬಿದ್ದಿತು. ಈಗ ನಿನ್ನ ಕಪಟನಟನೆ ಗಳೆಲ್ಲವೂ ವ್ಯಕ್ತವಾದುವು. ನೀನಾಗಿಯೋ ಅಥವಾ ಭರತನ ಪ್ರೇರಣೆಯಿಂದಲೊ ನೀನು ಈ ಕಪಟವೇಷವನ್ನು ಹಾಕಿಕೊಂಡು, ನನ್ನ ನಿಮಿತ್ತವಾಗಿ ರಾಮನನ್ನು ಹಿಂಬಾಲಿಸಿ ಬರುವ ವ್ಯಾಜದಿಂದ ಇಲ್ಲಿಗೆ ಬಂದಿರುವಂತಿದೆ. ಲಕ್ಷ್ಮಣಾ! ಈ ದುರಾಶೆಯು ಭರತನಿಗಾಗಲಿ, ನಿನಗಾಗಲಿ ಎಂದಿಗಾದರೂ ಸಿದ್ಧಿಸುವುದೆಂದೆಣಿಸ ಬೇಡ! ಕರಿನೈದಿಲೆಯಂತೆ ಶ್ಯಾಮವರ್ಣವುಳ್ಳವನಾಗಿಯೂ, ತಾವರೆಯೆಸಳು ಗಳಂತೆ ಕಣ್ಣುಗಳುಳ್ಳವನಾಗಿಯೂ ಇರುವ ಆ ಶ್ರೀರಾಮನನ್ನು ಪತಿಯನ್ನಾಗಿ ವರಿಸಿ ಕೈಹಿಡಿದಮೇಲೆ, ಬೇರೆ ಅಲ್ಪ ಪುರುಷರನ್ನು ಕಣ್ಣೆತ್ತಿಯಾದರೂ ನೋಡು ವೆನೆ? ಎಲೆ ಸುಮಿತ್ರಾಪುತ್ರನೆ! ಹಾಗೆ ನೀನು ಮಿತಿಮೀರಿ ಬಂದಲ್ಲಿ ನಿನ್ನಿದಿ ರಾಗಿಯೇ ಪ್ರಾಣವನ್ನು ಬಿಟ್ಟು ಬಿಡುವೆನು. ಇದರಲ್ಲಿ ಸಂದೇಹವೇ ಇಲ್ಲ. ರಾಮನನ್ನು ಬಿಟ್ಟು ಕ್ಷಣಮಾತ್ರವೂ ನಾನು ಬದುಕಿರುವವಳಲ್ಲ" ಎಂದಳು.

ಸೀತೆಯು ಹೇಳಿದ ಈ ಕ್ರೂರವಾಕ್ಯವನ್ನು ಕೇಳಿ ಲಕ್ಷ್ಮಣನ ಮೈಯಲ್ಲಿ ರೋಮಾಂಚವು ಹುಟ್ಟಿತು. ಅವನ ಅಂಗಾಂಗವೆಲ್ಲವೂ ನಡುಗಿತು. ಸಹಿಸಲಾರದ ಸಂಕಟವುಂಟಾಯಿತು. ಹಿಂದುಮುಂದು ತೋರದೆ ಸ್ತಬ್ಧನಾದನು. ಇಂದ್ರಿಯಗಳೆಲ್ಲವೂ ಪರವಶವಾದುವು. ಹಾಗಿದ್ದರೂ ಜಿತೇಂದ್ರಿಯನಾದ ಲಕ್ಷ್ಮಣನು ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಸೀತೆಯ ಮುಂದೆ ಕೈಮುಗಿದು ನಿಂತು, “ಎಲೆ ಆರ್ಯೆ! ನಿನ್ನ ಈ ಮಾತಿಗೆ ನಾನು ಯಾವ ಉತ್ತರವನ್ನು ಹೇಳಲಿ! ನನ್ನ ಮನಸ್ಸಾಕ್ಷಿಯಾಗಿ ನಿನ್ನನ್ನೇ ನಾನು ಪರದೇವತೆಯೆಂದೆಣಿಸಿರುವೆನು. ಆದರೂ ನೀನು ನನ್ನನ್ನು ಕುರಿತು, ಈ ದುರ್ಭಾಷೆಗಳನ್ನಾಡುತ್ತಿರುವೆ, ಆದರೇನು? ಇದೇನೂ ಆಶ್ಚರ್ಯವಲ್ಲ. ಸ್ತ್ರೀಯರಿಗೆ ಈ ದುಸ್ಸ್ವಭಾವವು ಸಹಜವಾಗಿಯೇ ಇರುವುದು. ಲೋಕದಲ್ಲಿ ಈ ವಿಷಯಕ್ಕೆ ಎಷ್ಟೋ ದೃಷ್ಟಾಂತಗಳನ್ನು ನೋಡಬಹುದು. ಸ್ತ್ರೀಯರು ಧರ್ಮವನ್ನೆಣಿಸರು! ಚಂಚಲಬುದ್ಧಿಯುಳ್ಳವರು. ಬಹಳ ಕ್ರೂರ ಮನಸ್ಸುಳ್ಳವರು. ಅವರಲ್ಲಿ ಕೃತಜ್ಞತೆಯೆಂಬುದೇ ಇಲ್ಲವು ಎಷ್ಟೇ ಆಪ್ತರಿಗೂ ವಿರೋಧವನ್ನುಂಟುಮಾಡುವರು. ಎಲೆ ಜನಕಪುತ್ರಿ! ನೀನು ಈಗ ಹೇಳಿದ ದುರ್ವಾಕ್ಯಗಳು ನನ್ನ ಕಿವಿಗಳಿಗೆ ನಾರಾಚವನ್ನಿಟ್ಟಂತಿರುವುದು. ಜನಕವಂಶದಲ್ಲಿ ಹುಟ್ಟಿಯೂ ನೀನು ಈ ಮಾತುಗಳನ್ನಾಡಬಹುದೆ? ನಾನು ಇದನ್ನು ಕೇಳಿ ಹೇಗೆ ಸಹಿಸಲಿ! ನ್ಯಾಯವಾದಿಯಾದ ನನ್ನನ್ನು ನೋಡಿ ಹೀಗೆ ನೀನು ಅಯುಕ್ತವಾದ ಮಾತುಗಳನ್ನು ಹೇಳಿರುವೆಯಲ್ಲವೆ? ಈ ನಿನ್ನ ಪರುಷವಾಕ್ಯಗಳಿಗೆ ಇಲ್ಲಿನ ವನದೇವತೆಗಳೆಲ್ಲರೂ ಸಾಕ್ಷಿಯಾಗಿರಲಿ! ಆರ್ಯನಾದ ರಾಮನಾಜ್ಞೆಗೆ ಕಟ್ಟುಬಿದ್ದು, ಇಲ್ಲಿ ನಿಂತಿರುವ ನನ್ನನ್ನು ನೋಡಿ ನೀನು ಹೀಗೆ ಸಂದೇಹಿಸುವೆಯಾ? ಛೀ ಬಿಡು! ಇನ್ನು ನೀನು ಬದುಕಿದರೇನು? ಸತ್ತರೇನು? ಈಗಲೇ ನಶಿಸಿಹೋಗು! ಮುಖ್ಯವಾಗಿ ಸ್ತ್ರೀಯರ ಸ್ವಭಾವವೇ ದುಷ್ಟವಾದುದು. ಎಲೆ, ಆರ್ಯೆ! ಬಿಟ್ಟಿತು! ಬಿಟ್ಟಿತು! ನಿನಗೆ ಮಂಗಳವಾಗಲಿ! ನಾನು ರಾಮನ ಬಳಿಗೆ ಹೋಗುವೆನು. ಅಂತೂ ನಿನ್ನನ್ನು ಈ ಶೂನ್ಯ ಪ್ರದೇಶದಲ್ಲಿ ಏಕಾಕಿನಿಯಾಗಿ ಬಿಟ್ಟುಹೋಗಬೇಕಾಯಿತು. ಎಲೆ ವಿಶಾಲಾಕ್ಷಿ! ಇಲ್ಲಿನ ವನದೇವತೆಗಳೆಲ್ಲರೂ ನಿನ್ನನ್ನು ರಕ್ಷಿಸಲಿ! ಆರ್ಯೆ! ಇಲ್ಲಿ ತೋರುತ್ತಿರುವ ದುಶ್ಶಕುನಗಳಾದರೋ ಅತಿ ಭಯಂಕರವಾಗಿರುವುವು. ನಾನು ಇನ್ನು ರಾಮನೊಡಗೂಡಿ ಬಂದಮೇಲೆ ನಿನ್ನನ್ನು

*

ನೋಡುವೆನೆ! ಪುನಃ ನಾವು ಬಂದಾಗ ನೀನು ಇಲ್ಲಿರುವೆಯೋ ಇಲ್ಲವೋ ಎಂದು ಸಂದೇಹಪಡಬೇಕಾಗಿದೆ! ಇದಕ್ಕೇನು ಮಾಡಲಿ? ಹಾ ಕಷ್ಟವೆ!” ಎಂದನು. ಈ ಮಾತನ್ನು ಕೇಳಿ ಸೀತೆಗೆ ಕೋಪವೂ ಸಂಕಟವೂ ಮತ್ತಷ್ಟು ಹೆಚ್ಚಿತು. ಕಣ್ಣೀರು ಸುರಿಸುತ್ತಾ, ಪುನಃ ಲಕ್ಷ್ಮಣನನ್ನು ಕುರಿತು ತೀವ್ರ ವಾಕ್ಯಗಳಿಂದ ಪ್ರತ್ಯುತ್ತರವನ್ನು ಹೇಳಲಾರಂಭಿಸಿದಳು. “ಲಕ್ಷ್ಮಣಾ! ರಾಮ ನನ್ನಗಲಿ ನಾನು ನಿಮಿಷಮಾತ್ರವೂ ಬದುಕುವವಳಲ್ಲ. ಇದೋ ಈಗಲೇ ಗೋದಾವರಿಯಲ್ಲಿ ಮುಳುಗಿ ಸಾಯುವೆನು. ಅಥವಾ ನೇಣು ಹಾಕಿಕೊಂಡು ಪ್ರಾಣಬಿಡುವೆನು. ಅಥವಾ ಬಂಡೆಯಿಂದ ಬಿದ್ದು ತಲೆಯೊಡೆದುಕೊಳ್ಳುವೆನು. ವಿಷವನ್ನಾದರೂ ಕುಡಿದುಬಿಡುವೆನು. ಬೆಂಕಿಯಲ್ಲಿಯಾದರೂ ಬಿದ್ದುಬಿಡುವೆನು. ನಿನ್ನ ದುರಾಶೆಯನ್ನು ತೀರಿಸಿಕೊಳ್ಳುವುದಕ್ಕೆ ನಾನು ಎಂದಿಗೂ ಅವಕಾಶ ಕೊಡುವವಳಲ್ಲ. ರಘುವಂಶೋತ್ತಮನಾದ ಶ್ರೀರಾಮನನ್ನು ಹೊರತು, ಬೇರೊಬ್ಬ ಪುರುಷನನ್ನು ನಾನು ಕಾಲಿನಿಂದಲಾದರೂ ಮುಟ್ಟುವೆನೆ?” ಎಂದಳು. ಹೀಗೆ ಆ ಸೀತೆಯು ಲಕ್ಷ್ಮಣನನ್ನು ಕ್ರೂರವಾಕ್ಯಗಳಿಂದ ನಿಂದಿಸಿ, ದುಃಖವನ್ನು ತಡೆಯಲಾರದೆ ದೀನಸ್ವರದಿಂದ ಗೋಳಿಡುತ್ತ, ಎರಡು ಕೈಗಳಿಂದಲೂ ತನ್ನ ಹೊಟ್ಟೆಯನ್ನು ಬಡಿದುಕೊಳ್ಳಲಾರಂಭಿಸಿದಳು. ಸುಕುಮಾರಾಂಗಿಯಾದ ಆ ಸೀತೆಯು ಹೀಗೆ ಅತಿದೀನದಶೆಯಿಂದ ಗೋಳಿಡುವುದನ್ನು ನೋಡಿ, ಲಕ್ಷ್ಮಣನು ಭಯದಿಂದ ತತ್ತಳಿಸುತ್ತ, ಆಕೆಯನ್ನು ಅನೇಕ ವಿಧದಲ್ಲಿ ಸಮಾಧಾನಪಡಿಸಿದನು. ಏನಾದರೇನು? ಆ ಸೀತೆಯು ಅದೊಂದನ್ನೂ ಕೇಳದೆ, ಈ ವ್ಯಾಜದಿಂದ ಲಕ್ಷ್ಮಣನು ಕಾಲಹರಣವನ್ನು ಮಾಡುತ್ತಿರುವನೆಂದೆಣಿಸಿ, ಯಾವ ಮಾತನ್ನೂ ಆಡದೆ ಕೋಪದಿಂದ ಸುಮ್ಮನಿದ್ದಳು. ಆಗ ಲಕ್ಷ್ಮಣನು ಸೀತೆಗೆ ಅಭಿವಾದನವನ್ನು ಮಾಡಿ ಕೈಮುಗಿದು, ಕೋಪದಿಂದ ಹಾಗೆಯೇ ಸ್ವಲ್ಪ ಬಗ್ಗಿದಂತೆ ನಮಸ್ಕರಿಸಿ, ಆ ಸ್ಥಳದಿಂದ ಹೊರಟು, ಬಾರಿಬಾರಿಗೂ, ಈ ಸೀತೆಯ ಕಡೆಗೆ ತಿರುಗಿತಿರುಗಿ ನೋಡುತ್ತಾ ರಾಮನ ಬಳಿಗೆ ಹೋದನು.

ಇಲ್ಲಿಗೆ ನಾಲ್ವತ್ತೈದನೆಯ ಸರ್ಗವು.

ಲಕ್ಷ್ಮಣನು ಪರ್ಣಶಾಲೆಯನ್ನು ಬಿಟ್ಟುಹೋದಮೇಲೆ ರಾವಣನು ಸನ್ಯಾಸಿವೇಷ ದಿಂದ ಸೀತೆಯ ಬಳಿಗೆ ಬಂದು, ಅವಳ ಸೌಂದರ್ಯಾದಿಗಳನ್ನು ವರ್ಣಿಸಿ ಸ್ತೋತ್ರಮಾಡಿ, ಅವಳ ಪೂರ್ವವೃತ್ತಾಂತವನ್ನು ಕೇಳಿದುದು. ಸೀತೆಯು ತನ್ನ ವೃತ್ತಾಂತವನ್ನು ಯಥಾವತ್ತಾಗಿ ತಿಳಿಸಿದುದು.

ಲಕ್ಷ್ಮಣನು ಹೀಗೆ ತನ್ನನ್ನು ಕುರಿತು ಸೀತೆಯು ಪರುಷೋಕ್ತಿಗಳನ್ನಾಡಿದು ದನ್ನು ಕೇಳಿ ಮನಸ್ಸಿನಲ್ಲಿ ದುಃಖಿಸುತ್ತ, ಆ ಶೂನ್ಯಾರಣ್ಯದಲ್ಲಿ ಆಕೆಯೊಬ್ಬಳನ್ನೇ ಬಿಟ್ಟುಹೋಗುವುದಕ್ಕೆ ಎಷ್ಟುಮಾತ್ರವೂ ಇಷ್ಟವಿಲ್ಲದಿದ್ದರೂ, ನಿರ್ಬಂಧಕ್ಕೊಳ ಗಾಗಿ, ಅಸಮಾಧಾನದಿಂದಲೇ ರಾಮನ ಬಳಿಗೆ ಹೊರಟನು. ಬೇಗನೆ ಹೋಗ ಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಕಾಲುಗಳು ಹಿಂದಕ್ಕೇ ಎಳೆಯುತ್ತಿದ್ದವು. ಆದರೂ ಆತುರದಿಂದ ಹೋಗುವಂತೆಯೇ ಹೊರಟನು. ಈ ಸಮಯವನ್ನೇ ಇದಿರುನೋಡುತ್ತ ಕಣ್ಮರೆಯಾಗಿ ಕಾದಿದ್ದ ರಾವಣನು, ಲಕ್ಷ್ಮಣನು ಹೊರಟು ಹೋದುದನ್ನೂ, ಸೀತೆಯು ಒಂಟಿಯಾಗಿರವುದನ್ನೂ ನೋಡಿ, ಇದೇ ಸಮಯ ವೆಂದು ಸನ್ಯಾಸಿರೂಪವನ್ನು ಧರಿಸಿ, ಬಹು ತ್ವರೆಯಿಂದ ಸೀತೆಯಿರುವ ಕಡೆಗೆ ಬಂದನು. ಕಾವಿಬಟ್ಟೆಯನ್ನುಟ್ಟು, ಶಿಖೆಯನ್ನೆತ್ತಿಕಟ್ಟಿ ಕೈಯಲ್ಲಿ ಕೊಡೆಯನ್ನು ಹಿಡಿದು, ಮರದ ಪಾದುಕೆಗಳನ್ನು ಮೆಟ್ಟಿಕೊಂಡು, ಎಡದ ಭುಜದಮೇಲೆ ತ್ರಿದಂಡವನ್ನು ಇಟ್ಟು, ಅದಕ್ಕೆ ಕಮಂಡಲುವನ್ನು ತೂಗುಹಾಕಿ ನಿಜವಾದ ಸನ್ಯಾಸಿಯಂತೆಯೇ ಕಾಣುತ್ತ ಆ ಸೀತೆಯ ಸಮೀಪಕ್ಕೂ ಬಂದನು. ಚಂದ್ರ ಸೂರ್ಯರಿಬ್ಬರೂ ಇಲ್ಲದ ಸಂಜೆಯಂತೆ ರಾಮಲಕ್ಷ್ಮಣರಿಬ್ಬರನ್ನೂ ಅಗಲಿ ಆ ಘೋರಾರಣ್ಯದಲ್ಲಿ ಒಂಟಿಯಾಗಿದ್ದ ಸೀತೆಯನ್ನು ನೋಡಿದನು. ತಾನು ಮಹಾ ಬಲಾಢ್ಯನಾಗಿದ್ದರೂ, ಯಾರೂ ಇಲ್ಲದ ವೇಳೆಯನ್ನು ನೋಡಿ ಬಾಲೆಯಾದ ಸೀತೆಯ ಸಮೀಪದಲ್ಲಿ ನಿಂತು, [1]ಕ್ರೂರವಾದ ಅಂಗಾರಕ ಗ್ರಹವು, ಚಂದ್ರ ನನ್ನಗಲಿದ ಕಾಲದಲ್ಲಿ ರೋಹಿಣಿಯನ್ನು ನೋಡುವಂತೆ, ಪತಿಯನ್ನಗಲಿರುವ ಯಶಸ್ವಿನಿಯಾದ ಆ ಸೀತೆಯನ್ನು ನಟ್ಟದೃಷ್ಟಿಯಿಂದ ನೋಡುತ್ತಿದ್ದನು. ಕ್ರೂರಕೃತ್ಯದಲ್ಲಿ ಪ್ರವರ್ತಿಸಿದ ರಾವಣನು ಜನಸ್ಥಾನಕ್ಕೆ ಬಂದು ನಿಂತಾಗಲೇ

1. ಕ್ರೂರಗಳಾದ ಅಂಗಾರಕಾದಿ ಗ್ರಹಗಳು ರೋಹಿಣಿಯನ್ನು ನೋಡುವುದರಿಂದ ಲೋಕಾನರ್ಥವುಂಟಾಗುವಂತೆ, ರಾವಣನು ಸೀತೆಯನ್ನು ನೋಡುವುದೂ ಅನರ್ಥಮೂಲ ವೆಂದು ಇದರಿಂದ ಸೂಚಿತವಾಗುವುದು.

ಅಲ್ಲಿನ ವೃಕ್ಷಗಳೆಲ್ಲವೂ ಈತನನ್ನು ನೋಡಿ ಅಲ್ಲಾಡದೆ ಸ್ತಬ್ಧವಾಗಿಬಿಟ್ಟವು. ಗಾಳಿಯು ಸ್ವಾಭಾವಿಕವಾದ ತನ್ನ ಚಲನವನ್ನು ಬಿಟ್ಟು ನಿಶ್ಚಲವಾಯಿತು. ಸ್ವಾಭಾವಿಕವಾಗಿ ಅತಿವೇಗದಿಂದ ಪ್ರವಹಿಸುತ್ತಿದ್ದ ಗೋದಾವರೀ ನದಿಯು ಕೂಡ, ರಾವಣನು ಕೆಂಡದಂತೆ ಕೆಂಪಾದ ತನ್ನ ಕಣ್ಣುಗಳಿಂದ ನೋಡುವುದನ್ನು ಕಂಡು, ಭಯದಿಂದ ಮೆಲ್ಲಮೆಲ್ಲಗೆ ಪ್ರವಹಿಸಲಾರಂಭಿಸಿತು. ರಾಮಲಕ್ಷ್ಮಣರಿಲ್ಲದ ವೇಳೆಯನ್ನೇ ನಿರೀಕ್ಷಿಸುತ್ತಿದ್ದ ರಾವಣನು, ತನಗನುಕೂಲವಾದ ಸಮಯವು ಸಿಕ್ಕಿತೆಂದು ಸಂತೋಷದಿಂದ ಮುಂದೆ ಬಂದನು. ನೀಚನಾದ ಆ ರಾವಣನು ತನಗುಚಿತವಲ್ಲದ ಸನ್ಯಾಸಿವೇಷವನ್ನು ಧರಿಸಿ, ಪತಿಯ ಚಿಂತೆಯಿಂದ ಕೊರಗುತ್ತಿರುವ ಆ ಸೀತೆಯ ಬಳಿಗೆ ಬಂದು, ಶನಿಗ್ರಹವು ಚಿತ್ರಾನಕ್ಷತ್ರಕ್ಕೆ ಅಡ್ಡಗಟ್ಟುವಂತೆ ಅವಳ ಮುಂದೆ ಬಂದು ನಿಂತನು. ಕ್ರೂರಸ್ವಭಾವವುಳ್ಳ ಆ ರಾವಣನು ಮೇಲೆ ಹುಲ್ಲನ್ನು ಮುಚ್ಚಿದ ಆಳವಾದ ಬಾವಿಯಂತೆ, ಮೇಲೆ ಶಾಂತವಾದ ಸನ್ಯಾಸಿ ರೂಪವನ್ನು ಧರಿಸಿ, ಯಶಸ್ವಿನಿಯಾದ ಆ ರಾಮಪತ್ನಿಯನ್ನು ಬಹಳ ಹೊತ್ತಿನವರೆಗೆ ನೋಡುತ್ತ ನಿಂತನು. ಆಗಲಾದರೋ ಮಂಗಳಸ್ವರೂಪಿಣಿಯಾಗಿ, ಮೊಲ್ಲೆಯ ಮೊಗ್ಗಿನಂತೆ ಸೂಕ್ಷ್ಮವಾದ ದಂತಪಂಕ್ತಿಗಳಿಂದಲೂ, ತೊಂಡೆಯ ಹಣ್ಣಿನಂತೆ ತೋರುವ ತುಟಿಗಳಿಂದಲೂ ಕೂಡಿ ಪೂರ್ಣಚಂದ್ರನಿಗೆ ಸಮಾನವಾಗಿರುವ ಮುಖವುಳ್ಳವಳಾಗಿ, ತಾವರೆಯೆಸಳಿನಂತೆ ವಿಸ್ತಾರವಾದ ಕಣ್ಣುಗಳುಳ್ಳವಳಾಗಿ, ಲೋಕಮೋಹಕವಾದ ರೂಪವುಳ್ಳ ಆ ಸೀತಾದೇವಿಯು, ದುಃಖದಿಂದ ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ ಒಂಟಿಯಾಗಿ ಪರ್ಣಶಾಲೆಯಲ್ಲಿ ಕುಳಿತಿದ್ದಳು. ಹೊಂಬಣ್ಣವಾದ ಪಟ್ಟೆ ಮಡಿಯನ್ನುಟ್ಟು ದುಃಖಿತೆಯಾಗಿ ಕುಳಿತಿದ್ದ ಆ ಸೀತೆಯನ್ನು ನೋಡಿದೊಡನೆಯೇ ದುರ್ಬುದ್ಧಿಯುಳ್ಳ ಆ ರಾವಣನ ಮನಸ್ಸು ಕದಲಿತು. ಹೃದಯದಲ್ಲಿ ಮನ್ಮಥ ಬಾಣಗಳು ಬಂದು ನಾಟಿದ್ದರೂ, ಆ ಕ್ರೂರರಾಕ್ಷಸನು ವೇದಮಂತ್ರವನ್ನು ಬಾಯಿಂದ ಹೇಳುತ್ತಾ ಮುಂದೆ ಬಂದು, ಯಾರೂ ಇಲ್ಲದ ವೇಳೆಯಲ್ಲಿ ಆ ಸೀತೆಯನ್ನು ಕುರಿತು ವಿನಯದಿಂದ ಮಾತಾಡಿಸತೊಡಗಿದನು. ಲೋಕದೊಳಗೆಲ್ಲಾ ಉತ್ತಮ ಸ್ತ್ರೀಯೆನಿಸಿಕೊಂಡಿದ್ದರೂ ಪತಿಯಾದ ರಾಮನನ್ನಗಲಿರುವುದರಿಂದ ತಾವರೆಯನ್ನಗಲಿದ ಲಕ್ಷ್ಮಿಯಂತೆ ದೇಹಕಾಂತಿಯಿಂದ ಬೆಳಗುತ್ತಿರುವ ಆಕೆಯನ್ನು ನೋಡಿ ಸ್ತೋತ್ರಮಾಡಲಾರಂಭಿಸಿದನು. "ಎಲೆ ಭದ್ರೆ! ನೀನಾರು ? ನಿನ್ನ ದೇಹವೇ ಚಿನ್ನದಂತೆ ಹೊಳೆಯು

ತ್ತಿರುವುದು. ಹೊಂಬಣ್ಣವಾದ ಈ ನಿನ್ನ ಪಟ್ಟೆಯ ದುಕೂಲವು ನಿನ್ನ ದೇಹ ಕಾಂತಿಗೆ ಮತ್ತಷ್ಟು ಶೋಭಾತಿಶಯವನ್ನುಂಟುಮಾಡುತ್ತಿರುವುದು. ನಿನ್ನ ಕರಚರಣಮುಖಾದ್ಯವಯವಗಳೆಲ್ಲವೂ ಕಮಲಗಳನ್ನೇ ಹೋಲುತ್ತಿರುವುದರಿಂದ, ಕಮಲಮಾಲಿಕೆಯನ್ನು ಧರಿಸಿದ ತಾವರೆಬಳ್ಳಿಯಂತೆ ತೋರುತ್ತಿರುವೆ ! ನೀನೆಲ್ಲಿಯವಳು ? ಎಲೆ ಮಂಗಳಾಂಗಿ ! ನೀನೇನು ಶ್ರೀದೇವಿಯೋ ! ಅಥವಾ ಭೂದೇವಿಯೋ ? ಕಾಂತ್ಯಧಿಷ್ಠಾನ ದೇವತೆಯೋ ! ಕೀರ್ತಿದೇವತೆಯೋ ! ಅಪ್ಸರಸ್ತ್ರೀಯೋ ! ಸಂಪದಧಿಷ್ಠಾನ ದೇವತೆಯೋ ! ಅಥವಾ ಸ್ವೇಚ್ಛೆಯಾಗಿ ಸಂಚರಿಸುವ ರತೀದೇವಿಯೋ ! ನೀನು ಯಾರು ಹೇಳು. ಒಂದಕ್ಕೊಂದು ಹೆಚ್ಚುಕಡಿಮೆಯಿಲ್ಲದೆ ಸಮವಾಗಿಯೂ, ಸೂಕ್ಷ್ಮವಾಗಿಯೂ, ನುಣುಪಾಗಿಯೂ ಸ್ವಚ್ಛವಾಗಿಯೂ ಇರುವ ನಿನ್ನ ಹಲ್ಲಿನ ಸಾಲುಗಳೋ ! ನಡುವೆ ಕರೀತಾರಕೆಗಳಿಂದಲೂ ಕೊನೆಯಲ್ಲಿ ಕೆಂಪುಬಣ್ಣದಿಂದಲೂ ಕೂಡಿ ವಿಸ್ತಾರವಾಗಿ ಪ್ರಸನ್ನವಾಗಿರುವ ನಿನ್ನ ಕಣ್ಣುಗಳೋ ! ವಿಸ್ತಾರವಾದ ನಿನ್ನ ಜಘನವೋ ! ಆನೆಯ ಸೊಂಡಿಲಿನಂತೆ ಉರುಟಾದ ನಿನ್ನ ತೊಡೆಗಳೋ ! ತಾಳೆಯ ಹಣ್ಣುಗಳಂತೆ ದುಂಡನೆ ಒತ್ತಾಗಿ ಉಬ್ಬಿ ಬೆಳೆದು, ನುಣುಪಾಗಿ, ಭಾರದಿಂದ ಜಗ್ಗುತ್ತ ರತ್ನಹಾರದಿಂದಲಂಕರಿಸಲ್ಪಟ್ಟ ನಿನ್ನ ಸ್ತನಗಳೋ ! ಇವೊಂದೊಂದೂ ನೋಡಿದ ಮಾತ್ರಕ್ಕೇ ಕಾಮುಕರ ಹೃದಯವನ್ನು ಭೇದಿಸುವಂತಿರುವುದಲ್ಲಾ ! ನಿನ್ನ ಮುಗುಳ್ನಗೆಯ ಸೊಗಸೇನು ! ನಿನ್ನ ದಂತಪಙ್ಕ್ತಿಯ ಚಂದವೇನು ! ನಿನ್ನ ಕಣ್ಣುಗಳ ಅಂದವೇನು ! ಆಹಾ ! ನದೀಪ್ರವಾಹವೇಗವು ದಡವನ್ನು ಕಿತ್ತುಕೊಂಡು ಹೋಗುವಂತೆ ನಿನ್ನ ಸೌಂದರ್ಯವು ಕೇವಲ ಜಿತೇಂದ್ರಿಯನಾದ ನನ್ನ ಮನಸ್ಸನ್ನೂ ಆಕರ್ಷಿಸಿ ಕೀಳುತ್ತಿರುವುದು. ಆಹಾ ! ನಿನ್ನ ಸಣ್ಣ ನಡುವು ಒಂದೇ ಹಿಡಿಯಲ್ಲಡಗುವಂತಿರುವುದಲ್ಲಾ ! ನಿನ್ನ ಕೂದಲಿನ ಅಂದವನ್ನೇನೆಂದು ಹೇಳಲಿ ! ಎಲೆ ವಿಲಾಸಿನಿ ! ಹೆಚ್ಚಾಗಿ ಹೇಳಿದುದರಿಂದೇನು ? ನಾನು ಎಷ್ಟೋ ಕಡೆಗಳನ್ನು ಸುತ್ತಿರುವೆನು. ಎಷ್ಟೋ ಸ್ತ್ರೀಯರನ್ನು ನೋಡಿರುವೆನು. ದೇವ ಗಂಧರ್ವಯಕ್ಷಕಿನ್ನರರಲ್ಲಿಯೂ ಕೂಡ ನಿನ್ನಂತೆ ರೂಪಾತಿಶಯವುಳ್ಳ ಸ್ತ್ರೀಯರನ್ನು ನಾನು ಇದುವರೆಗೂ ಕಂಡುದಿಲ್ಲ ! ಈ ಸರ್ವೋತ್ತಮವಾದ ರೂಪವೇನು ! ಈ ನಿನ್ನ ಸೌಕುಮಾರ್ಯವೇನು ! ಈ ನಿನ್ನ ವಯಸ್ಸೇನು ! ವಿವಿಕ್ತವಾದ ಈ ಅರಣ್ಯದಲ್ಲಿ ನೀನೊಬ್ಬಳೇ ವಾಸಮಾಡುವುದೆಂದರೇನು ? ಇದನ್ನು

ನೋಡಿ ನನಗೆ ಯಾವುದೊಂದು ನಿರ್ಣಯವೂ ತೋರದೆ ಹುಚ್ಚುಹಿಡಿದಂತಾಗಿದೆ! ಎಲೆ ಭದ್ರೆ! ಆದುದಾಯಿತು. ಇನ್ನಾದರೂ ನೀನು ಈ ಅರಣ್ಯವನ್ನು ಬಿಟ್ಟು ಬಂದುಬಿಡು. ನಿನಗೆ ಮಂಗಳವಾಗಲಿ! ಕಾಮರೂಪಿಗಳಾದ ಅನೇಕ ಘೋರ ರಾಕ್ಷಸರಿಗೆ ವಾಸಸ್ಥಾನವಾದ ಈ ಕಾಡಿನಲ್ಲಿರುವುದು ನಿನಗೆ ಸರಿಯಲ್ಲ. ಉಪ್ಪರಿಗೆಗಳಲ್ಲಿಯೂ, ಮೇಲುಮನೆಗಳಲ್ಲಿಯೂ, ಉಪವನಗಳಲ್ಲಿಯೂ ನೀನು ಸುಖವಾಗಿ ವಾಸಮಾಡುವುದಕ್ಕೆ ಯೋಗ್ಯಳು. [1]ಉತ್ತಮವಾದ ಹೂಗಳನ್ನು ಮುಡಿದು, ಮೇಲಾದ ವಸ್ತ್ರಗಳನ್ನುಟ್ಟು, ಮೃಷ್ಟಾನ್ನಗಳನ್ನೂಟಮಾಡುತ್ತಿರಬೇಕಾದ ನೀನು ಈ ಕಾಡಿನಲ್ಲಿ ಏಕಾಕಿನಿಯಾಗಿರುವುದೆಂದರೇನು? ಉತ್ತಮಪತಿಯೊಡಗೂಡಿರಬೇಕಾದ ನೀನು ಹೀಗೆ ಒಂಟಿಯಾಗಿರಬಹುದೇ! ನಿನ್ನನ್ನು ನೋಡಿದರೆ ನನ್ನ ಮನಸ್ಸಿಗೆ ದೇವತಾಸ್ತ್ರೀಯಂತೆ ತೋರುತ್ತಿರುವುದು. ನೀನೇನು ರುದ್ರಗಣದಲ್ಲಿ ಸಂಬಂಧಿಸಿದವಳೇ? ಆದಿತ್ಯರ ಕಡೆಯವಳೇ? ನೀನು ಯಾವ ದೇವಜಾತಿಗೆ ಸೇರಿದವಳು? ಗಂಧರ್ವರಾಗಲಿ, ದೇವತೆಗಳಾಗಲಿ, ಕಿನ್ನರರಾಗಲಿ, ಇಲ್ಲಿಗೆ ಪ್ರವೇಶಿಸಲಾರರು. ಇದು ಅನೇಕ ರಾಕ್ಷಸರಿಗೆ ನೆಲೆಯಾಗಿರುವುದು. ನೀನೊಬ್ಬಳೇ ಇಲ್ಲಿಗೆ ಹೇಗೆ ಬಂದೆ? ಇಲ್ಲಿ ಕಪಿಗಳು, ಸಿಂಹಗಳು, ಚಿರತೆ, ಹುಲಿ ಮೊದಲಾದ ಕ್ರೂರಮೃಗಗಳೂ, ಕರಡಿಗಳೂ, ಹೆಬ್ಬುಲಿಗಳೂ, ರಣಹದ್ದುಗಳೂ, ಸುತ್ತಲೂ ಅನೇಕಾನೇಕವಾಗಿ ಸಂಚರಿಸುತ್ತಿರುವುವಲ್ಲಾ, ಇದನ್ನು ಕಂಡೂ ನಿನಗೆ ಭಯವಾಗುವುದಿಲ್ಲವೇ? ಕೊಬ್ಬಿದ ಕಾಡಾನೆಗಳು ಇಲ್ಲಿ ಭಯಂಕರಸ್ವರೂಪದಿಂದ ಓಡಾಡುತ್ತಿರುವುವು. ಇವುಗಳನ್ನು ನೋಡಿಯೂ ನೀನು ಹೇಗೆತಾನೆ ಭಯವಿಲ್ಲದಿರುವೆ? ನೀನು ಏಕಾಕಿನಿಯಾಗಿ ಇಲ್ಲಿ ಹೇಗೆ ಧೈರ್ಯದಿಂದಿರುವೆ? ಎಲೆ ಭದ್ರೆ, ನೀನು ಯಾರು? ಯಾರ ಮಗಳು? ಎಲ್ಲಿಂದ ಬಂದಿರುವೆ? ನಿನ್ನ ಹೆಸರೇನು? ನಿನಗೆ ಈ ದಂಡಕಾರಣ್ಯದಲ್ಲಿ ಕೆಲಸವೇನು? ರಾಕ್ಷಸಪ್ರಚುರವಾದ ಈ ಘೋರಾರಣ್ಯದಲ್ಲಿ ನೀನೊಬ್ಬಳೇ ಇರುವುದಕ್ಕೆ ಕಾರಣವೇನು? ಹೇಳು" ಎಂದನು. ಹೀಗೆ ರಾವಣನು ಪ್ರಶಂಸೆಮಾಡಿದುದನ್ನು ಕೇಳಿ ಸೀತೆಯು

---

1. ಅಥವಾ ಇಲ್ಲಿ "ಲೋಕೋತ್ತರೆಯಾದ ನಿನ್ನನ್ನು ಸೇರಿದ ಮಾಲ್ಯಗಳೂ, ಭೋಜ್ಯದ್ರವ್ಯಗಳೂ, ವಸ್ತ್ರಗಳೂ ಬಹಳ ಪ್ರಶಸ್ತಗಳಾಗುವುವೆಂದೂ, ಹಾಗೆಯೇ ನಿನ್ನನ್ನು ಪತ್ನಿಯನ್ನಾಗಿ ಪಡೆದ ಪುರುಷನೇ ಸರ್ವೋತ್ತಮನೆಂದೂ ತಿಳಿಯುವನು" ಎಂದೂ ಅರ್ಥಾಂತರವು.

ಬ್ರಾಹ್ಮಣವೇಷದಿಂದ ಬಂದ ಆ ಸನ್ಯಾಸಿಯನ್ನು ನೋಡಿ, ಆತನು ನಿಜವಾದ ಸನ್ಯಾಸಿಯೆಂದೇ ಭ್ರಮಿಸಿ, ಪೂಜಾದ್ರವ್ಯಗಳನ್ನು ತಂದು ಅವನಿಗೆ ಸಮಸ್ತವಿಧವಾದ ಅತಿಥಿಸತ್ಕಾರವನ್ನೂ ನಡೆಸಿದಳು. ಮೊದಲು ಆತನಿಗೆ ಆಸನವನ್ನು ತಂದುಕೊಟ್ಟು, ಪಾದ್ಯವನ್ನಿತ್ತು, ಆಮೇಲೆ ಆ ಕಪಟ ಸನ್ಯಾಸಿಯನ್ನು ನೋಡಿ "ಎಲೈ ಬ್ರಾಹ್ಮಣೋತ್ತಮನೆ! ಪಕ್ವಾನ್ನವು ಸಿದ್ಧವಾಗಿರುವುದು. ಭೋಜನಕ್ಕೇಳಬೇಕು" ಎಂದು ಪ್ರಾರ್ಥಿಸಿದಳು. ಬ್ರಾಹ್ಮಣ ವೇಷವನ್ನು ಹಾಕಿಕೊಂಡು ಕಮಂಡಲುವನ್ನು ಹಿಡಿದು, ಕಾವಿಬಟ್ಟೆಯನ್ನುಟ್ಟು ಬಂದಿರುವ ಆ ರಾವಣನು ತನಗೆ ಕೇಡನ್ನು ಮಾಡಬೇಕೆಂದೇ ಬಯಸಿಬಂದಿರುವುದರಿಂದ ಭೋಜನ ಮಾಡಿಸುವುದಕ್ಕರ್ಹನಲ್ಲದಿದ್ದರೂ, ಸೀತೆಯು ಆತನನ್ನು ಬ್ರಾಹ್ಮಣನಂತೆಯೇ ಭಾವಿಸಿ ನಿಮಂತ್ರಣಕ್ಕೆ ಹೇಳಿದಳು. [1](ಮಿಥಿಲಾಧಿಪತಿಯ ಮಗಳಾದ ಆ ಸೀತೆಯು ಕುಲಧರ್ಮವನ್ನು ಚೆನ್ನಾಗಿ ತಿಳಿದವಳಾದುದರಿಂದ, ಆತನು ತನ್ನನ್ನು ವಂಚಿಸುವುದಕ್ಕಾಗಿ ಬಂದಿರುವ ಕಪಟಸನ್ಯಾಸಿಯೆಂಬ ಶಂಕೆಯುಳ್ಳವಳಾಗಿದ್ದರೂ, ಕಾಷಾಯದಂಡಧಾರಿಯಾದ ಆತನಲ್ಲಿ ಪೂಜ್ಯಭಾವದಿಂದ ಅವನಲ್ಲಿ ವೈರಬುದ್ಧಿಯನ್ನು ಬಿಟ್ಟು ಭೋಜನಕ್ಕಾಗಿ ನಿಯಮಿಸಿದಳು.) ಆಗ ಸೀತೆಯು ಆ ಸನ್ಯಾಸಿಯನ್ನು ಕರೆದು, "ಎಲೈ ಬ್ರಾಹ್ಮಣನೆ! ಇದೋ! ಇಲ್ಲಿ ಬೃಸ್ಯಾಸನವು! ಸುಖವಾಗಿ ಕುಳ್ಳಿರಬಹುದು! ಇದೋ! ಪಾದ್ಯವನ್ನು ತಂದಿರುವೆನು, ಪ್ರತಿಗ್ರಹಿಸಬೇಕು! ಇದೋ! ಇಲ್ಲಿ ಚೆನ್ನಾಗಿ ಪಕ್ವಮಾಡಿದ ಕಂದಮೂಲಾದಿಗಳನ್ನು ಸಿದ್ಧಪಡಿಸಿರುವೆನು. ಯಥೇಚ್ಛವಾಗಿ ಭುಜಿಸಬಹುದು" ಎಂದು ಹೇಳಿ ಇನ್ನೂ ಅತಿಥಿಗಳಿಗೆ ಹೇಳಬೇಕಾದ ಉಪಚಾರೋಕ್ತಿಗಳೆಲ್ಲವನ್ನೂ ಹೇಳಿದಳು.

---

1. ಇಲ್ಲಿ "ದ್ವಿಜಾತಿವೇಷೇಣ ಸಮೀಕ್ಷ್ಯ ಮೈಥಿಲೀ ಸಮಾಗತಂ ಪಾತ್ರಕುಸುಂಭಧಾರಿಣಂ । ಅಶಕ್ಯಮುದ್ವೇಷ್ಟುಮುಪಾಯದರ್ಶನಂ ನ್ಯಮಂತ್ರಯದ್ಬ್ರಾಹ್ಮಣವತ್ತದಾಂಗನಾ ॥" ಎಂದು ಮೂಲವು. ಇಲ್ಲಿ 'ಮೈಥಿಲೀ' ಎಂಬ ಶಬ್ದಪ್ರಯೋಗದಿಂದಲೇ ಆಚಾರಪ್ರಧಾನವಾದ ಜನಕಕುಲದಲ್ಲಿ ಹುಟ್ಟಿದವಳೆಂದು ಸೂಚಿತವಾಗುವುದರಿಂದ ರಾವಣನ ಚೇಷ್ಟಾದಿಗಳಿಂದ ಅವನು ಕಪಟವೇಷಧಾರಿಯೆಂದು ಚೆನ್ನಾಗಿ ಆಕೆಗೆ ತಿಳಿದಿದ್ದರೂ, ಹೊರಗೆ ಕೇವಲ ಸನ್ಯಾಸಿವೇಷವನ್ನು ಧರಿಸಿದ ಮಾತ್ರದಿಂದ "ಕಾಷಾಯದಂಡಮಾತ್ರೇಣ ಯತಿಃ ಪೂಜ್ಯೋ ನ ಸಂಶಯಃ" ಎಂಬ ವಚನವನ್ನನುಸರಿಸಿ, ಆತನನ್ನು ದ್ವೇಷಿಸಬಾರದೆಂದು ಧರ್ಮಬುದ್ಧಿಯನ್ನಿಟ್ಟು, ಅತಿಥಿಯಾದ ಬ್ರಾಹ್ಮಣನಂತೆಯೇ ಭಾವಿಸಿ ನಿಮಂತ್ರಿಸಿದುದಾಗಿ ಅರ್ಥಾಂತರವು.

ಹೀಗೆ ನಿಮಂತ್ರಣಾರ್ಥವಾಗಿ ಕರೆಯುತ್ತಿರುವ ಆ ರಾಮಪತ್ನಿಯನ್ನು ರಾವಣನು ನಟ್ಟದೃಷ್ಟಿಯಿಂದ ನೋಡಿದನು. ಕೊನೆಗೆ ಆಕೆಯನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗಬೇಕೆಂಬ ಬುದ್ಧಿಯೂ ಆತನಿಗೆ ಹುಟ್ಟಿತು. ತನ್ನ ಸಾವಿಗೆ ಮೂಲವಾದ ಆ ಕಾರ್ಯವನ್ನೇ ಅವನು ಮನಸ್ಸಿನಲ್ಲಿ ಚಿಂತಿಸುತ್ತಿದ್ದನು. ಇತ್ತಲಾಗಿ ಸೀತೆಯು ಬೇಟೆಗಾಗಿ ಹೋಗಿದ್ದ ತನ್ನ ಪ್ರಿಯಪತಿಯಾದ ರಾಮನು ಹಿಂತಿರುಗಿ ಬರುವುದನ್ನೇ ಅತ್ಯಾತುರದಿಂದ ನಿರೀಕ್ಷಿಸುತ್ತ, ರಾಮಲಕ್ಷ್ಮಣರು ಹೋದ ದಾರಿಯನ್ನೇ ಬಾರಿಬಾರಿಗೂ ನೋಡುತ್ತಿದ್ದಳು. ಎಷ್ಟು ನೋಡಿದರೇನು ? ಅವಳ ಕಣ್ಣಿಗೆ ಸುತ್ತಲೂ ಘೋರಾರಣ್ಯವು ಕಾಣಿಸುತ್ತಿತ್ತೇ ಹೊರತು, ರಾಮನಾಗಲಿ, ಲಕ್ಷ್ಮಣನಾಗಲಿ ಕಣ್ಣಿಗ ಗೋಚರಿಸಲಿಲ್ಲವು.

ಇಲ್ಲಿಗೆ ನಲ್ವತ್ತಾರನೆಯ ಸರ್ಗವು.

---

ಸೀತೆಯು ತನ್ನ ವೃತ್ತಾಂತವನ್ನು ರಾವಣನಿಗೆ ಹೇಳಿದುದು. ರಾವಣನು ತನ್ನ ಸ್ಥಿತಿಯನ್ನು ತಿಳಿಸಿ ತನ್ನನ್ನು ವರಿಸುವಂತೆ ಸೀತೆಯನ್ನು ಕೇಳಿದುದು. ಸೀತೆಯು ಪರುಷೋಕ್ತಿಗಳನ್ನಾಡಿದುದು.

ರಾವಣನು ಸೀತೆಯನ್ನು ಅಪಹರಿಸಲೆಳಸಿ, ಅವಳನ್ನು ಮರುಳುಮಾಡುವುದಕ್ಕಾಗಿ ಹೀಗೆ ಕೇಳುತ್ತಿರಲು, ಸೀತೆಯು ಆತನ ಸನ್ಯಾಸಿವೇಷವನ್ನು ನೋಡಿ ಅವನಲ್ಲಿ ವಿರೋಧಬುದ್ಧಿಯನ್ನಿಡಲಾರದೆ ತನ್ನ ವೃತ್ತಾಂತವನ್ನು ಯಥಾಸ್ಥಿತವಾಗಿ ತಿಳಿಸಲಾರಂಭಿಸಿದಳು. ಆಕೆಯು ತನ್ನ ಮನಸ್ಸಿನಲ್ಲಿ ತಾನು “ಈತನಾದರೋ ಬ್ರಾಹ್ಮಣನು. ಅತಿಥಿಯಾಗಿಯೂ ಬಂದಿರುವನು ಆತನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡದಿದ್ದರೆ ಒಂದುವೇಳೆ ಶಪಿಸಿದರೂ ಶಪಿಸಬಹುದು” ಎಂದು ಕ್ಷಣಕಾಲದವರೆಗೆ ಚಿಂತಿಸಿ, ಆಮೇಲೆ ಮಾತಾಡತೊಡಗಿದಳು. “ಎಲೈ, ಬ್ರಾಹ್ಮಣನೆ! ನಾನು ಮಿಥಿಲಾಧಿಪತಿಯಾದ ಜನಕರಾಜನ ಮಗಳು. ನನಗೆ ಸೀತೆಯೆಂದು ಹೆಸರು. ನಿನಗೆ ಮಂಗಳವಾಗಲಿ! ನಾನು ರಾಮನ ಪತ್ನಿಯು.

ಇಕ್ಷ್ವಾಕುರಾಜರ ಮನೆಯಲ್ಲಿ ಹದಿನಾಲ್ಕು ವರ್ಷ ಕಾಲವಿದ್ದು [1]ಮನುಷ್ಯಲೋಕದಲ್ಲಿ ಅನುಭವಿಸಬಹುದಾದ ಸಮಸ್ತಭೋಗಗಳನ್ನೂ ನನ್ನ ಪತಿಯೊಡಗೂಡಿ ಯಥೇಚ್ಛವಾಗಿ ಅನುಭವಿಸಿದೆನು. ಹದಿಮೂರನೆಯ ವರ್ಷದಲ್ಲಿ ನನ್ನ ಮಾವನಾದ ದಶರಥಮಹಾರಾಜನು ತನ್ನ ಸಾಮಂತರಾಜರನ್ನೂ, ಮಂತ್ರಿಗಳನ್ನೂ ಕರೆದು ರಾಮನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದಾಲೋಚಿಸುತ್ತಿದ್ದನು. ಅವರೆಲ್ಲರೂ ಅನುಮತಿಸಿದ ಮೇಲೆ, ಅಭಿಷೇಕಕ್ಕೆ ಬೇಕಾದ ಸಂಭಾರಗಳೆಲ್ಲವನ್ನೂ ಸಿದ್ಧಪಡಿಸುತ್ತಿರುವಾಗ, ನನ್ನತ್ತೆಯಾದ ಕೈಕೇಯಿಯೆಂಬ ರಾಜನ ಕಿರಿಯ ಹೆಂಡತಿಯು ರಾಜನ ಬಳಿಗೆ ಹೋಗಿ ವರಗಳನ್ನು ಯಾಚಿಸಿದಳು. ಆ ಕೈಕೇಯಿಯು ಸತ್ಯಸಂಧನಾಗಿಯೂ, ರಾಜಶ್ರೇಷ್ಠನಾಗಿಯೂ ಇರುವ ನನ್ನ ಮಾವನಾದ ಆ ದಶರಥರಾಜನನ್ನು ಕುರಿತು ಮೊದಲು ತಾನು ಆತನಿಗೆ ಮಾಡಿದ್ದ ಉಪಕಾರವನ್ನು ಸ್ಮೃತಿಗೆ ತಂದು, ಆಣೆಯಿಟ್ಟು, ರಾಮನನ್ನು ಕಾಡಿಗೆ ಕಳುಹಿಸಬೇಕೆಂದೂ, ಭರತನಿಗೆ ಪಟ್ಟವಾಗಬೇಕೆಂದೂ ಎರಡು ವರಗಳನ್ನು ಕೇಳಿದಳು. ಆ ವರಗಳನ್ನು ಕೇಳುವಾಗಲೇ ಆಕೆಯು ತನ್ನ ಪತಿಯಾದ ದಶರಥನೊಡನೆ "ನೀನು ಈ ನನ್ನಿಷ್ಟಕ್ಕೆ ವಿರೋಧವಾಗಿ ನಡೆದರೆ, ನಾನು ಅನ್ನಪಾನಗಳನ್ನೂ ಬಿಟ್ಟುಬಿಡುವೆನು. ನಿದ್ರೆಯನ್ನೂ ಬಿಟ್ಟುಬಿಡುವೆನು. ನೀನು ರಾಮನಿಗೆ ಪಟ್ಟಾಭಿಷೇಕವನ್ನು ಮಾಡುವುದಾದರೆ ನಿನ್ನೆದಿರಾಗಿ ಈಗಲೇ ಪ್ರಾಣವನ್ನೂ ಬಿಟ್ಟುಬಿಡುವೆನು" ಎಂದು ಕ್ರೂರವಾದ ಪ್ರತಿಜ್ಞೆಯನ್ನೂ ಮಾಡಿಬಿಟ್ಟಳು. ಇದನ್ನು ಕೇಳಿ ನನ್ನ ಮಾವನು ಆಕೆಯನ್ನು ಎಷ್ಟೋ ಸಮಾಧಾನಪಡಿಸಿದನು. ಅವಳಿಗೆ ಕೇಳಿದಷ್ಟು ಹಣವನ್ನಾದರೂ ಕೊಡುವುದಾಗಿ ಹೇಳಿದನು. ಆಕೆಯು

---

1 ಇಲ್ಲಿ "ಭುಂಜಾನಾ ಮಾನುಷಾನ್ ಭೋಗಾನ್" ಎಂದು ಮೂಲವು. ಮನುಷ್ಯರು ಅನುಭವಿಸುವ ರತಿಕ್ರೀಡಾದಿ ಶಬ್ದಗಳನ್ನೆಲ್ಲಾ ತಾನು ಅನುಭವಿಸುತ್ತಿದ್ದುದಾಗಿ ಭಾವವು. ರತಿಕ್ರೀಡಾದಿ ಶಬ್ದಗಳನ್ನು ವಾಚ್ಯವಾಗಿ ಹೇಳುವುದು ಗ್ರಾಮ್ಯವೆಂದು ತಿಳಿದು, ಇಲ್ಲಿ ಆ ಅರ್ಥವು ಧ್ವನಿತವಾಗುವಂತೆ ಮಾನುಷಭೋಗಗಳೆಂದು ಹೇಳಿದುದಾಗಿ ಗ್ರಾಹ್ಯವು. ಅಥವಾ "ಅಮಾನುಷಾನ್ ಭೋಗಾನ್" ಎಂದು ಪದಚ್ಛೇದವನ್ನು ಮಾಡಿ, ಮನುಷ್ಯದುರ್ಲಭಗಳಾದ ಭೋಗಗಳೆಂದೂ ಹೇಳಬಹುದು. ಅಥವಾ ಸೀತೆಯು ವಾಸ್ತವದಿಂದ ದಿವ್ಯಭೋಗಗಳನ್ನೇ ಅನುಭವಿಸತಕ್ಕವಳಾಗಿದ್ದರೂ, ಈಗ ಮನುಷ್ಯರೂಪದಿಂದವತರಿಸಿರುವ ರಾಮನೊಡನೆ ಸೇರಿ ತಾನೂ ಅವನ ಸಂಬಂಧವಾದ ಭೋಗಗಳನ್ನೇ ಅನುಭವಿಸುತ್ತಿದ್ದುದಾಗಿ ಹೇಳಿದಂತೆಯೂ ಗ್ರಹಿಸಬಹುದು.

ಕೇಳಿದ ಆ ವರಗಳನ್ನು ಮಾತ್ರ ಕೊಡುವುದಕ್ಕೊಪ್ಪಲಿಲ್ಲ. ಆ ವರಗಳಿಗೆ ಬದಲಾಗಿ ಬೇರೆ ಯಾವ ವಸ್ತುವನ್ನು ಬೇಕಾದರೂ ಕೊಡುವುದಾಗಿ ಒಪ್ಪಿದನು. ಆಗ [1]ನನ್ನ ಪತಿಯಾದ ರಾಮನಿಗೆ [2]ಇಪ್ಪತ್ತೈದು ವರ್ಷಗಳು ತುಂಬಿದ್ದುವು. ನಾನು ಹುಟ್ಟಿ ಹದಿನೆಂಟು ವರ್ಷಗಳಾಗಿದ್ದುವು. ನನ್ನ ಪತಿಯಾದರೋ ರಾಮನೆಂಬ ಹೆಸರಿನಿಂದ ಲೋಕದಲ್ಲೆಲ್ಲಾ ಪ್ರಸಿದ್ಧನಾಗಿದ್ದನು. ಆತನು ಗುಣವಂತನಾಗಿಯೂ, ಸತ್ಯಸಂಧನಾಗಿಯೂ, ಪರಿಶುದ್ಧನಾಗಿಯೂ ಇದ್ದನು. ವಿಸ್ತಾರವಾದ ಕಣ್ಣುಗಳುಳ್ಳವನು. ಆಜಾನುಬಾಹುವು. ಸಮಸ್ತ ಭೂತಗಳಿಗೂ ಹಿತವನ್ನೇ ಕೋರತಕ್ಕವನು. ಏನಿದ್ದರೇನು ? ಮಹಾತೇಜಸ್ವಿಯೆನಿಸಿಕೊಂಡ ಆತನ ತಂದೆಯಾದ ದಶರಥನು, ಕಾಮಪರವಶನಾಗಿ, ಕೈಕೇಯಿಗೆ ಪ್ರಿಯವನ್ನುಂಟುಮಾಡಬೇಕೆಂದು, ರಾಮನಿಗೆ ಪಟ್ಟಾಭಿಷೇಕವನ್ನು ನಡೆಸಲಿಲ್ಲ.

---

1. ಇಲ್ಲಿ "ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕಃ | ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ ॥" ಎಂದು ಮೂಲವು. ಇಲ್ಲಿ "ಮಮ ಭರ್ತಾ" ಎಂಬಲ್ಲಿ ಇರುವ ಭಕಾರವು ಗಾಯತ್ರಿಯ ಒಂಬತ್ತನೆಯ ಅಕ್ಷರವಾದುದರಿಂದ, ಇದುವರೆಗೆ ಎಂಟು ಸಾವಿರ ಗ್ರಂಥಗಳು ಮುಗಿದು, ಈ ಶ್ಲೋಕದಿಂದ ಒಂಬತ್ತನೆಯ ಸಾವಿರವು ಆರಂಭಿಸಲ್ಪಡುವುದೆಂದು ತಿಳಿಯಬೇಕು.

2. ಇಲ್ಲಿ ಸೀತಾರಾಮರ ವಯಸ್ಸನ್ನು ವಿಚಾರಿಸಬೇಕಾಗಿದೆ. ರಾಮನು ಹುಟ್ಟಿದ ಹನ್ನೆರಡು ವರುಷಗಳಿಗೆ ವಿಶ್ವಾಮಿತ್ರಾಗಮನವು. ಆಮೇಲೆ ಸೀತೆಯೊಡಗೂಡಿ ಹನ್ನೆರಡು ವರುಷಗಳವರೆಗೆ ಅಯೋಧ್ಯೆಯಲ್ಲಿ ವಾಸವು, ಹದಿಮೂರನೆಯ ವರುಷದಲ್ಲಿ ಪಟ್ಟಾಭಿಷೇಕಾರಂಭವು. ಆಮೇಲೆ ವನಪ್ರವೇಶ ಕಾಲದಲ್ಲಿ ರಾಮನಿಗೆ ಇಪ್ಪತ್ತೈದನೆಯ ವರುಷವೆಂಬುದು ಸೀತೆಯು ಹೇಳಿದಂತೆಯೇ ಸಮಂಜಸವಾಗುವುದು. ಆಮೇಲೆ ವನವಾಸಕ್ಕಾಗಿ ನಿರ್ಣಯಿಸಲ್ಪಟ್ಟ ಹದಿನಾಲ್ಕು ವರ್ಷಗಳಲ್ಲಿ, ಋಷ್ಯಾಶ್ರಮದಲ್ಲಿ ಹತ್ತು ವರ್ಷಗಳೂ, ಪಂಚವಟಿಯಲ್ಲಿ ಮೂರು ವರ್ಷಗಳೂ ಕಳೆದುಹೋಗಲು, ಹದಿನಾಲ್ಕನೆಯ ವರ್ಷದಲ್ಲಿಯೇ ಸೀತಾಪಹರಣವು. ಆದುದರಿಂದ ಈಗ ರಾಮನಿಗೆ ಮೂವತ್ತೇಳು ವಯಸ್ಸಾಗುವುದು. ಹಾಗೆಯೇ ಸೀತೆಗೆ ಭೂಮಿಯಲ್ಲಿ ಹುಟ್ಟಿದುದು ಮೊದಲು ಮಿಥಿಲೆಯಲ್ಲಿದ್ದವರೆಗೆ ಆರು ವರ್ಷಗಳು. ವಿವಾಹವಾದ ಮೇಲೆ ಅಯೋಧ್ಯೆಯಲ್ಲಿದ್ದುದು ಹನ್ನೆರಡು ವರ್ಷಗಳು. ಆದುದರಿಂದ ವನಪ್ರವೇಶ ಕಾಲದಲ್ಲಿ ಹದಿನೆಂಟು ವರ್ಷಗಳೆಂಬುದೂ ಸರಿಹೋಗುವುದು. ಈಗ್ಗೆ ವನವಾಸದಲ್ಲಿ ಹದಿಮೂರು ವರ್ಷಗಳು ಕಳೆದು ಹದಿನಾಲ್ಕನೆಯ ವತ್ಸರವು ನಡೆಯುತ್ತಿರುವುದರಿಂದ, ಅವಳಿಗೆ ಮೂವತ್ತೊಂದು ವಯಸ್ಸು ಕಳೆದು ಮೂವತ್ತೆರಡನೆಯ ವರ್ಷವು ನಡೆಯುತ್ತಿರುವುದಾಗಿಯೂ ತಿಳಿಯಬೇಕು.

ಇದೊಂದನ್ನೂ ತಿಳಿಯದ ನನ್ನ ಪತಿಯು ಅಭಿಷೇಕಾರ್ಥವಾಗಿ ತಂದೆಯ ಆಜ್ಞೆಯ ಮೇಲೆ ಆತನ ಬಳಿಗೆ ಹೋಗಿ ನಿಂತಾಗ, ಕೈಕೇಯಿಯು ನನ್ನ ಪ್ರಿಯನಾದ ರಾಮನನ್ನು ನೋಡಿ ಸ್ವಲ್ಪವೂ ಸಂಕೋಚವಿಲ್ಲದೆ "ಎಲೈ ರಾಮನೆ! ನಿನ್ನ ತಂದೆಯು ನನ್ನೊಡನೆ ನಿನಗೆ ತಿಳಿಸುವಂತೆ ಆಜ್ಞಾಪಿಸಿರುವುದನ್ನು ಹೇಳುವೆನು ಕೇಳು. ನಿಷ್ಕಂಟಕವಾದ ಈ ರಾಜ್ಯವನ್ನು ಭರತನಿಗೆ ಕೊಟ್ಟು ನಿನ್ನನ್ನು ಹದಿನಾಲ್ಕುವರ್ಷಗಳವರೆಗೆ ಕಾಡಿನಲ್ಲಿರಿಸಬೇಕೆಂದು ಹೇಳಿರುವನು ಆದುದರಿಂದ ನೀನು ಈಗಲೇ ಈ ಊರನ್ನು ಬಿಟ್ಟು ಕಾಡಿಗೆ ಹೊರಡಬೇಕು. ನಿನ್ನ ತಂದೆಯನ್ನು ಅಸತ್ಯದೋಷದಿಂದ ತಪ್ಪಿಸುವುದು ನಿನಗೆ ಸೇರಿದೆ" ಎಂದಳು ನನ್ನ ಪತಿಯಾದ ರಾಮನಾದರೋ ಯಾವುದಕ್ಕೂ ಅಂಜತಕ್ಕವನಲ್ಲ. ಇದರಮೇಲೆ ಹಿಡಿದ ವ್ರತವನ್ನು ಬಿಡುವವನೂ ಅಲ್ಲ. ಆದುದರಿಂದ ಅವನು ಆಗ ಕೈಕೇಯಿಯೊಡನೆ ಹಾಗೆಯೇ ಮಾಡುವುದಾಗಿ ಒಪ್ಪಿ, ಅವಳ ಮಾತಿನಂತೆ ಕಾಡಿಗೆ ಹೊರಟುಬಂದನು. ಎಲೈ ಬ್ರಾಹ್ಮಣೋತ್ತಮನೆ! ನನ್ನ ಪತಿಯಾದ ರಾಮನ ಗುಣವನ್ನು ಇನ್ನೂ ಹೇಳುವೆನು ಕೇಳು. [1] ತಾನು ಇತರರಿಗೆ ಕೊಡುವನೇ ಹೊರತು ಮತ್ತೊಬ್ಬರಿಂದ ಕೈನೀಡಿ ತೆಗೆಯತಕ್ಕವನಲ್ಲ. ಸತ್ಯವನ್ನಾಡುವನೇ ಹೊರತು ಸುಳ್ಳಾಡುವವನಲ್ಲ. ಇದೇ ಆತನು ದೃಢವಾಗಿ ಹಿಡಿದಿರುವ ಉತ್ತಮವಾದ ವ್ರತವು. ನನ್ನ ಪತಿಯಾದ ರಾಮನಿಗೆ ಬಲತಾಯಿಯ ಮಗನಾದ ಲಕ್ಷ್ಮಣನೆಂಬ ತಮ್ಮನೊಬ್ಬನುಂಟು. ಆತನೂ ಮಹಾವೀರ್ಯವುಳ್ಳವನು. ಯುದ್ಧದಲ್ಲಿ ಯಾವ ಶತ್ರುಗಳನ್ನಾದರೂ ಹುಟ್ಟಡಗಿಸಬಲ್ಲನು. ರಾಮನಿಗೆ ಯಾವಾಗಲೂ ಅವನು ಸಹಾಯಕನಾಗಿರುವನು. ಪರಮಧಾರ್ಮಿಕನು. ದೃಢವಾದ ನಿಯಮವುಳ್ಳವನು. ರಾಮನು ನನ್ನೊಡನೆ ವನಕ್ಕೆ ಹೊರಟಾಗ, ಆ ಲಕ್ಷ್ಮಣನೂ ಅಣ್ಣನನ್ನಗಲಿರಲಾರದೆ ಧನುರ್ಧಾರಿಯಾಗಿ ಆತನನ್ನೇ ಹಿಂಬಾಲಿಸಿ ಬಂದುಬಿಟ್ಟನು. ರಾಮನು ಎಂದಿಗೂ ಧರ್ಮವನ್ನು ತಪ್ಪದೆ ಜಿತೇಂದ್ರಿಯನಾಗಿರುವುದರಿಂದ, ತಾಪಸ ವೇಷವನ್ನು ಧರಿಸಿ, ಜಟಾಧಾರಿಯಾಗಿ ನನ್ನೊಡನೆಯೂ ಲಕ್ಷ್ಮಣನೊಡನೆಯೂ ಈ ದಂಡ

---

1. ಇಲ್ಲಿ "ದದ್ಯಾನ್ನ ಪ್ರತಿಗೃಹ್ಣೀಯಾತ್" ಎಂದು ಮೂಲವು. 'ದದ್ಯಾತ್' ಎಂಬುದರಿಂದ ಅರ್ಥಿಗಳಿಗೆ ಯಥೇಚ್ಛವಾಗಿ ಕೊಡತಕ್ಕವನೆಂದೂ, "ನ ಪ್ರತಿಗೃಹ್ಣೀಯಾತ್" ಎಂಬುದರಿಂದ ಅವಾಪ್ತಸಮಸ್ತಕಾಮನೆಂದೂ ತಾತ್ಪರ್ಯವು.

ಕಾರಣ್ಯಕ್ಕೆ ಬಂದಿರುವನು. ಎಲೈ ಬ್ರಾಹ್ಮಣೋತ್ತಮನೆ! ಹೀಗೆ ಕೈಕೇಯಿಯ ನಿಮಿತ್ತವಾಗಿ ರಾಜ್ಯಭ್ರಷ್ಟರಾಗಿ ಬಂದಿರುವ ನಾವು ಮೂವರೂ, ಈ ಘೋರಾರಣ್ಯದಲ್ಲಿ ತಿರುಗುತ್ತಿರುವೆವು. ನನ್ನ ಪತಿಯ ವೀರ್ಯದಿಂದಲೇ ನಾವು ರಕ್ಷಿತರಾಗಿರುವೆವು ಎಲೈ ಪೂಜ್ಯನೆ! ಅದು ಹೋಗಲಿ! ನೀನು ಇಲ್ಲಿಯೇ ಸ್ವಲ್ಪಹೊತ್ತು ವಿಶ್ರಮಿಸಿಕೊಂಡಿದ್ದು ಮುಂದೆ ಹೋಗಬಹುದು. ಇಲ್ಲಿರುವುದು ನಿನಗೇನೂ ಕಷ್ಟವಾಗಿ ತೋರದು. ನನ್ನಪತಿಯಾದ ರಾಮನು ಈ ಕಾಡಿನಲ್ಲಿ ಬೇಟೆಯಾಡಿ ಜಿಂಕೆಗಳನ್ನೂ, ಉಡುಗಳನ್ನೂ, ಹಂದಿಗಳನ್ನೂ ಹೊಡೆದು ಬೇಕಾದಷ್ಟು ಮಾಂಸವನ್ನು ಸಂಗ್ರಹಿಸಿ ತರುವನು. ಕಾಡಿನಲ್ಲಿ ಸಿಕ್ಕುವ ಇನ್ನೂ ಬೇರೆಬೇರೆ ವಿಧವಾದ ಆಹಾರಪದಾರ್ಥಗಳನ್ನೂ ಪುಷ್ಕಲವಾಗಿ ತರುವನು ಎಲೈ, ಬ್ರಾಹ್ಮಣನೆ! ಇನ್ನು ನಿನ್ನ ಹೆಸರನ್ನೂ, [1]ಕುಲವನ್ನೂ ಗೋತ್ರವನ್ನೂ ಯಥಾಸ್ಥಿತವಾಗಿ ನನಗೆ ತಿಳಿಸುವೆಯಾ? ಈ ದಂಡಕಾರಣ್ಯದಲ್ಲಿ ನೀನೊಬ್ಬನೇ ಸುತ್ತುತ್ತಿರುವುದೇಕೆ" ಎಂದಳು. ರಾಮನ ಪ್ರಿಯಪತ್ನಿಯಾದ ಸೀತೆಯು ಹೇಳಿದ ಈ ಮಾತನ್ನು ಕೇಳಿ, ರಾಕ್ಷಸರಾಜನಾದ ರಾವಣನು, ತೀವ್ರವಾದ ಪ್ರತ್ಯುತ್ತರವನ್ನು ಹೇಳಲಾರಂಭಿಸಿ "ಎಲೆ ಸೀತೆ! ದೇವಗಂಧರ್ವಪನ್ನಗರೇ ಮೊದಲಾದ ಸಮಸ್ತ ಲೋಕಗಳೂ ಯಾವನ ಹೆಸರನ್ನು ಕೇಳಿ ನಡುಗುತ್ತಿರುವುವೋ ಅಂತಹ ರಾಕ್ಷಸಕುಲರಾಜನಾದ ರಾವಣನೇ ನಾನೆಂದು ತಿಳಿ! [2]ಬಂಗಾರದಂತೆ

1. "ಯತಿಯ ಕುಲಗೋತ್ರಗಳನ್ನು ಕೇಳಬಾರದು. ಮತ್ತು ಯತಿಯಾದವನು ಏಕಾಕಿಯಾಗಿ ಕಾಡಿನಲ್ಲಿ ಸುತ್ತುವುದೂ ಧರ್ಮಯುಕ್ತವಾಗಿಯೇ ಇರುವುದು. ಆದುದರಿಂದ ಈಗ ಸೀತೆಯು ಈ ಪ್ರಶ್ನೆಗಳನ್ನು ಹಾಕಿದುದುಚಿತವೆ?" ಎಂದರೆ, ಸೀತೆಯು ಆ ಸನ್ಯಾಸಿಗೆ ಪೂರ್ವಾಶ್ರಮದಲ್ಲಿದ್ದ ಕುಲಗೋತ್ರಗಳನ್ನು ಕೇಳಿದುದಾಗಿಯೂ, "ಭಿಕ್ಷಾರ್ಥಂ ಗ್ರಾಮಂ ಪ್ರವಿಶೇತ್" ಎಂಬ ಶ್ರುತಿಯನ್ನನುಸರಿಸಿ, ಯತಿಯಾದವನು ಗ್ರಾಮಗಳಿಗೆ ಸಮೀಪವಾದ ಅರಣ್ಯದಲ್ಲಿದ್ದುಕೊಂಡು, ಆಗಾಗ ಭಿಕ್ಷಾರ್ಥವಾಗಿ ಗ್ರಾಮಗಳಿಗೆ ಹೋಗಬೇಕಾದುದರಿಂದ, ಅದನ್ನು ಬಿಟ್ಟು ಗ್ರಾಮಗಳಿಗೆ ದೂರವಾದ ಈ ಅರಣ್ಯದಲ್ಲಿ ತಿರುಗುವುದೇಕೆಂದು ಕೇಳಿದುದಾಗಿಯೂ ಊಹಿಸಬೇಕು.

2. ಇಲ್ಲಿ "ತ್ವಾಂ ತು ಕಾಂಚನವರ್ಣಾಭಾಂ ದೃಷ್ಟ್ವಾ ಕೌಶೇಯವಾಸಿನೀಂ। ರತಿಂ ಸ್ವಕೇಷು ದಾರೇಷು ನಾಧಿಗಚ್ಛಾಮ್ಯನಿಂದಿತೇ॥" ಎಂದು ಮೂಲವು. ಇದರ ಪ್ರಾತೀತಿಕಾರ್ಥವು ಮೇಲೆ ಕಾಣಿಸಲ್ಪಟ್ಟಿರುವುದು. ವಾಸ್ತವಾರ್ಥವೇನೆಂದರೆ — "ನನಗೆ ಇಷ್ಟದೇವತೆಯಾದ ನಿನ್ನನ್ನು ಈಗ ದರ್ಶನಮಾಡಿದಮೇಲೆ, ನನ್ನ ಪುತ್ರಮಿತ್ರಾದಿ ಬಂಧುಗಳಲ್ಲಿಯಾಗಲಿ, ನನ್ನ ಪ್ರಿಯಪತ್ನಿಯರಲ್ಲಿಯಾಗಲಿ ಆಸೆಯು ತಪ್ಪಿ, ನಿನ್ನ ದರ್ಶನಾನಂದ ಪರವಶನಾಗಿ ಸಮಸ್ತ ವಸ್ತುಗಳಲ್ಲಿಯೂ ವಿರಕ್ತಿಯನ್ನು ಹೊಂದಿರುವೆನು" ಎಂದು ಹೇಳಿದುದಾಗಿಯೂ ಭಾವವು.

ಮೈಬಣ್ಣವುಳ್ಳವಳಾಗಿ, ಪಟ್ಟೆಯ ದುಕೂಲವನ್ನುಟ್ಟು ನಿಂತಿರುವ ಈ ನಿನ್ನನ್ನು ನಾನು ನೋಡಿದುದು ಮೊದಲು, ನನಗೆ ನನ್ನ ನಿಜಪತ್ನಿಯರಲ್ಲಿದ್ದ ಭೋಗ ದಾಸೆಯೇ ತಪ್ಪಿಹೋಯಿತು [1]ಎಲೆ ಸೀತೆ ! ನಾನು ನಾನಾಕಡೆಗಳಿಂದ ಎಷ್ಟೋ ಉತ್ತಮ ಸ್ತ್ರೀಯರನ್ನು ತಂದಿರುವೆನು. ಅಷ್ಟುಮಂದಿ ಸ್ತ್ರೀಯರಿದ್ದರೂ ನನಗೆ ನಿನ್ನಲ್ಲಿಯೇ ಪ್ರೇಮವು ಹೆಚ್ಚಾಗಿರುವುದು. ಆದುದರಿಂದ ಅವರೆಲ್ಲರನ್ನೂ ಬಿಟ್ಟು ನಿನ್ನನ್ನೇ ಪಟ್ಟದ ರಾಣಿಯನ್ನಾಗಿ ಮಾಡುವೆನು. ನಿನಗೆ ಶುಭ ವಾಗಲಿ ! ಅವರೊಳಗೆ ನೀನೇ ನನ್ನ ಪಟ್ಟದ ರಾಣಿಯಾಗಿರು. ಇನ್ನು ನನ್ನ ಭಾಗ್ಯಸಮೃದ್ಧಿಯನ್ನೂ ಹೇಳುವೆನು ಕೇಳು ಸಮುದ್ರದ ನಡುವೆ ಅತ್ಯುನ್ನತ ವಾದ ಒಂದು ಪರ್ವತದ ತುದಿಯಲ್ಲಿ ನನ್ನ ಪಟ್ಟಣವು ಕಟ್ಟಲ್ಪಟ್ಟಿರುವುದು. ಅದಕ್ಕೆ ಲಂಕೆಯೆಂದು ಹೆಸರು. ಮಹಾಸಮುದ್ರವೇ ಅದಕ್ಕೆ ಅಗಳಂತಿರು ವುದು. ಅದರ ಉದ್ಯಾನವನಗಳಲ್ಲಿ ನೀನು ನನ್ನೊಡನೆ ವಿಹರಿಸಬಹುದು. ನೀನು ಒಂದಾವರ್ತಿ ನನ್ನ ಉದ್ಯಾನವನವನ್ನು ನೋಡಿದ ಮಾತ್ರಕ್ಕೆ, ತಿರುಗಿ ನಿನಗೆ ಈ ಅರಣ್ಯವಾಸದಲ್ಲಿ ಆಸೆಯೇ ಉಂಟಾಗದು. ಎಲೆ ಭಾಮಿನಿ ! [2]ನನ್ನ ಅಂತಃಪುರದಲ್ಲಿ ಐದುಸಾವಿರಮಂದಿ ಗೌಡಿಯರಿರುವರು !" ಅವರೊಬ್ಬಬ್ಬರೂ ನನ್ನಿಂದ ಸರ್ವಾಭರಣಗಳಿಂದಲಂಕರಿಸಲ್ಪಟ್ಟಿರುವರು. ನೀನು ನನ್ನ ಕೈಹಿಡಿದೆ ಯಾದರೆ ಅವರೆಲ್ಲರೂ ನಿನ್ನನ್ನುಪಚರಿಸುವರು !" ಎಂದನು. ರಾವಣನು ಹೇಳಿದ

---

1. ಇಲ್ಲಿ "ಬಹ್ವೀನಾಮುತ್ತಮಸ್ತ್ರೀಣಾಮಾಹೃತಾನಾಮಿತಸ್ತತಃ | ಸರ್ವಾಸಾಮೇವ ಭದ್ರಂ ತೇ ಮಮಾಗ್ರಮಹಿಷೀ ಭವ ॥" ಎಂದು ಮೂಲವು. ಇದಕ್ಕೆ "ನಾನು ತಂದಿಟ್ಟಿರುವ ಅನೇಕ ಸ್ತ್ರೀಯರಿಗೂ, ನನಗೂ ನೀನು ಅಧೀಶ್ವರಿಯಂತೆ ನಿಯಾಮಕ ಳಾಗಿದ್ದು ನಮ್ಮನ್ನುದ್ಧರಿಸಬೇಕು" ಎಂದು ಅಂತರಾಶಯವು.

2. ಇಲ್ಲಿ "ಪಂಚದಾಸ್ಯಸ್ಸಹಸ್ರಾಣಿ ಸರ್ವಾಭರಣಭೂಷಿತಾಃ | ಸೀತೇ ಪರಿಚರಿಷ್ಯಂತಿ ಭಾರ್ಯಾ ಭವಸಿ ಮೇ ಯದಿ ॥" ಎಂದು ಮೂಲವು. ಅನ್ವಯಭೇದದಿಂದ ಇದರ ವಾಸ್ತ ವಾರ್ಥವು ವ್ಯಕ್ತವಾಗುವುದು. ಹೇಗೆಂದರೆ :—(ಮೇ) ನನಗೆ ಸೇರಿರುವ, (ಪಂಚದಾಸ್ಯ-ಸ್ಸಹಸ್ರಾಣಿ) ಐದು ಸಾವಿರ ಮಂದಿ ದಾಸಿಯರೂ, (ಸರ್ವಾಭರಣಭೂಷಿತಾಃ) ಸಮಸ್ತಾ ಭರಣಗಳಿಂದಲಂಕರಿಸಲ್ಪಟ್ಟವರಾಗಿ, (ಪರಿಚರಿಷ್ಯಂತಿ ಯದಿ) ಉಪಚರಿಸುತ್ತಿದ್ದುದೇ ಆದರೆ, (ಭಾರ್ಯಾ ಭವಸಿ) 'ಭಾ + ಆರ್ಯಾ' ಕಾಂತಿಯಿಂದ ಪೂಜ್ಯಳಾಗಿ, (ಭವಸಿ) ಆಗುವೆ ಎಂದರೆ ನನ್ನಲ್ಲಿರುವ ಅನೇಕ ದಾಸಿಯರಿಂದಲೂ ನನ್ನಿಂದಲೂ ಉಪಚರಿಸಲ್ಪಡುತ್ತಿರುವಾಗ ನಿನ್ನ ವೈಭವವು ವಿಶೇಷವಾಗಿ ಶೋಭಿಸುವುದಲ್ಲವೆ ?—ಎಂದು ಹೇಳಿದುದಾಗಿ ಭಾವವು.

ಈ ಮಾತನ್ನು ಕೇಳಿ ಸೀತೆಗೆ ಸಹಿಸಲಾರದ ಕೋಪವುಂಟಾಯಿತು. ಶುದ್ಧ ಸ್ವಭಾವವುಳ್ಳ ಆ ಸೀತೆಯು, ಆತನ ಮಾತನ್ನು ಸ್ವಲ್ಪವಾದರೂ ಲಕ್ಷ್ಯಮಾಡದೆ ಪ್ರತ್ಯುತ್ತರವನ್ನು ಹೇಳಲಾರಂಭಿಸಿದಳು. “ಎಲೈ! ನಾನು ಯಾರೆಂದು ತಿಳಿದೆ? ಮಹಾಪರ್ವತದಂತೆ ಎಂತವರಿಗೂ ಕದಲಿಸಲಸಾಧ್ಯನಾಗಿ, ಮಹಾ ಸಮುದ್ರದಂತೆ ಅಕ್ಷೋಭ್ಯನಾಗಿ, ಮಹೇಂದ್ರಸಮಾನನೆನಿಸಿಕೊಂಡಿರುವ ಆ ರಾಮನ ಪತ್ನಿಯಲ್ಲವೆ? ಪತಿಯ ಛಾಯೆಯನ್ನೇ ಅನುಸರಿಸುತ್ತ ನಾನು ಅದನ್ನೇ ವ್ರತವಾಗಿ ಉಳ್ಳವಳು. ಸರ್ವಲಕ್ಷಣಸಂಪನ್ನನಾಗಿ, [1]ಆಲದಮರದಂತೆ ವಿಸ್ತಾರವಾದ ಮೈಕಟ್ಟುಳ್ಳವನಾಗಿ, ಸತ್ಯಸಂಧನಾಗಿ, ಮಹಾಭಾಗನೆನಿಸಿ ಕೊಂಡಿರುವ ಆ ರಾಮನೊಬ್ಬನೇ ನನ್ನ ಮನಃಪ್ರಿಯನು. ಮಹಾಬಾಹು, ವಿಸ್ತಾರವಾದ ಎದೆಯುಳ್ಳವನಾಗಿ, ಸಿಂಹದಂತೆ ಗಂಭೀರವಾದ ನಡೆಯುಳ್ಳವ ನಾಗಿ, ಪುರುಷಸಿಂಹನೆನಿಸಿಕೊಂಡು, ಸಿಂಹಪರಾಕ್ರಮಿಯಾದ ಆ ರಾಮ ನೊಬ್ಬನೇ ನನ್ನ ಮನೋವಲ್ಲಭನು. ಪೂರ್ಣಚಂದ್ರನಂತೆ ಮುಖವುಳ್ಳವನಾಗಿ, ಜಿತೇಂದ್ರಿಯನಾಗಿ, ಕೀರ್ತಿವಂತನಾಗಿ, ಮಹಾತ್ಮನಾಗಿರುವ ರಾಜಕುಮಾರ ನಾದ ಆ ರಾಮನೊಬ್ಬನೇ ನನಗೆ ಪ್ರಾಣವಲ್ಲಭನು. ಛೀ! ಅಲ್ಪಬುದ್ಧಿ ಯುಳ್ಳವನೆ! ಕ್ಷುದ್ರಜಂತುವಾದ ಒಂದು ನರಿಯು, ಸಿಂಹಸ್ತ್ರೀಯಲ್ಲಿ ಆಸೆಯನ್ನಿಡುವಂತೆ ದುರ್ಲಭೆಯಾದ ನನ್ನನ್ನೂ ಅಪೇಕ್ಷಿಸುವೆಯಾ! ಸೂರ್ಯ ಪ್ರಭೆಯನ್ನು ಮುಟ್ಟುವಂತೆ ನನ್ನನ್ನು ಮುಟ್ಟಿ ಬದುಕಬಲ್ಲೆಯಾ? ಎಲೆ ರಾವಣನೆ! ಶ್ರೀರಾಮನ ಪ್ರಿಯಪತ್ನಿಯಾದ ನನ್ನಲ್ಲಿಯೂ ನಿನಗೆ ಆಸೆ ಯುಂಟಾಯಿತೆ? ಮಂದಭಾಗ್ಯನಾದ ನೀನು [2]ಸುವರ್ಣವೃಕ್ಷಗಳನ್ನು ನೋಡ ತಕ್ಕ ಕಾಲವು ಬಂದೊದಗಿದೆಯೆಂದೇ ಹೇಳಬೇಕಾಗಿದೆ! ಕೊನೆಗಾಲವು

---

1. ಇಲ್ಲಿ ಹೇಳಿರುವ ಆಲದಮರದ ಸಾದೃಶ್ಯದಿಂದ, ಅದರ ಅನೇಕ ಶಾಖೆಗಳಂತೆ, ಅನೇಕ ಬಂಧುವರ್ಗಗಳುಳ್ಳವನೆಂದಾಗಲಿ, ಅಥವಾ ಅದರಂತೆ ಸರ್ವಸಮಾಶ್ರಯಣೀಯ ನೆಂದಾಗಲಿ ಗ್ರಹಿಸಬಹುದು. ಅಥವಾ “ಕೂಪೋದಕಂ ವಟಚ್ಛಾಯಾ ತಾಂಬೂಲಂ ತರುಣೀಸ್ತನೌ । ಶೀತಕಾಲೇ ಭವೇದುಷ್ಣಮುಷ್ಣಕಾಲೇ ತು ಶೀತಲಂ ॥” ಎಂಬಂತೆ ಸಮಸ್ತ ಕಾಲಗಳಲ್ಲಿಯೂ ಸರ್ವಜನಾನುಕೂಲನೆಂದೂ ಗ್ರಹಿಸಬಹುದು.

2. ಮರಣವು ಸನ್ನಿಹಿತವಾಗಿರುವಾಗ, ಅಂತಹವರ ಕಣ್ಣಿಗೆ ಸ್ವರ್ಣಮಯವಾದ ಕೆಲವು ವೃಕ್ಷಗಳು ಕಾಣುವುವೆಂದು ಪ್ರಸಿದ್ಧಿಯುಂಟು. ಆದುದರಿಂದ ಇಲ್ಲಿ ತನ್ನನ್ನು ಕೋರಿದ ಪಾಪಿಯಾದ ನಿನಗೆ ಮರಣವು ಸನ್ನಿಹಿತವಾಗಿಯೇ ಇರುವುದೆಂದು ಹೇಳಿದುದಾಗಿ ಭಾವವು.

ಸಮೀಪಿಸಿರುವುದರಿಂದಲೇ ನಿನಗೆ ಈ ವಿಪರೀತಬುದ್ಧಿಯು ಹುಟ್ಟಿರುವುದು. ಇದರಲ್ಲಿ ಸಂದೇಹವೇ ಇಲ್ಲ. ಹಸಿವಿನಿಂದ ಆತುರಪಡುತ್ತಿರುವ ಸಿಂಹದ ಬಾಯಿಗೂ, ವಿಷೋಲ್ಬಣವಾದ ಸರ್ಪದ ಬಾಯಿಗೂ ಕೈಯನ್ನು ಹಾಕಿ, ಅದರ ಕೋರೆ ಹಲ್ಲನ್ನು ಕೀಳಬೇಕೆಂದಪೇಕ್ಷಿಸುವೆಯಾ? ಪರ್ವತಶ್ರೇಷ್ಠವಾದ ಮಂದರವನ್ನು ಕೈಯಿಂದೆತ್ತಿಕೊಂಡು ಹೋಗಬೇಕೆಂದಪೇಕ್ಷಿಸುವೆಯಾ? ಕಾಲಕೂಟವಿಷವನ್ನು ಕುಡಿದು ಕ್ಷೇಮದಿಂದ ಹೋಗಬೇಕೆಂದೆಳಸುವೆಯಾ? ಸೂಜಿಯಿಂದ ಕಣ್ಣನ್ನು ತೊಳಸುವೆಯಾ? ನಾಲಗೆಯಿಂದ ಕತ್ತಿಯನ್ನು ನೆಕ್ಕುವೆಯಾ? ಶ್ರೀರಾಮನ ಪ್ರಿಯಭಾರ್ಯೆಯಾದ ನನ್ನನ್ನು ನೀನು ಪಡೆಯಬೇಕೆಂದೆಳಸುವೆಯಲ್ಲಾ! ಇದರಿಂದ ಮುಂದೆ ನಿನಗುಂಟಾಗಬಹುದಾದ ನಾಶವು ತಿಳಿಯದೆ ಹೋಯಿತೆ! ಕೊರಲಿಗೆ ಕಲ್ಲನ್ನು ಕಟ್ಟಿಕೊಂಡು ಸಮುದ್ರವನ್ನು ದಾಟುವುದಕ್ಕೆ ಪ್ರಯತ್ನಿಸುವಂತೆಯೂ, ಸೂರ್ಯಚಂದ್ರರನ್ನು ಕೈಯಿಂದ ಹಿಡಿಯಬೇಕೆಂದು ಆಕಾಶಕ್ಕೆ ಹಾರುವಂತೆಯೂ, ಮುಂದೆ ಬರಬಹುದಾದ ಕೇಡನ್ನು ಪರ್ಯಾಲೋಚಿಸದೆ, ರಾಮನ ಪ್ರಿಯಭಾರ್ಯೆಯಾದ ನನ್ನನ್ನು ಪಡೆಯಬೇಕೆಂಬ ದುರಾಸೆಯು ನಿನಗೇಕೆ ಹುಟ್ಟಿತು? ಪವಿತ್ರವಾದ ನಡತೆಯುಳ್ಳ ರಾಮಭಾರ್ಯೆಯಾದ ನನ್ನಲ್ಲಿ ಆಸೆಯಿಟ್ಟು, ಉರಿಯುವ ಬೆಂಕಿಯನ್ನು ಬಟ್ಟೆಯಲ್ಲಿ ಕಟ್ಟಬೇಕೆಂದೆಳಸುವೆಯಾ! ರಾಮನಿಗೆ ತಕ್ಕ ಭಾರ್ಯೆಯಾದ ನನ್ನನ್ನು ಪಡೆಯಲಪೇಕ್ಷಿಸಿ ಉಕ್ಕಿನ ಅಲಗುಗಳುಳ್ಳ ಶೂಲದ ಮೇಲೆ ನಡೆಯುವುದಕ್ಕೆ ಪ್ರಯತ್ನಿಸುವೆಯಾ? ಎಲೆ, ರಾಕ್ಷಸಾಧಮನೆ! ಸಿಂಹಕ್ಕೂ ನರಿಗೂ, ಕ್ಷುದ್ರನದಿಗೂ ಸಮುದ್ರಕ್ಕೂ, ಮೇಲಾದ ಮದ್ಯಕ್ಕೂ ನಿಸ್ಸಾರವಾದ ಆರನಾಳಕಕ್ಕೂ ಎಷ್ಟು ತಾರತಮ್ಯವುಂಟೋ, ದಶರಥಪುತ್ರನಾದ ರಾಮನಿಗೂ ನಿನಗೂ ಅಷ್ಟು ತಾರತಮ್ಯವಿದೆಯೆಂದು ತಿಳಿ! ಮತ್ತು ಸುವರ್ಣಕ್ಕೂ ಸೀಸಕ್ಕೂ, ಚಂದನಕ್ಕೂ ಕೆಸರಿಗೂ, ಆನೆಗೂ ಬೆಕ್ಕಿಗೂ ಎಷ್ಟು ಭೇದವುಂಟೋ ರಾಮನಿಗೂ ನಿನಗೂ ಅಷ್ಟು ತಾರತಮ್ಯವಿರುವುದು. ಕಾಗೆಗೂ ಗರುಡನಿಗೂ, ನೀರುಕಾಗೆಗೂ ನವಿಲಿಗೂ, ಹದ್ದಿಗೂ ಸಾರಸಪಕ್ಷಿಗೂ, ಎಷ್ಟು ತಾರತಮ್ಯವುಂಟೋ ನಿನಗೂ ರಾಮನಿಗೂ ಅಷ್ಟು ತಾರತಮ್ಯವಿರುವುದು! ಎಲೆ ರಾವಣನೆ! ದೇವೇಂದ್ರನಂತೆ ಮಹಾಮಹಿಮೆಯುಳ್ಳವನಾಗಿ ಧನುರ್ಬಾಣಗಳನ್ನು ಹಿಡಿದಿರುವ ಆ ರಾಮನಿರುವಾಗ, ಈಗ ಒಂದುವೇಳೆ ನೀನು ನನ್ನನ್ನು ಬಲಾತ್ಕಾರದಿಂದಪಹರಿಸಿದರೂ,

[1]ನೊಣವು ವಜ್ರವನ್ನು ನುಂಗಿ ಅದನ್ನು ಜೀರ್ಣಿಸಿಕೊಳ್ಳಲಾರದಂತೆ ನಿನಗೆ ನಾನು ವಶಳಾಗೆನು. ಅದರಿಂದ ನಿನಗೆ ಮರಣವೇ ಹೊರತು ಬೇರೆಯಿಲ್ಲ" ಎಂದಳು. ಶುದ್ಧಾತ್ಮಳಾದ ಸೀತೆಯು ಹೀಗೆ ಧೈರ್ಯದಿಂದ ರಾವಣನಿಗೆ ಪ್ರತ್ಯುತ್ತರವನ್ನು ಹೇಳಿದರೂ, ಮನಸ್ಸಿನಲ್ಲಿ ಮಾತ್ರ ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡದಂತೆ ಭಯದಿಂದ ನಡುಗುತಿದ್ದಳು. ಮೃತ್ಯು ಸಮಾನನಾದ ಆ ರಾವಣನಾದರೋ ಹೀಗೆ ಭಯದಿಂದ ನಡುಗುತ್ತಿರುವ ಸೀತೆಯನ್ನು ನೋಡಿ, ಅವಳಿಗೆ ಮತ್ತಷ್ಟು ಭಯವನ್ನು ಹುಟ್ಟಿಸುವುದಕ್ಕಾಗಿ, ತನ್ನ ಕುಲವನ್ನೂ, ಬಲವನ್ನೂ, ತಾನು ನಡೆಸಿದ ಅಸಾಧ್ಯ ಕಾರ್ಯಗಳನ್ನೂ ವಿವರಿಸಲಾರಂಭಿಸಿದನು.

ಇಲ್ಲಿಗೆ ನಾಲ್ವತ್ತೇಳನೆಯ ಸರ್ಗವು.

---

ರಾವಣನು ನಿಜರೂಪವನ್ನು ತೋರಿಸಿ, ತನ್ನ ಪರಾಕ್ರಮಾದಿಗಳನ್ನು ಹೊಗಳಿ
ಕೊಂಡು ತನ್ನನ್ನು ವರಿಸಬೇಕೆಂದು ಸೀತೆಯನ್ನು ನಿರ್ಬಂಧಿಸಿದುದು.
ಸೀತೆಯು ರಾವಣನನ್ನು ನಿಂದಿಸಿದುದು.

ಸೀತೆಯ ಮಾತನ್ನು ಕೇಳಿ ರಾವಣನು ಅತಿಕುಪಿತನಾಗಿ, ಹಣೆಯಲ್ಲಿ ಹುಬ್ಬನ್ನು ಗಂಟಿಕ್ಕಿ, ಪರುಷವಾಕ್ಯಗಳಿಂದ ಆಕೆಯನ್ನು ಕುರಿತು, "ಎಲೆ ವರವರ್ಣಿನಿ! ನಾನಾರೆಂದು ತಿಳಿದಿರುವೆ? ನಾನು ಕುಬೇರನ ತಮ್ಮನು. ಆತನ ಬಲತಾಯಿಯ ಮಗನು. ನನಗೆ ರಾವಣನೆಂದು ಹೆಸರು. ನನಗೆ ಹತ್ತು ತಲೆಗಳುಂಟು. ಮಹಾಪರಾಕ್ರಮಶಾಲಿಯೆಂದು ಲೋಕದಲ್ಲಿ ಪ್ರಖ್ಯಾತನಾಗಿರು

1. ಇಲ್ಲಿ "ವಜ್ರಂ ಯಥಾ ಮಕ್ಷಿಕಯಾವಗೀರ್ಣಂ" ಎಂದು ಮೂಲವು. "ನೊಣವು ವಜ್ರವನ್ನು ನುಂಗಿದರೆ, ಅದನ್ನು ಹೇಗೆ ಜೀರ್ಣಿಸಿಕೊಳ್ಳಲಾರದೆ ಸಾಯುವುದೋ ಹಾಗೆ ನನ್ನನ್ನು ಅಪಹರಿಸಿದ ನೀನು ಬದುಕಲಾರೆ" ಎಂದು ಭಾವವು. ಅಥವಾ ಇಲ್ಲಿ ವಜ್ರವೆಂದರೆ "ವಜ್ರೋ ವಾ ಆಜ್ಯಂ" ಇತ್ಯಾದಿ ಶ್ರುತಿವಚನಾನುಸಾರವಾಗಿ, ಆಜ್ಯವೆಂದರ್ಥವು. "ನೊಣದೊಡನೆ ನುಂಗಿದ ಆಜ್ಯವು ಹೇಗೆ ಜೀರ್ಣವಾಗುವುದಿಲ್ಲವೋ ಹಾಗೆ ನನ್ನನ್ನಪಹರಿಸಿದ ಮಾತ್ರಕ್ಕೆ ನಾನು ನಿನಗೆ ವಶಳಾಗೆನು. ನಿನಗೆ ಕೇಡನ್ನೇ ಉಂಟುಮಾಡುವೆ" ಎಂದು ಅರ್ಥಾಂತರವನ್ನೂ ಹೇಳಬಹುದು.

ವೆನು. ಮೃತ್ಯುವನ್ನು ನೋಡಿದ ಪ್ರಜೆಗಳಂತೆ ದೇವತೆಗಳಾಗಲಿ, ಗಂಧರ್ವರಾಗಲಿ, ಪಿಶಾಚರಾಗಲಿ, ಪನ್ನಗರಾಗಲಿ ನನ್ನನ್ನು ನೋಡಿದಮಾತ್ರಕ್ಕೆ ಭಯದಿಂದ ಪಲಾಯನಮಾಡುವರು. ಪೂರ್ವದಲ್ಲಿ ಯಾವುದೋ ಒಂದು ಕಾರಣಾಂತರದಿಂದ ನನ್ನ ಸವತಿತಾಯಿಯ ಮಗನಾದ ಕುಬೇರನಿಗೂ ನನಗೂ ಯುದ್ಧವುಂಟಾಯಿತು. ಆಗ ನಾನು ನನ್ನ ಪ್ರತಾಪದಿಂದ ಆತನನ್ನೂ ಜಯಿಸಿಬಿಟ್ಟೆನು. ಆತನು ನನ್ನ ಭಯದಿಂದ ಪೀಡಿತನಾಗಿ ಸರ್ವವಸ್ತುಸಮೃದ್ಧವಾದ ತನ್ನ ಪಟ್ಟಣವನ್ನೂ, ಲಂಕೆಯನ್ನೂ ಬಿಟ್ಟು ರಾಜ್ಯಭ್ರಷ್ಟನಾಗಿ ಓಡಿಹೋದನು. ಕೈಲಾಸಪರ್ವತವು ಶಿವನಿಗೆ ವಾಸಸ್ಥಾನವಾದುದರಿಂದ, ಅಲ್ಲಿ ನಾನು ಬಂದು ಪೀಡಿಸಲಾರೆನೆಂದು ತಿಳಿದು ಈಗಲೂ ಆ ಪರ್ವತದಲ್ಲಿಯೇ ವಾಸಮಾಡುತ್ತಿರುವನು. ಎಲೆ ಕಲ್ಯಾಣಿ! ಈಗ ನಾನು ಏರಿ ಆಕಾಶದಲ್ಲಿ ತಿರುಗುತ್ತಿರುವ ವಾಹನವೇನೆಂದು ಬಲ್ಲೆಯಾ? ಅದೇ ಆ ಕುಬೇರನನ್ನು ಗೆದ್ದು ಆತನಿಂದ ಕಿತ್ತುಕೊಂಡ ಪುಷ್ಪಕವಿಮಾನವು! ಈಗ ಅದೇ ನನಗೆ ವಾಹನವು. ಕಾಮಗಮನವುಳ್ಳ ಆ ಪುಷ್ಪಕವಿಮಾನವನ್ನು ನಾನು ನನ್ನ ಭುಜಬಲದಿಂದಲೇ ಸಂಪಾದಿಸಿದೆನು. ಇಂದ್ರಾದಿ ದೇವತೆಗಳೂ ಕೂಡ ನನ್ನ ಮುಖದಲ್ಲಿ ಕೋಪಚಿಹ್ನವನ್ನು ಕಂಡರೆ ಆ ಕ್ಷಣವೇ ದಿಕ್ಕುಗೆಟ್ಟು ಓಡಿಹೋಗುವರು. ನಾನಿದ್ದ ಕಡೆಯಲ್ಲಿ ವಾಯುವೂ ಭಯದಿಂದ ಮೆಲ್ಲಗೆ ಬೀಸುವುದು. ತೀಕ್ಷ್ಣವಾದ ಕಿರಣಗಳುಳ್ಳ ಸೂರ್ಯನೂ ಭಯದಿಂದ ನನ್ನ ಮೇಲೆ ತಂಪಾದ ಕಿರಣವನ್ನು ಬಿಡುವನು. ನಾನು ಎಲ್ಲೆಲ್ಲಿ ನಿಲ್ಲುವೆನೋ, ಎಲ್ಲೆಲ್ಲಿ ಸಂಚರಿಸುವೆನೋ ಅಲ್ಲಲ್ಲಿನ ಮರಗಿಡಗಳು ಕೂಡ ಚಲಿಸದೆ ಸ್ತಬ್ಧವಾಗಿ ನಿಂತುಬಿಡುವುವು. ನನ್ನನ್ನು ನೋಡಿದ ಮಾತ್ರಕ್ಕೆ ನದಿಗಳು ತಮ್ಮ ಪ್ರವಾಹವೇಗವನ್ನು ನಿಲ್ಲಿಸಿ ಮಂದಗಮನದಿಂದ ಪ್ರವಹಿಸುವುವು. ಕೊನೆಗೆ ನನ್ನ ಕೋಪವನ್ನು ನೋಡಿದರೆ ಅಲ್ಲಿಯೇ ಸ್ತಬ್ಧವಾಗಿಯೂ ನಿಂತುಬಿಡುವುವು. ನನಗೆ ಸಮುದ್ರಕ್ಕೆ ಎಲ್ಲೆಕಟ್ಟಿನಂತಿರುವ ತ್ರಿಕೂಟಪರ್ವತದ ಶಿಖರದ ಮೇಲೆ ಅನೇಕ ಘೋರರಾಕ್ಷಸರಿಗೆ ನೆಲೆಯಾದ ಲಂಕೆಯೆಂಬ ರಾಜಧಾನಿಯೊಂದುಂಟು. ಇಂದ್ರನಿಗೆ ಅಮರಾವತಿಯು ಹೇಗೋ ಹಾಗೆ ಅದು ಪ್ರಕಾಶಿಸುತ್ತಿರುವುದು. ಆ ಪಟ್ಟಣದ ಸುತ್ತಲೂ ರಜತಮಯವಾದ ಬಿಳೀಪ್ರಾಕಾರವಿರುವುದು. ಅಲ್ಲಿನ ಉಪ್ಪರಿಗೆಗಳೂ ಗೋಪುರಗಳೂ ಸುವರ್ಣಮಯವಾಗಿರುವುವು. ಅಲ್ಲಿನ ಪುರದ್ವಾರವು ವೈಡೂರ್ಯಮಯವಾಗಿರುವುದು. ಅಲ್ಲಿ ರಥಗಜ

ತುರಗಾದಿ ಸೈನ್ಯಗಳು ಕಿಕ್ಕಿರಿದು ತುಂಬಿರುವುವು ಅಲ್ಲಿ ಯಾವಾಗಲೂ ಕಿವಿಗಿಂಪಾದ ಮಂಗಳವಾದ್ಯಗಳು ಕೇಳಿಸುತ್ತಿರುವುವು. ಅಲ್ಲಿನ ಉದ್ಯಾನ ವೃಕ್ಷಗಳೆಲ್ಲವೂ ಸರ್ವಕಾಲಗಳಲ್ಲಿಯೂ ಫಲಭರಿತಗಳಾಗಿರುವುವು. ಎಲೆ ರಾಜಪುತ್ರಿ! ನೀನು ನನ್ನೊಡನೆ ಸೇರಿ ಆ ಪಟ್ಟಣದಲ್ಲಿ ಒಂದು ಮುಹೂರ್ತ ಕಾಲದವರೆಗೆ ವಾಸಮಾಡಿದೆಯಾದರೆ, ನಿನಗೆ ಈ ಮನುಷ್ಯ ಭೋಗದಲ್ಲಿ ಆಸೆಯೇ ತಪ್ಪಿಹೋಗುವುದು. [1]ಅಮಾನುಷಗಳಾದ ಅಲ್ಲಿನ ದಿವ್ಯಭೋಗಗಳನ್ನು ಒಂದೆರ ಡಾವರ್ತಿ ನೀನು ಅನುಭವಿಸಿದೆಯಾದರೆ, ಅಲ್ಪಾಯುಸ್ಸುಳ್ಳ ಕೇವಲ ಮನುಷ್ಯ ಮಾತ್ರನಾದ ಆ ರಾಮನ ಸ್ಮರಣವೇ ನಿನಗೆ ತಪ್ಪಿಹೋಗುವುದು. ಎಲೆ, ಸೀತೆ! ನನಗಿಂತಲೂ ರಾಮನು ಮೇಲೆಂದು ಹೇಳಿದೆಯಲ್ಲವೆ? [2]ದಶರಥ

1. ಇಲ್ಲಿ "ಸ ಸ್ಮರಿಷ್ಯಸಿ ರಾಮಸ್ಯ ಮಾನುಷಸ್ಯ ಗತಾಯುಷಃ" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ:—(ಮಾನುಷಸ್ಯ) ಮನುಷ್ಯರೂಪದಿಂದವತರಿಸಿರುವ, ಆದುದರಿಂದಲೇ (ಗತಾಯುಷಃ) ಹೊಂದಿದ ಆಯುಃಪ್ರಮಾಣವುಳ್ಳ, ಎಂದರೆ ನಿತ್ಯಾತ್ಮಕ ನಾಗಿ ಪರಮಪುರುಷನೆನಿಸಿಕೊಂಡಿರುವ ತನಗೆ ಆಯುಃಪ್ರಮಾಣವೆಂಬುದೇ ಇಲ್ಲದಿದ್ದರೂ ಮನುಷ್ಯಧರ್ಮವನ್ನನುಸರಿಸಿ, ಹನ್ನೊಂದುಸಾವಿರ ವರ್ಷಗಳ ಆಯುಸ್ಸನ್ನು ಹೊಂದಿ ಅವತರಿಸಿರುವನೆಂದು ಭಾವವು. ಅಂತಹ ರಾಮನನ್ನೂ, (ನಃ) ನಮ್ಮಗಳನ್ನೂ (ಸ್ಮರಿಷ್ಯಸಿ) ಸ್ಮರಿಸುವೆ. "ನೀನು ನನ್ನಿಂದ ಸಮರ್ಪಿತವಾದ ಭೋಗ್ಯವಸ್ತುಗಳನ್ನನುಭವಿಸುತ್ತ ಲಂಕೆಯಲ್ಲಿರುವಾಗ, ಸಾಮಾನ್ಯ ಮನುಷ್ಯರ ನೆನಪನ್ನೇ ಬಿಟ್ಟು, ನಿನ್ನ ಪತಿಯಾದ ಶ್ರೀಮನ್ನಾರಾಯಣನನ್ನೂ, ತತ್ಸಂಬಂಧಿಗಳಾದ ರಾಕ್ಷಸಜನ್ಮದಲ್ಲಿ ಹುಟ್ಟಿರುವ ನಮ್ಮನ್ನೂ ಸ್ಮರಿಸುವೆ" ಎಂದು ಭಾವವು.

2. ಇಲ್ಲಿ "ಸ್ಥಾಪಯಿತ್ವಾ ಪ್ರಿಯಂ ಪುತ್ರಂ ರಾಜ್ಞಾ ದಶರಥೇನ ಯಃ। ಮಂದ ವೀರ್ಯಸ್ಸುತೋ ಜ್ಯೇಷ್ಠಸ್ತತ್ರ ಪ್ರಸ್ಥಾಪಿತೋ ಹ್ಯಯಂ॥" ಎಂದು ಮೂಲವು. ಇಲ್ಲಿಯೂ ಅನ್ವಯ ಭೇದದಿಂದ ಇದರ ವಾಸ್ತವಾರ್ಥವನ್ನು ಗ್ರಹಿಸಬಹುದು. ಹೇಗೆಂದರೆ:—(ಯಃ ಸುತಃ ಮಂದವೀರ್ಯಃ) ಯಾವ ಮಗನು ಮಂದವೀರ್ಯನೋ, ಅಥವಾ ಯಾವ ಮಗನು ರಾಮನಿಗಿಂತಲೂ ವೀರ್ಯದಲ್ಲಿ ತಗ್ಗಿದವನಾಗಿದ್ದನೋ (ಅಪ್ರಿಯಂ ಪುತ್ರಂ) ತಂದೆಗೆ ಅಷ್ಟು ಪ್ರೀತಿಪಾತ್ರನಲ್ಲದಿದ್ದರೂ ಆ ಮಗನನ್ನು (ದಶರಥೇನ) ದಶರಥರಾಜನಿಂದ (ಸ್ಥಾಪಯಿತ್ವಾ) ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿಸಿ, (ಜ್ಯೇಷ್ಠಸ್ಸುತಃ) ಹಿರಿಯ ಮಗನಾದ ರಾಮನು, ಅಥವಾ "ಜ್ಯೇಷ್ಠಶ್ಶ್ರೇಷ್ಠಃಪ್ರಜಾಪತಿಃ" ಎಂಬ ಸಹಸ್ರನಾಮೋಕ್ತಿಯನ್ನನುಸರಿಸಿ, ಸಾಕ್ಷಾತ್ ನಾರಾಯಣಸ್ವರೂಪಿಯಾದ ರಾಮನು (ವನಂ ಪ್ರಸ್ಥಾಪಿತಃ) ಸರ್ವರಾಕ್ಷಸ ಸಂಹಾರಾರ್ಥ ವಾಗಿ ಕಾಡಿಗೆ ಕಳುಹಿಸಲ್ಪಟ್ಟಿರುವನು—ಎಂದು ಭಾವವು. (ಮಹೇಶ್ವರತೀರ್ಥರು).

ರಾಜನು ತನ್ನ ಪ್ರಿಯಪುತ್ರನಾದ ಭರತನಿಗೆ ರಾಜ್ಯವನ್ನು ಕೊಟ್ಟು ರಾಮನನ್ನು ಹಿರಿಯಮಗನಾಗಿದ್ದರೂ ಕಾಡಿಗೆ ಕಳುಹಿಸಿದುದೇಕೆ ಬಲ್ಲೆಯಾ? ಈತನು ಅಲ್ಪ ವೀರ್ಯವುಳ್ಳವನೆಂಬುದರಿಂದಲೇ ಇವನನ್ನು ರಾಜ್ಯದಿಂದೋಡಿಸಿರುವನು. ಎಲೆ ವಿಶಾಲಾಕ್ಷಿ! ನಾನೆಲ್ಲಿ! ಆ ರಾಮನೆಲ್ಲಿ! ಹೀಗೆ [1]ರಾಜ್ಯಭ್ರಷ್ಟನಾಗಿ ಬಂದು ಬುದ್ಧಿಯಿಲ್ಲದೆ ತಾಪಸವೇಷವನ್ನು ಧರಿಸಿ ಕಾಡುಕಾಡಾಗಿ ತಿರುಗುತ್ತಿರುವ ಆ ರಾಮನಿಂದ ನಿನಗೆ ಯಾವ ಸುಖವುಂಟು? ನಾನಾದರೋ ಸಮಸ್ತ ರಾಕ್ಷಸ ಕುಲಕ್ಕೂ ಪ್ರಭುವಾಗಿರುವೆನು. [2]ನಾನಾಗಿಯೇ ಆಸೆಪಟ್ಟು ನಿನ್ನಲ್ಲಿಗೆ ಬಂದಿರುವೆನು. ರಾಕ್ಷಸಚಕ್ರವರ್ತಿಯಾದ ನನ್ನನ್ನು ನೀನಾಗಿಯೇ ಪ್ರಾರ್ಥಿಸಿ ವರಿಸಬೇಕಾಗಿರುವಾಗ, ನಾನಾಗಿ ಕಾಮಬಾಣದಿಂದ ಪೀಡಿಸಲ್ಪಟ್ಟು ನಿನ್ನನ್ನು ಪ್ರಾರ್ಥಿಸುತಿದ್ದರೂ ನೀನು ನಿರಾಕರಿಸಬಹುದೆ? ಎಲೆ ಭೀರುವೆ? ಒಂದುವೇಳೆ ನೀನು ರಾಮನಿಗೆ ಹೆದರಿ ನನ್ನನ್ನು ಈಗ ತಿರಸ್ಕರಿಸಿಬಿಟ್ಟರೆ, ಊರ್ವಶಿಯು ಪೂರ್ವದಲ್ಲಿ ತನ್ನ ಕಾಲಿನ ಮೇಲೆ ಬಿದ್ದು ಪ್ರಾರ್ಥಿಸಿದ ಪುರೂರವನನ್ನು ಮೊದಲು ಕಾಲಿನಿಂದೊದೆದು, ಕೊನೆಗೆ ಆತನನ್ನು ವರಿಸುವುದಕ್ಕಾಗಿ ಪರಿತಪಿಸಿದಂತೆ ಆಮೇಲೆ ನೀನೇ ಪಶ್ಚಾತ್ತಾಪಪಡಬೇಕಾಗುವುದು. ಕೇವಲ ಮನುಷ್ಯ ಮಾತ್ರನಾದ ಆ ರಾಮನು ಯುದ್ಧದಲ್ಲಿ ನನ್ನ ಕಿರುಬೆರಳಿಗೂ ಸಾಟಿಯಾಗ

---

1. ಇಲ್ಲಿ "ತೇನ ಕಿಂ ಭ್ರಷ್ಟರಾಜ್ಯೇನ ರಾಮೇಣ ಗತಚೇತಸಾ । ಕರಿಷ್ಯಸಿ ವಿಶಾಲಾಕ್ಷಿ ತಾಪಸೇನ ತಪಸ್ವಿನಾ ॥" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ:—(ಭ್ರಷ್ಟ ರಾಜ್ಯೇನ, ಭ್ರಂಶಿತರಾಜ್ಯೇನ) ಶತ್ರುಗಳ ರಾಜ್ಯವನ್ನು ಭ್ರಂಶಮಾಡಿದವನು. (ಗತ ಚೇತಸಾ) "ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ" ಎಂಬ ಶ್ರುತಿಯನ್ನನುಸರಿಸಿ ಮಾಯೋಪಾಧಿಮೂಲವಾಗಿ, ಸರ್ವೇಶ್ವರನಾದ ಶ್ರೀರಾಮನಿಗೆ ಅಂತಃಕರಣವಿಲ್ಲವಾದುದ ರಿಂದ ಅಂತಃಕರಣವಿಲ್ಲದವನು (ತಾಪಸೇನ ತಪಸ್ವಿನಾ—ತಾಪಸ+ಇನ+ತಪಸ್ವಿನಾ) ತಾಪಸ ರಿಗೆ ಪ್ರಭುವಾಗಿಯೂ ತಪಸ್ವಿಯಾಗಿಯೂ ಇರುವವನು. ಅಂತಹ (ರಾಮೇಣ) ರಾಮ ನೊಡಗೂಡಿ, (ತ್ವಂ) ನೀನು (ಕಿಂ ಕರಿಷ್ಯಸಿ) ಏನು ಮಾಡುವೆ? ಯಾವ ರೀತಿಯಲ್ಲಿ ನನ್ನನ್ನುದ್ಧರಿಸುವೆಯೆಂದು ಭಾವವು.

2. ಇಲ್ಲಿ "ಕಾಮಾತ್ಸ್ವಯಮಿಹಾಗತಂ ನ ಮನ್ಮಥಶರಾವಿಷ್ಟಂ" ಎಂದು ಮೂಲವು. ನಿನ್ನ ಅನುಗ್ರಹವನ್ನು ಸಂಪಾದಿಸುವುದಕ್ಕಾಗಿ ನಿನ್ನ ಸೇವೆಯನ್ನು ಮಾಡಬೇಕೆಂಬ ಉದ್ದೇಶ ದಿಂದ ತಾನಾಗಿಯೇ ಬಂದಿರುವ ಮತ್ತು ಮನ್ಮಥಬಾಣಪೀಡಿತನಲ್ಲದ ನನ್ನನ್ನು ಹೀಗೆ ನಿರಾಕರಿಸಿ ಮಾತನಾಡುವುದುಚಿತವೆ?—ಎಂದು ವಾಸ್ತವಾರ್ಥವು.

ಲಾರನು. ನಿನ್ನ ಭಾಗ್ಯವೇ ನನ್ನನ್ನು ಇಲ್ಲಿಗೆ ಕರೆತಂದಿತೆಂದು ತಿಳಿ! ಆದುದರಿಂದ ರಾಮನಿಗಾಗಿ ನೀನು ಸ್ವಲ್ಪವೂ ಹೆದರಬೇಕಾದುದಿಲ್ಲ. ನನ್ನನ್ನು ವರಿಸು!" ಎಂದನು. ಇದನ್ನು ಕೇಳಿ ಸೀತೆಗೆ ಮೇಲೆಮೇಲೆ ಕೋಪವು ಉಕ್ಕಿ ಉಕ್ಕಿ ಬರುತ್ತಿತ್ತು. ಅವಳ ಕಣ್ಣುಗಳೆರಡೂ ಕೆಂಪಾದುವು. ಆ ಸ್ಥಲವು ಯಾರೂ ಇಲ್ಲದ ನಿರ್ಜನಪ್ರದೇಶವಾಗಿದ್ದರೂ, ಆ ಏಕಾಂತಸ್ಥಳದಲ್ಲಿ ರಾಕ್ಷಸಚಕ್ರವರ್ತಿಯಾದ ರಾವಣನು ತಾನಾಗಿಯೇ ಬಂದು ತನ್ನನ್ನು ಪ್ರಾರ್ಥಿಸುತ್ತಿದ್ದರೂ, ಮನಸ್ಸು ಕಲಗದೆ, ಮಹಾಪತಿವ್ರತೆಯಾದ ಆ ಸೀತೆಯು, ಪರುಷವಾಕ್ಯಗಳಿಂದ ಆ ರಾವಣನನ್ನು ನೋಡಿ "ಎಲೆ, ರಾವಣನೆ! ಸರ್ವಲೋಕಕ್ಕೂ ಪೂಜ್ಯನಾದ ಕುಬೇರನೇ ನಿನಗೆ ಅಣ್ಣನೆಂದು ಹೇಳಿಕೊಳ್ಳುವೆಯಲ್ಲಾ! ಅಂತಹ ನಿನಗೆ ಈ ಪಾಪಕಾರ್ಯದಲ್ಲಿ ಹೇಗೆ ಮನಸ್ಸು ಹುಟ್ಟಿತು? ನೀನೇಕೆ ಹೀಗೆ ಕ್ರೂರನಾಗಿಯೂ, ಬುದ್ಧಿಹೀನನಾಗಿಯೂ, ಇಂದ್ರಿಯಲೋಲನಾಗಿಯೂ ಇರುವೆ? ನೀನು ರಾಜನಾಗಿರುವ ದೋಷದಿಂದ ನಿನ್ನ ರಾಜ್ಯದಲ್ಲಿರುವ ರಾಕ್ಷಸರೆಲ್ಲರೂ ತಪ್ಪದೆ ನಾಶಹೊಂದಬೇಕಾಗುವುದಲ್ಲಾ! ಇಂದ್ರಪತ್ನಿಯಾದ ಶಚೀದೇವಿಯನ್ನಪಹರಿಸಿದರೂ ಬದುಕಿಬರಬಹುದು, ರಾಮಭಾರ್ಯೆಯಾದ ನನ್ನನ್ನು ಅಪಹರಿಸಿ ಎಷ್ಟುಮಾತ್ರವೂ ಬದುಕುವುದು ಸಾಧ್ಯವಲ್ಲ. ಎಣೆಯಿಲ್ಲದ ಸೌಂದರ್ಯವುಳ್ಳ ಶಚೀದೇವಿಯನ್ನು ಕೆಣಕಿ, ವಜ್ರಧರನಾದ ದೇವೇಂದ್ರನ ಕೈಯಿಂದಲಾದರೂ ತಪ್ಪಿಸಿಕೊಂಡು ಬಂದು, ಬಹುಕಾಲದವರೆಗೆ ಜೀವಿಸಬಹುದು. ಎಲೆ ರಾಕ್ಷಸನೆ! ರಾಮನ ಪತ್ನಿಯಾದ ನನ್ನನ್ನು ಕೆಣಕಿದ ಮೇಲೆ, ನೀನು ಅಮೃತವನ್ನು ಪಾನಮಾಡಿದವನಾಗಿದ್ದರೂ ಸಾವಿನಿಂದ ತಪ್ಪಿಸಿಕೊಳ್ಳಲಾರೆ! ಇದು ನಿಜವು" ಎಂದಳು.

ಇಲ್ಲಿಗೆ ನಾಲ್ವತ್ತೆಂಟನೆಯ ಸರ್ಗವು.

---

ರಾವಣನು ನಿಜರೂಪವನ್ನು ತೋರಿಸಿ ಸೀತೆಯನ್ನಪಹರಿಸಿ ಕೊಂಡು ಹೋದುದು. ಸೀತೆಯ ಪ್ರಲಾಪವು.

ಮಹಾಪರಾಕ್ರಮಿಯಾದ ರಾವಣನು, ಸೀತೆಯ ಕ್ರೂರವಾಕ್ಯವನ್ನು ಕೇಳಿ ಮೈತಿಳಿಯದಷ್ಟು [1]ಕೋಪವುಳ್ಳವನಾಗಿ, ಅವಳನ್ನು ಗದರಿಸಿ ಕೊನೆಗೆ ಅವಳಿಗೆ ದಿಗ್ಭ್ರಮೆವುಂಟಾಗುವಂತೆ ಕೈಮೇಲೆ ಕೈಯನ್ನು ಹೊಡೆದು, ಅತಿ ಘೋರವಾದ ತನ್ನ ನಿಜರೂಪವನ್ನೂ ತೋರಿಸಿಬಿಟ್ಟನು. ಹೀಗೆ ದೊಡ್ಡ ರೂಪವನ್ನು ತಾಳಿ ಪರುಷವಾಕ್ಯದಿಂದ ಸೀತೆಯನ್ನು ಕುರಿತು, "ಎಲೆ [2]ಸೀತೆ! ರಾಮನೆಂಬ ಹುಚ್ಚು ಹಿಡಿದ ನಿನಗೆ, ನಾನು ಇಷ್ಟುವಿಧವಾಗಿ ನನ್ನ ಬಲ ಪರಾಕ್ರಮವನ್ನು ತಿಳಿಸಿದರೂ ಕಿವಿಗೇರಲಿಲ್ಲವೆಂದು ತೋರುತ್ತಿದೆ. ನಾನು ಈ ನನ್ನ ಎರಡು ಕೈಗಳಿಂದಲೇ ಈ ಭೂಮಿಯನ್ನೆತ್ತಿ ಹಿಡಿದು ಅಂತರಿಕ್ಷದಲ್ಲಿಯೇ ನಿಲ್ಲಬಲ್ಲೆನು! ಸಮುದ್ರವನ್ನಾದರೂ ಕುಡಿದುಬಿಡುವೆನು. ಮೃತ್ಯುವನ್ನಾದರೂ ಯುದ್ಧದಲ್ಲಿ ಕೊಲ್ಲಬಲ್ಲೆನು. ನನ್ನ ತೀಕ್ಷ್ಣ ಬಾಣಗಳಿಂದ ಸೂರ್ಯನನ್ನೇ ತಡೆದುಬಿಡುವೆನು. ಈ ಭೂಮಿಯನ್ನು ಭೇದಿಸಬಲ್ಲೆನು. ಅಯ್ಯೋ ಹುಚ್ಚಳಿ! ಇನ್ನೂ ನನ್ನ ಸಂಗತಿಯು ನಿನಗೆ ತಿಳಿದಿಲ್ಲವೆ? ನಾನು ಇಷ್ಟಬಂದ ರೂಪವನ್ನು ಪಡೆಯುವವನು. ನೀನು ಕೋರಿದ ಕೋರಿಕೆಗಳನ್ನೆಲ್ಲಾ ಆಯಾ ಕ್ಷಣವೇ ಈಡೇರಿಸುವವನು. ನಾನೇ ನಿನಗೆ ತಕ್ಕ ಪತಿಯು. ಇದೋ! ನನ್ನ ರೂಪವನ್ನು ನೋಡು" ಎಂದನು. ಹೀಗೆ ಹೇಳುತ್ತಿರುವ ಆ ರಾವಣನ ಇಪ್ಪತ್ತು

1. ಶ್ರೀಹನುಮಂತನೂ ಕೂಡ ಮೊದಲು ಆಗ್ರಹವನ್ನು ತಂದುಕೊಂಡು, ಆಮೇಲೆ ರೂಪಾಂತರವನ್ನು ಸ್ವೀಕರಿಸಿದಂತೆಯೇ ಅಲ್ಲಲ್ಲಿ ಕಾಣಿಸಲ್ಪಟ್ಟಿದೆ. ಆದುದರಿಂದ ಆಗ್ರಹ ವಿಲ್ಲದೆ ಕ್ರೂರರೂಪವನ್ನಂಗೀಕರಿಸುವುದು ಯುಕ್ತವಲ್ಲದುದರಿಂದ, ಇಲ್ಲಿ ರಾವಣನೂ ಪರ ದೇವತೆಯಂತಿರುವ ಸೀತೆಯಲ್ಲಿ ಕಪಟನಟನೆಯುಚಿತವಲ್ಲವೆಂದು ಭಾವಿಸಿ, ಮೊದಲು ತನ್ನ ಸಾಮರ್ಥ್ಯವನ್ನು ತಿಳಿಸಿ, ಆಮೇಲೆ ಆಗ್ರಹವನ್ನು ತಂದುಕೊಂಡು ನಿಜರೂಪವನ್ನು ತೋರಿಸಿದುದಾಗಿ ಗ್ರಹಿಸಬೇಕು. (ಮಹೇಶ್ವರತೀರ್ಥರು.)

2. ಇಲ್ಲಿ "ಪಶ್ಯ ಮಾಂ ಕಾಮದಂ ಪತಿಂ" ಎಂದು ಮೂಲವು. ರಾಕ್ಷಸರು ಕೋರಿದ ಕೋರಿಕೆಗಳೆಲ್ಲವನ್ನೂ ಈಡೇರಿಸಿಕೊಟ್ಟು, ಅವರನ್ನು ಕಾಪಾಡತಕ್ಕ ರಾಕ್ಷಸಪ್ರಭುವಾದ ನನ್ನನ್ನು ಅನುಗ್ರಹಿಸಿ ನೋಡೆಂದು ಭಾವವು.

ಕಣ್ಣುಗಳೂ ಸೂರ್ಯನಂತೆ ಜ್ವಲಿಸುತ್ತ ಅಗ್ನಿಯಂತೆ ಕಿಡಿಗಳನ್ನು ಕಾರುತ್ತಿದ್ದುವು. ಕಡೆಗಣ್ಣುಗಳು ಗೋರೋಚನವನ್ನು ಸವರಿಟ್ಟಂತೆ ಹೊಂಬಣ್ಣದಿಂದ ಕೂಡಿ, ಕೋಪದಿಂದ ಕೆಂಪಾಗಿ ಜ್ವಲಿಸುತ್ತಿದ್ದುವು. ಕುಬೇರನ ತಮ್ಮನಾದ ಆ ರಾಕ್ಷಸನು ಮೊದಲು ತನಗಿದ್ದ ಸೌಮ್ಯವಾದ ಸನ್ಯಾಸಿರೂಪವನ್ನು ಬಿಟ್ಟು ನಿಮಿಷಮಾತ್ರದಲ್ಲಿ ಪ್ರಳಯಕಾಲದ ಯಮನಂತೆ ಮಹಾಭಯಂಕರವಾದ ತನ್ನ ರೂಪವನ್ನು ತಾಳಿದನು. ವಿಚಿತ್ರಶಕ್ತಿಸಂಪನ್ನನಾದ ಆ ರಾಕ್ಷಸನು ಕೋಪದಿಂದುರಿಯುವ ಕಣ್ಣುಗಳುಳ್ಳವನಾಗಿ, ಅಗ್ನಿಯಂತೆ ಜ್ವಲಿಸುವ ಕಡುಕುಗಳನ್ನು ಧರಿಸಿ, ನೀಲಮೇಘದಂತೆ ಕಪ್ಪಾದ ಮೈಬಣ್ಣವುಳ್ಳವನಾಗಿ ಕೋಪಾವೇಶದಿಂದ ಮೈತಿಳಿಯದಿದ್ದನು. ಅವನು ಸನ್ಯಾಸಿರೂಪವನ್ನು ಬಿಟ್ಟೊಡನೆಯೇ ಹೀಗೆ ಹತ್ತುತಲೆಗಳುಳ್ಳ ದೊಡ್ಡದೇಹವುಳ್ಳವನಾಗಿ ಧನುರ್ಬಾಣಗಳನ್ನು ಹಿಡಿದು ಸೀತೆಗೆ ಕಾಣಿಸಿಕೊಂಡನು. ಹೀಗೆ ರಾವಣನು ನಿಜರೂಪವನ್ನು ಧರಿಸಿ, ಮೇಘದಂತೆ ನೀಲಚ್ಛಾಯೆಯುಳ್ಳವನಾಗಿ, ಕೋಪದಿಂದ ಕಣ್ಣುಗಳಲ್ಲಿ ಉರಿಯನ್ನು ಕಕ್ಕುತ್ತ, ರಕ್ತವಸ್ತ್ರಧಾರಿಯಾಗಿ ನಿಂತು ಸ್ತ್ರೀರತ್ನವೆನಿಸಿಕೊಂಡಿದ್ದ ಸೀತೆಯನ್ನು ದುರುದುರನೆ ನೋಡಿದನು. ಕಪ್ಪಾದಕೂದಲುಗಳಿಂದ ಕೂಡಿ, ವಸ್ತ್ರಾಭರಣಗಳಿಂದ ಶೋಭಿಸುತ್ತ, ಸೂರ್ಯಪ್ರಭೆಯಂತಿರುವ ಆ ಸೀತೆಯನ್ನು ನೋಡಿ ರಾವಣನು "ತನ್ನ ನಿಜರೂಪವನ್ನು ನೋಡಿಯಾದರೂ ಸೀತೆಯು ತನ್ನನ್ನು ಕೈಹಿಡಿಯುವಳೇ" ಎಂದು ಮನಸ್ಸಿನಲ್ಲಿ ಸ್ವಲ್ಪಹೊತ್ತು ಚಿಂತಿಸುತ್ತ ಕೊನೆಗೆ ಆಕೆಯನ್ನು ಕುರಿತು "ಎಲೆ ಸೀತೆ! [1]ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾದ

---

1. ಇಲ್ಲಿ "ತ್ರಿಷು ಲೋಕೇಷು ವಿಖ್ಯಾತಂ ಯದಿ ಭರ್ತಾರಮಿಚ್ಛಸಿ | ಮಾಮಾಶ್ರಯ ವರಾರೋಹೇ ತವಾಹಂ ಸದೃಶ ಪತಿಃ | ಮಾಂ ಭಜಸ್ವ ಚಿರಾಯ ತ್ವಮಹಂ ಶ್ಲಾಘ್ಯಃ ಪ್ರಿಯಸ್ತವ | ನೈವ ಚಾಹಂ ಕ್ವಚಿದ್ಭದ್ರೇ ಕರಿಷ್ಯೇ ತವ ವಿಪ್ರಿಯಂ | ತ್ಯಜ್ಯತಾಂ ಮಾನುಷೇ ಭಾವೋ ಮಯಿ ಭಾವಃ ಪ್ರಕಲ್ಪ್ಯತಾಂ ||" ಎಂದು ಮೂಲವು. ಇದರ ತತ್ವಾರ್ಥವೇನೆಂದರೆ:—ರಾವಣನು ಸೀತೆಯನ್ನು ಕುರಿತು "ಸೇವಾವೃತ್ತಿಯಿಂದ ನಿನ್ನನ್ನು ಶುಶ್ರೂಷೆಮಾಡಿ ಪೋಷಿಸುವುದಕ್ಕಾಗಿ ಲೋಕಪ್ರಸಿದ್ಧನಾದ ಪುರುಷನೊಬ್ಬನು ಬೇಕಾಗಿದ್ದರೆ, ನನ್ನನ್ನೇ ಸೇವಕನನ್ನಾಗಿ ಸ್ವೀಕರಿಸು! ರಾಕ್ಷಸರೆಲ್ಲರಿಗೂ ಪತಿಯೆನಿಸಿಕೊಂಡಿರುವ ನಾನೇ ನಿನ್ನಲ್ಲಿ ಸೇವೆಮಾಡುವುದಕ್ಕೆ ತಕ್ಕವನು. ಬಹುಕಾಲದವರೆಗೆ ನನ್ನನ್ನು ನಿನ್ನ ಸೇವೆಯಲ್ಲಿರಿಸು. ನಾನೇ ನಿನ್ನ ವಾತ್ಸಲ್ಯಕ್ಕೆ ಶ್ಲಾಘ್ಯವಾದ ಪಾತ್ರನಾಗಿರುವೆನು. ನಾನು ಎಂದಿಗೂ ನಿನಗೆ ಅಪ್ರಿಯವನ್ನು ಮಾಡುವವನಲ್ಲ. ಮನುಷ್ಯರನ್ನೇ ಕಾಪಾಡಬೇಕೆಂಬ ಭಾವವನ್ನು ಬಿಟ್ಟು

ಪತಿಯನ್ನು ನೀನು ಅಪೇಕ್ಷಿಸುವೆಯಾದರೆ ನನ್ನನ್ನೇ ಆಶ್ರಯಿಸು. ನಾನೊಬ್ಬನೇ ನಿನಗೆ ಅನುರೂಪನಾದ ಪತಿಯೆಂದು ತಿಳಿ! ಬಹುಕಾಲಕ್ಕೆ ನಿನಗೆ ಇಷ್ಟು ಶ್ಲಾಘ್ಯನಾದ ನನ್ನಂತಹ ಪತಿಯು ದೊರಕಿರುವಾಗ ನೀನು ನಿರಾಕರಿಸಬಹುದೆ? ಎಲೆ ಭದ್ರೆ! ನಾನು ಎಂದಿಗೂ ನಿನಗೆ ಅಪ್ರಿಯವನ್ನು ಮಾಡುವವನಲ್ಲ. ಕೇವಲ ಮನುಷ್ಯಮಾತ್ರನಾದ ಆ ರಾಮನಲ್ಲಿರುವ ಮೋಹವನ್ನು ಬಿಡು. ನನ್ನಲ್ಲಿ ಮನಸ್ಸನ್ನಿಡು. ಎಲೆ ಸೀತೆ! ನಿನಗೆ ಯಾವುದೊಂದು ವಿಷಯವೂ ಚೆನ್ನಾಗಿ ತಿಳಿಯದಿದ್ದರೂ ಎಲ್ಲವನ್ನೂ ತಿಳಿದ ಪಂಡಿತೆಯಂತೆ ನಿನ್ನಷ್ಟಕ್ಕೆ ನೀನೇ ಎಣಿಸಿ ಕೊಂಡಿರುವೆ? ಆ ರಾಮನು ಒಬ್ಬ ಹೆಂಗಸಿನ ಮಾತಿಗಾಗಿ ರಾಜ್ಯವನ್ನೂ ಬಿಟ್ಟು, ಬಂಧುಮಿತ್ರರನ್ನೂ ತೊರೆದು, ಕ್ರೂರಮೃಗಗಳಿಗೆ ನಿತ್ಯಾಶ್ರಯವಾದ ಈ ಕಾಡಿನಲ್ಲಿ ಅಲೆಯುತ್ತಿರುವನೆಂಬುದನ್ನು ತಿಳಿಯೆಯಾ? ಹೀಗೆ ರಾಜ್ಯಭ್ರಷ್ಟ ನಾಗಿ, ಆಶಾಭಂಗವನ್ನು ಹೊಂದಿ ಕಾಡಿನಲ್ಲಿ ಅಲೆಯುತ್ತಿರುವ ಅಲ್ಪಾಯುಷ್ಯ ವುಳ್ಳ ಆತನಲ್ಲಿ ಯಾವ ಗುಣಗಳನ್ನು ನೋಡಿ ಇಷ್ಟು ಅನುರಾಗವನ್ನು ತೋರಿ ಸುತ್ತಿರುವೆ?" ಎಂದನು. ಎಷ್ಟು ಹೇಳಿದರೇನು! ಸೀತೆಯು ತನ್ನನ್ನು ಕಡೆಗಣ್ಣಿ ನಿಂದಾದರೂ ನೋಡದೆ ಅಲಕ್ಷ್ಯವಾಗಿರುವುದನ್ನು ಕಂಡು ರಾವಣನಿಗೆ ಅತ್ಯಾ ಕ್ರೋಶವುಂಟಾಯಿತು. ತಾನು ಸನ್ಯಾಸಿವೇಷದಿಂದ ಬಂದುದು ಮೊದಲು, ಇದುವರೆಗೆ ಪ್ರಿಯವಾಕ್ಯಗಳನ್ನೇ ನುಡಿಯುತ್ತ ತನ್ನನ್ನು ಸತ್ಕರಿಸಿ ಗೌರವಿಸುತಿದ್ದ

---

ನನ್ನಲ್ಲಿಯೂ ಅನುಗ್ರಹಬುದ್ಧಿಯನ್ನಿಡೆಂದು ಹೇಳಿದುದಾಗಿ ಭಾವವು. ಮತ್ತು "ಭಾವಃ ಪ್ರಣೀಯತಾಂ। ರಾಜ್ಯಾಚ್ಚ್ಯುತಮಸಿದ್ಧಾರ್ಥಂ ರಾಮಂ ಪರಿಮಿತಾಯುಷಂ" ಎಂಬುದಕ್ಕೆ ಲೋಕರಕ್ಷಣಾರ್ಥವಾಗಿ ರಾಜ್ಯವನ್ನು ತೃಣೀಕರಿಸಿ ಬಂದಿರುವ (ಅಂ + ಸಿದ್ಧಾರ್ಥಂ) ವಿಷ್ಣು ಸ್ವರೂಪನಾಗಿಯೂ ಅವಾಪ್ತಸಮಸ್ತಕಾಮನಾಗಿಯೂ ಇರುವ, ಹನ್ನೊಂದುಸಾವಿರ ವರುಷ ಗಳ ಆಯುಃಪ್ರಮಾಣವನ್ನು ಪಡೆದುಬಂದಿರುವ ರಾಮನನ್ನೇ ಸ್ಮರಿಸುತ್ತಿರು" ಎಂದು ಹೇಳಿದುದಾಗಿ ಅಂತರಾಶಯವು. ಮತ್ತು "ಕೈರ್ಗುಣೈರನುರಕ್ತಾಸಿ ಮೂಢೇ ಪಂಡಿತ ಮಾನಿನಿ। ಯಸ್ತ್ರಿಯಾ ವಚನಾತ್... ವನೇ ವಸತಿ ದುರ್ಮತಿಃ" ಎಂಬ ಮೂಲವಾಕ್ಯಕ್ಕೆ, ಮೂಢನಾಗಿಯೂ, ಪಂಡಿತಂಮನ್ಯನಾಗಿಯೂ, ಕೇವಲ ಸ್ತ್ರೀಮಾತ್ರಳಾದ ಶೂರ್ಪಣಖೆಯ ಮಾತಿಗಾಗಿ ರಾಜ್ಯವನ್ನೂ ಬಂಧುಗಳನ್ನೂ ಬಿಟ್ಟು ದುರ್ಬುದ್ಧಿಯಿಂದ ಈ ಕಾಡಿಗೆ ಬಂದಿರುವ ನನ್ನಲ್ಲಿ ಈಗ ನಿನ್ನ ವಾತ್ಸಲ್ಯವನ್ನು ಸಂಪಾದಿಸತಕ್ಕ ಗುಣಗಳೊಂದೂ ಇಲ್ಲ ವೆಂಬುದು ನಿಜವು. ಆದರೂ ನಿನ್ನ ನಿರ್ಹೇತುಕವಾದ ಕೃಪಾಕಟಾಕ್ಷವನ್ನೇ ನನ್ನಲ್ಲಿಟ್ಟು ಉದ್ಧರಿಸಬೇಕೆಂದು ಹೇಳಿದುದಾಗಿ ವಾಸ್ತವಾರ್ಥವು.

ಸೀತೆಯನ್ನು, ತಾನೂ ಉಚಿತರೀತಿಯಲ್ಲಿ ಗೌರವಿಸಿ ಮನ್ನಿಸಬೇಕಾಗಿದ್ದರೂ, ಅದನ್ನು ಬಿಟ್ಟು, ರಾವಣನು ಧೂರ್ತಸ್ವಭಾವದಿಂದ ನಿರ್ಭಯವಾಗಿ ಮುಂದೆ ಬಂದನು. [1]ಸೀತೆಯು ಮೃದುವಾದ ಮಾತುಗಳಿಂದ ಎಷ್ಟೋ ಹಿತವಾದಗಳನ್ನು ಹೇಳಿ ತಡೆದರೂ ಅದನ್ನು ಲಕ್ಷ್ಯಮಾಡದೆ, ಕಾಮಮೋಹಿತನಾದ ಆ ದುಷ್ಟ ರಾಕ್ಷಸನು ಆ ಸೀತೆಯನ್ನು ಸಮೀಪಿಸಿ ಆಕಾಶದಲ್ಲಿ ಬುಧಗ್ರಹವು ರೋಹಿಣಿಯನ್ನು ಹಿಡಿಯುವಂತೆ, ತನ್ನ ಎಡಗೈಯಿಂದ ಅವಳ ತುರುಬನ್ನೂ, ಬಲಗೈಯಿಂದ ಅವಳ ತೊಡೆಯನ್ನೂ ಹಿಡಿದನು. ತೀಕ್ಷ್ಣವಾದ ಕೋರೆ ಹಲ್ಲುಗಳಿಂದಲೂ, ಉದ್ದವಾದ ಭುಜಗಳಿಂದಲೂ, ಬೆಟ್ಟದಂತಿರುವ ದೊಡ್ಡ ಆಕೃತಿಯಿಂದಲೂ ಕೂಡಿದ ಘೋರಸ್ವರೂಪವುಳ್ಳ ಮೃತ್ಯುಸಮಾನನಾದ ಆ ರಾವಣನು ಸೀತೆಯನ್ನು ಹಿಡಿಯುತ್ತಿರುವುದನ್ನು ನೋಡಿ, ಅಲ್ಲಿದ್ದ ವನದೇವತೆಗಳೆಲ್ಲವೂ ಭಯದಿಂದ ಕೂಗುತ್ತ ಓಡಲಾರಂಭಿಸಿದುವು. ಕತ್ತೆಗಳಿಂದ ಕಟ್ಟಲ್ಪಟ್ಟ

---

1. ಇಲ್ಲಿ "ಅಭಿಗಮ್ಯ ಸುದುಷ್ಟಾತ್ಮಾ ರಾಕ್ಷಸಃ ಕಾಮಮೋಹಿತಃ । ಜಗ್ರಾಹ ರಾವಣಸ್ಸೀತಾಂ ಬುಧಃ ಖೇ ರೋಹಿಣೀಮಿವ ॥" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ:—ರಾವಣನು ಸ್ವಾಭಾವಿಕವಾಗಿಯೇ ಬಹಳ ದುಷ್ಟಾತ್ಮನಾಗಿಯೂ, ಕಾಮಮೋಹಿತನಾಗಿಯೂ ಇದ್ದರೂ, ಈ ಸೀತಾದೇವಿಯ ವಿಷಯದಲ್ಲಿ ಆ ದುಸ್ಸ್ವಭಾವವನ್ನು ಬಿಟ್ಟು, ಬುಧನು ರೋಹಿಣಿಯನ್ನು ಪೂಜಾರ್ಥವಾಗಿ ಗ್ರಹಿಸುವಂತೆ ಗ್ರಹಿಸಿದನೆಂದು ಭಾವವು. ಬುಧನಿಗೆ ರೋಹಿಣಿಯೇ ತಾಯಿಯು. ಅದರಂತೆಯೇ ರಾವಣನು ಸೀತೆಯಲ್ಲಿ ಮಾತೃಭಾವವನ್ನಿಟ್ಟು ಇಷ್ಟದೇವತೆಯಂತೆ ಮನೆಯಲ್ಲಿಟ್ಟು ಪೂಜಿಸುವುದಕ್ಕಾಗಿ ಅವಳ ಪಾದಗಳನ್ನು ಹಿಡಿದನೆಂದು ಭಾವವು. ಇಲ್ಲಿ ತಿಳಿಯಬೇಕಾದ ಮತ್ತೊಂದು ಮುಖ್ಯ ವಿಷಯವೇನೆಂದರೆ :—ನಲಕೂಬರ ವೇದವತಿಯರ ಶಾಪದಿಂದ ಪರಸ್ತ್ರೀಯರನ್ನು ಬಲಾತ್ಕಾರದಿಂದ ಮುಟ್ಟಿದಾಗಲೇ ರಾವಣನಿಗೆ ಮರಣವೆಂಬುದು ಸಿದ್ಧವು. ಹೀಗಿರುವಾಗ ಈ ಸೀತೆಯನ್ನು ಮುಟ್ಟಿದುದು ಹೇಗೆ ? ಎಂಬ ಶಂಕೆಯುಂಟಾಗುವುದು. ಇಲ್ಲಿ ರಾವಣನು ಸೀತೆಯನ್ನು ಸಾಕ್ಷಾತ್ತಾಗಿ ಮುಟ್ಟಿದವನಲ್ಲ. ರಾಕ್ಷಸರಿಗೆ ಛಾಯಾಗ್ರಹಣ (ನೆರಳನ್ನು ಹಿಡಿಯುವ) ಶಕ್ತಿಯೂ ಇರುವುದರಿಂದ, ಸೀತೆಯ ಮೊಳಕಾಲುಗಳ ಮತ್ತು ಕೂದಲುಗಳ ಛಾಯೆಯನ್ನೇ ಹಿಡಿದೆತ್ತಿಕೊಂಡುದಾಗಿ ಗ್ರಾಹ್ಯವು. ಇದೇ ವಿಷಯವು ಸ್ಕಾಂದದಲ್ಲಿ "ಛಾಯಾಗ್ರಾಹಿತ್ವಮಪ್ಯಸ್ತಿ ಸರ್ವವಿದ್ಯಾವಿಶಾರದೇ । ಕೇಶಚ್ಛಾಯಾಂ ಪರಾಮೃಶ್ಯ ಜಾನುಚ್ಛಾಯಾಂ ತಥೈವ ಚ । ಗೃಹೀತ್ವಾ ಜಾನಕೀಂ ಹೃಷ್ಟೋ ಲಂಕಾಂ ಪ್ರಾಯಾತ್ಸ ರಾವಣಃ ॥" ಎಂಬುದಾಗಿ ಆ ಅವಯವಗಳ ಛಾಯೆಯನ್ನೇ ಹಿಡಿದು ಸೀತೆಯನ್ನೆತ್ತಿಕೊಂಡು ಹೋಗುತ್ತಿದ್ದನೆಂದು ಹೇಳಿದೆ. (ಮಹೇಶ್ವರತೀರ್ಥರು.)

ಮಾಯಾಮಯವಾದ ಆತನ ಮಹಾರಥವೂ ಆಗಲೇ ಸೀತೆಯ ಕಣ್ಣಿಗೆ ಗೋಚರಿಸಿ, ಕ್ರೂರವಾದ ಚೀತ್ಕಾರಧ್ವನಿಯನ್ನು ಮಾಡುತ್ತಿರುವ ಸುವರ್ಣಮಯವಾದ ಚಕ್ರಗಳಿಂದ ಕೂಡಿ ಮುಂದೆ ಬಂದಿತು. ಆಮೇಲೆ ರಾವಣನು ಕ್ರೂರವಾಕ್ಯಗಳಿಂದ ಸೀತೆಯನ್ನು ಹೆದರಿಸಿ ಗರ್ಜಿಸುತ್ತ [1]ಅವಳ ತೊಡೆಗಳನ್ನೂ ತುರುಬನ್ನೂ ಕೈಯಿಂದ ಹಿಡಿದೆತ್ತಿ ಅವಳನ್ನು ತನ್ನ ರಥಕ್ಕೇರಿಸಿದನು. ಲೋಕವಿಖ್ಯಾತವಾದ ಪಾತಿವ್ರತ್ಯಪ್ರಭಾವವುಳ್ಳ ಆ ಸೀತೆಯಾದರೋ ರಾವಣನ ಕೈಯಲ್ಲಿ ಸಿಕ್ಕಿಕೊಂಡು ಆ ಕಾಡಿನಲ್ಲಿ ಎಲ್ಲಿಯೋ ದೂರದಲ್ಲಿರುವ ರಾಮನನ್ನು ಕುರಿತು, "ಹಾ! ರಾಮಾ! ಹಾ! ಪ್ರಾಣನಾಥಾ!" ಎಂದು [2]ಮೊರೆಯಿಡುತ್ತಿದ್ದಳು. ಕಾಮಾರ್ತನಾದ ಆ ರಾವಣನು, ಈ ಪ್ರಲಾಪಗಳಿಗೆ ಕಿವಿಗೊಡದೆ ಪತಿಯಾದ ರಾಮನನ್ನೇ ಕೂಗಿ ಮೊರೆಯಿಟ್ಟು ತತ್ತಳಿಸುತ್ತಿರುವ ಸೀತೆಯನ್ನು ನೋಡಿ, ಹಾವಿನಂತೆ ಮಿಲಿಮಿಲಿಯಾಡಿ ಹೊರಳುತ್ತಿರುವ ಆಕೆಯನ್ನು ಬಿಡದೆ ಎತ್ತಿಕೊಂಡು, ತನ್ನ ರಥದೊಡನೆ ಅಂತರಿಕ್ಷಕ್ಕೆ ಹಾರಿಬಿಟ್ಟನು. ಹೀಗೆ ರಾವಣನಿಂದ ಅಂತರಿಕ್ಷದಲ್ಲಿ ಉಯ್ಯಲ್ಪಡುತ್ತಿದ್ದ ಆ ಸೀತೆಯು, ದುಃಖಾತುರದಿಂದ ಹುಚ್ಚುಹಿಡಿದವಳಂತೆ ಹಿಂದುಮುಂದು ತೋರದೆ [3]ಉಚ್ಚಸ್ವರದಿಂದ ಗೋಳಿಡುತ್ತಿದ್ದಳು. "ಹಾ! ಮಹಾಬಾಹುವಾದ ಲಕ್ಷ್ಮಣಾ! ನೀನು

---

1. ಇಲ್ಲಿ "ವಾಮೇನ ಸೀತಾಂ ಪದ್ಮಾಕ್ಷೀಂ ಮೂರ್ಧಜೇಷು ಕರೇಣ ಚ | ಊರ್ವೋಸ್ತು ದಕ್ಷಿಣೇನೈವ ಪರಿಜಗ್ರಾಹ ಪಾಣಿನಾ ||" ಎಂದು ಮೂಲವು. ಇದರ ವಾಸ್ತವಾರ್ಥವೇನೆಂದರೆ:—(ಮೂರ್ಧಜ + ಇಷು + ಕರೇಣ) ಉತ್ತಮವಾದ ಬಾಣವನ್ನು ಹಿಡಿದ ಬಲಗೈಯಿಂದಲೂ, (ವಾಮೇನ ಚ) ಎಡಗೈಯಿಂದಲೂ (ಊರ್ವೋಃ ಪರಿಜಗ್ರಾಹ) ಸೀತೆಯ ಪಾದಗಳನ್ನು ಹಿಡಿದನು. ಎರಡು ಕೈಗಳಿಂದಲೂ ಸೀತೆಯ ಪಾದಗಳನ್ನು ಹಿಡಿದು ತನ್ನನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿದುದಾಗಿ ಭಾವವು.

2. ಸೀತೆಯು ಈಗಲೇ ರಾವಣನಿಗೆ ಶಾಪಕೊಟ್ಟು ಕೊಂದುಬಿಡಬಲ್ಲವಳಾಗಿದ್ದರೂ, ವೇದವತ್ಯಂಶದಿಂದ ತಾನು ಮಾಡಿದ ಪ್ರತಿಜ್ಞೆಯೂ, ರಾಮನು ಋಷಿಗಳಿಗೆ ಮಾಡಿಕೊಟ್ಟ ಪ್ರತಿಜ್ಞೆಯೂ ನೆರವೇರುವಂತೆ, ರಾವಣನನ್ನು ನಿರ್ಮೂಲವಾಗಿ ನಾಶಮಾಡಬೇಕೆಂಬ ಉದ್ದೇಶದಿಂದ ಈಗ ಶಾಪವನ್ನು ಕೊಡಲಿಲ್ಲವೆಂದು ಗ್ರಾಹ್ಯವು.

3. ಇಲ್ಲಿ ಸೀತೆಯ ಪ್ರಲಾಪಾದಿಗಳೆಲ್ಲವೂ ಅವಳು ಕೇವಲ ಪ್ರಾಕೃತವಾದ ಲೌಕಿಕ ರೀತಿಯನ್ನನುಸರಿಸಿ ಅಭಿನಯಿಸಿದ ನಟನ ವ್ಯಾಪಾರಗಳೆಂದೇ ತಿಳಿಯಬೇಕು.

(ಮಹೇಶ್ವರತೀರ್ಥರು.)

ಅಣ್ಣನ ಮನಸ್ಸನ್ನೇ ಅನುವರ್ತಿಸಿ, ಆತನಿಗೆ ಯಾವಾಗಲೂ ಉಲ್ಲಾಸವನ್ನು ಕೊಡುತ್ತಿದ್ದವನಲ್ಲವೆ? ಈಗ ಆತನ ಪತ್ನಿಯಾದ ನನ್ನನ್ನು ಕುಪಿತನಾದ ಈ ರಾವಣನು ಕದ್ದುಯ್ಯುವುದನ್ನು ಕಾಣೆಯಾ? ಹಾ! ರಘುವಂಶಪ್ರದೀಪಾ! ಹಾ ರಾಮಾ! ಹಾ ಆಶ್ರಿತರಕ್ಷಕಾ! ಆಶ್ರಿತರಕ್ಷಣವೆಂಬ ಧರ್ಮವನ್ನು ಕಾಪಾಡುವುದಕ್ಕಾಗಿ ನೀನು ಪ್ರಾಣವನ್ನಾಗಲಿ, ಧನವನ್ನಾಗಲಿ, ಸುಖವನ್ನಾಗಲಿ ತೊರೆದು ಆ ಧರ್ಮವನ್ನು ನಿರ್ವಹಿಸತಕ್ಕವನಲ್ಲವೆ? ಅಂತಹ ನೀನು ಈಗ ಅಧರ್ಮದಿಂದ ಕದ್ದುಯ್ಯಲ್ಪಡುತ್ತಿರುವ ನಿನ್ನ ಪಾದಾಶ್ರಿತಳಾದ ನನ್ನ ದುಸ್ಥಿತಿಯನ್ನು ಕಾಣದಿರುವೆಯಾ? ಹಾ ರಾಘವಾ! ದುಷ್ಟರನ್ನಡಗಿಸುವುದೇ ನಿನ್ನ ಮುಖ್ಯಧರ್ಮವಾಯಿತಲ್ಲಾ! ಹೀಗಿದ್ದರೂ ಈಗ ನೀನು ಮಹಾಪಾಪಿಯಾದ ಈ ರಾವಣನನ್ನು ಶಿಕ್ಷಿಸದಿರುವುದೇಕೆ? ಆದರೇನು! ಅಕೃತ್ಯಗಳಿಗೆ ಆಗಾಗಲೇ ಫಲವು ಕಾಣುವುದೂ ಕಷ್ಟವು! ಅದಕ್ಕೂ ತಕ್ಕ ಕಾಲವು ಬಂದೊದಗಬೇಕಲ್ಲವೆ? ಫಲಕಾಲವು ಬಂದೊದಗಿದ ಹೊರತು ಬಿತ್ತಿದ ಬೀಜಗಳೂ ಫಲಿಸಲಾರವು. ಎಲೆ ನೀಚನಾದ ರಾವಣನೆ! ಕಾಲವಶದಿಂದ ಬುದ್ಧಿಗೆಟ್ಟು ಈ ದುಷ್ಕಾರ್ಯವನ್ನು ನಡೆಸುತ್ತಿರುವ ನಿನಗೆ ಆ ರಾಮನಿಂದಲೇ ಪ್ರಾಣಾಂತಕರವಾದ ಮಹಾ ವಿಪತ್ತು ಬಂದೊದಗದಿರಲಾರದು! ಹಾ ಕೈಕೇಯಿ! ಈಗ ನಿನ್ನ ಕೋರಿಕೆಯು ಕೈಗೂಡಿತೆ? ಧರ್ಮಕಾಮನಾಗಿ ಮಹಾಯಶಸ್ವಿಯೆನಿಸಿಕೊಂಡಿರುವ ಆ ರಾಮನ ಧರ್ಮಪತ್ನಿಯಾದ ನನ್ನನ್ನು, ಇದೋ! ಈ ರಾಕ್ಷಸನು ಕದ್ದುಯ್ಯುತ್ತಿರುವನು! ಇನ್ನು ನೀನು ನಿನ್ನ ಬಂಧುಗಳೊಡಗೂಡಿ ಸಂತೋಷದಿಂದಿರು! ಜನಸ್ಥಾನದಲ್ಲಿ ಚೆನ್ನಾಗಿ ಪುಷ್ಪಿಸಿರುವ ಈ ಕರ್ಣಿಕಾರ ವೃಕ್ಷಗಳನ್ನಾದರೂ ಕೂಗಿ ಹೇಳಲೆ? ಎಲೈ ಕರ್ಣಿಕಾರ ವೃಕ್ಷಗಳಿರಾ! ರಾವಣನು ಸೀತೆಯನ್ನೆತ್ತಿಕೊಂಡು ಹೋಗುವನೆಂದು ಈಗಲೇ ರಾಮನಿಗೆ ತಿಳಿಸಿರಿ. ಹೂ ಗಿಡಗಳಿಂದ ತುಂಬಿದ ಎಲೈ ಪ್ರಸ್ರವಣ ಪರ್ವತವೇ! ನಿನಗೆ ನಮಸ್ಕರಿಸುವೆನು. ರಾವಣನು ಸೀತೆಯನ್ನು ಕದ್ದುಯ್ಯುತ್ತಿರುವನೆಂದು ಬೇಗ ರಾಮನಿಗೆ ತಿಳಿಸು! ಎಲೆ ಗೋದಾವರಿ! ನಿನಗೂ ಕೈಮುಗಿದು ಬೇಡುವೆನು. ನಿನ್ನಲ್ಲಿ ಎಷ್ಟೋ ಹಂಸಗಳಿರುವುವು. ಎಷ್ಟೋ ಕಾರಂಡವಪಕ್ಷಿಗಳಿರುವುವು. ಇವುಗಳ ಮೂಲಕವಾಗಿ ನೀನಾದರೂ ಈಗಲೇ ರಾವಣನು ಸೀತೆಯನ್ನು ಕದ್ದುಕೊಂಡು ಹೋದುದಾಗಿ ರಾಮನಿಗೆ ತಿಳಿಸಬಾರದೆ? ಬಗೆಬಗೆಯಾದ ವೃಕ್ಷಗಳಿಂದ ತುಂಬಿದ ಈ

ಕಾಡಿನಲ್ಲಿರುವ ವನದೇವತೆಗಳೆಲ್ಲರಿಗೂ ನಾನು ಕೈಮುಗಿದು ಬೇಡುವೆನು. ಎಲೆ ದೇವತೆಗಳಿರಾ! ನೀವಾದರೂ ಹೋಗಿ ರಾವಣನು ನನ್ನನ್ನು ಕದ್ದುಯ್ದುದಾಗಿ ನನ್ನ ಪತಿಗೆ ತಿಳಿಸಬಾರದೆ? ಆಹಾ! ಈಗ ನಾನೇನು ಮಾಡಲಿ! ಯಾರನ್ನು ಕೇಳಲಿ! ಯಾರಿಗೆ ಮೊರೆಯಿಡಲಿ! ಇದೋ! ಈ ವನದಲ್ಲಿ ಸಂಚರಿಸುತ್ತಿರುವ ಮೃಗಗಳನ್ನಾದರೂ ಮರೆಹೊಗುವೆನು. ಎಲೈ ಮೃಗಗಳಿರಾ! ಎಲೈ ಪಕ್ಷಿಗಳಿರಾ! ಈಗ ನೀವಲ್ಲದೆ ನನಗೆ ಬೇರೆ ದಿಕ್ಕಿಲ್ಲ. ನಿಮ್ಮಲ್ಲಿ ಮರೆಹೊಕ್ಕಿರುವೆನು. ನಾನು ಆ ರಾಮನಿಗೆ ಪ್ರಾಣಕ್ಕಿಂತಲೂ ಪ್ರಿಯಳಾಗಿರುವೆನು. ನೀವು ಈಗಲೇ ಹೋಗಿ ರಾವಣನು ನನ್ನನ್ನು ಕದ್ದುಯ್ಯುತ್ತಿರುವುದಾಗಿ ನನ್ನ ಪತಿಗೆ ತಿಳಿಸಿರಿ! ಆ ರಾಮನು ಅಸಾಧಾರಣ ಪರಾಕ್ರಮವುಳ್ಳವನಾದುದರಿಂದ ಆತನು ಈ ಸುದ್ದಿಯನ್ನು ಕೇಳಿದೊಡನೆ ಬಂದು, ನಾನು ಲೋಕಾಂತರದಲ್ಲಿದ್ದರೂ ಅಥವಾ ಯಮನೇ ನನ್ನನ್ನೆತ್ತಿಕೊಂಡು ಹೋಗುತ್ತಿದ್ದರೂ, ತನ್ನ ಪರಾಕ್ರಮದಿಂದ ನನ್ನನ್ನು ಹಿಂತಿರುಗಿಸಿ ತರುವುದರಲ್ಲಿ ಸಂದೇಹವಿಲ್ಲ. ಈ ವಿಷಯವನ್ನು ಅವನಿಗೆ ಯಾರು ತಿಳಿಸುವರೋ ಕಾಣೆನಲ್ಲಾ!" ಎಂದು ಅತಿ ದೀನ ಧ್ವನಿಯಿಂದ ಕೂಗಿಡುತ್ತಿದ್ದಳು. ಹೀಗೆ ಸುತ್ತಲೂ ನೋಡಿ ಮೊರೆಯಿಡುತ್ತಿರುವಾಗ ಸಮೀಪದಲ್ಲಿ ಮರದಮೇಲೆ ಕುಳಿತಿದ್ದ ಗೃಧ್ರರಾಜನಾದ ಜಟಾಯುವನ್ನು ಕಂಡಳು. ರಾವಣನ ಕೈಯಲ್ಲಿ ಸಿಕ್ಕಿ ನರಳುತ್ತಿದ್ದ ಸೀತೆಯು ಆ ಜಟಾಯುವನ್ನು ನೋಡಿ, ಆತನನ್ನು ಕುರಿತು ಭಯದಿಂದ ಕುಗ್ಗಿದ ಸ್ವರವುಳ್ಳವಳಾಗಿ "ಹಾ! ಜಟಾಯೂ!" ಎಂದು ಪ್ರಯತ್ನಪಟ್ಟು ಕೂಗಿ "ಎಲೈ ಪೂಜ್ಯನೆ! ದಿಕ್ಕಿಲ್ಲದ ನನ್ನನ್ನು ಈ ದುಷ್ಟರಾಕ್ಷಸನು ಕದ್ದುಯ್ಯುತ್ತಿರುವುದನ್ನು ನೋಡಬಾರದೆ? ಅಥವಾ ನೋಡಿಯೂ ನೀನೇನು ಮಾಡಬಲ್ಲೆ! ಈತನೋ ಅತಿ ಕ್ರೂರನು! ಬಹಳ ಬಲಾಢ್ಯನು! ಜಯಶೀಲನು! ಕೈಯಲ್ಲಿ ಆಯುಧವನ್ನೂ ಹಿಡಿದಿರುವನು! ಇದರಮೇಲೆ ಕಪಟಯುದ್ಧವನ್ನು ಮಾಡುವುದರಲ್ಲಿಯೂ ನಿಪುಣನಾಗಿರುವನು! ಈತನನ್ನಿದಿರಿಸಬೇಕೆಂದರೆ ನಿನ್ನಿಂದ ಸಾಧ್ಯವಲ್ಲ. ಈಗ ನೀನು ಬೇರೇನೂ ಮಾಡಬೇಕಾದುದಿಲ್ಲ. ಈ ವಿಷಯವನ್ನು ನನ್ನ ಪ್ರಿಯಪತಿಯಾದ ರಾಮನಿಗೆ ಯಥಾವತ್ತಾಗಿ ತಿಳಿಸು! ಇದೊಂದೇ ಈಗ ನೀನು ಮಾಡಬೇಕಾದ ಮಹೋಪಕಾರವು. ಹಾಗೆಯೇ ಲಕ್ಷ್ಮಣನಿಗೂ ಈ ಅತ್ಯಾಹಿತವನ್ನು ತಿಳಿಸಿಬಿಡು" ಎಂದಳು.

ಇಲ್ಲಿಗೆ ನಾಲ್ವತ್ತೊಂಭತ್ತನೆಯ ಸರ್ಗವು.

## [1] ಜಟಾಯುವು ರಾವಣನನ್ನಡ್ಡಗಟ್ಟಿ ಸೀತೆಯನ್ನು ಬಿಟ್ಟುಬಿಡುವಂತೆ ಅವನಿಗೆ ಹಿತೋಕ್ತಿಯನ್ನು ಹೇಳಿದುದು.

ಆಗ ಮರದಮೇಲೆ ಅರ್ಧನಿದ್ರೆಯಲ್ಲಿ ಮಲಗಿದ್ದ ಜಟಾಯುವು, ಸೀತೆಯ ದೀನಧ್ವನಿಯನ್ನು ಕೇಳಿ, ತಟ್ಟನೆ ಎಚ್ಚರಗೊಂಡು ಕಣ್ದೆರೆದು ನೋಡಿದನು. ಅಂತರಿಕ್ಷದಲ್ಲಿ ಮಹಾಕಾಯವುಳ್ಳ ರಾವಣನನ್ನೂ ಪಕ್ಕದಲ್ಲಿ ದುಃಖಿತೆಯಾದ ಸೀತೆಯನ್ನೂ ಕಂಡನು. ಪರ್ವತಶಿಖರದಂತೆ ಮಹಾಕಾಯವುಳ್ಳವನಾಗಿಯೂ, ಮೊನೆಯಾದ ಕೊಕ್ಕುಳ್ಳವನಾಗಿಯೂ ಇದ್ದ ಆ ಪಕ್ಷಿರಾಜನು, ತಾನು ಮರದಲ್ಲಿ ಕುಳಿತಂತೆಯೇ ರಾವಣನನ್ನು ಕುರಿತು ಮೃದುವಾಕ್ಯದಿಂದ "ಎಲೈ ರಾವಣನೆ! ನನ್ನನ್ನು ಸಾಮಾನ್ಯವಾದ ಯಾವುದೋ ಒಂದು ಕಾಡು ಹಕ್ಕಿಯೆಂದೆಣಿಸಿ ಅಲಕ್ಷ್ಯದಿಂದ ಹೋಗಬೇಡ! ನಾನು [2]ಸನಾತನ ಧರ್ಮವನ್ನು ತಪ್ಪದೆ ನಡೆಸುತ್ತಿರುವೆನು. ಸತ್ಯಸಂಧನು. ನನಗೆ ಜಟಾಯುವೆಂದು ಹೆಸರು. ಗೃಧ್ರಜಾತಿಗೆಲ್ಲಾ ನಾನು ಪ್ರಭುವೆನಿಸಿಕೊಂಡಿರುವವನು. ಮತ್ತು ನಾನು ಮಹಾಬಲಾಢ್ಯನು. ಆದುದರಿಂದ ನನ್ನಮಾತನ್ನು ಶ್ರದ್ಧೆಯಿಂದ ಕೇಳು ದಶರಥಪುತ್ರನಾದ ರಾಮನೆಂಬವನು ಸಮಸ್ತಲೋಕಕ್ಕೂ ನಾಥನೆನಿಸಿಕೊಂಡಿರುವನು. ಅವನಾದರೋ ನನಗಿಂತಲೂ ಬಹಳ ಬಲಾಢ್ಯನೆನಿಸಿಕೊಂಡಿರುವನು. ಮಹೇಂದ್ರವರುಣರಿಗೆ ಸಾಟಿಯಾದವನು. ಸಮಸ್ತ ಲೋಕಕ್ಕೂ ಹಿತವನ್ನೇ ಕೋರತಕ್ಕವನು. ಈಗ ನೀನು ಕದ್ದುಯ್ಯುತ್ತಿರುವ ಈ ಹೆಂಗಸು ಯಾರೆಂದು ಬಲ್ಲೆ! ಇವಳೇ ಆ ಲೋಕನಾಥನ ಧರ್ಮಪತ್ನಿಯು. ಮಹಾಯಶಸ್ವಿನಿಯೆನಿಸಿಕೊಂಡಿರುವಳು. ಇವಳಿಗೆ ಸೀತೆಯೆಂದು ಹೆಸರು. ಧರ್ಮ

---

1. ಈ ಸರ್ಗದಲ್ಲಿ ಜಟಾಯುವೃತ್ತಾಂತದಿಂದ ದಾಸಭೂತನಾದವನು ತನ್ನ ಸ್ವಾಮಿಗೆ ತನ್ನಿಂದ ಸಾಧ್ಯವಾಗುವವರೆಗೂ ಶೇಷವೃತ್ತಿಯನ್ನು ಅವಶ್ಯವಾಗಿ ಮಾಡಬೇಕೆಂದು ಸೂಚಿತವಾಗುವುದು.

2. ಇಲ್ಲಿ "ದಶಗ್ರೀವ ಸ್ಥಿತೋ ಧರ್ಮೇ ಪುರಾಣೇ ಸತ್ಯಸಂಶ್ರಯಃ |" ಎಂದು ಮೂಲವು. ಇಲ್ಲಿನ ವಾಸ್ತವಾರ್ಥವೇನೆಂದರೆ :—(ಪುರಾಣೇಧರ್ಮೇ) ಸನಾತನಧರ್ಮವೆನಿಸಿಕೊಂಡ ದಾಸ್ಯವೃತ್ತಿಯಲ್ಲಿ (ಸ್ಥಿತಃ) ಇರುವವನು, ತದೇಕಪರಾಯಣನೆಂಬರ್ಥವು. (ಸತ್ಯಸಂಶ್ರಯಃ) "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿಯಂತೆ ಸತ್ಯಶಬ್ದವಾಚ್ಯನಾದ ಪರಮಾತ್ಮನನ್ನೇ ಸಂಬಿರುವವನು. ಭಗವದೇಕೋಪಾಯನಿಷ್ಠನೆಂದು ಭಾವವು.

ಮಾರ್ಗವನ್ನು ತಪ್ಪದೆ ನಡೆಸಿಕೊಂಡುಬರುವ ನಿನ್ನಂತಹ ರಾಜನು ಪರ ಸ್ತ್ರೀಯರನ್ನು ಮುಟ್ಟುವುದೆಂದರೇನು? ಅದರಲ್ಲಿಯೂ ಇಂತಹ ರಾಜಪತ್ನಿಯರನ್ನು ಬಹಳ ಗೌರವದಿಂದ ನೋಡಬೇಕಲ್ಲವೆ? ಇವಳು ರಾಜಪತ್ನಿಯೆಂಬುದೂ ಹಾಗಿರಲಿ! ಸಾಮಾನ್ಯವಾಗಿ ಪರಸ್ತ್ರೀಯರನ್ನು ಮುಟ್ಟಲೇ ಬಾರದು. ಇದು ಕೇವಲ ಪ್ರಾಕೃತರಿಗೆ ಯೋಗ್ಯವಾದ ನೀಚಬುದ್ಧಿಯಲ್ಲವೆ? ವಿವೇಕಿಯಾದವನು ನಿಂದಾರ್ಹವಾದ ಈ ಕಾರ್ಯವನ್ನು ಮಾಡಬಹುದೆ? ತನ್ನ ಪತ್ನಿಯರನ್ನು ಪರಪುರುಷರಿಂದ ಕಾಪಾಡುವಂತೆ ಇತರರ ಪತ್ನಿಯರನ್ನೂ ಭಾವಿಸಬೇಡವೆ? ನೀನು ಸರ್ವೋತ್ತಮವಾದ ಪುಲಸ್ತ್ಯವಂಶದಲ್ಲಿ ಹುಟ್ಟಿದವನು. ಶಿಷ್ಟರಾದ ರಾಜರು ಶಾಸ್ತ್ರವಿರುದ್ಧವಾದ ಧರ್ಮವನ್ನಾಗಲಿ, ಅರ್ಥವನ್ನಾಗಲಿ, ಕಾಮವನ್ನಾಗಲಿ ಎಂದಿಗೂ ಅಪೇಕ್ಷಿಸಲಾರರು. ಇತರ ಸಾಮಾನ್ಯ ಜನರು ಹೇಗಿದ್ದರೂ ಚಿಂತೆಯಿಲ್ಲ. ನಿನ್ನಂತಹ ರಾಜರಿಗೆ ಇದು ಬಹಳ ಅನುಚಿತವು. ರಾಜನೇ ಧರ್ಮಕ್ಕೂ ಕಾಮಕ್ಕೂ ಪ್ರವರ್ತಕನು. ಸರ್ವಾರ್ಥಗಳಿಗೂ ಆತನೇ ನಿಧಿಯೆನಿಸುವನು. ಧರ್ಮವಾಗಲಿ, ಸುಕೃತವಾಗಲಿ, ದುಷ್ಕೃತವಾಗಲಿ, ರಾಜನನ್ನನುಸರಿಸಿಯೇ ಪ್ರವರ್ತಿಸುವುದು. ಆದುದರಿಂದ ರಾಜನನ್ನು ನೋಡಿಯೇ ಪ್ರಜೆಗಳೂ ಧರ್ಮಾಧರ್ಮಗಳಲ್ಲಿ ಪ್ರವರ್ತಿಸುವರು. ರಾಜನಾದವನು ತನಗಲ್ಲದಿದ್ದರೂ ಪ್ರಜೆಗಳಿಗಾಗಿಯಾದರೂ ಪಾಪಕಾರ್ಯವನ್ನು ಬಿಟ್ಟು ಧರ್ಮದಲ್ಲಿ ನಡೆಯಬೇಕು. ನೀನು ರಾಕ್ಷಸರಾಜನಾಗಿದ್ದರೂ ಹೀಗೆ ವಿಷಯಲೋಲನಾಗಿರುವುದರಿಂದ ನಿನಗೆ ಪಾಪವೇ ಸಹಜಸ್ವಭಾವವೆಂದು ತೋರುವುದು. ಪಾಪಿಯನ್ನು ದಿವ್ಯವಿಮಾನದಲ್ಲಿರಿಸಿದಂತೆ ನಿನಗೆ ಈ ರಾಜ್ಯಾಧಿಪತ್ಯವೂ, ಈ ಐಶ್ವರ್ಯವೂ ಯೋಗ್ಯವಲ್ಲವೆಂದೇ ಎಣಿಸುವೆನು. ಹೀಗೆ ವಿಷಯಲೋಲನಾದ ನಿನ್ನ ಭಾಗ್ಯವು ಎಂದಿಗೂ ಸ್ಥಿರವಾಗಿರದು. ಎಷ್ಟಾದರೇನು? ಜನ್ಮಸಿದ್ಧವಾಗಿ ಬಂದ ಸ್ವಭಾವವನ್ನು ಉಪದೇಶಾದಿಗಳಿಂದ ತಪ್ಪಿಸುವುದಕ್ಕೆ ಸಾಧ್ಯವೆ? ನಿನ್ನಂತಹ ದುಷ್ಟಾತ್ಮರಿಗೆ ಸದುಪದೇಶಗಳೊಂದೂ ಕಿವಿಗೇರುವುದಿಲ್ಲ. ಏರಿದರೂ ಹೃದಯದಲ್ಲಿ ನಿಲ್ಲಲಾರವು. ಎಲೆ, ರಾಕ್ಷಸೇಂದ್ರನೆ! ಬಲಾಢ್ಯನಾಗಿಯೂ, ಧರ್ಮಾತ್ಮನಾಗಿಯೂ ಇರುವ ರಾಮನು ನಿನ್ನ ರಾಜ್ಯಕ್ಕಾಗಲಿ, ಪಟ್ಟಣಕ್ಕಾಗಲಿ ಬಂದವನಲ್ಲ. ಇದುವರೆಗೆ ಆತನು ನಿನಗೆ ಯಾವದೊಂದಪರಾಧವನ್ನೂ ಮಾಡಿದವನಲ್ಲ. ನಿರಪರಾಧಿಯಾದ ಆತನಲ್ಲಿ ನೀನೇಕೆ ಹೀಗೆ ವಿರೋಧ

ವನ್ನು ಮಾಡುವೆ? ರಾಮನು ಇದುವರೆಗೆ ಯಾರಿಗೂ ಕೇಡನ್ನು ಬಯಸಿದವನಲ್ಲ. ಆತನು ಖರಾದಿರಾಕ್ಷಸರನ್ನು ಕೊಂದುದಕ್ಕಾಗಿ ನೀನು ಅವನಲ್ಲಿ ದ್ವೇಷವನ್ನೆಣಿಸಿರಬಹುದು. ಅದಕ್ಕೂ ಕಾರಣವಿಲ್ಲ. ನಿನ್ನ ತಂಗಿಯಾದ ಶೂರ್ಪಣಖಿಯೇ ಆ ರಾಕ್ಷಸರ ವಧಕ್ಕೆ ಮೂಲವು. ಆಕೆಯ ಮಾತನ್ನು ಕೇಳಿ ಮಿತಿಮೀರಿ ಬಂದ ಖರನನ್ನು ರಾಮನು ಕೊಲ್ಲಬೇಕಾಯಿತು. ಈ ವಿಷಯದಲ್ಲಿ ರಾಮನು ಮಾಡಿದ ತಪ್ಪೇನು! ನೀನೇ ಅದನ್ನು ಚೆನ್ನಾಗಿ ಪರ್ಯಾಲೋಚಿಸಿ ನೋಡು! ಎಲೆ, ರಾವಣಾ! ಬೇಡ! ಸೀತೆಯನ್ನು ಬಿಟ್ಟುಬಿಡು! ಇದು ನಿನಗೆ ತರವಲ್ಲ. ಇಂದ್ರನು ವಜ್ರಾಯುಧದಿಂದ ವೃತ್ರನನ್ನು ಕೊಂದಂತೆ ಆ ರಾಮನು ತನ್ನ ದೃಷ್ಟಿಯಿಂದಲೇ ನಿನ್ನನ್ನು ದಹಿಸಿಬಿಡುವನೆಂದು ತಿಳಿ! ಎಲೆ, ನೀಚನೆ! ನೀನು ಈ ಸೀತೆಯನ್ನು ಕದ್ದು ತಂದಿರುವುದು, ವಿಷಸರ್ಪವನ್ನು ವಸ್ತ್ರದಲ್ಲಿ ಕಟ್ಟಿತಂದಂತೆಯೂ, ಕಾಲಪಾಶವನ್ನು ಕೊರಲಿಗೆ ಸುತ್ತಿಕೊಂಡಂತೆಯೂ ಅಪಾಯ ಹೇತುವೆಂಬುದನ್ನು ತಿಳಿಯದೆ ಹೋದೆಯಲ್ಲಾ? ಮನುಷ್ಯನು ತನಗೆ ಅಪಾಯ ಬಾರದಷ್ಟು ಭಾರವನ್ನೇ ಹೊರಬೇಕು. ತನಗೆ ಜೀರ್ಣವಾಗುವಷ್ಟು ಆಹಾರವನ್ನೇ ತಿನ್ನಬೇಕು. ಅದನ್ನು ಬಿಟ್ಟು ಮಿತಿಮೀರಿ ಹೋದರೆ ಎಂದಿಗೂ ಹಾನಿಯು ತಪ್ಪದು. ಯಾವ ಕಾರ್ಯವನ್ನು ಮಾಡುವುದರಿಂದ ಧರ್ಮವಾಗಲಿ, ಕೀರ್ತಿಯಾಗಲಿ ಇಲ್ಲದೆ, ದೇಹಕ್ಕೆ ಕೇವಲ ಶ್ರಮವನ್ನು ಮಾತ್ರ ಉಂಟುಮಾಡುವುದೋ ಆ ಕಾರ್ಯಕ್ಕೆ ಯಾವನು ತಾನೇ ಪ್ರಯತ್ನಿಸುವನು? ಮೂಢರಾದವರು ಹೊರತು ವಿವೇಕಿಯಾದವನು ಅಂತದಕ್ಕೆ ಪ್ರಯತ್ನಿಸಲಾರನು. ಎಲೆ ರಾವಣಾ! ನಾನು ಹುಟ್ಟಿ ನಾಲ್ವತ್ತುಸಾವಿರ ವರುಷಗಳಾದುವು. ಪಿತೃಪರಂಪರೆಯಾಗಿ ಬಂದ ನಮ್ಮ ರಾಜ್ಯಾಧಿಕಾರವನ್ನು ಇದುವರೆಗೆ ಪಾಲಿಸಿ, ದೇಹವೆಲ್ಲವೂ ಜೀರ್ಣವಾಗಿರುವುದಲ್ಲದೆ, ನನಗೆ ವಯಸ್ಸೂ ಕಳೆದುಹೋಗಿರುವುದು. ಬಿಲ್ಲು ಮೊದಲಾದ ಆಯುಧಗಳೂ, ಈಗ ನನ್ನಲ್ಲಿಲ್ಲವು. ನೀನೂ ಇನ್ನೂ ಪ್ರಾಯದಲ್ಲಿರುವೆ. ಇದರಮೇಲೆ ಧನುರ್ಬಾಣಗಳನ್ನೂ ಹಿಡಿದಿರುವೆ. ರಥಕವಚಾದಿ ಯುದ್ಧಸಾಧನಗಳೆಲ್ಲವೂ ನಿನ್ನಲ್ಲಿ ಸಿದ್ಧವಾಗಿರುವುವು. ಹೀಗೆ ನಿನಗೂ, ನನಗೂ ಇಷ್ಟು ತಾರತಮ್ಯವಿದ್ದರೂ, ಈಗ ನೀನು ಸೀತೆಯನ್ನೆತ್ತಿಕೊಂಡು ಕ್ಷೇಮದಿಂದ ಹೋಗಲಾರೆ! ನಾನು ನಿನ್ನನ್ನೆಂದಿಗೂ ಬಿಡತಕ್ಕವನಲ್ಲ. ನ್ಯಾಯ ಶಾಸ್ತ್ರ ಸಿದ್ಧವಾದ

ಅನುಮಾನಾದಿ ಪ್ರಮಾಣಗಳಿಂದ ವೇದಗಳ ಪ್ರಾಮಾಣ್ಯಗಳನ್ನು ಕೆಡಿಸಲಸಾಧ್ಯ ವಾಗಿರುವಂತೆ, ನಾನು ನೋಡುತ್ತಿರುವಾಗ ಈ ಸೀತೆಯನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗಬೇಕೆಂದರೆ ನಿನಗೆಂದಿಗೂ ಸಾಧ್ಯವಿಲ್ಲ. ಎಲೆ, ರಾಕ್ಷಸನೆ! ನೀನು ನಿಜವಾಗಿ ಶೂರನಾಗಿದ್ದರೆ ನನ್ನೊಡನೆ ಯುದ್ಧಕ್ಕೆ ನಿಲ್ಲು. ಹಾಗಿಲ್ಲವೇ ರಾಮನು ಬರುವವರೆಗೂ ಸ್ವಲ್ಪ ಹೊತ್ತು ನಿಂತಿರು. ಖರನಂತೆಯೇ ನೀನೂ ಇನ್ನು ಕ್ಷಣಕಾಲದೊಳಗೆ ಹತನಾಗಿ ನೆಲದಮೇಲೆ ಮಲಗುವೆ. ಯಾವನು ಯುದ್ಧದಲ್ಲಿ ಅನೇಕಾವರ್ತಿ ಅನೇಕ ದೈತ್ಯದಾನವರನ್ನು ಕೊಂದಿರುವನೋ ಆ ರಾಮನೇ ಈಗ, ಆ ಜಟಾವಲ್ಕಲಗಳೊಡನೆಯೇ ಬಂದು ಶೀಘ್ರದಲ್ಲಿಯೇ ನಿನ್ನನ್ನು ಕೊಲ್ಲುವನು. ಎಲೆ, ನೀಚನೆ! ಅದೇಕೆ ಓಡಿಹೋಗುವೆ ? ನಿಲ್ಲು! ಅಯ್ಯೋ! ಈಗ ನಾನೇನು ಮಾಡಲಿ! ಆ ರಾಜಕುಮಾರರು ಎಷ್ಟು ದೂರ ದಲ್ಲಿರುವರೋ ಕಾಣೆನಲ್ಲಾ. ಅವರನ್ನು ಕರೆತರುವುದಕ್ಕೂ ಅವಕಾಶವಿಲ್ಲ ವಲ್ಲಾ! ಎಲೆ, ಪಾಪಿ! ನಿನಗೆ ನಾಶವು ಸಮೀಪದಲ್ಲಿರುವುದು. ಆ ರಾಜ ಕುಮಾರರಿಗೆ ಹೆದರಿ ಓಡಿಹೋಗುವಂತಿದೆ. ಇದರಲ್ಲಿ ಸಂದೇಹವಿಲ್ಲ. ಆದರೇನು? ಎಲೆ ನೀಚನೆ! ನಾನು ಬದುಕಿರುವವರೆಗೂ ನನ್ನ ಕಣ್ಣುಮುಂದೆ ನೀನು ಈ ಸೀತೆಯನ್ನು ಕರೆದುಕೊಂಡು ಹೋಗಲಾರೆ! ಕಮಲದಳದಂತೆ ಕಣ್ಣುಳ್ಳವಳಾಗಿ, ನಮ್ಮ ರಾಮನಿಗೆ ಪ್ರಿಯಪತ್ನಿಯಾದ ಈ ಸೀತೆಯನ್ನು ನಾನು ನಿನ್ನೊಡನೆ ಬಿಡುವೆನೆಂದು ತಿಳಿಯಬೇಡ. ಪ್ರಾಣವನ್ನಾದರೂ ಕೊಟ್ಟು, ಮಹಾತ್ಮನಾದ ರಾಮನಿಗೂ, ಆತನ ತಂದೆಯಾದ ದಶರಥನಿಗೂ ಪ್ರಿಯವನ್ನುಂಟುಮಾಡುವುದೇ ನನ್ನ ಅವಶ್ಯಕರ್ತವ್ಯವು. ರಾವಣಾ! ನಿಲ್ಲು! ನಿಲ್ಲು! ಸ್ವಲ್ಪಹೊತ್ತು ನನ್ನ ಶಕ್ತಿಯನ್ನು ನೋಡು. ಅತಿಥಿಯಾಗಿ ಬಂದ ನಿನಗೆ ನನ್ನ ಕೈಯಿಂದ ಸಾಧ್ಯ ವಾದಷ್ಟುಮಟ್ಟಿಗೂ ಯುದ್ಧರೂಪವಾದ ಆತಿಥ್ಯವನ್ನು ಮಾಡಿಯೇ ಕಳುಹಿಸಿ ಕೊಡುವೆನು. ಎಲೆ, ರಾಕ್ಷಸನೆ! ನಿನ್ನನ್ನು ನಾನು ಸುಮ್ಮನೆ ಬಿಡುವೆನೆಂದು ತಿಳಿಯಬೇಡ! ಮರದಿಂದ ಹಣ್ಣನ್ನು ಕೆಡಹುವಂತೆ ಈಗಲೇ ಈ ರಥದಿಂದ ನಿನ್ನನ್ನು ನೆಲಕ್ಕುರುಳಿಸುವೆನು! ನೋಡು” ಎಂದನು.

ಇಲ್ಲಿಗೆ ಐವತ್ತನೆಯ ಸರ್ಗವು.

---

ಜಟಾಯು ರಾವಣರ ಯುದ್ಧವು.
ಜಟಾಯುವು ಶಸ್ತ್ರಹತನಾಗಿ ಬಿದ್ದುದು.

ಹೀಗೆ ಜಟಾಯುವು ನ್ಯಾಯಯುಕ್ತವಾಗಿ ಹೇಳುತ್ತಿದ್ದರೂ, ರಾವಣನಿಗೆ ಆ ಮಾತುಗಳನ್ನು ಕೇಳಿದೊಡನೆ ಕೋಪವುಂಟಾಯಿತು. ಅವನ ಇಪ್ಪತ್ತು ಕಣ್ಣುಗಳೂ ಕಿಡಿಗಳನ್ನು ಕಾರುವಂತೆ ಕೆಂಪಾದುವು. ಬೆಂಕಿಯಂತೆ ಹೊಳೆಯುತ್ತಿದ್ದ ಅವನ ಸುವರ್ಣಕುಂಡಲಗಳು ಅವನ ಮುಖದಲ್ಲಿ ಕಾಣುತ್ತಿದ್ದ ರೌದ್ರಾವೇಶವನ್ನು ಮತ್ತಷ್ಟು ಹೆಚ್ಚಿಸಿ ಕಾಣಿಸುತಿದ್ದವು. ಆ ಜಟಾಯುವಿನ ಮಾತನ್ನು ಕೇಳಿ ಸಹಿಸಲಾರದೆ ರಾವಣನು ಆತನೊಡನೆ ಇದಿರಿಸಿ ನಿಂತನು. ಆಕಾಶದಲ್ಲಿ ವಾಯುಪ್ರೇರಿತಗಳಾದ ಮೇಘಗಳು ವೇಗದಿಂದ ಇದಿರಿದಿರಾಗಿ ಬಂದು, ಒಂದನ್ನೊಂದು ಘಟ್ಟಿಸುವಂತೆ, ಜಟಾಯು ರಾವಣರಿಬ್ಬರೂ ಆ ಮಹಾರಣ್ಯದಲ್ಲಿ ಒಬ್ಬರನ್ನೊಬ್ಬರಿದಿರಿಸಿ ತುಮುಲಯುದ್ಧವನ್ನಾರಂಭಿಸಿದರು. ಎರಡು ಮಾಲ್ಯವತ್ಪರ್ವತಗಳು ರೆಕ್ಕೆಗಳನ್ನು ಹೊಂದಿಬಂದು ಹೋರಾಡುವಂತೆ ಆ ಪಕ್ಷಿರಾಜರಾಕ್ಷಸರಾಜರಿಬ್ಬರೂ ಅತ್ಯಾಶ್ಚರ್ಯಕರವಾದ ಯುದ್ಧವನ್ನು ಮಾಡಹತ್ತಿದರು. ಆಗ ಮಹಾಬಲಾಢ್ಯನಾದ ರಾವಣನು, ಹರಿತವಾದ ಅಲಗುಗಳುಳ್ಳ ಕೋಲುಬಾಣಗಳನ್ನೂ, ಕೊಕ್ಕೆಯ ಬಾಣಗಳನ್ನೂ ಪ್ರಯೋಗಿಸಿ ಅತಿಭಯಂಕರಗಳಾದ ಆ ಬಾಣಗಳಿಂದ ಜಟಾಯುವನ್ನು ಹೊಡೆಯುತ್ತಿದ್ದನು. ಪಕ್ಷಿರಾಜನಾದ ಜಟಾಯುವಾದರೋ, ರಾವಣನು ತನ್ನಮೇಲೆ ಎಡೆಬಿಡದೆ ಪ್ರಯೋಗಿಸುತ್ತಿದ್ದ ಬಾಣವರ್ಷಗಳ ಹತಿಯೆಲ್ಲವನ್ನೂ ಧೈರ್ಯದಿಂದ ತಡೆದು, ಮುಂದೆ ನುಗ್ಗಿ, ತೀಕ್ಷ್ಣವಾದ ತನ್ನ ಕಾಲುಗುರುಗಳಿಂದ ರಾವಣನ ಮೈಯನ್ನು ಪರಚಿ ಬಹಳ ಗಾಯಗಳನ್ನುಂಟುಮಾಡಿದನು. ರಾವಣನಿಗೆ ಮೈತಿಳಿಯದಷ್ಟು ಕೋಪವುಂಟಾಯಿತು. ತನಗೆ ಅಡ್ಡಲಾಗಿ ಬಂದ ಆ ಜಟಾಯುವನ್ನು ಆಗಲೇ ಕೊಂದುಬಿಡಬೇಕೆಂಬ ಉದ್ದೇಶದಿಂದ, ಯಮದಂಡಗಳಿಗೆ ಸಮಾನವಾದ ಹತ್ತು ಬಾಣಗಳನ್ನು ಕೈಗೆ ತೆಗೆದುಕೊಂಡನು. ರಾವಣನು ಅವುಗಳನ್ನು ಆಕರ್ಣಾಂತವಾಗಿ ಸೆಳೆದು ಜಟಾಯುವಿನ ಮೇಲೆ ಪ್ರಯೋಗಿಸಲು, ಅವು ಬಹಳ ಭಯಂಕರವಾಗಿ ನೆಟ್ಟಗೆ ವೇಗದಿಂದ ಬಂದು ಅವನ ದೇಹಕ್ಕೆ ನಾಟಿಕೊಂಡುವು. ಜಟಾಯುವಾದರೋ ರಾಕ್ಷಸನ ರಥದಲ್ಲಿ ದೈನ್ಯದಿಂದ ಗೋಳಿಡುತ್ತಿದ್ದ ಸೀತೆಯನ್ನು ನೋಡಿ, ಅವಳನ್ನು ಅಪಾಯದಿಂದ ತಪ್ಪಿಸಬೇಕೆಂಬ ಅತ್ಯಾತುರದಿಂದ, ಇದೊಂದನ್ನೂ

ಲಕ್ಷ್ಯಮಾಡದೆ ನೆಟ್ಟಗೆ ರಾವಣನ ಸಮೀಪಕ್ಕೆ ಬಂದನು. ಹೀಗೆ ಜಟಾಯುವು ನಿರ್ಭಯವಾಗಿ ಮುಂದೆ ಬಂದು, ಮುತ್ತಿನ ಮಣಿಗಳಿಂದಲಂಕರಿಸಲ್ಪಟ್ಟ ಆ ರಾವಣನ ಧನುರ್ಬಾಣಗಳೆರಡನ್ನೂ ತನ್ನ ಎರಡುಕಾಲುಗಳಿಂದಲೂ ಮೆಟ್ಟಿ ಮುರಿದುಬಿಟ್ಟನು. ಆಗ ರಾವಣನು ಕೋಪದಿಂದ ಮೈತಿಳಿಯದವನಾಗಿ, ಬೇರೊಂದು ಬಿಲ್ಲನ್ನು ಹಿಡಿದು, ಸಾವಿರ ಬಾಣಗಳನ್ನು ಕರೆದನು. ಹೀಗೆ ರಾವಣನ ಬಾಣಗಳಿಂದ ಮುಚ್ಚಲ್ಪಟ್ಟ ಜಟಾಯುವು ಗೂಡಿನಲ್ಲಿ ಅಡಗಿದ ಹಕ್ಕಿಯಂತೆಯೇ ಕಾಣುತ್ತಿದ್ದನು. ಆಮೇಲೆ ಗೃಧ್ರರಾಜನು ರಾವಣನಿಂದ ಪ್ರಯುಕ್ತವಾದ ಆ ಬಾಣಸಮೂಹವೆಲ್ಲವನ್ನೂ ತನ್ನ ರೆಕ್ಕೆಗಳಿಂದೊದರಿ, ಪುನಃ ವೇಗದಿಂದ ಮುಂದೆ ಬಂದು, ರಾವಣನು ಹಿಡಿದಿದ್ದ ಹೊಸ ಧನುಸ್ಸನ್ನೂ ತನ್ನ ಕಾಲುಗಳಿಂದ ಮುರಿದುಬಿಟ್ಟನು. ಆಮೇಲೆ ತನ್ನ ವೀರ್ಯಾತಿಶಯವನ್ನು ಮತ್ತಷ್ಟು ಪ್ರಕಾಶಪಡಿಸುತ್ತಾ ಬೆಂಕಿಯಂತೆ ಉರಿಯುತ್ತಿದ್ದ ಆ ರಾವಣನ ಕವಚವನ್ನು ತನ್ನ ರೆಕ್ಕೆಗಳಿಂದ ಬಡಿದು ಪುಡಿಪುಡಿಯಾಗಿ ಮಾಡಿದನು, ಮತ್ತು ಸ್ವರ್ಣಕವಚಗಳಿಂದಲಂಕರಿಸಲ್ಪಟ್ಟು, ಪಿಶಾಚಮುಖವುಳ್ಳವುಗಳಾಗಿದ್ದ ಮಹಾ ವೇಗಶಾಲಿಗಳೆನಿಸಿಕೊಂಡ ಆ ರಥದ ಕತ್ತೆಗಳನ್ನೂ ತನ್ನ ರೆಕ್ಕೆಗಳಿಂದ ಬಡಿದು ಕೊಂದನು. ಮತ್ತು ಅಗ್ನಿಯಂತೆ ಜ್ವಲಿಸುತ್ತಿರುವ ಕಾಮುಗಮನವುಳ್ಳ, ಬಲ ವಾದ ಮೂಕಿಯಿಂದಲೂ ಸ್ವರ್ಣಮಯವಾದ ಛತ್ರಗಳಿಂದಲೂ ಕೂಡಿದ, ಸರ್ವೋತ್ತಮವಾದ ಆತನ ಮಹಾರಥವನ್ನೂ ಚೂರ್ಣಮಾಡಿದನು. ಪೂರ್ಣ ಚಂದ್ರನಂತೆ ಹೊಳೆಯುತ್ತಿದ್ದ ಆ ರಾವಣನ ಶ್ವೇತಚ್ಛತ್ರವನ್ನೂ, ಚಾಮರ ಗಳನ್ನೂ ಮುರಿದು ಕೆಡಹಿದನು. ಆ ಛತ್ರಚಾಮರಗಳನ್ನು ಹಿಡಿದಿದ್ದ ಸೇವಕ ರನ್ನೂ ಕೊಂದನು. ಆಮೇಲೆ ತನ್ನ ತೀಕ್ಷ್ಣವಾದ ಕೊಕ್ಕಿನಿಂದ ಸಾರಥಿಯ ತಲೆಯನ್ನು ಕುಕ್ಕಿ ಅವನನ್ನೂ ಕೊಂದನು. ಹೀಗೆ ಮಹಾಬಲಾಢ್ಯನಾದ ಆ ಪಕ್ಷಿರಾಜನಿಂದ ರಾವಣನ ಸಮಸ್ತಸಾಧನಗಳೂ ಭಗ್ನವಾದವು. ಕೈಯಲ್ಲಿ ಹಿಡಿದಿದ್ದ ಬಿಲ್ಲು ಮುರಿಯಿತು. ರಥವೂ ಚೂರ್ಣವಾಯಿತು. ಕುದುರೆಗಳೂ ಸತ್ತುಬಿದ್ದುವು. ಆತನ ಸಾರಥಿಯೂ ಹತನಾದನು. ಆಗ ರಾವಣನು ಮಾಡುವುದೇನು ? ಇಷ್ಟಾದರೂ ಆ ನೀಚನು ಸೀತೆಯನ್ನು ಬಿಡಲಿಲ್ಲ ! ಅವಳು ತೊಡೆಯಲ್ಲಿದ್ದಂತೆಯೇ ಅಂತರಿಕ್ಷದಿಂದ ಧೊಪ್ಪನೆ ನೆಲದಮೇಲೆ ಬಿದ್ದನು. ಹೀಗೆ ರಾವಣನು ವಿರಥನಾಗಿ ಭೂಮಿಯಮೇಲೆ ಬೀಳುತ್ತಿರುವುದನ್ನು ನೋಡಿ

ಸಮಸ್ತ ಭೂತಗಳೂ "ಭಲೆ! ಭಲೆ!" ಎಂದು ಜಟಾಯುವನ್ನು ಮನಸ್ಸಿನಲ್ಲಿಯೇ ಕೊಂಡಾಡುತ್ತಿದ್ದುವು. ಇಷ್ಟರಲ್ಲಿ ರಾವಣನು ಜಟಾಯುವನ್ನು ನೋಡಿ, ಮೊದಲೇ ವೃದ್ಧನಾದ ಆ ಪಕ್ಷಿರಾಜನು ಈ ಮಹಾಯುದ್ಧದಲ್ಲಿ ಬಹಳವಾಗಿ ಬಳಲಿರುವುದನ್ನೂ ಕಂಡು, ಆ ಸೀತೆಯನ್ನು ಹಿಡಿದಿದ್ದಂತೆಯೇ ಪುನಃ ಅಂತರಿಕ್ಷಕ್ಕೆ ಹಾರಿದನು. ರಾವಣನು ಸಂತೋಷದಿಂದ ಸೀತೆಯನ್ನೆತ್ತಿಕೊಂಡು ಹೋಗುವುದನ್ನು ನೋಡಿ ಪುನಃ ಜಟಾಯುವು ಓಡಿಬಂದು ಆತನನ್ನು ಅಡ್ಡಗಟ್ಟಿ ನಿಂತು, "ಛೀ! ನೀಚಬುದ್ಧಿಯುಳ್ಳವನೆ! ಇದೇನು! ರಾಮಬಾಣದ ಮಹಿಮೆಯನ್ನು ನೀನು ಕಂಡವನಲ್ಲ. ಅವನ ಬಾಣವು ವಜ್ರಾಯುಧಕ್ಕೆ ಸಮಾನವಾದುದೆಂದು ತಿಳಿ! ಅಂತಹ ರಾಮನ ಪ್ರಿಯಪತ್ನಿಯನ್ನು ನೀನು ಈಗ ಕದ್ದೊಯ್ಯುವುದರಿಂದ ರಾಕ್ಷಸವಂಶನಾಶಕ್ಕೆ ಅದೊಂದು ಸಂಚಕಾರವೇ ಹೊರತು ಬೇರೆಯಲ್ಲ. ದಾಹಪಟ್ಟವನು ನೀರನ್ನು ಕುಡಿಯುವಂತೆ ನೀನು ಸೀತಾಪಹರಣವೆಂಬ ಈ ವಿಷವನ್ನು ಅತ್ಯಾತುರದಿಂದ ಕುಡಿಯುವಂತಿದೆ. ಇದು ನಿನ್ನನ್ನು ಮಾತ್ರವೇ ಕೊಲ್ಲುವುದೆಂದೆಣಿಸಬೇಡ. ಈಗ ನೀನು ಮಾಡುವ ಈ ವಿಷಪಾನವು ನಿನ್ನೊಡನೆ ನಿನ್ನ ಬಂಧುಗಳನ್ನೂ, ಮಿತ್ರರನ್ನೂ, ಮಂತ್ರಿಗಳನ್ನೂ, ನಿನ್ನ ಚತುರಂಗಬಲವನ್ನೂ, ನಿನ್ನ ಇತರ ಪರಿವಾರಗಳನ್ನೂ ನಿರ್ಮೂಲಮಾಡಿಬಿಡುವುದೆಂದು ತಿಳಿ! ಅವಿವೇಕಿಗಳು ತಾವು ಹಿಡಿಯುವ ಕಾರ್ಯಕ್ಕೆ, ಮುಂದೆ ಬರಬಹುದಾದ ಫಲವನ್ನು ತಿಳಿದುಕೊಳ್ಳದೆ, ಕೊನೆಗೆ ಆದರಿಂದಲೇ ಕೆಡುವರೆಂಬುದಕ್ಕೆ ನಿನ್ನನ್ನೇ ಈಗ ನಿದರ್ಶನವಾಗಿ ಹೇಳಬಹುದು. ಎಲೆ, ರಾವಣಾ! ಮುಖ್ಯವಾಗಿ ನಿನ್ನ ಕೊರಲಿಗೆ ಕಾಲಪಾಶವು ಸುತ್ತಿಕೊಂಡಿರುವುದು. ನೀನು ಇನ್ನೆಲ್ಲಿ ಹೋದರೂ ಅದನ್ನು ಬಿಡಿಸಿಕೊಳ್ಳಲಾರೆ. ಕೊಳದಲ್ಲಿರುವ ಮೀನು ಮಾಂಸಮಿಶ್ರವಾದ ಬಲೆಗೆ ಆಸೆಯಿಂದ ಹೋಗಿ ಅದರಲ್ಲಿ ಸಿಕ್ಕಿಬಿದ್ದಮೇಲೆ ಎಲ್ಲಿಹೋದರೆ ತಾನೇ ಅದಕ್ಕೆ ಸಾವು ತಪ್ಪುವುದು? ಅದರಂತೆಯೇ ಈಗ ಯಮಪಾಶದಲ್ಲಿ ಸಿಕ್ಕಿಬಿದ್ದಿರುವ ನೀನು ಎಲ್ಲಿ ಹೋದರೂ ಅದನ್ನು ತಪ್ಪಿಸಿಕೊಳ್ಳಲಾರೆ. ಎಲೆ, ರಾವಣನೆ! ಇನ್ನೆಷ್ಟು ವರ್ಷಗಳವರೆಗೆ ನೀನು ತಪಸ್ಸು ಮಾಡಿದರೂ ಆ ರಾಮಲಕ್ಷ್ಮಣರನ್ನು ಜಯಿಸಲಾರೆ. ನೀನು ಈಗ ಅವರಿಗೆ ಮಾಡಿರುವ ಈ ಅವಮಾನವನ್ನು ಎಷ್ಟು ದಿನವಾದರೂ ಅವರೂ ಮರೆಯುವವರಲ್ಲ. ಎಂದಿಗೂ ಅವರು ನಿನ್ನನ್ನು ಮನ್ನಿಸುವರೆಂದೆಣಿಸಬೇಡ. ನಿನ್ನನ್ನು ತಪ್ಪದೆ ಕೊಂದು

ಬಿಡುವರು. ಅಯ್ಯೋ! ಯಾರೂ ಇಲ್ಲದ ಸಮಯವನ್ನು ನೋಡಿ ಲೋಕ ನಿಂದಿತವಾದ ಈ ಕಾರ್ಯವನ್ನು ಮಾಡಿರುವೆಯಲ್ಲಾ! ನಿನಗಿಂತಲೂ ಅಂಜು ಕುಳಿ ಯಾವನುಂಟು? ಇದು ಕಳ್ಳನು ಮಾಡುವ ಕೆಲಸವೇ ಹೊರತು, ವೀರನಾದ ರಾಜನಿಗೆ ಯೋಗ್ಯವಾದ ಕೆಲಸವಲ್ಲ. ಎಲೆ ರಾವಣಾ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ನೀನು ನಿಜವಾದ ವೀರನಾಗಿದ್ದರೆ ನನ್ನೊಡನೆ ಯುದ್ಧಮಾಡು! ನೀನು ನಿಜವಾಗಿ ಧೈರ್ಯಶಾಲಿಯಾದರೆ ಆ ರಾಮ ಲಕ್ಷ್ಮಣರು ಬರುವವರೆಗೂ ಒಂದು ಮುಹೂರ್ತದವರೆಗೆ ನಿಂತಿರು! ನಿನ್ನ ತಮ್ಮನಾದ ಖರನಿಗಾದಂತೆಯೇ ನಿನಗೂ ಆಗುವುದು! ಅವನಂತೆಯೇ ನೀನೂ ನೆಲದಮೇಲೆ ಮಲಗುವೆ. ಮೃತ್ಯುಕಾಲವು ಬಂದೊದಗಿದಾಗ ಮನುಷ್ಯನು ತನ್ನ ವಿನಾಶಕ್ಕಾಗಿ ಎಂತಹ ಅಧರ್ಮಕಾರ್ಯವನ್ನು ಮಾಡುವನೋ ಅಂತಹ ಅಧರ್ಮಕೃತ್ಯವನ್ನೇ ನೀನೂ ಈಗ ನಡೆಸಿರುವೆ. ಇದರಿಂದಲೇ ನಿನಗೆ ಮರಣವು ಸಮೀಪಿಸಿರುವುದೆಂದು ಹೇಳಬಹುದು. ಯಾವ ಕಾರ್ಯಕ್ಕೆ ಪಾಪವೇ ಫಲ ವಾಗಿರುವುದೋ ಅಂತಹ ಕಾರ್ಯವನ್ನು ಲೋಕದಲ್ಲಿ ಯಾವನುತಾನೇ ಮಾಡು ವನು? ಸರ್ವಲೋಕಾಧಿಪತಿಯೆನಿಸಿದ ಭಗವಂತನಾದ ಬ್ರಹ್ಮದೇವನೂ ಕೂಡ ಅದನ್ನು ಮಾಡನು" ಎಂದನು. ಹೀಗೆಂದು ಜಟಾಯುವು ಆ ರಾವಣನಿಗೆ ಹಿತವನ್ನು ಹೇಳಿ ಕೊನೆಗೆ ಆತನು ತನ್ನ ಮಾತನ್ನು ಲಕ್ಷ್ಯಮಾಡದೆ ಅತಿಕ್ರಮಿಸಿ ಹಾರಿಹೋಗುವುದನ್ನು ನೋಡಿ, ಅತಿವೇಗದಿಂದ ತಾನೂ ಮೇಲೆ ಹಾರಿ, ಆತನ ಬೆನ್ನಿನಮೇಲೆ ಅಪ್ಪಳಿಸಿದನು. ಹೀಗೆ ಮೇಲೆ ಬಿದ್ದು ಬಲಾತ್ಕಾರದಿಂದ ಆತ ನನ್ನು ತಡೆದು ನಿಲ್ಲಿಸಿ, ಮಾವಟಿಗನು ದುಷ್ಟಗಜವನ್ನೇರಿ ಕುಳಿತು, ಅಂಕುಶದಿಂದ ಅದನ್ನು ನಾನಾವಿಧವಾಗಿ ತಿವಿಯುವಂತೆ ತನ್ನ ತೀಕ್ಷ್ಣವಾದ ನಖಗಳಿಂದ ಆ ರಾವಣನನ್ನು ಪರಚುತ್ತಿದ್ದನು. ಆ ಜಟಾಯುವಿಗಾದರೋ ಕಾಲಿನ ಉಗುರು ಗಳು, ರೆಕ್ಕೆಗಳು, ಆತನ ಕೊಕ್ಕು, ಇವು ಹೊರತು ಬೇರೆ ಆಯುಧವಿಲ್ಲ. ಆದುದ ರಿಂದ ತನ್ನ ಉಗುರುಗಳಿಂದ ಪರಚುತ್ತ, ಕೊಕ್ಕಿನಿಂದ ಕುಕ್ಕುತ್ತಾ, ರೆಕ್ಕೆ ಗಳಿಂದ ಬಡಿಯುತ್ತಾ, ಆ ರಾವಣನ ತಲೆಯ ಕೂದಲುಗಳನ್ನು ಜಾಡಿಸಿ ಕೀಳು ತ್ತಿದ್ದನು. ಹೀಗೆ ಬಾರಿಬಾರಿಗೂ ಜಟಾಯುವು ತನ್ನಮೇಲೆ ಬಿದ್ದು ಪೀಡಿಸು ತ್ತಿರುವುದನ್ನು ನೋಡಿ ರಾವಣನಿಗೆ ಮೈತಿಳಿಯದಷ್ಟು ಕೋಪವುಂಟಾಯಿತು. ಆಗ ಅವನು ಕೋಪಾವೇಶದಿಂದ ತುಟಿಗಳನ್ನಲುಗಿಸುತ್ತಾ, ಆ ಜಟಾಯುವನ್ನು

ಕೊಲ್ಲುವುದಕ್ಕಾಗಿ ಅತ್ತಿತ್ತ ಸುತ್ತಿ ಅವಕಾಶವನ್ನು ಹುಡುಕುತ್ತಿದ್ದನು. ಇತ್ತ ಲಾಗಿ ಸೀತೆಯನ್ನು ಎಡದ ತೊಡೆಯಲ್ಲಿ ಅದುಮಿಕೊಂಡು ತನ್ನ ಕೈಯಿಂದ ಜಟಾಯುವನ್ನು ಬಲವಾಗಿ ಅಪ್ಪಳಿಸಿದನು. ಆ ಗೃಧ್ರರಾಜನಾದರೋ ರಾವಣನನ್ನು ಸುತ್ತಿ ಸುತ್ತಿ ತಿರುಗುತ್ತಾ ತನಗೆ ಅವಕಾಶವು ಸಿಕ್ಕಿದಹಾಗೆಲ್ಲಾ ಕೊಕ್ಕಿನಿಂದ ಕಡಿದು ಆ ರಾವಣನ ಎಡಗಡೆಯ ತೋಳುಗಳೆಲ್ಲವನ್ನೂ ಛಿನ್ನಭಿನ್ನ ವಾಗುವಂತೆ ಕತ್ತರಿಸುತ್ತಿದ್ದನು. ಹೀಗೆ ರಾವಣನ ಹತ್ತುತೋಳುಗಳೂ ಕತ್ತರಿಸಿ ಬಿದ್ದುಹೋದೊಡನೆಯೇ ಹುತ್ತಿನಿಂದ ವಿಷಸರ್ಪಗಳು ಹೊರಡುವಂತೆ ಹೊಸ ತೋಳುಗಳು ಆಯುಧಸಹಿತವಾಗಿ ಹೊರಡಲಾರಂಭಿಸಿದುವು ಕೊನೆಗೆ ರಾವಣನು ಅತಿಕೋಪದಿಂದ ಸೀತೆಯನ್ನು ಕೆಳಗೆ ಬಿಟ್ಟು, ತನ್ನ ಮುಷ್ಟಿ ಗಳಿಂದಲೂ ಕಾಲುಗಳಿಂದಲೂ ಆ ಜಟಾಯುವನ್ನು ಹೊಡೆಯುತ್ತಿದ್ದನು. ಆಮೇಲೆ ಒಂದು ಮುಹೂರ್ತಕಾಲದವರೆಗೆ ಎಣೆಯಿಲ್ಲದ ವೀರ್ಯವುಳ್ಳ ಜಟಾಯು-ರಾವಣರಿಬ್ಬರಿಗೂ ಘೋರವಾದ ಯುದ್ಧವು ನಡೆಯುತ್ತಿತ್ತು. ಹೀಗೆ ಜಟಾಯುವು ರಾಮನಿಗಾಗಿ ಮೈಮೇಲೆ ಪ್ರಜ್ಞೆಯಿಲ್ಲದಷ್ಟು ಸಾಹಸದಿಂದ ಹೋರಾಡುತ್ತಿರಲು, ರಾವಣನು ಒಂದು ಕತ್ತಿಯನ್ನೆತ್ತಿ ಆ ಪಕ್ಷಿಯ ರೆಕ್ಕೆ ಗಳನ್ನೂ ಗರಿಗಳನ್ನೂ ಅದರ ಕಾಲುಗಳನ್ನೂ ಕತ್ತರಿಸಿಬಿಟ್ಟನು. ಕ್ರೂರ ಕರ್ಮಿಯಾದ ರಾವಣನು ಹೀಗೆ ರೆಕ್ಕೆಗಳನ್ನು ಛೇದಿಸಿದೊಡನೆಯೇ ಜಟಾಯುವು ಅರ್ಧಪ್ರಾಣದಿಂದ ಕೂಗಿಡುತ್ತ ನೆಲದಮೇಲೆ ಬಿದ್ದನು. ರಕ್ತಮಯವಾದ ದೇಹದಿಂದ ಜಟಾಯುವು ನೆಲಕ್ಕೆ ಬಿದ್ದುದನ್ನು ನೋಡಿ ಸೀತೆಯು ತನ್ನ ಪ್ರಿಯ ಬಂಧುವನ್ನು ಕಳೆದುಕೊಂಡಂತೆ ಮಹಾದುಃಖದಿಂದ ತತ್ತಳಿಸುತ್ತ ಆ ಪಕ್ಷಿಯ ಸಮೀಪಕ್ಕೆ ಓಡಿಬಂದಳು. ನೀಲಮೇಘದಂತೆ ಕಪ್ಪಾದ ಮೈಯುಳ್ಳವನಾಗಿಯೂ ಬಿಳುಪಾದ ಎದೆಯುಳ್ಳವನಾಗಿಯೂ ಮಹಾವೀರ್ಯವುಳ್ಳವನಾಗಿಯೂ ಇರುವ ಜಟಾಯುವು, ನಂದಿದ ಕಾಡುಗಿಚ್ಚಿನಂತೆ ಶಾಂತನಾಗಿ ನೆಲದಮೇಲೆ ಬಿದ್ದಿರುವು ದನ್ನು ರಾವಣನೂ ನೋಡಿದನು. ಆಗ ಜನಕಪುತ್ರಿಯಾದ ಸೀತೆಯು ರಾವಣ ನಿಂದ ಹತನಾಗಿ ಬಿದ್ದ ಜಟಾಯುವನ್ನು ನೋಡಿ ದುಃಖದಿಂದ ತಪಿಸುತ್ತ, ಆ ಜಟಾಯುವನ್ನು ಬಾರಿಬಾರಿಗೂ ಕೈಯಿಂದ ಸವರಿ, ಸಹಿಸಲಾರದ ಸಂಕಟದಿಂದ ಪ್ರಲಾಪಿಸುತ್ತಿದ್ದಳು.

ಇಲ್ಲಿಗೆ ಐವತ್ತೊಂದನೆಯ ಸರ್ಗವು.

ಪುನಃ ರಾವಣನು ಸೀತೆಯನ್ನೆತ್ತಿಕೊಂಡು ಹೋದುದು.
ವೇಗದಿಂದ ಹೋಗುತ್ತಿರುವಾಗ ಸೀತೆಯು ತನ್ನ ಆಭರಣಗಳನ್ನೂ
ಪುಷ್ಪಮಾಲಿಕೆಗಳನ್ನೂ ಕೆಳಕ್ಕೆ ಬಿಸುಟುದು. ಲೋಕವೆಲ್ಲವೂ
ಅದರಿಂದ ಕ್ಷೋಭಹೊಂದಿದುದು.

ಆಗ ರಾವಣನು ಅರ್ಧಪ್ರಾಣದಿಂದ ರಾಮಾಶ್ರಮದ ಸಮೀಪದಲ್ಲಿ ಬಿದ್ದು ನರಳುತ್ತಿರುವ ಜಟಾಯುವನ್ನು ಸಂತೋಷದಿಂದ ನೋಡುತ್ತಿದ್ದನು. ಇತ್ತಲಾಗಿ ಚಂದ್ರಮುಖಿಯಾದ ಸೀತೆಯಾದರೋ ರಾವಣನಿಂದ ಹತನಾಗಿ ಬಿದ್ದ ಜಟಾಯುವನ್ನು ನೋಡಿ ದುಃಖದಿಂದ ಗೋಳಿಡುತ್ತಿದ್ದಳು. ಶಸ್ತ್ರದಿಂದ ಹತನಾಗಿ ಬಿದ್ದು ಪ್ರಾಣಸಂಕಟದಿಂದ ನರಳುತ್ತಿರುವ ಆ ಗೃಧ್ರರಾಜನನ್ನು ಬಾರಿಬಾರಿಗೂ ಕೈಯಿಂದ ಸವರಿ ಆಲಿಂಗಿಸಿಕೊಂಡು ಪ್ರಲಾಪಿಸುತ್ತ “ ಆಹಾ ! ಲೋಕದಲ್ಲಿ ಮನುಷ್ಯರಿಗೆ ಎವೆದುಡಿಯುವುದು, ಪಕ್ಷಿಯ ಕೂಗುಗಳು ಮುಂತಾದ ನಿಮಿತ್ತಗಳು ಮುಂದೆ ಬರಬಹುದಾದ ಸುಖದುಃಖಗಳನ್ನು ಸೂಚಿಸುವುವೆಂದು ಶಾಸ್ತ್ರಪ್ರಮಾಣವುಂಟಲ್ಲವೆ ? ಹೀಗಿರುವಾಗಲೂ ಈಗ ನನಗುಂಟಾಗಿರುವ ಮಹಾವ್ಯಸನವನ್ನು ರಾಮನು ತಿಳಿಯಲಾರದೆ ಹೋದನೆ ? ಹಾ ! ರಾಮಾ ! ಈಗ ನನಗುಂಟಾಗಿರುವ ಮಹಾವ್ಯಸನವನ್ನು ಸೂಚಿಸತಕ್ಕ ದುರ್ನಿಮಿತ್ತಗಳು ಒಂದಾದರೂ ನಿನಗೆ ಕಾಣಲಿಲ್ಲವೆ ! ಇಲ್ಲಿನ ಮೃಗಪಕ್ಷಿಗಳೂ ನನಗಾಗಿ ರಾಮನ ಬಳಿಗೆ ಓಡುತ್ತಿರುವುವಲ್ಲಾ. ಅಯ್ಯೋ ! ನನ್ನನ್ನು ರಕ್ಷಿಸುವುದ ಕ್ಕಾಗಿ ಬಂದ ಈ ಪಕ್ಷಿರಾಜನೂ ಕೂಡ ನನ್ನ ದೌರ್ಭಾಗ್ಯದಿಂದ ಪಾಪಿಯಾದ ಈ ರಾವಣನ ಕೈಯಲ್ಲಿ ಹತನಾಗಿ ಭೂಮಿಯಲ್ಲಿ ಬಿದ್ದಿರುವನು. ಹಾ ! ರಾಮಾ ! ನನ್ನನ್ನು ರಕ್ಷಿಸು ! ಲಕ್ಷ್ಮಣಾ ! ನನ್ನನ್ನು ರಕ್ಷಿಸು ! ” ಎಂದು ನಾನಾವಿಧವಾಗಿ ಕೂಗಿಕೊಂಡು ಭಯದಿಂದ ನಡುಗುತ್ತಾ ಇದಿರಿಗೆ ನಿಂತವರನ್ನು ಕೂಗಿ ಮೊರೆಯಿಡುವಂತೆ ಮೊರೆಯಿಡುತ್ತಿದ್ದಳು. ಕೆದರಿದ ಪುಷ್ಪಾಭರಣವುಳ್ಳವಳಾಗಿ ದಿಕ್ಕಿಲ್ಲದವಳಂತೆ ಗೋಳಿಡುತ್ತಿರುವ ಸೀತೆಯನ್ನು ನೋಡಿ ರಾವಣನು ವೇಗ ದಿಂದ ಅವಳ ಬಳಿಗೆ ಓಡಿಬಂದು, ಯಮನಂತೆ ಘೋರರೂಪವುಳ್ಳವನಾಗಿ ಸೀತೆಯ ಸಮೀಪದಲ್ಲಿ ನಿಂತನು. ವನಲತೆಯಂತೆ ಅಲ್ಲಲ್ಲಿರುವ ಮರಗಳನ್ನಪ್ಪಿ ಕೊಂಡು ಆಗಾಗ ನೆಲದಮೇಲೆ ಬಿದ್ದು ಹೊರಳುತ್ತ ಅನಾಥಳಾಗಿ “ ರಾಮಾ ! ರಾಮಾ ! ” ಎಂದು ಪ್ರಲಾಪಿಸುತ್ತಿರುವ ಆ ಸೀತೆಯನ್ನು ಕುರಿತು “ ಎಲೆ

ಸೀತೆ! ಬಿಡುಬಿಡು" ಎಂದು ಹೇಳಿ ಬಾರಿಬಾರಿಗೂ ತಡೆಯುತ್ತ, ಕೊನೆಗೆ ತನ್ನ ಪ್ರಾಣನಾಶಕ್ಕಾಗಿ ಆಕೆಯ ತುರುಬಿಗೆ ಕೈಹಾಕಿದನು. ಹೀಗೆ ರಾವಣನು ಸೀತೆಗೆ ಉಂಟುಮಾಡುತ್ತಿರುವ ಭಂಗವನ್ನು ನೋಡಿ, ಚರಾಚರಾತ್ಮಕವಾದ ಸಮಸ್ತಪ್ರಪಂಚವೂ ಸ್ವಾಭಾವಿಕ ಸ್ಥಿತಿಯನ್ನು ಬಿಟ್ಟು ವಿಕಾರಹೊಂದಿದಂತಾಯಿತು. ಸಮಸ್ತಲೋಕವೂ ಅಜ್ಞಾನಾಂಧಕಾರದಿಂದ ಮುಚ್ಚಿ ಕತ್ತಲೆಕವಿದಂತಾಯಿತು. ಗಾಳಿಯ ಚಲನವೇ ನಿಂತುಹೋಯಿತು. ಸೂರ್ಯನೂ ಕಾಂತಿಹೀನನಾದನು. ಹೀಗೆ ರಾವಣನು ಸೀತೆಯ ತಲೆಯಮೇಲೆ ಕೈಯಿಟ್ಟುದನ್ನು ಆಗ ಚತುರ್ಮುಖ ಬ್ರಹ್ಮನು ತನ್ನ ದಿವ್ಯಚಕ್ಷುಸ್ಸಿನಿಂದ ನೋಡಿ ಸಂತೋಷದಿಂದ "ಭಲೆ! ಈಗಲೀಗ ನಮ್ಮ ಕಾರ್ಯವು ಕೈಗೂಡಿತು. ಅಥವಾ ಇನ್ನು ನಮ್ಮ ಕಾರ್ಯವಾಯಿತೆಂದೇ ಹೇಳಬೇಕು" ಎಂದು ಹೇಳಿಕೊಳ್ಳುತ್ತಿದ್ದನು. ದಂಡಕಾರಣ್ಯದಲ್ಲಿದ್ದ ಮಹರ್ಷಿಗಳೆಲ್ಲರೂ ಸಂತೋಷದಿಂದಲೂ, ದುಃಖದಿಂದಲೂ ಪರವಶರಾಗಿದ್ದರು. ಸೀತೆಗುಂಟಾದ ಭಂಗವನ್ನು ನೋಡಿ ಅವರ ಮನಸ್ಸಿನಲ್ಲಿ ದುಃಖವೂ, ಲೋಕಕಂಟಕನಾದ ರಾವಣನಿಗೆ ಕೊನೆಗಾಲವು ಸಮೀಪಿಸಿತೆಂಬ ಸಂತೋಷವೂ ಸಮವಾಗಿ ನೆಲೆಗೊಂಡಿತು. ಇತ್ತಲಾಗಿ "ಹಾ! ರಾಮಾ! ಹಾ! ಲಕ್ಷ್ಮಣಾ!" ಎಂದು ಸೀತೆಯು ಪ್ರಲಾಪಿಸುತ್ತಿರುವಾಗಲೇ ರಾವಣನು ಆಕೆಯನ್ನೆತ್ತಿಕೊಂಡು ಅಂತರಿಕ್ಷಕ್ಕೆ ಹಾರಿದನು. ಸ್ವರ್ಣಾಭರಣದಂತೆ ಹೊಳೆಯುವ ಮೈಯುಳ್ಳವಳಾಗಿ, ಹೊಂಬಣ್ಣವಾದ ಪಟ್ಟೆಮಡಿಯನ್ನುಟ್ಟಿದ್ದ ಆ ರಾಜಕುಮಾರಿಯು, ರಾವಣನ ಸಮೀಪದಲ್ಲಿರುವಾಗ [1]ಕಾಲಮೇಘದಲ್ಲಿ ಥಳಥಳಿಸುವ ಮಿಂಚಿನಂತೆ ತೋರುತ್ತಿದ್ದಳು. ಆ ಸೀತೆಯು ಧರಿಸಿದ್ದ ಹೊಂಬಣ್ಣದ ಬಟ್ಟೆಯು ಆಗಾಗ ಗಾಳಿಗೆ ಹಾರಿ ರಾವಣನ ಮೈಮೇಲೆ ಬೀಳುತ್ತಿರಲು, ರಾವಣನು [2]ಅಗ್ನಿಜ್ವಾಲೆಯಿಂದ ಆವರಿಸಿದ ಪರ್ವತದಂತೆ ತೋರುತ್ತಿದ್ದನು.

---

1. ಇಲ್ಲಿ ರಾವಣನ ಸಮೀಪದಲ್ಲಿರುವ ಸೀತೆಯನ್ನು ಮೇಘದಲ್ಲಿ ಕಾಣುವ ಮಿಂಚಿಗೆ ಹೋಲಿಸಿರುವುದರಿಂದ, ಸೀತೆಗೆ ಈ ಸ್ಥಿತಿಯು ಬಹಳ ಕಾಲದವರೆಗೆ ನಿಲ್ಲತಕ್ಕುದಲ್ಲವೆಂದು ಸೂಚಿತವಾಗುವುದು.

2. ಇಲ್ಲಿ ಸೀತೆಯ ದುಕೂಲವನ್ನು ಕಾಡುಗಿಚ್ಚಿಗೆ ಹೋಲಿಸಿರುವುದರಿಂದ, ಕಾಡುಗಿಚ್ಚು ಪರ್ವತವನ್ನು ದಹಿಸುವಂತೆ ರಾವಣನಿಗೆ ಇದೇ ಸಂತಾಪಕಾರಣವೆಂದು ಸೂಚಿತವಾಗುವುದು.

ಮಂಗಳಾಂಗಿಯಾದ ಆ ಸೀತೆಯ ದೇಹದಲ್ಲಿ ಧರಿಸಿದ್ದ ಪಟ್ಟೆಮಡಿಯು ಆಕಾಶದಲ್ಲಿ ಗಾಳಿಯಿಂದ ಚಲಿಸುತ್ತಿರುವಾಗ, ಅದರ ಕಾಂತಿಯಿಂದ ರಾವಣನು ಸೂರ್ಯಕಾಂತಿಯಿಂದ [1]ಕೂಡಿದ ರಕ್ತಮೇಘದಂತೆ ತೋರುತ್ತಿದ್ದನು. ಆ ಸೀತೆಯು ರಾವಣನ ತೊಡೆಯಲ್ಲಿ ಸಿಕ್ಕಿ ನರಳುತ್ತಿರುವಾಗ, ಎಸಳಾದ ಮೂಗುಳ್ಳ ಆಕೆಯ ಮುಖವು ರಾಮವಿಯೋಗದಿಂದ ಕೇವಲ ಕಾಂತಿಹೀನವಾಗಿ ನಾಳವಿಲ್ಲದ ಕಮಲದಂತೆ ಕಾಣುತ್ತಿತ್ತು. ಅಂದವಾದ ನೆತ್ತಿಯಿಂದಲೂ, ನುಣುಪಾದ ಕೂದಲಿನಿಂದಲೂ ಸ್ವಚ್ಛವಾಗಿ ಹೊಳೆಯುವ ಬಿಳೀ ಹಲ್ಲುಗಳಿಂದಲೂ ಕೂಡಿ, ಪದ್ಮಗರ್ಭದಂತೆ ಹೊಳೆಯುತ್ತಿದ್ದ ಕಂದುಕುಂದಿಲ್ಲದ ಆಕೆಯ ಮುಖವು, ರಾವಣನ ತೊಡೆಯ ಮೇಲೆ, ಕಾಲಮೇಘದ ನಡುವೆ ಉದಿಸಿಬಂದ ಚಂದ್ರನಂತೆ ತೋರುತ್ತಿತ್ತು. ಎಸಳಾದ ಮೂಗಿನಿಂದಲೂ, ಅಂದವಾದ ತುಟಿಯಿಂದಲೂ, ಸುವರ್ಣಛಾಯೆಯಿಂದಲೂ ಕೂಡಿದ ಅವಳ ಮುಖವು ಚಂದ್ರನಂತೆ ಪ್ರಿಯದರ್ಶನವುಳ್ಳುದಾಗಿದ್ದರೂ, ರಾಮವಿಯೋಗವನ್ನು ಹೊಂದಿ ರಾವಣನ ಕೈಗೆ ಸಿಕ್ಕಿ ಎಡೆಬಿಡದೆ ಕಣ್ಣೀರು ಸುರಿಸಿ ಅಳುತ್ತಿರುವಾಗ, [2]ಹಗಲಲ್ಲಿ ಹುಟ್ಟಿಬಂದ ಪ್ರತಿಚಂದ್ರನಂತೆ ಕೇವಲ ಕಾಂತಿಹೀನವಾಗಿದ್ದಿತು. ಸ್ವರ್ಣಛಾಯೆಯುಳ್ಳ ಸೀತೆಯು, ಕಪ್ಪುಮೈಯುಳ್ಳ ರಾವಣನ ಪಕ್ಕದಲ್ಲಿರುವಾಗ [3]ನೀಲಮಣಿಗಳಿಂದ ಸುತ್ತಿದ ಚಿನ್ನದ ಡಾಬಿನಂತಿದ್ದಳು. ತಾವರೆಯ ಹೂವಿನಂತೆ, ಗೌರವರ್ಣದ ನಡುವೆ ಕಾಣಿಸುವ ಮಿಂಚಿನಂತೆ, ಆಭರಣ ಕಾಂತಿಗಳೊಡನೆ ಪ್ರಕಾಶಿಸುತ್ತಿದ್ದಳು. ಚಿಗುರಿನಂತೆ ಎಳಗೆಂಪುಬಣ್ಣವುಳ್ಳ ಆ ವಿದೇಹಪುತ್ರಿಯು ಆನೆಯನ್ನು

---

1. ಇಲ್ಲಿ ಸೀತೆಯ ವಸ್ತ್ರವನ್ನು ರಕ್ತಮೇಘಕ್ಕೆ ಹೋಲಿಸಿರುವುದರಿಂದ, ರಕ್ತಮೇಘಗಳಂತೆ ಈ ವಸ್ತ್ರವೇ ರಾವಣನಿಗೆ ಮಹೋತ್ಪಾತ ಸೂಚಕವೆಂದು ಭಾವವು.

2. ಆಕಾಶದಲ್ಲಿ ಪ್ರತಿಚಂದ್ರನು ಉದಯಿಸುವುದು ಮಹೋತ್ಪಾತ ಸೂಚಕವು. ಇಲ್ಲಿಯೂ, ಸೀತೆಯ ಮುಖವನ್ನು ಎರಡನೆಯ ಚಂದ್ರನೆಂದು ಹೇಳಿರುವುದರಿಂದ ಇದು ರಾವಣನಿಗೆ ಉತ್ಪಾತಸೂಚಕವೆಂದು ಭಾವವು.

3. ಇಲ್ಲಿ ಬಂಗಾರದಲ್ಲಿ ಕಟ್ಟಿದ ನೀಲಮಣಿಗೆ ಸಾದೃಶ್ಯವನ್ನು ಹೇಳಿರುವುದರಿಂದ ಶೋಭಾತಿಶಯವನ್ನು ಹೇಳಿದಂತೆ ಗ್ರಹಿಸಕೂಡದು. ನೀಲದಕಲ್ಲಿಗೆ ಬೆಳ್ಳಿಯಕಟ್ಟಡವೇ ಪ್ರಶಸ್ತವೇ ಹೊರತು ಬಂಗಾರದ ಕಟ್ಟಡವು ಅಷ್ಟು ಶೋಭಾವಹವಲ್ಲವು. ಇದರಿಂದ ರಾವಣನ ಕೈಯಲ್ಲಿ ಸಿಕ್ಕಿದ್ದ ಆ ಸೀತೆಯು ಕೇವಲ ಕಾಂತಿಹೀನಳಾಗಿದ್ದಳೆಂದು ಭಾವವು.

ಚಿನ್ನದ ಸರಪಣಿಯಿಂದ ಅಲಂಕರಿಸಿದಂತೆ ಕಪ್ಪಾದ ಆ ರಾವಣನ ಮೈಗೂ ಒಂದು ಶೋಭಾತಿಶಯವನ್ನುಂಟುಮಾಡುತ್ತಿದ್ದಳು. ಪಕ್ಕದಲ್ಲಿರುವ ಸೀತೆಯ ಆಭರಣಧ್ವನಿಯಿಂದ ಆ ರಾಕ್ಷಸರಾಜನು, ಗುಡುಗುತ್ತಿರುವ ಮೇಘದಂತೆ ತೋರುತ್ತಿದ್ದನು. ಹೀಗೆ ಅತಿವೇಗದಿಂದ ಸೀತೆಯನ್ನಪಹರಿಸಿಕೊಂಡು ಹೋಗುತ್ತಿರುವಾಗ, ಆ ಗಮನವೇಗದಲ್ಲಿ ಸೀತೆಯ ತಲೆಯಲ್ಲಿ ಮುಡಿದಿದ್ದ ಹೂಗಳೆಲ್ಲವೂ ಪುಷ್ಪವೃಷ್ಟಿಯನ್ನು ಕರೆದಂತೆ ಸುತ್ತಲೂ ಉದಿರಿ ನೆಲದಮೇಲೆ ಬೀಳುತ್ತಿದ್ದುವು. ಹೀಗೆ ಕೆಳಗೆಬಿದ್ದ ಈ ಪುಷ್ಪರಾಶಿಯು ತಿರುಗಿ ಅವನ ಗಮನವೇಗದಿಂದ ಮೇಲೆ ಚಿಮ್ಮಿ, ಆ ರಾವಣನೊಡನೆಯೇ ಗಾಳಿಯಿಂದ ಸೆಳೆಯಲ್ಪಡುತ್ತ ಅವನ ಸುತ್ತಲೂ ಹಾರಿ ಬರುತ್ತಿರಲು, ಉನ್ನತವಾದ ಮೇರುಪರ್ವತದ ಸುತ್ತಲೂ ನಕ್ಷತ್ರಮಾಲೆಯು ಆವರಿಸಿದಂತೆ ರಾವಣನ ಸುತ್ತಲೂ ಕಾಣಿಸುತ್ತಿತ್ತು. ಹೀಗೆ ಹೋಗುತ್ತಿರುವಾಗ ಸೀತೆಯ ರತ್ನಖಚಿತವಾದ ಕಾಲಂದುಗೆಯು ಕಾಲಿನಿಂದ ಜಾರಿ, ಮಿಂಚಿನಂತೆ ಹೊಳೆಯುತ್ತ ಮಧುರಧ್ವನಿಯೊಡನೆ ಕೆಳಗೆಬಿದ್ದಿತು. ಆಕಾಶದ ಕೊಳ್ಳಿಯಂತೆ ತೇಜಸ್ಸಿನಿಂದ ಜಾಜ್ವಲ್ಯಮಾನಳಾದ ಸೀತೆಯನ್ನು ರಾವಣನು ಅಂತರಿಕ್ಷಮಾರ್ಗದಲ್ಲಿಯೇ ಎತ್ತಿಕೊಂಡು ಹೋಗುತ್ತಿದ್ದನು. ಅಗ್ನಿಯಂತೆ ಜ್ವಲಿಸುತ್ತಿರುವ ಆ ಸೀತೆಯ ಭೂಷಣಗಳೆಲ್ಲವೂ ಘಲಘಲನೆ ಧ್ವನಿಮಾಡುತ್ತ ಆಕಾಶದಿಂದ ನಕ್ಷತ್ರಗಳು ಬೀಳುವಂತೆ ಒಂದೊಂದಾಗಿ ನೆಲದಮೇಲೆ ಬೀಳುತ್ತಿದ್ದುವು. ಚಂದ್ರನಂತೆ ಹೊಳೆಯುತ್ತಿದ್ದ ಆಕೆಯ ಮುತ್ತಿನ ಹಾರವು, ಅವಳ ಎದೆಯಿಂದ ಜಾರಿ ಆಕಾಶದಿಂದ ಬೀಳುವ ಗಂಗಾನದಿಯಂತೆ ನೆಲದಮೇಲೆ ಬಿದ್ದಿತು. ಇವರು ಅಂತರಿಕ್ಷದಲ್ಲಿ ಹೋಗುತ್ತಿರುವಾಗ ಅಲ್ಲಲ್ಲಿ ಗಮನವೇಗದಿಂದುಂಟಾದ ಗಾಳಿಗೆ ಸಿಕ್ಕಿದ ಮರಗಳು, ಬಗೆಬಗೆಯಾದ ಪಕ್ಷಿಗಳ ಧ್ವನಿಯೊಡಗೂಡಿ ಚಲಿಸುತ್ತಿರಲು, ಅವು ಸೀತೆಯನ್ನು ನೋಡಿ 'ಹೆದರಬೇಡ' ವೆಂದು ಕೈಯಾಡಿಸಿ ಸಮಾಧಾನಪಡಿಸುವಂತೆ ತೋರುತ್ತಿದ್ದುವು. ಅಲ್ಲಲ್ಲಿ ದಾರಿಗಡ್ಡಲಾಗಿದ್ದ ನದಿಗಳಲ್ಲಿ, ತಾವರೆಗಳೆಲ್ಲವೂ ಮುರಿದು, ಅಲ್ಲಿನ ಜಲಚರಪಕ್ಷಿಗಳೆಲ್ಲವೂ ಭಯದಿಂದ ಒಳಗಡಗಿರಲು, ಆ ನದಿಗಳು ತಮ್ಮ ಪ್ರಿಯಸಖಿಯಾದ ಸೀತೆಯ ಸಂಕಟವನ್ನು ನೋಡಿ ಸಹಿಸಲಾರದೆ, ಉಚ್ಛ್ವಾಸನಿಶ್ವಾಸಗಳನ್ನೂ ಬಿಟ್ಟು ದುಃಖಿಸುವಂತೆ ಕಾಣುತ್ತಿದ್ದುವು. ದಾರಿಯಲ್ಲಿದ್ದ ಸಿಂಹಗಳು, ಹುಲಿಗಳು, ಜಿಂಕೆಗಳು, ವನಪಕ್ಷಿಗಳು, ಮುಂತಾದ ಪ್ರಾಣಿಗಳೆಲ್ಲವೂ, ಈ ಸೀತೆಯು

ಹೋಗುವ ದಾರಿಯಲ್ಲಿ ಸುತ್ತಲೂ ಬಂದುಸೇರಿ ರಾವಣನಮೇಲೆ ಕೋಪದಿಂದ ಅವನ ಛಾಯೆಯನ್ನೇ ಹಿಡಿದು ಹಿಂಬಾಲಿಸಿ ಓಡಿದುವು. ಅಲ್ಲಲ್ಲಿದ್ದ ಪರ್ವತಗಳೂ ರಾವಣನು ಸೀತೆಯನ್ನೆತ್ತಿಕೊಂಡು ಹೋಗುವುದನ್ನು ನೋಡಿ ಶಿಖರಗಳೆಂಬ ತೋಳುಗಳನ್ನು ನೀಡಿ, ನದಿಗಳೆಂಬ ವ್ಯಾಜದಿಂದ ಕಣ್ಣೀರನ್ನು ಬಿಟ್ಟು ದುಃಖ ದಿಂದ ಗೋಳಿಡುವಂತೆ ತೋರಿದುವು. ಸೂರ್ಯನೂ ಕೂಡ ಸೀತಾಪಹಾರವನ್ನು ನೋಡಿ ಕೇವಲ ಕಾಂತಿಹೀನನಾಗಿ ದೈನ್ಯದಿಂದ ದುಃಖಿಸುವಂತೆ ಬಿಳುಪೇರಿದ ಬಿಂಬವುಳ್ಳವನಾಗಿದ್ದನು. ಈ ಸೀತಾಪಹಾರವನ್ನು ನೋಡುತ್ತಿದ್ದ ಸಮಸ್ತ ಭೂತಗಳೂ, ಅಲ್ಲಲ್ಲಿ ಗುಂಪುಗುಂಪಾಗಿ ಸೇರಿ "ಅಯ್ಯೋ! ಇನ್ನು ಲೋಕ ದಲ್ಲಿ ಧರ್ಮದಿಂದೇನು? ಸತ್ಯದಿಂದೇನು? ಋಜುಸ್ವಭಾವದಿಂದೇನು? ಲೋಕ ದಲ್ಲಿ ಇನ್ನು ದಯೆಯೆಂಬುದೆಲ್ಲಿರುವುದು! ಲೋಕನಾಥನಾದ ಶ್ರೀರಾಮನ ಪ್ರಿಯಪತ್ನಿಯನ್ನೇ ಈ ಕ್ರೂರರಾಕ್ಷಸನು ಕದ್ದೊಯ್ಯುತ್ತಿರುವನಲ್ಲಾ" ಎಂದು ಕೂಗಿ ಮೊರೆಯಿಡುತ್ತಿದ್ದುವು. ಅಲ್ಲಲ್ಲಿ ಜಿಂಕೆಯ ಮರಿಗಳು ಭಯದಿಂದ ನಡು ಗುತ್ತ, ಕಂದಿದ ಮುಖದಿಂದ ಕೂಡಿ ತಮ್ಮ ಚಂಚಲ ದೃಷ್ಟಿಗಳಿಂದ ಸೀತೆ ಯನ್ನು ನೋಡಿ ನೋಡಿ ಕಣ್ಣೀರುಬಿಟ್ಟು ರೋದನಮಾಡುತ್ತಿದ್ದುವು. ಅತ್ತ ಲಾಗಿ ಸಹಿಸಲಾರದ ದುಃಖದಿಂದ "ಹಾ! ರಾಮಾ! ಹಾ! ಲಕ್ಷ್ಮಣಾ!" ಎಂದು ಮಧುರಸ್ವರದಿಂದ ಕೂಗಿ ಗೋಳಿಡುತ್ತ, ಬಾರಿಬಾರಿಗೂ ಭೂಮಿ ಯನ್ನು ನೋಡುತ್ತಿದ್ದ ಆ ಸೀತೆಯನ್ನು ಕಂಡು ವನದೇವತೆಗಳೂ ದುಃಖದಿಂದ ಗಡಗಡನೆ ನಡಗುತ್ತಿದ್ದರು. ಕೆದರಿದ ಮುಂಗುರುಳುಗಳಿಂದಲೂ ಮಾಸಿದ ತಿಲಕದಿಂದಲೂ ಅತಿ ದೀನದೆಸೆಯನ್ನು ಹೊಂದಿ ಗೋಳಿಡುತ್ತಿರುವ ಸೀತೆ ಯನ್ನು, ಇದು ತನ್ನ ವಂಶನಾಶಕ್ಕೆ ಕಾರಣವೆಂಬುದನ್ನು ತಿಳಿಯದೆ ರಾವಣನು ನಿರ್ಭಯವಾಗಿ ಎತ್ತಿಕೊಂಡೇ ಹೋಗುತ್ತಿದ್ದನು. ಅಂದವಾದ ದಂತಪಙ್ಕ್ತಿ ಗಳಿಂದಲೂ, ಸ್ವಚ್ಛವಾದ ಮಂದಹಾಸದಿಂದಲೂ ಕೂಡಿದ್ದ ಆ ಸೀತೆಯು ಆಗ ತನ್ನನ್ನು ರಕ್ಷಿಸತಕ್ಕ ಬಂಧುಗಳಾರೂ ಇಲ್ಲದೆ, ರಾಮಲಕ್ಷ್ಮಣರನ್ನೂ ಕಾಣದೆ ಕಂದಿದ ಮುಖವುಳ್ಳವಳಾಗಿ ಭಯದಿಂದ ನಡುಗುತ್ತಿದ್ದಳು.

ಇಲ್ಲಿಗೆ ಐವತ್ತೆರಡನೆಯ ಸರ್ಗವು.

## ಸೀತೆಯು ರಾವಣನನ್ನು ಅನೇಕ ವಿಧದಲ್ಲಿ ನಿಂದಿಸಿದುದು

ಜನಕಪುತ್ರಿಯಾದ ಸೀತೆಯು, ತನ್ನನ್ನೆತ್ತಿಕೊಂಡು ಆಕಾಶದಲ್ಲಿ ಹೋಗುತ್ತಿರುವ ರಾವಣನನ್ನು ನೋಡಿ, ಭಯದಿಂದಲೂ, ದುಃಖದಿಂದಲೂ ತತ್ತರಿಸುತ್ತ, ನಾನಾವಿಧದಲ್ಲಿ ಪ್ರಲಾಪಿಸುತ್ತಿದ್ದಳು. ಹೀಗೆ ಎಡೆಬಿಡದೆ ಅಳುತ್ತಿದ್ದುದರಿಂದ ಅವಳ ಕಣ್ಣುಗಳೆರಡೂ ಕೆಂಡದಂತೆ ಕೆಂಪಾದುವು. ಕೊನೆಗೆ ಆಕೆಗೆ ಮಿತಿಮೀರಿದ ಕೋಪವೂ ಉಂಟಾಗಿ ಅದರಿಂದ ಅವಳ ಕಣ್ಣುಗಳು ಮತ್ತಷ್ಟು ಕೆಂಪಾದುವು. ಆಗ ರಾವಣನನ್ನು ನೋಡಿ "ಎಲೆ ರಾವಣಾ! ನಿನಗೇಕೆ ಈ ನೀಚಬುದ್ಧಿಯು ಹುಟ್ಟಿತು? ಯಾರೂ ಇಲ್ಲದ ಸಮಯವನ್ನು ನೋಡಿ ಹೆಂಗಸನ್ನು ಕದ್ದು ಓಡುತ್ತಿರುವೆಯಾ? ನಿನಗೆ ನಾಚಿಕೆಯಿಲ್ಲವೆ! ಎಲೆ ದುಷ್ಟಾತ್ಮನೆ! ನನ್ನ ಪ್ರಿಯಪತಿಯಾದ ವೀರನಾದ ಆ ರಾಮನ ಮುಂದೆ ನಿಲ್ಲುವುದಕ್ಕೆ ಹೆದರಿ, ಅವನಿಲ್ಲದ ಕಾಲದಲ್ಲಿ ನೀನು ಕಳ್ಳತನದಿಂದ ನನ್ನನ್ನು ಎತ್ತಿಕೊಂಡು ಹೋಗುವುದಕ್ಕಾಗಿ ಇಷ್ಟು ತಂತ್ರವನ್ನು ಮಾಡಿದೆಯಾ? ಮಾರೀಚನಿಗೆ ಮೃಗವೇಷವನ್ನು ಹಾಕಿ, ಅವನ ವಂಚನೆಯಿಂದ ರಾಮನನ್ನು ನನ್ನಿಂದಗಲಿಸಿ, ಶೂನ್ಯಾಶ್ರಮದಲ್ಲಿದ್ದ ನನ್ನನ್ನು ಕದ್ದುತರಬೇಕಾಯಿತೆ? ಛೀ! ಹೇಡಿಯೆ! ರಾಮನ ಭಯಕ್ಕಾಗಿಯೇ ನೀನು ಇಷ್ಟು ತಂತ್ರಗಳನ್ನು ಮಾಡಿರುವೆಯೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಗಂಡನಿಲ್ಲದ ವೇಳೆಯಲ್ಲಿ ಪರಸ್ತ್ರೀಯನ್ನು ಕದ್ದು ತರುವುದೊಂದು ಮಹಾ ವೀರ್ಯವೆ? ಅದೂ ಇರಲಿ! ನನ್ನನ್ನು ಕಾಪಾಡುವುದಕ್ಕಾಗಿ ಬಂದ ನನ್ನ ಮಾವನ ಸಖನಾದ ಈ ವೃದ್ಧ ಜಟಾಯುವನ್ನೂ ಕೊಂದೆಯಲ್ಲವೆ! ಈ ಮುದಿಹಕ್ಕಿಯನ್ನು ಕೊಂದುದೊಂದು ಮಹಾಶೌರ್ಯವೆ? ಎಲೆ ರಾಕ್ಷಸಾಧಮನೆ! ಆಃ! ನಿನ್ನ ವೀರ್ಯವನ್ನು ನಾನೇನೆಂದು ಹೇಳಲಿ! ಅಬಲೆಯಾದ ನನ್ನಮುಂದೆ ನಾನು ತ್ರಿಲೋಕಾಧೀಶ್ವರನಾದ ರಾವಣನೆಂದು ಹೆಮ್ಮೆಯನ್ನು ಹೇಳಿಕೊಂಡು ನನ್ನನ್ನು ಜಯಿಸಿ ತಂದೆಯಾ? ಛೀ! ಛೀ! ನೀಚನೆ! ಯಾರೂ ಇಲ್ಲದ ಸಮಯವನ್ನು ನೋಡಿ ಪರಸ್ತ್ರೀಯನ್ನು ಕದ್ದುತಂದೆಯಲ್ಲಾ! ಈ ನಿಂದಿತವಾದ ಕಾರ್ಯವನ್ನು ಮಾಡಿಯೂ ನಿನಗೆ ನಾಚಿಕೆಯಿಲ್ಲವೆ? ಮೊದಲೇ ಹೆಂಗಸು! ಅದರಲ್ಲಿಯೂ ಪರಸ್ತ್ರೀ!! ಅದರಮೇಲೆ ಯಾರೂ ಇಲ್ಲದ ವೇಳೆ!!! ಈಗ ಈ ಕೆಲಸವನ್ನು ಮಾಡುವುದು ನೀಚಕೃತ್ಯವೆಂದು ನಿನಗೆ ತೋರಲಿಲ್ಲವೆ? ಪರಸ್ತ್ರೀಯರನ್ನಪಹರಿಸುವುದಕ್ಕಿಂತಲೂ ಪರಮ ನೀಚಕೃತ್ಯವು ಬೇರೆ ಯಾವು

ದುಂಟು? ಆಹಹ! ಶೂರನೆಂದು ಹೆಮ್ಮೆಯನ್ನು ಕೊಚ್ಚಿಕೊಳ್ಳುತ್ತಿದ್ದ ನೀನು, ಹೀಗೆ ನಿಂದ್ಯವಾಗಿಯೂ, ಕ್ರೂರವಾಗಿಯೂ, ಅಧರ್ಮಹೇತುವಾಗಿಯೂ ಇರುವ ಈ ನೀಚಕಾರ್ಯವನ್ನು ಮಾಡಿದೆಯಾ! ಲೋಕದಲ್ಲಿ ನೀನು ಯಾರ ಬಾಯಿಗೆ ತಾನೇ ಬೀಳದಿರುವೆ! ಛೀ! ಪಾಪಿ! ನಿನ್ನ ಶೌರ್ಯವನ್ನು ಸುಡಬೇಕಲ್ಲವೆ? ನೀನು ನನ್ನಮುಂದೆ ಹೇಳಿಕೊಂಡ ಹೆಮ್ಮೆಯೆಲ್ಲವೂ ಈಗ ಏನಾಯಿತು? ಕುಲಾಪವಾದಕ್ಕೆ ಹೇತುವಾದ ಈ ನಿನ್ನ ನಡತೆಯನ್ನು ಸುಡಬೇಕು! ನೀನು ಹೀಗೆ ಓಡಿಹೋಗುತ್ತಿದ್ದರೆ ಯಾರೇನು ಮಾಡಬಲ್ಲರು? ಒಂದು ಮುಹೂರ್ತಮಾತ್ರದವರೆಗೆ ಇಲ್ಲಿಯೇ ನಿಂತು ನೋಡು. ಆಗ ನೀನು ಪ್ರಾಣ ದೊಡನೆ ಹಿಂತಿರುಗಿ ಹೋಗಲಾರೆ! ನೀನು ನಿನ್ನ ಸಮಸ್ತ ರಾಕ್ಷಸ ಸೈನ್ಯವನ್ನು ಕಟ್ಟಿಕೊಂಡು ಬಂದರೂ, ಆ ರಾಜಕುಮಾರರ ದೃಷ್ಟಿಗೆ ಬಿದ್ದರೆ ಒಂದು ಕ್ಷಣ ಮಾತ್ರವೂ ಬದುಕಲಾರೆ. ಎಲೆ ಪಾಪಿ! ಮೊದಲು ನೀನು ಆ ರಾಜಪುತ್ರರ ಬಾಣಗಳ ಸ್ಪರ್ಶಮಾತ್ರವನ್ನಾದರೂ ತಡೆಯಬಲ್ಲೆಯಾ? ಹಕ್ಕಿಗಳು ಕಾಡು ಗಿಚ್ಚಿನ ಜ್ವಾಲೆಗೆ ಸಿಕ್ಕಿ ಸಾಯುವಂತೆ ಕ್ಷಣಮಾತ್ರದಲ್ಲಿ, ನೀನು ಭಸ್ಮವಾಗಿ ಹೋಗುವೆ! ಎಲೆ ರಾವಣಾ! ನಿನಗೆ ಹಿತವನ್ನು ಕೋರಿ ಈಗ ನಾನು ಹೇಳುವ ಮಾತನ್ನು ಕೇಳು! ಒಳ್ಳೇ ಮಾತಿನಿಂದ ನನ್ನನ್ನು ಬಿಟ್ಟು ಕ್ಷೇಮ ದಿಂದಿರು! ನೀನು ನನ್ನನ್ನು ಹೀಗೆ ಭಂಗಪಡಿಸಿರುವುದನ್ನು, ನನ್ನ ಪತಿಯಾದ ರಾಮನು ಕೇಳಿದ ಪಕ್ಷದಲ್ಲಿ, ಆ ಕ್ಷಣವೇ ಅವನೂ, ಅವನ ತಮ್ಮನೂ ಸೇರಿ, ನಿನ್ನನ್ನು ಹುಟ್ಟಡಗಿಸದೆ ಬಿಡರು, ನನ್ನನ್ನು ನೀನು ಬಿಡದಿದ್ದರೆ ಅವರ ಕೈಯಿಂದ ನೀನು ಸಾಯುವುದೇ ನಿಜವು. ಎಲೆ ನೀಚನೆ! ಅದೂ ಹಾಗಿರಲಿ! ನೀನು ಯಾವ ಉದ್ದೇಶದಿಂದ ಹೀಗೆ ನನ್ನನ್ನು ಬಲಾತ್ಕರಿಸಿ ಎಳೆದುಕೊಂಡು ಹೋಗು ತ್ತಿರುವೆಯೋ, ಆ ಉದ್ದೇಶವು ಎಂದಿಗೂ ನಿನಗೆ ಸಫಲವಾಗಲಾರದು. ದೇವ ಸಮಾನನಾದ ನನ್ನ ಪತಿಯನ್ನು ಕಾಣದೆ, ಶತ್ರುಗಳ ಕೈಗೆ ಸಿಕ್ಕಿದಮೇಲೆ ಈ ಪ್ರಾಣವನ್ನಿಟ್ಟುಕೊಂಡಿರುವೆನೆ? ಮನುಷ್ಯನಿಗೆ ಮರಣಕಾಲವು ಬಂದೊದಗಿ ದಾಗ ಯಾವುದೊಂದೂ ತೋರುವುದಿಲ್ಲ. ವಿನಾಶಕಾಲಕ್ಕೆ ತಕ್ಕಂತೆ ವಿಪರೀತ ಬುದ್ಧಿಯೇ ಹುಟ್ಟುವುದೆಂಬುದು ನಿಜವು. ಅದರಂತೆಯೇ ನೀನೂ ಈಗ "ಮೇಲಾವುದು, ಪಥ್ಯವಾವುದು" ಎಂಬುದನ್ನು ತಿಳಿಯದೆ ಈ ವಿಪರೀತ ಕಾರ್ಯವನ್ನಾರಂಭಿಸಿರುವೆ. ಸಾಯುವವರಿಗೆ ಪಥ್ಯವಾವುದೋ ಅದು ರುಚಿಸು

ವುದಿಲ್ಲ. ಮುಖ್ಯವಾಗಿ ಈಗ ನಿನ್ನ ಕೊರಲಿಗೆ ಕಾಲಪಾಶವು ಸುತ್ತಿಕೊಂಡಿರುವುದು. ಅದರಿಂದಲೇ ನಾನು ಹೇಳತಕ್ಕ ಪಥ್ಯವೊಂದೂ ನಿನಗೆ ರುಚಿಸುವುದಿಲ್ಲ! ಎಷ್ಟೋ ಭಯಪಡಬೇಕಾದ ಸಂದರ್ಭದಲ್ಲಿಯೂ, ನೀನು ನಿರ್ಭಯವಾಗಿರುವುದರಿಂದ, ನಿನಗೆ ಮರಣವು ಸನ್ನಿಹಿತವೆಂಬುದರಲ್ಲಿ ಸಂದೇಹವಿಲ್ಲ. ಇನ್ನು ಶೀಘ್ರದಲ್ಲಿಯೇ ನೀನು ಚಿನ್ನದ ಮರಗಳನ್ನು ಕಾಣಬೇಕಾಗಿರುವುದು. ಇನ್ನು ಸ್ವಲ್ಪ ಕಾಲದೊಳಗಾಗಿಯೇ ರಕ್ತಪ್ರವಾಹದಿಂದ ತುಂಬಿದ ಭಯಂಕರವಾದ ವೈತರಣೀ ನದಿಯು ನಿನ್ನ ಕಣ್ಣಿಗೆ ಕಾಣುವುದು. ಕ್ಷಿಪ್ರದಲ್ಲಿಯೇ ನೀನು ಯಮಲೋಕದಲ್ಲಿ ಅಸಿಪತ್ರವೆಂಬ ಘೋರಾರಣ್ಯವನ್ನು ನೋಡುವೆ. ಕಾಸಿದ ಚಿನ್ನದ ಹೂಗಳಿಂದಲೂ, ವೈಡೂರ್ಯದ ಎಲೆಗಳಿಂದಲೂ, ಕಬ್ಬಿಣದ ಮುಳ್ಳುಗಳಿಂದಲೂ ನಿಬಿಡವಾದ ಮತ್ತು ಮಹಾಭಯಂಕರವಾದ ಶಾಲ್ಮಲಿಸ್ತಂಭವು, ಪರದಾರ ಸ್ಪರ್ಶಮಾಡಿದ ನಿನ್ನ ಆಲಿಂಗನಕ್ಕಾಗಿ ನರಕದಲ್ಲಿ ಸಿದ್ಧವಾಗಿರುವುದನ್ನೂ ನೀನು ಶೀಘ್ರದಲ್ಲಿಯೇ ನೋಡುವೆ! ಮಹಾತ್ಮನಾದ ಆ ರಾಮನ ವಿಷಯದಲ್ಲಿ ನೀನು ಹೀಗೆ ಅಪ್ರಿಯವನ್ನು ಮಾಡಿದಮೇಲೆ, ವಿಷಪಾನಮಾಡಿದವನಂತೆ ಇನ್ನು ನೀನು ಬಹುಕಾಲದವರೆಗೆ ಬದುಕುವುದೆಂದರೇನು? ಕಾಲಪಾಶವು ನಿನ್ನನ್ನು ಸುತ್ತಿಕೊಂಡಿರುವುದು. ಅದನ್ನು ಬಿಡಿಸುವುದಕ್ಕೆ ಈಗ ಯಾರಿಂದಲೂ ಸಾಧ್ಯವಿಲ್ಲ. ನೀನು ಇನ್ನೆಲ್ಲಿ ಹೋದರೆ ತಾನೇ ನಿನಗೆ ಆ ರಾಮನ ಭಯವು ತಪ್ಪಿ ಸುಖವುಂಟಾಗುವುದೆಂದೆಣಿಸಿರುವೆ? ಯಾವನು ಪಕ್ಕದಲ್ಲಿದ್ದ ತಮ್ಮನನ್ನೂ ಸಹಾಯಕ್ಕೆ ಕರೆಯದೆ, ತಾನೊಬ್ಬನೇ ರಣರಂಗದಲ್ಲಿ ನಿಂತು, ಎದೆಹಾರುವಷ್ಟರಲ್ಲಿ ಹದಿನಾಲ್ಕುಸಾವಿರಮಂದಿ ಮಹಾರಾಕ್ಷಸರನ್ನು ಹುಟ್ಟಡಗಿಸಿಬಿಟ್ಟನೋ, ಅಂತಹ ಮಹಾವೀರನಾದ, ಸರ್ವಾಸ್ತ್ರ ವಿಶಾರದನಾದ, ಬಲಾಢ್ಯನಾದ ರಾಮನು ನಿನ್ನನ್ನು ಸುಮ್ಮನೆ ಬಿಡುವನೇ? ಇದರಮೇಲೆ ಆತನಿಗೆ ಪ್ರಾಣದಂತಿರುವ ನನ್ನನ್ನು ಕದ್ದು ತಂದಿರುವ ನೀನು ಆತನ ತೀಕ್ಷ್ಣ ಬಾಣಗಳಿಗೆ ತಪ್ಪಿಸಿಕೊಂಡು ಬದುಕಿಬರುವುದೆಂದರೇನು?" ಎಂದಳು. ಹೀಗೆ ರಾವಣನ ತೊಡೆಯಲ್ಲಿ ಸಿಕ್ಕಿಬಿದ್ದ ಸೀತೆಯು, ಭಯದಿಂದಲೂ, ದುಃಖದಿಂದಲೂ, ಮೈತಿಳಿಯದವಳಾಗಿ ಆ ರಾವಣನನ್ನು ಇನ್ನೂ ಅನೇಕ ಪರುಷವಾಕ್ಯಗಳಿಂದ ನಿಂದಿಸುತ್ತಾ, ದುಃಖದಿಂದ ಪ್ರಲಾಪಿಸುತ್ತಿದ್ದಳು. ಸೀತೆಯು ಪರಮದುಃಖಿತೆಯಾಗಿ ನಾನಾವಿಧದಲ್ಲಿ ಪ್ರಲಾಪಿಸಿ ಹೀಗೆ ತನ್ನನ್ನು ನಿಂದಿಸುತ್ತಿದ್ದರೂ, ರಾವಣನು

ಅದೊಂದನ್ನೂ ಲಕ್ಷ್ಯಮಾಡಲಿಲ್ಲ. ಸಹಿಸಲಾರದ ಸಂಕಟದಿಂದ ಗಡಗಡನೆ ನಡುಗಿ, ಅತ್ತಿತ್ತ ಹೊರಳುತ್ತಿರುವ ಆ ಸೀತೆಯನ್ನು ವೇಗದಿಂದ ಎತ್ತಿಕೊಂಡೇ ಹೋಗುತ್ತಿದ್ದನು.

ಇಲ್ಲಿಗೆ ಐವತ್ತುಮೂರನೆಯ ಸರ್ಗವು.

---

ಸೀತೆಯು ತನ್ನ ಕೆಲವು ಆಭರಣಗಳನ್ನು ಸೆರಗಿನಲ್ಲಿ ಕಟ್ಟಿ, ದಾರಿಯಲ್ಲಿ ಗೋಚರಿಸಿದ ಕೆಲವು ವಾನರರ ಮುಂದೆ ರಾವಣನಿಗೆ ತಿಳಿಯದಂತೆ ಬಿಸುಟುದು.

ಇತ್ತಲಾಗಿ ರಾವಣನು ರಾಮನನ್ನು ಕೊಲ್ಲಬೇಕೆಂದು ಕೆಲವು ರಾಕ್ಷಸರನ್ನು ಜನಸ್ಥಾನಕ್ಕೆ ಕಳುಹಿಸಿದುದು.

ರಾವಣನು ಅಂತರಿಕ್ಷದಲ್ಲಿ ವೇಗದಿಂದ ಸೀತೆಯನ್ನೆತ್ತಿಕೊಂಡು ಹೋಗುತ್ತಿರುವಾಗ, ಸೀತೆಯು ತನ್ನನ್ನು ಕಾಪಾಡುವುದಕ್ಕೆ ಯಾರೂ ದಿಕ್ಕಿಲ್ಲದೆ ನಾಲ್ಕು ಕಡೆಗೂ ದೃಷ್ಟಿಯಿಟ್ಟು ದೈನ್ಯದಿಂದ ನೋಡುತ್ತಿದ್ದಳು. ಆಗ ಒಂದಾನೊಂದು ಪರ್ವತದ ಮೇಲೆ ಏಳುಮಂದಿ ವಾನರಶ್ರೇಷ್ಠರನ್ನು ಕಂಡಳು. ಅವರಾದರೂ ರಾಮನಿಗೆ ಈ ವೃತ್ತಾಂತವನ್ನು ತಿಳಿಸಲೆಂದು ತನ್ನ ಆಭರಣಗಳಲ್ಲಿ ಕೆಲವನ್ನು ತೆಗೆದು, ಸುವರ್ಣಚ್ಛಾಯೆಯುಳ್ಳ ತನ್ನ ಸೀರೆಯ ಸೆರಗಿನಲ್ಲಿ ಆಭರಣಗಳನ್ನು ಕಟ್ಟಿ ಕೆಳಕ್ಕೆ ಹಾಕಿದುದನ್ನು, ಅವಳನ್ನೆತ್ತಿಕೊಂಡುಹೋಗುವ ಸಂಭ್ರಮದಲ್ಲಿದ್ದ ರಾವಣನು ಕಾಣಲಿಲ್ಲ. ಈ ಆಭರಣದ ಗಂಟು ಬಿದ್ದೊಡನೆಯೇ ಅಲ್ಲಿದ್ದ ಕಪಿಶ್ರೇಷ್ಠರು ತಲೆಯೆತ್ತಿ ಮೇಲೆ ನೋಡಿ, ದುಃಖದಿಂದ ಕೂಗಿಡುತ್ತಿರುವ ಈ ಸೀತೆಯನ್ನು ಕಂಡು, ಎವೆಯಿಲ್ಲದವರಂತೆ ಸಂಭ್ರಾಂತರಾಗಿ ನಿಂತಿದ್ದರು. ಅತ್ತಲಾಗಿ ರಾವಣನು ವೇಗದಿಂದ ಪಂಪಾಸರಸ್ಸನ್ನು ದಾಟಿ, ಸೀತೆಯು ಎಷ್ಟು ವಿಧದಲ್ಲಿ ಪ್ರಲಾಪಿಸುತ್ತಿದ್ದರೂ ಬಿಡದೆ, ಅತ್ತಿತ್ತ ತಿರುಗಿ ನೋಡದೆ, ಲಂಕೆಗಭಿಮುಖನಾಗಿ ಹೊರಟನು. ಆ ಸೀತೆಯೇ ತನಗೆ ಮೃತ್ಯುಹೇತುವೆಂಬುದನ್ನರಿಯದೆ, ಕ್ರೂರ ಸರ್ಪವನ್ನು ತೊಡೆಯಲ್ಲಿಟ್ಟುಕೊಂಡಂತೆ ಆಕೆಯನ್ನು ತೊಡೆಯ ಮೇಲಿಟ್ಟು

ಕೊಂಡು, ಬಿಲ್ಲಿನಿಂದ ಹೊರಟ ಬಾಣದಂತೆ ಮಹಾವೇಗದಿಂದ ಅನೇಕ ನದಿಗಳನ್ನೂ, ಪರ್ವತಗಳನ್ನೂ, ವನಗಳನ್ನೂ, ಸರಸ್ಸುಗಳನ್ನೂ ದಾಟಿ, ಅಂತರಿಕ್ಷದಲ್ಲಿಯೇ ಹಾರಿಬರುತ್ತಿದ್ದನು. ತಿಮಿತಿಮಿಂಗಿಲಾದಿಗಳಿಗೂ, ಮೊಸಳೆಗಳಿಗೂ ನಿತ್ಯನಿವಾಸವಾದ ಸಮುದ್ರತೀರಕ್ಕೆ ಬಂದು ನಿಮಿಷಮಾತ್ರದಲ್ಲಿ ನದನದೀಪತಿಯಾದ ಆ ಸಮುದ್ರವನ್ನು ದಾಟಿಬಿಟ್ಟನು. ರಾವಣನು ಸೀತೆಯನ್ನೆತ್ತಿಕೊಂಡು ವೇಗದಿಂದ ಮೇಲೆ ಹೋಗುತ್ತಿರುವಾಗ ಅವನನ್ನು ನೋಡಿ ಸಮುದ್ರರಾಜನೂ ಕೂಡ ಭಯದಿಂದ ಅಲೆಯಡಗಿ ಸ್ತಬ್ಧನಾದನು. ಮೀನು, ಹಾವು ಮೊದಲಾದ ಜಲಚರಪ್ರಾಣಿಗಳೂ ಮೇಲಕ್ಕೆ ತಲೆಯೆತ್ತದೆ ಒಳಗಡಗಿಕೊಂಡವು. ಆಕಾಶದಲ್ಲಿ ಈ ಅತ್ಯಾಹಿತವನ್ನು ನೋಡುತ್ತಿದ್ದ ಚಾರಣರೂ, ಸಿದ್ಧರೂ, "ಇಲ್ಲಿಗೆ ರಾವಣನ ಕಾರ್ಯವು ಮುಗಿಯಿತು!" ಎಂದು ಸಂತೋಷದಿಂದ ಕೂಗಿಡುತ್ತಿದ್ದರು. ರಾವಣನು ಭಯದಿಂದ ತತ್ತ್ರಳಿಸುತ್ತಿರುವ ಆ ಸೀತೆಯನ್ನು, ಮೃತ್ಯುದೇವತೆಯನ್ನು ಮನೆಗೆ ತಂದಂತೆ ಲಂಕಾಪಟ್ಟಣಕ್ಕೂ ತಂದುಬಿಟ್ಟನು. ಬೇರೆಬೇರೆಯಾದ ಅನೇಕ ರಾಜಮಾರ್ಗಗಳಿಂದ ಕೂಡಿದ ಲಂಕೆಯನ್ನು ಸೇರಿ, ಅಲ್ಲಿ ಅನೇಕ ಜನಸಮೂಹದಿಂದ ನಿಬಿಡವಾದ ತನ್ನ ಅಂತಃಪುರಕ್ಕೆ ಪ್ರವೇಶಿಸಿ, ಅಲ್ಲಿ *ಮಯನು ಮಾಯಾಮಯಿಯಾದ ಸ್ವಯಂಪ್ರಭೆಯನ್ನು ಬಿಲದಲ್ಲಿ ಬಚ್ಚಿಟ್ಟಂತೆ, ದುಃಖದಿಂದ ಮೈಮರೆತಿರುವ ಸೀತೆಯನ್ನು ಆ ಅಂತಃಪುರದಲ್ಲಿರಿಸಿಬಿಟ್ಟನು. ಆಮೇಲೆ ಆ ರಾಕ್ಷಸೇಂದ್ರನು ಪಿಶಾಚಿಗಳಂತೆ ಭಯಂಕರಾಕಾರವುಳ್ಳ ಕೆಲವು ರಾಕ್ಷಸಸ್ತ್ರೀಯರನ್ನು ಕರೆದು, "ಎಲೆ ರಾಕ್ಷಸಿಯರೆ! ಇದೋ! ಈ ಸೀತೆಗೆ ನೀವು ಕಾವಲಾಗಿರಬೇಕು! ನನ್ನ ಅಪ್ಪಣೆಯಿಲ್ಲದೆ ಯಾವ ಪುರುಷನಾಗಲಿ,

---

* ಇಲ್ಲಿ "ತತ್ರ ತಾಮಸಿತಾಪಾಂಗಾಂ ಶೋಕಮೋಹಪರಾಯಣಾಂ । ನಿದಧೇ ರಾವಣಸ್ಸೀತಾಂ ಮಯೋಮಾಯಾಮಿವ ಸ್ತ್ರಿಯಂ ॥" ಎಂದು ಮೂಲವು. "ಮಯೋ ಮಾಯಾಮಿವಾಸುರೀಂ" ಎಂದು ತಿಲಕವ್ಯಾಖ್ಯಾನದಲ್ಲಿ ಪಾಠಾಂತರವು ಕಾಣುವುದು. ಅಸುರಮಾಯೆಯನ್ನು ಮಯನು ತಂದಿಟ್ಟಂತೆ ರಾವಣನು ಸೀತೆಯನ್ನು ತಂದಿಟ್ಟುದಾಗಿ ಇದರ ಭಾವವು. ಇದರಿಂದ ನಿಜವಾದ ಸೀತೆಯು ಲಂಕೆಗೆ ಬರಲಿಲ್ಲವೆಂದೂ, ಮಾಯಾ ಸೀತೆಯನ್ನೇ ರಾವಣನು ಅಜ್ಞಾನದಿಂದ ತಂದುಬಿಟ್ಟನೆಂದೂ ಧ್ವನಿತವಾಗುವುದು. ಮುಖ್ಯ ಸೀತೆಯು ಮೊದಲೇ ಅಗ್ನಿಪ್ರವೇಶವನ್ನು ಮಾಡಿದುದಾಗಿಯೂ ಧ್ವನಿತವು. ಇವಳು ಮಾಯಾಸ್ವರೂಪಿಣಿಯಾದುದರಿಂದಲೇ ರಾವಣನು ಮುಟ್ಟುವುದಕ್ಕೂ, ಅವನು ಎತ್ತಿಕೊಂಡು ಬರುವುದಕ್ಕೂ ಸಾಧ್ಯವಾಯಿತೆಂದು ಗ್ರಾಹ್ಯವು.

ಯಾವ ಸ್ತ್ರೀಯಾಗಲಿ ಈಕೆಯನ್ನು ನೋಡಕೂಡದು! ಇವಳು ಮುತ್ತುಗಳನ್ನಾಗಲಿ, ರತ್ನಗಳನ್ನಾಗಲಿ, ಸುವರ್ಣವನ್ನಾಗಲಿ, ವಸ್ತ್ರಾಭರಣಗಳನ್ನಾಗಲಿ ಯಾವಯಾವುದನ್ನು ಅಪೇಕ್ಷಿಸುವಳೋ, ಅದೆಲ್ಲವನ್ನೂ ಆಯಾ ಕ್ಷಣವೇ ತಂದುಕೊಡುತ್ತ, ನನ್ನಂತೆಯೇ ಇವಳನ್ನೂ ಭಾವಿಸಿ, ನೀವೆಲ್ಲರೂ ಇವಳ ಮನೋನುವರ್ತಿನಿಯರಾಗಿ ನಡೆಯಬೇಕು. ನಿಮ್ಮಲ್ಲಿ ಯಾವಳಾದರೂ ತಿಳಿದೋ ಅಥವಾ ತಿಳಿಯದೆಯೋ ಇವಳಿಗೆ ಲೇಶಮಾತ್ರವಾದರೂ ಅಪ್ರಿಯವನ್ನುಂಟುಮಾಡುವ ಮಾತುಗಳನ್ನಾಡಿದ ಪಕ್ಷದಲ್ಲಿ, ಅಂತವಳನ್ನು ▪ ಕ್ಷಣವೇ ಕೊಂದುಬಿಡುವೆನು" ಎಂದನು. ಮಹಾಪರಾಕ್ರಮಿಯಾದ ರಾವಣನು, ಹೀಗೆಂದು ರಾಕ್ಷಸಿಯರಿಗೆ ಕಠಿನವಾದ ಶಾಸನವನ್ನು ಮಾಡಿ, ಆ ಅಂತಃಪುರದಿಂದ ಹೊರಟು, ಮುಂದೆ ಮಾಡಬೇಕಾದ ಕಾರ್ಯವೇನೆಂಬುದನ್ನು ಮನಸ್ಸಿನಲ್ಲಿ ಸ್ವಲ್ಪಹೊತ್ತಿನವರೆಗೆ ಆಲೋಚಿಸಿ, ಕೊನೆಗೆ ಮಹಾವೀರ್ಯವುಳ್ಳ ಎಂಟುಮಂದಿ ರಾಕ್ಷಸರನ್ನು ಕರೆಸಿದನು. ಬ್ರಹ್ಮನ ವರಬಲದಿಂದ ಮದೋನ್ಮತ್ತನಾಗಿ ಮೈಮರೆತಿರುವ ಆ ರಾವಣನು, ಮಾಂಸಾಹಾರಿಗಳಾದ ಆ ಎಂಟುಮಂದಿ ರಾಕ್ಷಸರನ್ನೂ ನೋಡಿ ಅವರಿಗೆ ಪ್ರೋತ್ಸಾಹವನ್ನು ಹುಟ್ಟಿಸುವುದಕ್ಕಾಗಿ ಮೊದಲು ಅವರ ಬಲಪರಾಕ್ರಮಗಳನ್ನು ಚೆನ್ನಾಗಿ ಹೊಗಳಿದನು. ಆಮೇಲೆ ಅವರನ್ನು ಕುರಿತು "ಎಲೈ ರಾಕ್ಷಸವೀರರೆ! ನೀವು ನಿಮ್ಮ ಸಮಸ್ತಾಯುಧಗಳನ್ನೂ ಹಿಡಿದು ಈಗಲೇ ಇಲ್ಲಿಂದ ಹೊರಡಬೇಕು. ಪೂರ್ವದಲ್ಲಿ ಖರನಿಗೆ ವಾಸಸ್ಥಾನವಾಗಿದ್ದ ನಮ್ಮ ಜನಸ್ಥಾನವನ್ನು ಬಲ್ಲಿರಷ್ಟೆ? ಈಗ ಆ ಪ್ರದೇಶವೆಲ್ಲವೂ ಹಾಳು ಬಿದ್ದಿರುವುದು! ನೀವು ಇಲ್ಲಿಂದ ನೆಟ್ಟನೆ ಅಲ್ಲಿಗೆ ಹೋಗಿ, ರಾಕ್ಷಸಶೂನ್ಯವಾದ ಆ ಪ್ರದೇಶದಲ್ಲಿಯೇ ನಿಮ್ಮ ಬಿಡಾರವನ್ನಿಳಿಸಿರಿ. ಅಲ್ಲಿ ನೀವು ನಿಶ್ಶೇಷವಾಗಿ ಭೀತಿಯನ್ನು ಬಿಟ್ಟು ನಿಮ್ಮ ಪೌರುಷವನ್ನಾಶ್ರಯಿಸಿ, ಆ ಜನಸ್ಥಾನದ ಸುತ್ತಲೂ ಎಚ್ಚರಿಕೆಯಿಂದ ಕಾಯುತ್ತಿರಿ. ನಾನು ಹಿಂದೆ ಅನೇಕ ಸೈನ್ಯಗಳ ಸಹಾಯದೊಡನೆ ಖರದೂಷಣರೆಂಬ ವೀರರಾಕ್ಷಸರಿಬ್ಬರನ್ನು ಅಲ್ಲಿ ಕಾವಲಿರಿಸಿದ್ದೆನಷ್ಟೆ? ರಾಮನು ಅವರಿಬ್ಬರನ್ನೂ ಅವರ ಸೇನೆಯೊಡನೆ ಯುದ್ಧದಲ್ಲಿ ಕೊಂದುಬಿಟ್ಟನು. ಅದಕ್ಕಾಗಿ ಈಗ ನನಗೆ ಸಹಿಸಲಾರದ ಕೋಪವುಂಟಾಗಿರುವುದು. ಆ ಕೋಪವು ನನ್ನ ಧೈರ್ಯವನ್ನೂ ಮೀರಿಹೋಗಿರುವುದು. ಆ ಕೋಪಾವೇಶದಲ್ಲಿ ನನಗೆ ಮೈಮೇಲೆ ಪ್ರಜ್ಞೆಯಿಲ್ಲದಂತಾಗಿರುವುದು. ಈಗ ನನಗೆ ಆ ರಾಮನೊಡನೆ

ಮಹಾವೈರವೂ ಬಳೆದುಹೋಗಿರುವುದು. ಅವನಮೇಲೆ ನನ್ನ ಹಗೆಯನ್ನು ತೀರಿಸಿಕೊಳ್ಳಬೇಕೆಂದಿರುವೆನು. ಆತನನ್ನು ಕೊಂದ ಹೊರತು ನನಗೆ ನಿದ್ರೆಯೇ ಹಿಡಿಯುವುದಿಲ್ಲ. ಆದುದರಿಂದಲೇ ನೀವು ಬಹಳ ಎಚ್ಚರಿಕೆಯಿಂದ ನಿಮ್ಮ ಪೌರುಷವನ್ನುಪಯೋಗಿಸಬೇಕು. ಮುಖ್ಯವಾಗಿ ಖರದೂಷಣರನ್ನು ಕೊಂದ ಆ ರಾಮನನ್ನು ಕೊಂದುಬಂದರೆ, ಬಡವನಿಗೆ ಭಾಗ್ಯವು ಸಿಕ್ಕಿದಂತೆ ನನಗೆ ಪರಮಸಂತೋಷವುಂಟಾಗುವುದು. ಮತ್ತು ಎಲೈ ರಾಕ್ಷಸರೆ! ನೀವು ಆ ಜನಸ್ಥಾನದಲ್ಲಿದ್ದುಕೊಂಡು, ಆ ರಾಮನ ವಿಷಯವಾಗಿ ನಿಮಗೆ ತಿಳಿದ ಸಂಗತಿಗಳೆಲ್ಲವನ್ನೂ ಯಥಾವತ್ತಾಗಿ ಆಗಾಗ ನನಗೆ ತಿಳಿಸುತ್ತಿರಬೇಕು. ನೀವು ಅಲ್ಲಿಗೆ ಹೋಗುವಾಗಲೂ ಬಹಳ ಎಚ್ಚರಿಕೆಯಿಂದಲೇ ಹೋಗಬೇಕು. ನಿಮಿಷಮಾತ್ರವೂ ಮೈಮರೆತಿರಬಾರದು. ಆ ರಾಮನನ್ನು ಕೊಲ್ಲುವುದಕ್ಕೆ ನೀವು ಎಡೆಬಿಡದೆ ಪ್ರಯತ್ನವನ್ನು ನಡೆಸುತ್ತಾ, ತಕ್ಕ ಸಮಯವನ್ನು ನಿರೀಕ್ಷಿಸುತ್ತಿರಬೇಕು. ಎಲೈ ವೀರರೆ! ನಾನು ಹೀಗೆ ಹೇಳಿದೆನೆಂದು ನೀವು ಹೆದರಬೇಡಿ. ಅನೇಕಾವರ್ತಿ ನಿಮ್ಮ ಬಲವನ್ನು ನಾನು ಯುದ್ಧರಂಗಗಳಲ್ಲಿ ನೋಡಿರುವೆನು. ನೀವು ಎಣೆಯಿಲ್ಲದ ಪರಾಕ್ರಮವುಳ್ಳವರೆಂದು ನನಗೆ ಚೆನ್ನಾಗಿ ನಂಬಿಕೆಯು ಹುಟ್ಟಿರುವುದರಿಂದಲೇ ಈ ಕಾರ್ಯಕ್ಕೆ ನಿಮ್ಮನ್ನು ನಿಯಮಿಸಿದೆನು" ಎಂದನು ಹೀಗೆ ರಾವಣನು ಸಾರವುಳ್ಳ ಪ್ರಿಯವಾಕ್ಯಗಳಿಂದ ತಮ್ಮನ್ನು ಪ್ರೋತ್ಸಾಹಿಸಲು, ಆ ಎಂಟುಮಂದಿ ರಾಕ್ಷಸರೂ, ಉತ್ಸಾಹದಿಂದ ಆತನಿಗೆ ನಮಸ್ಕರಿಸಿ, ಆಗಲೇ ಲಂಕೆಯನ್ನು ಬಿಟ್ಟು, ಎಲ್ಲರೂ ಒಂದಾಗಿ ಹೊರಟು, ಯಾರಿಗೂ ಕಾಣದಂತೆ ಜನಸ್ಥಾನವನ್ನು ಕುರಿತು ಪ್ರಯಾಣಮಾಡಿದರು. ರಾವಣನಾದರೋ [1]ಸಂತೋಷದಿಂದ ಮೈತಿಳಿಯದವನಾಗಿ, ರಾಮನೊಡನೆ ತನಗೆ ಮಹಾವೈರವು ಬಳೆದುಹೋಗಿರುವುದರಿಂದ ತನಗೆ ಕೊನೆಗಾಲವು ಸಮೀಪಿಸಿದ್ದರೂ, ಅಜ್ಞಾನದಿಂದ ಅದನ್ನು ತಿಳಿಯದೆ ಸಂತೋಷದಿಂದಲೇ ಇದ್ದನು.

ಇಲ್ಲಿಗೆ ಐವತ್ತುನಾಲ್ಕನೆಯ ಸರ್ಗವು.

---

1. ಇಲ್ಲಿ "ಸುಸಂಪ್ರಹೃಷ್ಟಃ" ಎಂದಿದೆ. ರಾವಣನಿಗೆ ಅಷ್ಟು ಸಂತೋಷಕಾರಣವೇನೆಂದರೆ, ಸೀತಾಪಹರಣದ್ವಾರದಿಂದ ತನಗೆ ರಾಮನ ಕೈಯಿಂದ ಮರಣವುಂಟಾಗಿ ರಾಕ್ಷಸಜನ್ಮ ವಿಮೋಚನವಾಗುವುದೆಂದು ಸಂತೋಷಿಸಿದುದಾಗಿ ಗ್ರಾಹ್ಯವು.

ರಾವಣನು ಸೀತೆಗೆ ತನ್ನ ಭೋಗಸಾಧನಗಳನ್ನು ತೋರಿಸಿ ಆಸೆ ಹುಟ್ಟಿಸಿದುದು.

ಹೀಗೆ ರಾವಣನು ಮಹಾಬಲಾಢ್ಯರಾದ ಆ ಎಂಟುಮಂದಿ ರಾಕ್ಷಸರನ್ನೂ ಜನಸ್ಥಾನಕ್ಕೆ ಕಳುಹಿಸಿದಮೇಲೆ, ತನ್ನ ಅಜ್ಞಾನದಿಂದ ಆಗ ತಾನು ಕೃತಕೃತ್ಯನಾದಂತೆಯೇ ಮನಸ್ಸಿನಲ್ಲಿ ಹಿಗ್ಗುತ್ತಿದ್ದನು. ಮತ್ತು ಕಾಮಬಾಣಪೀಡಿತನಾಗಿ ಯಾವಾಗಲೂ ಸೀತೆಯನ್ನೇ ಚಿಂತಿಸುತ್ತಿದ್ದನು. ಕೊನೆಗೆ ಆ ಸೀತೆಯನ್ನು ನೋಡಿಬರುವುದಕ್ಕಾಗಿ ಆತುರದಿಂದ ಅಂತಃಪುರಕ್ಕೆ ಬಂದನು. ಆ ಅಂತಃಪುರದೊಳಗೆ ಪ್ರವೇಶಿಸಿ, ಅಲ್ಲಿ ಅನೇಕ ಘೋರರಾಕ್ಷಸಿಯರ ನಡುವೆ ದುಃಖದಿಂದ ಕಣ್ಣೀರುಬಿಡುತ್ತ ಸಂಕಟದಿಂದ ತತ್ತಳಿಸುತ್ತಿರುವ ಸೀತೆಯನ್ನು ನೋಡಿದನು. ನಾಲ್ಕುಕಡೆಗಳಿಂದಲೂ ಬಂದು ಅಪ್ಪಳಿಸುತ್ತಿರುವ ಬಿರುಗಾಳಿಯ ಬಡಿತಕ್ಕೆ ಸಿಕ್ಕಿ, ಸಮುದ್ರದಲ್ಲಿ ಮುಳುಗಿಹೋಗುತ್ತಿರುವ ಹಡಗಿನಂತೆಯೂ, ಹಿಂದಿನಿಂದ ತಪ್ಪಿಬಂದು ಬೇಟೆನಾಯಿಗಳ ನಡುವೆ ಸಿಕ್ಕಿಬಿದ್ದ ಹೆಣ್ಣುಜಿಂಕೆಯಂತೆಯೂ, ಅನೇಕ ಘೋರರಾಕ್ಷಸಿಯರ ನಡುವೆ ದೈನ್ಯದಿಂದ ತಲೆಯನ್ನು ತಗ್ಗಿಸಿಕೊಂಡು ಕುಳಿತಿರುವ ಆ ಸೀತೆಯ ಸಮೀಪಕ್ಕೆ ಬಂದು, ದುಃಖದಿಂದ ಮೈಮರೆತಿರುವ ಆ ಸೀತೆಯನ್ನು ಬಲಾತ್ಕಾರದಿಂದ ಕರೆದುಕೊಂಡು ಹೋಗಿ, ಅವಳಿಗೆ ಇಂದ್ರಭವನದಂತಿದ್ದ ತನ್ನ ಅರಮನೆಯೆಲ್ಲವನ್ನೂ ತೋರಿಸಿದನು. ಅಲ್ಲಲ್ಲಿ ಸಾವಿರಾರು ಮಂದಿ ಸ್ತ್ರೀಯರಿಂದ ನಿಬಿಡವಾಗಿಯೂ, ಬಗೆಬಗೆಯ ಪಕ್ಷಿಸಮೂಹದಿಂದ ನೇತ್ರಾನಂದಕರವಾಗಿಯೂ, ನವರತ್ನಖಚಿತವಾಗಿಯೂ ಇದ್ದ ಉಪ್ಪರಿಗೆಗಳನ್ನೂ, ಮೇಲುಮನೆಗಳನ್ನೂ ಅವಳಿಗೆ ತೋರಿಸಿದನು. ಅಲ್ಲಲ್ಲಿ ನೋಡುವವರ ಕಣ್ಣುಗಳನ್ನೂ ಮನಸ್ಸನ್ನೂ ಆಕರ್ಷಿಸುವಂತೆ ದಂತದ ಕೆಲಸಗಳಿಂದಲೂ, ಚಿನ್ನಬೆಳ್ಳಿಯ ಕೆಲಸಗಳಿಂದಲೂ, ಸ್ಫಟಿಕದ ಕೆಲಸಗಳಿಂದಲೂ, ವಜ್ರವೈಡೂರ್ಯಾದಿ ನವರತ್ನದ ಕುಸುರಿಗಳಿಂದಲೂ ಮಾಡಿರುವ ಚಿತ್ರವಿಚಿತ್ರವಾದ ಕಂಬಗಳನ್ನು ತೋರಿಸಿದನು. ಅಲ್ಲಿಂದ ಮುಂದೆ ದಿವ್ಯದುಂದುಭಿಧ್ವನಿಗಳಿಂದ ಕೂಡಿದ ಚಿನ್ನದ ಬಾಗಿಲುಳ್ಳ ಒಂದು ಸ್ವರ್ಣಸೋಪಾನದ ಬಳಿಗೆ ಬಂದು, ಆ ಚಿನ್ನದ ಮೆಟ್ಟಲುಗಳ ಮೇಲೆ ಸೀತೆಯನ್ನೂ ನಡೆಸಿಕೊಂಡು ತಾನೂ ಮೇಲೇರಿದನು. ಅಲ್ಲಿ ದಂತದಿಂದಲೂ ಚಿನ್ನ ಬೆಳ್ಳಿಗಳಿಂದಲೂ ರಚಿತವಾಗಿ ಚಿತ್ರವಿಚಿತ್ರಗಳಾದ ಗವಾಕ್ಷಗಳುಳ್ಳ ಮೇಲುಮನೆಯ ಸಾಲುಗಳನ್ನು ತೋರಿಸಿ

ದನು. ನವರತ್ನಖಚಿತವಾಗಿ ಅತಿ ಮನೋಹರಗಳಾದ ಆ ಗವಾಕ್ಷಗಳ ದಾರಿಯಿಂದ ಅಲ್ಲಲ್ಲಿ ರತ್ನಖಚಿತವಾದ ತನ್ನ ಅರಮನೆಯ ನೆಲಗಟ್ಟುಗಳನ್ನು ಸುತ್ತಲೂ ಆ ಸೀತೆಗೆ ತೋರಿಸುತ್ತ ಬಂದನು. ಅಲ್ಲಿಂದ ಮುಂದೆ ಮನೆಯ ಹಿಂಭಾಗದಲ್ಲಿ ಬೇರೊಂದು ರತ್ನಸೋಪಾನದಿಂದ ಸೀತೆಯನ್ನಿಳಿಸಿ, ತನ್ನ ವಿಹಾರೋದ್ಯಾನಕ್ಕೆ ಕರೆತಂದನು. ಅಲ್ಲಿಯೂ ದುಃಖಪರಾಯಣೆಯಾದ ಆ ಸೀತೆಗೆ ನಡೆಬಾವಿಗಳನ್ನೂ, ಕಮಲಸರೋವರಗಳನ್ನೂ, ಆ ಸರೋವರದ ಸುತ್ತಲೂ ಬೆಳೆಯಿಸಿದ ಬಗೆಬಗೆಯ ಮರಗಳನ್ನೂ ತೋರಿಸಿದನು. ಹೀಗೆ ರಾವಣನು ಸೀತೆಯ ಮನಸ್ಸೆಳೆಯುವುದಕ್ಕಾಗಿ ತನ್ನ ಅರಮನೆಯ ಸಮಸ್ತ ಭಾಗಗಳನ್ನೂ ಸಮಸ್ತ ಸನ್ನಿವೇಶಗಳನ್ನೂ ತೋರಿಸಿ, ಕೊನೆಗೆ ತನ್ನ ಬಂಡಾರವನ್ನೂ ತೋರಿಸಿದನು. ತನ್ನ ಆಯುಧಶಾಲೆಯನ್ನು ತೋರಿಸಿದನು, ತನ್ನ ಸಮಸ್ತ ವೈಭವಗಳನ್ನೂ ತೋರಿಸಿಬಿಟ್ಟನು. ಏನಾದರೇನು ! ಸೀತೆಯು ಪಾಪಿಯಾದ ಆ ರಾವಣನ ನಿರ್ಬಂಧಕ್ಕಾಗಿ ಸುತ್ತಿ ಬರಬೇಕಾಯಿತೇ ಹೊರತು ಅವಳು ಬಗ್ಗಿದ ತಲೆಯನ್ನೆತ್ತಲಿಲ್ಲ. ಮನಸ್ಸಿನಲ್ಲಿ ರಾಮನು ; ಕಣ್ಣಿನಲ್ಲಿ ನೀರು ; ಇವೆರಡು ಹೊರತು ಬೇರೊಂದೂ ಅವಳಿಗೆ ತೋರಲಿಲ್ಲ. ಕೊನೆಗೆ ಪಾಪಾತ್ಮನಾದ ಆ ರಾಕ್ಷಸನು ಸೀತೆಯನ್ನು ನೋಡಿ, "ಎಲೆ ಸೀತೆ ! ನನ್ನಲ್ಲಿ ಹತ್ತುಕೋಟಿ ರಾಕ್ಷಸರಿರುವರು. ಇದಲ್ಲದೆ ಬೇರೆ ಇಪ್ಪತ್ತೆರಡು ಕೋಟಿ ವೀರರಾಕ್ಷಸರಿರುವರು. ಕ್ರೂರಕರ್ಮಿಗಳಾದ ಆ ರಾಕ್ಷಸರೆಲ್ಲರಿಗೂ ನಾನೇ ಪ್ರಭುವೆನಿಸಿಕೊಂಡಿರುವೆನು. ಮುದುಕರನ್ನೂ, ಎಳೆಮಕ್ಕಳನ್ನೂ ಬಿಟ್ಟು, ಒಬ್ಬೊಬ್ಬರಿಗೆ ಮಾತ್ರವೇ ಒಂದೊಂದು ಸಾವಿರ ಮಂದಿ ಪರಿಚಾರಕರಿರುವರು. ನನಗೆ ಈ ರಾಜಪರಿಕರವು ಯಾವಯಾವುದುಂಟೋ, ಅದೆಲ್ಲವನ್ನೂ ನಿನಗಧೀನವನ್ನಾಗಿ ಮಾಡುವೆನು. ಇನ್ನು ಮೇಲೆ ನನ್ನ ಪ್ರಾಣವೂ ನಿನ್ನಧೀನವೆಂದೇ ತಿಳಿ ! ಕೊನೆಗೆ ನೀನೇ ಪ್ರಾಣಕ್ಕಿಂತಲೂ ಮೇಲಾದವಳು. ಎಲೆ ಪ್ರಿಯೆ ! ನೀನು ನನ್ನನ್ನು ವರಿಸಿದೆಯಾದರೆ ಈ ಅಂತಃಪುರದಲ್ಲಿರುವ ಎಷ್ಟೋ ಮಂದಿ ಉತ್ತಮಕಾಂತೆಯರಲ್ಲಿ[1] ನನಗೆ

---

1. ಇಲ್ಲಿ "ಬಹೂನಾಂ ಸ್ತ್ರೀಸಹಸ್ರಾಣಾಂ ಮಮ ಯೋಽಸೌ ಪರಿಗ್ರಹಃ । ತಾಸಾಂ ತ್ವಮೀಶ್ವರೀ ಸೀತೇ ಮಮ ಭಾರ್ಯಾ ಭವ ಪ್ರಿಯೇ ॥" ಎಂದು ಮೂಲವು. ವಾಸ್ತವಾರ್ಥವೇನೆಂದರೆ (ಅಭವಪ್ರಿಯೇ, ಭಾ, ಆರ್ಯಾ ತ್ವಂ.) ಪುನರ್ಜನ್ಮವಿಲ್ಲದ ಮುಕ್ತರಲ್ಲಿ ಪ್ರೀತಿಯುಳ್ಳ ಎಲೆ ಸೀತೆ ! ಚಿದ್ರೂಪಿಣಿಯಾಗಿಯೂ, ಪೂಜ್ಯಳಾಗಿಯೂ ಇರುವ ನೀನು ನನಗೂ ನನ್ನ ಪತ್ನಿಯರಿಗೂ ಅಧಿದೇವತೆಯಾಗು ! ಎಂದರೆ, ನಾನು ಸಕುಟುಂಬನಾಗಿ ನಿನ್ನಲ್ಲಿ ಕಿಂಕರವೃತ್ತಿಯನ್ನವಲಂಬಿಸುವೆನೆಂದು ಭಾವವು.

ಕೇವಲ ಪ್ರಿಯರಾದ ಪತ್ನಿಯರು ಯಾರು ಯಾರುಂಟೋ ಅವರೆಲ್ಲರಿಗೂ ನಿನ್ನನ್ನೇ ಪ್ರಮುಖಳನ್ನಾಗಿ ಮಾಡುವೆನು. ಅವರೆಲ್ಲರೂ ನಿನಗೆ ಸೇವೆ ಮಾಡುವಂತೆ ಮಾಡುವೆನು. ನನ್ನ ಮಾತನ್ನು ಕೇಳು! ನಾನು ನಿನಗೆ ಶ್ರೇಯಸ್ಕರವಾದ ಮಾತನ್ನು ಹೇಳಿರುವೆನು. ರಾಮನೆಂಬ ಭ್ರಾಂತಿಯನ್ನು ಬಿಟ್ಟುಬಿಡು! ನನ್ನನ್ನು ಕೈಹಿಡಿದು, [1]ಮನ್ಮಥ ಬಾಣದಿಂದ ಪೀಡಿತನಾದ ನನ್ನಲ್ಲಿ ಅನುಗ್ರಹವನ್ನು ಮಾಡು. ನನ್ನ ಈ ಲಂಕಾಪಟ್ಟಣವು ಶತಯೋಜನ ವಿಸ್ತೀರ್ಣವಾದ ಮಹಾಸಮುದ್ರದಿಂದ ಸುತ್ತಲ್ಪಟ್ಟಿರುವುದು. ದೇವಾಸುರ ರಿಬ್ಬರೂ ಒಂದಾಗಿ ಇಂದ್ರನನ್ನೇ ಮುಂದಿಟ್ಟುಕೊಂಡು ಬಂದರೂ ಇದನ್ನು ಜಯಿಸಲಾರರು. ದೇವತೆಗಳಲ್ಲಿಯಾಗಲಿ, ಬೇರೆ ಯಾವ ಲೋಕದಲ್ಲಿಯೇ ಆಗಲಿ ವೀರ್ಯದಲ್ಲಿ ನನಗೆ ಸಮಾನನಾದವನನ್ನು ಇದುವರೆಗೂ ನಾನು ಕಂಡು ದಿಲ್ಲ. ಇನ್ನು ಆ ರಾಮುನ ಪಾಡೇನು? [2]ರಾಜ್ಯಭ್ರಷ್ಟನಾಗಿ, ಅನೇಕ ದುಃಖ ಗಳಿಗೆ ಸಿಕ್ಕಿಬಿದ್ದು, ತಾಪಸವೃತ್ತಿಯನ್ನನುಸರಿಸಿ ಅಲ್ಪಾಯುಷ್ಯವುಳ್ಳವನಾದ ಆ ರಾಮನಿಂದ ನಿನಗೆ ಇನ್ನಾಗಬೇಕಾದುದೇನು? ಇದರ ಮೇಲೆ ಕೇವಲ ಮನುಷ್ಯಮಾತ್ರನಾಗಿ ಅಲ್ಪವೀರ್ಯವುಳ್ಳ ಆತನು ನಿನಗೆ ಯಾವ ಸಹಾಯ ವನ್ನು ಮಾಡಬಲ್ಲನು? ಎಲೆ, ಸೀತೆ! ನಾನೇ ನಿನಗೆ ತಕ್ಕ ಪತಿಯೆಂದು ತಿಳಿ!

---

1. ಇಲ್ಲಿ "ಭಜಸ್ವ ಮಾಽಭಿತಪ್ತಸ್ಯ ಪ್ರಸಾದಂ ಕರ್ತುಮರ್ಹಸಿ" ಎಂದು ಮೂಲವು. ಇದಕ್ಕೆ "ನನ್ನನ್ನು ಭೃತ್ಯನನ್ನಾಗಿ ಸ್ವೀಕರಿಸು. ನಿನ್ನಲ್ಲಿ ಕಿಂಕರವೃತ್ತಿಯನ್ನು ಮಾಡಬೇ ಕೆಂಬ ಕೋರಿಕೆಯಿಂದಲೇ ಕೊರಗುತ್ತಿರುವ ನನ್ನಲ್ಲಿ ಅನುಗ್ರಹ ಬುದ್ಧಿಯನ್ನು ಮಾಡು" ಎಂದು ಅಂತರಾಶಯವು.

2. ಇಲ್ಲಿ "ರಾಜ್ಯಭ್ರಷ್ಟೇನ ದೀನೇನ ತಾಪಸೇನ ಗತಾಯುಷಾ। ಕಿಂ ಕರಿಷ್ಯಸಿ ರಾಮೇಣ ಮಾನುಷೇಣಾಲ್ಪತೇಜಸಾ ॥" ಎಂದು ಮೂಲವು. ಇದಕ್ಕೆ ವಾಸ್ತವಾರ್ಥವೇ ನೆಂದರೆ: ರಾಜ್ಯದಿಂದ ಶತ್ರುಗಳನ್ನೋಡಿಸಿದವನಾಗಿಯೂ, (ದೀನ + ಇನ + ತಾಪಸ + ಇನ + ಗತ + ಆಯುಷಾ) ದೀನನಾಥನಾಗಿಯೂ, ತಾಪಸಪ್ರಭುವಾಗಿಯೂ, ಹನ್ನೊಂದು ಸಾವಿರ ವರುಷಗಳ ಆಯುಃಪರಿಮಿತಿಯನ್ನು ಹೊಂದಿ ಮನುಷ್ಯರೂಪದಿಂದವತರಿಸಿರು ವವನಾಗಿಯೂ, (ಅಲ್ಪತೇಜಸಾ-ಅಲ್ಪಮಿತರತ್ತೇಜೋ ಯಸ್ಮಾತ್ತೇನ) ತನ್ನ ತೇಜಸ್ಸಿನಿಂದ "ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂಬ ಶ್ರುತಿ ಯಂತೆ ಇತರ ತೇಜಸ್ಸುಗಳನ್ನು ಅಧಃಕರಿಸಿದವನಾಗಿಯೂ ಇರುವ ರಾಮನಿಂದೇನು? ಎಂದರೆ ಅಂತಹ ಪರಮಪುರುಷನಾದ ರಾಮನ ವಿಷಯವಾಗಿ ನೀನು ಚಿಂತಿಸುವುದೇಕೆಂದು ಭಾವವು.

ನನ್ನನ್ನು ಕೈಬಿಡಬೇಡ! ಎಲೆ ಹುಚ್ಚಳೆ! [1]ಯೌವನವೆಂಬುದು ಸ್ಥಿರವಲ್ಲ ವೆಂಬುದನ್ನರಿಯೆಯಾ! ಈ ನಿನ್ನ ಯೌವನವನ್ನು ಸಾರ್ಥಕಪಡಿಸಬೇಡವೆ? ಏಕೆ ಹೆದರುವೆ? ನನ್ನೊಡನೆ ಇಲ್ಲಿ ಸುಖವಾಗಿ ವಿಹರಿಸುತ್ತಿರು. ಎಲೆ, ಮಂಗಳಾಂಗಿ! ರಾಮನನ್ನು ಪುನಃ [2]ನೋಡಬೇಕೆಂಬ ಆಸೆಯನ್ನು ಬಿಟ್ಟುಬಿಡು! ಇನ್ನುಮೇಲೆ ಅದರಿಂದ ಪ್ರಯೋಜನವಿಲ್ಲವು. ಅವನು ಮಹಾಸಮುದ್ರದಿಂದ ಆವರಿಸಲ್ಪಟ್ಟ ಈ ಲಂಕೆಗೆ ಬರುವುದೆಂದರೇನು? ಅದನ್ನು ಮನಸ್ಸಿನಲ್ಲಿ ಯೋಚಿಸುವುದಕ್ಕೂ ಆತನಿಗೆ ಸಾಧ್ಯವಲ್ಲ. ಆಕಾಶದಲ್ಲಿ ಸಂಚರಿಸುತ್ತಿರುವ ವೇಗವತ್ತಾದ ಗಾಳಿಯನ್ನು ಹಗ್ಗದಿಂದ ಕಟ್ಟಲಾದೀತೆ? ಉರಿಯುತ್ತಿರುವ ಬೆಂಕಿಯ ಜ್ವಾಲೆಯನ್ನು ಕೈಯಿಂದ ಹಿಡಿಯಬೇಕೆಂದರೆ ಸಾಧ್ಯವೆ? ಅದರಂತೆ ಈ ಲಂಕೆಯನ್ನಾಕ್ರಮಿಸಬೇಕೆಂದರೆ ಮತ್ತೊಬ್ಬರಿಗೆ ಸಾಧ್ಯವೆ? ಎಲೆ ಕಲ್ಯಾಣಿ! ನನ್ನ ಭುಜಗಳಿಂದ ಪಾಲಿತೆಯಾದ ನಿನ್ನನ್ನು ಪರಾಕ್ರಮದಿಂದ ಹಿಂತಿರುಗಿಸಿ ಕರೆದುಕೊಂಡು ಹೋಗುವುದಕ್ಕೆ ಈ ಮೂರು ಲೋಕಗಳಲ್ಲಿಯೂ ಯಾವ ನೊಬ್ಬನೂ ಸಮರ್ಥನಲ್ಲ. ಎಲೆ, ಸೀತೆ! [3]ಈ ಲಂಕಾರಾಜ್ಯವನ್ನೇ ನಿನ್ನ ವಶಕ್ಕೊಪ್ಪಿಸಿಬಿಡುವೆನು. ನೀನೇ ಇದನ್ನು ಯಥೇಚ್ಛವಾಗಿ ಪರಿಪಾಲಿಸುತ್ತಿರು. ತ್ರಿಲೋಕಾಧೀಶ್ವರನಾದ ನನ್ನೊಡನೆ ಸಮಸ್ತ ದೇವತೆಗಳೂ, ಚರಾಚರಾತ್ಮಕ

---

1. ಇಲ್ಲಿ "ಭಜಸ್ವ ಸೀತೇ ಮಾಮೇವ ಭರ್ತಾಽಹಂ ಸದೃಶಸ್ತವ | ಯೌವನಂ ಹ್ಯಧ್ರುವಂ ಭೀರು ರಮಸ್ವೇಹ ಮಯಾ ಸಹ" ಎಂದು ಮೂಲವು. ಇದಕ್ಕೆ "ಎಲೆ ದೇವಿ! ನಾನೇ ನಿನ್ನನ್ನು ಸೇವಾವೃತ್ತಿಯಿಂದ ಪೋಷಿಸುವುದಕ್ಕೆ ತಕ್ಕ ಕಿಂಕರನು. ನನ್ನನ್ನೇ ನೀನು ಸೇವಕನನ್ನಾಗಿ ಸ್ವೀಕರಿಸು" ಎಂದು "ರಮಸ್ವೇಹ ಮಯಾ ಸಹ" ಎಂಬುದಕ್ಕೆ ನನ್ನ ರಾಜ್ಯಲಕ್ಷ್ಮಿಯೊಡನೆ ಕೂಡಿ ನೀನು ಸಂತೋಷಿಸುತ್ತಿರೆಂದೂ ಅಂತರಾಶಯವು.

2. ಇಲ್ಲಿ "ದರ್ಶನೇ ಮಾ ಕೃಥಾ ಬುದ್ಧಿಂ ರಾಘವಸ್ಯ ವರಾನನೇ | ಕಾಸ್ಯ ಶಕ್ತಿ-ರಿಹಾಗಂತುಮಪಿ ಸೀತೇ ಮನೋರಥೈಃ" ಎಂದು ಮೂಲವು. ಇದಕ್ಕೆ "ಎಲೆ ಸೀತೆ! ನೀನು ರಾಮನನ್ನು ನೋಡುವುದಕ್ಕಾಗಿ ಇಷ್ಟೇಕೆ ಆತುರಪಡುವೆ? ಇಲ್ಲಿಗೆ ಬರಬೇಕೆಂದರೆ ಅವನ ಶಕ್ತಿಯೆಷ್ಟರದು? ತನ್ನ ಮನಸ್ಸಂಕಲ್ಪದಿಂದಲೇ ಬಂದುಬಿಡುವ" ನೆಂದು ವಾಸ್ತವಾರ್ಥವು.

3. ಇಲ್ಲಿ ರಾವಣನು ತನಗೆ ಇಷ್ಟದೇವತೆಯಾದ ಸೀತೆಯಲ್ಲಿ ಶರಣಾಗತಿಯನ್ನು ಮಾಡುವುದಕ್ಕೆ ಮೊದಲು, (ಆತ್ಮಾತ್ಮೀಯ ಸಮರ್ಪಣವನ್ನು ಮಾಡುವುದಾಗಿ) ತನ್ನನ್ನೂ ತನ್ನ ಸಮಸ್ತ ವಸ್ತುಗಳನ್ನೂ ಅವಳಲ್ಲಿ ಸಮರ್ಪಿಸುವುದಾಗಿ ತತ್ವಾರ್ಥವು.

ವಾದ ಈ ಸಮಸ್ತ ಪ್ರಪಂಚವೂ ನಿನ್ನ ಸೇವೆಯಲ್ಲಿರುವುವು. ನಿನಗೆ ಈಗಲೇ ಇಲ್ಲಿನ ರಾಜ್ಯಾಭಿಷೇಕವನ್ನು ಮಾಡಿಬಿಡುವೆನು. ನೀನು ಸಂತೋಷದಿಂದ ನನ್ನ ಮನೋಭೀಷ್ಟವನ್ನು ಪೂರ್ತಿಮಾಡು. [1]ನೀನು ಪೂರ್ವಜನ್ಮದಲ್ಲಿ ಏನು ಪಾಪವನ್ನು ಮಾಡಿದ್ದೆಯೋ! ಅದರಿಂದ ಇದುವರೆಗೆ ಕಾಡಿನಲ್ಲಿ ಅಲೆಯಬೇಕಾಯಿತು. ಆ ಪಾಪಶೇಷವು ಅದರಿಂದಲೇ ಕಳೆದುಹೋಗಲಿ! ಇನ್ನುಮೇಲೆ ನಿನ್ನ ಪೂರ್ವಪುಣ್ಯಗಳಿಗೆ ಫಲವಾಗಿ ಇಲ್ಲಿ ರಾಜಭೋಗಗಳನ್ನನುಭವಿಸು. ಇದೋ! ಇಲ್ಲಿ ಎಷ್ಟೋ ರತ್ನಾಭರಣಗಳಿರುವುವು. ಎಷ್ಟೋ ದಿವ್ಯಗಂಧಗಳಿರುವುವು. ಎಲೆ, ಸುಶ್ರೋಣಿ! ನಾನು ನನ್ನ ಅಣ್ಣನಾದ ಕುಬೇರನನ್ನು ಜಯಿಸಿ ತಂದ ಪುಷ್ಪಕವಿಮಾನವು ಈಗಲೂ ನನ್ನಲ್ಲಿರುವುದು. ಸೂರ್ಯನಂತೆ ಜ್ವಲಿಸುತ್ತಿರುವ ವಿಸ್ತಾರವಾದ ಆ ದಿವ್ಯವಿಮಾನವನ್ನೇರಿ [2]ನನ್ನೊಡನೆ ಸುಖವಾಗಿ ವಿಹರಿಸಬಾರದೆ? ಕಮಲದಂತೆ ಅತಿಮನೋಹರವಾದ ಈ ನಿನ್ನ ಮುಖವನ್ನು ದುಃಖದಿಂದ ಹೀಗೆ ಕಳೆಗುಂದಿಸಿರುವೆಯಲ್ಲಾ! ಅದರ ಸ್ವಾಭಾವಿಕವಾದ ಅಂದವೇ ಕೆಟ್ಟುಹೋಗಿರುವುದು. ದುಃಖವನ್ನು ಬಿಟ್ಟು ಸಂತೋಷದಿಂದಿರು" ಎಂದನು. ಈ ಮಾತನ್ನು ಕೇಳಿ ಸೀತೆಗೆ ಮತ್ತಷ್ಟು ದುಃಖವುಂಟಾಯಿತು. ಚಂದ್ರನಿಗೆ ಸಮಾನವಾದ ತನ್ನ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಧಾರೆಧಾರೆಯಾಗಿ ಕಣ್ಣೀರು ಬಿಟ್ಟು ಅಳುತ್ತಿದ್ದಳು. ರಾಮಧ್ಯಾನದಿಂದ ಕಂದಿಕುಂದಿ

---

1. ಇಲ್ಲಿ "ದುಷ್ಕೃತಂ ಯತ್ಪುರಾ ಕರ್ಮ ವನವಾಸೇನ ತದ್ಗತಂ। ಯಶ್ಚ ತೇ ಸುಕೃತೋ ಧರ್ಮಸ್ತಸ್ಯೇಹ ಫಲಮಾಪ್ನುಹಿ" ಎಂದು ಮೂಲವು. ಇದಕ್ಕೆ "(ವನವಾಸೇನ) ಜಲಮಧ್ಯವಾಸಿಯಾದ ಅಥವಾ ಲಂಕಾದ್ವೀಪವಾಸಿಯಾದ ನನ್ನಿಂದ ಪೂರ್ವದಲ್ಲಿ ಯಾವ ದುಷ್ಕರ್ಮವು ಮಾಡಲ್ಪಟ್ಟಿತೋ, ಅದೆಲ್ಲವೂ ಈಗ ಇಷ್ಟದೇವತೆಯಾದ ನಿನ್ನ ದರ್ಶನದಿಂದ ಕಳೆದುಹೋಯಿತು. (ಯಃ ಸುಕೃತೋ ಧರ್ಮಃ ಸಃ ತೇ) ನಾನು ಮಾಡಿದ ಸುಕೃತವಾವುದುಂಟೋ ಅದು ನಿನಗಿರಲಿ! ಅದರ ಫಲವನ್ನು ನೀನು ಸ್ವೀಕರಿಸು" ಎಂದು ಹೇಳಿ ರಾವಣನು ಸೀತಾದೇವಿಯಲ್ಲಿ ತನ್ನ ಕರ್ಮಫಲ ಸಮರ್ಪಣವನ್ನೂ ಮಾಡಿದುದಾಗಿ ತತ್ವಾರ್ಥವು.

2. ಇಲ್ಲಿ "ಸೇವಸ್ವ ಚ ಮಯಾ ಸಹ; ಸಾರ್ಧಂ ವಿಹರಸ್ವ ಯಥಾಸುಖಂ" ಎಂದು ಮೂಲವು. ಇದಕ್ಕೆ "ಎಲೆ ಸೀತೆ! ನನ್ನಿಂದ ಸಮರ್ಪಿಸಲ್ಪಡುವ ಈ ಪುಷ್ಪಾಭರಣಾದಿಗಳನ್ನು ಸ್ವೀಕರಿಸಿ, ನನ್ನಲ್ಲಿರುವ ಈ ಪುಷ್ಪಕವಿಮಾನವನ್ನೂ ಏರಿ, (ಮಯಾ) ದಿವ್ಯಕಾಂತಿಯೊಡಗೂಡಿ ಸಂತೋಷಿಸು" ಎಂದು ಹೇಳಿದುದಾಗಿ ಅಂತರಾಶಯವು.

ಕೃಶಳಾಗಿ ಚಿಂತಿಸುತ್ತಿರುವ ಆ ಸೀತೆಯನ್ನು ಪಾಪಿಯಾದ ರಾವಣನು ಪುನಃ ಮಾತಾಡಿಸತೊಡಗಿದನು. "ಎಲೆ, ಸೀತೆ! ನಿನಗೆ ಈ ನಾಚಿಕೆಯೇಕೆ? ಕೈಲಾಗದ ಗಂಡನನ್ನು ಬಿಟ್ಟು ವೀರನಾದ ಪುರುಷನನ್ನು ವರಿಸುವುದರಿಂದ ಧರ್ಮಕ್ಕೇನೂ ಲೋಪಬಾರದು. ನಿನ್ನ ಭಾಗ್ಯವಶದಿಂದ ನಿನಗೆ ನನ್ನೊಡನೆ ಈಗ ಉಂಟಾಗತಕ್ಕ ಸಂಬಂಧವು ಅಧರ್ಮವೆಂದೆಣಿಸಬೇಡ. ಇದು [1]ಋಷಿಗಳಿಂದಲೂ ಅನುವಾದಿಸಲ್ಪಟ್ಟಿರುವುದೇ ಹೊರತು ಬೇರೆಯಲ್ಲ. ಎಲೆ ವಿದೇಹಪುತ್ರಿ! ಈ ನಿನ್ನ ಪಾದಕಮಲಗಳಿಗೆ ನನ್ನ ತಲೆಯನ್ನು ಸೋಕಿಸಿ ನಮಸ್ಕಾರ ಮಾಡುವೆನು. ನನ್ನಲ್ಲಿ ಅನುಗ್ರಹವನ್ನು ಮಾಡು. ನಾನು ನಿನಗೆ ದಾಸ

---

1. ಇಲ್ಲಿ "ಅಲಂ ವ್ರೀಡೇನ ವೈದೇಹಿ ಧರ್ಮಲೋಪಕೃತೇನ ಚ । ಆರ್ಷೋಽಯಂ ದೈವನಿಷ್ಯಂದೋ ಯಸ್ತ್ವಾಮಭಿಗಮಿಷ್ಯತಿ ॥" ಎಂದು ಮೂಲವು. ಇದಕ್ಕೆ "ಎಲೆ ವೈದೇಹಿ! ಆರ್ತರಕ್ಷಣ ವಿಷಯದಲ್ಲಿ ನಾಚಿಕೆಯನ್ನು ಬಿಡು! ಇದರಿಂದ ಧರ್ಮಲೋಪವಿಲ್ಲ! ನಮ್ಮಿಬ್ಬರಿಗೂ ಈಗ ದೈವಿಕವಾಗಿ ಬಂದೊದಗಿರುವ ಈ ದಾಸದಾಸನದ್ಭಾವರೂಪ ಸಂಬಂಧವು ಅನಾದಿಸಿದ್ಧವಾದುದು. ಎಂದರೆ ನಾನು ಅನಾದಿಯಾಗಿ ನಿನ್ನಲ್ಲಿ ದಾಸ್ಯವೃತ್ತಿಯನ್ನು ಮಾಡುತ್ತಿದ್ದವನೇ ಹೊರತು ಹೊಸಬನಲ್ಲ. ಆ ಪೂರ್ವಸ್ಥಿತಿಯೇ ಸಂಭವಿಸುವ ಕಾಲವು ಬಂದೊದಗಿರುವುದೆಂದು ಹೇಳಿದುದಾಗಿ ಇವರ ಅಂತರಾಶಯವು.

ವಾಚ್ಯಾರ್ಥದಲ್ಲಿ ಋಷಿಪ್ರೋಕ್ತವೆಂದುದಕ್ಕೆ ಕಾರಣವೇನೆಂದರೆ, "ಪರಪೂರ್ವಾಸ್ತ್ರಿಯಸ್ತ್ವನ್ಯಾಸ್ಸಪ್ತ ಪ್ರೋಕ್ತಾಃ ಸ್ವಯಂಭುವಾ । ಪುನರ್ಭೂಸ್ತ್ರಿವಿಧಾ ತಾಸಾಂ ಸ್ವೈರಿಣೀ ತು ಚತುರ್ವಿಧಾ । ಕನ್ಯಾ ಸಾ ಕ್ಷತಯೋನಿರ್ಯಾ ಪಾಣಿಗ್ರಹಣದೂಷಿತಾ । ಪುನರ್ಭೂಃ ಪ್ರಥಮಾ ಪ್ರೋಕ್ತಾ ಪುನಸ್ಸಂಸ್ಕಾರಕರ್ಮಣಾ । ದೇಶಧರ್ಮಾನವೇಕ್ಷ್ಯ ಸ್ತ್ರೀ ಗುರುಭಿರ್ಯಾ ಪ್ರದೀಯತೇ । ಉತ್ಪನ್ನಸಾಹಸಾಽನ್ಯಸ್ಮೈ ಸಾ ದ್ವಿತೀಯಾ ಪ್ರಕೀರ್ತಿತಾ । ಮೃತೇ ಭರ್ತರಿ ತು ಪ್ರಾಪ್ತಾ ದೇವರಾದೀನಪಾಸ್ಯ ಯಾ । ಉಪಗಚ್ಛೇತ್ಪರಂ ಕಾಮಾತ್ಸಾ ತೃತೀಯಾ ಪ್ರಕೀರ್ತಿತಾ । ಪ್ರಾಪ್ತಾ ದೇಶಾದ್ಧನಕ್ರೀತಾ ಕ್ಷುತ್ಪಿಪಾಸಾತುರಾ ಚ ಯಾ । ತವಾಹಮಿತ್ಯುಪಗತಾ ಸಾ ಚತುರ್ಥೀ ಪ್ರಕೀರ್ತಿತಾ ॥" ಇತ್ಯಾದಿ ನಾರದೋಕ್ತವಚನಾನುಸಾರವಾಗಿ, ಮೊದಲು ಒಬ್ಬನನ್ನು ಮದುವೆಯಾಗಿದ್ದ ಕ್ಷತಯೋನಿಯಾಗಲಿ, ಕನ್ಯೆಯಾಗಲಿ, ಮೊದಲಿನ ಪತಿಯನ್ನು ಬಿಟ್ಟು ಬೇರೊಬ್ಬನನ್ನು ವರಿಸಿದರೆ ಪುನರ್ಭೂವೆನಿಸುವಳು. ಹೀಗೆಯೇ ದ್ವಿತೀಯ ವಿವಾಹವನ್ನು ನಡೆಸಿಕೊಳ್ಳುವ ಹೆಂಗಸರಲ್ಲಿ ಏಳುಭೇದಗಳುಂಟು. ಈ ಭೇದಗಳು ಋಷಿಪ್ರೋಕ್ತಗಳಾಗಿಯೇ ಇರುವುದರಿಂದ ಅದರಲ್ಲಿ ಪುನರ್ಭೂವಿಧಿಯನ್ನನುಸರಿಸಿ ನನ್ನನ್ನು ಕೈಹಿಡಿಯಬಹುದೆಂದು ರಾವಣನ ಅಭಿಪ್ರಾಯವು. (ಗೋವಿಂದರಾಜೀಯವು.) ಅಥವಾ ಕ್ಷತ್ರಿಯರಿಗೆ ಬಲಾತ್ಕಾರದಿಂದ ರಾಕ್ಷಸ ವಿವಾಹವೂ

ಭೂತನಾಗಿರುವೆನು. ನಾನು ಮನ್ಮಥತಾಪದಿಂದ ನನ್ನ ಪದವಿಗೆ ಯೋಗ್ಯವಲ್ಲದ ಈ ಕೆಲಸವನ್ನೂ ಮಾಡಬೇಕಾಯಿತು. ಆಡಬಾರದ ಮಾತುಗಳನ್ನೂ ಆಡಬೇಕಾಯಿತು. ರಾವಣನಾದ ನಾನೂ ಕೂಡ ಕೇವಲ ಸ್ತ್ರೀಮಾತ್ರಳಾದ ನಳಿಗೆ ತಲೆಯನ್ನು ತಗ್ಗಿಸಿ ನಮಸ್ಕರಿಸುವುದೆಂದರೇನು? ಇದು ನಿನ್ನ ಅಸಾಧಾರಣ ಭಾಗ್ಯವಲ್ಲದೆ ಬೇರೆಯಲ್ಲ" ಎಂದನು. ಹೀಗೆ ಹೇಳಿ ರಾವಣನು ಕಾಲಪಾಶಕ್ಕೆ ಸಿಕ್ಕಿದವನಾಗಿ, ಹೇಗಾದರೂ ಆ ಸೀತೆಯನ್ನು ತನ್ನ ಕೈಗೆ ಹಾಕಿಕೊಳ್ಳಬೇಕೆಂದು ಚಿಂತಿಸುತ್ತಿದ್ದನು.

ಇಲ್ಲಿಗೆ ಐವತ್ತೈದನೆಯ ಸರ್ಗವು.

---

{ ಸೀತೆಯು ರಾವಣನನ್ನು ಧಿಕ್ಕರಿಸಿ ಮಾತಾಡಿದುದು. ರಾವಣನು ಅವಳನ್ನು ಪುನಃ ಅಶೋಕವನಕ್ಕೆ ಕಳುಹಿಸಿದುದು. }

ದುಃಖದಿಂದ ಕಂದಿಕುಂದಿ ಕೃಶಳಾಗಿದ್ದ ಸೀತೆಯು, ರಾವಣನ ಮಾತನ್ನು ಕೇಳಿ, ನಿರ್ಭಯವಾಗಿ ಆತನಿಗೆ ಪ್ರತ್ಯುತ್ತರವನ್ನು ಹೇಳತೊಡಗಿದಳು. ಕೇವಲ ತುಚ್ಛಸ್ವಭಾವವುಳ್ಳ ಆತನೊಡನೆ ಸಾಕ್ಷಾತ್ತಾಗಿ ಮಾತಾಡುವುದಕ್ಕೂ ಹೇಸಿದವಳಾಗಿ, ನಡುವೆ ಒಂದು ಹುಲ್ಲುಕಡ್ಡಿಯನ್ನು ಹಾಕಿ ಅದನ್ನು ಕುರಿತು ಮಾತಾಡುವ ವ್ಯಾಜದಿಂದ ರಾವಣನಿಗೆ ಪ್ರತ್ಯುತ್ತರಗಳನ್ನು ಹೇಳಿದಳು. "ಎಲೆ ರಾಕ್ಷಸನೆ! ಧರ್ಮಕ್ಕೆ ಸೇತುವೆನಿಸಿಕೊಂಡ ದಶರಥ ಮಹಾರಾಜನು ಲೋಕದಲ್ಲಿ ಸತ್ಯಸಂಧನೆಂದೂ, ಸ್ಥಿರಸ್ವಭಾವವುಳ್ಳವನೆಂದೂ ಖ್ಯಾತಿಹೊಂದಿದ್ದನು. ಅವನ ಮಗನಾದ ರಾಮನಾದರೋ ಅವನಿಗಿಂತಲೂ ಧರ್ಮಾತ್ಮನೆಂದು ಮೂರು ಲೋಕಗಳಲ್ಲಿಯೂ ಪ್ರಖ್ಯಾತಿಹೊಂದಿರುವನು. ಇಂತಹ ಮಹಾತ್ಮರ ಕುಲಕ್ಕೆ

---

ಋಷಿಪ್ರೋಕ್ತವಾಗಿಯೇ ಇರುವುದರಿಂದ ಆ ವಿಧಿಯನ್ನನುಸರಿಸಿ ತನ್ನನ್ನು ವರಿಸಬೇಕೆಂದು ರಾವಣನ ಅಭಿಪ್ರಾಯವೆಂದೂ ಹೇಳಬಹುದು. ಆದರೆ ಈ ರಾಕ್ಷಸ ವಿವಾಹವೆಂಬುದು ಕನ್ಯಕೆಯರನ್ನು ಬಲಾತ್ಕಾರದಿಂದ ಗ್ರಹಿಸುವುದೇ ಹೊರತು ವಿವಾಹಿತರನ್ನಲ್ಲ. ಸ್ಮೃತ್ಯರ್ಥವೂ ಹೀಗೆಯೇ ಹೇಳಲ್ಪಡುವುದು. ಆದುದರಿಂದ ಇಲ್ಲಿ ರಾವಣನು ತನೋಗುಣಪ್ರಾಧಾನ್ಯದಿಂದಲೇ ಹೀಗೆ ಹೇಳಿರುವನೆಂದು ಗ್ರಹಿಸಬೇಕು. (ಮಹೇಶ್ವರತೀರ್ಥರು)

ಸೇರಿದ ನಾನು ಧರ್ಮವಿರುದ್ಧವಾದ ಕಾರ್ಯಕ್ಕೆ ಪ್ರಯತ್ನಿಸುವೆನೆ ? ಆಜಾನು ಬಾಹುವಾಗಿ, ವಿಶಾಲಾಕ್ಷನಾಗಿರುವ ಆ ನನ್ನ ಪತಿಯು ಮೂರು ಲೋಕಕ್ಕೂ ಪರದೈವದಂತಿರುವನಲ್ಲವೆ ? ಲೋಕಪ್ರಸಿದ್ಧವಾದ ಇಕ್ಷ್ವಾಕುವಂಶದಲ್ಲಿ ಹುಟ್ಟಿ ದವನು. ಸಿಂಹದಂತೆ ಭುಜದ ಕಟ್ಟುಳ್ಳವನು. ಮಹಾತೇಜಸ್ವಿಯು. ಅಂತಹ ರಾಮನು ತನ್ನ ತಮ್ಮನಾದ ಲಕ್ಷ್ಮಣನೊಡಗೂಡಿ ಬಂದು ಇನ್ನು ಕೆಲವು ಕಾಲದೊಳಗಾಗಿ ನಿನ್ನ ಪ್ರಾಣಗಳನ್ನು ಹೀರದಿರಲಾರನು. ನೀನು ಮಾತ್ರ ಆ ರಾಮನಿರುವಾಗ ಹೀಗೆ ಅತಿಕ್ರಮಿಸಿ ನಡೆದಿದ್ದ ಪಕ್ಷದಲ್ಲಿ ಖರನಂತೆ ನೀನೂ ಇಷ್ಟರೊಳಗಾಗಿ ಆ ಜನಸ್ಥಾನದಲ್ಲಿಯೇ ಸತ್ತುಮಲಗುತ್ತಿದ್ದೆಯೆಂಬುದರಲ್ಲಿ ಸಂದೇಹವೇ ಇಲ್ಲ. ನಿನ್ನಲ್ಲಿ ಎಷ್ಟೋ ಘೋರರಾಕ್ಷಸರು ಮಹಾಬಲಾಢ್ಯ ರಾಗಿರುವರೆಂದು ಹೆಮ್ಮೆಯನ್ನು ಹೇಳಿಕೊಂಡೆಯಲ್ಲವೆ ? ಗರುಡನ ಮುಂದಿರುವ ಹಾವುಗಳಂತೆ ಆ ರಾಮನನ್ನು ಕಂಡಮಾತ್ರಕ್ಕೆ ಅವರ ಕೊಬ್ಬಡಗುವುದು ! ಚಿನ್ನದ ಹಿಡಿಗಳುಳ್ಳ ಆ ರಾಮನ ಬಾಣಗಳು ಅವನ ಕೈಯಲ್ಲಿರುವ ಬಿಲ್ಲನ್ನು ಬಿಟ್ಟು ಹೊರಟಾಗಲೇ ಅಲೆಗಳು ಗಂಗಾತೀರವನ್ನು ಭೇದಿಸುವಂತೆ ನಿನ್ನ ಶರೀರ ವನ್ನು ಭೇದಿಸುವವು. ಎಲೆ ರಾವಣಾ ! ನೀನು ದೇವತೆಗಳಿಗಾಗಲಿ, ರಾಕ್ಷಸರು ಗಳಿಗಾಗಲಿ, ಅವಧ್ಯನಾಗಿಯೇ ಇರಬಹುದು. ಆದರೇನು ? ಆ ರಾಮನೊಡನೆ ಇಷ್ಟು ವಿರೋಧವನ್ನು ಬೆಳೆಸಿಬಿಟ್ಟಮೇಲೆ ಅವನು ನಿನ್ನನ್ನು ಜೀವದೊಂದಿಗೆ ಬಿಡಲಾರನು. ನೀನು ಇನ್ನೂ ಬದುಕಿರಬೇಕಾದ ದಿನಗಳು ಉಳಿದಿದ್ದರೂ ಆ ರಾಮನು ಅದನ್ನು ಈಗಲೇ ಕೊನೆಮುಟ್ಟಿಸಿಬಿಡುವನು. ಯೂಪಸ್ತಂಭಕ್ಕೆ ಕಟ್ಟಿದ ಹಸುವಿನಂತಿರುವ ನೀನು ಇನ್ನುಮೇಲೆ ಬದುಕಿಹೋಗುವುದೆಂದರೇನು ? ಆ ರಾಮನು ಕೋಪದಿಂದುರಿಯುವ ತನ್ನ ಕೆಂಪಾದ ಕಣ್ಣಿನಿಂದ ನಿನ್ನನ್ನು ನೋಡಿದ ಮಾತ್ರಕ್ಕೆ ನೀನು ಆ ಕ್ಷಣವೇ ಸುಟ್ಟು ಬೂದಿಯಾಗಿಬಿಡುವೆಯಲ್ಲಾ ! ಎಲೆ ರಾಕ್ಷಸನೆ ! ಅವನ ಮುಂದೆ ಅತ್ಯಲ್ಪ ವೀರ್ಯವುಳ್ಳ ನಿನ್ನ ವಿಷಯವು ಹಾಗಿರಲಿ ! ಆ ರಾಮನು ಆಕಾಶದಲ್ಲಿರುವ ಚಂದ್ರನನ್ನಾದರೂ ಕೆಳಕ್ಕುರುಳಿಸ ಬಲ್ಲನು. ಕೊನೆಗೆ ಆ ಚಂದ್ರನನ್ನೇ ನಾಶಮಾಡಬಲ್ಲನು. ಸಮುದ್ರಗಳೆಲ್ಲ ವನ್ನೂ ಶೋಷಿಸಿಬಿಡುವನು. ಅಂತಹ ವೀರಾಗ್ರೇಸರನಾದ ರಾಮನು ತನ್ನ ಪ್ರಿಯಪತ್ನಿಯಾದ ನನ್ನನ್ನು ಇಲ್ಲಿಂದ ಬಿಡಿಸಿಕೊಂಡುಹೋಗಲಾರನೆ ! ಎಲೆ ಪಾಪಿ ! ಮುಖ್ಯವಾಗಿ ನಿನ್ನ ಆಯುಸ್ಸು ಕೊನೆಮುಟ್ಟಿರುವುದು. ನಿನ್ನ ಭಾಗ್ಯವು

ತೀರುತ್ತಬಂದಿರುವುದು ! ನಿನ್ನ ಬಲವೂ ಕುಂದಿಹೋಗುವ ಕಾಲವು ಬಂದೊದಗಿರುವುದು. ಅದಕ್ಕೆ ತಕ್ಕಂತೆ ನಿನ್ನ ಮನಸ್ಸೂ ಹೀಗೆ ವಿಪರೀತವಾಗಿ ಪರಿಣಮಿಸಿ ನಾಶಹೊಂದಿರುವುದು. ಈಗ ನೀನು ಮಾಡಿದ ಪರದಾರಸ್ಪರ್ಶವೆಂಬ ಮಹಾಪಾತಕದಿಂದ ಈ ಲಂಕಾನಗರಿಗೆ ವೈಧವ್ಯವುಂಟಾಗುವ ಕಾಲವು ಬಂದಿತು. ಎಲೆ ರಾವಣಾ ! ಈಗ ನೀನು ಮಾಡಿರುವ ಈ ಪಾಪಕಾರ್ಯವು ನಿನ್ನ ಶ್ರೇಯಸ್ಸಿಗೆಂದೆಣಿಸಿರುವೆಯಾ ? ಕಾಡಿನಲ್ಲಿ ನನ್ನನ್ನು ನನ್ನ ಪತಿಯಿಂದಗಲಿಸಿ ತಂದೆಯಲ್ಲಾ ! ಇದರಿಂದ ನಿನಗೆ ಮಹಾ ವಿಪತ್ತಲ್ಲದೆ ಬೇರೆಯಲ್ಲ. ನನ್ನ ಪತಿಯಾದ ರಾಮನನ್ನು ದರಿದ್ರನಾದ ತಾಪಸನೆಂದು ಹೇಳಿದೆಯಲ್ಲವೆ ? ಎಲೆ, ರಾವಣಾ ! ಇನ್ನೂ ನೀನು ಆತನ ಮಹಿಮೆಯನ್ನರಿಯೆ ! ಆತನಿಗೆ ಸಂಪೂರ್ಣ ದೈವಬಲವಿರುವುದು. ಮಹಾತೇಜಸ್ವಿಯು. ಅದರಿಂದಲೇ ಅವನು ಶೂನ್ಯವಾದ ಆ ಘೋರಾರಣ್ಯದಲ್ಲಿಯೂ ಕೂಡ ತನ್ನ ವೀರ್ಯದ ಬಲದಿಂದ ಧೈರ್ಯದಿಂದಿರುವನು. ಮುಖ್ಯವಾಗಿ ಒಂದೇ ಮಾತನ್ನು ಹೇಳುವೆನು ಕೇಳು ! ಆ ರಾಮನು ತನ್ನ ಬಾಣವರ್ಷದಿಂದ ನಿನ್ನ ಮದವನ್ನೂ, ನಿನ್ನ ಬಲವನ್ನೂ, ನಿನ್ನ ವೀರ್ಯವನ್ನೂ, ಈ ನಿನ್ನ ಕೊಬ್ಬನ್ನೂ ಅಡಗಿಸಿಬಿಡುವನು. ಮುಖ್ಯವಾಗಿ ಲೋಕದಲ್ಲಿ ಪ್ರಾಣಿಗಳಿಗೆ ಕಾಲವಶದಿಂದ ವಿನಾಶವು ಸನ್ನಿಹಿತವಾಗಿ ಆ ಮನುಷ್ಯರಿಗೆ ಅದಕ್ಕೆ ತಕ್ಕಂತೆ ಬುದ್ಧಿಯೂ ಕೆಡುವುದು. ವಿಪರೀತ ಕಾರ್ಯಗಳಿಗೂ ಆರಂಭಿಸುವರು. ಎಲೆ, ರಾಕ್ಷಸಾ ! ಈಗಲೂ ನಿನಗೂ ನಿನ್ನ ಕಡೆಯ ರಾಕ್ಷಸರಿಗೂ ನಿನ್ನ ಅಂತಃಪುರದ ಜನಕ್ಕೂ ಸಮೂಲವಾಗಿ ನಾಶವು ಬಂದೊದಗಿರುವುದರಿಂದಲೇ ಹೀಗೆ ನಿನಗೆ ರಾಮಪತ್ನಿಯಾದ ನನ್ನನ್ನು ಭಂಗಪಡಿಸಬೇಕೆಂಬ ಆಸೆಯು ಹುಟ್ಟಿತು. ಎಲೆ ನೀಚನೆ ! ಯಾಗಶಾಲೆಯಲ್ಲಿ ಬ್ರಾಹ್ಮಣರಿಂದ ಮಂತ್ರಿತವಾಗಿ, ಸ್ರುಗ್ಭಾಂಡಗಳೇ ಮೊದಲಾದ ಹೋಮಸಾಧನಗಳಿಂದ ಶೋಭಿಸುತ್ತಿರುವ ಯಜ್ಞವೇದಿಯನ್ನು ಚಂಡಾಲನ ಕಾಲಿನಿಂದ ಮುಟ್ಟಿಸುವರೆ ? ಅದನ್ನು ತುಳಿದ ಮೇಲೆ ಅವನು ಬದುಕುವನೆ ? ಅದರಂತೆಯೇ, ಎಲೆ ರಾಕ್ಷಸಾಧಮನೆ ! ನಾನು ಯಾರೆಂದು ಬಲ್ಲೆ ! ಧರ್ಮಾತ್ಮನಾದ ರಾಮನ ಧರ್ಮಪತ್ನಿಯಲ್ಲವೆ ? ಆ ಪತಿಯನ್ನೇ ವ್ರತವಾಗಿ ಉಳ್ಳ ನನ್ನನ್ನು ಪಾಪಿಯಾದ ನೀನು ಮುಟ್ಟಿ ಬದುಕಬಲ್ಲೆಯಾ ? ಯಾವಾಗಲೂ ಕಮಲಸರೋವರಗಳಲ್ಲಿ ರಾಜಹಂಸನೊಡನೆ ವಿಹರಿಸುತ್ತಿರುವ ಹಂಸಿಯು, ಹುಲ್ಲಿನ ಪೊದೆಗಳಲ್ಲಿರುವ ನೀರುಕಾಗೆಯನ್ನು ಕಣ್ಣೆತ್ತಿಯಾದರೂ

ನೋಡುವುದೆ ? ಎಲೆ, ರಾವಣಾ ! ದೇಹವೆಂಬುದು ಸ್ವಾಭಾವಿಕವಾಗಿಯೇ ಜಡವಾದುದು. ಇದರಮೇಲೆ ರಾಮವಿರಹದಿಂದ ಕಂದಿಕುಂದಿದ ಈ ದೇಹವು ತನ್ನ ಸ್ವಾಭಾವಿಕ ಚೇಷ್ಟೆಗಳನ್ನೂ ನಡೆಸಲಾರದು. ಆದುದರಿಂದ ಇದನ್ನು ಕಟ್ಟಿಯಾದರೂ ಕಟ್ಟು ! ತಿಂದಾದರೂ ತಿನ್ನು ! ನನಗೆ ಈ ದೇಹವನ್ನಾಗಲಿ, ಈ ಪ್ರಾಣವನ್ನಾಗಲಿ ಕಾಪಾಡಿಡಬೇಕೆಂಬ ಉದ್ದೇಶವು ಎಷ್ಟುಮಾತ್ರವೂ ಇಲ್ಲ. ನಿನ್ನ ಹಿಂಸೆಗಾಗಿ ನಾನು ಹೆದರುವೆನೆಂದೆಣಿಸಬೇಡ. ಪಾತಿವ್ರತ್ಯಭಂಗವೆಂಬ ಲೋಕಾಪವಾದಕ್ಕೆಮಾತ್ರ ನನ್ನನ್ನು ನಾನು ಎಂದಿಗೂ ಗುರಿಮಾಡತಕ್ಕವಳಲ್ಲ" ಎಂದಳು. ಸೀತೆಯು ಕೋಪದಿಂದ ಹೀಗೆ ಪರುಷವಾಕ್ಯಗಳನ್ನಾಡಿ, ಅದರಮೇಲೆ ಬೇರೊಂದು ಮಾತನ್ನೂ ಆಡದೆ ಮೌನದಿಂದಿದ್ದುಬಿಟ್ಟಳು. ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಂತಿರುವ ಸೀತೆಯ ಪರುಷವಾಕ್ಯಗಳನ್ನು ಕೇಳಿ ರಾವಣನಿಗೂ ಕೋಪವುಂಟಾಯಿತು. ಪುನಃ ಆತನು ಆಕೆಗೆ ಭಯವನ್ನು ಹುಟ್ಟಿಸುವುದಕ್ಕಾಗಿ ಕ್ರೂರವಾಕ್ಯಗಳನ್ನಾರಂಭಿಸಿ "ಎಲೆ ಸೀತೆ ! ನಿನ್ನೊಡನೆ ಉತ್ತರಪ್ರತ್ಯುತ್ತರಗಳಿಂದೇನು ? ಒಂದೇ ಮಾತಿನಲ್ಲಿ ಮುಗಿಸುವೆನು ಕೇಳು. [1]ಇದು ಮೊದಲು ಇನ್ನೂ ಹನ್ನೆರಡು ತಿಂಗಳುಗಳ ವರೆಗೆ ನಿರೀಕ್ಷಿಸುವೆನು. ಅದರೊಳಗಾಗಿ ನೀನು ನನಗೆ ವಶಳಾದರೆ ಸರಿ ! ಹಾಗಿಲ್ಲದಿದ್ದರೆ ಮರುದಿನವೇ ನಿನ್ನನ್ನು ನನ್ನ ಮನೆಯ ಅಡಿಗೆಯವರು ನನ್ನ ತಂಗಳೂಟಕ್ಕಾಗಿ ತುಂಡು ತುಂಡಾಗಿ ಕತ್ತರಿಸುವರೆಂದು ತಿಳಿ !" ಎಂದನು. ಹೀಗೆಂದು ರಾವಣನು ಸೀತೆಯನ್ನು ಹೆದರಿಸಿ, ಆಮೇಲೆ ಅಲ್ಲಿದ್ದ ರಾಕ್ಷಸಿಯರನ್ನು ನೋಡಿ, "ಎಲೆ, ರಕ್ತಪಾಯಿನಿಯರಾದ ರಾಕ್ಷಸಿಯರೆ ! ನೀವು ಈಗಲೇ ಭಯಂಕರವಾದ ವಿಕಾರ ರೂಪವನ್ನು ಧರಿಸಿ, ಈ ಸೀತೆಯ ಕೊಬ್ಬನ್ನು ಮುರಿಯುವುದಕ್ಕೆ ಪ್ರಯತ್ನಿಸಿರಿ" ಎಂದನು. ಇದನ್ನು ಕೇಳಿ ಘೋರರೂಪವುಳ್ಳ ಆ ರಾಕ್ಷಸಿಯರೆಲ್ಲರೂ "ಅಪ್ಪಣೆ"

---

1. ಇಲ್ಲಿ "ನಾಭ್ಯೇಷಿ ಯದಿ ಮಾಂ ಚಾರುಹಾಸಿನಿ | ತತಸ್ತ್ವಾಂ ಪ್ರಾತರಾಶಾರ್ಥಂ ಸೂದಾಶ್ಛೇತ್ಸ್ಯಂತಿ ಲೇಶತಃ ||" ಎಂದು ಮೂಲವು. ಎಲೆ ಸೀತೆ ! ನೀನು ನನ್ನನ್ನು ಅಷ್ಟರೊಳಗಾಗಿಯೂ ಭೃತ್ಯನನ್ನಾಗಿ ಸ್ವೀಕರಿಸದಿದ್ದರೆ, ಅಭಾಗ್ಯಕ್ಕೀಡಾಗದ ಈ ನನ್ನ ದೇಹವನ್ನು ನಾನೇ ಅಡಿಗೆಯವನಿಗೊಪ್ಪಿಸಿ, ತುಂಡುತುಂಡಾಗಿ ಕತ್ತರಿಸಿ (ಆಶಾರ್ಥಂ) ದಿಗ್ಬಲಿಗೊಡುವಂತೆ ಆಜ್ಞಾಪಿಸಿ, ಅದರಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುವೆನೆಂದು ಇಲ್ಲಿನ ಅಂತರಾಶಯವು.

ಎಂದು ಹೇಳಿ, ರಾವಣನಿಗೆ ಕೈಮುಗಿದು, ಸೀತೆಯ ಸುತ್ತಲೂ ನಿಂತುಕೊಂಡರು. ಆಗ ರಾಕ್ಷಸರಾಜನಾದ ರಾವಣನು ಭೂಮಿಯು ನಡುಗುವಂತೆ ಕಾಲನ್ನಿಡುತ್ತ ಮುಂದೆ ಬಂದು, "ಎಲೆ ರಾಕ್ಷಸಿಯರೆ! ಈ ಸೀತೆಯನ್ನು ನಮ್ಮ ಅಶೋಕ ವನಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಯಾರಿಗೂ ತಿಳಿಯದಂತೆ ಬಚ್ಚಿಟ್ಟು, ಇವಳ ಸುತ್ತಲೂ ನೀವು ಕಾವಲಿರಬೇಕು. ಆಗಾಗ ಇವಳಿಗೆ ನಯಭಯಗಳನ್ನು ತೋರಿಸಿ, ಕಾಡಾನೆಯನ್ನು ಬಳಕೆಗೆ ತರುವಂತೆ ನಿಮ್ಮ ಕೈಲಾದಮಟ್ಟಿಗೂ ಇವಳನ್ನು ಸ್ವಾಧೀನಕ್ಕೆ ತರಬೇಕು" ಎಂದನು. ಆ ರಾಕ್ಷಸಿಯರೆಲ್ಲರೂ ಈ ರಾಜಾಜ್ಞೆಯನ್ನು ಕೇಳಿ, ಸೀತೆಯನ್ನು ಕರೆದುಕೊಂಡು ಅಶೋಕವನಕ್ಕೆ ಹೊರಟುಹೋದರು. ಸರ್ವಕಾಲಗಳಲ್ಲಿಯೂ ಫಲಪುಷ್ಪಗಳಿಂದ ಸಮೃದ್ಧವಾಗಿ, ಯಾವಾಗಲೂ ಮದದಿಂದ ಕೂಗುತ್ತಿರುವ ವನಪಕ್ಷಿಗಳಿಂದ ಶೋಭಿಸುವ ಆ ಅಶೋಕವನದಲ್ಲಿ ಸೀತೆಯು ಹುಲಿಗಳ ನಡುವೆ ಸಿಕ್ಕಿದ ಹೆಣ್ಣು ಜಿಂಕೆಯಂತೆ, ಆ ರಾಕ್ಷಸಸ್ತ್ರೀಯರ ಕೈಯಲ್ಲಿ ಸಿಕ್ಕಿ ದುಃಖದಿಂದ ಕೊರಗುತ್ತಿದ್ದಳು. ಸಹಜ ವಾಗಿಯೇ ಭೀರುಸ್ವಭಾವವುಳ್ಳ ಆ ಸೀತೆಯು ಹಗ್ಗದಿಂದ ಬಿಗಿಯಲ್ಪಟ್ಟ ಜಿಂಕೆ

1. "ಸೀತಾ ಲಕ್ಷ್ಮೀರ್ಭವಾನ್ ವಿಷ್ಣುಃ" ಎಂದೂ, "ರಾಘವತ್ವೇಽಭವತ್ಸೀತಾ' ಎಂದೂ ಪುರಾಣವಚನಗಳಿರುವುದರಿಂದ, ಸೀತೆಯೇ ಸಾಕ್ಷಾಲ್ಲಕ್ಷ್ಮೀದೇವಿಯ ಅವತಾರ ವೆಂಬುದು ಸಿದ್ಧವು. ಆದರೆ "ಯುದ್ಧರಂಗದಲ್ಲಿ ಮೂರ್ಛಿತನಾಗಿ ಬಿದ್ದ ಲಕ್ಷ್ಮಣನನ್ನು ಎತ್ತಿಹಿಡಿಯುವುದಕ್ಕೂ ರಾವಣನು ಸಮರ್ಥನಾಗಲಿಲ್ಲವೆಂದು ಮುಂದೆ ಹೇಳಲ್ಪಡುವುದು. ಹಿಮವಾನ್ ಮಂದರೋ ಮೇರುಃ ತ್ರೈಲೋಕ್ಯಂ ವಾ ಸಹಾಮರೈಃ। ಶಕ್ಯಂ ಭುಜಾಭ್ಯಾ-ಮುದ್ಧರ್ತುಂ ನ ಸಂಖ್ಯೇ ಭರತಾನುಜಂ॥" ಎಂದು ವಿಷ್ಣುವಿನ ಚತುರ್ಥಾಂಶಭೂತನಾದ ಲಕ್ಷ್ಮಣನನ್ನು ಎತ್ತುವುದಕ್ಕೂ ಶಕ್ತನಾಗದ ರಾವಣನು ಸಾಕ್ಷಾಲ್ಲಕ್ಷ್ಮೀಸ್ವರೂಪೆಯಾದ ಸೀತೆಯನ್ನು ಹೇಗೆತ್ತಿಕೊಂಡುಬಂದನೆಂದು ಶಂಕೆಯುಂಟಾಗಬಹುದು. ಈಕೆಯು ಪೂರ್ವ ದಲ್ಲಿ ವೇದವತಿಯಾಗಿದ್ದಾಗಲೇ ತಾನು ಮುಂದೆ ಸೀತೆಯಾಗಿ ಹುಟ್ಟಿ ರಾವಣನಿಂದ ಬಲಾತ್ಕರಿಸ ಲ್ಪಡುವುದಾಗಿ ಸಂಕಲ್ಪಿಸಿಕೊಂಡಿದ್ದಳು. ಇದೇ ವಿಷಯವು ಉತ್ತರಕಾಂಡದಲ್ಲಿ "ಯಸ್ಮಾತ್ತು ಧರ್ಷಿತಾ ಚಾಹಂ ತ್ವಯಾ ಪಾಪಾತ್ಮನಾ ವನೇ। ತಸ್ಮಾತ್ತವ ವಧಾರ್ಥಂ ವೈ ಉತ್ಪತ್ಸ್ಯೇಽಹಂ ಮಹೀತಲೇ॥" ಎಂದು ಹೇಳಲ್ಪಟ್ಟಿರುವುದರಿಂದ ಇಷ್ಟೆಲ್ಲವೂ ಅವಳ ಸಂಕಲ್ಪದಿಂದಲೇ ನಡೆದುದೆಂಬುದೂ ಸಿದ್ಧವು. ಮಕ್ಕಳು ಬಾವಿಯಲ್ಲಿ ಬಿದ್ದಾಗ ತಾಯಿಯೂ ಮಕ್ಕಳು ಗಳಲ್ಲಿರುವ ವಾತ್ಸಲ್ಯದಿಂದ ಅಲ್ಲಿಯೇ ಬಿದ್ದುಬಿಡುವಂತೆ, ರಾವಣನಲ್ಲಿ ಸೆರೆಸಿಕ್ಕಿಬಿದ್ದ ದೇವ ಸ್ತ್ರೀಯರಲ್ಲಿ ವಾತ್ಸಲ್ಯದಿಂದ ಅವರನ್ನು ರಕ್ಷಿಸುವುದಕ್ಕಾಗಿ, ಅವರೊಡನೆ ಸೀತೆಯೂ ಸೆರೆ ಯಲ್ಲಿರುವುದಕ್ಕೆ ಅನುಮತಿಸಿದುದಾಗಿ ಗ್ರಾಹ್ಯವು. ಇದೇ ವಿಷಯವನ್ನು ಸುಂದರಕಾಂಡ

ಯಂತೆ ಮತ್ತಷ್ಟು ಭಯದಿಂದ ತತ್ತಳಿಸುತ್ತಿದ್ದಳು. ವಿಕಾರನೇತ್ರವುಳ್ಳ ಆ ರಾಕ್ಷಸಸ್ತ್ರೀಯರು ಆಗಾಗ ಗರ್ಜಿಸಿ ಹೆದರಿಸುತ್ತಿದ್ದರು. ಆ ಸೀತೆಯಾದರೋ ಅಲ್ಲಿ ಕ್ಷಣಮಾತ್ರವೂ ಹರ್ಷವಿಲ್ಲದೆ, ತನಗೆ ಪರದೈವದಂತಿರುವ ಪ್ರಾಣವಲ್ಲಭನಾದ ರಾಮನನ್ನೇ ಎಡೆಬಿಡದೆ ಸ್ಮರಿಸುತ್ತ, ಭಯದಿಂದಲೂ ದುಃಖದಿಂದಲೂ ಪರವಶಳಾಗಿ, ಆಗಾಗ ಮೂರ್ಛೆಬಿದ್ದು ಮೆಲ್ಲಮೆಲ್ಲನೆ ಚೇತರಿಸಿಕೊಳ್ಳುತ್ತಿದ್ದಳು.

ಇಲ್ಲಿಗೆ ಐವತ್ತಾರನೆಯ ಸರ್ಗವು.

---

ರಾಮನು ಇತ್ತಲಾಗಿ ಮಾರೀಚನನ್ನು ಕೊಂದು, ಆಶ್ರಮಕ್ಕೆ ಬರುತ್ತಿರುವಾಗ ಲಕ್ಷ್ಮಣನನ್ನು ನೋಡಿದುದು. ದಾರಿಯಲ್ಲಿ ದುಶ್ಶಕುನಗಳನ್ನು ಕಂಡು ದುಃಖಿಸುತ್ತ ಬಂದುದು.

ಇತ್ತಲಾಗಿ ರಾಮನಾದರೋ ದಂಡಕಾರಣ್ಯದಲ್ಲಿ ಮೃಗರೂಪದಿಂದ ಬಂದ ಕಾಮರೂಪಿಯಾದ ಮಾರೀಚನನ್ನು ಕೊಂದಮೇಲೆ, ಆತುರದಿಂದ ತನ್ನಾಶ್ರಮದ ಕಡೆಗೆ ಹಿಂದಿರಿಗಿ ಬರುತ್ತಿದ್ದನು. ಮಾರೀಚನನ್ನು ಕೊಂದಾಗ ಅವನ ದೀನಸ್ವರವನ್ನು ಕೇಳಿದಾಗಿನಿಂದಲೇ, ರಾಮನು ಮನಸ್ಸಿನಲ್ಲಿ ಸೀತಾಲಕ್ಷ್ಮಣರ ಸ್ಥಿತಿಯು ಏನಾಗಿರುವುದೋ ಎಂದು ತತ್ತಳಿಸುತ್ತಿದ್ದನು. ಆ ಭಯದಿಂದಲೆ ಆತುರಗೊಂಡು ಬರುತ್ತಿರುವಾಗ, ಅವನ ಕಣ್ಣಿಗೆ ದಾರಿಯಲ್ಲಿ ನಾನಾವಿಧವಾದ ದುಶ್ಶಕುನಗಳು ಗೋಚರಿಸುತ್ತಿದ್ದುವು. ಅವನ ಹಿಂದೆ

---

ದಲ್ಲಿ ಸೀತೆಯು ತಾನಾಗಿಯೇ ರಾವಣನನ್ನು ಕುರಿತು, "ನಾಪಹರ್ತುಮಹಂ ಶಕ್ಯಾ ತಸ್ಯ ರಾಮಸ್ಯ ಧೀಮತಃ । ವಿಧಿಸ್ತವ ವಧಾರ್ಥಾಯ ವಿಹಿತೋ ನಾತ್ರ ಸಂಶಯಃ ॥" ರಾಮಭಾರ್ಯೆಯಾದ ನನ್ನನ್ನಪಹರಿಸುವುದು ನಿನಗೆ ಸಾಧ್ಯವಲ್ಲ. ನಿನ್ನ ವಧಕ್ಕಾಗಿಯೇ ಹೀಗೆ ವಿಧಿಯು ಏರ್ಪಟ್ಟಿರುವುದೇ ಹೊರತು ಬೇರೆಯಲ್ಲ" ಎಂದು ಹೇಳಿರುವಳು. ಆದರೆ ಸೀತೆಯು ಇದಕ್ಕಾಗಿ ಪ್ರಲಾಪಿಸುವುದೇಕೆಂದರೆ, ಪತಿಯನ್ನಗಲಿದಾಗ ಪತಿವ್ರತೆಯರು ಹೀಗೆಯೇ ನಡೆಯಬೇಕೆಂಬುದನ್ನು ತಿಳಿಸಿ, ಲೋಕನೀತಿಯನ್ನು ಬೋಧಿಸುವುದಕ್ಕಾಗಿಯೇ ಹೀಗೆ ನಡೆಸಿದುದಾಗಿ ಗ್ರಾಹ್ಯವು.

ನರಿಯು ಭಯಂಕರಸ್ವರದಿಂದ ಊಳಿಡುತ್ತಿತ್ತು. ಮೊದಲೇ ಭಯಗ್ರಸ್ತನಾದ ರಾಮನಿಗೆ ಈ ಸ್ವರವನ್ನು ಕೇಳಿ, ಮೈಯಲ್ಲಿ ರೋಮಾಂಚವೂ ಹುಟ್ಟಿತು. ಆಗ ಅವನು ಮನಸ್ಸಿನಲ್ಲಿ ನಾನಾ ವಿಧವಾಗಿ ಶಂಕಿಸುತ್ತಾ, "ಅಕಟಾ! ಅಮಂಗಳಕರವಾದ ಈ ನರಿಯ ಕೂಗನ್ನು ಕೇಳಿದರೆ ಮುಂದೆ ಏನೋ ಒಂದು ಅಶುಭವುಂಟಾಗುವಂತೆ ತೋರುವುದು. ನಾನು ಆಶ್ರಮಕ್ಕೆ ಹೋಗಿ ನೋಡುವ ವರೆಗೆ ಸೀತೆಯು ಕ್ಷೇಮದಿಂದಿರುವಳೆ? ಅವಳನ್ನು ಅದುವರೆಗೂ ರಾಕ್ಷಸರು ಭಕ್ಷಿಸದಿರುವರೆ? ಮಾರೀಚನು ನನ್ನಂತೆಯೇ ಕಂಠಧ್ವನಿಯನ್ನು ತೋರಿಸಿ ಕೂಗಿದ ದೀನಸ್ವರವನ್ನು ಕೇಳಿದ್ದರೆ ಲಕ್ಷ್ಮಣನು ಸುಮ್ಮನಿರುವನೆ? ಕ್ಷಣಮಾತ್ರವೂ ಅಲ್ಲಿ ನಿಲ್ಲಲಾರನು. ಸೀತೆಯನ್ನು ಅಲ್ಲಿಯೇ ಬಿಟ್ಟು ನನ್ನನ್ನು ಹುಡುಕಿಕೊಂಡು ಬಂದೇ ಬಿಡುವನು. ಸೀತೆಯೂ ಆ ಸ್ವರವನ್ನು ಕೇಳಿದ್ದ ಪಕ್ಷದಲ್ಲಿ ಲಕ್ಷ್ಮಣನನ್ನು ಮತ್ತಷ್ಟು ನಿರ್ಬಂಧಿಸಿ ಹೊರಡಿಸುವಳು. ಇಲ್ಲಿನ ರಾಕ್ಷಸರಾದರೋ ಆ ಸೀತೆಯನ್ನು ಹೇಗಾದರೂ ಕೊಂದುಬಿಡಬೇಕೆಂದೇ ಕಾದಿರುವರು! ಈ ದುರಾಲೋಚನೆಯಿಂದಲೇ ಆ ಮಾರೀಚನು ಮಾಯೆಯಿಂದ ಸುವರ್ಣಮೃಗರೂಪವನ್ನು ಧರಿಸಿ, ನನ್ನನ್ನು ಇಷ್ಟುದೂರಕ್ಕೆ ಕರೆತಂದು, ನನ್ನಿಂದ ಹತನಾಗಿ ರಾಕ್ಷಸ ರೂಪದಿಂದ ಬಿದ್ದಿರುವನು. ಆಹಾ! ಸಾಯುವಾಗಲೂ ಆ ದುಷ್ಟರಾಕ್ಷಸನು ನನ್ನನ್ನು ವಂಚಿಸುವುದಕ್ಕಾಗಿ "ಹಾ ಸೀತೇ! ಹಾ ಲಕ್ಷ್ಮಣಾ! ನಾನು ಕೆಟ್ಟೆನು!" ಎಂದು ದೀನಸ್ವರದಿಂದ ಕೂಗಿಬಿಟ್ಟಿರುವನಲ್ಲಾ! ಇದು ಸೀತೆಯನ್ನು ಕೊಲ್ಲುವುದಕ್ಕಾಗಿ ರಾಕ್ಷಸರು ನಡೆಸಿರುವ ಕಪಟವೆಂಬುದರಲ್ಲಿ ಸಂದೇಹವೇನಿದೆ? ಇನ್ನು ಆ ಶೂನ್ಯಾರಣ್ಯದಲ್ಲಿ ಸೀತಾಲಕ್ಷ್ಮಣರಿಬ್ಬರೂ ಕ್ಷೇಮದಿಂದಿರುವರೇ? ನಾನಾದರೋ ಜನಸ್ಥಾನದ ನಿಮಿತ್ತವಾಗಿ ಅನೇಕ ರಾಕ್ಷಸರೊಡನೆ ವಿರೋಧವನ್ನು ಬೆಳೆಸಿಬಿಟ್ಟಿರುವೆನು. ಅವರು ಇನ್ನು ನಮ್ಮನ್ನು ಸುಮ್ಮನೆ ಬಿಡುವರೆ! ಇದರ ಮೇಲೆ ಇಲ್ಲಿ ನನಗೆ ಅನೇಕ ದುಶ್ಶಕುನಗಳೂ ಕಾಣುತ್ತಿರುವುವಲ್ಲಾ! ಇನ್ನೇನು ಗತಿ!" ಎಂದು ರಾಮನು ಮನಸ್ಸಿನಲ್ಲಿ ನಾನಾ ವಿಧವಾಗಿ ಚಿಂತಿಸುತ್ತಿದ್ದನು. ಮಾರೀಚನು ಮೃಗರೂಪದಿಂದ ತನ್ನನ್ನು ವಂಚಿಸಿ ಅಷ್ಟು ದೂರಕ್ಕೆ ಕರೆತಂದಿರುವುದೊಂದು; ನರಿಯು ಅಮಂಗಳ ಸೂಚಕವಾಗಿ ತನ್ನ ಹಿಂದೆ ಊಳಿಡುತ್ತಿರುವುದೊಂದು; ಇವೆರಡನ್ನೂ ನೋಡಿ ರಾಮನ ಮನಸ್ಸಿನಲ್ಲಿ ಮತ್ತಷ್ಟು ಭಯವು ಹೆಚ್ಚಿತು. ಈ ಚಿಂತೆಯಿಂದಲೇ ಜನಸ್ಥಾನದ ಕಡೆಗೆ

ಆತುರದಿಂದ ನಡೆದುಬರುತ್ತಿದ್ದನು. ದಾರಿಯುದ್ದಕ್ಕೂ ಮೇಲೆ ಮೇಲೆ ದುರ್ನಿಮಿತ್ತಗಳು ಕಾಣುತ್ತಿದ್ದುವು. ಅವನು ಬರುವಾಗ ದಾರಿಯಲ್ಲಿ ಮೃಗಗಳೂ ಪಕ್ಷಿಗಳೂ ಬಹಳ ದೈನ್ಯದಿಂದ ಕ್ರೂರಧ್ವನಿಯನ್ನು ತೋರಿಸಿ ಕೂಗಿಡುತ್ತ, ರಾಮನಿಗಡ್ಡವಾಗಿ ಎಡದಿಂದ ಬಲಕ್ಕೆ ಹಾರುತ್ತಿದ್ದುವು. ಅತಿ ಭಯಂಕರಗಳಾದ ಈ ದುರ್ನಿಮಿತ್ತಗಳನ್ನು ನೋಡಿ ರಾಮನಿಗೆ ಮತ್ತಷ್ಟು ಭಯವೂ ಆತುರವೂ ಹೆಚ್ಚಿತು. ಮೊದಲಿಗಿಂತಲೂ ವೇಗದಿಂದ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗಿ ಬರುತ್ತಿದ್ದನು. ಸೀತಾಲಕ್ಷ್ಮಣರ ವಿಷಯವಾದ ಚಿಂತೆಯೇ ಅವನ ಮನಸ್ಸಿನಲ್ಲಿ ಬಲವಾಗಿ ನಾಟಿತು. ಹೀಗೆ ಚಿಂತಾಕ್ರಾಂತನಾಗಿ ಏನೊಂದೂ ತೋರದೆ ವೇಗದಿಂದ ಆಶ್ರಮದ ಕಡೆಗೆ ಬರುತ್ತಿರುವಾಗ, ನಡುದಾರಿಯಲ್ಲಿ ತನಗಿದಿರಾಗಿ ಬರುತ್ತಿದ್ದ ಲಕ್ಷ್ಮಣನನ್ನು ಕಂಡನು. ದೂರದಲ್ಲಿ ಅವನನ್ನು ಕಂಡಾಗಲೇ ಅವನ ಮನಸ್ಸು ಧಿಗ್ಗನೆ ನಡುಗಿತು. ಇದರ ಮೇಲೆ ಲಕ್ಷ್ಮಣನ ಮುಖವೂ ಕಳೆಗುಂದಿದ ಹಾಗೆ ಕಾಣುತ್ತಿತ್ತು. ಮೊದಲೇ ಭಯಾತುರನಾಗಿ ದುಃಖಿಸುತ್ತಿದ್ದ ರಾಮನು ತನಗಿಂತಲೂ ದುಃಖಿತನಾಗಿ ಬರುತ್ತಿದ್ದ ಲಕ್ಷ್ಮಣನನ್ನು ನೋಡಿದ ಮೇಲೆ, ಆತನ ಮನಸ್ಸಿನಲ್ಲಿ ಉಂಟಾದ ಕಳವಳವನ್ನು ಕೇಳಬೇಕೆ? ಆಗ ರಾಮನಿಗೆ ಏನೊಂದೂ ತೋರಲಿಲ್ಲ! "ಆಹಾ! ಲಕ್ಷ್ಮಣನು ಮಾಡಿದುದು ಬಹಳ ತಪ್ಪು! ನಿರ್ಜನವಾದ ಆ ಕಾಡಿನಲ್ಲಿ ಸೀತೆಯೊಬ್ಬಳನ್ನೇ ಬಿಟ್ಟುಬಂದನಲ್ಲಾ!" ಎಂದು, ಮನಸ್ಸಿನಲ್ಲಿಯೇ ಆತನನ್ನು ನಿಂದಿಸುತ್ತಿದ್ದನು. ಕೊನೆಗೆ ಲಕ್ಷ್ಮಣನು ಸಮೀಪಕ್ಕೆ ಬಂದಮೇಲೆ, ರಾಮನು ಅವನ ಎಡದ ಕೈಯನ್ನು ಹಿಡಿದುಕೊಂಡು, ನಡುನಡುವೆ ಮೃದುತ್ವದಿಂದ ಕೂಡಿದ ಪರುಷವಾಕ್ಯಗಳಿಂದ "ಅಯ್ಯೋ! ಲಕ್ಷ್ಮಣಾ! ಇದೇನು! ನೀನೂ ಬಂದುಬಿಟ್ಟೆಯಾ! ನೀನು ಮಾಡಿದುದು ಬಹಳ ತಪ್ಪು! ಶೂನ್ಯಾರಣ್ಯದಲ್ಲಿ ಸೀತೆಯೊಬ್ಬಳನ್ನೇ ಬಿಟ್ಟು ಬರಬಹುದೆ? ಛೀ! ಏನು ಕೆಲಸವನ್ನು ಮಾಡಿದೆ? ಇನ್ನು ನಾವು ಅಪಾಯವಿಲ್ಲದೆ ಕ್ಷೇಮದಿಂದಿರುವೆವೆ? ಇದರ ಮೇಲೆ ಇಲ್ಲಿ ಅನೇಕ ದುರ್ನಿಮಿತ್ತಗಳೂ ಕಾಣುತ್ತಿರುವುವಲ್ಲಾ! ಸೀತೆಯು ಕ್ಷೇಮದಿಂದಿರುವಳೆಂದು ನನಗೆ ತೋರಲಿಲ್ಲ. ಅವಳು ಇಲ್ಲಿನ ವನಚಾರಿಗಳಾದ ರಾಕ್ಷಸರ ಕೈಗೆ ಸಿಕ್ಕಿಬೀಳುವುದರಲ್ಲಿ ಸಂದೇಹವೇ ಇಲ್ಲ. ಇಲ್ಲಿನ ರಾಕ್ಷಸರು ಇಷ್ಟರೊಳಗೆ ಅವಳನ್ನು ಅಪಹರಿಸಿಕೊಂಡೇ

ಹೋಗಿರಬಹುದು! ಅಥವಾ ಅವಳನ್ನು ಭಕ್ಷಿಸಿಯೇ ಇರಬಹುದು! ವತ್ಸ ಲಕ್ಷ್ಮಣನೆ! ಜನಕಪುತ್ರಿಯಾದ ಆ ಸೀತೆಯನ್ನು ಪುನಃ ನಾವು ಸೇರುವೆವೆ? ಅವಳು ಕ್ಷೇಮದಿಂದ ಬದುಕಿರುವುದನ್ನು ನಾವು ಪುನಃ ನೋಡುವೆವೆ? ಇದೋ ನೋಡು! ಎಲ್ಲಿ ನೋಡಿದರೂ ದುಶ್ಶಕುನಗಳೇ ಕಾಣುವುವಲ್ಲಾ! ಮೃಗಗಳೂ, ನರಿಗಳೂ ಭಯಂಕರವಾಗಿ ಕೂಗುತ್ತಿರುವುವು. ಈ ವಾಯಸಗಳೂ, ಜಿಂಕೆಗಳೂ ಸೂರ್ಯನಿಗಿದಿರಾಗಿ ನಿಂತು ಕಠೋರಸ್ವರದಿಂದ ಅರಚಿಕೊಳ್ಳುತ್ತಿರುವುವು! ಎಲೈ ವೀರನೆ! ಇನ್ನು ನಾವು ಕ್ಷೇಮದಿಂದಿರುವ ಸೀತೆಯನ್ನು ಕಾಣುವೆವೆ? ಮಾರೀಚನು ಮೃಗಸ್ವರೂಪದಿಂದ ಬಂದು ನನ್ನನ್ನು ವಂಚಿಸಿ ಇಷ್ಟು ದೂರಕ್ಕೆ ಕರೆತಂದುಬಿಟ್ಟನು. ನಾನು ಆ ಮೃಗವನ್ನು ಕೊಲ್ಲುವುದಕ್ಕೆ ಎಷ್ಟೋ ಪ್ರಯತ್ನವನ್ನು ಮಾಡಬೇಕಾಯಿತು. ಕೊನೆಗೆ ಹೇಗೋ ಅದನ್ನು ಕೊಂದೆನು. ಆದರೇನು? ಸಾಯುವಾಗ ಅವನು ತನ್ನ ರಾಕ್ಷಸರೂಪವನ್ನು ತೋರಿಸಿಬಿಟ್ಟನು! ಅಂತೂ ನಾವು ರಾಕ್ಷಸ ವಂಚನೆಗೆ ಸಿಕ್ಕಿಬಿದ್ದೆವು. ಲಕ್ಷ್ಮಣಾ! ಈಗ ನಾನೇನು ಹೇಳಲಿ! ಮನಸ್ಸಿಗೂ ನೆಮ್ಮದಿಯಿಲ್ಲ! ಎಡಗಣ್ಣು ದುಡಿಯುತ್ತಿರುವುದು! ಇವೆಲ್ಲವನ್ನೂ ನೋಡಿದರೆ ಸೀತೆಯು ಕ್ಷೇಮದಿಂದಿರುವಳೆಂದು ನನಗೆ ತೋರಲಿಲ್ಲ. ಇಷ್ಟರೊಳಗೆ ಅವಳನ್ನು ಯಾರೋ ಕದ್ದುಕೊಂಡೇ ಹೋಗಿರಬೇಕು. ಇಲ್ಲವೆ ಅವಳನ್ನು ಕೊಂದಿರಬೇಕು! ಅಥವಾ ಯಾರೋ ರಾಕ್ಷಸರು ಅವಳನ್ನು ಹಿಡಿದು ಈಗಲೇ ಅರ್ಧದಾರಿಯಲ್ಲಿ ಎತ್ತಿಕೊಂಡು ಹೋಗುತ್ತಿರಬಹುದು. ಇದರಲ್ಲಿ ಸಂದೇಹವೇ ಇಲ್ಲ!" ಎಂದನು.

ಇಲ್ಲಿಗೆ ಐವತ್ತೇಳನೆಯ ಸರ್ಗವು.

---

{ ರಾಮನು "ಇನ್ನುಮೇಲೆ ಸೀತೆಯನ್ನು ಕಾಣುವುದು ಸಂದೇಹ" ವೆಂದು ನಿಶ್ಚಯಿಸಿ ಪ್ರಲಾಪಿಸಿದುದು. }

ಆಗ ರಾಮನು ಶೂನ್ಯಾರಣ್ಯದಲ್ಲಿ ಸೀತೆಯನ್ನು ಬಿಟ್ಟು ಬಂದು ದುಃಖದಿಂದ ನಿಂತಿರುವ ಲಕ್ಷ್ಮಣನನ್ನು ನೋಡಿ, ಭಯದಿಂದ ತತ್ತರಿಸುತ್ತಾ ಆತನನ್ನು ಕುರಿತು "ವತ್ಸ ಲಕ್ಷ್ಮಣನೆ! ನಾವು ಅಯೋಧ್ಯೆಯಿಂದ ದಂಡಕಾರಣ್ಯಕ್ಕೆ ಬಂದಾಗಲೇ ನನ್ನನ್ನು ಬಿಟ್ಟಿರಲಾರದೆ ಹಿಂಬಾಲಿಸಿ ಬಂದ ಆ

ಸೀತೆಯನ್ನು ಹೀಗೆ ನೀನು ಶೂನ್ಯಾರಣ್ಯದಲ್ಲಿ ಬಿಟ್ಟು ಬರಬಹುದೆ? ಈಗ ಅವಳೆಲ್ಲಿರುವಳು? ಹೀಗೆ ರಾಜ್ಯವನ್ನು ಕಳೆದುಕೊಂಡು ಈ ದಂಡಕಾರಣ್ಯದಲ್ಲಿ ಕಾಡುಕಾಡಾಗಿ ಅಲೆಯುತ್ತಿರುವ ದುಃಖಿತನಾದ ನನಗೆ ಆ ಸೀತೆಯು ಸಮೀಪ ದಲ್ಲಿದ್ದುದರಿಂದ ಸ್ವಲ್ಪವಾದರೂ ಆಪ್ಯಾಯನವಿರುತ್ತಿತ್ತು. ನನ್ನ ದುಃಖಕ್ಕೆ ಸಮಭಾಗಿನಿಯಾಗಿದ್ದ, ಆ ವಿದೇಹರಾಜಪುತ್ರಿಯು ಈಗ ಎಲ್ಲಿರುವಳು? ಎಲೆ ವೀರನೆ! ಅವಳನ್ನು ಬಿಟ್ಟು ಕ್ಷಣಮಾತ್ರವೂ ನಾನು ಬದುಕಲಾರೆನಲ್ಲಾ! ನನ್ನ ಪ್ರಾಣಗಳಿಗೆ ಮುಖ್ಯವಾದ ಆಧಾರದಂತಿರುವ ಆ ಸುಂದರಾಂಗಿಯು ಎಲ್ಲಿರುವಳು? ನನಗೆ ದೇವಲೋಕಾಧಿಪತ್ಯವನ್ನೇ ಕೊಟ್ಟರೂ, ಈ ಭೂ ಮಂಡಲಾಧಿಪತ್ಯವನ್ನೇ ಕೊಟ್ಟರೂ, ಜನಕಪುತ್ರಿಯಾದ ಆ ಸೀತೆಯಿಲ್ಲದ ಮೇಲೆ ಇದೊಂದನ್ನೂ ನಾನು ಅಪೇಕ್ಷಿಸುವವನಲ್ಲ! ಎಲೆ ವತ್ಸನೆ! ನನಗೆ ಪ್ರಾಣಕ್ಕಿಂತಲೂ ಪ್ರಿಯಳಾದ ಆ ಸೀತೆಯು ಬದುಕಿರುವಳೆ? ಅವಳನ್ನಗಲಿದ ಮೇಲೆ ನನ್ನ ಪ್ರಾಣಗಳೇನೋ ನಿಲ್ಲಲಾರವು. ನಾನು ಇನ್ನೂ ನಿರ್ವಹಿಸ ಬೇಕಾದ ಹದಿನಾಲ್ಕು ವರ್ಷಗಳ ವನವಾಸ ವ್ರತವನ್ನು ಮುಗಿಸದಂತೆಯೇ ಪ್ರಾಣವನ್ನೂ ಬಿಡಬೇಕಾಗುವುದೋ ಏನೋ ಕಾಣೆನಲ್ಲಾ! ಇದೊಂದೂ ಇಲ್ಲದೆ ಆ ವ್ರತವನ್ನು ನಾನು ಕ್ಷೇಮದಿಂದ ಮುಗಿಸುವೆನೆ? ಎಲೆ ಸೌಮ್ಯನೆ! ಸೀತೆಯನ್ನಗಲಿದಮೇಲೆ ನನ್ನ ಪ್ರಾಣಗಳಂತೂ ನಿಲ್ಲವು. ನಾನೂ ಸತ್ತು ನೀನೂ ಅಯೋಧ್ಯೆಗೆ ಹೋದಮೇಲೆ, ಆ ಕೈಕೇಯಿಯು ನಿನ್ನನ್ನು ನೋಡಿ ತನ್ನ ಕೋರಿಕೆಯು ಈಡೇರಿತೆಂಬ ಸಂತೋಷದಿಂದ ಹಿಗ್ಗಬಹುದಲ್ಲವೆ? ಆಗಲೇ ಅವಳು ನೆಮ್ಮದಿಯಿಂದಿರಬಹುದು! ಒಂದುವೇಳೆ ಹೀಗೆಯೇ ನಡೆದ ಪಕ್ಷದಲ್ಲಿ ರಾಜಮಾತೆಯೆನಿಸಿಕೊಂಡು ಸಂತೋಷದಿಂದುಬ್ಬುತ್ತಿರುವ ಆ ಕೈಕೇಯಿ ಯನ್ನು, ಪುತ್ರಹೀನೆಯಾಗಿ ಕೊರಗುತ್ತಿರುವ ನನ್ನ ತಾಯಿಯು ಎಷ್ಟು ದೈನ್ಯ ದಿಂದ ಉಪಚರಿಸಬೇಕಾಗುತ್ತಿರುವುದೋ? ಲಕ್ಷ್ಮಣಾ, ಮುಖ್ಯವಾಗಿ ಆ ಸೀತೆಯು ಕ್ಷೇಮದಿಂದ ಬದುಕಿರುವ ಪಕ್ಷದಲ್ಲಿ ನಾನು ತಿರುಗಿ ಆಶ್ರಮಕ್ಕೆ ಪ್ರವೇಶಿಸುವೆನು! ಸೀತೆಗೇನಾದರೂ ಅಪಾಯವುಂಟಾಗಿದ್ದ ಪಕ್ಷದಲ್ಲಿ ನಾನು ಪ್ರಾಣವನ್ನು ಬಿಡುವುದೇ ನಿಜವು. ಇನ್ನು ನನಗೆ ಆ ಆಶ್ರಮದಿಂದೇನು? ನಾನು ಆಶ್ರಮಕ್ಕೆ ಹೋದೊಡನೆಯೇ ಸೀತೆಯು ಹಸನ್ಮುಖಳಾಗಿ ಬಂದು ನನ್ನನ್ನು ಮಾತಾಡಿಸದಿದ್ದ ಪಕ್ಷದಲ್ಲಿ ನಾನು ಸಾಯುವುದೇ ನಿಜವು. ಎಲೆ

ವತ್ಸನೆ! ಸೀತೆಯು ಬದುಕಿರುವಳೇ ಇಲ್ಲವೇ ಎಂಬುದನ್ನು ನನಗೆ ಮೊದಲು ಹೇಳು! ನಿನ್ನ ಮುಖವು ಹೀಗೆ ಬಾಡಿರುವುದಕ್ಕೆ ಕಾರಣವೇನು? ಒಂದುವೇಳೆ ನೀನು ಪ್ರಮಾದವಶದಿಂದಿದ್ದಾಗ ರಾಕ್ಷಸರೇನಾದರೂ ಅವಳನ್ನು ಭಕ್ಷಿಸಿಬಿಟ್ಟರೆ? ಆಕೆಯಾದರೋ ಬಹಳ ಕೋಮಲವಾದ ಮೈಯುಳ್ಳವಳು. ಇನ್ನೂ ಎಳ ವಯಸ್ಸುಳ್ಳವಳು. ಇದುವರೆಗೆ ದುಃಖವೆಂಬುದನ್ನೇ ಕಂಡವಳಲ್ಲ! ಅವಳು ಈಗ ನನ್ನನ್ನು ಕ್ಷಣಮಾತ್ರದವರೆಗೆ ಅಗಲಿದುದಕ್ಕಾಗಿಯೇ ಎಷ್ಟೋ ಸಂಕಟ ಪಡುತ್ತಿರುವಳು. ಕಪಟ ಸ್ವಭಾವವುಳ್ಳ ದುರಾತ್ಮನಾದ ಆ ಮಾರೀಚನು ನನ್ನಿಂದ ಹತನಾಗಿ ಸಾಯುವಾಗ “ಹಾ ಲಕ್ಷ್ಮಣಾ!” ಎಂದು ಕೂಗಿದಾಗಲೇ ನಿನಗೆ ಬಹಳ ಭಯವುಂಟಾಗಿರಬಹುದಲ್ಲವೆ? ಇನ್ನು ಸೀತೆಯ ವಿಷಯದಲ್ಲಿ ಹೇಳಬೇಕಾದುದೇನು? ನನ್ನ ಕಂಠಧ್ವನಿಗೆ ಸಮಾನವಾದ ಆ ದೀನಸ್ವರವನ್ನು ಕೇಳಿದೊಡನೆಯೇ ಸೀತೆಯು ಭಯಗ್ರಸ್ತಳಾಗಿ ನಿನ್ನನ್ನು ಕಳುಹಿಸಿರಬಹುದು! ಅವಳ ನಿರ್ಬಂಧಕ್ಕಾಗಿಯೇ ನೀನು ಇಲ್ಲಿಗೆ ಓಡಿಬಂದಿರಬಹುದಲ್ಲವೆ? ಲಕ್ಷ್ಮಣಾ! ಏನಾದರೇನು? ನೀನು ಬಹಳ ತಪ್ಪು ಕೆಲಸವನ್ನು ಮಾಡಿದೆ! ಸೀತೆಯೊಬ್ಬಳನ್ನೇ ಅಲ್ಲಿ ಬಿಟ್ಟು ಬರಬಹುದೆ? ನಮ್ಮನ್ನು ವಂಚಿಸುವುದಕ್ಕಾಗಿಯೇ ಕಾದಿದ್ದ ರಾಕ್ಷಸರಿಗೆ ಅನುಕೂಲವಾದ ಅವಕಾಶವನ್ನು ಮಾಡಿಕೊಟ್ಟೆ? ನಾವು ಖರನನ್ನು ಕೊಂದುದರಿಂದ, ಮೊದಲೇ ರಾಕ್ಷಸರು ನಮ್ಮಲ್ಲಿ ಸಂಪೂರ್ಣವಾದ ದ್ವೇಷವನ್ನಿಟ್ಟಿರುವರು. ಮಾಂಸಾಹಾರಿಗಳಾದ ಆ ಕ್ರೂರರಾಕ್ಷಸರು ಈ ಸಮಯದಲ್ಲಿ ಸೀತೆಯನ್ನು ಕೊಲ್ಲುವರೆಂಬುದರಲ್ಲಿ ಸಂದೇಹವೇನಿದೆ? ಹಾ! ಲಕ್ಷ್ಮಣಾ! ಮುಖ್ಯವಾಗಿ ನಾನು ಮಹಾ ವ್ಯಸನದಲ್ಲಿ ಮುಳುಗಿಹೋಗಿರುವೆನು! ಮಾಡುವುದೇನು? ದೈವಸಂಕಲ್ಪವು ಹೀಗಿರುವಾಗ ಯಾರೇನು ಮಾಡುವರು? ನಡೆಯಬೇಕಾದ ಕೆಲಸವು ನಡೆದೇ ತೀರಬೇಕಲ್ಲವೆ?” ಎಂದನು. ಹೀಗೆ ರಾಮನು ಸೀತೆಯನ್ನು ಚಿಂತಿಸಿ ಪ್ರಲಾಪಿಸುತ್ತಾ ಲಕ್ಷ್ಮಣನೊಡಗೂಡಿ ವೇಗದಿಂದ ಜನಸ್ಥಾನಕ್ಕೆ ಬರುತ್ತಿದ್ದನು. ಆಗ ರಾಮನಿಗಾದರೋ ಒಂದು ಕಡೆಯಲ್ಲಿ ಸೀತೆಯ ವಿಷಯವಾದ ಚಿಂತೆ! ಮತ್ತೊಂದು ಕಡೆಯಲ್ಲಿ ಹಸಿವು! ಒಂದು ಕಡೆಯಲ್ಲಿ ಮೃಗವನ್ನು ಹಿಂಬಾಲಿಸಿ ಓಡಿದುದರಿಂದುಂಟಾದ ಬಳಲಿಕೆ! ಒಂದು ಕಡೆಯಲ್ಲಿ ಬಿಸಿಲಿನಿಂದುಂಟಾದ ಬಾಯಾರಿಕೆ! ಹೀಗೆ ನಾನಾ ಕಷ್ಟಗಳು ಬಂದು ಸೇರಿದುವು. ಆಗಾಗ ನಿಟ್ಟುಸಿರನ್ನು ಬಿಡುತ್ತಾ ಬಣ್ಣಗೆಟ್ಟು ಬಾಡಿದ

*

ಮುಖವುಳ್ಳವನಾಗಿ, ಮೊದಲೇ ದುಃಖಿತನಾದ ಲಕ್ಷ್ಮಣನನ್ನು ನಿಂದಿಸಿ ಮತ್ತಷ್ಟು ಕೊರಗಿಸುತ್ತಾ ತನ್ನಾಶ್ರಮದ ಸಮೀಪಕ್ಕೆ ಆತ್ಯಾತುರದಿಂದ ಬಂದನು. ಬಾಗಿಲಲ್ಲಿ ಸೀತೆಯನ್ನು ಕಾಣಲಿಲ್ಲ! ಒಳಗೆ ಹೋದನು! ಅಲ್ಲಿಯೂ ಇಲ್ಲ! ಪಕ್ಕಗಳಲ್ಲಿ ನೋಡಿದನು, ಅಲ್ಲಿಯೂ ಇಲ್ಲ! ಸುತ್ತಿಬಂದು ನೋಡಿದನು! ಎಲ್ಲಿಯೂ ಅವಳನ್ನು ಕಾಣಲಿಲ್ಲ! ತಾವು ವಿಹರಿಸುತ್ತಿದ್ದ ಕೆಲವು ಸ್ಥಳಗಳನ್ನೂ ನೋಡಿದನು. ಎಲ್ಲಿ ಹುಡುಕಿದರೇನು? ಸೀತೆಯನ್ನು ಕಾಣಲಿಲ್ಲ! ಅಲ್ಲಲ್ಲಿ ತಾನು ಆಕೆಯೊಡನೆ ವಿಹರಿಸುತ್ತಿದ್ದ ಒಂದೊಂದು ಸ್ಥಳ ವನ್ನೂ ಹುಡುಕಿ ನೋಡಿ "ಇಲ್ಲಿ ಕ್ರೀಡಾಸ್ಥಾನವು! ಇಲ್ಲಿ ಲತಾಗೃಹವು!" ಎಂದು ಕ್ರಮವಾಗಿ ನೋಡಿ ಬಂದು, ಎಲ್ಲಿಯೂ ಸೀತೆಯನ್ನು ಕಾಣದೆ ಭಯ ದಿಂದ ಪುಳಕಿತವಾದ ಮೈಯುಳ್ಳವನಾಗಿ ನಿಂತಿದ್ದನು.

ಇಲ್ಲಿಗೆ ಐವತ್ತೆಂಟನೆಯ ಸರ್ಗವು.

---

[1]ರಾಮನು ಸೀತೆಯೊಬ್ಬಳನ್ನೇ ಬಿಟ್ಟುಬರುವುದಕ್ಕೆ ಕಾರಣವೇನೆಂದು
ಲಕ್ಷ್ಮಣನನ್ನು ಕೇಳಿದುದು. ಲಕ್ಷ್ಮಣನು ಅಲ್ಲಿ ನಡೆದ
ವಿಷಯವನ್ನು ರಾಮನಿಗೆ ತಿಳಿಸಿದುದು.

ರಾಮನು ಲಕ್ಷ್ಮಣನೊಡನೆ ದಾರಿಯಲ್ಲಿ ನಡೆದುಬರುತ್ತಿದ್ದಾಗಲೇ, ದುಃಖಪರವಶನಾದ ಆ ಲಕ್ಷ್ಮಣನನ್ನು ಕುರಿತು "ಎಲೆ ವತ್ಸನೆ! ನೀನು ಸೀತೆಯನ್ನು ಬಿಟ್ಟು ಇಲ್ಲಿಗೆ ಬಂದುದೇಕೆ? ನಿನ್ನನ್ನು ನಂಬಿಯೇ ನಾನು ಅವಳನ್ನು ನಿನ್ನ ವಶಕ್ಕೆ ಬಿಟ್ಟುಬಂದೆನಲ್ಲವೆ? ನೀನು ಸೀತೆಯನ್ನು ಬಿಟ್ಟು ಏಕಾಕಿಯಾಗಿ ಬರುತ್ತಿರುವುದನ್ನು ನೋಡಿದಾಗಲೇ ನನ್ನ ಮನಸ್ಸು ನಡುಗಿ ಹೋಯಿತು. ಸೀತೆಗೆ ಏನೋ ಅಪಾಯವುಂಟಾಗಿರಬಹುದೆಂದು ನನ್ನ ಮನಸ್ಸಿಗೆ ಶಂಕೆಯುಂಟಾಯಿತು. ಇದರಮೇಲೆ ಆಗಾಗ ಅಶುಭಸೂಚಕವಾಗಿ ಈ ನನ್ನ ಎಡಗಣ್ಣು ದುಡಿಯುತ್ತಿರುವುದು. ಈ ನನ್ನ ಎಡದ ತೋಳೂ ಅದಿರುತ್ತಿರು ವುದು! ವತ್ಸ ಲಕ್ಷ್ಮಣಾ! ಸೀತೆಯಿಲ್ಲದೆ ನೀನೊಬ್ಬನೇ ಬರುತ್ತಿರುವುದನ್ನು

1. ಹಿಂದಿನ ಸರ್ಗದಲ್ಲಿ ಸಂಗ್ರಹಿಸಿ ಹೇಳಲ್ಪಟ್ಟ ವಿಷಯಗಳೇ ಈ ಸರ್ಗದಲ್ಲಿ ಪುನಃ ಸವಿಸ್ತರವಾಗಿ ತಿಳಿಸಲ್ಪಡುವುವೆಂದು ಗ್ರಹಿಸಬೇಕು.

ಅಷ್ಟುದೂರದಲ್ಲಿ ಕಂಡಾಗಲೇ ನನ್ನ ಎದೆಯು ನಡುಗಿಹೋಯಿತು. ಅಲ್ಲಿ ನಡೆದ ವಿಷಯವೇನೆಂಬುದನ್ನು ವಿಸ್ತಾರವಾಗಿ ತಿಳಿಸು" ಎಂದನು. ಮೊದಲೇ ದುಃಖಿತನಾದ ಲಕ್ಷ್ಮಣನು, ಹೀಗೆ ರಾಮನು ದುಃಖದಿಂದ ನುಡಿಯುತ್ತಿರುವ ಮಾತನ್ನು ಕೇಳಿ ಮತ್ತಷ್ಟು ದುಃಖಿತನಾಗಿ "ಎಲೆ ಆರ್ಯನೆ! ನಾನಾಗಿಯೇ ಸ್ವೇಚ್ಛೆಯಿಂದ ಆ ಸೀತೆಯನ್ನು ಬಿಟ್ಟುಬಂದವನಲ್ಲ. ಆ ಸೀತೆಯು ನನ್ನನ್ನು ಕುರಿತು ಹೇಳಿದ ಕ್ರೂರವಾಕ್ಯಗಳನ್ನು ಕೇಳಿ ಸಹಿಸಲಾರದೆ, ಅವಳ ನಿರ್ಬಂಧಕ್ಕಾಗಿಯೇ ಇಲ್ಲಿಗೆ ಹೊರಟುಬಂದೆನು. ನೀನು ಇತ್ತಲಾಗಿ ಹೊರಟುಬಂದಮೇಲೆ ಈ ಕಡೆಯಿಂದ 'ಹಾ! ಸೀತೇ! ಹಾ! ಲಕ್ಷ್ಮಣಾ! ನನ್ನನ್ನು ರಕ್ಷಿಸಿರಿ!' ಎಂದು ನಿನ್ನ ಕಂಠಸ್ವರದಂತೆಯೇ ಒಂದಾನೊಂದು ದೀನಧ್ವನಿಯು ಕೇಳಿಸಿತು. ಆ ಧ್ವನಿಯನ್ನು ಕೇಳಿದೊಡನೆಯೇ ಸೀತೆಯು, ನಿನ್ನಲ್ಲಿರುವ ಪ್ರೇಮಾತಿಶಯದಿಂದ ಭಯಪಟ್ಟು ನಡುಗಿ ದುಃಖದಿಂದ ಅಳುತ್ತ 'ಹೋಗುಹೋಗೆ'ಂದು ನನ್ನನ್ನು ನಿರ್ಬಂಧಿಸಿದಳು. ಹೀಗೆ ಬಾರಿಬಾರಿಗೂ ನನ್ನನ್ನು ನಿರ್ಬಂಧಿಸಿ ಅವಳು ಹೋಗೆಂದು ಹೇಳಿದರೂ ನಾನು ಅವಳ ಮಾತನ್ನೂ ಲಕ್ಷ್ಯದಲ್ಲಿಡದೆ ನಿನ್ನ ಪರಾಕ್ರಮದ ವಿಷಯದಲ್ಲಿ ನನಗೆ ಸಂಪೂರ್ಣವಾದ ನಂಬಿಕೆಯಿದ್ದುದರಿಂದ ಅಲ್ಲಿಯೇ ನಿಂತು ಆಕೆಯನ್ನು ನೋಡಿ "ಎಲೆ ಆರ್ಯೆ! ರಾಮನಿಗೆ ರಾಕ್ಷಸರಿಂದ ಭಯವೆಂದರೇನು? ಇದುವರೆಗೆ ಆತನನ್ನಿದಿರಿಸಬಲ್ಲ ರಾಕ್ಷಸನೊಬ್ಬನನ್ನೂ ನಾನು ನೋಡಿದುದಿಲ್ಲ. ನೀನೇಕೆ ಭಯಪಡುವೆ? ಧೈರ್ಯದಿಂದಿರು. ಇದು ರಾಮನ ಕೂಗಲ್ಲ. ಯಾವನೋ ನಮ್ಮನ್ನು ವಂಚಿಸುವುದಕ್ಕೆ ಹೀಗೆ ಕೂಗಿರುವನು. ದೇವತೆಗಳಿಗಾದರೂ ಅಭಯವನ್ನು ಕೊಟ್ಟು ರಕ್ಷಿಸಬಲ್ಲ ರಾಮನು 'ಅಯ್ಯೋ ಸೀತೇ! ಕೆಟ್ಟೆನು! ನನ್ನನ್ನು ರಕ್ಷಿಸು!' ಎಂಬ ಈ ಹೀನವಾಕ್ಯಗಳನ್ನು ಎಂದಾದರೂ ಆಡುವನೇ? ಈ ಭ್ರಾಂತಿಯನ್ನು ಬಿಡು! ಮಹಾಕುಲದಲ್ಲಿ ಹುಟ್ಟಿದ ವೀರಕ್ಷತ್ರಿಯರ ಬಾಯಿಂದ ಇಂತಹ ಮಾತುಗಳು ಹೊರಡುವುವೇ? ಅದರಲ್ಲಿಯೂ ಗಂಡಸು ಆಪತ್ಕಾಲಗಳಲ್ಲಿ ಹೆಂಗಸನ್ನು ಕೂಗಿ ಮೊರೆಯಿಟ್ಟು ಅಭಯವನ್ನು ಪ್ರಾರ್ಥಿಸುವುದು ಕೇವಲ ಹೀನಕೃತ್ಯವಲ್ಲವೆ? ಇಂತಹ ಮಾತು ರಾಮನ ಬಾಯಿಂದ ಹೊರಡುವುದೆಂದರೇನು? ಮೂರು ಲೋಕವನ್ನೂ ರಕ್ಷಿಸಬಲ್ಲ ರಾಮನು ತನ್ನನ್ನು ರಕ್ಷಿಸುವುದಕ್ಕಾಗಿ ಮತ್ತೊಬ್ಬರ ಮೊರೆಯಿಡುವನೆ? ಯಾವನೋ ರಾಕ್ಷಸನು ಏನೋ ಒಂದು ಉದ್ದೇಶದಿಂದ ಅಣ್ಣನಾದ

ರಾಮನ ಸ್ವರವನ್ನು ಹಿಡಿದು ಹಾಗೆ 'ಹಾ ರಕ್ಷಿಸು! ರಕ್ಷಿಸು!' ಎಂದು ಕೂಗಿರುವನೇ ಹೊರತು ಬೇರೆಯಲ್ಲ. ಎಲೈ ಆರ್ಯೆ! ನಿನ್ನನ್ನು ಕೂಗಿ ಕೊಂಡುದೂ ಹಾಗಿರಲಿ, 'ಹಾ ಲಕ್ಷ್ಮಣಾ! ನನ್ನನ್ನು ರಕ್ಷಿಸು!' ಎಂದು ಕೂಗಿದ ಮಾತಿನಲ್ಲಿಯೂ ಕೂಡ ಅದರ ಧ್ವನಿಯು ರಾಮನ ಧ್ವನಿಯಂತಿರಲಿಲ್ಲ. ಯಾವುದೋ ಬೇರೊಂದು ವಿಧವಾದ ಧ್ವನಿಯಂತೆ ತೋರಿರುವುದು. ಆದುದ ರಿಂದ ಕೇವಲ ಕುತ್ಸಿತರಾದ ಸ್ತ್ರೀಯರಂತೆ ಹೀಗೆ ನೀನು ನಿಷ್ಕಾರಣವಾಗಿ ದುಃಖಿಸುವುದುಚಿತವಲ್ಲ. ನಿನ್ನ ಭಯವನ್ನು ಬಿಡು! ನೆಮ್ಮದಿಯಿಂದಿರು! ಯುದ್ಧದಲ್ಲಿ ರಾಮನನ್ನು ಜಯಿಸತಕ್ಕ ಮನುಷ್ಯರು ಮೂರು ಲೋಕಗಳಲ್ಲಿ ಇದುವರೆಗೆ ಎಲ್ಲಿಯೂ ಹುಟ್ಟಿದುದೇ ಇಲ್ಲ! ಇನ್ನುಮೇಲೆ ಹುಟ್ಟುವುದೂ ಇಲ್ಲ ವೆಂದು ತಿಳಿ! ದೇವತೆಗಳೆಲ್ಲರೂ ಸೇರಿ ಇಂದ್ರನನ್ನೇ ಮುಂದಿಟ್ಟುಕೊಂಡು ಬಂದರೂ ಯುದ್ಧದಲ್ಲಿ ಆ ರಾಮನನ್ನು ಜಯಿಸಲಾರರು! ನಿನ್ನ ಮನಸ್ಸಿ ನಲ್ಲಿರುವ ನಿಷ್ಕಾರಣವಾದ ಈ ಶಂಕೆಯನ್ನು ಬಿಡು! ನನ್ನ ಮಾತನ್ನು ನಂಬು! ತ್ರೈಲೋಕ್ಯನಾಥನಾದ ಆ ರಾಮನನ್ನು ಈ ಮೂರು ಲೋಕಗಳಲ್ಲಿ ಯಾರೂ ಇದಿರಿಸಲಾರರು. ಸಮಸ್ತ ಪ್ರಾಣಿಗಳಿಗೂ ಅಭಯವನ್ನು ಕೊಡತಕ್ಕ ಆ ರಾಮನಿಗೆ ಇತರರಿಂದ ಭಯವೆಂದರೇನು!" ಎಂದು ನಾನು ಎಷ್ಟೋ ವಿಧದಲ್ಲಿ ನಂಬಿಕೆಯನ್ನು ಹೇಳಿದೆನು. ಎಷ್ಟು ಹೇಳಿದರೇನು! ಅವಳು ನಂಬಲೇ ಇಲ್ಲ. ಅವಳ ಬುದ್ಧಿಯು ಕದಲಿತು. ಯುಕ್ತಾಯುಕ್ತವನ್ನರಿಯದೆ ಕಣ್ಣೀರು ಬಿಡುತ್ತ ನನ್ನೊಡನೆ ಹೇಳಬಾರದ ಮಾತುಗಳನ್ನು ಹೇಳತೊಡಗಿದಳು. ನನ್ನನ್ನು ಕುರಿತು ಧಿಕ್ಕಾರದ ಮಾತುಗಳನ್ನಾಡಿ, ಕೊನೆಗೆ "ಲಕ್ಷ್ಮಣಾ! ನೀನು ಹೇಗಾದರೂ ಮಾಡಿ ಅಣ್ಣನು ಸತ್ತುಹೋದಮೇಲೆ ನನ್ನನ್ನು ವರಿಸ ಬಹುದೆಂದು ನನ್ನಲ್ಲಿ ಪಾಪಬುದ್ಧಿಯನ್ನಿಟ್ಟಿರುವೆಯಾ? ವ್ಯರ್ಥವಾದ ಈ ದುರಾಸೆಯನ್ನು ಬಿಡು! ನಾನೆಂದಿಗೂ ನಿನಗೀಡಾಗುವವಳಲ್ಲ! ರಾಮನು ಹೀಗೆ ಕಷ್ಟದಲ್ಲಿ ಸಿಕ್ಕಿ ಕೂಗುತ್ತಿದ್ದರೂ ನೀನು ಅಲಕ್ಷ್ಯವಾಗಿರುವುದನ್ನು ನೋಡಿ ದರೆ, ಭರತನ ಪ್ರೇರಣೆಯಿಂದ ನೀನು ರಾಮನನ್ನು ಕೊಲ್ಲುವುದಕ್ಕಾಗಿಯೇ ಅವಕಾಶವನ್ನು ಹುಡುಕುತ್ತಾ ಈ ಕಾಡಿಗೂ ಅವನನ್ನು ಹಿಂಬಾಲಿಸಿ ಬಂದಂತಿದೆ! ಈಗ ತಕ್ಕ ಅವಕಾಶವು ಸಿಕ್ಕಿರುವುದರಿಂದಲೇ ನೀನು ಸುಮ್ಮನಿರುವೆ! ಹಾಗಿಲ್ಲ ದಿದ್ದರೆ ಮೊದಲಿನಂತೆ ನೀನು ಅವನಲ್ಲಿ ಪ್ರೇಮವನ್ನು ತೋರಿಸದಿರುವೆಯಾ?"

ಎಂದಳು. “ಅಣ್ಣಾ ! ಈ ಮಾತುಗಳನ್ನು ಕೇಳಿ ನನಗೆ ಮಹಾ ವ್ಯಸನವೂ ಕೋಪವೂ ಉಂಟಾಯಿತು. ನನಗೆ ನಾನೇ ತುಟಿಯನ್ನು ಕಚ್ಚಿಕೊಳ್ಳುತ್ತ, ಆಗಲೇ ಆಶ್ರಮವನ್ನು ಬಿಟ್ಟು ಇತ್ತಲಾಗಿ ಹೊರಟುಬಂದೆನು” ಎಂದನು. ಅದನ್ನು ಕೇಳಿ ರಾಮನು ವ್ಯಸನದಿಂದ ಮೈಮರೆತು “ಲಕ್ಷ್ಮಣಾ! ಏನಾದರೇನು ? ನೀನು ಸೀತೆಯೊಬ್ಬಳನ್ನೇ ಬಿಟ್ಟುಬಂದುದು ಬಹಳ ತಪ್ಪು ! ನಾನು ಯಾವ ರಾಕ್ಷಸರನ್ನಾದರೂ ನಿಗ್ರಹಿಸಬಲ್ಲೆನೆಂಬುದನ್ನು ನೀನರಿಯೆಯಾ ? ಸೀತೆಯ ಕೋಪಕ್ಕೆ ಹೆದರಿ ನೀನು ಹೊರಟುಬರಬಹುದೇ ? ನಿನ್ನ ಕಾರ್ಯವು ನನಗೆ ಸ್ವಲ್ಪವೂ ತೃಪ್ತಿಕರವಾಗಿಲ್ಲ. ಕೇವಲ ಸ್ತ್ರೀಮಾತ್ರಳಾದ ಆ ಸೀತೆಯು ಕೋಪದಿಂದ ಕ್ರೂರವಾಕ್ಯಗಳನ್ನಾಡಿದಳೆಂಬುದಕ್ಕಾಗಿ ನೀನು ಹೆದರಿ ಬಂದುಬಿಡುವುದೆಂದರೇನು ? ಸ್ವಾಭಾವಿಕವಾಗಿಯೇ ಸ್ತ್ರೀಯರಿಗೆ ವಿವೇಕವಿಲ್ಲ ! ಅವರಿಗೆ ಕೋಪವೂ ಹೆಚ್ಚು ! ಏನೋ ಕಾಲವಶದಿಂದ ಅವಳು ಪರುಷವಾಕ್ಯವನ್ನಾಡಿದುದಕ್ಕಾಗಿ ನೀನು ಬಂದುಬಿಟ್ಟೆಯಲ್ಲಾ ! ಹೇಗೆ ನೋಡಿದರೂ ಇದು ನಿನ್ನ ತಪ್ಪೆಂದೇ ತೋರುವುದು ! ಸೀತೆಯ ಮಾತಿಗಾಗಿ ನೀನು ಕೋಪಗೊಂಡು ನನ್ನ ಮಾತನ್ನು ಮೀರಿದೆ ! ಅದೋ ಅಲ್ಲಿ, ನನ್ನನ್ನು ಮೃಗರೂಪದಿಂದ ವಂಚಿಸಿ ಕರೆತಂದ ರಾಕ್ಷಸನು ಸತ್ತುಬಿದ್ದಿರುವುದನ್ನು ನೋಡಿದೆಯಾ ? ನಾನು ಲೀಲಾಮಾತ್ರದಿಂದಲೇ ಬಾಣಸಂಧಾನಮಾಡಿ, ಬಿಲ್ಲನ್ನೆಳೆದು ಆತನನ್ನು ಕೊಂದುಬಿಟ್ಟೆನು. ನನ್ನ ಬಾಣವು ತಾಗಿದೊಡನೆಯೇ ಅವನು ಮೃಗರೂಪವನ್ನು ಬಿಟ್ಟು, ತೋಳ್ಬಳೆಗಳಿಂದೊಪ್ಪುತ್ತಿರುವ ರಾಕ್ಷಸರೂಪವನ್ನು ಹೊಂದಿ ಬಿದ್ದುಬಿಟ್ಟನು. ಆದರೆ ಸಾಯುವ ಸಮಯದಲ್ಲಿ ಅವನು ಬಹುದೂರಕ್ಕೆ ಕೇಳುವಂತೆ ನನ್ನ ಕಂಠಸ್ವರವನ್ನು ತೋರಿಸಿ, ದೈನ್ಯದಿಂದ ಕೂಗಿದನು. ಅದನ್ನು ಕೇಳಿದಮಾತ್ರಕ್ಕೇ ನೀನು ಸೀತೆಯನ್ನು ಬಿಟ್ಟುಬಂದೆಯಾ !” ಎಂದನು.

ಇಲ್ಲಿಗೆ ಐವತ್ತೊಂಬತ್ತನೆಯ ಸರ್ಗವು.

---

ರಾಮನು ಆಶ್ರಮದಲ್ಲಿ ಸೀತೆಯನ್ನು ಕಾಣದೆ ದುಃಖಿಸಿದುದು.

ರಾಮನು ಆಶ್ರಮದ ಕಡೆಗೆ ಬರುತ್ತಿರುವಾಗಲೇ ಅವನ ಎಡದ ಕಣ್ಣಿನ ರೆಪ್ಪೆಯು ಆಗಾಗ ಅದಿರುತ್ತಿತ್ತು. ಅವನ ಕೈಕಾಲುಗಳು ತಡವರಿಸುತ್ತಿದ್ದುವು.

ಮೈಯ್ಯಲ್ಲಿ ನಡುಕವು ಕಾಣಿಸಿತು. ಹೀಗೆ ಮೇಲೆಮೇಲೆ ದುರ್ನಿಮಿತ್ತಗಳಾಗು ವುದನ್ನು ನೋಡಿ "ಸೀತೆಯು ಕ್ಷೇಮದಿಂದಿರುವಳೆ?" ಎಂದು ಆಗಾಗ ಹೇಳಿ ಕೊಳ್ಳುತ್ತಿದ್ದನು. ಸೀತೆಯನ್ನು ನೋಡಬೇಕೆಂದು ಅತ್ಯಾತುರದಿಂದ ಬೇಗ ಬೇಗನೆ ಹೆಜ್ಜೆಯನ್ನಿಟ್ಟು ಆತುರದಿಂದ ಬರುತ್ತಿದ್ದನು. ಕೊನೆಗೆ ಆಶ್ರಮದ ಸಮೀಪಕ್ಕೂ ಬಂದು ಪರ್ಣಶಾಲೆಯಲ್ಲಿ ಸೀತೆಯಿಲ್ಲದಿರುವುದನ್ನು ನೋಡಿ, ಹಾಗೆಯೇ ಸ್ತಬ್ಧನಾಗಿ ಎದೆಗುಂದಿ ತತ್ತಳಿಸುತ್ತಿದ್ದನು. ಭಯದಿಂದ ನಿಂತ ಕಡೆಯಲ್ಲಿ ನಿಲ್ಲಲಾರದೆ ವೇಗದಿಂದ ಬರುವಂತೆ ಮೆಯ್ಯನ್ನೊದರುತ್ತ ಆ ಪರ್ಣಶಾಲೆಯ ಮೂಲೆಮೂಲೆಗಳನ್ನೂ ಹುಡುಕಲಾರಂಭಿಸಿದನು. ಎಲ್ಲಿ ನೋಡಿದರೂ ಪರ್ಣಶಾಲೆಯು ಶೂನ್ಯಪ್ರದೇಶವಾಗಿಯೇ ಕಾಣಿಸಿತು. ಎಲ್ಲಿ ನೋಡಿದರೂ ಕಣ್ಣಿಗೆ ಬೀಳಲಿಲ್ಲ. ಸೀತೆಯಿಲ್ಲದ ಆ ಪರ್ಣಶಾಲೆಯು ಆಗ ರಾಮನ ಕಣ್ಣಿಗೆ ಹನಿಗಾಲದಲ್ಲಿ ಕಾಂತಿಗುಂದಿದ ತಾವರೆಯಂತೆ ಕಾಣಿಸು ತ್ತಿತ್ತು. ಆ ಆಶ್ರಮವೃಕ್ಷಗಳಲ್ಲಿ ದುಂಬಿಗಳು ಹೀನಸ್ವರದಿಂದ ಕೂಗುತ್ತಿರಲು ಆ ವೃಕ್ಷಗಳೇ ಅಳುತ್ತಿರುವಂತೆ ತೋರಿತು. ಅಲ್ಲಿ ಹೂಗಿಡಗಳಲ್ಲಿ ಪುಷ್ಪ ಗಳೆಲ್ಲವೂ ಬಾಡಿಹೋಗಿದ್ದುವು. ಅಲ್ಲಿನ ಪಕ್ಷಿಗಳಿಗಾಗಲಿ, ಮೃಗಗಳಿಗಾಗಲಿ, ಮುಖದಲ್ಲಿ ಕಳೆಯೇ ಇರಲಿಲ್ಲ! ಕಾಂತಿಹೀನವಾಗಿ ಹಾಳುಬಿದ್ದ ಆ ಆಶ್ರಮ ಪ್ರದೇಶವನ್ನು ವನದೇವತೆಗಳೆಲ್ಲರೂ ಬಿಟ್ಟು ಹೋದಂತೆ ಕಾಣುತ್ತಿತ್ತು. ಅಲ್ಲಿ ಸೀತೆಯು ಆ ಕಪಟಸನ್ಯಾಸಿಯ ಉಪಚಾರಾರ್ಥವಾಗಿ ತಂದಿಟ್ಟಿದ್ದ ಕೃಷ್ಣಾಜಿನಗಳೂ, ದರ್ಭೆಗಳೂ, ಬೃಸ್ಯಾಸನವೂ ಚದುರಿಬಿದ್ದಿದ್ದುವು. ಹೀಗೆ ಶೂನ್ಯವಾದ ಆ ಪ್ರದೇಶವನ್ನು ನೋಡಿ, ರಾಮನು ಅಳುವುದಕ್ಕಾರಂಭಿ ಸಿದನು. ಆತನು ಆ ಪ್ರದೇಶವನ್ನು ನೋಡಿನೋಡಿ, "ಅಯ್ಯೋ! ಸೀತೆಯೆಲ್ಲಿ ಹೋದಳು? ಅವಳನ್ನು ಯಾರು ಅಪಹರಿಸಿಕೊಂಡು ಹೋಗಿರುವರೋ! ಮರಣವನ್ನು ಹೊಂದಿದಳೋ! ಅಥವಾ ಎಲ್ಲಿಯಾದರೂ ಮರೆಸಿಕೊಂಡಿರು ವಳೋ! ರಾಕ್ಷಸರು ಯಾರಾದರೂ ತಿಂದುಬಿಟ್ಟರೋ! ನಿಜಸ್ಥಿತಿಯೇನೋ ತಿಳಿಯಲಿಲ್ಲವಲ್ಲಾ! ಅವಳು ಕೇವಲ ಭೀರುಸ್ವಭಾವವುಳ್ಳವಳಾದುದರಿಂದ ಇಲ್ಲಿ ಯಾರೂ ಇಲ್ಲದುದಕ್ಕಾಗಿ ಇಲ್ಲಿನ ವೃಕ್ಷಗಳ ಗುಂಪಿನಲ್ಲಿ ಮರೆಸಿಕೊಂಡಿರು ವಳೋ! ಪುಷ್ಪಫಲವನ್ನು ತರುವುದಕ್ಕಾಗಿ ತೋಟಕ್ಕೆ ಹೋಗಿರುವಳೋ! ಸ್ನಾನಾರ್ಥವಾಗಿ ಪಕ್ಕದ ತಾವರೆಯ ಕೊಳಕ್ಕೆ ಹೋಗಿರುವಳೋ! ಅಥವಾ

ನೀರನ್ನು ತರುವುದಕ್ಕೆ ನದಿಗೆ ಹೋಗಿರುವಳೋ!" ಎಂದು ಬಾರಿಬಾರಿಗೂ ಅಳುತ್ತ, ಎಷ್ಟೋ ಪ್ರಯತ್ನದಿಂದ ಹುಡುಕಿದರೂ ಆ ಅರಣ್ಯದಲ್ಲಿ ಸೀತೆಯನ್ನು ಕಾಣಲಿಲ್ಲ. [1]ದುಃಖದಿಂದ ಆತನ ಕಣ್ಣುಗಳೆರಡೂ ಕೆಂಪಾದುವು. ಅವನಿಗೆ

---

1. ಇಲ್ಲಿ "ಶೋಕರಕ್ತೇಕ್ಷಣಶ್ಶೋಕಾದುನ್ಮತ್ತ ಇವ ಲಕ್ಷ್ಯತೇ | ವೃಕ್ಷಾದ್ವೃಕ್ಷಂ ಪ್ರಧಾವನ್ ಸ ಗಿರೇಶ್ಚಾದ್ರಿಂ ನದಾನ್ನದೀಂ || ಬಭೂವ ವಿಲಪನ್ ರಾಮಶ್ಶೋಕಾರ್ಣವ ಪರಿಪ್ಲುತಃ" ಎಂದು ಮೂಲವು. ಇಲ್ಲಿ "ಉನ್ಮತ್ತ ಇವ" ಎಂಬಲ್ಲಿರುವ ಇವ ಶಬ್ದವನ್ನು ಎಲ್ಲಾ ವಿಶೇಷಣಗಳಿಗೂ ಅನ್ವಯಿಸಿಕೊಂಡು, "ಶೋಕರಕ್ತೇಕ್ಷಣ ಇವ, ಉನ್ಮತ್ತ ಇವ ವಿಲಪನ್ನಿವ" ಇತ್ಯಾದಿ ರೀತಿಯಿಂದ ಸಂಬಂಧಿಸಬೇಕು. ಇದರಿಂದ ರಾಮನು ವಾಸ್ತವಾಗಿ ದುಃಖಾದಿಗಳನ್ನನುಭವಿಸುತ್ತಿರಲಿಲ್ಲವೆಂದೂ, ಇವೆಲ್ಲವೂ ಲೋಕಶಿಕ್ಷಾರ್ಥವಾದ ನಟನೆಗಳೆಂದೂ ಸಿದ್ಧವಾಗುವುದು. ಇದಕ್ಕಾಗಿಯೇ ಸರ್ವಜ್ಞನಾದ ವಾಲ್ಮೀಕಿಯು ಆಗಾಗ "ಉದ್ಭ್ರಮನ್ನಿವ, ಉನ್ಮತ್ತ ಇವ" ಇತ್ಯಾದಿ ರೀತಿಯಲ್ಲಿ ಇವ ಶಬ್ದವನ್ನುಪಯೋಗಿಸಿರುವನು. ಇದರಂತೆ ಶ್ರೀಶುಕರೂ "ರಕ್ಷೋಽಧಮೇನ ವೃಕವದ್ವಿಪಿನೇ ಸಮಕ್ಷಂ ವೈದೇಹರಾಜ ದುಹಿತರ್ಯಪಿ ಯಾಪಿತಾಯಾಂ | ಭ್ರಾತ್ರಾ ವನೇ ಕೃಪಣವತ್ಪ್ರಿಯಯಾ ವಿಯುಕ್ತಃ ಸ್ತ್ರೀಸಂಗಿನಾಂ ಗತಿಮಿತಿ ಪ್ರಥಯಂಶ್ಚಕಾರ || ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಂ ರಕ್ಷೋವಧಾಯೈವ ನ ಕೇವಲಂ ವಿಭೋಃ | ಕುತೋಽನ್ಯಥಾಸ್ಯ ರಮತಸ್ಸ್ವ ಆತ್ಮನಿ ಸೀತಾಕೃತಾನಿ ವ್ಯಸನಾನೀಶ್ವರಸ್ಯ || ಸ ವೈ ನ ಆತ್ಮಾತ್ಮವತಾಮಧೀಶ್ವರಸ್ಸಕ್ತಸ್ತ್ರಿಲೋಕ್ಯಾಂ ಭಗವಾನ್ವಾಸುದೇವಃ | ನ ಸ್ತ್ರೀಕೃತಂ ಕಶ್ಮಲಮಶ್ನುವೀತ ನ ಲಕ್ಷಣಂ ಚಾಪಿ ವಿಹಾತುಮಿಚ್ಛತಿ ||" ರಾಕ್ಷಸಾಧಮನಾದ ರಾವಣನು ತೋಳನಂತೆ ಹೊಂಚುಹಾಕುತ್ತಿದ್ದು ಸೀತೆಯನ್ನಪಹರಿಸಿಕೊಂಡುಹೋಗಲು, ರಾಮನು ಲಕ್ಷ್ಮಣನೊಡನೆ ಸೇರಿ ಕೇವಲ ಕೃಪಣನಂತೆ ಪತ್ನಿವಿಯೋಗವನ್ನು ಸಹಿಸಲಾರದೆ ಅಳುವುದಕ್ಕಾರಂಭಿಸಿ, ಆ ವ್ಯಾಜದಿಂದ ಸ್ತ್ರೀಸಂಗವುಳ್ಳವರ ಗತಿಯೇ ಹೀಗೆಂದು ಪ್ರಕಟಿಸಿರುವನೇ ಹೊರತು ಬೇರೆಯಲ್ಲ. ಮತ್ತು ಅವನು ಮನುಷ್ಯರೂಪದಿಂದವತರಿಸಿದುದು ರಾಕ್ಷಸರ ವಧಕ್ಕೆ ಮಾತ್ರವೇ ಅಲ್ಲದೆ ತನ್ನ ವ್ಯಾಪಾರಗಳಿಂದ ಮನುಷ್ಯರಿಗೆ ನೀತಿಯನ್ನು ಬೋಧಿಸುವುದಕ್ಕಾಗಿಯೂ ಅವತರಿಸಿರುವಂತೆ ಗ್ರಾಹ್ಯವು. ಹಾಗಿಲ್ಲದಿದ್ದರೆ ನಿತ್ಯಾನಂದಸ್ವರೂಪನಾಗಿ ತನ್ನ ಆತ್ಮದಲ್ಲಿಯೇ ರಮಿಸುತ್ತಿರುವ ಈಶ್ವರನಿಗೆ ವ್ಯಸನವೆಂಬುದು ಹೇಗೆ? ಆತ್ಮವಂತರೆಲ್ಲರಿಗೂ ಅಧೀಶ್ವರನಾಗಿ ಪರಮಾತ್ಮನೆನಿಸಿಕೊಂಡ ಭಗವಂತನಾದ ವಾಸುದೇವನು ಮೂರು ಲೋಕದಲ್ಲಿಯೂ ಸಂಬಂಧಿಸಿದವನಲ್ಲ. ಆದುದರಿಂದ ಅವನ ಮನಸ್ಸಿನ ಕಾಲುಷ್ಯಕ್ಕೂ ಕಾರಣವಿಲ್ಲ ಎಂದು ಹೇಳಿರುವರು. ಹಾಗೆಯೇ ಸ್ಕಾಂದದಲ್ಲಿ, ಉಮಾಸಂಹಿತೆಯಲ್ಲಿ, ದೇವತೆಗಳನ್ನು ಕುರಿತು ವಿಷ್ಣುವು "ಅಹಂ ದಾಶರಥಿರ್ಭೂತ್ವಾ ಹನ್ಮಿ ರಾವಣಮಾಹವೇ | ಶ್ರೀಮದ್ರಾಮಾವತಾರೇಸ್ಮಿನ್ನಜ್ಞವತ್ಕ್ರಿಯತೇ ಮಯಾ || ತತ್ರ ಶಂಕಾ ನ ಕರ್ತವ್ಯಾ ಸರ್ವಜ್ಞೇನಾಪಿ ಮಾಯಯಾ || ಮನ್ಮಾಯಾ

ಹುಚ್ಚು ಹಿಡಿದಂತಾಯಿತು. ಮರದಿಂದ ಮರಕ್ಕೂ, ಬೆಟ್ಟದಿಂದ ಬೆಟ್ಟಕ್ಕೂ, ನದಿಯಿಂದ ನದಿಗೂ ಸುತ್ತಿಸುತ್ತಿ ಸಾಕಾಯಿತು. ಹೀಗೆ ರಾಮನು ದುಃಖವೆಂಬ ಮಹಾಸಮುದ್ರದ ಕೆಸರಿನಲ್ಲಿ ಮುಳುಗಿದಂತಾಗಿ ಪ್ರಲಾಪಿಸುತ್ತಿದ್ದನು. ಆಗ ರಾಮನು ದುಃಖದಿಂದ ಮೈಮರೆತು, ಒಂದೊಂದು ಮರದ ಬಳಿಗೂ ಹೋಗಿ ನಿಂತು. "ಎಲೈ ವೃಕ್ಷವೇ! ನನ್ನ ಪ್ರಿಯಪತ್ನಿಯಾದ ಸೀತೆಯನ್ನು ಕಂಡೆಯಾ? ಆಕೆಗೆ ನಿನ್ನ ಹೂಗಳಲ್ಲಿ ಬಹಳ ಪ್ರೀತಿಯುಂಟು. ಅದಕ್ಕಾಗಿ ನಿನ್ನಲ್ಲಿಗೆ ಬಂದಾಗ ನೀನು ನೋಡಿರಬಹುದಲ್ಲವೆ? ಅವಳ ಮುಖವು ಬಹಳ ಅಂದವಾಗಿರುವುದು. ನಿನಗೆ ತಿಳಿದಿದ್ದಪಕ್ಷದಲ್ಲಿ ಅವಳೆಲ್ಲಿರುವಳೆಂದು ನನಗೆ ತಿಳಿಸು. ಎಲೆ ಬಿಲ್ವವೃಕ್ಷವೆ! ನಿನ್ನ ಎಳೇ ಚಿಗುರಿನಂತಿರುವ ಹೊಂಬಟ್ಟೆಯನ್ನುಟ್ಟು, ನಿನ್ನ ಹಣ್ಣಿನಂತೆ ಸ್ತನಗಳುಳ್ಳ ಆ ಸೀತೆಯನ್ನು ನೀನೇನಾದರೂ ಕಂಡೆಯಾ? ನೀನು ಅವಳನ್ನು ನೋಡಿದ್ದರೆ ಈಗ ಆಕೆಯೆಲ್ಲಿರುವಳೆಂದು ತಿಳಿಸು. ಎಲೆ ಅರ್ಜುನವೃಕ್ಷವೆ! ನನ್ನ ಪ್ರಿಯಪತ್ನಿಯಾದ ಸೀತೆಗೆ ನಿನ್ನಲ್ಲಿ ಬಹಳ ಪ್ರೀತಿಯಿರುವುದರಿಂದ ಅವಳ ಸಂಗತಿಯು ನಿನಗೆ ಚೆನ್ನಾಗಿ ತಿಳಿದಿರಬಹುದಲ್ಲವೆ? ನೀನಾದರೂ ಹೇಳು. ಭಯಶೀಲೆಯಾದ ಜನಕಪುತ್ರಿಯು ಬದುಕಿರುವಳೇ ಇಲ್ಲವೆ? ಒಂದುವೇಳೆ ಈ ಕಕುಭವೃಕ್ಷವಾದರೂ ಸೀತೆಯನ್ನು ಕಂಡಿರಬಹುದೆ? ಅವಳ ತೊಡೆಯೂ ಈ ವೃಕ್ಷದಂತೆಯೇ ಇರುವುದು. ಪುಷ್ಪಪಲ್ಲವಗಳಿಂದ ತುಂಬಿದ ಈ ವೃಕ್ಷವು ಆ ಸೀತೆಯ ಸಂಗತಿಯನ್ನು ಸ್ಪಷ್ಟವಾಗಿ ತಿಳಿದಿರುವುದರಲ್ಲಿ ಸಂದೇಹವಿಲ್ಲ. ಅಥವಾ ಸೀತೆಗೆ ಈ ತಿಲಕವೃಕ್ಷದಲ್ಲಿಯೂ ಬಹಳ ಪ್ರೀತಿಯುಂಟು. ವೃಕ್ಷಜಾತಿಯಲ್ಲಿ ಮೇಲೆನಿಸಿಕೊಂಡ ಈ ಮರದಲ್ಲಿ ಭ್ರಮರಗಳು ಗಾನಧ್ವನಿಯನ್ನು ಮಾಡುತ್ತಿರುವುವು. ಇದಕ್ಕಾದರೂ ಸೀತೆಯ

---

ಮೋಹಿತಂ ರಕ್ಷೋ ಮನುಷ್ಯಂ ಮಾಮವೇಕ್ಷ್ಯತಿ ॥ ಅನ್ಯಥಾ ತಸ್ಯ ಸಾ ನಾಶಂ ನ ಭವೇದ್ಯತ್ರಕುತ್ರಚಿತ್" ನಾನು ರಾಮನಾಗಿ ಹುಟ್ಟಿ ರಾವಣನನ್ನು ಕೊಲ್ಲುವೆನು. ಆಗ ನಾನು ಅಜ್ಞನಂತೆ ನಟಿಸುವೆನು. ಈ ವಿಷಯದಲ್ಲಿ ಸಂದೇಹಿಸಬೇಕಾದುದಿಲ್ಲ. ನನ್ನ ಮಾಯಾಮೋಹಿತನಾದ ರಾವಣನು ನನ್ನನ್ನು ಮನುಷ್ಯನೆಂದು ತಿಳಿಯುವನು. ಇದಲ್ಲದೆ ಆತನಿಗೆ ಬೇರೆ ವಿಧದಿಂದ ಮರಣವಿಲ್ಲವೆಂದೇ ಹೇಳಿರುವನು. ಮತ್ತು ಈ ಪ್ರಲಾಪಾದಿಗಳೆಲ್ಲವೂ ಮಮತೆಯಿಂದಲೇ ಹುಟ್ಟುವುವು. ಆ ಬುದ್ಧಿಗೆ ಅಜ್ಞಾನವೇ ಮೂಲವು. ಅಂತಹ ಅಜ್ಞಾನವು ಸರ್ವೇಶ್ವರನಿಗೆ ಉಂಟಾಗದು. ಆದುದರಿಂದ ಈ ವಿಲಾಪಾದಿಗಳೆಲ್ಲವೂ ಲೋಕಶಿಕ್ಷಾರ್ಥವೆಂದೇ ಗ್ರಹಿಸಬೇಕು.

ಸಂಗತಿಯು ಚೆನ್ನಾಗಿ ತಿಳಿದಿರುವುದು. ಇದನ್ನಾದರೂ ಕೇಳಲೆ! ಇವೆಲ್ಲವೂ ಹಾಗಿರಲಿ! ಈ ಅಶೋಕವೃಕ್ಷವನ್ನಾದರೂ ಕೇಳುವೆನು. ಎಲೆ ಚೆನ್ನಸುಗೆ! ನಿನ್ನ ಹೆಸರನ್ನು ಕೇಳಿದಾಗಲೇ ನೀನು ಇತರರ ದುಃಖವನ್ನು ನೀಗಿಸಬಾರದೆ? ನನಗೆ ನನ್ನ ಪ್ರಿಯಪತ್ನಿಯನ್ನು ತೋರಿಸಿ ನಿನ್ನ ಹೆಸರನ್ನು ಸಾರ್ಥಕಪಡಿಸು! ಎಲೆ ತಾಲವೃಕ್ಷವೆ! ನಿನ್ನ ಹಣ್ಣಿನಂತೆ ತುಂಬಿದ ಸ್ತನವುಳ್ಳ ಆ ಸೀತೆಯನ್ನು ನೀನೆಲ್ಲಾದರೂ ಕಂಡೆಯಾ? ನನ್ನಲ್ಲಿ ನಿನಗೆ ಕಾರುಣ್ಯವಿದ್ದರೆ ಆಕೆಯೆಲ್ಲಿರುವ ಳೆಂಬುದನ್ನು ತಿಳಿಸು. ಎಲೆ ಜಂಬೂವೃಕ್ಷವೆ! ನಿನ್ನ ಹಣ್ಣಿನಂತೆಯೇ ನುಣುಪಾದ ಮೈಯುಳ್ಳ ನನ್ನ ಪ್ರಿಯಪತ್ನಿಯನ್ನು ನೀನೇನಾದರೂ ಕಂಡಿದ್ದರೆ ಹೇಳು. ಹೆದರಬೇಡ! ನಿರ್ಭಯವಾಗಿ ನನ್ನೊಡನೆ ಹೇಳು. ಎಲೆ ಕರ್ಣಿಕಾರ ವೃಕ್ಷವೆ! ನಿನ್ನಲ್ಲಿರುವ ಪುಷ್ಪಸಮೃದ್ಧಿಯನ್ನು ನಾನೇನೆಂದು ಹೇಳಲಿ! ನನ್ನ ಪ್ರಿಯೆಯಾದ ಸೀತೆಗೆ ನಿನ್ನ ಪುಷ್ಪಗಳಲ್ಲಿ ಬಹಳ ಆಸೆಯಿರುವುದರಿಂದ ನಿನ್ನಲ್ಲಿಗೆ ಬಂದಿರಬಹುದಲ್ಲವೆ. ಹಾಗಿದ್ದರೆ ಅವಳೆಲ್ಲಿರುವಳೆಂದು ನನಗೆ ತಿಳಿಸು ಎಂದು ಒಂದೊಂದು ವೃಕ್ಷದ ಬಳಿಗೂ ಹೋಗಿ, ಅವುಗಳ ಮುಂದೆ ನಿಂತು ದೈನ್ಯದಿಂದ ಕೇಳುತ್ತಿದ್ದನು. ಹಾಗೆಯೇ ಮಹಾಯಶಸ್ವಿಯಾದ ರಾಮನು ಆ ಕಾಡಿನಲ್ಲಿರುವ ಮಾವು, ಕಡವು, ಮತ್ತಿ, ಸಾಲೆ, ಹಲಸು, ಗೋರಂಟೆ, ಗೊಬ್ಬಳಿ, ದಾಳಿಂಬ, ಮೊದಲಾದ ಮರಗಳೆಲ್ಲವನ್ನೂ ನೋಡಿ ಕೇಳುತ್ತಿದ್ದನು. ಅಲ್ಲಿಂದ ಮುಂದೆ ಹೂತೋಟಗಳಿಗೆ ಹೋಗಿ ಅಲ್ಲಿ ಮಲ್ಲಿಗೆ, ಇರವಂತಿಗೆ, ಸಂಪಗೆ, ಕೇದಗೆ, ಮುಂತಾದ ಹೂಗಿಡಗಳೆಲ್ಲವನ್ನೂ ಒಂದೊಂದಾಗಿ ನೋಡಿ ಅವುಗಳ ಮುಂದೆ ನಿಂತು ಹುಚ್ಚನಂತೆ ಮಾತಾಡಿಸುತ್ತಿದ್ದನು. ಆಮೇಲೆ ಕಾಡಿನಲ್ಲಿ ಕಂಡ ಒಂದೊಂದು ಮೃಗವನ್ನೂ ಕರೆದು ಕೇಳಲಾರಂಭಿಸಿದನು. ಮುಂದಿದ್ದ ಒಂದು ಜಿಂಕೆಯನ್ನು ನೋಡಿ "ಎಲೆ ಜಿಂಕೆ! ಸೀತೆಯನ್ನು ಕಂಡೆಯಾ! ಅವಳೂ ನಿನ್ನಂತೆಯೇ ವಿಸ್ತಾರವಾದ ಕಣ್ಣುಳ್ಳವಳು! ಅವಳ ನೋಟವೂ ನಿನ್ನ ನೋಟ ದಂತೆಯೇ ಚಿತ್ರವಿಚಿತ್ರವಾಗಿರುವುದು. ಆದುದರಿಂದ ಅವಳೇನಾದರೂ ನಿಮ್ಮ ಗುಂಪಿನಲ್ಲಿ ಕಲೆತು ಈಗ ನನ್ನ ದೃಷ್ಟಿಗೆ ಬೀಳದಿರುವಳೆ? ಎಲೆ ಗಜವೆ! ನಿನಗೆ ಒಂದುವೇಳೆ ಆ ಸೀತೆಯ ಸಂಗತಿಯು ತಿಳಿದಿರಬಹುದೆಂದೆಣಿಸುವೆನು. ಅವಳ ತೊಡೆಯು ನಿನ್ನ ಸುಂಡಿಲಿನಂತೆಯೇ ಇರುವುದು. ನಿನಗೆ ತಿಳಿದಿದ್ದರೆ ಅವಳೆಲ್ಲಿ ರುವಳೆಂದು ಹೇಳು! ಓಹೋ! ಇಲ್ಲಿ ಹುಲಿಯಿರುವುದು. ಮೃಗಜಾತಿಯಲ್ಲಿ

ಇದಕ್ಕೆ ಬಹಳ ಧೈರ್ಯವುಂಟು. ಆದುದರಿಂದ ಇದನ್ನಾದರೂ ಕೇಳುವೆನು. ಎಲೆ ಶಾರ್ದೂಲವೆ? ಈ ಮೃಗಗಳು ನಿಜಸ್ಥಿತಿಯನ್ನು ಹೇಳುವುದಕ್ಕೆ ಹೆದರುವಂತಿದೆ! ನೀನು ಮೃಗಜಾತಿಗಳಲ್ಲಿ ಬಹಳ ಧೈರ್ಯವುಳ್ಳವನೆಂದು ಪ್ರಸಿದ್ಧಿಯುಂಟಲ್ಲವೆ? ನೀನಾದರೂ ಆ ಸೀತೆಯನ್ನು ಕಂಡಿದ್ದರೆ, ಮುಚ್ಚುಮರೆಯಿಲ್ಲದೆ ಅವಳೆಲ್ಲಿರುವಳೆಂಬುದನ್ನು ಹೇಳು. ಎಲೆ ಸೀತೆ! ಎಲ್ಲಿ ಹೋಗಿರುವೆ? ಎಲೆ ಪ್ರಿಯೆ! ದೂರದಲ್ಲಿ ನಿನ್ನನ್ನು ಕಂಡಹಾಗೆ ತೋರಿತಲ್ಲಾ! ಏಕೆ ಓಡಿಹೋಗುವೆ? ನಿಲ್ಲು ನಿಲ್ಲು! ಅಲ್ಲಲ್ಲಿ ಮರಗಳ ಗುಂಪಿನಲ್ಲಿ ಮರೆಸಿಕೊಂಡು ನನ್ನನ್ನು ಮೋಸ ಮಾಡಬೇಕೆಂದಿರುವೆಯಾ? ಏಕೆ ಮಾತನಾಡುವುದಿಲ್ಲ? ಎಲೆ ಕಮಲಾಕ್ಷಿ! ನಾನು ಇಷ್ಟು ಸಂಕಟಪಡುತ್ತಿರುವಾಗಲೂ ನಿನಗೆ ನನ್ನಲ್ಲಿ ಕರುಣೆಯಿಲ್ಲವೆ! ಹಾಸ್ಯಕ್ಕಾದರೂ ಮಿತವಿರಬೇಕು. ಇದಲ್ಲದೆ ನೀನು ಅಷ್ಟಾಗಿ ಹೀಗೆ ಹಾಸ್ಯ ಮಾಡುವ ಸ್ವಭಾವವುಳ್ಳವಳಲ್ಲ. ಹಾಗಿದ್ದರೂ ಈಗ ನನ್ನನ್ನು ಹೀಗೆ ಉಪೇಕ್ಷಿಸುವುದೇಕೆ? ನೀನು ಅಲ್ಲಲ್ಲಿ ಮರೆಸಿಕೊಂಡು ಓಡಿಹೋಗುತ್ತಿದ್ದರೂ ನಾನು ನಿನ್ನನ್ನು ಕಾಣಲಿಲ್ಲವೆಂದೆಣಿಸುವೆಯಾ? ನೀನುಟ್ಟಿದ್ದ ಸೀರೆಯನ್ನು ನಾನು ಕಾಣೆನೆ? ಈಗಲೇ ಆ ನಿನ್ನ ಹೊಂಬಣ್ಣದ ಪಟ್ಟೆಮಡಿಯನ್ನು ನೋಡಿಬಿಟ್ಟೆನು. ಈ ಕಣ್ಣುಮುಚ್ಚಾಟವನ್ನು ಬಿಡು. ನಿನಗೆ ನನ್ನಲ್ಲಿ ನಿಜವಾದ ಪ್ರೀತಿಯಿದ್ದರೆ ಓಡಿಹೋಗದೆ ನಿಲ್ಲು! ಅಯ್ಯೋ! ಹೀಗೆ ನಾನು ಕೂಗಿಕೊಳ್ಳುವುದೇಕೆ? ಛೀ! ಆ ಸೀತೆಯು ಈಗ ಆಶ್ರಮದಲ್ಲಿಲ್ಲವೆಂಬುದೇ ನಿಜವು. ಅವಳನ್ನು ಯಾರೋ ಹಿಂಸಿಸಿ ಕೊಂದುಹಾಕಿರಬೇಕು. ಅವಳು ಬದುಕಿದ್ದರೆ ಹೀಗೆ ದುಃಖಿತನಾದ ನನ್ನನ್ನು ಇಷ್ಟರವರೆಗೆ ಉಪೇಕ್ಷಿಸುತ್ತಿದ್ದಳೆ? ಆದುದರಿಂದ ನಾನಿಲ್ಲದ ವೇಳೆಯಲ್ಲಿ ಇಲ್ಲಿನ ಮಾಂಸಾಹಾರಿಗಳಾದ ಯಾರೋ ರಾಕ್ಷಸರು ಅವಳ ಅವಯವಗಳನ್ನು ತುಂಡುತುಂಡಾಗಿ ಮಾಡಿ ಭಕ್ಷಿಸಿರಬಹುದು. ಇದರಲ್ಲಿ ಸಂದೇಹವಿರದು. ಆಹಾ! ಮೊಲ್ಲೆಯಮೊಗ್ಗಿನಂತಿರುವ ಆಕೆಯ ಹಲ್ಲುಗಳೋ! ತೊಂಡೆಯ ಹಣ್ಣಿನಂತಿರುವ ಆಕೆಯ ತುಟಿಯೋ! ರತ್ನದೋಲೆಗಳಿಂದ ಝಗಝಗಿಸುತ್ತ ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಆಕೆಯ ಮುಖವೋ! ಅವುಗಳೊಂದೊಂದನ್ನೂ ಬೇರೆಬೇರೆಯಾಗಿ ರಾಕ್ಷಸರು ತಿನ್ನುವಾಗ ಆಹಾ! ಅವು ಎಷ್ಟು ಕಂದಿರಬಹುದೋ ಕಾಣೆನಲ್ಲಾ! ಅಯ್ಯೋ! ಸಂಪಿಗೆಯ ಹೂವಿನಂತೆ ಮೈಬಣ್ಣವುಳ್ಳುದಾಗಿ, ಮುಕ್ತಾಹಾರದಿಂದ ಶೋಭಿಸುತ್ತಿದ್ದ ಆಕೆಯ ಕೊರಲನ್ನು

ಮುರಿದು ಯಾವ ರಾಕ್ಷಸನು ಭಕ್ಷಿಸಿದನೋ ಕಾಣೆನಲ್ಲಾ ! ಈ ದುರವಸ್ಥೆಯಲ್ಲಿ ಅವಳು ಹೇಗೆ ಗೋಳಿಡುತ್ತಿದ್ದಳೋ ! ಚಿಗುರಿನಂತೆ ಕೋಮಲವಾಗಿ, ತೋಳ್ಬಳೆಗಳಿಂದಲೂ, ಹಸ್ತಾಭರಣಗಳಿಂದಲೂ ಕೂಡಿದ ಆ ಸುಕುಮಾರಾಂಗಿಯ ನಡುಗುತ್ತಿರುವ ತೋಳುಗಳನ್ನೂ ಯಾರೋ ರಾಕ್ಷಸರು ಭಕ್ಷಿಸಿಬಿಟ್ಟಿರುವರು. ಬಾಲೆಯಾದ ಆ ಸೀತೆಯನ್ನು ರಾಕ್ಷಸರ ಬಾಯಿಗೆ ತುತ್ತಾಗಿಸುವುದಕ್ಕಾಗಿಯೇ ನಾನು ಅವಳನ್ನು ಬಿಟ್ಟುಹೋದಂತಾಯಿತು. ಬಂಧುವರ್ಗಗಳೊಡನೆ ದಾರಿಯಲ್ಲಿ ಪ್ರಯಾಣಮಾಡುತ್ತಿದ್ದ ಅಬಲೆಯಾದ ಹೆಂಗಸೊಬ್ಬಳು ಒಂಟಿಯಾಗಿ ಸಿಕ್ಕಿಕೊಂಡು ಕಾಡುಮೃಗಗಳಿಂದ ಭಕ್ಷಿಸಲ್ಪಡುವಂತೆ, ಈಗ ಸೀತೆಯು ದಿಕ್ಕಿಲ್ಲದೆ ರಾಕ್ಷಸರ ಬಾಯಿಗೆ ತುತ್ತಾದಳಲ್ಲಾ ! "ಹಾ ಮಹಾಬಾಹೂ ! ಹಾ, ಲಕ್ಷ್ಮಣಾ ! ನೀನೆಲ್ಲಿಯಾದರೂ ಸೀತೆಯನ್ನು ನೋಡಿದೆಯಾ ? ಹಾ, ಸೀತೇ ! ಹಾ, ಪ್ರಿಯೇ ! ನೀನೆಲ್ಲಿಹೋದೆ ? ಎಲೆ ಕಲ್ಯಾಣಿ ! ಈಗ ನೀನೆಲ್ಲಿರುವೆ ?" ಎಂದು ಬಾರಿಬಾರಿಗೂ ಕೂಗಿ ಗೋಳಾಡುತ್ತಿದ್ದನು. ಹೀಗೆ ರಾಮನು ಕಾಡಿನಿಂದ ಕಾಡಿಗೆ ತಿರುಗುತ್ತಾ ದುಃಖಾತಿಶಯದಿಂದ ಯಾವ ವಸ್ತುವನ್ನು ನೋಡಿದರೂ ಸೀತೆಯೆಂದು ಭ್ರಮಿಸುವನು. ಒಂದೊಂದು ಕಡೆಯಲ್ಲಿ ಅವಳನ್ನು ಹೋಲುವ ಲತಾದಿಗಳನ್ನು ನೋಡಿ ಮರುಳಾಗುವನು. ಒಮ್ಮೆ ಹುಚ್ಚು ಹಿಡಿದಂತಿರುವನು. ಹೀಗೆ ರಾಮನು ಸೀತೆಯನ್ನು ಹುಡುಕುತ್ತಾ ಕಾಡುಗಳನ್ನೂ, ನದಿಗಳನ್ನೂ, ಬೆಟ್ಟಗಳನ್ನೂ, ಬೆಟ್ಟದ ತೊರೆಗಳನ್ನೂ, ತೋಟಗಳನ್ನೂ ಸುತ್ತಿಸುತ್ತಿ, ದಟ್ಟವಾದ ಆ ಮಹಾರಣ್ಯವೆಲ್ಲವನ್ನೂ ಪುನಃ ಪುನಃ ನೋಡಿಬಂದರೂ ಸೀತೆಯನ್ನು ಕಾಣಲಿಲ್ಲ. ಆದರೇನು ? ಇನ್ನೂ ಅವನ ಆಸೆಯು ತೀರಲಿಲ್ಲ. ಪುನಃ ತನ್ನ ಪ್ರಿಯಪತ್ನಿಯಾದ ಆಕೆಯನ್ನು ಹುಡುಕುವುದಕ್ಕಾಗಿ ದೇಹಶ್ರಮವನ್ನೂ ನೋಡದೆ ಸುತ್ತಿಸುತ್ತಿ ಶ್ರಮಪಡುತ್ತಿದ್ದನು.

ಇಲ್ಲಿಗೆ ಅರುವತ್ತನೆಯ ಸರ್ಗವು.

ರಾಮನ ಪ್ರಲಾಪವು. ಲಕ್ಷ್ಮಣನು ಸಮಾಧಾನಪಡಿಸಿದುದು.

ದಶರಥಪುತ್ರನಾದ ರಾಮನು ಕೇವಲ ಶೂನ್ಯವಾದ ಆ ಆಶ್ರಮವನ್ನೂ, ಪರ್ಣಶಾಲೆಯನ್ನೂ, ಅಲ್ಲಲ್ಲಿ ಕೆದರಿದ್ದ ಆಸನವನ್ನೂ ನೋಡಿ, ಎಲ್ಲಿ ಹುಡುಕಿದರೂ ಸೀತೆಯನ್ನು ಕಾಣದೆ, ಕೊನೆಗೆ "ಹಾ ಸೀತೇ!" ಎಂದು ಉಚ್ಚಸ್ವರದಿಂದ ಕೂಗಿ ಸಂಕಟವನ್ನು ಸಹಿಸಲಾರದೆ ತನ್ನ ತೋಳುಗಳನ್ನು ಹಿಸಿಕಿಕೊಳ್ಳುತ್ತಾ "ವತ್ಸ ಲಕ್ಷ್ಮಣಾ! ಸೀತೆಯೆಲ್ಲಿ? ಇಲ್ಲಿಂದ ಎಲ್ಲಿಗೆ ಹೋಗಿರುವಳು? ಅಥವಾ ಅವಳನ್ನು ಯಾರು ಅಪಹರಿಸಿಕೊಂಡು ಹೋಗಿರುವರು? ರಾಕ್ಷಸರೇ ಭಕ್ಷಿಸಿಬಿಟ್ಟಿರಬಹುದೇ? ಎಲೆ ಸೀತೆ! ಹಾಸ್ಯಕ್ಕಾಗಿ ಮರದಲ್ಲಿ ಮರೆಸಿಕೊಂಡು ನನ್ನ ಕಣ್ಣಿಗೆ ಕಾಣದಿರುವೆಯಾ? ಸಾಕು! ನಿನ್ನ ವಿನೋದವನ್ನು ಬಿಡು! ನಾನು ದುಃಖವನ್ನು ತಡೆಯಲಾರೆನು. ನನ್ನ ಸಮೀಪದಲ್ಲಿ ಬಂದು ನಿಲ್ಲು! ಎಲೆ ಸೀತೆ! ನನ್ನ ವಿಷಯವೂ ಹಾಗಿರಲಿ! ನಿನ್ನಲ್ಲಿ ಎಷ್ಟೋ ನಂಬಿಕೆಯಿಂದ ಬಂದು ನಿನ್ನೊಡನೆ ಆಟವಾಡುತ್ತಿದ್ದ ಈ ಹುಲ್ಲೆಯ ಮರಿಗಳನ್ನು ನೋಡು! ಈ ಮೃಗಗಳೂ ಕೂಡ ನಿನ್ನನ್ನು ಕಾಣದುದಕ್ಕಾಗಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಚಿಂತಿಸುತ್ತಿರುವುವಲ್ಲಾ! ವತ್ಸ ಲಕ್ಷ್ಮಣಾ! ಸೀತೆಯಿಲ್ಲದೆ ನಾನು ಒಂದು ನಿಮಿಷವಾದರೂ ಬದುಕಿರಲು ಸಾಧ್ಯವಿಲ್ಲವು. ಈ ದುಃಖದಿಂದಲೇ ನಾನು ಮೃತಿಹೊಂದಿದಮೇಲೆ, ನನ್ನ ತಂದೆಯಾದ ದಶರಥ ಮಹಾರಾಜನು ಇನ್ನು ಸ್ವಲ್ಪಕಾಲದೊಳಗಾಗಿಯೇ ಪರಲೋಕದಲ್ಲಿ ನನ್ನನ್ನು ನೋಡುವುದೇನೋ ನಿಜವು. ಎಲೆ ವತ್ಸನೆ! ನಾನು ಆ ದಶರಥಮಹಾರಾಜನ ಮುಂದೆ ನಿಂತಾಗ ಅವನು ನನ್ನನ್ನು ನೋಡಿ "ನನ್ನಾಜ್ಞೆಯಂತೆ ನೀನು ಹದಿನಾಲ್ಕು ವರ್ಷಗಳವರೆಗೆ ವನವಾಸವನ್ನು ಮಾಡುವುದಾಗಿ ಪ್ರತಿಜ್ಞೆಮಾಡಿ, ಅದನ್ನು ಮುಗಿಸುವುದಕ್ಕೆ ಮೊದಲೇ ಇಲ್ಲಿಗೆ ಬರುವುದಕ್ಕೆ ಕಾರಣವೇನು? ನೀನು ಸ್ವೇಚ್ಛೆಯಿಂದ ನಡೆಯತಕ್ಕವನು! ದುರ್ಜನನು! ಸುಳ್ಳಾಡುವವನು. ಛೀ! ಹೋಗು!" ಎಂದು ನನ್ನನ್ನು ನಿಂದಿಸದಿರುವನೆ? ಎಂದಿಗೂ ನನ್ನನ್ನು ಅವನು ಸುಮ್ಮನೆ ಬಿಡಲಾರನು. ಎಲೆ ಸೀತೆ! ಈಗ ನನ್ನ ಸ್ಥಿತಿಯನ್ನು ನೀನು ಕಾಣೆಯಾ? ನನಗೆ ಮೈಮೇಲೆ ಪ್ರಜ್ಞೆಯಿಲ್ಲದಿರುವುದು. ದುಃಖದಿಂದ ಬೇಯುತ್ತಿರುವೆನು. ನನ್ನ ಆಸೆಯೆಲ್ಲವೂ ಭಗ್ನವಾಯಿತು. ಕೀರ್ತಿಲಕ್ಷ್ಮಿಯು ಕಪಟಸ್ವಭಾವವುಳ್ಳವನನ್ನು ಬಿಟ್ಟುಹೋಗುವಂತೆ, ಹೀಗೆ ದೀನನಾದ ನನ್ನನ್ನು

ಬಿಟ್ಟು ನೀನೆಲ್ಲಿಗೆ ಹೋಗುತ್ತಿರುವೆ ? ನನ್ನನ್ನು ಕೈಬಿಡಬೇಡ ! ನಿನ್ನನ್ನಗಲಿದ ಮೇಲೆ ನಾನು ಜೀವವನ್ನೇ ಬಿಟ್ಟುಬಿಡಬೇಕಾಗುವುದು ” ಎಂದು, ಪ್ರಾಕೃತ ಮನುಷ್ಯರಂತೆ ಗಟ್ಟಿಯಾಗಿ ಗೋಳಿಡುತ್ತ, ಸೀತೆಯನ್ನು ನೋಡಬೇಕೆಂಬ ಆತುರದಿಂದ ನಿಂತಕಡೆಯಲ್ಲಿ ನಿಲ್ಲದೆ ತತ್ತಳಿಸುತ್ತಿದ್ದನು. ಎಲ್ಲಿ ನೋಡಿದರೂ ಆ ಸೀತೆಯನ್ನು ಕಾಣಲಿಲ್ಲ. ಹೀಗೆ ಕೆಸರಿನಲ್ಲಿ ಸಿಕ್ಕಿ ಕಷ್ಟಪಡುವ ಆನೆಯಂತೆ, ಸೀತೆಯನ್ನು ಕಾಣದೆ ದುಃಖಿತನಾದ ರಾಮನನ್ನು ನೋಡಿ, ಲಕ್ಷ್ಮಣನು ಹೇಗಾದರೂ ಆತನ ದುಃಖವನ್ನು ಮರೆಯಿಸಿ, ಕ್ಷೇಮವನ್ನುಂಟುಮಾಡಬೇಕೆಂಬ ಆತುರದಿಂದ ರಾಮನನ್ನು ಕುರಿತು “ ಅಣ್ಣಾ ! ಹೀಗೇಕೆ ದುಃಖಿಸುವೆ ? ಇನ್ನೂ ಅಲ್ಲಲ್ಲಿ ಸೀತೆಯನ್ನು ಹುಡುಕುವುದಕ್ಕೆ ಪ್ರಯತ್ನಿಸು ! ನಾನೂ ಹುಡುಕುವೆನು. ಈ ಅಡವಿಯು ಬಹಳ ದೊಡ್ಡದು. ಇದರಲ್ಲಿ ಅಸಂಖ್ಯಾತವಾದ ಗುಹೆಗಳಿರು ವುವು. ಇಂತಹ ಕಾಡುಗಳಲ್ಲಿ ಸಂಚಾರಮಾಡುವುದರಲ್ಲಿ ಸೀತೆಗೆ ಬಹಳ ಪ್ರೀತಿ. ಈ ವನವಿಹಾರಗಳಲ್ಲಿಯೂ, ನೀರಾಟಗಳಲ್ಲಿಯೂ ಇದ್ದಾಗ ಅವಳು ಮೈಮರೆಯು ದಂತೆ ಇದ್ದುಬಿಡುವಳು. ಆದುದರಿಂದ ಅವಳು ಈ ಕಾಡಿನಲ್ಲಿಯೇ ಇರಬಹುದು. ಅಥವಾ ಇಲ್ಲಿನ ತಾವರೆಯ ಕೊಳಗಳಲ್ಲಿಯಾದರೂ ಜಲಕ್ರೀಡೆಯನ್ನಾಡುತ್ತಿರ ಬಹುದು. ಮನೋಹರವಾದ ಮೀನುಗಳುಳ್ಳ ನದಿಗಾದರೂ ಹೋಗಿರಬಹುದು. ಸ್ನಾನಕ್ಕಾಗಿ ಹೋಗಿ ಅಲ್ಲಿ ಯಾವುದೋ ಒಂದು ವನದಲ್ಲಿ ಹಾಸ್ಯಕ್ಕಾಗಿ ಯಾದರೂ ಅವಿತುಕೊಂಡಿರಬಹುದು ! ನಮ್ಮನ್ನು ಹೆದರಿಸಬೇಕೆಂದು ಈ ಕಾಡಿನಲ್ಲಿ ಎಲ್ಲಿಯಾದರೂ ಮರೆಸಿಕೊಂಡಿದ್ದರೂ ಇರಬಹುದು. ಎಲೈ ಪುರುಷ ಶ್ರೇಷ್ಠನೆ ! ಅವಳನ್ನು ಹುಡುಕಿ ಕಂಡುಹಿಡಿಯುವುದರಲ್ಲಿ ನಮ್ಮಿಬ್ಬರ ಚಾತುರ್ಯ ವನ್ನು ತಿಳಿಯಬೇಕೆಂಬ ಆಸೆಯಿಂದ ಎಲ್ಲಿಯಾದರೂ ಮರೆಸಿಕೊಂಡಿರಬಹುದು. ಎಲೈ ಶ್ರೀಮಂತನೆ ! ನಾವಿಬ್ಬರೂ ಈಗಲೇ ಅವಳನ್ನು ಹುಡುಕುವುದಕ್ಕೆ ಪ್ರಯತ್ನಿಸುವೆವು. ಈ ವನವೆಲ್ಲವನ್ನೂ ಸುತ್ತಿಬರುವೆವು. ನಿನಗೆ ಇದು ಅಭಿಮತವಾಗಿದ್ದಪಕ್ಷದಲ್ಲಿ ಹೋಗುವೆವು ನಡೆ ! ಹೀಗೆ ದುಃಖದಿಂದ ಮನಸ್ಸನ್ನು ಬಳಲಿಸಬೇಡ ” ಎಂದನು. ಹೀಗೆ ಲಕ್ಷ್ಮಣನು ಹೇಳಿದ ಪ್ರೇಮಪೂರ್ವಕವಾದ ಮಾತನ್ನು ಕೇಳಿ ರಾಮನು ಮನಸ್ಸಿಗೆ ಸ್ವಲ್ಪ ಸಮಾಧಾನವನ್ನು ತಂದು ಕೊಂಡು, ಆತನೊಡನೆ ಹೊರಟು ಹುಡುಕುವುದಕ್ಕಾರಂಭಿಸಿದನು. ಆ ದಶರಥ ಕುಮಾರರಿಬ್ಬರೂ ಅಲ್ಲಿನ ಅಡವಿಗಳನ್ನೂ, ಬೆಟ್ಟಗಳನ್ನೂ, ನದಿಗಳನ್ನೂ, ಕೊಳ

ಗಳನ್ನೂ ಕ್ರಮವಾಗಿ ಸುತ್ತುತ್ತಿದ್ದರು. ಹಾಗೆಯೇ ಬೆಟ್ಟದ ತಪ್ಪಲುಗಳನ್ನೂ, ಗವಿಗಳನ್ನೂ, ಶಿಖರಗಳನ್ನೂ ನೋಡಿಬಂದರು. ಎಲ್ಲಿ ನೋಡಿದರೂ ಸೀತೆಯನ್ನು ಕಾಣಲಿಲ್ಲ. ಹೀಗೆ ಅದರ ಸುತ್ತಲೂ ಹುಡುಕಿಬಂದಮೇಲೆ, ರಾಮನು ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ಮಂಗಳಾಂಗಿಯಾದ ಆ ಸೀತೆಯು ಈ ಬೆಟ್ಟದಲ್ಲಿಯೂ ಸಿಕ್ಕಲಿಲ್ಲವಲ್ಲಾ!" ಎಂದನು. ಆಗ ಲಕ್ಷ್ಮಣನು ದುಃಖಿತನಾಗಿ ರಾಮನನ್ನು ಕುರಿತು, "ಅಣ್ಣಾ! ಇನ್ನೂ ಈ ದಂಡಕಾರಣ್ಯವೆಲ್ಲವನ್ನೂ ಸುತ್ತಿಬಂದರೆ ಜನಕಪುತ್ರಿಯಾದ ಆ ಸೀತೆಯು ಸಿಕ್ಕದಿರಳು. ಪೂರ್ವದಲ್ಲಿ ಮಹಾಬಾಹುವಾದ ವಿಷ್ಣುವು ಬಲಿಯನ್ನು ಕಟ್ಟಿ ಭೂಮಿಯನ್ನು ತಂದಂತೆ, ನೀನೂ ಸೀತೆಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ" ಎಂದನು. ಈ ಪ್ರೇಮಪೂರ್ವಕವಾದ ಲಕ್ಷ್ಮಣನ ಮಾತನ್ನು ಕೇಳಿ, ದುಃಖದಿಂದ ಗದ್ಗದಸ್ವರವುಳ್ಳವನಾಗಿ ರಾಮನು "ಎಲೆ ವತ್ಸನೆ! ಈ ಅಡವಿಯೆಲ್ಲವನ್ನೂ ಚೆನ್ನಾಗಿ ಹುಡುಕಿದುದಾಯಿತು! ತಾವರೆಕೊಳಗಳನ್ನೂ ಹುಡುಕಿಬಂದೆವು. ಗುಹೆಗಳಿಂದಲೂ ತೊರೆಗಳಿಂದಲೂ ಕೂಡಿದ ಈ ಬೆಟ್ಟವನ್ನೂ ಹುಡುಕಿಬಂದೆವಲ್ಲವೆ? ಇಷ್ಟಾದರೂ ನನ್ನ ಪ್ರಾಣಪ್ರಿಯಳಾದ ಆ ಸೀತೆಯನ್ನು ಕಾಣಲಿಲ್ಲವಲ್ಲಾ!" ಎಂದನು. ಹೀಗೆ ಸೀತೆಯನ್ನಗಲಿದ ದುಃಖದಿಂದ ಪ್ರಲಾಪಿಸುತ್ತ, ರಾಮನು ಹಾಗೆಯೇ ಸಂಕಟದಿಂದ ಮೂರ್ಛೆಬಿದ್ದಂತಾದನು. ಈ ಸಂತಾಪದಿಂದ ಕೃಶಾಂಗನಾಗಿ, ಬುದ್ಧಿಗೆಟ್ಟು ನಿಶ್ಚೇಷ್ಟನಾಗಿ, ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟು ಅಲ್ಲಿಯೇ ಕುಳಿತುಬಿಟ್ಟನು. ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತ ಕಣ್ಣೀರು ತುಂಬಿಕೊಂಡು "ಹಾ! ಪ್ರಿಯೇ!" ಎಂದು ಗಟ್ಟಿಯಾಗಿ ಕೂಗಿದನು. ಆಗ ಲಕ್ಷ್ಮಣನು ರಾಮನನ್ನು ಅನೇಕವಿಧಗಳಲ್ಲಿ ಸಮಾಧಾನಪಡಿಸಿ ವಿನಯದಿಂದ ಆತನ ಮುಂದೆ ಕೈಮುಗಿದು ನಿಂತು, ಸಾಂತ್ವನವಾಕ್ಯಗಳನ್ನು ಹೇಳುತ್ತಿದ್ದನು. ರಾಮನಾದರೋ ಇದೊಂದನ್ನೂ ಕೇಳದೆ ಸೀತೆಯನ್ನು ಕಾಣದ ಸಂಕಟದಿಂದ ಬಾರಿಬಾರಿಗೂ ಪ್ರಲಾಪಿಸುತ್ತಲೇ ಇದ್ದನು.

ಇಲ್ಲಿಗೆ ಅರುವತ್ತೊಂದನೆಯ ಸರ್ಗವು.

## ರಾಮನ ವಿಲಾಪವು

[1]ಮಹಾಬಾಹುವಾಗಿಯೂ ಪುಂಡರೀಕಾಕ್ಷನಾಗಿಯೂ ಇರುವ ಧರ್ಮಾತ್ಮನಾದ ರಾಮನು, ಸೀತಾವಿರಹದಿಂದ ಮೈಮರೆತವನಾಗಿ ನಾನಾವಿಧದಲ್ಲಿ ಗೋಳಿಡುತ್ತಿದ್ದನು. ಸೀತೆಯು ಕಣ್ಣಿದಿರಿಗಿಲ್ಲದಿದ್ದರೂ ಮನ್ಮಥ ತಾಪಕ್ಕೆ ಪರವಶನಾಗಿ, ಆ ಸೀತೆಯನ್ನು ಮುಂದಿಟ್ಟುಕೊಂಡು ಮಾತಾಡುವಂತೆಯೇ ಕುಗ್ಗಿದ ಸ್ವರದಿಂದ ಕೂಗುತ್ತ "ಪ್ರಿಯೆ! ನಿನಗೆ ಹೂಗಳಲ್ಲಿ ಅತ್ಯಾಸೆಯಿರುವುದರಿಂದ ಹೀಗೆ ಪುಷ್ಪಿತವಾದ ಈ ಅಶೋಕವೃಕ್ಷದ ಶಾಖೆಗಳಲ್ಲಿ ಮೈಮರೆಸಿಕೊಳ್ಳುವಂತಿದೆ! ಇದರಿಂದ ನನಗೆ ವಿರಹಸಂತಾಪವು ಮೇಲೆಮೇಲೆ ಹೆಚ್ಚುತ್ತಿರುವುದೆಂಬುದನ್ನು ಕಾಣೆಯಾ? ನೀನು ಮರೆಸಿಕೊಂಡರೇನು? ನಾನು ನಿನ್ನನ್ನು ನೋಡಿಯೇಬಿಟ್ಟೆನು. ಹೊರಗೆ ಬಾ! ನಿನ್ನ ತೊಡೆಯು ಬಾಳೆಯ ದಿಂಡಿಗೆ ಸಮವಾಗಿರುವುದರಿಂದ ನನ್ನನ್ನು ವಂಚಿಸುವುದಕ್ಕಾಗಿ ನೀನು ಇಲ್ಲಿನ ಬಾಳೆಯ ಗಿಡಗಳಲ್ಲಿ ಅವಿತುಕೊಳ್ಳಬಹುದು. ಆದರೇನು! ಅಲ್ಲಿ ಅವಿತುಕೊಂಡರೂ ನಾನು ಭೇದವನ್ನು ಕಂಡುಹಿಡಿಯಬಲ್ಲೆನು! ನೀನು ಅಲ್ಲಿಯೂ ನನಗೆ ಸಿಕ್ಕದಿರಲಾರೆ! ಎಲೆ ದೇವಿ! ಎಲೆ ಕಲ್ಯಾಣಿ! ನೀನು ಹಾಸ್ಯಕ್ಕಾಗಿ ಈ ಮರದ ತೋಪುಗಳಲ್ಲಿ ಮರೆಸಿಕೊಳ್ಳುತ್ತಿರುವೆಯಾ? ಈ ನಿನ್ನ ಹಾಸ್ಯವು ನನಗೆಷ್ಟು ಸಂಕಟವನ್ನುಂಟುಮಾಡುವುದೆಂದು ಬಲ್ಲೆಯಾ? ಎಲೆ ದೇವಿ! ನಿನಗೆ ಈ ಹಾಸ್ಯವೇಕೆ? ಸಾಕುಬಿಡು! ನೀನು ನನ್ನ ಪ್ರಿಯೆಯಲ್ಲವೆ? ನನ್ನನ್ನು ಹೀಗೆ ಹಾಸ್ಯಮಾಡಿ ಬಳಲಿಸುವುದರಿಂದ ನಿನಗೆ ಬಂದ ಪ್ರಯೋಜನವೇನು? ನೀನು ಮಾಡುತ್ತಿದ್ದ ಇಂತಹ ಪರಿಹಾಸಗಳು ಮೊದಲು ನನಗೆ ಎಷ್ಟೋ ಹಿತವಾಗಿದ್ದುವು. ಆದರೆ ಅವುಗಳಿಗೆ ಇದು ಸಮಯವಲ್ಲ! ನಾನು ಬಹಳ ಸಂಕಟಪಡುತ್ತಿರುವೆನು! ಈಗ ಇದೊಂದೂ ನನ್ನ ಮನಸ್ಸಿಗೆ ಇಂಪಾಗಿಲ್ಲ! ಎಲೆ ಪ್ರಿಯೆ! ನಿನ್ನ ಪರಿಹಾಸ

1 ಇಲ್ಲಿ "ಸೀತಾಮಪಶ್ಯನ್ ಧರ್ಮಾತ್ಮಾ ಕಾಮೋಪಹತಚೇತನಃ| ವಿಲಲಾಪ ಮಹಾಬಾಹೂ ರಾಮಃ ಕಮಲಲೋಚನಃ|" ಎಂದು ಮೂಲವು. ಇಲ್ಲಿ "ಧರ್ಮಾತ್ಮಾ ಕಾಮೋಪಹತಚೇತನಃ" ಎಂದು ಪದಗಳ ಸಾಹಚರ್ಯದಿಂದ ಧರ್ಮವಿರುದ್ಧವಲ್ಲದ ಕಾಮವು ನಿಂದ್ಯವಲ್ಲವೆಂದು ಸೂಚಿತವು. "ಮಹಾಬಾಹುಃ" ಎಂಬುದರಿಂದ ರಾಮನು ಪ್ರಲಾಪಿಸುವಾಗ ತೋಳುಗಳನ್ನು ನೀಡಿರುವನೆಂದೂ "ಕಮಲಲೋಚನಃ" ಎಂಬುದರಿಂದ ಮಕರಂದವನ್ನು ಸುರಿಸುವ ಕಮಲದಂತೆ ಕಣ್ಣೀರನ್ನು ಸುರಿಸುತ್ತಿರುವನೆಂದೂ ಸೂಚಿತವು.

ವನ್ನು ನಿಲ್ಲಿಸು! ಅದರಲ್ಲಿಯೂ ಈಗ ಈ ಋಷ್ಯಾಶ್ರಮಗಳಲ್ಲಿ ಈ ಪರಿಹಾಸಗಳನ್ನು ಮಾಡುವುದು ತಪ್ಪು! ನೀನು ಯಾವಾಗಲೂ ಪರಿಹಾಸಶೀಲೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಆದರೇನು? ಇದು ಸಮಯವಲ್ಲ! ಎಲೆ ವಿಶಾಲಾಕ್ಷಿ! ಬೇಗನೆ ಹೊರಗೆ ಬಂದುಬಿಡು! ನೀನಿಲ್ಲದುದರಿಂದ ಈ ಆಶ್ರಮವೇ ಹಾಳುಬಿದ್ದಂತಿರುವುದಲ್ಲಾ! ವತ್ಸ ಲಕ್ಷ್ಮಣನೆ! ಯಾರೋ ರಾಕ್ಷಸರು ಸೀತೆಯನ್ನು ಭಕ್ಷಿಸಿಬಿಟ್ಟಿರಬಹುದು! ಅಥವಾ ಅವಳನ್ನು ಇಲ್ಲಿಂದ ಅಪಹರಿಸಿಕೊಂಡಾದರೂ ಹೋಗಿರಬೇಕು! ಹಾಗಿಲ್ಲದಿದ್ದರೆ ನಾನು ಇಷ್ಟಾವರ್ತಿ ಕೂಗಿಮೊರೆಯಿಟ್ಟರೂ ಆಕೆಯು ನನ್ನ ಬಳಿಗೆ ಬಾರದಿರುವಳೆ? ಎಂದಿಗೂ ಅವಳು ನನ್ನನ್ನು ಹೀಗೆ ಉಪೇಕ್ಷಿಸುವವಳಲ್ಲ! ಎಲೆ ವತ್ಸನೆ! ಈ ಮೃಗಗಳು ಕಣ್ಣೀರು ಬಿಡುತ್ತಿರುವುದನ್ನು ನೋಡಿದರೆ, ಸೀತೆಯು ರಾಕ್ಷಸರ ಬಾಯಿಗೆ ತುತ್ತಾದಳೆಂಬುದನ್ನು ಸೂಚಿಸುವಂತೆಯೇ ತೋರುವುದು. ಹಾ ಪ್ರಿಯೆ! ಹಾ ಲೋಕಪೂಜ್ಯಳೆ! ಹಾ ಪತಿವ್ರತಾ ಶಿರೋಮಣಿ! ಹಾ ವರವರ್ಣಿನಿ! ಎಲ್ಲಿ ಹೋಗಿರುವೆ? ನಿನ್ನನ್ನು ಕೆಡಿಸಬೇಕೆಂದೇ ಕೋರುತ್ತಿದ್ದ ಕೈಕೇಯಿಯ ಕೋರಿಕೆಯು ಈಡೇರಿತಲ್ಲಾ! ನಾನು ಸೀತೆಯೊಡನೆ ಅಯೋಧ್ಯೆಯಿಂದ ಹೊರಟುಬಂದು, ಈಗ ಅವಳಿಲ್ಲದೆ ಹೇಗೆ ಊರಿಗೆ ಹಿಂತಿರುಗಿಹೋಗಲಿ! ಹಾಳುಬಿದ್ದಿರುವ ಆ ಅಂತಃಪುರಕ್ಕೆ ನಾನು ಪುನಃ ಹೇಗೆ ಕಾಲಿಡಲಿ! ಜನರು ಕಾಡಿನಲ್ಲಿ ಹೆಂಡತಿಯನ್ನು ಕಳೆದುಕೊಂಡು ಬಂದ ನನ್ನನ್ನು ವೀರ್ಯಹೀನನೆಂದೂ, ದಯಾಶೂನ್ಯನೆಂದೂ ನಿಂದಿಸುವರಲ್ಲಾ! ಸೀತೆಯನ್ನಗಲಿ ನಾನು ಬದುಕಿರುವುದೇ ಸಾಧ್ಯವಲ್ಲದುದರಿಂದ ನನ್ನ ಅಧೈರ್ಯವೂ ಆಗ ಚೆನ್ನಾಗಿ ಬಯಲಿಗೆ ಬರುವುದು. ಹೆಂಡತಿಯನ್ನು ಕಳ್ಳರಪಾಲುಮಾಡಿ ಬಂದ ನನ್ನ ಹೇಡಿತನವೂ ಚೆನ್ನಾಗಿ ಹೊರಪಡುವುದು! ಹಾ! ನಾನೇನುಮಾಡಲಿ! ನಾನು ವನವಾಸವನ್ನು ಮುಗಿಸಿಕೊಂಡು ಊರಿಗೆ ಹೋದಮೇಲೆ, ಮಿಥಿಲಾಧಿಪತಿಯಾದ ಜನಕನು, ಸಪತ್ನೀಕನಾದ ನನ್ನ ಕ್ಷೇಮಲಾಭಗಳನ್ನು ವಿಚಾರಿಸುವುದಕ್ಕೆ ಬಂದರೆ ನಾನು ಆತನ ಮುಖವನ್ನು ಹೇಗೆ ನೋಡಲಿ! ಸೀತೆಯಿಲ್ಲದೆ ನಾನೊಬ್ಬನೇ ಹಿಂತಿರುಗಿಹೋದುದನ್ನು ಆ ಜನಕನು ನೋಡಿದರೆ ಅವನ ಗತಿಯೇನು? ಅವನಿಗೆ ಮಗಳಲ್ಲಿರುವ ಪ್ರೀತಿಯೋ ಅಸಾಧಾರಣವಾದುದು! ಅವನು ನನ್ನನ್ನು ಕಂಡಾಗಲೇ ಮೂರ್ಛೆಬೀಳುವುದರಲ್ಲಿ ಸಂದೇಹವಿಲ್ಲ! ಭರತನ ಆಳ್ವಿಕೆಯಿಂದ

ಈಗ ನಮ್ಮ ಅಯೋಧ್ಯೆಯು, ಸರ್ವವಸ್ತು ಸಮೃದ್ಧವಾಗಿ ಶೋಭಿಸುತ್ತಿದ್ದರೂ ನಾನು ಪುನಃ ಆ ಅಯೋಧ್ಯೆಗೆ ಕಾಲಿಡಲಾರೆನು! ಸೀತೆಯಿಲ್ಲದ ಮೇಲೆ ಸ್ವರ್ಗವೂ ನನ್ನ ಪಾಲಿಗೆ ಹಾಳುಬಿದ್ದಂತೆಯೇ ತೋರಿರುವುದು. ಎಲೆ ವತ್ಸನೆ! ನೀನು ನನ್ನನ್ನು ಈ ಕಾಡಿನಲ್ಲಿಯೇ ಬಿಟ್ಟು ಸುಖವಾಗಿ ಅಯೋಧ್ಯೆಗೆ ಹಿಂತಿರುಗಿ ಹೋಗು. ನಾನು ಸೀತೆಯನ್ನು ಬಿಟ್ಟು ಹೇಗೂ ಕ್ಷಣಮಾತ್ರವೂ ಬದುಕಿರ ಲಾರೆನು! ನೀನು ಹೋಗಿ ಭರತನನ್ನಾಲಿಂಗಿಸಿ ಅವನೊಡನೆ ಇನ್ನು ಮೇಲೆ ಯಥೇಚ್ಛವಾಗಿ ಭೂಮಿಯನ್ನು ಪಾಲಿಸುತ್ತಿರುವಂತೆ ನಾನು ಹೇಳಿದುದಾಗಿ ಹೇಳು! ನನ್ನ ತಾಯಿಯಾದ ಕೈಕೇಯಿಗೂ, ಸುಮಿತ್ರೆಗೂ, ಕೌಸಲ್ಯೆಗೂ ನಾನು ನಮಸ್ಕರಿಸಿದುದಾಗಿ ತಿಳಿಸು! ನೀನು ನನ್ನ ಮಾತನ್ನು ಮೀರಿ ನಡೆಯ ದವನಾಗಿದ್ದರೆ ನಾನು ಹೇಳಿದಂತೆ ನಡೆಸು! ನನ್ನ ತಾಯಿಯಾದ ಕೌಸಲ್ಯೆ ಯನ್ನು ನೋಯಿಸದೆ ಸುಖವಾಗಿ ರಕ್ಷಿಸುತ್ತಿರು! ಲಕ್ಷ್ಮಣಾ! ಇಲ್ಲಿ ನಡೆದ ಸೀತಾಪಹಾರವನ್ನೂ, ನನ್ನ ಗತಿಯನ್ನೂ ವಿವರವಾಗಿ ನನ್ನ ತಾಯಿಯಾದ ಕೌಸಲ್ಯೆಗೆ ತಿಳಿಸಿಬಿಡು" ಎಂದು ಪ್ರಲಾಪಿಸಿದನು. ಹೀಗೆ ರಾಮನು ಸೀತೆ ಯನ್ನು ಕಾಣದೆ ಪ್ರಲಾಪಿಸುತ್ತ ದೈನ್ಯದಿಂದ ಸಂಕಟಪಡುತ್ತಿದ್ದನು. ಲಕ್ಷ್ಮಣನು ಭಯದಿಂದ ಕಂದಿದ ಮುಖವುಳ್ಳವನಾಗಿ ನಡುಗುತ್ತ ಮೈಮರೆತು ನಿಂತಿದ್ದನು.

ಇಲ್ಲಿಗೆ ಅರುವತ್ತೆರಡನೆಯ ಸರ್ಗವು.

---

### ರಾಮನ ದುಃಖಪ್ರಲಾಪಗಳು

ರಾಜಪುತ್ರನಾದ ರಾಮನು ತನ್ನ ಪ್ರಿಯಪತ್ನಿಯನ್ನಗಲಿ, ಆಗಾಗ ಆಕೆಯನ್ನು ನೆನೆಸಿಕೊಂಡು ಮೋಹದಿಂದಲೂ ದುಃಖದಿಂದಲೂ ಪೀಡಿತನಾಗಿ, ತನ್ನ ಪ್ರಲಾಪಗಳಿಂದ ಲಕ್ಷ್ಮಣನಿಗೂ ಮತ್ತಷ್ಟು ದುಃಖವನ್ನುಂಟುಮಾಡುತ್ತ ಸಂಕಟದಿಂದ ತತ್ತಳಿಸುತಿದ್ದನು. ಅವನ ಮನೋವಿಷಾದವು ಎಡೆಬಿಡದೆ ಮೇಲೆ ಮೇಲೆ ಹೆಚ್ಚುತ್ತಲೇ ಹೋಯಿತು. ಮೊದಲೇ ಸೀತಾವಿರಹದಿಂದ ಮಿತಿಮೀರಿ ದುಃಖಿಸುತಿದ್ದ ರಾಮನು, ಆಗ ತನ್ನ ಮುಂದೆ ದುಃಖಭರಿತನಾಗಿ ನಿಂತಿದ್ದ ಲಕ್ಷ್ಮಣನನ್ನು ನೋಡಿ, ತನ್ನ ಮಹಾವ್ಯಸನವನ್ನು ಸೂಚಿಸುವಂತೆ ಉದ್ದವಾದ

*

ನಿಟ್ಟುಸಿರನ್ನು ಬಿಟ್ಟು "ಲಕ್ಷ್ಮಣಾ! ನನ್ನಂತೆ ಪಾಪಮಾಡಿದವನು ಈ ಭೂಲೋಕದಲ್ಲಿ ಬೇರೊಬ್ಬನೂ ಇಲ್ಲವೆಂದೆಣಿಸುವೆನು. ದುಃಖದ ಮೇಲೆ ದುಃಖವು ಪರಂಪರೆಯಾಗಿ ಬಂದು ನನ್ನ ಹೃದಯವನ್ನು ಭೇದಿಸುತ್ತಿರುವುದಲ್ಲಾ! ಲೋಕದಲ್ಲಿ ಇಷ್ಟು ಅನರ್ಥಗಳಿಗೆ ಸಿಕ್ಕಿಬಿದ್ದವರಾರುಂಟು? ನಾನು ಪೂರ್ವಜನ್ಮದಲ್ಲಿ ಮನಸ್ಸಿಗೆ ತೋರಿಬಂದಹಾಗೆಲ್ಲಾ ಅನೇಕಾವರ್ತಿ ಎಷ್ಟೋ ಪಾಪಕಾರ್ಯಗಳನ್ನು ಮಾಡಿರಬೇಕೆಂಬುದಕ್ಕೆ ಸಂದೇಹವೇ ಇಲ್ಲ. ಅದಕ್ಕಾಗಿಯೇ ಈಗ ದುಃಖದಮೇಲೆ ದುಃಖವನ್ನನುಭವಿಸುತ್ತಿರುವೆನು ಇವೆಲ್ಲವೂ ನನ್ನ ಪಾಪಕರ್ಮಗಳ ಫಲವೇ ಹೊರತು ಬೇರೆಯಲ್ಲ! ಆಹಾ! ಈ ದುಃಖ ಪರಂಪರೆಯನ್ನು ನಾನೇನೆಂದು ಹೇಳಲಿ! ಮೊದಲು ಕೈಗೆ ಬರಬೇಕಾದ ರಾಜ್ಯವನ್ನು ಕಳೆಕೊಂಡುದೊಂದು! ಆಮೇಲೆ ತಂದೆಯ ಸಾವು! ಹೆತ್ತತಾಯಿಯನ್ನಗಲಿ ಬಂದುದು! ಇವುಗಳೆಲ್ಲವನ್ನೂ ನೆನೆಸಿಕೊಂಡರೆ ಒಂದೊಂದೂ ದುಃಖದ ಮೇಲೆ ದುಃಖವನ್ನಡಕುತ್ತಿರುವುದು! ವತ್ಸನೆ! ಆದರೇನು? ನಾನು ಇಷ್ಟು ದುಃಖ ಪರಂಪರೆಯನ್ನೂ ಸಹಿಸಿಕೊಂಡು, ಈ ಜನಶೂನ್ಯವಾದ ಕಾಡಿನಲ್ಲಿ ಅಲೆಯುತಿದ್ದರೂ, ಆಗಾಗ ನನ್ನ ಪ್ರಿಯಪತ್ನಿಯಾದ ಆ ಸೀತೆಯ ಮುಖವನ್ನು ನೋಡುತಿದ್ದುದರಿಂದ ಅವೆಲ್ಲವನ್ನೂ ಮರೆತಿದ್ದೆನು ಇದರಮೇಲೆ ಈಗ ನನಗೆ ಪ್ರಾಪ್ತವಾದ ಆ ಸೀತಾ ವಿಯೋಗದಿಂದ, ಸೌದೆಯಲ್ಲಿ ಅಡಗಿದ್ದ ಬೆಂಕಿಯು ಇದ್ದಕ್ಕಿದ್ದಹಾಗೆ ತಟ್ಟನೆ ಹತ್ತಿಕೊಂಡು ಉರಿಯುವಂತೆ ಆ ಮೊದಲಿನ ದುಃಖವೆಲ್ಲವೂ ಒಂದಾಗಿ ಸೇರಿ ನನ್ನ ಅಂಗಾಂಗಗಳೆಲ್ಲವನ್ನೂ ದಹಿಸುತ್ತಿರುವುವಲ್ಲಾ! ನನ್ನ ಪ್ರಾಣಪ್ರಿಯೆಯಾದ ಆ ಸೀತೆಯಾದರೋ ಮೊದಲೇ ಬಹಳ ಭೀರುಸ್ವಭಾವವುಳ್ಳವಳು! ಅಂತವಳನ್ನು ರಾಕ್ಷಸರು ಬಲಾತ್ಕಾರದಿಂದ ಹಿಡಿದೆತ್ತಿಕೊಂಡು ಹೋಗುತ್ತಿದ್ದರೆ, ಆಗ ಅವಳ ಗತಿಯೇನಾಗಿರಬೇಕು! ರಾಕ್ಷಸರು ಅವಳನ್ನೆತ್ತಿಕೊಂಡು ಆಕಾಶದಲ್ಲಿ ಅತಿವೇಗದಿಂದ ಹಾರುತ್ತಿರುವಾಗ ಅವಳು ಎಷ್ಟು ಅಪಸ್ವರದಿಂದ ಕೂಗಿರುವಳೋ! ಎಷ್ಟು ಭಯದಿಂದ ನಡುಗುತಿದ್ದಳೋ! ವಿಕೃತಸ್ವರದಿಂದ ಕೂಗಿರುವುದರಲ್ಲಿ ಸಂದೇಹವೇ ಇಲ್ಲ! ಯಾವಾಗಲೂ ಅಂದವಾದ ರಕ್ತಚಂದನಗಳಿಂದಲಂಕರಿಸಲ್ಪಡುತಿದ್ದ ಆಕೆಯ ಎದೆಯು ಈಗ ರಕ್ತಧಾರೆಯಿಂದ ನೆನೆದು ಅಂದಗೆಡುವಹಾಗಾಯಿತಲ್ಲಾ! ಬಾಗಿದ ಮುಂಗುರುಳುಗಳಿಂದಲೂ, ಕಿವಿಗಿಂಪಾದ ನುಡಿಗಳಿಂದಲೂ ಶೋಭಿಸುತಿದ್ದ ಆಕೆಯ ಮುಖಪದ್ಮವು ಈಗ

ರಾಕ್ಷಸರ ಕೈಯಲ್ಲಿ ಸಿಕ್ಕಿ ರಾಹುವಿನ ಬಾಯಲ್ಲಿ ಸಿಕ್ಕಿಬಿದ್ದ ಚಂದ್ರಬಿಂಬದಂತೆ ಅಂದಗೆಡುವ ಹಾಗಾಯಿತಲ್ಲಾ ! ನನ್ನನ್ನು ಹೊರತು ಬೇರೊಬ್ಬ ಪುರುಷನನ್ನು ಕಾಲಿಂದಲೂ ಮುಟ್ಟಲಾರದ ಆ ಸೀತೆಯ ಕಂಠವು, ಯಾವಾಗಲೂ ಮುಕ್ತಾ ಹಾರದಿಂದಲಂಕರಿಸಲ್ಪಡುವುದಕ್ಕೆ ಯೋಗ್ಯವಾದುದು. ಅಂತಹ ಕಂಠವು ಈಗ ರಾಕ್ಷಸರ ಕೈಗೆ ಸಿಕ್ಕಿ ಅವರು ಅದನ್ನು ಮುರಿದು ತಿನ್ನುವ ಹಾಗಾಯಿತಲ್ಲಾ! ನಿರ್ಜನವಾದ ಈ ಅರಣ್ಯದಲ್ಲಿ ಏಕಾಕಿನಿಯಾಗಿ ರಾಕ್ಷಸರ ಕೈಗೆ ಸಿಕ್ಕಿಬಿದ್ದು, ಅವರು ಬಲಾತ್ಕಾರದಿಂದೆಳೆದುಕೊಂಡು ಹೋಗುತ್ತಿರುವಾಗ, ಎಷ್ಟು ದುಃಖಿಸಿ ರುವಳೋ! ಎಷ್ಟು ಭಯಪಟ್ಟಿರುವಳೋ! ಭಯ ಚಂಚಲಗಳಾದ ನೋಟ ಗಳಿಂದ ನಾನು ಬರುವ ದಾರಿಯನ್ನೇ ಕ್ಷಣಕ್ಷಣಕ್ಕೂ ನೋಡುತ್ತ ಕ್ರೌಂಚ ಪಕ್ಷಿಯಂತೆ ವೈತಿಳಿಯದೆ ಕೂಗಿಕೊಂಡಿರಬಹುದು ! ಲಕ್ಷ್ಮಣಾ ! ಆ ಸೀತೆಯ ಸರ್ವೋತ್ತಮವಾದ ನಡತೆಯನ್ನೂ, ಅವಳ ಮುದ್ದುಮೊಗದಲ್ಲಿರುವ ಮಂದ ಹಾಸದ ಸೊಗಸನ್ನೂ ನಾನೇನೆಂದು ಹೇಳಲಿ! ಹಿಂದೆ ಅವಳು ಈ ಪ್ರದೇಶ ದಲ್ಲಿಯೇ, ಇದೇ ಕಲ್ಲುಬಂಡೆಯ ಮೇಲೆ, ನನ್ನ ಸಮೀಪದಲ್ಲಿ ಕುಳಿತು ಮುಗುಳ್ನಗೆಯೊಡನೆ ನಿನ್ನನ್ನು ನೋಡಿ ಎಷ್ಟೋ ಮಾತುಗಳನ್ನಾಡಿದಳಲ್ಲಾ ! ನನ್ನ ಪ್ರಿಯಪತ್ನಿಗೆ ಗೋದಾವರಿಯಲ್ಲಿ ಬಹಳ ಪ್ರೀತಿಯುಂಟು ಒಂದುವೇಳೆ ಅಲ್ಲಿಗೆ ಹೋಗಿರಬಹುದೋ ಎಂದು ತೋರುವುದು ! ಇಲ್ಲ ! ಹಾಗೆ ಹೋಗಿರ ಲಾರಳು ! ನನ್ನನ್ನು ಬಿಟ್ಟು ಅವಳು ಎಂದಾದರೂ ಒಂಟಿಯಾಗಿ ಹೋದವಳಲ್ಲ! ಹಾಗೆ ನಾವು ಎಣಿಸುವುದಕ್ಕೂ ಕಾರಣವಿಲ್ಲ! ಪದ್ಮಮುಖಿಯಾಗಿಯೂ, ಕಮಲದಳದಂತೆ ಕಣ್ಣುಳ್ಳವಳಾಗಿಯೂ ಇರುವ ಆ ನನ್ನ ಪ್ರಿಯೆಯು ಒಂದು ವೇಳೆ ತಾವರೆಹೂಗಳನ್ನು ಕುಯ್ದು ತರುವುದಕ್ಕಾಗಿ ಹೋಗಿರಬಹುದೆ? ಅದೂ ಇರದು! ಅವಳು ಅದಕ್ಕೂ ನನ್ನನ್ನು ಬಿಟ್ಟುಹೋದವಳಲ್ಲ! ಇದೋ! ಇಲ್ಲಿ ಪುಷ್ಪಿತಗಳಾದ ಅನೇಕ ವೃಕ್ಷಗಳಿರುವುವು. ಇದಲ್ಲದೆ ಇಲ್ಲಿ ಬಗೆಬಗೆಯಾದ ಹಕ್ಕಿಗಳು ಕಿವಿಗಿಂಪಾಗಿ ಕೂಗುತ್ತಿರುವುವು. ಅದರ ಸೊಗಸನ್ನು ನೋಡಿ ಬರುವುದಕ್ಕಾಗಿ ಈ ತೋಟಕ್ಕೇನಾದರೂ ಹೋಗಿರಬಹುದೆ? ಹಾಗೂ ಊಹಿಸು ವುದಕ್ಕಿಲ್ಲ! ಅವಳು ಬಹಳ ಭಯಶೀಲೆ! ಒಂಟಿಯಾಗಿರುವುದಕ್ಕೆ ಬಹಳ ಭಯಪಡುವಳು ! ” ಎಂದು ನಾನಾವಿಧದಲ್ಲಿ ಅನುಮಾನಿಸಿ, ಕೊನೆಗೆ ಆತನು ಸೂರ್ಯನಕಡೆಗೆ ತಿರುಗಿ, “ ಎಲೆ ಸೂರ್ಯನೆ! ನೀನು ಕರ್ಮಸಾಕ್ಷಿಯೆಂದೂ

ಜಗಚ್ಚಕ್ಷುವೆಂದೂ ಖ್ಯಾತಿಗೊಂಡಿರುವೆ! ಲೋಕದಲ್ಲಿ ನಡೆಯುವ ಪುಣ್ಯ ಪಾಪಕರ್ಮಗಳೆಲ್ಲಕ್ಕೂ ನೀನು ಸಾಕ್ಷಿಯಾಗಿರುವೆ! ಲೋಕದ ಭೂತಭವಿಷ್ಯತ್ತು ಗಳನ್ನೆಲ್ಲಾ ನೀನು ತಿಳಿದವನು! ನನ್ನ ಪ್ರಿಯೆಯೆಲ್ಲಿರುವಳು ಹೇಳು! ಅವಳನ್ನು ಯಾರಾದರೂ ರಾಕ್ಷಸರು ಬಲಾತ್ಕಾರದಿಂದಪಹರಿಸಿಕೊಂಡು ಹೋದರೆ? ದುಃಖಿತನಾದ ನನಗೆ ಈಗ ನೀನು ಇಷ್ಟುಮಾತ್ರವನ್ನು ಹೇಳಿದರೆ ಸಾಕು! ಎಲೆ ವಾಯುದೇವನೆ! ಯಾವಾಗಲೂ ಎಡೆಬಿಡದೆ ಮೂರುಲೋಕಗಳನ್ನೂ ಸುತ್ತುತ್ತಿರುವ ನಿನಗೆ ತಿಳಿಯದುದೊಂದೂ ಇಲ್ಲ! ನನ್ನ ಪ್ರಿಯೆಯೆಲ್ಲಿರುವಳು ಹೇಳು! ಯಾರಾದರೂ ಆಕೆಯನ್ನು ಕದ್ದುಯ್ದರೆ? ಅಥವಾ ಅವಳು ತಾನಾ ಗಿಯೇ ಮೃತಿಹೊಂದಿದಳೆ? ಇಲ್ಲವೇ ಬೇರೆಲ್ಲಿಗಾದರೂ ಹೋಗಿರುವಳೆ? ನಿಜ ಸ್ಥಿತಿಯನ್ನು ತಿಳಿಸು!" ಎಂದು ದೈನ್ಯದಿಂದ ಕೂಗಿ ಮೊರೆಯಿಡುತಿದ್ದನು. ಹೀಗೆ ಗೋಳಿಡುತ್ತ ಸಂಕಟದಿಂದ ಮೂರ್ಛೆಬಿದ್ದ ರಾಮನನ್ನು ನೋಡಿ, ಲಕ್ಷ್ಮಣನು ಅವನ ಸಮೀಪಕ್ಕೆ ಬಂದು ಕಾಲೋಚಿತವಾದ ಮಾತುಗಳಿಂದ ಅನೇಕ ವಿಧದಲ್ಲಿ ಸಮಾಧಾನಪಡಿಸುತ್ತ, "ಆರ್ಯನೆ! ಇದೇನು? ದುಃಖವನ್ನು ಬಿಡು! ಧೈರ್ಯದಿಂದಿರು! ಸೀತೆಯನ್ನು ಹುಡುಕುವುದಕ್ಕೆ ಉತ್ಸಾಹವನ್ನು ತಂದು ಕೊಳ್ಳುವವನಾಗು! ಉತ್ಸಾಹವಿಲ್ಲದ ಮೇಲೆ ಯಾವ ಕಾರ್ಯವೂ ನಡೆಯು ವುದಿಲ್ಲ! ಉತ್ಸಾಹವೊಂದಿದ್ದರೆ ಎಂತಹ ದುಷ್ಕರಕಾರ್ಯವನ್ನಾದರೂ ಸಾಧಿಸಿ ಜಯಹೊಂದಬಹುದಲ್ಲವೆ?" ಎಂದನು. ಹೀಗೆ ಲಕ್ಷ್ಮಣನು ಅನೇಕ ವಿಧದಲ್ಲಿ ಸಮಾಧಾನವನ್ನು ಹೇಳಿದರೂ ರಾಮನು ಅದೊಂದನ್ನೂ ಕೇಳದೆ, ಮತ್ತಷ್ಟು ಧೈರ್ಯಗೆಟ್ಟು ದುಃಖಿತನಾಗಿ [1]ಸಂಕಟಪಡುತ್ತಲೇ ಇದ್ದನು.

ಇಲ್ಲಿಗೆ ಅರುವತ್ತುಮೂರನೆಯ ಸರ್ಗವು.

---

1. ರಾಮನು ಹೀಗೆ ತಾನು ದುಃಖಿಸುತ್ತಿರುವುದನ್ನೆಲ್ಲಾ ರಾವಣನು ಚಾರರ ಮೂಲಕ ವಾಗಿ ತಿಳಿದುಕೊಂಡು, ಅದರಿಂದ ತನ್ನನ್ನು ಮನುಷ್ಯನೆಂದೇ ದೃಢವಾಗಿ ನಂಬಿ, ತನ್ನಲ್ಲಿ ಚೆನ್ನಾಗಿ ವೈರವನ್ನು ಬೆಳೆಸಿದ ಹೊರತು ವಧ್ಯನಾಗಲಾರನೆಂಬುದಕ್ಕಾಗಿಯೇ ಈ ನಟನ ಗಳನ್ನು ಮಾಡುವನೇ ಹೊರತು ಬೇರೆಯಲ್ಲ. ಇದೇ ಅಂಶವು ಬ್ರಹ್ಮಾಂಡಪುರಾಣದಲ್ಲಿ "ಸ್ತ್ರೀಪುಮ್ಸಲಾನುಷಂಗಾತ್ಮಾ ದೇಹೋನಾಸ್ಯ ವಿಜಾಯತೇ। ಕಿಂತು ನಿರ್ದೋಷ-

| ದಾರಿಯಲ್ಲಿ ಕಾಣಿಸಿದ ಗುರುತುಗಳಿಂದ ಸೀತೆಯು ರಾಕ್ಷಸರಿಂದಪಹೃತಳಾದಳೆಂದು ನಿಶ್ಚಯಿಸಿದುದು. |

ಆಮೇಲೆ ದುಃಖಿತನಾದ ರಾಮನು ಕುಗ್ಗಿದ ಸ್ವರದಿಂದ ಲಕ್ಷ್ಮಣನನ್ನು ನೋಡಿ "ವತ್ಸನೆ! ಬೇಗ ಹೋಗಿ ಗೋದಾವರೀ ನದಿಯನ್ನು ನೋಡಿಬಾ! ಒಂದುವೇಳೆ ಕಮಲಗಳನ್ನು ತರುವುದಕ್ಕಾಗಿ ಸೀತೆಯು ಅಲ್ಲಿಗೆ ಹೋಗಿದ್ದರೂ ಇರಬಹುದು" ಎಂದನು. ಪರಂತಪನಾದ ಲಕ್ಷ್ಮಣನು ಹೀಗೆ ರಾಮನಿಂದಾ

---

ಚೈತನ್ಯಂ ಸುಖನಿತ್ಯಾಂ ಸ್ವಕಾಂ ತನುಂ । ಪ್ರಕಾಶಯತಿ ಸೈವೇಯಂ ಜನಿರ್ವಿಷ್ಣೋರ್ನ ಚಾಪರಾ । ತಥಾಪ್ಯಸುರಮೋಹಾರ್ಥಂ ಪರೇಷಾಂ ಚ ಕ್ವಚಿತ್ಕ್ವಚಿತ್ । ದುಃಖಾಜ್ಞಾನ ಶ್ರಮಾದೀಂಶ್ಚ ದರ್ಶಯೇಚ್ಛುದ್ಧಸದ್ಗುಣಃ । ಕ್ವ ವ್ರಣಾದಿ ಕ್ವ ಚಾಜ್ಞಾನಂ ಸ್ವತಂತ್ರಾಚಿಂತ್ಯ ನಿರ್ಗುಣೇ । ಮೋಕ್ಷಾಭಾವಾಯ ತೇಷಾಂ ತು ದರ್ಶಯತ್ಯಾನಜೋ ಹರಿಃ" ಸ್ತ್ರೀಪುರುಷರ ಮಲಸಂಬಂಧವಾದ ದೇಹವೇ ಭಗವಂತನಿಗಿಲ್ಲವು. ಇದು ಸಾಕ್ಷಾದ್ವಿಷ್ಣುವಿನ ಪೂರ್ಣಾವ ತಾರವೇ ಹೊರತು ಬೇರೆಯಲ್ಲ. ಈ ಅವತಾರವಾದರೋ ದೋಷರಹಿತವಾದ ಚೈತನ್ಯ ವನ್ನೇ ಸ್ವರೂಪವಾಗಿ ಹೊಂದಿ, ನಿತ್ಯ ಸುಖಾತ್ಮಕವಾದ ನಿಜಶರೀರವನ್ನು ಪ್ರಕಾಶ ಪಡಿಸುತ್ತಿರುವುದು. ಆದರೆ ಇತರರನ್ನು ಮೋಹಗೊಳಿಸುವುದಕ್ಕಾಗಿಯೇ ದುಃಖಾಜ್ಞಾನ ಶ್ರಮಾದಿಗಳನ್ನು ಸೂಚಿಸುತ್ತಿರುವುದು. ಶುದ್ಧಸತ್ತ್ವಮಯನಾಗಿಯೂ, ಸ್ವತಂತ್ರ ನಾಗಿಯೂ ಇರುವ ಭಗವಂತನಿಗೆ ವ್ರಣಾದಿಗಳಾಗಲಿ, ಅಜ್ಞಾನವಾಗಲಿ ಎಲ್ಲಿಯದು? ಎಂದು ಹೇಳಲ್ಪಟ್ಟಿದೆ. ಇದರಿಂದ ರಾಮನು ತನ್ನಲ್ಲಿ ರಾವಣನಿಗೆ ಈಶ್ವರನೆಂಬ ಬುದ್ಧಿ ಯುಂಟಾಗಬಾರದೆಂದೂ, ಅದರಿಂದ ಅವನಿಗೆ ಮೋಕ್ಷವಿಲ್ಲದಂತಿರಬೇಕೆಂದೂ ಈ ನಟನ ಗಳನ್ನು ಕಾಣಿಸಿರುವನು. ಹಾಗೆಯೇ ರಾವಣನ ಕೈಯಿಂದ ಸೀತಾಪಹಾರವನ್ನು ಮಾಡಿಸಿ ದುದೂ ಕೂಡ, ಅವನ ಪುಣ್ಯವನ್ನು ಕೆಡಿಸಿ ತನಗೆ ವಧ್ಯನನ್ನಾಗಿ ಮಾಡಿಕೊಳ್ಳಬೇಕೆಂಬುದ ಕ್ಕಾಗಿಯೇ. ಇದೇ ವಿಷಯವು, ಕೇದಾರ ಖಂಡದಲ್ಲಿ "ರಾವಣನು ಮಹಾತಪಸ್ವಿಯಾಗಿ ಬಲವನ್ನು ಹೊಂದಿ ಬಂದಿರುವವನಾದುದರಿಂದ, ಅವನಿಗಿಂತಲೂ ಮೇಲಾದ ತಪೋಬಲ ವಿಲ್ಲದಿದ್ದರೆ ಅವನನ್ನು ಜಯಿಸುವುದಸಾಧ್ಯವು. ಅಷ್ಟು ತಪಸ್ಸನ್ನು ಮಾಡಲು ದೇವತೆ ಗಳಿಗೂ ಸಾಧ್ಯವಲ್ಲ. ಆದುದರಿಂದ ವಿಷ್ಣುವು ರಾವಣನ ತಪಸ್ಸನ್ನು ಕೆಡಿಸಬೇಕೆಂಬುದ ಕ್ಕಾಗಿ, ಲಕ್ಷ್ಮಿಯೊಡನೆ ಆಲೋಚಿಸಿ, ಉಪಾಯವನ್ನು ಹುಡುಕಿ, ಸೀತಾರೂಪದಲ್ಲಿ ಅವತರಿಸಿದ ಲಕ್ಷ್ಮಿಯಲ್ಲಿ ಅವನಿಗೆ ಮೋಹವುಂಟಾಗುವಂತೆ ಮಹಾಘೋರಪಾಪವನ್ನು ಮಾಡಿಸಿ, ಅದರಿಂದ ಅವನ ತಪೋವೀರ್ಯವನ್ನು ಕೆಡಿಸಿ, ಆಮೇಲೆ ಅವನನ್ನು ಕೊಂದು ದೇವತೆಗಳ ಕಾರ್ಯವನ್ನು ನಡೆಸಿರುವನು. ಇದಕ್ಕಾಗಿಯೇ ವಿಷ್ಣುವು ಸೀತೆಯೊಡನೆಯೂ ಬ್ರಹ್ಮವಿದ್ಯೆಯೊಡನೆಯೂ ಅವತರಿಸಿದ"ನೆಂದು ಹೇಳಿದೆ. (ಮಹೇಶ್ವರತೀರ್ಥರು).

ಜ್ಞಪ್ತನಾಗಿ, ವೇಗದಿಂದ ನಡೆದು, ಮನೋಹರವಾದ ಆ ಗೋದಾವರೀ ನದಿಯ ಬಳಿಗೆ ಹೋದನು. ಆ ನದಿಯ ಘಟ್ಟಗಳೆಲ್ಲವನ್ನೂ ಹುಡುಕಿ ಹಿಂತಿರುಗಿ ಬಂದು ರಾಮನನ್ನು ನೋಡಿ, "ಅಣ್ಣಾ! ಯಾವ ಘಟ್ಟಗಳಲ್ಲಿಯೂ ಸೀತೆಯನ್ನು ಕಾಣಲಿಲ್ಲ. ಎಷ್ಟು ಕೂಗಿದರೂ ಪ್ರತ್ಯುತ್ತರವೇ ಇಲ್ಲ. ಆ ವಿದೇಹಪುತ್ರಿಯು ಎಲ್ಲಿ ಹೋಗಿರುವಳೆಂದು ಇದುವರೆಗೆ ತಿಳಿಯಲಿಲ್ಲ" ಎಂದನು. ಇದನ್ನು ಕೇಳಿ ರಾಮನು ವಿರಹಸಂಕಟದಿಂದ ದುಃಖಿತನಾಗಿ, ಮೈಮರೆತು ತಾನಾಗಿಯೇ ಅಲ್ಲಿಂದ ಹೊರಟು ಗೋದಾವರೀ ನದಿಯ ಬಳಿಗೆ ಬಂದನು. ಆ ನದಿಯ ಮುಂದೆ ನಿಂತು ನಮಸ್ಕರಿಸಿ, "ಎಲೆ, ಗೋದಾವರೀ! ಸೀತೆ ಎಲ್ಲಿರುವಳು ಹೇಳು?" ಎಂದು ಗಟ್ಟಿಯಾಗಿ ಕೂಗಿದನು. ಅಲ್ಲಿದ್ದ ಭೂತಗಳಾಗಲಿ ಗೋದಾವರೀ ನದಿಯಾಗಲಿ, ಘಾತುಕನಾದ ರಾವಣನಿಂದ ಸೀತೆಯು ಕದ್ದುಯ್ಯಲ್ಪಟ್ಟವಳೆಂದು ರಾಮನಿಗೆ ತಿಳಿಸಲಿಲ್ಲ. ಅಲ್ಲಿದ್ದ ಇತರ ಭೂತಗಳೆಲ್ಲವೂ ಒಂದಾಗಿ ರಾಮನಿಗೆ ಇದರ ನಿಜಸ್ಥಿತಿಯನ್ನು ತಿಳಿಸೆಂದು ಬಾರಿಬಾರಿಗೂ ಪ್ರೇರಿಸುತಿದ್ದರೂ, ದುಃಖಿತನಾದ ರಾಮನು ಬಾರಿಬಾರಿಗೂ ವಿನಯದಿಂದ ಕೈಮುಗಿದು ಪ್ರಾರ್ಥಿಸುತಿದ್ದರೂ ಆ ಗೋದಾವರೀ ನದಿಯು ದುರಾತ್ಮನಾದ ರಾವಣನ ಘೋರರೂಪವನ್ನೂ, ಆತನ ಕ್ರೂರಕರ್ಮಗಳನ್ನೂ ನೆನೆಸಿಕೊಂಡು ಆ ಭಯದಿಂದ ರಾಮನಿಗೆ ನಿಜಸ್ಥಿತಿಯನ್ನು ತಿಳಿಸಲೇ ಇಲ್ಲ. ಹೀಗೆ ಗೋದಾವರೀ ನದಿಯೂ ತನಗೆ ಆಶಾಭಂಗವನ್ನುಂಟುಮಾಡಲು ದುಃಖದಿಂದ ಕಂದಿಕುಂದಿ ಕೃಶನಾದ ರಾಮನು ಪುನಃ ಲಕ್ಷ್ಮಣನನ್ನು ನೋಡಿ "ಎಲೆ, ಸೌಮ್ಯನೆ! ಈ ಗೋದಾವರಿಯೂ ನಮಗೆ ಪ್ರತ್ಯುತ್ತರವನ್ನು ಕೊಡುವುದಿಲ್ಲವಲ್ಲಾ! ನಾನಿನ್ನೇನು ಮಾಡಲಿ? ನಾನು ಅಯೋಧ್ಯೆಗೆ ಹೋದಮೇಲೆ ಜನಕನನ್ನು ಕಂಡು ಏನು ಹೇಳಲಿ? ಸೀತೆಯ ತಾಯಿಯು ಬಂದು ನನ್ನನ್ನು ನೋಡಿದಾಗ ಈ ಅಪ್ರಿಯವನ್ನು ಅವಳಿಗೆ ನಾನು ಹೇಗೆ ಹೇಳಲಿ? ಅಯ್ಯೋ! ರಾಜ್ಯಭ್ರಷ್ಟನಾಗಿ ಬಂದು, ಕಾಡಿನಲ್ಲಿ ಸಿಕ್ಕಿದ ಹಣ್ಣು ಹಂಪಲುಗಳನ್ನು ತಿಂದು ಜೀವಿಸುತ್ತಿರುವ ಈ ನನ್ನ ಕಷ್ಟವೆಲ್ಲವೂ ಆಕೆಯನ್ನು ನೋಡುತಿದ್ದ ಮಾತ್ರದಲ್ಲಿ ಅಡಗಿಹೋಗುತಿದ್ದುವು. ಅಂತಹ ನನ್ನ ಪ್ರಾಣಪ್ರಿಯೆಯು ಇನ್ನೆಲ್ಲಿ ಹೋದಳೋ ಕಾಣೆನಲ್ಲಾ! ಬಂಧುಗಳನ್ನೂ ತೊರೆದು, ಆ ರಾಜಪುತ್ರಿಯನ್ನೂ ನೋಡದಿದ್ದಮೇಲೆ ನನಗೆ ನಿದ್ರೆಯೆಂದರೇನು? ಒಂದೊಂದು ರಾತ್ರಿಯನ್ನೂ ಒಂದೊಂದು ಯುಗವಾಗಿ ಕಳೆಯ

ಬೇಕಾಗಿರುವುದಲ್ಲಾ! ಈ ಮಂದಾಕಿನಿಯನ್ನೂ, ಈ ಜನಸ್ಥಾನವನ್ನೂ, ಈ ಪ್ರಸ್ರವಣ ಪರ್ವತವನ್ನೂ ಇನ್ನೂ ಇಲ್ಲಿರುವ ಸಮಸ್ತ ಪ್ರದೇಶಗಳನ್ನೂ ಹುಡುಕಿಬರುವೆನು. ಅಲ್ಲಿಯಾದರೂ ಸೀತೆಯು ಸಿಕ್ಕುವಳೋ ನೋಡುವೆನು. ವತ್ಸ ಲಕ್ಷ್ಮಣನೆ! ಇಲ್ಲಿ ನೋಡು! ಈ ಮೃಗಗಳು ಬಾರಿಬಾರಿಗೂ ನನ್ನನ್ನು ನೋಡುತ್ತಿರುವುವು. ಇವುಗಳ ಇಂಗಿತಗಳನ್ನು ನೋಡಿದರೆ ಏನೋ ಹೇಳಬೇಕೆಂದಿರುವಂತೆ ತೋರುವುದು" ಎಂದು ಹೇಳಿ ಪುರುಷಶ್ರೇಷ್ಠನಾದ ಆ ರಾಮನು ಮುಂದಿದ್ದ ಮೃಗಗಳನ್ನು ನೋಡಿ, ಕಣ್ಣಿನಲ್ಲಿ ನೀರನ್ನು ತುಂಬಿಕೊಂಡು "ಎಲೆ ಮೃಗಗಳೆ! ಸೀತೆಯೆಲ್ಲಿರುವಳು?" ಎಂದನು. ಈ ಮಾತನ್ನು ಕೇಳಿದೊಡನೆ ಅಲ್ಲಿ ಮುಂದೆ ಕುಳಿತಿದ್ದ ಮೃಗಗಳೆಲ್ಲವೂ ತಟ್ಟನೆ ಎದ್ದುನಿಂತು, ದಕ್ಷಿಣಾಭಿಮುಖವಾಗಿ ತಿರುಗಿ ಮೂತಿಯನ್ನು ಮೇಲಕ್ಕೆತ್ತಿ ಆಕಾಶವನ್ನು ತೋರಿಸುತ್ತಾ, ಆ ಸೀತೆಯು ಹೋದ ದಾರಿಯನ್ನೇ ಹಿಂಬಾಲಿಸಿ ಸ್ವಲ್ಪದೂರದವರೆಗೆ ವೇಗದಿಂದೋಡಿ, ಪುನಃ ರಾಮನ ಕಡೆಗೆ ತಿರುಗಿ ನಿಂತು ಇವನನ್ನೇ ನೋಡುತಿದ್ದುವು. ಹೀಗೆ ಆ ಮೃಗಗಳು ಬಾರಿಬಾರಿಗೂ ಆಕಾಶವನ್ನು ನೋಡುತ್ತಾ, ಬಾರಿಬಾರಿಗೂ ದಕ್ಷಿಣದಿಕ್ಕಿಗೆ ಅಭಿಮುಖವಾಗಿ ಹೋಗುತ್ತಾ, ಆಗಾಗ ರಾಮನ ಕಡೆಗೆ ತಿರುಗಿ ನೋಡುವುದನ್ನು ಲಕ್ಷ್ಮಣನೂ ಕಂಡನು. ಆಗ ಲಕ್ಷ್ಮಣನಿಗೆ ಆ ಮೃಗಗಳ ಚೇಷ್ಟೆಯನ್ನೂ, ಅವುಗಳ ಇಂಗಿತಗಳನ್ನೂ, ಅವುಗಳ ಕೂಗುಗಳನ್ನೂ ನೋಡಿ ಮನಸ್ಸಿಗೆ ಶಂಕೆಯುಂಟಾಯಿತು. ಬುದ್ಧಿಶಾಲಿಯಾದ ಆ ಲಕ್ಷ್ಮಣನು ಆಶ್ಚರ್ಯದಿಂದ ಅಣ್ಣನನ್ನು ನೋಡಿ "ಅಣ್ಣಾ! ನೀನು ಸೀತೆಯೆಲ್ಲಿರುವಳೆಂದು ಕೇಳಿದೊಡನೆಯೇ ಈ ಮೃಗಗಳೆಲ್ಲವೂ ತಟ್ಟನೆ ಎದ್ದು ನಿಂತುವು! ನೈಋತ್ಯ ದಿಕ್ಕನ್ನು ತೋರಿಸುತ್ತಿರುವುವು! ಅಂತರಿಕ್ಷವನ್ನು ನೋಡುತ್ತ ಈ ಮೃಗಗಳೆಲ್ಲವೂ ಒಂದೇ ಕಡೆಗೆ ಓಡುತ್ತಿರುವುವು! ಆದುದರಿಂದ ನನಗೇನೋ ಸಂದೇಹವುಂಟಾಗಿರುವುದು. ನಾವು ಈಗ ಈ ನೈಋತ್ಯದಿಕ್ಕನ್ನೇ ಹಿಡಿದು ಹೋಗುವುದುತ್ತಮವು. ಒಂದುವೇಳೆ ಅಲ್ಲಿ ಸೀತೆಯು ಸಿಕ್ಕಿದರೂ ಸಿಕ್ಕಬಹುದು. ಅಥವಾ ಅವಳ ವೃತ್ತಾಂತವನ್ನಾದರೂ ತಿಳಿಯಬಹುದು" ಎಂದನು. ಇದನ್ನು ಕೇಳಿ ರಾಮನು, "ವತ್ಸನೆ! ಸರಿ! ಹಾಗೆಯೇ ಆಗಲಿ!" ಎಂದು ಹೇಳಿ, ದಕ್ಷಿಣಾಭಿಮುಖವಾಗಿ ಲಕ್ಷ್ಮಣನೊಡನೆ ಹೊರಟನು. ಮೃಗಗಳು ಆಗಾಗ ನೆಲವನ್ನು ಮೂಸಿನೋಡುತಿದ್ದುದರಿಂದ ನೆಲವನ್ನೇ ನೋಡುತ್ತ

ಇಬ್ಬರೂ ಮುಂದೆ ಹೋಗುತ್ತಿದ್ದರು. ಹೀಗೆ ರಾಮಲಕ್ಷ್ಮಣರಿಬ್ಬರೂ ದುಃಖದಿಂದ ಒಬ್ಬರಿಗೊಬ್ಬರು ಮಾತಾಡುತ್ತಾ ದಾರಿ ನಡೆಯುತ್ತಿರುವಾಗ, ಮುಂದೆ ನೆಲದ ಮೇಲೆ ಉದಿರಿದ್ದ ಪುಷ್ಪಗಳನ್ನು ಕಂಡರು. ಅದನ್ನು ನೋಡಿ ರಾಮನು ದುಃಖದಿಂದ ಲಕ್ಷ್ಮಣನನ್ನು ಕುರಿತು "ವತ್ಸನೆ! ಇದೋ ನೋಡು! ಇವು ಆ ಸೀತೆಯು ತಲೆಯಲ್ಲಿ ಮುಡಿದಿದ್ದ ಪುಷ್ಪಗಳೆಂದೇ ತೋರುವುದು. ಏನೂ ಸಂದೇಹವಿಲ್ಲ. ನಾನೇ ಇವುಗಳನ್ನು ಈ ಕಾಡಿನಲ್ಲಿ ತಂದು ಅವಳಿಗೆ ಮುಡಿಸಿದ್ದೆನು. ಆಹಾ! ವತ್ಸ ಲಕ್ಷ್ಮಣನೆ! ಇನ್ನೂ ಈ ಹೂಗಳು ಬಾಡದೆ ಅತ್ತಿತ್ತ ಚದರದೆ ಹಾಗೆಯೇ ಬಿದ್ದಿರುವುದನ್ನು ನೋಡಿದರೆ, ಸೂರ್ಯನೂ, ವಾಯುವೂ, ಯಶಸ್ವಿನಿಯಾದ ಈ ಭೂಮಿಯೂ ನನಗೆ ಹಿತವನ್ನು ಕೋರಿ, ಇವುಗಳ ಮೂಲಕವಾಗಿ ಸೀತೆಯ ವೃತ್ತಾಂತವನ್ನು ತಿಳಿಸಬೇಕೆಂದು ಇದುವರೆಗೆ ಕಾಪಾಡಿರುವರೆಂದು ತೋರುವುದು" ಎಂದನು. ಪುರುಷಶ್ರೇಷ್ಠನಾಗಿಯೂ, ಧರ್ಮಾತ್ಮನಾಗಿಯೂ ಇರುವ ರಾಮನು ಹೀಗೆಂದು ಲಕ್ಷ್ಮಣನಿಗೆ ತಿಳಿಸಿ, ಅಲ್ಲಿಂದ ಮುಂದೆ ಪ್ರಸ್ರವಣಪರ್ವತದ ಬಳಿಗೆ ಹೋದನು. ಆ ಪರ್ವತದ ಮುಂದೆ ನಿಂತು ರಾಮನು [1]"ಎಲೈ ಪರ್ವತಶ್ರೇಷ್ಠವೆ? ಈ ವನದಲ್ಲಿ ನನ್ನನ್ನಗಲಿ ಬಂದ ಸರ್ವಾಂಗಸುಂದರಿಯಾದ ಸೀತೆಯನ್ನು ನೀನೇನಾದರೂ ಕಂಡೆಯಾ?" ಎಂದನು. ಈ ಮಾತುಗಳೇ ಪರ್ವತದಲ್ಲಿ ಪ್ರತಿಧ್ವನಿಯನ್ನುಂಟುಮಾಡಿದುವು. ಅದನ್ನು ಕೇಳಿ ರಾಮನಿಗೆ ತಡೆಯಲಾರದ ಕೋಪವುಂಟಾಯಿತು. ಆಗ ರಾಮನು ಸಿಂಹವು ಕ್ಷುದ್ರಮೃಗವನ್ನು ನೋಡುವಂತೆ ಆ ಪರ್ವತವನ್ನು ನೋಡಿ ಕೋಪದಿಂದ "ಎಲೆ ಪರ್ವತವೆ! ಹಾಗಿದ್ದರೆ ಅವಳೆಲ್ಲಿರುವಳು ಹೇಳು! ಬಂಗಾರದಂತೆ

---

1. ಇಲ್ಲಿ ಬಹಳ ಚಮತ್ಕಾರವುಳ್ಳ ಒಂದು ಅರ್ಥವಿಶೇಷವುಂಟು. ಇದಕ್ಕೆ "ಕಚ್ಚಿತ್ ಕ್ಷಿತಿಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ" ಎಂದು ಮೂಲವು. ರಾಮನು ಹೇಳಿದ ಈ ವಾಕ್ಯವೇ ಬೆಟ್ಟದಲ್ಲಿ ಪ್ರತಿಧ್ವನಿಯನ್ನುಂಟುಮಾಡಿದುದರಿಂದ, ಪರ್ವತವು ತನ್ನ ಪ್ರಶ್ನೆಗೆ ಉತ್ತರವನ್ನು ಹೇಳಿದಂತೆಯೇ ರಾಮನಿಗೆ ಭ್ರಾಂತಿಯುಂಟಾಯಿತು. ಈ ವಾಕ್ಯಕ್ಕೆ ಚಿತ್ರೋತ್ತರಾಲಂಕಾರದಂತೆ ಪ್ರಶ್ನರೂಪವಾಗಿಯೂ ಉತ್ತರರೂಪವಾಗಿಯೂ ಅರ್ಥಗಳನ್ನು ಮಾಡಬಹುದು. ರಾಮನ ವಾಕ್ಯದಲ್ಲಿ 'ಕಚ್ಚಿತ್' ಎಂಬುದು ಪ್ರಶ್ನಾರ್ಥಕವು. ಪ್ರತಿಧ್ವನಿಯಲ್ಲಿ "ಕಚ್ಚಿತ್ ಕಾಮಪ್ರವೇದನೇ" ಎಂಬ ನಿಘಂಟುವನ್ನನುಸರಿಸಿ ಅದೇ ಅಭಿಮತಸೂಚಕವು. ಇದರಿಂದ ರಾಮನು ಪರ್ವತವನ್ನು ಕುರಿತು "ಹೇ ಕ್ಷಿತಿಭೃತಾಂ ನಾಥ" ಎಲೈ ಪರ್ವತಶ್ರೇಷ್ಠನೆ, "ಸರ್ವಾಂಗಸುಂದರೀ ದೃಷ್ಟಾ ಕಚ್ಚಿತ್?" ಸರ್ವಾಂಗ

ವೈಬಣ್ಣವುಳ್ಳ ಆ ಸೀತೆಯನ್ನು ಈಗಲೇ ನನಗೆ ತೋರಿಸು! ಹಾಗಿಲ್ಲದ ಪಕ್ಷದಲ್ಲಿ ನಿನ್ನ ಈ ಸಾನುಪ್ರದೇಶಗಳೆಲ್ಲವನ್ನೂ ಈಗಲೇ ನನ್ನ ಬಾಣದಿಂದ ನಿಮಿಷಮಾತ್ರದಲ್ಲಿ ಭೇದಿಸಿಬಿಡುವೆನು" ಎಂದನು. ಆ ಪರ್ವತವೂ ಹೀಗೆಯೇ ಪ್ರತಿಧ್ವನಿಯನ್ನು ಮಾಡಲು, ರಾಮನಿಗೆ ಮತ್ತಷ್ಟು ಕೋಪವು ಹೆಚ್ಚಿತು. ಆಗ ರಾಮನು ಹೀಗೆ ತಾನು ಹೇಳಿದಂತೆಯೇ ಹೇಳುತ್ತಾ ಸೀತೆಯನ್ನು ತೋರಿಸದಿರುವ ಆ ಪರ್ವತವನ್ನು ನೋಡಿ ಕಿಡಿಕಿಡಿಯಾಗಿ "ಎಲೆ ಪರ್ವತವೆ! ನಿನ್ನನ್ನು ಈಗಲೇ ನನ್ನ ಬಾಣಾಗ್ನಿಯಿಂದ ಸುಟ್ಟು ಬೂದಿಮಾಡುವೆನು. ನಿನ್ನಲ್ಲಿ ಒಂದು ಹುಲ್ಲು ಕಡ್ಡಿಯಾಗಲಿ, ಮರವಾಗಲಿ ಇಲ್ಲದಂತೆ ಕೇವಲ ಶೂನ್ಯಪ್ರದೇಶವನ್ನಾಗಿ ಮಾಡಿಬಿಡುವೆನು ನೋಡು! ಒಳ್ಳೇ ಮಾತಿನಿಂದ ನನಗೆ ಸರಿಯಾಗಿ ಪ್ರತ್ಯುತ್ತರವನ್ನು ಕೊಡು!" ಎಂದು ಹೇಳಿ, ಆಮೇಲೆ ಲಕ್ಷ್ಮಣನ ಕಡೆಗೆ ತಿರುಗಿ, "ವತ್ಸ ಲಕ್ಷ್ಮಣನೆ! ಇಲ್ಲಿ ನಮಗೆ ಯಾರೂ ನಿಜಸ್ಥಿತಿಯನ್ನು ತಿಳಿಸುವ ಹಾಗಿಲ್ಲ. ಈ ಗೋದಾವರೀ ನದಿಯೂ ನಮ್ಮನ್ನು ವಂಚಿಸಿಬಿಟ್ಟಿರುವುದು. ಈಗಲೂ ಈ ನದಿಯು ಚಂದ್ರಮುಖಿಯಾದ ಸೀತೆಯು ಎಲ್ಲಿರುವಳೆಂಬುದನ್ನು ತಿಳಿಸದಿದ್ದ ಪಕ್ಷದಲ್ಲಿ ಈಗಲೇ ನನ್ನ ಬಾಣಾಗ್ನಿಯಿಂದ ಇದನ್ನು ಶೋಷಿಸಿಬಿಡುವೆನು" ಎಂದನು. ಹೀಗೆ ರಾಮನು ಅತಿಕೋಪಾವಿಷ್ಟನಾಗಿ ತನ್ನ ನೋಟದಿಂದಲೇ ಸಮಸ್ತಪ್ರಪಂಚವನ್ನೂ ದಹಿಸಿಬಿಡುವಂತೆ ಅತ್ತಿತ್ತ ತಿರುಗಿ ನೋಡುವಾಗ, ನೆಲದಮೇಲೆ ಒಬ್ಬ ರಾಕ್ಷಸನ ದೊಡ್ಡದಾದ ಹೆಜ್ಜೆಯ ಗುರುತನ್ನು ಕಂಡನು. ಅದರ ಪಕ್ಕದಲ್ಲಿ ಅತ್ತಿತ್ತ ಭಯದಿಂದ ಓಡಾಡಿದ ಒಬ್ಬ ಸ್ತ್ರೀಯ ಹೆಜ್ಜೆಯ ಗುರುತುಗಳನ್ನೂ ನೋಡಿದನು. ಅದು ಸೀತೆಯ ಕಾಲಿನ ಗುರುತುಗಳಂತೆಯೇ ತೋರಿತು. ಹೀಗೆ ರಾಕ್ಷಸನ ಮತ್ತು ಸೀತೆಯ ಹೆಜ್ಜೆಯ ಗುರುತುಗಳನ್ನು ನೋಡುತ್ತ ಮುಂದೆ ಹೋಗಲು, ಅಲ್ಲಿ ಮುರಿದು

---

ಸುಂದರಿಯಾದ ಸೀತೆಯನ್ನು ಕಂಡೆಯಾ ? ಎಂದು ಕೇಳಿದುದಾಗಿಯೂ, ಅದಕ್ಕೆ ಪರ್ವತವು "ಹೇ ಕ್ಷಿತಿಭೃತಾಂ ನಾಥ! ಎಲೈ ರಾಜಶ್ರೇಷ್ಠನೆ! (ಕಚ್ಚಿತ್) ಹೌದು! ಸರ್ವಾಂಗಸುಂದರಿಯೊಬ್ಬಳನ್ನು ಕಂಡೆನು" ಎಂದು ಉತ್ತರಕೊಟ್ಟಂತೆಯೂ ಅರ್ಥಭೇದವನ್ನು ಗ್ರಹಿಸಬೇಕು. ಈ ಭ್ರಾಂತಿಯಿಂದಲೇ ರಾಮನು ಪುನಃ ಆ ಪರ್ವತವನ್ನು ಕುರಿತು "ಹಾಗಾದರೆ ಹೇಳು, ಎಲ್ಲಿರುವಳು ?" ಎಂದು ಕೇಳಿದುದಾಗಿಯೂ ತಿಳಿಯಬೇಕು. ಅದಕ್ಕಾಗಿಯೇ ಮುಂದಿನ ಶ್ಲೋಕದಲ್ಲಿ "ಶಂಸನ್ನಿವ ತತಸ್ಸೀತಾಂ ನಾsದರ್ಶಯತ" ಏನೋ ಹೇಳುವಂತೆ ತೋರಿಸಿಯೂ ಆ ಪರ್ವತವು ಸೀತೆಯನ್ನು ತೋರಿಸಲಿಲ್ಲವೆಂದು ಹೇಳಲ್ಪಟ್ಟಿದೆ.

ಬಿದ್ದ ಒಂದು ಬಿಲ್ಲನ್ನು ಕಂಡನು. ಮತ್ತು ಅದರ ಪಕ್ಕದಲ್ಲಿ ಎರಡು ಬತ್ತಳಿಕೆಗಳೂ, ಪುಡಿಪುಡಿಯಾಗಿ ಅಲ್ಲಲ್ಲಿ ಕೆದರಿಬಿದ್ದ ಒಂದು ರಥವೂ ಆ ರಾಮನ ಕಣ್ಣಿಗೆ ಗೋಚರಿಸಿತು ರಾಮನಿಗೆ ಹಾಗೆಯೇ ದಿಗ್ಭ್ರಮೆವುಂಟಾದಂತಾಯಿತು ಆಗ ಅವನು ಲಕ್ಷ್ಮಣನನ್ನು ಕುರಿತು "ಆಹಾ! ವತ್ಸ ಲಕ್ಷ್ಮಣನೆ! ಸೀತೆಯ ಆಭರಣಗಳಿಂದ ಚಿನ್ನದ ಪುಡಿಗಳು ಅಲ್ಲಲ್ಲಿ ಉದಿರಿರುವುವು! ಅವಳು ತಲೆಯಲ್ಲಿ ಮುಡಿದ ಹೂಗಳು ಅಲ್ಲಲ್ಲಿ ಕೆದರಿಬಿದ್ದಿರುವುವು! ಅಲ್ಲಲ್ಲಿ ನೆಲದ ಮೇಲೆ ಸುತ್ತಲೂ ಬೆಂಕಿಯ ಕಣಗಳಂತೆ ಕಾಣುವ ರಕ್ತಬಿಂದುಗಳನ್ನು ನೋಡಿದೆಯಾ? ಓಹೋ! ವತ್ಸನೆ! ಇನ್ನೇನೂ ಸಂದೇಹವಿಲ್ಲ. ಕಾಮರೂಪಿಗಳಾದ ಯಾರೋ ರಾಕ್ಷಸರು ಅವಳನ್ನು ತುಂಡುತುಂಡಾಗಿ ಕತ್ತರಿಸಿಬಿಟ್ಟಿರುವರು! ಅಥವಾ ತಿಂದೇಬಿಟ್ಟಿರುವರು! ಆ ಸೀತಾನಿಮಿತ್ತವಾಗಿ ಯಾರೋ ರಾಕ್ಷಸರಿಬ್ಬರು ಘೋರಯುದ್ಧವನ್ನು ನಡೆಸಿರುವ ಹಾಗೂ ತೋರುತ್ತಿದೆ! ಇದೋ ನೋಡು! ಇಲ್ಲಿ ಮುತ್ತಿನ ಮಣಿಗಳಿಂದಲೂ ಚಿನ್ನದ ಕಟ್ಟುಗಳಿಂದಲೂ ಶೋಭಿತವಾಗಿ ಮುರಿದುಬಿದ್ದಿರುವ ಬಿಲ್ಲು ಯಾರದಿರಬಹುದು? ಅದೋ! ಅಲ್ಲಿ ವೈಡೂರ್ಯಖಚಿತವಾಗಿ ಬಾಲಸೂರ್ಯನಂತೆ ಹೊಳೆಯುವ ಚಿನ್ನದ ಕವಚವು ಹರಿದುಬಿದ್ದಿರುವುದನ್ನು ನೋಡಿದೆಯಾ! ಅದು ಯಾರ ಕವಚವಿರಬಹುದು? ಇಲ್ಲಿ ನೂರು ಕಡ್ಡಿಗಳುಳ್ಳ ಮತ್ತು ದಿವ್ಯಪುಷ್ಪಮಾಲಿಕೆಗಳಿಂದಲಂಕೃತವಾದ ಶ್ವೇತಚ್ಛತ್ರವು ಕಾವುಮುರಿದು ಬಿದ್ದಿರುವುದನ್ನು ಕಂಡೆಯಾ? ಇದು ಯಾರದಿರಬಹುದು? ಸುವರ್ಣಮಯವಾದ ಎದೆಯಂಗಿಗಳಿಂದಲಂಕೃತಗಳಾಗಿ ಸತ್ತು ಬಿದ್ದಿರುವ ಪಿಶಾಚಮುಖವುಳ್ಳ ಕತ್ತೆಗಳನ್ನು ನೋಡು! ಇವು ಯಾವನ ರಥಕ್ಕೆ ಕಟ್ಟಲ್ಪಟ್ಟಿದ್ದುವೋ ತಿಳಿಯಲಿಲ್ಲವಲ್ಲಾ! ಅವುಗಳ ಭಯಂಕರಸ್ವರೂಪವನ್ನೂ, ಅವುಗಳ ದೊಡ್ಡ ದೇಹವನ್ನೂ ನೋಡಿದೆಯಾ? ಇದೋ! ಇಲ್ಲಿ ಉರಿಯುವ ಬೆಂಕಿಯಂತೆ ಝಗಝಗಿಸುತ್ತಿರುವ ಧ್ವಜದಂಡವು ಮುರಿದುಬಿದ್ದಿರುವುದು! ಇತ್ತಲಾಗಿ ಯುದ್ಧರಥವು ಪುಡಿಪುಡಿಯಾಗಿ ಬಿದ್ದಿರುವುದು! ಇದು ಯಾರದಾಗಿರಬಹುದು? ತೇರಚ್ಚಿನಂತೆ ಉದ್ದವಾಗಿಯೂ, ಚಿನ್ನದ ಕಟ್ಟುಗಳುಳ್ಳದಾಗಿಯೂ ಇರುವ ಹಲವು ಬಾಣಗಳು ಅಲ್ಲಲ್ಲಿ ಮುರಿದುಬಿದ್ದಿರುವುವು. ಇವು ಕ್ರೂರಕರ್ಮಿಯಾದ ಯಾವನ ಬಾಣಗಳೋ ತಿಳಿಯಲಿಲ್ಲ! ಲಕ್ಷ್ಮಣಾ! ಬಾಣದಿಂದ ತುಂಬಿರುವ ಎರಡು ಬತ್ತಳಿಕೆಗಳು ಇಲ್ಲಿ ತುಂಡುತುಂಡಾಗಿ ಬಿದ್ದಿರುವುದನ್ನು

ನೋಡಿದೆಯಾ ? ಕೈಯಲ್ಲಿ ಕಶೆಯನ್ನೂ ಹಗ್ಗವನ್ನೂ ಹಿಡಿದಂತೆಯೇ ಸಾರಥಿಯೊಬ್ಬನು ಸತ್ತುಬಿದ್ದಿರುವನು. ಇವನು ಯಾರ ಸಾರಥಿಯಿರಬಹುದು ? ಇಲ್ಲಿ ಇಬ್ಬರು ರತ್ನಕುಂಡಲಗಳನ್ನಿಟ್ಟು ಸುತ್ತಿದ ತಲೆಬಟ್ಟೆಯೊಡನೆ ಹತರಾಗಿ ಬಿದ್ದಿರುವರು ! ಇವರ ಕೈಯಲ್ಲಿ ಚಾಮರಗಳಿರುವುವು ! ಇವರು ಯಾರ ಕಡೆಯವರು ? ಯಾವನೋ ರಾಕ್ಷಸನು ಈ ದಾರಿಯಿಂದ ಹೋದಂತಿದೆ ! ಸಂದೇಹವಿಲ್ಲ. ಇದುವರೆಗೆ ರಾಕ್ಷಸರ ಮೇಲೆ ನನಗೆ ಅಷ್ಟಾಗಿ ವೈರವು ಬೆಳೆದಿರಲಿಲ್ಲ ! ಅವರ ತಪ್ಪುಗಳನ್ನೂ ನಾನು ಇದುವರೆಗೆ ಅಷ್ಟಾಗಿ ಗಮನಿಸುತ್ತಿರಲಿಲ್ಲ ! ಈಗ ಆ ವೈರವು ನೂರುಮಡಿಯಾಗಿ ಬೆಳೆದುಹೋಯಿತು. ಇನ್ನು ಅವರ ಪ್ರಾಣಗಳನ್ನು ನಿಮಿಷಮಾತ್ರದಲ್ಲಿ ಕೊನೆಮುಟ್ಟಿಸಿಬಿಡುವೆನು ! ಎಲೆ ಸೌಮ್ಯನೆ ! ಕ್ರೂರಮನಸ್ಸುಳ್ಳವರಾಗಿಯೂ. ಕಾಮರೂಪಿಗಳಾಗಿಯೂ ಇರುವ ಯಾರೋ ರಾಕ್ಷಸರೇ ಹೀಗೆ ಸೀತೆಯನ್ನಪಹರಿಸಿರುವರು. ಅಥವಾ ಕೊಂದೇಬಿಟ್ಟಿರುವರು ! ಅಯ್ಯೋ ! ವತ್ಸಲಕ್ಷ್ಮಣಾ ! ರಾಕ್ಷಸರು ಸೀತೆಯನ್ನು ಈ ಮಹಾರಣ್ಯದಲ್ಲಿ ಎತ್ತಿಕೊಂಡು ಹೋಗುವಾಗ ಧರ್ಮವಾದರೂ ಅವಳನ್ನು ಕಾಪಾಡಲಿಲ್ಲವಲ್ಲಾ ! ಹೀಗೆ ಸೀತೆಯನ್ನು ರಾಕ್ಷಸರ ಕೈಗೆ ಕೊಟ್ಟುಬಿಟ್ಟ ಮೇಲೆ ಯಾವ ದೇವತೆಗಳನ್ನು ನಾನು ನಂಬಬಹುದು ? ಯಾವ ದೇವತೆಗಳು ತಾನೇ ನನಗೆ ಪ್ರಿಯವನ್ನು ಕೋರುವವರೆಂದು ಹೇಳಬಹುದು ? ಅವರು ನಿಜವಾಗಿ ನನಗೆ ಶ್ರೇಯಸ್ಸನ್ನು ಕೋರುವವರಾಗಿದ್ದರೆ ಹೀಗೆ ಸೀತೆಯನ್ನು ರಾಕ್ಷಸರ ಬಾಯಿಗೆ ತುತ್ತಾಗಿಸುತಿದ್ದರೆ ? ಲೋಕದಲ್ಲಿ ಯಾವನು ಕೇವಲ ದಯಾಳುವಾಗಿರುವನೋ, ಅವನು ಪ್ರಪಂಚವನ್ನೇ ಸೃಷ್ಟಿಸಬಲ್ಲ ಸಾಮರ್ಥ್ಯವುಳ್ಳವನಾಗಿದ್ದರೂ, ಲೋಕೈಕ ವೀರನಾಗಿದ್ದರೂ, ಸಮಸ್ತ ಜಂತುಗಳೂ ಅವನನ್ನು ಅಲಕ್ಷ್ಯದಿಂದ ಕಾಣುವುವು ಅವನ ನಿಜವಾದ ಸಾಮರ್ಥ್ಯವನ್ನು ತಿಳಿಯದೆ ಅಜ್ಞಾನದಿಂದ ಅವನನ್ನು ಅವಮಾನಪಡಿಸುವುವು. ಇದೇ ಲೋಕಸ್ವಭಾವವು ಅದರಂತೆಯೇ ಈಗ ನಾನೂ ಕೇವಲ ಮೃದುತ್ವವನ್ನು ವಹಿಸಿ ಸಮಸ್ತ ಪ್ರಜೆಗಳಿಗೂ ಹಿತವನ್ನು ಬಯಸುತ್ತ, ಎಲ್ಲರಲ್ಲಿಯೂ ದಯೆಯನ್ನು ತೋರಿಸಿ ಶಾಂತನಾಗಿರುವುದರಿಂದ, ದೇವತೆಗಳೆಲ್ಲರೂ ನನ್ನನ್ನು ಕೈಲಾಗದ ಹೇಡಿಯೆಂದೇ ಎಣಿಸಿರುವರು ಇದರಲ್ಲಿ ಸಂದೇಹವಿಲ್ಲ ! ವತ್ಸ ಲಕ್ಷ್ಮಣಾ ! ನನ್ನಲ್ಲಿರುವ ಈ ಗುಣವೇ ದೋಷರೂಪವಾಗಿ ಪರಿಣಮಿಸಿತು ನೋಡಿದೆಯಾ ? ಆದರೇನು ? ಇರಲಿ ! ಇದೇನೂ ಸುಮ್ಮನೆ ಹೋಗುವುದೆಂದೆ

ಣಿಸಬೇಡ! ರಾಕ್ಷಸರಿಗೂ, ಕೊನೆಗೆ ಸಮಸ್ತಭೂತಗಳಿಗೂ ಮೂಲೋತ್ಪಾಟನ ವನ್ನುಂಟುಮಾಡುವುದಕ್ಕಾಗಿಯೇ ಹೀಗೆ ವಿಪರೀತ ವ್ಯಾಪಾರವು ನಡೆದಿರು ವುದಲ್ಲದೆ ಬೇರೆಯಲ್ಲ! ಇನ್ನುಮೇಲೆ ದಯಾದಾಕ್ಷಿಣ್ಯಾದಿ ಗುಣಗಳೊಂದೂ ಕೆಲಸಕ್ಕೆ ಬಾರವು. ಚಂದ್ರನ ತಂಪಾದ ಕಿರಣಗಳನ್ನು ಹುಟ್ಟಡಗಿಸಿದಮೇಲೆಯೇ ಸೂರ್ಯನು ಹೊರಕ್ಕೆ ಬರುವನಲ್ಲವೆ? ಅದರಿಂದಲೇ ಅವನು ಮಹಾತೇಜಸ್ವಿ ಯೆನಿಸಿಕೊಂಡಿರುವನು. ಅವನ ತಾಪಕ್ಕೆ ಪ್ರಾಣಿಗಳೆಲ್ಲವೂ ಹೆದರುವುವು. ಆದುದರಿಂದ ಈಗ ನಾನೂ ಇದುವರೆಗೆ ನನಗೆ ಸ್ವಾಭಾವಿಕಗಳಾಗಿದ್ದ ಸಾಧುತ್ವಾದಿ ಗುಣಗಳನ್ನು ನನ್ನಲ್ಲಿಯೇ ಅಡಗಿಸಿಕೊಂಡು ಇನ್ನು ಮೇಲೆ ನನ್ನ ತೇಜಸ್ಸನ್ನು ಹೊರಗೆ ಕಾಣಿಸುವೆನು. ಹಾಗಿಲ್ಲದಿದ್ದರೆ ನನ್ನ ವೀರ್ಯವೇ ಪ್ರಕಾಶಕ್ಕೆ ಬರಲಾರದು. ವತ್ಸ ಲಕ್ಷ್ಮಣಾ! ಇನ್ನುಮೇಲೆ ಯಕ್ಷರಾಗಲೀ ಗಂಧರ್ವ ರಾಗಲಿ, ಕಿನ್ನರರಾಗಲಿ, ಪಿಶಾಚರಾಗಲಿ, ರಾಕ್ಷಸರಾಗಲಿ, ಕೊನೆಗೆ, ಸಾಮಾನ್ಯ ಮನುಷ್ಯರೇ ಆಗಲಿ ಸುಖದಿಂದಿರಲಾರರು! ಇನ್ನು ಕ್ಷಣಕಾಲದೊಳಗಾಗಿ ಆಕಾಶವೆಲ್ಲವೂ ನನ್ನ ಶಸ್ತ್ರಾಸ್ತ್ರಗಳಿಂದ ಎಡೆಬಿಡದೆ ತುಂಬಿಹೋಗುವುದನ್ನು ನೋಡುತ್ತಿರು! ಈ ತ್ರೈಲೋಕ್ಯವನ್ನೂ ನನ್ನ ಬಾಣಗಳಿಂದ ತುಂಬಿ ಎಲ್ಲಿಯೂ ಸಂಚಾರಕ್ಕವಕಾಶವಿಲ್ಲದಂತೆ ಮಾಡಿಬಿಡುವೆನು ನೋಡು! ಇನ್ನುಮೇಲೆ ಗ್ರಹ ಗಳಿಗೆ ಅಂತರಿಕ್ಷದಲ್ಲಿ ಸಂಚಾರಶಕ್ತಿಯೆಲ್ಲಿಯದು? ಇನ್ನು ಚಂದ್ರಸೂರ್ಯರು ತಮ್ಮ ಕಾಂತಿಯನ್ನು ಹೊರಕ್ಕೆ ಬಿಡುವುದೆಂದರೇನು? ಅಗ್ನಿವಾಯುಗಳೆಂಬ ಭೂತಗಳೆರಡೂ ಇನ್ನುಮೇಲೆ ತಲೆಯೆತ್ತುವುದೆಂದರೇನು? ನಿಮಿಷಮಾತ್ರದಲ್ಲಿ ಪ್ರಪಂಚದ ಪರ್ವತಗಳೆಲ್ಲವನ್ನೂ ಉರುಳಿಸಿಬಿಡುವೆನು. ಸಮುದ್ರಗಳೆಲ್ಲವನ್ನೂ ಶೋಷಿಸಿಬಿಡುವೆನು! ಭೂಮಿಯಲ್ಲಿರುವ ಗಿಡಬಳ್ಳಿಗಳನ್ನೂ ಪೊದೆಗಳನ್ನೂ ನಿರ್ಮೂಲವಮಾಡಿಬಿಡುವೆನು! ಲಕ್ಷ್ಮಣಾ! ಇನ್ನು ಹೆಚ್ಚು ಹೇಳಿದುದ ರಿಂದೇನು! ಈ ತ್ರೈಲೋಕ್ಯವನ್ನೇ ನಿಮಿಷಮಾತ್ರದಲ್ಲಿ ಹಾಳುಗೆಡಹುವೆನು ನೋಡು! ವತ್ಸನೆ! ಇಷ್ಟಾದರೂ ದೇವತೆಗಳು ಸೀತೆಯನ್ನು ಕ್ಷೇಮದಿಂದ ತಂದು ನನಗೊಪ್ಪಿಸಲಿಲ್ಲವಷ್ಟೆ? ಇನ್ನು ಮುಹೂರ್ತದೊಳಗಾಗಿಯೇ ಅವರಿಗೆ ನನ್ನ ಪರಾಕ್ರಮವನ್ನು ತೋರಿಸುವೆನು ನೋಡು! ಲಕ್ಷ್ಮಣಾ ಇದೋ! ನನ್ನ ಕೈಯ್ಯಲ್ಲಿರುವ ಈ ಧನುಸ್ಸಿನ ನಾಣಿನಿಂದ ಹೊರಟ ಬಾಣಗಳು ಇನ್ನು ಕ್ಷಣಮಾತ್ರದಲ್ಲಿ ಆಕಾಶವೆಲ್ಲವನ್ನೂ ದಟ್ಟವಾಗಿ ಮುಚ್ಚಿಕೊಂಡು, ಯಾವ

ಭೂತಗಳಿಗೂ ಮೇಲೆ ಹಾರುವುದಕ್ಕೂ ಅವಕಾಶವಿಲ್ಲದಂತೆ ಮಾಡುವುದನ್ನು ನೋಡು! ವತ್ಸ ಲಕ್ಷ್ಮಣಾ! ಈಗಲೇ ನನ್ನ ಬಾಣಗಳಿಂದ ಮೃಗಪಕ್ಷಿಗಳೇ ಮೊದಲಾದ ಸಮಸ್ತಪ್ರಾಣಿಗಳೂ ಧ್ವಂಸಹೊಂದಿ ಲೋಕವೆಲ್ಲವನ್ನೂ ಉಲ್ಲೋಲ ಕಲ್ಲೋಲವಾಗುವುದನ್ನಾದರೂ ನೋಡು! ಆ ಸ್ಥಿತಿಗೋಸ್ಕರವಾಗಿ, ಆಕರ್ಣಾ ಕೃಷ್ಟವಾಗಿ ಬಿಡಲ್ಪಟ್ಟ ಈ ನನ್ನ ಬಾಣಗಳಿಂದ ಇನ್ನುಮೇಲೆ ಲೋಕದಲ್ಲಿ ಪಿಶಾಚರ ಅಥವಾ ರಾಕ್ಷಸರ ಹೆಸರೇ ಇಲ್ಲದಂತೆ ಮಾಡಿಬಿಡುವೆನು ನೋಡು; ನಾನು ಕೋಪಗೊಂಡು ಬಿಡುವ ಬಾಣಗಳ ವೇಗವನ್ನೂ ಅವುಗಳ ಶಕ್ತಿಯನ್ನೂ ಈಗ ದೇವತೆಗಳೆಲ್ಲರೂ ಚೆನ್ನಾಗಿ ನೋಡಲಿ! ದೇವತೆಗಳಾಗಲಿ, ದಾನವರಾಗಲಿ, ಪಿಶಾಚರಾಗಲಿ, ರಾಕ್ಷಸರಾಗಲಿ, ಇನ್ನು ಉಳಿಯುವುದೆಂದರೇನು? ಮೂರು ಲೋಕವೂ ಈಗಿನ ನನ್ನ ಕೋಪಾಗ್ನಿಯಿಂದ ದಗ್ಧವಾಗುವುದನ್ನು ನೋಡು ತ್ತಿರು! ದೇವದಾನವಯಕ್ಷರಾಕ್ಷಸಾದಿ ಲೋಕಗಳಾವುವುಂಟೋ ಅವೆಲ್ಲವನ್ನೂ ಈ ನನ್ನ ಬಾಣಗಳಿಂದ ಧೂಳೆಬ್ಬಿಸಿಬಿಡುವೆನು ನೋಡು! ಈಗ ಸೀತೆಯು ಹೃತಳಾಗಿರಲಿ! ಅಥವಾ ಮೃತಳಾಗಿಯೇ ಇರಲಿ! ಈಗಿರುವ ಸ್ಥಿತಿಯಲ್ಲಿಯೇ ಅವಳನ್ನು ದೇವತೆಗಳು ತಂದು ನನಗೊಪ್ಪಿಸದಿದ್ದ ಪಕ್ಷದಲ್ಲಿ, ಇದೋ! ಈ ಬಾಣಗಳಿಂದ ಈಗಲೇ ಈ ಪ್ರಪಂಚವನ್ನೇ ತಲೆಕೆಳಗಾಗಿಸಿ ಅದರ ನೆಲೆಯನ್ನು ತಪ್ಪಿಸಿಬಿಡುವೆನು ನೋಡು! ಹಾಗೆ ನನಗೆ ಪ್ರಾಣಪ್ರಿಯೆಯಾದ ಸೀತೆಯನ್ನು ಯಾರೂ ಈಗ ತಂದೊಪ್ಪಿಸದ ಪಕ್ಷದಲ್ಲಿ ಚರಾಚರಾತ್ಮಕವಾದ ಈ ತ್ರೈಲೋಕ್ಯ ವನ್ನೇ ನಿರ್ಮೂಲಮಾಡಿಬಿಡುವೆನು! ನೋಡು!" ಎಂದು ಹೇಳಿ ರಾಮನು ಕೋಪದಿಂದುರಿಯುವ ಕಣ್ಣುಳ್ಳವನಾಗಿ, ತನ್ನ ಬಿಲ್ಲನ್ನೆತ್ತಿ ಬಗ್ಗಿಸಿದನು. ವಿಷಸರ್ಪದಂತೆ ಘೋರವಾಗಿ ಜ್ವಲಿಸುತ್ತಿರುವ ಒಂದು ಬಾಣವನ್ನು ತೆಗೆದು ಅದನ್ನು ಧನುಸ್ಸಿನಲ್ಲಿ ಸಂಧಾನಮಾಡಿಬಿಟ್ಟನು. ಆಮೇಲೆ ಶತ್ರುಸಂಹಾರಕ ನಾದ ಆ ರಾಮನು ಕಾಲಾಗ್ನಿಯಂತೆ ಕೋಪಗೊಂಡವನಾಗಿ ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ಲೋಕದಲ್ಲಿ ಯಾವ ಭೂತಗಳಿಗಾದರೂ ಜರೆ, ಮೃತ್ಯು, ಕಾಲ, ವಿಧಿ, ಎಂಬವುಗಳನ್ನು ತಪ್ಪಿಸಿಕೊಳ್ಳುವುದು ಹೇಗೆ ಅಸಾಧ್ಯವೋ, ಅದರಂತೆಯೇ ಈಗ ನನಗೂ ಕೋಪವುಂಟಾದಮೇಲೆ ಅದನ್ನು ಯಾರೂ

ತಡೆಯಲಾರರು ಮುಖ್ಯವಾಗಿ ಮೊದಲಿನಂತೆಯೇ ಹಸನ್ಮುಖದಿಂದ ಶೋಭಿಸುವ [1]ಅನಿಂದಿತೆಯಾದ ಆ ಸೀತೆಯನ್ನು ನನಗೆ ತಂದೊಪ್ಪಿಸದ ಪಕ್ಷದಲ್ಲಿ ಇದೋ ಈ ಬಾಣದಿಂದಲೇ ದೇವಗಂಧರ್ವಮನುಷ್ಯಪನ್ನಗಾದಿಗಳಿಂದಲೂ, ಕುಲಪರ್ವತಗಳಿಂದಲೂ ತುಂಬಿದ ಈ ಸಮಸ್ತ ಪ್ರಪಂಚವನ್ನೂ ತಲೆಕೆಳಕಾಗಿ ಮಾಡಿಬಿಡುವೆನು" ಎಂದನು.

ಇಲ್ಲಿಗೆ ಅರುವತ್ತುನಾಲ್ಕನೆಯ ಸರ್ಗವು.

---

ಲಕ್ಷ್ಮಣನು ರಾಮನನ್ನು ಸಮಾಧಾನಪಡಿಸಿದುದು.

ಹೀಗೆ ಸೀತೆಯನ್ನಗಲಿದ ಸಂಕಟದಿಂದ ಕಂದಿ ಕುಂದಿ ಕೃಶನಾಗಿ ಕೊರಗುತ್ತ ಪ್ರಳಯಕಾಲದ ಬೆಂಕಿಯಂತೆ ತ್ರೈಲೋಕ್ಯವನ್ನೂ ನಾಶಮಾಡುವುದರಲ್ಲಿ ಉದ್ಯುಕ್ತನಾಗಿ, ನಾಣೇರಿಸಿದ ತನ್ನ ಧನುಸ್ಸನ್ನು ಆಗಾಗ ನೋಡುತ್ತ ಬಾರಿಬಾರಿಗೂ ನಿಟ್ಟುಸಿರುಬಿಟ್ಟು ಕಾಲಭೈರವನಂತೆ ಕೋಪಗೊಂಡಿರುವ ಆ ರಾಮನ ಸ್ವರೂಪವನ್ನೂ, ಎಂದೂ ಇಲ್ಲದ ಆತನ ಮಿತಿಮೀರಿದ ಕೋಪವನ್ನೂ ನೋಡಿ ಲಕ್ಷ್ಮಣನು, ದೈನ್ಯದಿಂದ ಕಂದಿದ ಮುಖವುಳ್ಳವನಾಗಿ, ಕೈಮುಗಿದು ಒಂದಾನೊಂದು ಮಾತನ್ನು ಹೇಳುವನು. "ಅಣ್ಣಾ ! ಚೆನ್ನಾಯಿತು ಇದೇನು? ನೀನು ಪೂರ್ವದಿಂದಲೂ ಎಷ್ಟೋ ಮೃದುಸ್ವಭಾವವುಳ್ಳವನು. ಇಂದ್ರಿಯಗಳನ್ನಡಗಿಸುವ ಶಕ್ತಿಯುಳ್ಳವನು. ಸಮಸ್ತ ಭೂತಗಳಿಗೂ ಹಿತವನ್ನೇ ಕೋರತಕ್ಕವನು ಹೀಗೆ ಖ್ಯಾತಿಹೊಂದಿದ ನೀನು ಕೋಪವಶನಾಗಿ ನಿನ್ನ ನಿಜಸ್ವಭಾವವನ್ನು ಬಿಡಬಹುದೆ? ಚಂದ್ರನಲ್ಲಿ ಕಳೆಯೂ, ಸೂರ್ಯನಲ್ಲಿ ಪ್ರಭೆಯೂ, ವಾಯುವಿನಲ್ಲಿ ಗತಿಯೂ, ಭೂಮಿಯಲ್ಲಿ ಕ್ಷಮೆಯೂ ಹೇಗೆ ಎಡೆಬಿಡದೆ

---

1 ಇಲ್ಲಿ "ಅನಿಂದಿತಾಂ" ಎಂದು ಮೂಲವು. ಸೀತಾಸಂಪಾದನ ನಿಮಿತ್ತವಾಗಿ ಎಷ್ಟೇ ಕ್ರೂರಕಾರ್ಯವನ್ನು ಮಾಡಿದರೂ ಅದರಿಂದ ತನಗೆ ಲೋಕಾಪವಾದವುಂಟಾಗದೆಂಬ ಭಾವವು. ಈ ವಿಷಯವನ್ನೇ ಸರ್ವಜ್ಞನಾದ ಆಂಜನೇಯನು ಸುಂದರಕಾಂಡದಲ್ಲಿ "ಯದಿ ರಾಮಸ್ಸಮುದ್ರಾಂತಾಂ ಮೇದಿನೀಂ ಪರಿವರ್ತಯೇತ್ । ಅಸ್ಯಾ ಹೇತೋರ್ವಿಶಾಲಾಕ್ಷ್ಯಾ ಯುಕ್ತಮಿತ್ಯೇವ ಮೇ ಮತಿಃ" ಎಂದು ಹೇಳಿರುವನು.

ಸ್ವಾಭಾವಿಕ ಧರ್ಮವಾಗಿರುವುದೋ ಹಾಗೆಯೇ ನಿನ್ನಲ್ಲಿಯೂ ಸರ್ವೋತ್ತಮ ವಾದ ನೀತಿಯೆಂಬುದು ಸ್ವಭಾವಧರ್ಮವಾಗಿರುವುದು. ಒಬ್ಬನ ತಪ್ಪಿಗಾಗಿ ಮೂರುಲೋಕಗಳನ್ನೂ ಕೆಡಿಸುವುದುಚಿತವೆ? ಇಲ್ಲಿ ಮುರಿದು ಬಿದ್ದಿರುವ ಯುದ್ಧರಥವು ಯಾರದೆಂದು ತಿಳಿಯಲಿಲ್ಲ. ಅಣ್ಣಾ! ಇಲ್ಲಿ ಆಯುಧಗಳೂ, ಯುದ್ಧಸಾಧನಗಳೂ ಮುರಿದುಬಿದ್ದಿರುವುದೇನೋ ನಿಜವು. ಕುದುರೆಯ ಗೊರಸಿನಿಂದ ಇಲ್ಲಿಯ ನೆಲವೂ ಭೇದಿಸಲ್ಪಟ್ಟಿರುವುದು. ಅಲ್ಲಲ್ಲಿ ರಕ್ತಬಿಂದು ಗಳೂ ಬಿದ್ದಿರುವುವು. ಇಲ್ಲಿ ಯಾವುದೋ ಘೋರಯುದ್ಧವು ನಡೆದಿರುವುದ ರಲ್ಲಿಯೂ ಸಂದೇಹವಿಲ್ಲ. ಆದರೇನು? ಇದು ಯಾರಿಂದ ಯಾವ ಕಾರಣಕ್ಕಾಗಿ ನಡೆಯಿತೆಂಬುದನ್ನು ನಿಶ್ಚಯಿಸುವುದಕ್ಕಿಲ್ಲ. ಆದರೆ ಏಕಾಕಿಯಾದ ಯಾವನೋ ಒಬ್ಬ ರಥಿಕನೇ ಯುದ್ಧಮಾಡಿದಂತಿದೆ. ಜಗಳವಾಡಿದವರಿಬ್ಬರೂ ರಥಿಕರಂತೆ ತೋರಲಿಲ್ಲ. ದೊಡ್ಡ ಸೈನ್ಯವು ಸಂಚಾರಮಾಡಿದ ಗುರುತೂ ಇಲ್ಲಿ ಕಾಣುವು ದಿಲ್ಲ. ಆದುದರಿಂದ ಒಬ್ಬನಿಗಾಗಿ ಈ ಲೋಕವೆಲ್ಲವನ್ನೂ ನಾಶಮಾಡುವುದೆಂದ ರೇನು! ರಾಜರು ಅಪರಾಧಕ್ಕೆ ತಕ್ಕ ಶಿಕ್ಷೆಯನ್ನಲ್ಲವೆ ನಡೆಸಬೇಕು. ಯಾವಾ ಗಲೂ ತಮ್ಮ ಮೃದುತ್ವವನ್ನಾಗಲಿ ಶಾಂತಸ್ವಭಾವವನ್ನಾಗಲಿ ಬಿಡಬಾರದು. ಸಮಸ್ತ ಭೂತಗಳಿಗೂ ನೀನೇ ರಕ್ಷಕನೆಂದು ಪ್ರಖ್ಯಾತಿಹೊಂದಿರುವೆ. ಎಲ್ಲರೂ ನಿನ್ನನ್ನೇ ದಿಕ್ಕಾಗಿ ಎಣಿಸಿರುವರು. ಒಂದುವೇಳೆ ದೇವತೆಗಳಲ್ಲಿ ಯಾರೋ ಹೀಗೆ ಮಾಡಿದವರೆಂದೆಣಿಸುವೆಯಾ! ಹಾಗೆಣಿಸಲೇಬಾರದು! ನಿನಗುಂಟಾಗಿರುವ ಈ ಪತ್ನೀ ವಿಯೋಗವನ್ನು ಯಾರುತಾನೇ ಒಳ್ಳೆಯದೆಂದೆಣಿಸುವರು? ಯಜ್ಞಮಾಡ ತಕ್ಕ ಯಜಮಾನನ ವಿಷಯದಲ್ಲಿ ಋತ್ವಿಕ್ಕುಗಳು ಹೇಗೋ ಹಾಗೆ, ನದಿಗಳಾ ಗಲಿ, ಸಮುದ್ರಗಳಾಗಲಿ, ಬೆಟ್ಟಗಳಾಗಲಿ, ದೇವ ಗಂಧರ್ವ ದಾನವರಲ್ಲಿ ಯಾರೇ ಆಗಲಿ, ನಿನ್ನ ವಿಷಯದಲ್ಲಿ ಅಪ್ರಿಯವನ್ನು ಮಾಡಲಾರರು. ಆದುದರಿಂದ, ಅಣ್ಣಾ! ಈಗ ಸೀತೆಯನ್ನು ಕದ್ದುಕೊಂಡು ಹೋದವನಾವನೆಂಬುದನ್ನು ಕಂಡು ಹಿಡಿಯುವುದೇ ನೀನು ಮಾಡಬೇಕಾದ ಮೊದಲನೆಯ ಕೆಲಸವು. ನಾನೂ ಧನುರ್ಧಾರಿಯಾಗಿ ನಿನ್ನೊಡನೆ ಸಹಾಯಕ್ಕೆ ಬರುವೆನು. ಇಲ್ಲಿನ ಮಹರ್ಷಿಗಳೂ ನಮಗೆ ಸಹಾಯಕರಾಗಿರುವರು. ನಾವು ಈಗಲೇ ಹೊರಟು ಸಮುದ್ರವನ್ನೂ, ಪರ್ವತಗಳನ್ನೂ, ಅಡವಿಗಳನ್ನೂ, ಅಲ್ಲಲ್ಲಿರುವ ಭಯಂಕರವಾದ ಗುಹೆ ಗಳನ್ನೂ, ನದಿಗಳನ್ನೂ, ತಾವರೆಕೊಳಗಳನ್ನೂ ಹುಡುಕಿಬರುವೆವು. ನಾವಿಬ್ಬರೂ

ಸೇರಿ ಕೊನೆಗೆ ದೇವಗಂಧರ್ವಲೋಕಗಳನ್ನಾದರೂ ಎಚ್ಚರಿಕೆಯಿಂದ ನೋಡಿ ಬಂದುಬಿಡುವೆವು. ಇಷ್ಟಾದರೂ ಸೀತೆಯನ್ನು ಕದ್ದವನು ನಮ್ಮ ಕಣ್ಣಿಗೆ ಬೀಳದಿದ್ದರೆ, ಅಥವಾ ಸಿಕ್ಕಿದರೆ ಒಳ್ಳೆಯ ಮಾತಿನಿಂದ ಅವಳನ್ನು ಬಿಡದಿದ್ದರೆ, ಆಗಲೂ ಕಾಲೋಚಿತವಾದ ರೀತಿಯಲ್ಲಿ, ನಿನಗೆ ತೋರಿದಂತೆ ನಡೆಸಬಹುದು. ಕೊನೆಗೆ ದೇವತೆಗಳಾದರೂ ಸೀತೆಯನ್ನು ಕದ್ದವನಾವನೆಂಬುದನ್ನು ನಮಗೆ ಸರಿಯಾಗಿ ತಿಳಿಸದಿದ್ದರೆ, ಆಗ ನಾವು ಚತುರ್ಥೋಪಾಯವನ್ನೇ ಹಿಡಿಯಬೇಕು. ಅಣ್ಣಾ ! ಮುಖ್ಯವಾಗಿ ಒಂದೇ ಮಾತಿನಲ್ಲಿ ಹೇಳುವೆನು ಕೇಳು. ಮೊದಲು ನೀನು ಮೃದುತ್ವದಿಂದಲೂ, ಒಳ್ಳೆಯ ಮಾತಿನಿಂದಲೂ, ವಿನಯದಿಂದಲೂ, ಕೈಲಾದಮಟ್ಟಿಗೆ ಪ್ರಯತ್ನಮಾಡಿ, ಆಗಲೂ ಸೀತೆಯು ನಮಗೆ ಸಿಕ್ಕುವುದು ಕಷ್ಟವಾದ ಪಕ್ಷದಲ್ಲಿಯೇ, ಚಿನ್ನದ ಹಿಡಿಗಳಿಂದ ಕೂಡಿ ವಜ್ರಸಮಾನವಾದ ನಿನ್ನ ಬಾಣಗಳಿಂದ ಕಾರ್ಯಸಾಧನೆಗೆ ಪ್ರಯತ್ನಿಸು ” ಎಂದನು.

ಇಲ್ಲಿಗೆ ಅರುವತ್ತೈದನೆಯ ಸರ್ಗವು.

---

ಲಕ್ಷ್ಮಣನು ರಾಮನಿಗೆ ಮುಂದೆ ಮಾಡಬೇಕಾದ ಕಾರ್ಯವನ್ನು ತಿಳಿಸಿದುದು.

ಹೀಗೆ ದುಃಖಿತನಾಗಿ ದಿಕ್ಕಿಲ್ಲದವನಂತೆ ಪ್ರಲಾಪಿಸುತ್ತ, ಮನಸ್ಸಿನಲ್ಲಿ ನೆಮ್ಮದಿಯಿಲ್ಲದೆ ಮೈಮರೆತಿರುವ ರಾಮನನ್ನು, ಲಕ್ಷ್ಮಣನು ಒಂದು ಮುಹೂರ್ತ ಕಾಲದ ವರೆಗೆ ಸಮಾಧಾನಮಾಡಿ, ಅವನ ಪಾದಗಳೆರಡನ್ನೂ ಹಿಡಿದು ಪ್ರಾರ್ಥಿಸುವನು. ಅಣ್ಣಾ ! ಪೂರ್ವದಲ್ಲಿ ಅನೇಕ ದೇವತೆಗಳು ಒಂದಾಗಿ ಸೇರಿ ಎಷ್ಟೋ ಪ್ರಯಾಸಪಟ್ಟು ಅತಿಭೋಗ್ಯವಾದ ಅಮೃತವನ್ನು ಸಂಪಾದಿಸಿದರು. ನಮ್ಮ ತಂದೆಯಾದ ದಶರಥರಾಜನಾದರೋ ತಾನೊಬ್ಬನೇ ವ್ರತೋಪವಾಸಾದಿಗಳಿಂದ ಎಷ್ಟೋ ದೇಹಪ್ರಯಾಸಪಟ್ಟು ಅಶ್ವಮೇಧಾದಿ ಯಾಗಗಳನ್ನು ನಡೆಸಿ ಲೋಕಭೋಗ್ಯನಾದ ನಿನ್ನನ್ನು ಪಡೆದನು. ಪುತ್ರ ರತ್ನವೆನಿಸಿಕೊಂಡ ನಿನ್ನ ಗುಣಗಳಲ್ಲಿಯೇ ಆತನು ಬದ್ಧನಾಗಿ ಕೊನೆಗೆ ನಿನ್ನ ವಿಯೋಗದಿಂದಲೇ ದೇವತ್ವವನ್ನೂ ಹೊಂದಿಬಿಟ್ಟನು ಈ ವಿಷಯವನ್ನು ಭರತನೇ ಬಂದು ನಮಗೆ ಸ್ಪಷ್ಟವಾಗಿ ತಿಳಿಸಿರುವನಲ್ಲವೆ ? ಎಲೈ ಕಕುತ್ಸ್ಥವಂಶ

ಶಿಖಾಮಣಿಯೇ! ಲೋಕೈಕಧೀರನಾದ ನೀನೇ ಈ ದುಃಖವನ್ನು ಸಹಿಸಲಾರದಿದ್ದರೆ, ಅಲ್ಪಬಲವುಳ್ಳ ಪ್ರಾಕೃತನಾದ ಬೇರೆ ಯಾವನು ತಾನೇ ದುಃಖವನ್ನು ಸಹಿಸಬಲ್ಲನು. ಎಲೈ ಪುರುಷಶ್ರೇಷ್ಠನೆ! ನೀನು ಈ ದುಃಖವನ್ನು ಮನಸ್ಸಿನಲ್ಲಿಟ್ಟುಕೊಂಡು ನಿನ್ನ ವೀರ್ಯದಿಂದ ಈ ಲೋಕವನ್ನು ದಹಿಸಬೇಕೆಂದಿರುವ ಪಕ್ಷದಲ್ಲಿ, ಅದರಿಂದ ಪೀಡಿತರಾದ ಜನರು ಇನ್ನೆಲ್ಲಿಹೋಗಿ ಯಾರಲ್ಲಿ ಮರೆಹೊಗುವರು? ಅವರಿಗೆ ಬೇರೆ ದಿಕ್ಕಾರು? ಹೀಗೆ ಸುಖದುಃಖಗಳನ್ನು ಆಗಾಗ ಅನುಭವಿಸಬೇಕಾದುದು ಲೋಕಸ್ವಭಾವವೇ ಹೊರತು ಬೇರೆಯಲ್ಲ. ಪೂರ್ವದಲ್ಲಿ [1]ನಹುಷಪುತ್ರನಾದ ಯಯಾತಿಯು ಇಂದ್ರಲೋಕವನ್ನು ಹೊಂದಿಯೂ ತನ್ನ ಅಕೃತ್ಯದಿಂದ ಆ ಲೋಕದಿಂದ ಜಾರಿ ದುಃಖಕ್ಕೀಡಾದನು. ಅದೂ ಹಾಗಿರಲಿ! ನಮ್ಮ ತಂದೆಗೆ ಪುರೋಹಿತನಾಗಿ ಮಹರ್ಷಿಯೆನಿಸಿಕೊಂಡ ವಸಿಷ್ಠನೂ ಕೂಡ ಮಹಾತೇಜಸ್ವಿಗಳಾದ ನೂರು ಮಕ್ಕಳನ್ನು ಪಡೆದಿದ್ದನಲ್ಲವೆ? ಅವರೆಲ್ಲರೂ ತಮ್ಮ ಅವಿನಯದಿಂದಲೇ ಏಕಕಾಲದಲ್ಲಿ ವಿಶ್ವಾಮಿತ್ರನ ಕೋಪಕ್ಕೆ ಪಾತ್ರರಾಗಿ ಹತರಾದರು. ಮತ್ತು ಎಲೈ ಸತ್ಯಸಂಧನೆ! ಲೋಕಮಾತೆಯೆನಿಸಿಕೊಂಡು ವಿಷ್ಣುದೇವನಿಗೆ ಪತ್ನಿಯಾಗಿ, ತ್ರೈಲೋಕ್ಯ ನಮಸ್ಕೃತೆಯಾದ ಈ ಭೂದೇವಿಗೂ ಕೂಡ ಆಗಾಗ ಚಲನವುಂಟಾಗುವುದು. ಲೋಕದಲ್ಲಿ ಧರ್ಮಪ್ರವರ್ತಕರೆನಿಸಿಕೊಂಡು ಸಮಸ್ತ ಜಗತ್ತಿಗೂ [2]ಆಧಾರಭೂತರಾಗಿ ಈ ಮೂರು ಲೋಕಕ್ಕೂ ಕಣ್ಣಿನಂತಿರುವ ಸೂರ್ಯಚಂದ್ರರೂ ಕೂಡ ಆಗಾಗ ಗ್ರಹಣವೆಂಬ ಬಾಧೆಯನ್ನು ಹೊಂದುತ್ತಿರುವರು. ಇನ್ನು ಹೆಚ್ಚಾಗಿ ಹೇಳಿದುದರಿಂದೇನು?

---

1. ಇಂದ್ರನು ಅಸೂಯೆಯಿಂದ ಯಯಾತಿಯನ್ನು ನೋಡಿ, "ನಿನ್ನ ರಾಜ್ಯದಲ್ಲಿ ಶ್ರೇಷ್ಠನಾರು!" ಎಂದು ಕೇಳಲು, ಯಥಾರ್ಥವಾದಿಯಾದ ಯಯಾತಿಯು "ನಾನೇ ಶ್ರೇಷ್ಠ"ನೆಂದು ಉತ್ತರಕೊಟ್ಟನು. ಆಗ ಇಂದ್ರನು ನೀನು ಆತ್ಮಶ್ಲಾಘಿಯಾದುದರಿಂದ ಸ್ವರ್ಗದಲ್ಲಿರಕೂಡದೆಂದು ಕೆಳಗೆ ತಳ್ಳಿದುದಾಗಿ ಪೂರ್ವಕಥೆಯುಂಟು.

2. ಇಲ್ಲಿ "ಯತ್ರ ಸರ್ವಂ ಪ್ರತಿಷ್ಠಿತಂ" ಎಂದು ಮೂಲವು. ಸಮಸ್ತಲೋಕಗಳ ಸ್ವರೂಪಸ್ಥಿತಿ ಪ್ರವೃತ್ತ್ಯಾದಿಗಳೆಲ್ಲಕ್ಕೂ ಈ ಸೂರ್ಯಚಂದ್ರರೇ ಆಧಾರಭೂತರೆಂದು ಭಾವವು. "ಆದಿತ್ಯಾಜ್ಜಾಯತೇ ವೃಷ್ಟಿಸ್ತತೋಽನ್ನಮಭಿಜಾಯತೇ" ಎಂಬಂತೆ ಸೂರ್ಯನೇ ಮಳೆಗೆ ಮುಖ್ಯ ಕಾರಣವು. ಓಷಧಿಗಳ ಬೆಳವಳಿಕೆಗೆ ಚಂದ್ರನು ಮುಖ್ಯ ಹೇತುವು. ಹೀಗೆ ಇವರಿಬ್ಬರೂ ಜಗತ್ತನ್ನು ರಕ್ಷಿಸುತ್ತಿರುವುದರಿಂದ ಸರ್ವಾಧಾರಭೂತರೆಂದು ತಿಳಿಯಬೇಕು.

*

ಎಲೈ ಪುರುಷಶ್ರೇಷ್ಠನೆ! ಎಷ್ಟೇ ದೊಡ್ಡ ಪ್ರಾಣಿಗಳಾಗಿದ್ದರೂ, ಎಷ್ಟೇ ಪ್ರಸಿದ್ಧಪುರುಷರಾಗಿದ್ದರೂ, ರಾಜಾಧಿರಾಜರಾಗಿದ್ದರೂ, ಸಮಸ್ತ ಭೂತಗಳಿಗೂ ಅಂತರ್ಯಾಮಿಯಾದ ದೈವದ ಸಂಕಲ್ಪವನ್ನು ತಪ್ಪಿಸಿಕೊಳ್ಳಲಾರರು. ಇಂದ್ರಾದಿ ದೇವತೆಗಳಿಗೂ ಕೂಡ ಅವರವರ ನಯಾನಯಗಳ ಮೂಲಕವಾಗಿ ಬಂದೊದಗುವ ಸುಖದುಃಖಗಳು ತಪ್ಪಿದುದಲ್ಲವೆಂದು ಕೇಳಿರುವೆವು. ಆದುದರಿಂದ ಎಲೈ ಪುರುಷಸಿಂಹನೆ! ಈಗ ನೀನು ದುಃಖಿಸಬಾರದು! ನೀನಾದರೋ ಪಾಪವಿದೂರನು! ಇದರಮೇಲೆ ಮಹಾವೀರನು! ಆದುದರಿಂದ ಈ ಸೀತೆಯು ನಷ್ಟಳಾಗಿದ್ದರೂ, ಅಥವಾ ಅವಳನ್ನು ಯಾರಾದರೂ ಅಪಹರಿಸಿಕೊಂಡೇ ಹೋಗಿದ್ದರೂ, ಅದಕ್ಕಾಗಿ ನೀನು ಇತರ ಪ್ರಾಕೃತ ಜನರಂತೆ ದುಃಖಿಸುವು ದುಚಿತವಲ್ಲ! ರಾಮಾ! ಎಷ್ಟೇ ಕಷ್ಟಗಳು ಬಂದರೂ ತತ್ವಜ್ಞಾನವುಳ್ಳ ನಿನ್ನಂತವರು ಹೀಗೆ ದೈನ್ಯದಿಂದ ದುಃಖಿಸಬಹುದೇ? ಅಣ್ಣಾ! ಸ್ಥಿರಬುದ್ಧಿ ಯಿಂದ ನೀನೆ ಚೆನ್ನಾಗಿ ತತ್ವವನ್ನು ಪರ್ಯಾಲೋಚಿಸಿ ನೋಡು! ಆಗ ಈ ಕಷ್ಟವೇಕೆ ಬಂದಿತೆಂಬುದನ್ನು ನೀನೇ ತಿಳಿಯುವೆ! ಕಾಲೋಚಿತವಾದ ಬುದ್ಧಿಯುಳ್ಳವನಿಗೆ ಸುಖದುಃಖಗಳ ಕಾರಣವು ತಾನಾಗಿಯೇ ತಿಳಿದುಬರು ವುದು! ಪೂರ್ವಕರ್ಮಗಳ ಗುಣಗಳನ್ನಾಗಲಿ, ದೋಷಗಳನ್ನಾಗಲಿ ಆಪಾತ ದಿಂದ ಪ್ರತ್ಯಕ್ಷವಾಗಿ ತಿಳಿಯುವುದು ಯಾರಿಗೂ ಸಾಧ್ಯವಲ್ಲ! ಪೂರ್ವದಲ್ಲಿ ತಾವು ನಡೆಸಿದ ಕಾರ್ಯಗಳ ರೀತಿಯನ್ನು ನಿಶ್ಚಯಿಸುವುದೂ ಶಕ್ಯವಲ್ಲ! ಕರ್ಮಾನುಷ್ಠಾನವಿಲ್ಲದೆ ಫಲವು ಕಾಣುವುದೂ ಇಲ್ಲ! ನಾವು ಪೂರ್ವದಲ್ಲಿ ಮಾಡಿದ ಕಷ್ಟಗಳಿಗೆ ತಕ್ಕಂತೆಯೇ ಈಗ ಅವುಗಳ ಫಲವನ್ನನುಭವಿಸಬೇಕಾಗಿರು ವುದು. ಇದಕ್ಕಾಗಿ ದುಃಖಿಸಿ ಫಲವೇನು? ಅಣ್ಣಾ! ನೀನೇ ನನಗೆ ಈ ತತ್ವ ಗಳೆಲ್ಲವನ್ನೂ ಅನೇಕವಿಧವಾಗಿ ಉಪದೇಶಿಸಿರುವೆಯಲ್ಲವೆ? ಈಗ ನೀನೇ ದುಃಖಿ ಸುವುದೆಂದರೇನು! ಸರ್ವಜ್ಞನಾದ ನಿನಗೆ ಬೇರೆ ಯಾರುತಾನೇ ಉಪದೇಶಿಸ ಬಲ್ಲರು? ಸಾಕ್ಷಾದ್ಬೃಹಸ್ಪತಿಯಾದರೂ ನಿನಗುಪದೇಶಿಸುವುದಕ್ಕೆ ಶಕ್ಯನಲ್ಲ! ಮಹಾಪ್ರಾಜ್ಞನಾದ ನಿನ್ನ ಬುದ್ಧಿಯು ದೇವತೆಗಳಿಗೂ ದುರ್ಲಭವು. ಹೀಗಿದ್ದರೂ ಈಗಿನ ದುಃಖಾವೇಶದಿಂದ ನಿನ್ನ ತತ್ವಜ್ಞಾನವು ಆಯಾಸಪಟ್ಟು ಮಲಗಿರು ವಂತಿದೆ! ಅದನ್ನೇ ಈಗ ನಾನು ಎಚ್ಚರಗೊಳಿಸುವೆನೇ ಹೊರತು ಬೇರೆಯಲ್ಲ! ಎಲೈ ಇಕ್ಷ್ವಾಕುವಂಶ ಶಿಖಾಮಣಿಯೆ! ಮನಸ್ಸಿನಲ್ಲಿ ಸಮಾಧಾನವನ್ನು

ಹೊಂದು ! ಸ್ವರ್ಗದಲ್ಲಿರುವ ಸಾತ್ವಿಕವಾದ ದೇವಗಂಧರ್ವಾದಿ ಪ್ರಾಣಿಸಮೂಹ ವನ್ನು ನೋಡು, ಮನುಷ್ಯಲೋಕದಲ್ಲಿ ಬ್ರಾಹ್ಮಣಾದಿ ಸಾಧುಸಮೂಹದಲ್ಲಿಯೂ ದೃಷ್ಟಿಯಿಡು. ನಿನ್ನ ಮಹಾವೀರ್ಯವೇನೆಂಬುದನ್ನು ನೋಡು. ಸಮಸ್ತ ಲೋಕವನ್ನೂ ಕ್ಷಣಮಾತ್ರದಲ್ಲಿ ಭಸ್ಮಮಾಡುವ ನಿನ್ನ ವೀರ್ಯಾತಿರೇಕಕ್ಕೆ ಈ ಲೋಕವು ಎಷ್ಟುಮಾತ್ರವೆಂಬುದನ್ನೂ ಪರ್ಯಾಲೋಚಿಸು. ಆಗ ನಿನಗೇ ಯುಕ್ತಾಯುಕ್ತವು ತೋರುವುದು. ಅಣ್ಣಾ ! ದುಡುಕಬೇಡ ! ನಿನ್ನ ಶತ್ರು ಗಳಾರೋ ಅವರನ್ನು ಮಾತ್ರ ಕೊಲ್ಲುವುದಕ್ಕೆ ಪ್ರಯತ್ನಿಸು ! ಈ ತ್ರೈಲೋಕ ವನ್ನೂ ಈಗಲೇ ಧ್ವಂಸಮಾಡಬೇಕೆಂದರೂ, ನಿನಗೆ ಅದೇನೂ ಅಸಾಧ್ಯವಲ್ಲ. ಆದರಿಂದ ನಿನಗೆ ಬಂದ ಪ್ರಯೋಜನವೇನು ? ಅಣ್ಣಾ ! ಬೇಡ ! ಈ ಕೋಪ ವನ್ನು ಬಿಡು. ನಿನಗೆ ವಿರೋಧವನ್ನುಂಟುಮಾಡಿದ ಪಾಪಿ ಯಾರೆಂಬುದನ್ನು ತಿಳಿದು, ಅವನನ್ನು ನಿರ್ಮೂಲವಾಗಿ ನಾಶಹೊಂದಿಸು ” ಎಂದನು.

ಇಲ್ಲಿಗೆ ಅರುವತ್ತಾರನೆಯ ಸರ್ಗವು.

---

ರಾಮನು ದಾರಿಯಲ್ಲಿ ಜಟಾಯುವನ್ನು ಕಂಡು ದುಃಖಿಸಿದುದು.

ರಾಮನು ಸಾರಗ್ರಾಹಿಯಾಗಿದ್ದುದರಿಂದ, ತಾನು ದೊಡ್ಡವನಾಗಿದ್ದರೂ, ತಮ್ಮನಾದ ಲಕ್ಷ್ಮಣನ ಸಾರವಾಕ್ಯವನ್ನು ಕೇಳಿ, ತನ್ನ ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡುಬಿಟ್ಟನು. ಆಗಲೇ ಮಹಾಬಾಹುವಾದ ಆ ರಾಮನು ಎತ್ತಿಹಿಡಿದ ಬಿಲ್ಲನ್ನು ಕೆಳಗೆಮಾಡಿ “ ಲಕ್ಷ್ಮಣಾ ! ನೀನು ಹೇಳಿದು ದೇನೋ ಯುಕ್ತವೇ ಸರಿ ! ಆದರೆ ನಾವು ಈಗ ಮಾಡಬೇಕಾದುದೇನು ! ನಾವು ಹೋಗಬೇಕಾದುದೆಲ್ಲಿಗೆ ? ಯಾವ ಉಪಾಯದಿಂದ ಆ ಸೀತೆಯನ್ನು ಕಂಡುಹಿಡಿಯಬಹುದೋ ಆಲೋಚಿಸು ” ಎಂದನು. ಹೀಗೆ ದೈನ್ಯದಿಂದ ಕೊರಗುತ್ತಿರುವ ರಾಮನನ್ನು ನೋಡಿ ಲಕ್ಷ್ಮಣನು ಅಣ್ಣಾ ! ಬೇರೆಲ್ಲಿಗೆ ಹೋಗುವುದು ? ಈ ಜನಸ್ಥಾನದಲ್ಲಿಯೇ ಹುಡುಕಿನೋಡು. ಇಲ್ಲಿಯೇ ಅನೇಕ ರಾಕ್ಷಸರು ತಿರುಗುತ್ತಿರುವರು. ಇಲ್ಲಿ ಗಿಡಬಳ್ಳಿಗಳೂ ದಟ್ಟವಾಗಿ ಬೆಳೆದಿರುವುವು. ಇಲ್ಲಿಯೇ ಅನೇಕ ಗಿರಿದುರ್ಗಗಳೂ, ಕಲ್ಲಿನ ಗವಿಗಳೂ, ಹಳ್ಳಗಳೂ, ಪೊದೆ

ಗಳೂ, ಭಯಂಕರವಾದ ಗುಹೆಗಳೂ, ಬಹಳವಾಗಿರುವುವು. ಇಲ್ಲಿ ನಾನಾ ವಿಧವಾದ ಮೃಗಜಾತಿಗಳೆಲ್ಲವೂ ತುಂಬಿರುವುವು. ಕಿನ್ನರರೂ, ಗಂಧರ್ವರೂ ವಾಸಮಾಡತಕ್ಕ ಮನೆಗಳು ಎಷ್ಟೋ ಇರುವುವು. ಅವೆಲ್ಲವನ್ನೂ ಹುಡುಕಿ ನೋಡಬೇಡವೆ! ನಾನೂ ಸಹಾಯಕ್ಕೆ ಬರುವೆನು. ಈ ಜನಸ್ಥಾನದ ಸುತ್ತಲೂ ಹುಡುಕಿನೋಡು. ಎಲೈ ಪುರುಷಶ್ರೇಷ್ಠನೆ! ಮಹಾತ್ಮರಾಗಿಯೂ, ಬುದ್ಧಿವಂತರಾಗಿಯೂ ಇರುವ ನಿನ್ನಂತವರು ಆಪತ್ಕಾಲದಲ್ಲಿ ಅಧೈರ್ಯಪಡು ವುದೆಂದರೇನು? ಎಷ್ಟೇ ಬಿರುಗಾಳಿಯು ಬಂದು ಹೊಡೆದರೂ, ಬೆಟ್ಟಗಳು ಅಲ್ಲಾಡದೆ ನಿಂತಿರುವಂತೆ, ನಿನ್ನಂತಹ ಧೀರರು ಎಂದಿಗೂ ಎದೆಗೆಡಬಾರದು!” ಎಂದನು. ಇದನ್ನು ಕೇಳಿ ರಾಮನು ಲಕ್ಷ್ಮಣನ ಮಾತನ್ನಂಗೀಕರಿಸಿ, ಆತನನ್ನು ಸಂಗಡಲೇ ಕರೆದುಕೊಂಡು ಹೊರಟನು. ಇಷ್ಟಾದರೂ ರಾಮನ ಮನಸ್ಸಿನಲ್ಲಿನ ಕೋಪವು ಶಾಂತವಾಗಲಿಲ್ಲ. ಬಾಣಸಂಧಾನಮಾಡಿದಂತೆಯೇ ಕೈಯಲ್ಲಿ ಬಿಲ್ಲನ್ನು ಹಿಡಿದು ಮುಂದೆ ಬರುತ್ತಿದ್ದನು. ಹೀಗೆ ರಾಮ ಲಕ್ಷ್ಮಣರಿಬ್ಬರೂ ನಡೆದುಬರುವಾಗ, ಮುಂದೆ ಪರ್ವತಶಿಖರದಂತೆ ಬಿದ್ದು ರಕ್ತಮಯವಾದ ದೇಹವುಳ್ಳ ಒಂದು ದೊಡ್ಡ ಪಕ್ಷಿಯನ್ನು ಕಂಡರು. ಮೊದಲೇ ರಾಮನ ಮನಸ್ಸಿನಲ್ಲಿದ್ದ ಕೋಪವು, ಹೀಗೆ ರಕ್ತದಿಂದ ತೊಯ್ದು ಮೈಯುಳ್ಳ ವನಾಗಿ ವೇದನೆಯಿಂದ ಬಿದ್ದಿರುವ ಆ ಪಕ್ಷಿಯನ್ನು ಕಂಡೊಡನೆ ಮಿತಿಮೀರಿ ಹೋಯಿತು. ಆಗ ರಾಮನು ಕೋಪದಿಂದ ಮೈತಿಳಿಯದೆ, ಆತುರದಿಂದ ಲಕ್ಷ್ಮಣನನ್ನು ಕರೆದು, “ಅಹಾ! ಲಕ್ಷ್ಮಣಾ! ಇದೋ ಸಿಕ್ಕಿದನು! ಇವನೇ ಜನಕಪುತ್ರಿಯಾದ ಸೀತೆಯನ್ನು ಭಕ್ಷಿಸಿಬಿಟ್ಟಿರುವನು! ಇದರಲ್ಲಿ ಸಂದೇಹವೇ ಇಲ್ಲ! ಯಾವನೋ ರಾಕ್ಷಸನೇ ಹೀಗೆ ಗೃಧ್ರರೂಪದಿಂದ ಬಂದು ಈ ವನದಲ್ಲಿರು ವನು. ಇದೋ! ವ್ಯಕ್ತವಾಗಿ ಕಾಣುವುದು ನೋಡು! ವಿಶಾಲಾಕ್ಷಿಯಾದ ಸೀತೆಯನ್ನು ಇವನೇ ತಿಂದುಬಿಟ್ಟು, ಏನೂ ತಿಳಿಯದವನಂತೆ ಸುಖವಾಗಿ ಮಲಗಿರುವನು! ಲಕ್ಷ್ಮಣಾ! ಅದೋ ನನ್ನ ಕೈಯಲ್ಲಿ ಜ್ವಲಿಸುತ್ತಿರುವ ತೀಕ್ಷ್ಣವಾದ ಅಲಗುಳ್ಳ ಈ ಬಾಣದಿಂದಲೇ ಇವನನ್ನು ಕೊಂದುಬಿಡುವೆನು ನೋಡು!” ಎಂದು ಹೇಳಿ, ಕತ್ತಿಯ ಆಕಾರದಿಂದಿರುವ ಒಂದು ತೀಕ್ಷ್ಣ ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ, ಗೃಧ್ರರಾಜನ ಮುಂದೆ ನುಗ್ಗಿ ದನು. ಆಗ ರಾಮನಿಗುಂಟಾದ ಕೋಪವನ್ನು ಅಷ್ಟಿಷ್ಟೆಂದು ಹೇಳಲಾಗದು!

ಸಮುದ್ರಾಂತವಾದ ಈ ಭೂಮಿಯೆಲ್ಲವನ್ನೂ ಆಗಲೇ ನಡುಗಿಸಿಬಿಡುವಂತೆ ತೋರುತ್ತಿದ್ದನು. ಹೀಗೆ ಕೋಪಗೊಂಡು ಇದಿರಾಗಿ ಬರುತ್ತಿರುವ ರಾಮನನ್ನು ಆ ಗೃಧ್ರರಾಜನು ನೋಡಿ ಗದ್ಗದಸ್ವರವುಳ್ಳವನಾಗಿ, ಬಾಯಿಂದ ರಕ್ತವನ್ನು ಕಕ್ಕುತ್ತ, ಸ್ಪಷ್ಟವಾಗಿ ಮಾತಾಡಲಾರದೆ "ಎಲೆ ಆಯುಷ್ಮಂತನೆ! ಈ ಮಹಾವನದಲ್ಲಿ ಔಷಧಿಯನ್ನು ಹುಡುಕುವಂತೆ ಯಾವಳನ್ನು ಎಚ್ಚರಿಕೆಯಿಂದ ಹುಡುಕುತ್ತಿರುವೆಯೋ, ಅವಳೊಡನೆ ನನ್ನ ಪ್ರಾಣಗಳನ್ನು ರಾವಣನು ಅಪಹರಿಸಿಕೊಂಡುಹೋದನು. ನೀನೂ ಲಕ್ಷ್ಮಣನೂ ಆಶ್ರಮವನ್ನು ಬಿಟ್ಟು ಹೋದಮೇಲೆ ಏಕಾಕಿನಿಯಾಗಿದ್ದ ಸೀತೆಯನ್ನು ಆ ರಾವಣನು ಕದ್ದುಕೊಂಡು ಹೋಗುವಾಗ ನನ್ನ ಕಣ್ಣಿಗೆ ಬಿದ್ದನು. ಆಗ ನಾನು ಅವನನ್ನಡ್ಡಗಟ್ಟಿ ತಡೆದೆನು. ನಮ್ಮಿಬ್ಬರಿಗೂ ಯುದ್ಧವಾಯಿತು. ಈ ಸ್ಥಳದಲ್ಲಿಯೇ ನಾನು ಅವನ ರಥವನ್ನು ಪುಡಿಪುಡಿಯಾಗಿ ಮಾಡಿ ನೆಲಕ್ಕುರುಳಿಸಿದೆನು. ಇದೇ ಅವನ ಧನುಸ್ಸು! ಇದೇ ಅವನ ಬಾಣವು! ಇದೇ ಅವನ ಯುದ್ಧರಥವು! ಇವೆಲ್ಲವನ್ನೂ ಯುದ್ಧದಲ್ಲಿ ನಾನೇ ಮುರಿದುಹಾಕಿದೆನು. ಇದೋ ನನ್ನ ರೆಕ್ಕೆಯ ಬಡಿತದಿಂದ ಸತ್ತು ಬಿದ್ದಿರುವ ಈತನೇ ಅವನ ಸಾರಥಿಯು. ಅವನ ಯುದ್ಧಕವಚವೂ ಹರಿದು ಬಿದ್ದಿರುವುದು ನೋಡು! ರಾಮಾ! ಎಷ್ಟಾದರೇನು! ಆ ಯುದ್ಧದಲ್ಲಿ ನಾನು ಬಹಳವಾಗಿ ಬಳಲಿರುವುದನ್ನು ನೋಡಿ, ಆ ಸಮಯದಲ್ಲಿ ರಾವಣನು ತನ್ನ ಕತ್ತಿಯಿಂದ ನನ್ನ ರೆಕ್ಕೆಗಳನ್ನು ಛೇದಿಸಿಬಿಟ್ಟನು. ಆಗಲೇ ನಾನು ಬಿದ್ದುಬಿಟ್ಟೆನು. ಆ ಸಮಯದಲ್ಲಿ ರಾವಣನು ಸೀತೆಯನ್ನೆತ್ತಿಕೊಂಡು ಅಂತರಿಕ್ಷಕ್ಕೆ ಹಾರಿ ಹೊರಟುಹೋದನು. ರಾಮಾ! ಮೊದಲೇ ಆ ರಾಕ್ಷಸನಿಂದ ಹತನಾಗಿ ಬಿದ್ದಿರುವ ನನ್ನನ್ನು ಪುನಃ ನೀನು ಬೇರೆ ಕೊಲ್ಲಬೇಕಾದುದೇನು?" ಎಂದನು. ಇದನ್ನು ಕೇಳಿ ರಾಮನಿಗೆ ಬಹಳ ಪರಿತಾಪವುಂಟಾಯಿತು. ಸಂಕಟದಿಂದ ಕಣ್ಣೀರುಬಿಡುತ್ತ ನಿಂತನು. ಅವನ ಸಂತಾಪವು ಇಮ್ಮಡಿಯಾಯಿತು. ಆಮೇಲೆ ಮುಂದೆಬಂದು ಆ ಗೃಧ್ರರಾಜನನ್ನು ಕೈಯ್ಯಿಂದ ಸವರುತ್ತ, ದುಃಖದಿಂದ ನಿಂತನು. ಅವನ ಸಂಕಟವು ಇನ್ನೂ ಮೇಲೆಮೇಲೆ ಹೆಚ್ಚುತ್ತಾ ಹೋಯಿತು. ಅವನಿಗೆ ಮೈಮೇಲೆ ಪ್ರಜ್ಞೆಯೂ ತಪ್ಪಿತು. ಅವನು ಕೈಯಲ್ಲಿ ಹಿಡಿದಿದ್ದ ಬಿಲ್ಲು ಜಾರಿಬಿದ್ದಿತು. ಹಾಗೆಯೇ ಮೂರ್ಛೆಯಿಂದ ನೆಲದಮೇಲೆ ಬಿದ್ದನು. ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡು ರೋದಿಸುತ್ತಿದ್ದನು.

ಅತ್ತಲಾಗಿ ಲಕ್ಷ್ಮಣನೂ ಅಳುವುದಕ್ಕಾರಂಭಿಸಿದನು. ಮೊದಲೇ ದುಃಖದಿಂದ ಕುದಿಯುತ್ತಿದ್ದ ರಾಮನಿಗೆ, ಸೀತೆಯ ಅವಸ್ಥೆಯನ್ನು ಕೇಳಿ ಮತ್ತಷ್ಟು ದುಃಖ ವುಂಟಾಯಿತು. ಅದರ ಮೇಲೆ ಜಟಾಯುವಿನ ದುಃಸ್ಥಿತಿಯನ್ನು ನೋಡಿ ಆ ದುಃಖವು ಇನ್ನೂ ಮಿತಿಮೀರಿಹೋಯಿತು. ಯಾರಿಗೂ ದುರ್ಗಮವಾದ ಇಕ್ಕಟ್ಟಾದ ದಾರಿಯಲ್ಲಿ ಬಿದ್ದು, ಕೇಳುವವರೂ ದಿಕ್ಕಿಲ್ಲದೆ, ಏಕಾಕಿಯಾಗಿ ಪ್ರಾಣಸಂಕಟದಿಂದ ನರಳುತ್ತಿರುವ ಜಟಾಯುವನ್ನು ನೋಡಿ ರಾಮನು ಬಹಳ ಪರಿತಾಪದಿಂದ ಲಕ್ಷ್ಮಣನನ್ನು ಕುರಿತು. [1] "ಲಕ್ಷ್ಮಣಾ! ನಾನೇನು ಹೇಳಲಿ! ನನ್ನ ದೌರ್ಭಾಗ್ಯವನ್ನು ಇಷ್ಟಿಷ್ಟೆಂದು ಹೇಳುವುದಕ್ಕಿಲ್ಲ! ರಾಜ್ಯವೂ ಹೋಯಿತು. ಕಾಡಿನಲ್ಲಿಯೂ ಅಲೆಯಬೇಕಾಯಿತು. ಸೀತೆಯನ್ನೂ ಕಳೆದು ಕೊಂಡೆನು. ಅವಳನ್ನು ಕಾಪಾಡುವುದಕ್ಕಾಗಿ ಬಂದ ಈ ಪಕ್ಷಿರಾಜನೂ ಹತನಾದನಲ್ಲಾ! ಈ ನನ್ನ ದೌರ್ಭಾಗ್ಯವು ಬೆಂಕಿಯನ್ನಾದರೂ ಸುಟ್ಟು

---

1. ಇಲ್ಲಿ "ರಾಜ್ಯಾದ್ಭ್ರಂಶೋ ವನೇ ವಾಸಸ್ಸೀತಾ ನಷ್ಟಾ ದ್ವಿಜೋ ಹತಃ। ಈದೃಶೀಯಂ ಮಮಾಲಕ್ಷ್ಮೀರ್ನಿರ್ದಹೇದಪಿ ಪಾವಕಂ ॥" ಎಂದು ಮೂಲವು. ಹಿಂದೆ ಅಲ್ಲಲ್ಲಿ ರಾಮನ ಗುಣಗಳನ್ನು ಹೇಳುವಾಗ, "ನ ಚಾಸ್ಯ ಮಹತೀಂ ಲಕ್ಷ್ಮೀಂ ರಾಜ್ಯ ನಾಶೋಽಪಕರ್ಷತಿ" ರಾಜ್ಯನಾಶವು ಇವನ ಶೋಭಾತಿಶಯವನ್ನು ಎಷ್ಟುಮಾತ್ರ ತಗ್ಗಿಸ ಲಾರದೆಂದೂ, "ವನವಾಸೋ ಮಹೋದಯಃ" ವನವಾಸವೂ ಈತನಿಗೆ ಮಹಾಭ್ಯುದಯ ಹೇತುವೆಂದೂ ಹೇಳಿರುವುದರಿಂದ, ರಾಜ್ಯಭ್ರಂಶ ವನವಾಸಗಳೆರಡೂ ರಾಮನಿಗೆ ವಿಶೇಷಾಭಿ ಮಾನಗಳೆಂದೇ ಸೂಚಿತವಾಗಿರುವುದಲ್ಲವೆ? ಈಗ ಅದನ್ನು ಕುರಿತು ರಾಮನು ದುಃಖಿಸು ವುದುಚಿತವೆ! ಎಂದರೆ, ಈಗ ಸಂಭವಿಸಿರುವ ಸೀತಾವಿಯೋಗಕ್ಕೂ ಜಟಾಯು ಮರಣಕ್ಕೂ ಅವುಗಳೇ ಮೂಲವಾದುದರಿಂದ, ಈಗ ಅವುಗಳಲ್ಲಿ ಅನಿಷ್ಟಜ್ಞಾನವು ಹುಟ್ಟಿ ಈ ವಾಕ್ಯ ಗಳನ್ನು ಹೇಳಿ ಪರಿತಪಿಸುವನೆಂದು ಗ್ರಾಹ್ಯವು. ಕೈಗೆ ಬಂದ ರಾಜ್ಯವು ತಪ್ಪಿಹೋದರೂ ಅಲ್ಲಲ್ಲಿ ಭಿಕ್ಷಾಟನದಿಂದಲಾದರೂ ಜೀವಿಸಬಹುದಾಗಿತ್ತು. ಅದೂ ತಪ್ಪಿ (ವನವಾಸಃ) ಕಾಡಿನಲ್ಲಿ ಜೀವಿಸಬೇಕಾಯಿತು. ತನ್ನ ಇಷ್ಟಜನದೊಡನೆ ಕಾಡಿನಲ್ಲಿ ಯಾಕಾದರೂ ಕಾಲ ವನ್ನು ಕಳೆಯಬಹುದೆಂದರೆ, ದೈವವು ಅದನ್ನೂ ಸಹಿಸಲಾರದೆ ಹೋದುದರಿಂದ (ಸೀತಾ ನಷ್ಟಾ) ಪ್ರಿಯಪತ್ನಿಯಾದ ಸೀತೆಯೂ ತಪ್ಪಿಸಿಕೊಂಡು ಹೋದಳು. ಸೀತಾವಿಯೋಗ ವುಂಟಾದರೂ ಆಗಾಗ ಆ ದುಃಖೋಪಶಮನಾರ್ಥವಾಗಿ ಬಂಧುಜನರಾದರೂ ಸಮೀಪ ದಲ್ಲಿದ್ದರೆ ಸ್ವಲ್ಪವಾದರೂ ಆಪ್ಯಾಯನವಿರುತಿತ್ತು. ಅದನ್ನೂ ತಪ್ಪಿಸುವುದಕ್ಕಾಗಿ (ದ್ವಿಜೋ ಹತಃ) ಆಪದ್ಬಂಧುವಾದ ಜಟಾಯುವೂ ಮೃತನಾದನೆಂದು ಕೊರಗಿದುದಾಗಿ ಭಾವವು.

ಬಿಡುವುದಲ್ಲವೆ? ಈಗ ನಾನು ಒಂದುವೇಳೆ ಈ ತಾಪವನ್ನಾರಿಸುವುದಕ್ಕಾಗಿ ಜಲಪೂರ್ಣವಾದ ಸಮುದ್ರದಲ್ಲಿ ಮುಳುಗಬೇಕೆಂದು ಹೋದರೂ, ಆ ಸಮುದ್ರವೂ ನನ್ನ ಮೈ ಬೇಗೆಗೆ ಆಗಲೇ ಒಣಗಿಹೋಗುವುದೆಂದೆಣಿಸುವೆನು. ಅಯ್ಯೋ! ನಾನು ಹಣವೆಂದು ಮುಟ್ಟಿದುದು ಹಾವಾಗಿ ಕಚ್ಚುವಂತಿರುವುದಲ್ಲಾ! ಚರಾಚರಾತ್ಮಕನಾದ ಈ ಸಮಸ್ತ ಪ್ರಪಂಚದಲ್ಲಿ ಹುಡುಕಿದರೂ ನನ್ನಂತ ಭಾಗ್ಯಹೀನನಾದವನೊಬ್ಬನೂ ಸಿಕ್ಕುವುದಿಲ್ಲ. ಮಹಾನರ್ಥಪರಂಪರೆಗಳೆಂಬ ಈ ದೊಡ್ಡ ಬಲೆಯಲ್ಲಿ ಸಿಕ್ಕಿ ಬಿದ್ದಿರುವೆನಲ್ಲಾ! ತಂದೆಗೆ ಪ್ರಿಯಸಖನಾದ ಈ ಗೃಧ್ರರಾಜನು ಈ ವಾರ್ಧಕ ದಸೆಯಲ್ಲಿ ಆ ರಾಕ್ಷಸನ ಕೈಗೆ ಸಿಕ್ಕಿ ಸಾಯಬೇಕಾಯಿತೆ! ಹಾ! ನನ್ನ ದೌರ್ಭಾಗ್ಯವನ್ನು ಏನೆಂದು ಹೇಳಲಿ!" ಎಂದನು. ಹೀಗೆ ರಾಮನು ಅನೇಕ ವಿಧದಲ್ಲಿ ಪ್ರಲಾಪಿಸುತಿದ್ದು, ಆಮೇಲೆ ಲಕ್ಷ್ಮಣನೊಡನೆ ಆ ಜಟಾಯುವಿನಲ್ಲಿ ಪಿತೃಸ್ನೇಹವನ್ನು ತೋರಿಸುತ್ತಾ ಅವನ ದೇಹವೆಲ್ಲವನ್ನೂ ಸವರಿದನು. ಹೀಗೆ ರಾಮನು ಆ ಅಡವಿಯಲ್ಲಿ ರೆಕ್ಕೆಮುರಿದು ರಕ್ತಮಯನಾಗಿ ಬಿದ್ದಿರುವ ಜಟಾಯುವನ್ನು ಆಗಾಗ ಪ್ರೀತಿಯಿಂದಾಲಿಂಗಿಸಿ, ಕೊನೆಗೆ ಮೇಲೆಮೇಲೆ ದುಃಖವು ಹೆಚ್ಚುತ್ತಿರಲು "ಹಾ! ನನ್ನ ಪ್ರಾಣಪ್ರಿಯೆಯಾದ ಸೀತೆಯೆಲ್ಲಿರುವಳೋ" ಎಂದು ಗಟ್ಟಿಯಾಗಿ ಕೂಗಿ, ಅಲ್ಲಿಯೇ ಮೂರ್ಛಿತನಾಗಿ ಬಿದ್ದನು.

ಇಲ್ಲಿಗೆ ಅರುವತ್ತೇಳನೆಯ ಸರ್ಗವು.

---

ರಾಮನು ಜಟಾಯುವಿಗೆ ಅಗ್ನಿಸಂಸ್ಕಾರಾದಿಗಳನ್ನು ಮಾಡಿದುದು.

ರಾಮನು ಹಾಗೆ ರಾಕ್ಷಸನಿಂದ ಹತನಾಗಿ ಬಿದ್ದಿರುವ ಜಟಾಯುವನ್ನು ನೋಡಿ ಪರಿತಾಪದಿಂದ ಲಕ್ಷ್ಮಣನನ್ನು ಕುರಿತು, ವತ್ಸನೆ! ಈ ಪಕ್ಷಿರಾಜನು ನನಗೆ ಹಿತವನ್ನು ಬಯಸಿ ಬಂದು, ಯುದ್ಧದಲ್ಲಿ ರಾಕ್ಷಸನಿಂದ ಹತನಾಗಿ ಪ್ರಾಣಾಂತವಾದ ವಿಪತ್ತನ್ನು ಹೊಂದಿಬಿಟ್ಟಿರುವನು ಕಂಠಗತ ಪ್ರಾಣನಾಗಿ ನರಳುತ್ತಿರುವನು. ಲಕ್ಷ್ಮಣಾ! ಇವನ ದೇಹದಲ್ಲಿ ಇನ್ನೂ ಸೂಕ್ಷ್ಮವಾಗಿ ಪ್ರಾಣಗಳಿರುವಂತಿದೆ! ಆದುದರಿಂದಲೇ ಇವನು ಹೀನಸ್ವರದಿಂದ ಕೂಗುತ್ತಿರು

ವನು. ಆದರೆ ಬಹಳವಾಗಿ ಸಂಕಟಪಡುತ್ತಿರುವನು. “ಎಲೆ ಜಟಾಯೂ! ನಿನಗೆ ಇನ್ನೂ ಮಾತಾಡುವುದಕ್ಕೆ ಶಕ್ತಿಯಿದ್ದರೆ, ಸೀತೆಯ ಸಂಗತಿಯನ್ನು ಇನ್ನೂ ಸ್ವಲ್ಪ ವಿವರವಾಗಿ ತಿಳಿಸು. ರಾಕ್ಷಸನು ನಿನ್ನನ್ನು ಕೊಂದ ರೀತಿಯನ್ನೂ ಹೇಳು. ನಿನಗೆ ಕ್ಷೇಮವಾಗಲಿ! ರಾವಣನು ಯಾವ ಉದ್ದೇಶದಿಂದ ಆ ಸೀತೆಯನ್ನೆತ್ತಿಕೊಂಡುಹೋದನು? ನನ್ನಲ್ಲಿ ಯಾವ ಅಪರಾಧವನ್ನು ನೋಡಿ ಆ ರಾವಣನು ನನ್ನ ಪ್ರಿಯಪತ್ನಿಯನ್ನು ಕದ್ದುಕೊಂಡುಹೋಗಿರುವನು? ಎಲೈ ಪಕ್ಷಿರಾಜನೆ! ಚಂದ್ರಬಿಂಬದಂತೆ ಅತಿ ಮನೋಹರವಾದ ಆ ಸೀತೆಯ ಮುಖವು ಆಗ ಹೇಗಿದ್ದಿತು? ಆಗ ಸೀತೆಯೇನು ಹೇಳಿದಳು? ಅಯ್ಯಾ! ಆ ರಾಕ್ಷಸನ ವೀರ್ಯವೆಂತದು? ಅವನ ರೂಪವು ಹೇಗಿರುವುದು? ಅವನ ಕೆಲಸವೇನು? ಅವನ ಮನೆಯೆಲ್ಲಿ? ಇವೆಲ್ಲವನ್ನೂ ನನಗೆ ತಿಳಿಸಬಲ್ಲೆಯಾ?” ಎಂದನು. ಹೀಗೆ ದುಃಖದಿಂದ ಕೇಳಿ ಪ್ರಲಾಪಿಸುತ್ತಿರುವ ರಾಮನನ್ನು ನೋಡಿ ಜಟಾಯುವು ಪುನಃ ದೀನಸ್ವರದಿಂದ “ವತ್ಸ ರಾಮನೆ! ಆ ರಾವಣನು ತನ್ನ ಮಾಯೆಯಿಂದ ಒಂದು ಕ್ಷಣಮಾತ್ರದಲ್ಲಿ ಬಿರುಗಾಳಿಯನ್ನೂ, ಮೋಡಗಳನ್ನೂ ಹುಟ್ಟಿಸಿ, ಕತ್ತಲೆ ಕವಿಯುವಂತೆ ಮಾಡಿ ಅಂತರಿಕ್ಷಮಾರ್ಗವಾಗಿಯೇ ಸೀತೆಯನ್ನಪಹರಿಸಿಕೊಂಡು ಹೋದನು. ಎಲೆ ವತ್ಸನೆ! ನಾನು ಬಳಲಿರುವಾಗ ಆ ರಾಕ್ಷಸನು ನನ್ನ ರೆಕ್ಕೆಗಳನ್ನು ಭೇದಿಸಿ ಸೀತೆಯನ್ನೆತ್ತಿಕೊಂಡು, ಇದೋ! ಈ ನೈಋತ್ಯ ದಿಕ್ಕಿಗೆ ಹೊರಟುಹೋದನು. ರಾಮಾ! ನನ್ನ ಪ್ರಾಣಗಳು ಮರಣಸಂಕಟದಿಂದ ತತ್ತಳಿಸುತ್ತಿರುವುವು. ಕಣ್ಣಾಲಿಗಳು ಸುತ್ತುತ್ತಿರುವುವು. ಲಾಮಂಚದಿಂದ ಅಲಂಕರಿಸಲ್ಪಟ್ಟ ಕೊನೆಗಳುಳ್ಳ ಚಿನ್ನದ ಮರಗಳು ಆಗಲೇ ನನ್ನ ಕಣ್ಣಿಗೆ ಕಾಣಿಸುತ್ತಿರುವುವು. ನಾನು ಇನ್ನು ಹೆಚ್ಚಾಗಿ ಮಾತಾಡಲಾರೆನು. ಮುಖ್ಯವಾಗಿ ಒಂದು ವಿಷಯವನ್ನು ಹೇಳುವೆನು ಕೇಳು. ರಾವಣನು ಯಾವ ಮುಹೂರ್ತದಲ್ಲಿ ಸೀತೆಯನ್ನೆತ್ತಿಕೊಂಡು ಹೋದನೋ, ಅದು ನಿನಗೆ ಅಷ್ಟಾಗಿ ಕೆಟ್ಟುದಾಗಿಲ್ಲ. ಆ ಮುಹೂರ್ತದಲ್ಲಿ ನಷ್ಟವಾದ ವಸ್ತುವು ಶೀಘ್ರದಲ್ಲಿಯೇ ಅದರ ಯಜಮಾನನಿಗೆ ಕೈಸೇರುವುದರಲ್ಲಿ ಸಂದೇಹವಿಲ್ಲ ಇದಕ್ಕೆ ವಿಂದಮುಹೂರ್ತವೆಂದು ಹೆಸರು. ಅಜ್ಞನಾದ ರಾವಣನು ಆ ತತ್ವವನ್ನು ತಿಳಿಯದೆ ಹೋದನು. ಆದುದರಿಂದ ಈಗ ನೀನು ಕಳೆದುಕೊಂಡಿರುವ ಸೀತೆಯನ್ನು ಶೀಘ್ರದಲ್ಲಿಯೇ

ಹೊಂದುವೆ. ಗಾಳವನ್ನು ನುಂಗಿದ ಮಿಾನಿನಂತೆ ರಾವಣನು ಈಗ ನಿನ್ನ ಪ್ರಿಯಪತ್ನಿಯಾದ ಸೀತೆಯನ್ನು ಕದ್ದುದಕ್ಕಾಗಿ ಶೀಘ್ರದಲ್ಲಿಯೇ ನಾಶ ಹೊಂದುವನು ಜನಕಪುತ್ರಿಯಾದ ಆ ಸೀತೆಗಾಗಿ ನೀನು ಇನ್ನುಮೇಲೆ ದುಃಖಿಸಬೇಕಾದುದೇ ಇಲ್ಲ. ನೀನು ಶೀಘ್ರದಲ್ಲಿಯೇ ಆ ರಾಕ್ಷಸನನ್ನು ಕೊಂದು ಆ ಸೀತೆಯನ್ನು ತಂದು ಅವಳೊಡನೆ ಕ್ಷೇಮದಿಂದಿರುವೆ" ಎಂದನು. [1]ಇದುವರೆಗೆ ಜಟಾಯುವು ಪ್ರಜ್ಞೆಯಿಂದಲೇ ಇದ್ದು, ರಾಮನೊಡನೆ ಇಷ್ಟು ಮಾತುಗಳನ್ನಾಡಿಬಿಟ್ಟನು. ಈ ಕೊನೆಯಮಾತು ಮುಗಿದ ಕ್ಷಣವೇ ಅವನಿಗೆ ಮರಣಕಾಲವು ಸನ್ನಿಹಿತವಾಗಿ ಕಂಡಕಂಡಗಳೊಡನೆ ಬಾಯಿಯಿಂದ ರಕ್ತವು ಬೀಳಲಾರಂಭಿಸಿತು. ಆದರೂ ಅವನು ಮುಂದಿನ ಮಾತುಗಳನ್ನಾರಂಭಿಸಿ [2]"ಅಯ್ಯಾ! ರಾಮಾ! ವಿಶ್ರವಸ್ಸಿಗೆ ಸಾಕ್ಷಾತ್ಪುತ್ರನು! ಕುಬೇರನ ತಮ್ಮನು" ಎಂದು ಈ ಮಾತನ್ನು ಮುಗಿಸುವಷ್ಟರಲ್ಲಿಯೇ ಆ ಜಟಾಯುವು ಪ್ರಾಣವನ್ನೂ ಬಿಟ್ಟನು. ಅವನು ಈ ಮಾತನ್ನು ತೊಡಗಿದಾಗ, ಆಸೆಯಿಂದ ಕಿವಿಗೊಟ್ಟು ಕೈಮುಗಿದು ಮುಂದೆ ನಿಂತು ಕೇಳುತಿದ್ದ ರಾಮನಾದರೋ ಜಟಾಯುವಿನ ಅವಸ್ಥೆಯನ್ನು ನೋಡಿ ಗಾಬರಬಿದ್ದು "ಅಯ್ಯಾ! ಹೇಳು! ಹೇಳು!" ಎಂದು ಸಂಭ್ರಮದಿಂದ ಕೂಗುತಿದ್ದನು ಎಷ್ಟು ಕೂಗಿದರೇನು? ಆ ಅರ್ಧೋಕ್ತಿಯಲ್ಲಿಯೇ ಜಟಾಯುವಿನ ಪ್ರಾಣಗಳು ದೇಹವನ್ನು ಬಿಟ್ಟು

---

1. ಜಟಾಯುವು ಮೊದಲೇ ಪ್ರಾಣವನ್ನು ಬಿಡಬೇಕಾಗಿದ್ದರೂ, ಸೀತೆಯ ಅನುಗ್ರಹ ದಿಂದ ರಾಮದರ್ಶನದವರೆಗೆ ಅವನ ಪ್ರಾಣವುಳಿದಿದ್ದುದೆಂದು ಗ್ರಾಹ್ಯವು. ಇದೇ ವಿಷಯ ಸ್ಕಾಂದದಲ್ಲಿ "ದೇವೀ ಮಾಂ ಪ್ರಾಹ ರಾಜೇಂದ್ರ ಯಾವತ್ಸಂಭಾಷಣಂ ಮಯಾ! ಭವತಸ್ತಾವದಸ್ಮನ್ಮೇ ಪ್ರಾಣಾ ಇತ್ಯಾಹ ಜಾನಕೀ" ಎಂಬ ಜಟಾಯುವಾಕ್ಯದಿಂದ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದು.

2. ಇಲ್ಲಿ "ಪುತ್ರೋ ವಿಶ್ರವಸಸ್ಸಾಕ್ಷಾದ್ಭ್ರಾತಾ ವೈಶ್ರವಣಸ್ಯ ಚ" ಎಂದು ಮೂಲವು. ಜಟಾಯುವು ಆ ರಾವಣನ ವೀರ್ಯಾದಿಗಳನ್ನು ಹೇಳಿ ಈ ಮಾತನ್ನು ಮುಗಿಸುವಷ್ಟರೊಳಗಾಗಿಯೇ ಮೃತನಾದನು. ಅದಕ್ಕಾಗಿಯೇ ವಾಲ್ಮೀಕಿಯು ಮುಂದೆ ಕಿಷ್ಕಿಂಧಾಕಾಂಡದಲ್ಲಿ ಸಂಪಾತಿಯು ವಾನರರನ್ನು ಕುರಿತು ಹೇಳುವಾಗ, ಈ ಮೇಲಿನ ವಾಕ್ಯವನ್ನೇ ಪೂರ್ವಾರ್ಧವನ್ನಾಗಿಟ್ಟು "ಅಧ್ಯಾಸ್ತೇ ನಗರೀಂ ಲಂಕಾಂ ರಾವಣೋ ರಾಕ್ಷಸೇಶ್ವರಃ" ಎಂಬುದಾಗಿ ಉತ್ತರಾರ್ಧವನ್ನು ಮುಗಿಸಿರುವರೆಂದು ಲೋಕಾಚಾರ್ಯರು ವ್ಯಾಖ್ಯಾನಮಾಡಿರುವರು.

ಹಾರಿಹೋದುವು. ಆ ಪಕ್ಷಿಯ ತಲೆಯು ಕೆಳಗೆ ಬಿದ್ದಿತು. ಕಾಲುಗಳೆರಡೂ ಅಗಲಿಸಿಹೋದುವು. ಅದರ ದೇಹವು ದಂಡಾಕಾರವಾಗಿ ನೆಲದಮೇಲೆ ಬಿದ್ದಿತು. ಹೀಗೆ ಪ್ರಾಣವನ್ನು ಬಿಟ್ಟು, ಬೆಟ್ಟದಂತೆ ಬಿದ್ದಿರುವ ಆ ಗೃಧ್ರರಾಜನನ್ನು ನೋಡಿ, ರಾಮನು ಮೇಲೆಮೇಲೆ ಬಂದೊದಗುತ್ತಿರುವ ದುಃಖ ಪರಂಪರೆಗಳಿಂದ ದೀನನಾಗಿ, ಲಕ್ಷ್ಮಣನನ್ನು ಕುರಿತು "ವತ್ಸ ಲಕ್ಷ್ಮಣಾ! ಅನೇಕ ರಾಕ್ಷಸರಿಗೆ ನೆಲೆಯಾದ ಈ ದಂಡಕಾರಣ್ಯದಲ್ಲಿಯೂ ಈ ಗೃಧ್ರರಾಜನು ಎಷ್ಟೋ ವರುಷಗಳಿಂದ ಸ್ವಲ್ಪವೂ ಭಯವಿಲ್ಲದೆ ಸುಖವಾಗಿ ವಾಸಿಸುತಿದ್ದನು. ಅಯ್ಯೋ! ಅಂತವನು ಈಗ ಮೈಮುರಿದು ಬಿದ್ದನಲ್ಲಾ! ಬಹುಕಾಲದಿಂದಲೂ ಉತ್ತರೋತ್ತರಾಭ್ಯುದಯವನ್ನು ಹೊಂದಿ, ಅನೇಕ ವರುಷಗಳವರೆಗೆ ಬದುಕಿದ್ದ ಮಹಾತ್ಮನಾದ ಈ ಪಕ್ಷಿರಾಜನೂ ಕೂಡ ಈಗ ರಾಕ್ಷಸನ ಕೈಯಿಂದ ಹತನಾಗಿ ಸತ್ತುಮಲಗಿದನಲ್ಲಾ! ಕಾಲಗತಿಯನ್ನು ಯಾರು ತಾನೇ ಮೀರಬಲ್ಲರು? ಲಕ್ಷ್ಮಣಾ! ಮುಖ್ಯವಾಗಿ ಈ ಗೃಧ್ರರಾಜನು ನಮಗೆ ಉಪಕಾರಮಾಡಬೇಕೆಂದು ಸೀತೆಯನ್ನು ರಕ್ಷಿಸುವುದಕ್ಕಾಗಿ ಬಂದನು. ಅದರಿಂದಲೇ ರಾವಣನ ಕೈಗೆ ಸಿಕ್ಕಿ ಸಾಯಬೇಕಾಯಿತು. ಪಿತೃಪಿತಾಮಹ ಪರಂಪರೆಯಾಗಿ ತನಗೆ ಬಂದಿರುವ ಮಹತ್ತಾದ ಗೃಧ್ರರಾಜ್ಯವನ್ನೂ ಬಿಟ್ಟು, ನನಗಾಗಿ ಇವನು ಪ್ರಾಣಗಳನ್ನು ಬಿಟ್ಟಿರುವನು. ಎಲೆ ವತ್ಸನೆ! ತಿರ್ಯಕ್ಕುಗಳೇ ಮೊದಲಾದ ಎಲ್ಲಾ ಜಾತಿಗಳಲ್ಲಿಯೂ ಸಾಧುಗಳೂ, ಧರ್ಮಾಚರಣೆಯುಳ್ಳವರೂ, ಶಲ್ಲರರೂ, ಶರಣ್ಯರೂ ಕೆಲವರಿದ್ದೇ ಇರುವರು. ಲಕ್ಷ್ಮಣಾ! ನನಗಾಗಿ ಪ್ರಾಣವನ್ನು ಬಿಟ್ಟ ಈ ಜಟಾಯುವಿನ ಮರಣದಿಂದ ಈಗ ನನಗುಂಟಾಗಿರುವ ಸಂಕಟವನ್ನು ನೋಡಿದರೆ ನಾನು ಸೀತೆಯನ್ನು ಕಳೆದುಕೊಂಡಾಗಲೂ ಇಷ್ಟು ದುಃಖ ಉಂಟಾಗಲಿಲ್ಲವೆಂದೇ ಹೇಳಬೇಕಾಗಿದೆ. ಮಹಾಯಶಸ್ವಿಯಾಗಿಯೂ ಶ್ರೀಮಂತನಾಗಿಯೂ ಇದ್ದ ನಮ್ಮ ತಂದೆಯಾದ ದಶರಥರಾಜನು ಹೇಗೋ, ಹಾಗೆಯೇ ಈ ಪಕ್ಷಿರಾಜನೂ ನಮಗೆ ಪೂಜ್ಯನಾಗಿಯೂ ಮಾನ್ಯನಾಗಿಯೂ ಇರುವನು. ಇದರಲ್ಲಿ ನಾವು ಸಂಪೂರ್ಣವಾದ ಪಿತೃಭಕ್ತಿಯನ್ನೇ ಇಡಬೇಕು. ಲಕ್ಷ್ಮಣಾ! ಸೌದೆಗಳನ್ನು ಸಂಗ್ರಹಿಸಿ ತಂದಿಡು. ನಾನು ಅರಣಿಯನ್ನುಜ್ಜಿ ಅಗ್ನಿಯನ್ನು ಹುಟ್ಟಿಸುವೆನು! ನನಗಾಗಿ ಪ್ರಾಣವನ್ನು ಬಿಟ್ಟ ಪೂಜ್ಯನಾದ ಈ ಜಟಾಯುವಿಗೆ ನನ್ನ ಕೈಯ್ಯಿಂದಲೇ ಅಗ್ನಿ ಸಂಸ್ಕಾರವನ್ನು ಮಾಡುವೆನು. "ಎಲೆ ವತ್ಸನೇ!

ಪಕ್ಷಿಗಳಿಗೆಲ್ಲಾ ತಾನು ಒಡೆಯನಾಗಿದ್ದರೂ, ಕ್ರೂರರಾಕ್ಷಸನ ಕೈಯಿಂದ ಹತನಾಗಿ ಬಿದ್ದಿರುವ ಇವನ ದೇಹವನ್ನು ಚಿತೆಯಲ್ಲಿಟ್ಟು ದಹನಸಂಸ್ಕಾರವನ್ನು ಮಾಡು ವೆನು" ಎಂದು ಹೇಳಿ ರಾಮನು ಮುಂದೆ ಬಂದು ಆ ಪಕ್ಷಿಯ ದೇಹವನ್ನು ತಂದು ಚಿತೆಯಲ್ಲಿಟ್ಟನು. ಆಮೇಲೆ ಧರ್ಮಾತ್ಮನಾದ ರಾಮನು ಆ ಚಿತೆಗೆ ಅಗ್ನಿಸ್ಥಾಪನಮಾಡುತ್ತಾ [1] ಎಲೈ "ಮಹಾಸತ್ತ್ವವುಳ್ಳ ಗೃಧ್ರರಾಜನೆ! ಇದೋ ನಾನು ಯಜ್ಞಶೀಲರಾದ ಗೃಹಸ್ಥರಿಗೆ ಯಾವ ಸದ್ಗತಿಯುಂಟೋ, ಅಹಿತಾಗ್ನಿಯಾದ ವಾನಪ್ರಸ್ಥನಿಗೆ ಯಾವ ಸದ್ಗತಿಯುಂಟೋ, ಸರ್ವಸಂಗ ಪರಿತ್ಯಾಗವನ್ನು ಮಾಡಿ, ಅರಣ್ಯದಲ್ಲಿದ್ದು ಪುನಃ ಹಿಂತಿರುಗಿ ಬಾರದ ಸನ್ಯಾಸಿ ಗಳಿಗೆ ಯಾವ ಗತಿಯುಂಟೋ, ಐಹಿಕ ಭೋಗಗಳನ್ನು ಬಿಟ್ಟು ನೈಷ್ಠಿಕರಾಗಿ

---

1. ಇಲ್ಲಿ "ಯಾ ಗತಿರ್ಯಜ್ಞಶೀಲಾನಾಮಾಹಿತಾಗ್ನೇಶ್ಚ ಯಾ ಗತಿಃ। ಅಪರಾವರ್ತಿ-ನಾಂ ಯಾ ಚ ಯಾ ಚ ಭೂಮಿಪ್ರದಾಯಿನಾಂ। ಮಯಾ ತ್ವಂ ಸಮನುಜ್ಞಾತೋ ಗಚ್ಛ ಲೋಕಾನನುತ್ತಮಾನ್। ಗೃಧ್ರರಾಜ ಮಹಾಸತ್ವ ಸಂಸ್ಕೃತಶ್ಚ ಮಯಾ ವ್ರಜ" ಎಂದು ಮೂಲವು. ಇಲ್ಲಿನ ವಿಶೇಷಾರ್ಥವೇನೆಂದರೆ (ಯಜ್ಞಶೀಲಾನಾಂ)ಯಜ್ಞವೇ ಸ್ವಭಾವವಾಗಿವುಳ್ಳ ಎಂದರೆ ಯಜ್ಞಾನುಷ್ಠಾನಪರರಾದ ಗೃಹಸ್ಥರಿಗೆ (ಯಾ ಗತಿಃ) ಯಾವ ಗತಿಯುಂಟೋ (ಅಹಿತಾಗ್ನೇಃ) ಪಂಚಾಗ್ನಿಗಳ ನಡುವೆ ಯಾವಾಗಲೂ ತಪಶ್ಶೀಲನಾದ ವಾನಪ್ರಸ್ಥರಿಗೆ ಯಾವ ಗತಿಯುಂಟೋ (ಅಪರಕ್ಷವರ್ತಿನಾಂ) 'ಅರಣ್ಯಮಿಯಾತ್ತತೋ ನ ಪುನರೇಯಾತ್' ಎಂಬ ಲಕ್ಷಣೋಕ್ತರಾದ ಸನ್ಯಾಸಿಗಳಿಗೆ ಯಾವ ಗತಿಯುಂಟೋ (ಭೂಮಿಪ್ರದಾಯಿನಾಂ) 'ಭೂಭೋಗಗಳನ್ನು ಬಿಟ್ಟಿರುವ ನೈಷ್ಠಿಕರಿಗೆ ಯಾವ ಗತಿಯುಂಟೋ, ಆ ಗತಿಗಳೆಲ್ಲವೂ ನಿನಗೆ ಸಿದ್ಧಿಸಲಿ' ಎಂದರೆ 'ಪ್ರಾಜಾಪತ್ಯಂ ಗೃಹಸ್ಥಾನಾಂ ಬ್ರಾಹ್ಮಂ ಸನ್ಯಾಸಿನಾಂ ಸ್ಮೃತಂ' ಇತ್ಯಾದಿ ರೀತಿಯಲ್ಲಿ ಹೇಳಿದ ಸ್ಥಾನಗಳೆಲ್ಲವೂ ಸಿದ್ಧಿಸಲಿ ಎಂದು ಭಾವವು. ಅಥವಾ (ಯಜ್ಞದಾನತಪಸ್ಸನ್ಯಾಸಗಳಿಗೆ) ಯಾವ ಬೇರೆ ಬೇರೆ ಗತಿ (ಲೋಕ) ಗಳುಂಟೋ ಆ ಸದ್ಗತಿಗಳೆಲ್ಲವನ್ನೂ ನನ್ನಿಂದ ಸಂಸ್ಕರಿಸಲ್ಪಡುವ ನೀನು ಹೊಂದುವವನಾಗು, ಎಂದರ್ಥವು. (ಸಮನುಜ್ಞಾತಸ್ತು) ನನ್ನಿಂದ ಅನುಮತಿಸಲ್ಪಟ್ಟವನಾಗಿ (ಅನುತ್ತಮಾನ್) ಎಲ್ಲಕ್ಕಿಂತಲೂ ಮೇಲೆನಿಸಿಕೊಂಡ ಎಂದರೆ "ಅಥ ಯದತಃ ಪರೋದಿವೋಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಠೇಷು ಸರ್ವತಃ ಪೃಷ್ಠೇಷ್ವನುತ್ತಮೇಷೂತ್ತಮೇಷು" ಇತ್ಯಾದಿ ಶ್ರುತಿಪ್ರಸಿದ್ಧಗಳಾದ ವಿಷ್ಣುಲೋಕಾವಯವಗಳೆನ್ನೆಲ್ಲಾ ಹೊಂದುವವನಾಗೆಂದು ಭಾವವು. ಇದರಿಂದ ರಾಮ ಜಟಾಯುವನ್ನುದ್ದೇಶಿಸಿ "ನನ್ನಿಂದ ಸಂಸ್ಕೃತವಾಗಿ ನೀನು ಯಜ್ಞಶೀಲಾದಿ ಲೋಕ ಗಳನ್ನೂ, ಅನುಜ್ಞಾತನಾಗಿ ವಿಷ್ಣುಲೋಕಗಳನ್ನೂ ಹೊಂದುವವನಾಗೆಂದು ಹೇಳಿದುದಾಗಿ ಮುಖ್ಯಾರ್ಥವು. ಆದರೆ ಇಲ್ಲಿ ಭಗವಂತನ ಪ್ರೇಮಪೂರಿತವಾದ ಮುಕ್ತಿಪ್ರದಾನವು ಲಕ್ಷಣ

ರುವವರಿಗೆ ಯಾವ ಉತ್ತಮ ಗತಿಯುಂಟೋ, ಆ ಸರ್ವೋತ್ತಮ ಗತಿಗಳೆಲ್ಲ ವನ್ನೂ ಹೊಂದು! ಮತ್ತು ನನ್ನಿಂದ ಸಂಸ್ಕರಿಸಲ್ಪಡುವ ನೀನು ವಿಷ್ಣುಲೋಕ ಗಳನ್ನೂ ಹೊಂದು!" ಎಂದು ಹೇಳಿ, ತನ್ನ ಬಂಧುಗಳನ್ನು ಸಂಸ್ಕರಿಸುವಂತೆ ಕಾರ್ಯಗಳನ್ನು ನಡೆಸಿದನು. ಆಮೇಲೆ ರಾಮನು ಲಕ್ಷ್ಮಣಸಹಿತನಾಗಿ

---

ವಾಗಿರುವಾಗ ಮನುಷ್ಯಭಾವವನ್ನು ನಟಿಸುವ ಶ್ರೀರಾಮನಿಗೆ ಅದು ಹೇಗೆ ಸಲ್ಲುವುದೆಂದು ಕೇಳಿದರೆ "ಸತ್ಯೇನ ಲೋಕಾನ್ ಜಯತಿ" ಎಂದು, ತಾನಾರ್ಜಿಸಿದ ಧರ್ಮವಿಶೇಷದಿಂದಲೇ ರಾಮನು ಸಮಸ್ತ ಲೋಕಗಳನ್ನೂ ವಶಪಡಿಸಿಕೊಂಡಿರುವುದರಿಂದ ಇವನಿಗೆ ಇದು ಸಲ್ಲುವು ದೆಂದೇ ಗ್ರಾಹ್ಯವು.

ಅಥವಾ (ಮಯಾ ಸಂಸ್ಕೃತಃ) ನನ್ನಿಂದ ಸಂಸ್ಕರಿಸಲ್ಪಟ್ಟು, (ತತೋಽನುಜ್ಞಾತಃ) ಅದರಿಂದ ಅನುಜ್ಞೆಹೊಂದಿದವನಾಗಿ. ಯಜ್ಞಶೀಲಾದಿಗಳಿಗೆ ಯೋಗ್ಯಗಳಾದ ಸದ್ಗತಿಗಳೆಲ್ಲ ವನ್ನೂ ಹೊಂದು. ಕೊನೆಗೆ (ಮಯಾ ವ್ರಜ) ನನ್ನೊಡನೆಯೂ ಸೇರು. ಎಂದರೆ "ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ" ಎಂಬಂತೆ ಮುಕ್ತ ಭೋಗವನ್ನು ಹೊಂದು ಎಂದು ಭಾವವು. ಹಾಗಿದ್ದರೆ ನಿರ್ಹೇತುಕವಾಗಿಯೇ ಮುಕ್ತಿ ಪ್ರಾಪ್ತಿಯೆಂಬ ಅತಿಪ್ರಸಕ್ತಿಯುಂಟಾಗಬಹುದಲ್ಲವೆ ಎಂದರೆ, ಇಲ್ಲಿ ಭಗವಂತನು ತನ್ನ ಕಾರ್ಯಕ್ಕಾಗಿಯೇ ಜಟಾಯುವು ಪ್ರಾಣತ್ಯಾಗವನ್ನು ಮಾಡಿರುವುದರಿಂದ, ಅದನ್ನೇ ಹೇತುವಾಗಿ ಗ್ರಹಿಸಿ ಮುಕ್ತಿಯನ್ನು ಕೊಟ್ಟಿರುವನೆಂದು ಹೇಳುವುದರಿಂದ ಬಾಧಕವಲ್ಲವು. ಇದೇ ವಿಚಾರವು ನೃಸಿಂಹ ಪುರಾಣದಲ್ಲಿ, "ಮತ್ಕೃತೇ ನಿಧನಂ ಯಸ್ಮಾತ್ತ್ವಯಾ ಪ್ರಾಪ್ತಂ ದ್ವಿಜೋತ್ತಮ। ತಸ್ಮಾನ್ಮಮ ಪ್ರಸಾದೇನ ವಿಷ್ಣುಲೋಕಮವಾಪ್ಸ್ಯಸಿ" ಎಂದು ರಾಮನೇ ಹೇಳಿದುದಾಗಿ ಕಾಣಿಸಲ್ಪಟ್ಟಿದೆ. ಹಾಗಿದ್ದರೆ ಕರ್ಮದಿಂದಲೇ ಮುಕ್ತಿ ಯುಂಟಾದಂತಾಯಿತಲ್ಲವೆ ಎಂದರೆ "ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" ಎಂಬ ಪ್ರಮಾಣದಿಂದ ಕರ್ಮಗಳಿಗೂ ಮುಕ್ತಿಹೇತು ತತ್ತ್ವವನ್ನು ಹೇಳುವುದರಿಂದ ಬಾಧೆ ಯಿಲ್ಲವು. ಆದರೆ "ನಾನ್ಯಃ ಪಂಥಾ ಅಯನಾಯ ವಿದ್ಯತೇ" ಎಂಬುದಾಗಿ ಜ್ಞಾನವು ಹೊರತು ಮುಕ್ತಿಗೆ ಬೇರೆ ಯಾವುದೂ ಹೇತುವಲ್ಲವೆಂದು ಹೇಳಿರುವ ವಾಕ್ಯಕ್ಕೆ ವಿರೋಧ ವಿಲ್ಲವೆ ಎಂದರೆ, ಪರಮಾತ್ಮನು ಹೊರತು ಬೇರೊಬ್ಬರೂ ಮುಕ್ತಿಹೇತುವಲ್ಲವೆಂಬುದೇ ಈ ಶ್ರುತ್ಯಭಿಪ್ರಾಯವಾಗಿ ಗ್ರಹಿಸಬೇಕು. ಇಲ್ಲಿ ಆ ಪರಮಾತ್ಮನೇ ಸಾಕ್ಷಾತ್ತಾಗಿ ಅನುಗ್ರಹಿ ಸುವುದರಿಂದ ಆ ದೋಷವೂ ಇಲ್ಲವು.

ಅಥವಾ "ಓ ಗೃಧ್ರರಾಜನೆ! ನನ್ನಿಂದ ಸಂಸ್ಕೃತನಾಗಿ ನೀನು ನನ್ನ ಅನುಮತಿ ಯಿಂದ ಸರ್ವೋತ್ತಮಗಳಾದ ಲೋಕಗಳನ್ನು ಎಂದರೆ, ನನ್ನ ಲೋಕಗಳನ್ನು ಹೊಂದು. ಅದಕ್ಕೆ ಮೊದಲು ಆನುಷಂಗಿಕವಾಗಿ (ಯಜ್ಞಶೀಲಾನಾಂ ಯಾ ಗತಿಃ) ಯಜ್ಞಶೀಲರಿಗೆ ಯಾವ ಲೋಕವೋ (ಆಹಿತಾಗ್ನೇಃ ಯಾ ಗತಿಃ) ಗಾರ್ಹಪತ್ಯಾಹವನೀಯ ದಕ್ಷಿಣಾಗ್ನಿನಿರತ

ಹೊರಟು ಕಾಡಿನಲ್ಲಿ ಕೆಲವು ದೊಡ್ಡ ಮೃಗಗಳನ್ನು ಹೊಡೆದು ತಂದು, ಜಟಾಯುವಿಗೆ ಪಿಂಡದಾನವನ್ನು ಮಾಡುವುದಕ್ಕಾಗಿ ದರ್ಭಾಸ್ತರಣವನ್ನು ಮಾಡಿದನು. ಆಮೇಲೆ ಮಹಾಯಶಸ್ವಿಯಾದ ರಾಮನು ಆ ಮೃಗಮಾಂಸವನ್ನು ಕತ್ತರಿಸಿ ಉಂಡೆಮಾಡಿ, ಎಳಗರಿಕೆಗಳಿಂದ ಕೂಡಿದ ಮನೋಹರವಾದ

---

ನಾದವನಿಗೆ ಯಾವ ಲೋಕವೋ, ಇಲ್ಲಿ "ಅಗ್ನಯೋ ವೈ ತ್ರಯೀ ವಿದ್ಯಾ" ಎಂದಾರಂಭಿಸಿ, "ತಸ್ಮಾದಗ್ನೀನ್ಪರಮಂ ವದಂತಿ" ಎಂಬವರೆಗೂ ಇರುವ ಶ್ರುತಿಗಳಿಂದ ಆಹಿತಾಗ್ನಿತ್ವವೂ ಕೂಡ ಪ್ರತ್ಯೇಕ ಧರ್ಮವಾಗಿ ಹೇಳಲ್ಪಟ್ಟಿರುವುದರಿಂದ ಇದಕ್ಕೂ ಪ್ರತ್ಯೇಕ ಲೋಕವು ಫಲವಾಗಿರುವುದೆಂದು ಗ್ರಾಹ್ಯವು ; ಮತ್ತು (ಅಪರಾವರ್ತಿನಾಂ) ಯುದ್ಧದಲ್ಲಿ ಹಿಂತಿರುಗದವರಿಗೆ ಯಾವ ಲೋಕವೋ, "ಆದರೆ ಇಲ್ಲಿ ಜಟಾಯುವಿಗೆ ಮೊದಲೇ ಈ ಫಲವು ಸಿದ್ಧಿಸಿರುವುದರಿಂದ ಈಗ ಪುನಃ ಅದನ್ನು ಕೊಡಬೇಕಾದುದಿಲ್ಲ. ಆದುದರಿಂದ ಇದನ್ನು ಹೇಳಿದುದು ಕೇವಲ ದೃಷ್ಟಾಂತಕ್ಕಾಗಿಯೇ ಎಂದು ಗ್ರಾಹ್ಯವು. ಎಂದರೆ ತಿರ್ಯಕ್ಕಾದ ನಿನಗೆ ಯಜ್ಞಾದಿ ಫಲಗಳಿಗೆ ಅವಕಾಶವಿಲ್ಲದಿದ್ದರೂ ನನ್ನ ಅನುಮತಿಯಿಂದ ನೀನು ಸ್ವತಏವ ಅಪರಾವರ್ತಿಗಳ ಗತಿಯನ್ನು ಹೊಂದುವಂತೆಯೇ ಆ ಯಜ್ಞಾದಿ ಫಲಗಳನ್ನೂ ಹೊಂದುವನಾಗೆಂದು ಭಾವವು. ಬ್ರಹ್ಮಪ್ರಾಪ್ತಿಗೆ ಮೊದಲು ವಸುತ್ವಾದಿಗಳನ್ನು ಹೊಂದುವಂತೆ ಆನುಷಂಗಿಕನಾಗಿ ಈ ಲೋಕಗಳೆಲ್ಲವನ್ನೂ ಹೊಂದಿ, ಕೊನೆಗೆ ನನ್ನೊಡನೆ ಸೇರಿಬಿಡೆಂದು ಮುಖ್ಯಾರ್ಥವು. (ಭೂಮಿಪ್ರದಾಯಿನಾಂ) ಎಂಬುದಕ್ಕೂ ಈ ಪಕ್ಷದಲ್ಲಿ ಭೂದಾನವನ್ನು ಮಾಡಿದವರಿಗೆ ಯಾವ ಲೋಕವುಂಟೋ ಅದನ್ನೂ ಹೊಂದು" ಎಂದರ್ಥವು.

ತನಿಶ್ಲೋಕಿ :—ತಿರ್ಯಕ್ಕುಗಳಿಗೆ ಕರ್ಮಾಧಿಕಾರವಿಲ್ಲದಿದ್ದರೂ ಸಂಸ್ಕಾರವನ್ನು ಹೊಂದದವರಿಗೆ ಪರಲೋಕವಿಲ್ಲದುದರಿಂದ ನೀನು ನನ್ನಿಂದ ಸಂಸ್ಕೃತನಾಗಿ ನನ್ನನುಜ್ಞೆಯಿಂದಲೇ ಉತ್ತಮ ಲೋಕಗಳನ್ನು ಹೊಂದು. (ಅಪರಾವರ್ತಿನಾಂ) "ನ ಸ ಪುನರಾವರ್ತತೇ" ಎಂಬ ಶ್ರುತಿಯಂತೆ, ಪುನರಾವರ್ತಿಯಿಲ್ಲದ ಮುಕ್ತರ ಲೋಕಗಳನ್ನೂ ಹೊಂದು! ಮುಕ್ತಲೋಕವೆಂಬುದು ಮೋಕ್ಷವೊಂದೇ ಆಗಿರುವುದರಿಂದ ಇಲ್ಲಿನ ಬಹುವಚನವು ಪೂಜಾರ್ಥವೆಂದು ಗ್ರಹಿಸಬೇಕು. ಅಥವಾ ಆ ಪರಮವ್ಯೋಮದಲ್ಲಿ ಅವಾಂತರ ಲೋಕಗಳೂ ಅನೇಕವಾಗಿರುವುದರಿಂದ ಹಿಂದೆ "ವಿಶ್ವತಃ ಪೃಷ್ಠೇಷು" ಇತ್ಯಾದಿ ಶ್ರುತಿಪ್ರಮಾಣದಲ್ಲಿ ಬಹುವಚನವು ನಿರ್ದೇಶಿಸಲ್ಪಟ್ಟಿರುವಂತೆ, ಇಲ್ಲಿಯೂ ಬಹುವಚನವೆಂದು ಹೇಳಬಹುದು. (ಯಜ್ಞಶೀಲಾನಾಂ) ಯಜ್ಞಶೀಲಾದಿಲೋಕಗಳ ಮಾರ್ಗವಾಗಿ ಅಪರಾವರ್ತಿಗಳ ಲೋಕಗಳನ್ನೂ ಹೊಂದುವನಾಗೆಂದರ್ಥವು. ಭಗವಂತನಾದ ರಾಮನು ತಿರ್ಯಕ್ಕಾದ ಜಟಾಯುವಿಗೆ ಹೀಗೆ ಸಂಸ್ಕಾರವನ್ನು ನಡೆಸಬಹುದೇ ? ಎಂದರೆ 'ನ ಶೂದ್ರಾ ಭಗವದ್ಭಕ್ತಾಃ' ಎಂಬುದರಿಂದ ಶೂದ್ರಶಬ್ದವು ಪಶುಪಕ್ಷ್ಯಾದಿಗಳಿಗೂ ಕೂಡ ಉಪಲಕ್ಷಕವು. ಭಗವದ್ಭಕ್ತರಾದ ಸಮಸ್ತ ಪ್ರಾಣಿಗಳಿಗೂ ಮೋಕ್ಷಾಧಿಕಾರವಿರುವುದರಿಂದ, ಇದು ಯುಕ್ತವೆಂದೇ

ಒಂದು ಸ್ಥಳವನ್ನು ನೋಡಿ, ಅಲ್ಲಿ ಆ ಪಕ್ಷಿಗೆ ಪಿಂಡವನ್ನೂ ಹಾಕಿದನು. ಭೂಮಿಯಲ್ಲಿ ಬ್ರಾಹ್ಮಣರು ಸತ್ತವನನ್ನು ಸ್ವರ್ಗಕ್ಕೇರಿಸುವುದಕ್ಕಾಗಿ ಪಿತೃದೇವತಾತ್ಮಕಗಳಾದ ಯಾವಯಾವ ಮಂತ್ರಗಳನ್ನು ಜಪಿಸುವರೋ, ಅವೆಲ್ಲವನ್ನೂ ಕ್ರಮವಾಗಿ ಜಪಿಸಿದನು. ಅನಂತರ ರಾಮಲಕ್ಷ್ಮಣರಿಬ್ಬರೂ ಗೋದಾವರಿಗೆ ಹೋಗಿ ಸ್ನಾನಮಾಡಿ, ಆ ಗೃಧ್ರರಾಜನಿಗೆ ತರ್ಪಣವನ್ನು ಬಿಟ್ಟರು. ಅವರಿಬ್ಬರೂ ಬಹಳ ನಿಷ್ಠೆಯಿಂದ ಶಾಸ್ತ್ರೋಕ್ತವಾಗಿಯೇ ಅಲ್ಲಿ ನಡೆಸಬೇಕಾದ ಉದಕಕ್ರಿಯಗಳೆಲ್ಲವನ್ನೂ ನಡೆಸಿದರು. ಆ ಜಟಾಯುವು ಹೀಗೆ ಯಶಸ್ಕರವಾಗಿಯೂ, ದುಷ್ಕರವಾಗಿಯೂ ಇರುವ ಕಾರ್ಯಕ್ಕಾರಂಭಿಸಿ, ಯುದ್ಧದಲ್ಲಿ ಸತ್ತುದಕ್ಕಾಗಿ ಮಹರ್ಷಿಸಮಾನನಾದ ರಾಮನ ಕೈಯಿಂದಲೇ ಸಂಸ್ಕಾರವನ್ನು ಪಡೆದು, ಸರ್ವೋತ್ತಮವಾದ ಗತಿಯನ್ನೂ ಹೊಂದಿದನು. ಇತ್ತಲಾಗಿ ರಾಮಲಕ್ಷ್ಮಣರು

---

ಗ್ರಹಿಸಬೇಕು. ಜಟಾಯುವಿಗೆ ಮೋಕ್ಷವನ್ನು ಕೊಟ್ಟಿರುವುದರಿಂದ ರಾಮನೇ ಪರಮಾತ್ಮನೆಂದು ಇಲ್ಲಿ ಪ್ರತೀತವಾಗುವುದು. "ತ್ವಂ ಗತಿಃ ಪರಮಾ ದೇವ" ಇತ್ಯಾದಿಗಳಿಂದ ಬಾಲಕಾಂಡದಲ್ಲಿಯೂ, "ಸ ಹಿ ದೇವೈರುದೀರ್ಣಸ್ಯ" ಇತ್ಯಾದಿಗಳಿಂದ ಯುದ್ಧಕಾಂಡದಲ್ಲಿಯೂ, "ಸೀತಾ ಲಕ್ಷ್ಮೀರ್ಭವಾನ್ ವಿಷ್ಣುಃ" ಇತ್ಯಾದಿ ವಾಕ್ಯಗಳಿಂದ ಭಾಗವತದಲ್ಲಿಯೂ ರಾಮನ ಪರತ್ವವು ಸ್ಪಷ್ಟವಾಗುವುದು. ಆದರೆ ಹೀಗೆ ಸಮಸ್ತ ಕಲ್ಯಾಣಗುಣಾತ್ಮಕನಾದ ಶ್ರೀಮನ್ನಾರಾಯಣನು, ರಾವಣಾದಿವಧರೂಪವಾದ ಲೋಕಹಿತಕ್ಕಾಗಿ, ತಾನಾಗಿಯೇ ದಶರಥನ ಮನೆಯಲ್ಲಿ ಹುಟ್ಟಿರುವಾಗ, ಸೀತೆಯನ್ನು ಕುರಿತು ಇಷ್ಟು ವಿಲಾಪವೇಕೆ? ಎಂದರೆ "ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ" ಎಂದೂ "ನಿಶ್ಚಿತಾಽಪಿ ಹಿ ಮೇ ಬುದ್ಧಿರ್ವನವಾಸೇ ದೃಢವ್ರತಾ । ಭರತಸ್ನೇಹಸಂತಪ್ತಾ ಬಾಲಿಶೀ ಕ್ರಿಯತೇ ಪುನಃ" ಎಂದೂ, "ಸೀತಾಹರಣಜಂ ದುಃಖಂ ನ ಮೇ ಸೌಮ್ಯ ತಥಾ ಗತಂ । ಯಥಾ ವಿನಾಶೋ ಗೃಧ್ರಸ್ಯ ಮತ್ಕೃತೇ ಚ ಪರಂತಪ" ಎಂದೂ, ಅಲ್ಲಲ್ಲಿ ಆಶ್ರಿತರ ದುಃಖವನ್ನು ನೋಡಿ ಅವರಲ್ಲಿ ವಾತ್ಸಲ್ಯದಿಂದ ತಾನೂ ದುಃಖಿಸುವುದೇ ಸರ್ವೇಶ್ವರನ ಸ್ವಭಾವವೆಂದು ಇಲ್ಲಿ ವಾಲ್ಮೀಕಿಯ ಅಭಿಪ್ರಾಯವಾಗಿ ತಿಳಿಯುವುದು. ಇದರಂತೆಯೇ ಶುಕಾದಿಗಳೂ ಕೂಡ "ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಂ" ಇತ್ಯಾದಿ ವಾಕ್ಯಗಳಿಂದ ಭಗವಂತನ ಮನುಷ್ಯಾವತಾರವು ಮನುಷ್ಯರಿಗೆ ನಡವಳಿಕೆಯನ್ನು ತಿಳಿಸುವುದಕ್ಕೂ ಸಹಕಾರಿಯೆಂದು ಹೇಳಿ, ಆ ರಾಮನಿಗೆ ದುಃಖಲೇಶವೂ ಇಲ್ಲವೆಂದು ತೋರಿಸಿರುವರು. ಹೀಗೆಯೇ ಅಲ್ಲಲ್ಲಿ ಪರಿಹಾರಗಳನ್ನು ಊಹಿಸಿಕೊಳ್ಳಬೇಕು.

ತರ್ಪಣವನ್ನು ಬಿಟ್ಟುಬಂದು, ಆ ಜಟಾಯುವನ್ನೇ ಬಾರಿಬಾರಿಗೂ ಸ್ಮರಿಸಿ ದುಃಖಿಸುತಿದ್ದರು. ಆಮೇಲೆ ಅವರಿಗೆ ಸೀತೆಯ ಸ್ಮರಣೆಬಂದು, ಅವಳನ್ನು ಹುಡುಕುವುದಕ್ಕಾಗಿ, ವಿಷ್ಣುವೂ ಇಂದ್ರನೂ ಸೇರಿ ಹೊರಡುವಂತೆ ಮುಂದೆ ಹೊರಟರು.

ಇಲ್ಲಿಗೆ ಅರುವತ್ತೆಂಟನೆಯ ಸರ್ಗವು.

---

{ ಅಯೋಮುಖಿಯನ್ನು ವಿರೂಪಮಾಡಿದುದು.
ಕಬಂಧನನ್ನು ಕಂಡುದು. }

ಹೀಗೆ ರಾಮಲಕ್ಷ್ಮಣರಿಬ್ಬರೂ ಜಟಾಯುವಿಗೆ ಅಪರಸಂಸ್ಕಾರಗಳನ್ನು ಮುಗಿಸಿ, ಸೀತೆಯನ್ನು ಹುಡುಕುತ್ತಾ ನೈರುತ್ಯಾಭಿಮುಖವಾಗಿಯೇ ಹೋಗುತಿದ್ದರು. ಕೈಯಲ್ಲಿ ಧನುರ್ಬಾಣಗಳನ್ನೂ ಕತ್ತಿಯನ್ನೂ ಹಿಡಿದು, ಮುಂದೆ ಮುಂದೆ ಹೋಗುತ್ತ, ಅಷ್ಟಾಗಿ ಜನಸಂಚಾರವಿಲ್ಲದುದರಿಂದ ಚೆನ್ನಾಗಿ ಗುರುತುಕಾಣದ ಒಂದು ದಾರಿಯನ್ನು ಹಿಡಿದರು. ಸುತ್ತ ಎಲ್ಲಿನೋಡಿದರೂ ಪೊದೆಗಳೂ, ಬಗೆಬಗೆಯ ಗಿಡಬಳ್ಳಿಗಳೂ ತುಂಬಿ ಬೆಳೆದಿದ್ದುವು. ಎಲ್ಲಿ ನೋಡಿದರೂ ಸುಲಭವಾಗಿ ಸಂಚರಿಸುವುದಕ್ಕೆ ದಾರಿಯಿರಲಿಲ್ಲ. ಆ ಪ್ರದೇಶವೆಲ್ಲವೂ ನೋಡುವಾಗಲೇ ಭಯವನ್ನು ಹುಟ್ಟಿಸತಕ್ಕ ಘೋರಾರಣ್ಯವಾಗಿಯೇ ಕಾಣಿಸುತಿತ್ತು. ಎಲ್ಲಿ ನೋಡಿದರೂ ಹುಲಿಗಳೂ, ಸಿಂಹಗಳೂ ಕಾಣಿಸುತಿದ್ದುವು. ಹೀಗೆ ಆ ಅರಣ್ಯವು ಮಹಾಭಯಂಕರವಾಗಿದ್ದರೂ, ಬಲಾಢ್ಯರಾದ ರಾಮಲಕ್ಷ್ಮಣರಿಬ್ಬರೂ ಅದನ್ನು ಬೇಗನೆ ದಾಟಿಹೋದರು. ಆ ಜನಸ್ಥಾನದಿಂದ ಮೂರು ಹರದಾರಿಯವರೆಗೆ ನಡೆದು, ಕೊನೆಗೆ ಒಂದು ದುರ್ಗಮವಾದ ಕ್ರೌಂಚಾರಣ್ಯವೆಂಬ ಅಡವಿಯನ್ನು ಪ್ರವೇಶಿಸಿದರು. ಅಲ್ಲಿ ಮರಗಳು ತುಂಬಿ ಬೆಳೆದಿದ್ದುದರಿಂದ ಸುತ್ತಲೂ ಮೋಡಮುಚ್ಚಿದಂತೆ ಕಾಣುತಿತ್ತು. ಬಗೆಬಗೆಯ ಪಕ್ಷಿಗಳೆಲ್ಲವೂ ತುಂಬಿದ್ದುವು. ಅಲ್ಲಿಯೂ ಅನೇಕ ಕ್ರೂರಮೃಗಗಳು ಸುತ್ತಲೂ ಸಂಚರಿಸುತಿದ್ದುವು. ಸೀತೆಯನ್ನು ಕಂಡುಹಿಡಿಯುವುದಕ್ಕಾಗಿ ಆ ವನವೆಲ್ಲವನ್ನೂ ಹುಡುಕಿದರು. ಮಾರ್ಗಾಯಾಸದಿಂದ ಬಳಲಿ ಅಲ್ಲಲ್ಲಿ ವಿಶ್ರಾಂತಿಯನ್ನು ತೆಗೆದು

ಕೊಳ್ಳುತಿದ್ದರು. ಅಲ್ಲಿಯೂ ಸೀತೆಯು ಸಿಕ್ಕದುದಕ್ಕಾಗಿ ದುಃಖಿಸುತ್ತ, ಅಲ್ಲಿಂದ ಪೂರ್ವದಿಕ್ಕಿಗೆ ಹೊರಟರು. ಹಾಗೆ ಮೂರು ಹರದಾರಿಯನ್ನು ನಡೆದು ಹೋದಮೇಲೆ, ಈ ಕ್ರೌಂಚಾರಣ್ಯಕ್ಕೂ ಮತಂಗಾಶ್ರಮಕ್ಕೂ ನಡುವೆ ಕಾಣಿಸಿದ ಮತ್ತೊಂದು ಘೋರಾರಣ್ಯವನ್ನು ಪ್ರವೇಶಿಸಿದರು. ಅಲ್ಲಿಯೂ ಮಹಾಭಯಂಕರವಾದ ಮೃಗಪಕ್ಷಿಗಳೂ, ಚಿತ್ರವಿಚಿತ್ರಗಳಾದ ಜಂತುಗಳೂ ತುಂಬಿದ್ದುವು. ಸಂಚಾರಕ್ಕವಕಾಶವಿಲ್ಲದಂತೆ ದಟ್ಟವಾಗಿ ಗಿಡಗಳು ಬೆಳೆದಿದ್ದುವು. ಆ ಅರಣ್ಯದಲ್ಲಿ ಸುತ್ತಿ ಸೀತೆಯನ್ನು ಹುಡುಕುತ್ತಿರುವಾಗ, ಒಂದು ದೊಡ್ಡ ಗುಹೆಯನ್ನು ಕಂಡರು. ಆ ಗುಹೆಯಾದರೋ, ಪಾತಾಳದಂತೆ ಮಹಾಗಂಭೀರ ವಾಗಿ, ಯಾವಾಗಲೂ ಗಾಢಾಂಧಕಾರದಿಂದ ಮುಚ್ಚಿರುವುದು. ಅವರಿಬ್ಬರೂ ಆ ಗುಹೆಯ ಬಳಿಗೆ ಬಂದುನಿಂತರು. ಅಷ್ಟರಲ್ಲಿ ಆ ಗುಹೆಗೆ ಸ್ವಲ್ಪದೂರವಾಗಿ, ದೊಡ್ಡ ದೇಹವುಳ್ಳ ಮತ್ತು ವಿಕಾರವಾದ ಮುಖವುಳ್ಳ ರಾಕ್ಷಸಿಯೊಬ್ಬಳನ್ನು ಕಂಡರು. ಅವಳನ್ನು ನೋಡಿದಾಗಲೇ ದೂರದಲ್ಲಿರುವ ಕ್ಷುದ್ರಜಂತುಗಳೆಲ್ಲವೂ ಹೆದರಿ ಓಡುತಿದ್ದುವು. ಅವಳ ರೂಪವು ನೋಡುವವರಿಗೆ ಅಸಹ್ಯವನ್ನು ಹುಟ್ಟಿಸು ವಂತಿತ್ತು. ಆಹಾ ! ಅವಳ ವಿಲಕ್ಷಣರೂಪವನ್ನು ಕೇಳಬೇಕೆ ? ಭಯಂಕರವಾದ ದೃಷ್ಟಿ ! ಜೋಲುವ ಹೊಟ್ಟೆ ! ಕೂಚಾದ ಕೋರೆದಾಡೆಗಳು ! ಒರಟಾದ ತೊಗಲು ! ಹೀಗೆ ಕ್ರೂರಸ್ವರೂಪಿಣಿಯಾಗಿದ್ದು, ಕಣ್ಣಿಗೆ ಬಿದ್ದ ಮಹಾಮೃಗ ಗಳನ್ನೂ ಹಿಡಿದು ಒಟ್ಟಿಗೆ ನುಂಗಿಬಿಡುವಳು. ತಲೆಯನ್ನು ಬಿಚ್ಚಿಕೊಂಡು ಘೋರರೂಪದಿಂದ ಬರುತ್ತಿರುವ ಆ ರಾಕ್ಷಸಿಯನ್ನು ರಾಮಲಕ್ಷ್ಮಣರಿಬ್ಬರೂ ನೋಡಿದರು. ಆ ರಾಕ್ಷಸಿಯೂ ಈ ರಾಮಲಕ್ಷ್ಮಣರನ್ನು ಕಂಡೊಡನೆ, ನೆಟ್ಟಗೆ ರಾಮನ ಮುಂದೆ ನಿಂತಿದ್ದ ಲಕ್ಷ್ಮಣನ ಬಳಿಗೆ ಬಂದು, "ಬಾ ! ನಾವಿಬ್ಬರೂ ಕ್ರೀಡಿಸುವೆವು !" ಎಂದು ಅವನನ್ನು ಹಿಡಿದುಕೊಂಡಳು. ಆಮೇಲೆ ತಾನಾಗಿಯೇ ಆ ಲಕ್ಷ್ಮಣನನ್ನಪ್ಪಿಕೊಂಡು, ಅವನನ್ನು ಕುರಿತು, "ಅಯ್ಯಾ ! ನನಗೆ ಅಯೋಮುಖಿಯೆಂದು ಹೆಸರು ! ನಿನ್ನ ಒಳ್ಳೇಕಾಲಕ್ಕೆ ನಾನು ಸಿಕ್ಕಿರುವೆನು. ನಿನಗಿದೊಂದು ಲಾಭವಲ್ಲವೆ ? ನನಗೂ ನಿನ್ನಲ್ಲಿ ಪ್ರೀತಿಯು ಹುಟ್ಟಿಹೋಗಿರು ವುದು. ಎಲೆ ನಾಥನೆ! ಇಲ್ಲಿ ನೀನೊಬ್ಬನೇ ಅಲೆಯುವುದೇಕೆ ? ನಿನ್ನ ಆಯುಶ್ಶೇಷವನ್ನು ಇನ್ನುಮೇಲೆ ನನ್ನೊಡನೆ ಸೇರಿ ಇಲ್ಲಿನ ಬೆಟ್ಟದ ತಪ್ಪಲು ಗಳಲ್ಲಿಯೂ, ಇಲ್ಲಿನ ನದೀತೀರದ ಮಳಲು ದಿಣ್ಣೆಗಳಲ್ಲಿಯೂ, ಕ್ರೀಡಿಸುತ್ತಾ

ಸುಖವಾಗಿ ಕಳೆಯಬಹುದು" ಎಂದಳು. ಈ ಮಾತನ್ನು ಕೇಳಿ ಲಕ್ಷ್ಮಣನಿಗೆ ಅತಿಕೋಪವುಂಟಾಯಿತು. ಆಗಲೇ ತನ್ನ ಕತ್ತಿಯನ್ನೆಳೆದು ಅವಳ ಕಿವಿಮೂಗುಗಳನ್ನೂ, ಸ್ತನಗಳನ್ನೂ ಛೇದಿಸಿಬಿಟ್ಟನು. ಹೀಗೆ ವಿರೂಪವನ್ನು ಹೊಂದಿದ ಆ ಅಯೋಮುಖಿಯು 'ಅಯ್ಯೋ!' ಎಂದು ವಿಕಟಸ್ವರದಿಂದ ಅರಚಿಕೊಳ್ಳುತ್ತಾ, ತಾನು ಬಂದ ದಾರಿಯನ್ನು ಹಿಡಿದು ಓಡಿಹೋದಳು. ಹೀಗೆ ಅಯೋಮುಖಿಯು ಹೊರಟುಹೋದಮೇಲೆ, ಪರಂತಪರಾದ ರಾಮಲಕ್ಷ್ಮಣರಿಬ್ಬರೂ ದುರ್ಗಮವಾದ ಆ ವನದಲ್ಲಿಯೇ ಅಲ್ಲಲ್ಲಿ ಸುತ್ತುತಿದ್ದರು. ಅವರಿಬ್ಬರೂ ಮುಂದೆ ಸಾಗಿ ಬರುತ್ತಿರುವಾಗ ಶುದ್ಧವಾದ ಶೀಲಸ್ವಭಾವಗಳುಳ್ಳ ಲಕ್ಷ್ಮಣನು, ತಾನು ಬಹಳ ತೇಜಸ್ವಿಯಾಗಿಯೂ ಬಲಾಢ್ಯನಾಗಿಯೂ ಇದ್ದರೂ, ಇದ್ದಕ್ಕಿದ್ದ ಹಾಗೆ ಧಿಗ್ಗನೆ ಹೆದರಿ, ಅಣ್ಣನಾದ ರಾಮನ ಮುಂದೆ ಕೈಮುಗಿದು ನಿಂತು, ವಿನಯದಿಂದ "ಅಣ್ಣಾ! ಇದೇನೋ ನನ್ನ ಎಡದ ತೋಳು ಅದಿರುತ್ತಿರುವುದು! ನನ್ನ ಮನಸ್ಸಿನಲ್ಲಿ ಏನೋ ಒಂದು ವಿಧವಾದ ಕಳವಳವು ಹುಟ್ಟಿರುವಂತೆ ತೋರುವುದು! ಅನೇಕವಾಗಿ ಈಗ ದುರ್ನಿಮಿತ್ತಗಳೇ ಕಾಣುತ್ತಿರುವುವು. ಆದರಿಂದ ಮುಂದೆ ನಮಗೇನೋ ಅಪಾಯವುಂಟಾಗಬಹುದೆಂದು ತೋರುವುದು. ಅಣ್ಣಾ! ಹೇಗಾದರೂ ಆಗಲಿ! ನೀನು ಜಾಗರೂಕತೆಯಿಂದ ಸಿದ್ಧನಾಗಿರು! ನಾನು ಹೇಳುವ ಈ ಹಿತವಾಕ್ಯವನ್ನನುಸರಿಸಿ ನಡೆಸು! ಈಗಿನ ದುಶ್ಶಕುನಗಳೆಲ್ಲವೂ ಮುಂದೆ ಬರಬಹುದಾದ ಅನರ್ಥವನ್ನು ಈಗಲೇ ಹೇಳುತ್ತಿರುವುವು. ಆದರೇನು! ಅಣ್ಣಾ! ಇದೋ! ಇಲ್ಲಿ ವಂಜುಲಕವೆಂಬ ಒಂದುಜಾತಿಯ ಕ್ರೂರಪಕ್ಷಿಯು ಕೂಗುತ್ತಿರುವುದರಿಂದ, ನಮಗೆ ಮುಂದೆ ಯುದ್ಧದಲ್ಲಿ ಜಯವುಂಟಾಗುವುದೆಂದು ಹೇಳುವಂತೆ ಶಕುನವನ್ನೂ ಸೂಚಿಸುತ್ತಿರುವುದು" ಎಂದನು. ಹೀಗೆ ಒಬ್ಬರಿಗೊಬ್ಬರು ಮಾತನಾಡುತ್ತ, ಆ ಅಡವಿಯ ಒಂದೊಂದು ಕಡೆಯನ್ನೂ ಹುಡುಕಿಬರುವಾಗ, ಆ ವನವೆಲ್ಲವನ್ನೂ ಮುರಿಯುವಂತೆ ಮಹಾಭಯಂಕರವಾದ ಒಂದು ದೊಡ್ಡ ಧ್ವನಿಯು ಕೇಳಿಸಿತು. ಗಾಳಿಯು ಆಕಾಶವೆಲ್ಲವನ್ನೂ ಎಡೆಬಿಡದೆ ಆವರಿಸಿರುವಂತೆ ಆ ಧ್ವನಿಯು ವನವೆಲ್ಲವನ್ನೂ ಎಡೆಬಿಡದೆ ತುಂಬಿತು! ಆಗ ರಾಮನು ಸಂಭ್ರಮದಿಂದ, ಆ ಧ್ವನಿಯು ಎಲ್ಲಿಂದ ಹೊರಟಿತೆಂಬುದನ್ನು ತಿಳಿಯಬೇಕೆಂದು ಲಕ್ಷ್ಮಣನೊಡನೆ ಮುಂದೆ ಹೊರಟನು. ಮುಂದೆ ಒಂದಾನೊಂದು ಪೊದೆಯಲ್ಲಿ ಒಂದು ದೊಡ್ಡ ಭೂತವನ್ನು ಕಂಡರು. ಆಹಾ!

ಅದರ ವಿಲಕ್ಷಣಸ್ವರೂಪವನ್ನು ಕೇಳಬೇಕೆ? ದೇಹವೋ ಪರ್ವತದಂತೆ ದೊಡ್ಡದಾಗಿರುವುದು! ಅಗಲವಾದ ಎದೆ! ಅದಕ್ಕೆ ತಲೆಯಾಗಲಿ ಕಂಠವಾಗಲಿ ಇದೊಂದೂ ಇಲ್ಲದೆ, ಬರೀ ಮುಂಡದಂತಿರುವುದು. ಹೊಟ್ಟೆಯಲ್ಲಿ ಒಂದು ಬಾಯಿ! ಬೆಟ್ಟದಮೇಲಿನ ಗಿಡುಬಳ್ಳಿಗಳಂತೆ ಒರಟೊರಟಾದ ದಪ್ಪರೋಮಗಳು! ಕಾಲಮೇಘದಂತೆ ಕಪ್ಪಾದ ಮೈ! ಮೇಘವು ಗುಡುಗಿದಂತೆಯೇ ಭಯಂಕರವಾದ ಕೂಗು! ಘೋರವಾದ ಆಕೃತಿ! ಎದೆಯ ಮೇಲೆ ಹಣೆ! ಅದರಲ್ಲಿ ಕೆಂಡದಂತೆ ಜ್ವಲಿಸುತ್ತಿರುವ ಒಂದೇ ಕಣ್ಣು! ಅದರಲ್ಲಿ ಗೋರೋಚನವನ್ನು ಬಳಿದಂತಿರುವ ಬಿಳಿಯಾಲೆಗಳು! ಅದರಮೇಲೆ ಒಂದು ಸಣ್ಣಗುಡ್ಡದಂತೆ ಉಬ್ಬಿದ ಎವೆ! ಹೀಗೆ ಭಯಂಕರವಾಗಿ, ಪಿಂಗಳ ವರ್ಣವಾಗಿ, ವಿಸ್ತಾರವಾಗಿರುವ, ಆ ಕಣ್ಣಿನ ನೋಟವಾದರೋ ಎಷ್ಟು ದೂರದಲ್ಲಿರುವ ಸೂಕ್ಷ್ಮವಸ್ತುವನ್ನಾದರೂ, ನೋಡಿದ ಕ್ಷಣವೇ ಕಂಡುಹಿಡಿಯುವುದು! ಹೀಗೆ ಭಯಂಕರವಾದ ಒಂದು ರಾಕ್ಷಸರೂಪವು ಗೋಚರಿಸಿತು. ಅವನ ದೊಡ್ಡ ಕೋರೆದಾಡೆಗಳೂ, ತುಟಿಯಮೇಲೆ ಆಡುತ್ತಿರುವ ನೀಡಿದ ನಾಲಗೆಯೂ, ಅಗಲವಾದ ಬಾಯಿಯೂ, ನೋಡುವವರನ್ನು ನಡುಗಿಸುವಂತಿದ್ದುವು. ಅವನ ತೋಳುಗಳೆರಡೂ ಒಂದೊಂದು ಗಾವುದುದ್ದವಿರುವುವು. ಅವನು ಆ ತೋಳುಗಳನ್ನಾಡಿಸುತ್ತ, ಕೈಗೆ ಸಿಕ್ಕಿದ ಕರಡಿ, ಆನೆ, ಜಿಂಕೆ, ಸಿಂಹಗಳು, ಇವೇ ಮೊದಲಾದ ಮಹಾಮೃಗಗಳನ್ನೂ ಒಟ್ಟಿಗೆ ನುಂಗಿಬಿಡುತಿದ್ದನು. ಆ ತೋಳುಗಳನ್ನು ಅತ್ತಿತ್ತ ಬೀಸುತ್ತ, ಅವುಗಳಲ್ಲಿ ಮುಂದೆಬಂದ ಮೃಗಪಕ್ಷಿಗಳೇ ಮೊದಲಾದ ಸಮಸ್ತ ಪ್ರಾಣಿಗಳನ್ನೂ ಸಿಕ್ಕಿಸಿಕೊಂಡು, ಅವುಗಳಲ್ಲಿ ತನಗೆ ಬೇಕಾದುವುಗಳನ್ನು ಒಂದು ಕೈಯಿಂದ ಸೆಳೆದುಕೊಳ್ಳುವನು. ಬೇಡದುವನ್ನು ಮತ್ತೊಂದು ಕೈಯಿಂದ ಹೊರಗೆ ತಳ್ಳಿಬಿಡುವನು. ಈ ಘೋರ ರಾಕ್ಷಸನು ರಾಮಲಕ್ಷ್ಮಣರು ಬರುತ್ತಿರುವುದನ್ನು ನೋಡಿ, ದೂರದಿಂದಲೇ ತೋಳುಗಳನ್ನು ಬೀಸಿ, ಅವರ ದಾರಿಗೆ ಅಡ್ಡಹಾಕಿದ್ದನು. ಇದನ್ನರಿಯದ ರಾಮಲಕ್ಷ್ಮಣರಿಬ್ಬರೂ ಮುಂದೆ ಮುಂದೆ ಸಾಗಿಬರುತ್ತ, ಒಂದು ಹರದಾರಿಯ ದೂರದಲ್ಲಿ ಆ ದೊಡ್ಡ ದೇಹವನ್ನು ಕಂಡರು. ಹೀಗೆ ಅತಿ ಭಯಂಕರ ಸ್ವರೂಪದಿಂದ ತೋಳುಗಳನ್ನು ನೀಡಿ ತಲೆಯಿಲ್ಲದ ಮುಂಡದಂತಿರುವ ಆ ದೇಹವನ್ನು ನೋಡಿ, ಅವರಿಬ್ಬರೂ ಬೆಜ್ಜರಬಿದ್ದರು. ಆ ಕಬಂಧನಾದರೋ ತನ್ನ ಉದ್ದವಾದ ತೋಳುಗಳೆರಡನ್ನೂ

ಇವರಿಗೆ ಅಡ್ಡಗಟ್ಟಿ, ಆದರಲ್ಲಿ ಸಿಕ್ಕಿಸಿಕೊಂಡು, ಅವರಿಬ್ಬರನ್ನೂ ಒಟ್ಟಾಗಿ ಸೆಳೆದುಕೊಂಡನು. ರಾಮಲಕ್ಷ್ಮಣರಿಬ್ಬರೂ, ಕೈಯಲ್ಲಿ ಖಡ್ಗವನ್ನೂ ಬಲವಾದ ಬಿಲ್ಲನ್ನೂ ಹಿಡಿದು ಮಹಾತೇಜಸ್ವಿಗಳಾಗಿ ಅತಿ ಬಲಾಢ್ಯರೆನಿಸಿಕೊಂಡಿದ್ದರೂ, ಅವನ ತೋಳುಗಳ ಹಿಡಿತಕ್ಕೆ ಸಿಕ್ಕಿಬಿದ್ದಾಗ ಏನೂ ತೋರದೆ ತಬ್ಬಿಬ್ಬಾದರು. ಆದರೆ ಶೂರನಾದ ರಾಮನಾದರೋ ಮನಸ್ಸಿನಲ್ಲಿ ಅಷ್ಟಾಗಿ ಕಳವಳವಿಲ್ಲದೆ ಧೈರ್ಯದಿಂದಲೇ ಇದ್ದನು ಲಕ್ಷ್ಮಣನು ಬಾಲಬುದ್ಧಿಯುಳ್ಳವನಾದುದರಿಂದ ಆಗ ಧೈರ್ಯವನ್ನು ತಂದುಕೊಳ್ಳಲಾರದೆ ಕಳವಳಿಸುತ್ತಿದ್ದನು. ಹೀಗೆ ಅಧೈರ್ಯದಿಂದ ವ್ಯಾಕುಲಿತನಾದ ಲಕ್ಷ್ಮಣನು ರಾಮನನ್ನು ಕುರಿತು "ಅಣ್ಣಾ! ಈಗ ಮಾಡುವುದೇನು? ನಾವು ರಾಕ್ಷಸನ ಕೈಯಲ್ಲಿ ಸಿಕ್ಕಿಬಿದ್ದು ತತ್ತಳಿಸುತ್ತಿರುವೆವಲ್ಲಾ! ನಾನಂತೂ ಇವನ ಬಾಯಿಗೆ ತುತ್ತಾಗಿಬಿಡುವೆನು. ನೀನಾದರೂ ಮೆಲ್ಲಗೆ ಬಿಡಿಸಿಕೊಂಡು ಹೋಗು! ನನ್ನನ್ನು ಈ ಭೂತಕ್ಕೆ ಬಲಿಕೊಟ್ಟು ನೀನು ಹೇಗಾದರೂ ಸುಖವಾಗಿ ಓಡಿಹೋಗು. ಅಣ್ಣಾ! ಸೀತೆಗಾಗಿ ನೀನು ಚಿಂತಿಸಬೇಡ! ಶೀಘ್ರದಲ್ಲಿಯೇ ನೀನು ಅವಳನ್ನು ಹೊಂದುವೆಯೆಂದೇ ನನಗೆ ತೋರಿರುವುದು. ನೀನು ಹೇಗಾದರೂ ಜೀವದಿಂದಿದ್ದು, ನಮಗೆ ಪಿತೃಪಿತಾಮಹಪರಂಪರೆಯಾಗಿ ಬಂದ ಭೂಮಿಯನ್ನು ಪಾಲಿಸುತ್ತಿರು! ನೀನು ರಾಜ್ಯಭೋಗದಲ್ಲಿರುವಾಗ ಮಾತ್ರ ನನ್ನನ್ನು ಮರೆಯಬೇಡ! ಲಕ್ಷ್ಮಣನೆಂಬ ತಮ್ಮನೊಬ್ಬನಿದ್ದನೆಂದು ಆಗಾಗ ಸ್ಮರಿಸಿಕೊಳ್ಳಬೇಕು" ಎಂದನು. ಈ ಮಾತನ್ನು ಕೇಳಿ ರಾಮನು "ವತ್ಸನೆ ಭಯಪಡಬೇಡ! ವೀರನಾದ ನಿನ್ನಂತವನೂ ಹೀಗೆ ಭಯಪಡುವುದುಂಟೆ?" ಎಂದು ಸಮಾಧಾನಪಡಿಸಿದನು. ಇಷ್ಟರಲ್ಲಿ ಕ್ರೂರನಾದ ಕಬಂಧನು ಮೇಘದಂತೆ ಗಂಭೀರಸ್ವರದಿಂದ ಆ ರಾಮಲಕ್ಷ್ಮಣರನ್ನು ಕುರಿತು "ಎಲೈ ನೀವು ಯಾರು? ಗೂಳಿಯಂತೆ ಭುಜದ ಕಟ್ಟುಳ್ಳವರಾಗಿಯೂ, ದೊಡ್ಡ ಕತ್ತಿಯನ್ನೂ ಬಿಲ್ಲನ್ನೂ ಧರಿಸಿದವರಾಗಿಯೂ ಇರುವ ನೀವು ಈ ಘೋರಾರಣ್ಯಕ್ಕೆ ಬಂದುದೇಕೆ? ನೀವು ಇಲ್ಲಿಗೆ ಬಂದುದರಿಂದ ನನ್ನ ಬಾಯಿಗೆ ತುತ್ತಾಗಬೇಕಾಯಿತಲ್ಲಾ! ನೀವು ಈ ಕಾಡಿಗೆ ಬಂದ ಕಾರ್ಯವೇನು? ಹಸಿವಿನಿಂದ ನಾನು ಆತುರಗೊಂಡಿರುವ ವೇಳೆಗೆ ಸರಿಯಾಗಿ ನನ್ನ ಕೈಗೆ ಸಿಕ್ಕಿಬಿಟ್ಟಿರಿ! ತೀಕ್ಷ್ಣವಾದ ಕೊಂಬುಳ್ಳ ಎತ್ತುಗಳಂತೆ ನೀವು ಧನುರ್ಬಾಣಗಳನ್ನೂ, ಕತ್ತಿಗಳನ್ನೂ ಹಿಡಿದುಬಂದಿದ್ದರೂ ನನ್ನ ಬಾಯಿಗೆ ಬಿದ್ದಿರಲ್ಲಾ!

ಇನ್ನುಮೇಲೆ ನೀವು ಬದುಕಿಹೋಗುವುದು ಕಷ್ಟವು" ಎಂದನು. ದುರಾತ್ಮನಾದ ಕಬಂಧನ ಈ ಕ್ರೂರವಾಕ್ಯವನ್ನು ಕೇಳಿದಮೇಲೆ ರಾಮನ ಮನಸ್ಸಿಗೂ ಸ್ವಲ್ಪವಾಗಿ ಕಳವಳವು ತೋರಿತು. ಆಗ ರಾಮನು ಕಂದಿದ ಮುಖದಿಂದ ಲಕ್ಷ್ಮಣನನ್ನು ನೋಡಿ "ವತ್ಸನೆ! ಕಷ್ಟದ ಮೇಲೆ ಕಷ್ಟವು ಬಂದೊದಗಿತು. ಇದುವರೆಗೆ ಎಷ್ಟೋ ಅನರ್ಥಗಳನ್ನನುಭವಿಸಿದುದಾಯಿತು. ಆದರೂ ಹೇಗೋ ಬದುಕಿ ಬಂದೆವು. ಸೀತೆಯೂ ಸಿಕ್ಕಲಿಲ್ಲ! ಕೊನೆಗೆ ಪ್ರಾಣಾಂತಕರವಾದ ವಿಪತ್ತಿಗೂ ಸಿಕ್ಕಿಬಿಟ್ಟೆವಲ್ಲಾ. ಆಹಾ! ಲಕ್ಷ್ಮಣಾ! ಪ್ರಪಂಚದಲ್ಲಿ ಕಾಲದ ವೀರ್ಯವನ್ನಡಗಿಸುವುದಕ್ಕೆ ಯಾರಿಂದಲೂ ಸಾಧ್ಯವಲ್ಲ. ಅದರ ಶಕ್ತಿಯು ಸಮಸ್ತ ಭೂತಗಳಲ್ಲಿಯೂ, ನಿರರ್ಗಳವಾಗಿ ನಡೆಯುತ್ತಿರುವುದು. ಆಹಾ! ನಾವಿಬ್ಬರೂ ಈಗ ಎಂತಹ ವ್ಯಸನಕ್ಕೆ ಸಿಕ್ಕಿಬಿಟ್ಟೆವು ನೋಡಿದೆಯಾ? ಯಾವ ಪ್ರಾಣಿಗಳ ಮೇಲಾಗಲಿ, ದೈವಕ್ಕೆ ನಿರಂಕುಶವಾದ ಪ್ರವರ್ತನವಿರುವುದು. ದೈವವೆಂಬುದಕ್ಕೆ ಯಾವುದೂ ಪ್ರಯಾಸವಲ್ಲ. ಎಷ್ಟೋ ಬಲಾಢ್ಯರಾಗಿದ್ದರೂ, ಎಷ್ಟೋ ಶಸ್ತ್ರಾಸ್ತ್ರಗಳನ್ನು ಬಲ್ಲವರಾಗಿದ್ದರೂ, ಕಾಲದ ಕೈಗೆ ಸಿಕ್ಕಿದ ಮೇಲೆ, ಮಳಲಿನ ಸೇತುವೆಗಳಂತೆ ಮುರಿದು ಬೀಳುವರು" ಎಂದನು. ಸತ್ಯವಿಕ್ರಮನಾಗಿಯೂ, ಮಹಾಯಶಸ್ವಿಯಾಗಿಯೂ ಇರುವ ರಾಮನು, ಲಕ್ಷ್ಮಣನನ್ನು ಕುರಿತು ಹೀಗೆಂದು ಹೇಳಿ, ಕೊನೆಗೆ ಹೇಗೋ ತನ್ನ ಮನಸ್ಸನ್ನು ಸ್ಥಿರಪಡಿಸಿಕೊಂಡು ಧೈರ್ಯವನ್ನು ತಂದುಕೊಂಡನು.

ಇಲ್ಲಿಗೆ ಅರುವತ್ತೊಂಬತ್ತನೆಯ ಸರ್ಗವು.

---

ರಾಮಲಕ್ಷ್ಮಣರು ಕಬಂಧನ ತೋಳುಗಳನ್ನು ಕಡಿದುದು.
ಅವನಿಗೆ ಪೂರ್ವಜನ್ಮಸ್ಮೃತಿಯುಂಟಾದುದು.

ಆಗ ಕಬಂಧನು ತನ್ನ ತೋಳುಗಳೆಂಬ ಬಲೆಯಲ್ಲಿ ಸಿಕ್ಕಿಬಿದ್ದ ರಾಮಲಕ್ಷ್ಮಣರಿಬ್ಬರನ್ನೂ ಕುರಿತು, "ಎಲೈ! ಕ್ಷತ್ರಿಯ ಶ್ರೇಷ್ಠರೆ! ಇದೇಕೆ ಸುಮ್ಮನೆ ನಿಂತಿರುವಿರಿ? ಹಸಿವಿನ ಆತುರದಿಂದ ಕೊರಗುತಿದ್ದ ನನಗೆ ಆಹಾರಾರ್ಥವಾಗಿ ದೈವವೇ ಈಗ ನಿಮ್ಮಿಬ್ಬರನ್ನೂ ತಂದುಕೊಟ್ಟಿರುವುದು. ಇನ್ನು

ಮೇಲೆ ನೀವು ಬದುಕಿಹೋಗುವುದೆಂದರೇನು?" ಎಂದನು. ಇದನ್ನು ಕೇಳಿ ಲಕ್ಷ್ಮಣನು ಚಿಂತಾಕುಲಿತನಾಗಿದ್ದರೂ, ತನ್ನ ವೀರ್ಯವನ್ನುಪಯೋಗಿಸುವುದರಲ್ಲಿ ದೃಷ್ಟಿಯಿಟ್ಟು, ರಾಮನನ್ನು ಕುರಿತು ಕಾಲೋಚಿತವಾಗಿಯೂ ಹಿತವಾಗಿಯೂ ಇರುವ ಒಂದು ಮಾತನ್ನು ಹೇಳುವನು. "ಅಣ್ಣಾ! ಈ ನೀಚರಾಕ್ಷಸನು ನಿನ್ನನ್ನೂ ನನ್ನನ್ನೂ ಒಟ್ಟಾಗಿ ಸೇರಿಸಿ ಶೀಘ್ರದಲ್ಲಿ ನುಂಗಿಬಿಡಬಹುದು! ಆದುದರಿಂದ ಈಗಲೇ ನಾವು ಕತ್ತಿಗಳಿಂದ ಇವನ ಈ ದೊಡ್ಡ ತೋಳುಗಳೆರಡನ್ನೂ ಕಡಿದುಬಿಡುವೆವು. ಇವನಿಗೆ ಈ ತೋಳುಗಳೇ ಮುಖ್ಯವಾದ ಬಲವಾಗಿರುವುವು. ಇದರಮೇಲೆ ಇವನು ಬಹಳ ಭಯಂಕರ ಸ್ವರೂಪವಾಗಿಯೂ, ಮಹಾಕಾಯವುಳ್ಳವನಾಗಿಯೂ ಇರುವನು. ಇದುವರೆಗೆ ಅನೇಕ ಜನರನ್ನು ಕೊಂದು, ಈಗ ನಮ್ಮನ್ನೂ ಕೊಲ್ಲುವುದಕ್ಕಾಗಿ ಬಂದಿರುವನು. ಆದರೆ [1]ಯಜ್ಞಮಧ್ಯಕಾಲದಲ್ಲಿ ತರಲ್ಪಟ್ಟ ಅರಣ್ಯಪಶುಗಳನ್ನು ಹೇಗೆ ಕೊಲ್ಲಬಾರದೋ ಹಾಗೆ ರಾಜನು ಕಾಪಾಡಿಕೊಳ್ಳುವುದಕ್ಕೆ ಕೈಲಾಗದವರನ್ನು ಕೊಂದುಬಿಡುವುದು ಮಾತ್ರ ಉಚಿತವಲ್ಲ" ಎಂದನು. ಈ ಮಾತನ್ನು ಕೇಳಿ ಕಬಂಧನಿಗೆ ಅತ್ಯಂತ ಕೋಪವುಂಟಾಯಿತು. ಆಗಲೇ ಭಯಂಕರವಾಗಿ ಬಾಯನ್ನು ತೆರೆದುಕೊಂಡು ಅವರನ್ನು ನುಂಗಿಬಿಡಬೇಕೆಂದು ಬಂದನು. ಆಗ ದೇಶಕಾಲಗಳನ್ನು ಚೆನ್ನಾಗಿ ಬಲ್ಲ ರಾಮಲಕ್ಷ್ಮಣರಿಬ್ಬರೂ, ತಮ್ಮ ಕತ್ತಿಯನ್ನೆತ್ತಿ, ಆ ರಾಕ್ಷಸನ ಭುಜಗಳೆರಡನ್ನೂ ಕಡಿದುಬಿಟ್ಟರು. ಬಲಗಡೆಯಲ್ಲಿದ್ದ ರಾಮನು ತನ್ನ ಕತ್ತಿಯಿಂದ ಅವನ [2]ಬಲತೋಳನ್ನು ಕಡಿದನು. ಲಕ್ಷ್ಮಣನು ಎಡದ ತೋಳನ್ನು ಕಡಿದನು. ಆಗ ಕಬಂಧನು ಉಚ್ಚಸ್ವರದಿಂದ ಕೂಗುತ್ತ, ತೋಳುಮುರಿದು ಕೆಳಗೆಬಿದ್ದನು. ಆಗ ಆ ರಾಕ್ಷಸನು ಕೂಗಿದ ಕೂಗಿನಿಂದ ಭೂವ್ಯಾಕಾಶದಿಕ್ಕುವಿದಿಕ್ಕುಗಳೆಲ್ಲವೂ

---

1. ಇಲ್ಲಿ "ಕ್ರತುಮಧ್ಯೋಪನೀತಾನಾಂ ಪಶೂನಾಮಿವ" ಎಂದು ಮೂಲದಲ್ಲಿದೆ. ಮಹೇಶ್ವರತೀರ್ಥ ವ್ಯಾಖ್ಯಾನದಲ್ಲಿ "ಕ್ರತುಮಧ್ಯಾಪನೀತಾನಾಂ" ಎಂಬ ಪಾಠಾಂತರವನ್ನನುಸರಿಸಿ, ಯಜ್ಞದಿಂದ ಹೊರಗಾಗಿರುವ ಪಶುಗಳನ್ನು ಕೊಲ್ಲುವುದು ಪಾಪವೆಂದು ಅರ್ಥಾಂತರವು ವಿವರಿಸಲ್ಪಟ್ಟಿದೆ. ಈ ಪಾಠವೇ ಸರಸವೆಂದು ತೋರುತ್ತಿದೆ.

2. ಇದರಿಂದ ಲಕ್ಷ್ಮಣನು ಯಾವಾಗಲೂ ರಾಮನ ಎಡಪಕ್ಕದಲ್ಲಿಯೇ ಹೋಗುತ್ತಿದ್ದನೆಂದು ಸ್ಪಷ್ಟವಾಗುವುದು. ವಿರಾಧನ ತೋಳುಗಳನ್ನು ಕಡಿದಾಗಲೂ ಇದೇ ಕ್ರಮವು ಕಾಣಿಸಲ್ಪಟ್ಟಿರುವುದು.

ಒಟ್ಟಾಗಿ ಕೂಗಿಕೊಳ್ಳುವಂತೆ ಭಯಂಕರವಾದ ಪ್ರತಿಧ್ವನಿಯುಂಟಾಯಿತು. ಆಗ ರಾಕ್ಷಸನು ತನ್ನ ತೋಳುಗಳೆರಡೂ ಮುರಿದುಬಿದ್ದು ರಕ್ತಸೋರುವುದನ್ನು ಕಂಡು, ಬಹಳ ದೈನ್ಯದಿಂದ ಸಂಕಟಪಡುತ್ತ ರಾಮಲಕ್ಷ್ಮಣರನ್ನು ಕುರಿತು, “ಎಲೈ ವೀರರೆ? ನೀವು ಯಾರು” ಎಂದನು. ಇದನ್ನು ಕೇಳಿ ಲಕ್ಷ್ಮಣನು ರಾಮನ ಸಂಗತಿಗಳೆಲ್ಲವನ್ನೂ ವಿವರವಾಗಿ ಆ ಕಬಂಧನಿಗೆ ತಿಳಿಸಿದನು. “ಎಲೆ ರಾಕ್ಷಸನೆ! ಇವನು ಇಕ್ಷ್ವಾಕು ವಂಶದವನು. ಇವನಿಗೆ ರಾಮನೆಂದು ಹೆಸರು. ಇವನ ಹೆಸರನ್ನು ಎಲ್ಲರೂ ಕೇಳಿಬಲ್ಲರು ನಾನು ಇವನ ತಮ್ಮನು. ನನ್ನನ್ನು ಲಕ್ಷ್ಮಣನೆಂದು ಕರೆಯುವರು. ದೇವತೆಗಳಂತೆ ಮಹಾಮಹಿಮೆಯುಳ್ಳ ಈತನು ಏನೋ ಕಾರಣಾಂತರದಿಂದ ನಿರ್ಜನವಾದ ಈ ಕಾಡಿನಲ್ಲಿ ವಾಸಮಾಡುತ್ತಿರ ಬೇಕಾಯಿತು. ಈ ಸಂದರ್ಭದಲ್ಲಿ ಯಾವನೋ ರಾಕ್ಷಸನು ಇವನ ಹೆಂಡತಿ ಯನ್ನು ಕದ್ದುಕೊಂಡು ಹೋದನು. ಅವಳನ್ನು ಹುಡುಕುತ್ತ ನಾವು ಇಲ್ಲಿಗೆ ಬಂದೆವು. ಎಲೈ! ನೀನು ಯಾರು? ಹೀಗೆ ತಲೆಯಿಲ್ಲದ ಮುಂಡದಂತೆ ಆಕಾರವುಳ್ಳವನಾಗಿ ಈ ಕಾಡಿನಲ್ಲಿ ಸಂಚರಿಸುವುದೇಕೆ? ನಿನ್ನ ಎದೆಯಲ್ಲಿ ಈ ಭಯಂಕರವಾದ ಬಾಯಿಯೇನು? ನಿನ್ನ ಮೊಳಕಾಲುಗಳಿಲ್ಲದೆ ಹೀಗೆ ನೆಲದ ಮೇಲೆ ಉರುಳಿಕೊಂಡು ಸಂಚರಿಸುವುದಕ್ಕೆ ಕಾರಣವೇನು?” ಎಂದನು. ಈ ಮಾತನ್ನು ಕೇಳಿದೊಡನೆ ಕಬಂಧನಿಗೆ ಪೂರ್ವದಲ್ಲಿ ತನಗೆ ಇಂದ್ರನು ಹೇಳಿದ್ದ ಮಾತು ಸ್ಮರಣೆಗೆ ಬಂದಿತು. ಅವನಿಗೆ ಬಹಳ ಸಂತೋಷವೂ ಉಂಟಾಯಿತು. ಆಗ ರಾಮಲಕ್ಷ್ಮಣರೊಡನೆ “ಎಲೈ ಪುರುಷಶ್ರೇಷ್ಠರೆ! ನಿಮಗೆ ಸ್ವಾಗತವು! ಭಾಗ್ಯವಶದಿಂದ ನಾನು ನಿಮ್ಮನ್ನು ನೋಡುವಂತಾಯಿತು! ನೀವು ಈ ನನ್ನ ಭುಜಗಳನ್ನು ಛೇದಿಸಿದುದೂ ನನ್ನ ಪರಮಭಾಗ್ಯವಲ್ಲದೆ ಬೇರೆಯಲ್ಲ! ನನಗೆ ಈ ವಿಕಾರರೂಪವು ಹೇಗುಂಟಾಯಿತೆಂದು ಕೇಳಿದಿರಲ್ಲವೆ? ಇದು ನನ್ನ ಅವಿನಯ ದಿಂದಲೇ ಪ್ರಾಪ್ತವಾಯಿತು. ಆ ಕಥೆಯನ್ನೂ ನಿಮಗೆ ವಿವರವಾಗಿ ತಿಳಿಸು ವೆನು ಕೇಳಿರಿ!” ಎಂದನು.

ಇಲ್ಲಿಗೆ ಎಪ್ಪತ್ತನೆಯ ಸರ್ಗವು.

---

ಕಬಂಧನು ತನ್ನ ಪೂರ್ವವೃತ್ತಾಂತವನ್ನು ತಿಳಿಸಿ ತನ್ನ ಶಾಪವಿಮೋಚನೆಗಾಗಿ ತನ್ನ ದೇಹವನ್ನು ದಹಿಸಬೇಕೆಂದು ಬೇಡಿದುದು.

"ಎಲೈ ಮಹಾಬಾಹುವಾದ ರಾಮನೆ! ಪೂರ್ವದಲ್ಲಿ ನಾನು ಅತ್ಯದ್ಭುತವಾದ ದಿವ್ಯರೂಪದಿಂದಲೇ ಇದ್ದೆನು. ನನ್ನ ಆ ರೂಪವನ್ನು ಹೀಗೆಂದೂಹಿಸುವುದಕ್ಕೂ ಸಾಧ್ಯವಿಲ್ಲದಂತಿತ್ತು. ಆ ನನ್ನ ರೂಪವು ಮೂರುಲೋಕಗಳಲ್ಲಿಯೂ ಖ್ಯಾತಿಯನ್ನು ಹೊಂದಿದ್ದಿತು. ದೇವೇಂದ್ರನ ಮತ್ತು ಚಂದ್ರಸೂರ್ಯರ ದಿವ್ಯ ದೇಹದಂತೆ ನನ್ನ ದೇಹವು ಅದ್ಭುತ ತೇಜಸ್ಸಿನಿಂದ ಹೊಳೆಯುತಿತ್ತು. ಆದರೇನು? ನಾನು ನನ್ನ ಸ್ವೇಚ್ಛೆಯಿಂದ ಈ ಭಯಂಕರಸ್ವರೂಪವನ್ನು ತೋರಿಸುತ್ತ, ಜನಗಳನ್ನು ಹೆದರಿಸುವುದಕ್ಕಾರಂಭಿಸಿದೆನು. ಕಾಡಿನಲ್ಲಿ ಸುತ್ತುತ್ತ ಅಲ್ಲಲ್ಲಿ ಋಷಿಗಳನ್ನೂ ಭಯಪಡಿಸುತಿದ್ದೆನು. ಒಮ್ಮೆ ಸ್ಥೂಲಶಿರಸ್ಸೆಂಬ ಮಹರ್ಷಿಯೊಬ್ಬನು ಕಾಡಿನಲ್ಲಿ ಸಮಿತ್ತು, ದರ್ಭೆ, ಕಂದಮೂಲಗಳು ಇವೇ ಮೊದಲಾದುವನ್ನು ಸಂಗ್ರಹಿಸುವುದಕ್ಕಾಗಿ ಬರುತ್ತಿದ್ದನು. ಅವನನ್ನೂ ನಾನು ನನ್ನ ಘೋರರೂಪದಿಂದ ಅಂಜಿಸಿದೆನು. ಆಗ ಅವನು ನನ್ನಮೇಲೆ ಕೋಪಿಸಿ ನನ್ನನ್ನು ನೋಡಿ ಕ್ರೂರವಾಕ್ಯದಿಂದ "ಎಲೆ ನೀಚನೆ! ಲೋಕನಿಂದಿತವಾದ ಈ ಘೋರರೂಪವೇ ನಿನಗೆ ನಿತ್ಯವಾಗಿರಲಿ!" ಎಂದು ಶಪಿಸಿದನು. ಆಗ ನಾನು ಭಯಪಟ್ಟು, ಕೋಪಗೊಂಡಿದ್ದ ಆ ಋಷಿಯನ್ನು ಕುರಿತು ದೈನ್ಯದಿಂದ "ಈ ಶಾಪಕ್ಕೆ ಹೇಗೆ ವಿಮೋಚನ"ವೆಂದು ಪ್ರಾರ್ಥಿಸಿ ಕೇಳಿದೆನು. ಆಗ ಋಷಿಯು ನನ್ನಲ್ಲಿ ಪ್ರಸನ್ನನಾಗಿ ಕರುಣೆಯಿಂದ ಕೂಡಿ "ರಾಮಲಕ್ಷ್ಮಣರು ಯಾವಾಗ ನಿನ್ನ ತೋಳುಗಳನ್ನು ಕಡಿದು ನಿನ್ನ ಈ ದೇಹವನ್ನು ನಿರ್ಜನವಾದ ಕಾಡಿನಲ್ಲಿ ದಹಿಸಿಬಿಡುವರೋ, ಆಗ ನೀನು ನಿನ್ನ ಮೊದಲಿನ ರೂಪವನ್ನು ಹೊಂದುವೆ" ಎಂದು ಅನುಗ್ರಹಿಸಿದನು. [1]ನಾನು ದನುವೆಂಬುವನ ಮಗನು. ಮೊದಲು ನನ್ನ ದೇಹ

---

1. ಇಲ್ಲಿ "ಶ್ರಿಯಾ ವಿರಾಜಿತಂ ಪುತ್ರಂ ದನೋಸ್ತ್ವಂ ವಿದ್ಧಿ ಲಕ್ಷ್ಮಣ" ಎಂದು ಮೂಲದಲ್ಲಿದೆ. ಇದಕ್ಕೆ ಸಂಪದ್ವಿಶಿಷ್ಟನಾದ ದನುವಿನ ಕುಮಾರನೆಂದು ಅರ್ಥಮಾಡಲ್ಪಟ್ಟಿದೆ. ಆದರೆ ಕಿಷ್ಕಿಂಧಾಕಾಂಡದಲ್ಲಿ "ದನುರ್ನಾಮ ಶ್ರಿಯಃ ಪುತ್ರಶ್ಶಾಪಾದ್ರಾಕ್ಷಸತಾಂ ಗತಃ" ಶ್ರೀಯೆಂಬವಳ ಮಗನಾದ ದನುವು, ಶಾಪದಿಂದ ರಾಕ್ಷಸತ್ವವನ್ನು ಹೊಂದಿದನು ಎಂದು ಕಾಣಿಸಲ್ಪಟ್ಟಿರುವುದರಿಂದ ಇಲ್ಲಿಯೂ "ಶ್ರಿಯೋ ವಿರಾಜಿತಂ ಪುತ್ರಂ" ಎಂಬ ಪಾಠವೇ ಉಚಿತವೆಂದು ತೋರುವುದು.

ಕಾಂತಿಯೇ ಬೇರೆಯಾಗಿತ್ತು. ಆರ್ಯ ಲಕ್ಷ್ಮಣಾ! ನನಗೆ ಹಾಗೆ ಋಷಿಶಾಪ ದಿಂದ ಬಂದ ಘೋರರೂಪವು ಇಷ್ಟು ವಿಕಾರಹೊಂದುವುದಕ್ಕೂ ಬೇರೆ ಕಾರಣ ವುಂಟು! ಅದನ್ನೂ ಹೇಳುವೆನು ಕೇಳು. ಒಮ್ಮೆ ಯುದ್ಧದಲ್ಲಿ ನಾನು ಇಂದ್ರನ ಕೋಪಕ್ಕೆ ಸಿಕ್ಕಿ ಈ ದುರವಸ್ಥೆಯನ್ನು ಹೊಂದಿದೆನು. ನಾನು ಪೂರ್ವದಲ್ಲಿ ಕ್ರೂರ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿದೆನು. ಅವನು ನನ್ನಲ್ಲಿ ಪ್ರಸನ್ನ ನಾಗಿ ನನಗೆ ದೀರ್ಘಾಯುಸ್ಸನ್ನು ಕೊಟ್ಟನು. ಆಗಲೇ ನನಗೊಂದು ಹೆಮ್ಮೆ ಯುಂಟಾಯಿತು. "ದೀರ್ಘಾಯುಸ್ಸನ್ನು ಪಡೆದುಬಂದಿರುವ ನನ್ನನ್ನು ದೇವೇಂದ್ರ ನಾದರೂ ಏನುಮಾಡಬಲ್ಲನು?" ಎಂಬ ಕೊಬ್ಬಿನಿಂದ ಒಮ್ಮೆ ಯುದ್ಧದಲ್ಲಿ ಇಂದ್ರನನ್ನಿದಿರಿಸಿದೆನು. ಆಗ ಇಂದ್ರನು ಕೋಪಗೊಂಡು ತನ್ನ ಕೈಯಲ್ಲಿ ಹಿಡಿದಿದ್ದ ನೂರೇಣುಗಳುಳ್ಳ ವಜ್ರಾಯುಧದಿಂದ ನನ್ನನ್ನು ಅಪ್ಪಳಿಸಿದನು. ಅದರಿಂದ ನನ್ನ ದೇಹವು ನಜ್ಜುಗುಜ್ಜಾಗಿ, ನನ್ನ ತಲೆಯೂ ಮೊಳಕಾಲುಗಳೂ ದೇಹದಲ್ಲಿ ಹುದುಗಿಹೋದುವು. ಆಗ ನಾನು ದೇವೇಂದ್ರನನ್ನು ದೈನ್ಯದಿಂದ ಪ್ರಾರ್ಥಿಸಿಕೊಂಡೆನು. ಅವನಿಗೆ ನನ್ನಲ್ಲಿ ಕರುಣೆ ಹುಟ್ಟಿತು. ಆಗ ಅವನು ನನ್ನನ್ನು ಕೊಂದುಬಿಡದೆ, ನನ್ನನ್ನು ನೋಡಿ "ನಿನಗೆ ದೀರ್ಘಾಯುಸ್ಸನ್ನು ಕೊಟ್ಟ ಬ್ರಹ್ಮನ ಮಾತು ತಪ್ಪಲಾರದು. ಹೀಗೆಯೇ ಬದುಕು ಹೋಗು" ಎಂದನು. ಆದರೆ ನನಗೆ ತಲೆಕಾಲುಗಳೆರಡೂ ದೇಹದಲ್ಲಿ ಒಂದಾಗಿ ಅದುಮಿ ಹೋಗಿದ್ದುವು. ತಿನ್ನುವುದಕ್ಕೆ ಬಾಯಿಲ್ಲದೆ, ನಡೆಯುವುದಕ್ಕೆ ಕಾಲಿಲ್ಲದೆ, ನಾನು ಬದುಕಿರುವುದು ಹೇಗೆ? ಆಹಾರವಿಲ್ಲದೆ ಎಷ್ಟು ದಿನಗಳು ಜೀವಿಸಬಹುದು? ಆಗ ನಾನು ಇದೇ ವಿಷಯವನ್ನು ಇಂದ್ರನಿಗೆ ತಿಳಿಸಿ, ಅವನನ್ನು ಅನೇಕ ವಿಧದಲ್ಲಿ ಪ್ರಾರ್ಥಿಸಿದೆನು. ಆಗ ಇಂದ್ರನು ನನಗೆ ನೂರು ಗಾವುದದುದ್ದವುಳ್ಳ ಈ ತೋಳು ಗಳೆರಡನ್ನೂ ಅನುಗ್ರಹಿಸಿದನು: ಹೊಟ್ಟೆಯಲ್ಲಿ ಬಾಯಿಯನ್ನೂ ಕೊಟ್ಟನು. ಹರಿತವಾದ ಈ ಕೋರೆಹಲ್ಲುಗಳನ್ನೂ ಅವನೇ ನನಗೆ ಅನುಗ್ರಹಿಸಿಕೊಟ್ಟಿರು ವನು. ಆಗ ಅವನು ಅನುಗ್ರಹಿಸಿಕೊಟ್ಟ ಉದ್ದವಾದ ತೋಳುಗಳಿಂದಲೇ ನಾನು ಈ ಕಾಡಿನಲ್ಲಿ ಸಂಚರಿಸುವ ಸಿಂಹ, ಹುಲಿ, ಜಿಂಕೆ ಮುಂತಾದುವುಗಳನ್ನು ಹಿಡಿ ದೆಳೆದು ತಿನ್ನುತ್ತಿರುವೆನು. ಎಲೈ ವೀರರೇ! ಆಗಲೇ ಇಂದ್ರನು ನನ್ನನ್ನು ಕುರಿತು "ಯಾವಾಗ ರಾಮನು ಲಕ್ಷ್ಮಣನೊಡಗೂಡಿ ಬಂದು ನಿನ್ನೊಡನೆ ಹೋರಾಡಿ, ನಿನ್ನ ತೋಳುಗಳನ್ನು ಕತ್ತರಿಸುವನೋ, ಆಗ ನೀನು ಸ್ವರ್ಗವನ್ನು

ಸೇರಬಹುದು” ಎಂದು ಅನುಗ್ರಹಿಸಿರುವನು. ಎಲೈ ರಾಜಶ್ರೇಷ್ಠನಾದ ರಾಮನೆ! ಅಂದಿನಿಂದಲೂ ನಾನು ಅದೇ ದೇಹದಿಂದ ಈ ಕಾಡಿನಲ್ಲಿ ಕಣ್ಣಿಗೆ ಬಿದ್ದ ವಸ್ತುಗಳನ್ನೆಲ್ಲಾ ಹಿಡಿಯುತ್ತಿರುವೆನು. ಹೀಗೆ ಹಿಡಿಯುವುದರಿಂದ ಯಾವಾಗ ಲಾದರೂ ಒಮ್ಮೆ ರಾಮನು ಸಿಕ್ಕಿಬೀಳಬಹುದೆಂಬ ಆಸೆಯಿಂದಲೇ ನಾನು ಈ ದೇಹತ್ಯಾಗಕ್ಕಾಗಿ ಶ್ರಮಪಟ್ಟು ಸುತ್ತುತ್ತಿರುವೆನು. ಅಯ್ಯಾ, ನೀನೇ ರಾಮನೆ? ನಿನಗೆ ಮಂಗಳವಾಗಲಿ! ನೀನಲ್ಲದೆ ಬೇರೊಬ್ಬನೂ ನನ್ನನ್ನು ಕೊಲ್ಲಲಾರನು. ಈ ತತ್ವವನ್ನೇ ಆ ಋಷಿಯೂ ನನಗೆ ತಿಳಿಸಿರುವನು. ಎಲೈ ಪುರುಷಶ್ರೇಷ್ಠನೆ! ಮೊದಲು ನೀವಿಬ್ಬರೂ ನನಗೆ ಅಗ್ನಿಸಂಸ್ಕಾರವನ್ನು ಮಾಡಿದರೆ, ಆಗ ನಾನು ಕೃತಾರ್ಥನಾಗುವೆನು. ನನ್ನ ಕಷ್ಟವೂ ನೀಗುವುದು. ಆಮೇಲೆ ನಾನು ನಿಮಗೆ ಬುದ್ಧಿಸಹಾಯವನ್ನೂ ಮಾಡುವೆನು. ನಿಮಗೆ ಮಿತ್ರನನ್ನೂ ತೋರಿಸಿ ಕೊಡುವೆನು” ಎಂದನು. ದನುಪುತ್ರನಾದ ಕಬಂಧನು ಹೀಗೆಂದು ಹೇಳಲು, ಧರ್ಮಾತ್ಮನಾದ ರಾಮನು ಸಮೀಪದಲ್ಲಿದ್ದ ಲಕ್ಷ್ಮಣನೂ ಕೇಳುವಂತೆ “ಅಯ್ಯಾ ಕಬಂಧನೆ! ನಾನೂ ನನ್ನ ತಮ್ಮನಾದ ಈ ಲಕ್ಷ್ಮಣನೂ ಜನಸ್ಥಾನವನ್ನು ಬಿಟ್ಟು ಬೇರೊಂದು ಕಡೆಗೆ ಹೋಗಿದ್ದಾಗ, ನಾವು ಯಾರೂ ಇಲ್ಲದ ಸಮಯ ವನ್ನೇ ಕಾದಿದ್ದ ರಾವಣನು, ನನ್ನ ಪತ್ನಿಯಾದ ಸೀತೆಯನ್ನೆತ್ತಿಕೊಂಡು ಹೋದನು. ಆ ರಾಕ್ಷಸನ ಹೆಸರನ್ನು ಮಾತ್ರ ನಮ್ಮಾಪ್ತನಾದ ಜಟಾಯುವು ನಮಗೆ ತಿಳಿಸಿದನು. ಅವನ ರೂಪವಾಗಲಿ, ಅವನ ಶಕ್ತಿಯಾಗಲಿ, ಅವನ ಮಹಿಮೆಯಾಗಲಿ, ನನಗಾಗಲಿ, ನಮ್ಮ ಪುರಜನಗಳಿಗಾಗಲಿ ಸ್ವಲ್ಪವಾದರೂ ತಿಳಿಯದು! ಆ ದುಃಖದಿಂದಲೇ ನಾವಿಬ್ಬರೂ ಹೀಗೆ ದಿಕ್ಕುಗೆಟ್ಟು ಪಾಡುಪಡು ತ್ತಿರುವೆವು. ಇಷ್ಟಾದರೂ ನಾವು ನಮ್ಮ ಕೈಲಾದಮಟ್ಟಿಗೆ ಪರೋಪಕಾರವನ್ನು ಮಾಡಬಲ್ಲೆವು. ಮುಖ್ಯವಾಗಿ ಈಗ ನಮಗುಂಟಾಗಿರುವ ದುಸ್ಥಿತಿಯನ್ನು ನೋಡಿದರೆ ಯಾರಿಗಾದರೂ ಮರುಕವು ಹುಟ್ಟದಿರಲಾರದು. ನೀನೂ ನಮ್ಮಲ್ಲಿ ದಯೆಯನ್ನು ತೋರಿಸಬೇಕಾದುದೇ ಸಹಜವು. ಅಯ್ಯಾ! ನೀನು ಹೆದರಬೇಡ. ಈಗ ನಾವು ಈ ಕಾಡಿನಲ್ಲಿ ಆಗಾಗ ಆನೆಗಳು ಮುರಿದಿಕ್ಕಿ ಚೆನ್ನಾಗಿ ಒಣಗಿ ಬಿದ್ದಿರುವ ಕಟ್ಟಿಗೆಗಳನ್ನಾರಿಸಿ ತಂದು, ಒಂದು ದೊಡ್ಡ ಹಳ್ಳದಲ್ಲಿ ನಿನ್ನನ್ನು ಸುಟ್ಟುಬಿಡುವೆವು. ನೀನು ಮಾತ್ರ ಸೀತೆಯನ್ನು ಯಾರು ಎಲ್ಲಿಗೆ ಕದ್ದುಕೊಂಡು ಹೋಗಿರುವರೆಂಬುದನ್ನು ಹೇಳಬೇಕು! ನೀನು ನಿಜಸ್ಥಿತಿಯನ್ನು ಚೆನ್ನಾಗಿ

ತಿಳಿದಿದ್ದ ಪಕ್ಷದಲ್ಲಿ ನಮಗೆ ಇದೊಂದು ಮಹೋಪಕಾರವನ್ನು ಮಾಡು ” ಎಂದನು. ಪ್ರೇಮಪೂರ್ವಕವಾದ ರಾಮನ ಈ ಮಾತನ್ನು ಕೇಳಿ ಕಬಂಧನು, ಅವನನ್ನು ಕುರಿತು ಹೇಳುವನು. “ ಅಯ್ಯಾ ರಾಮನೆ ! ಈಗ ನನಗೆ ಅಂತಹ ದಿವ್ಯ ಜ್ಞಾನವೂ ಇಲ್ಲ ! ನಾನು ಸೀತೆಯನ್ನೂ ಕಾಣೆನು. ನೀನು ನನ್ನನ್ನು ಮೊದಲು ಸುಟ್ಟುಬಿಟ್ಟರೆ, ಆಮೇಲೆ ನಾನು ನಿಜರೂಪವನ್ನು ಹೊಂದಿ ಆಗ ನಿನಗೇನಾದರೂ ವಾಕ್ಸಹಾಯವನ್ನು ಮಾಡಬಲ್ಲೆನು. ನಾನಾಗಿ ಸೀತೆಯ ಸ್ಥಿತಿಯನ್ನು ತಿಳಿಯ ಲಾರದಿದ್ದರೂ ಅದನ್ನು ತಿಳಿದವರನ್ನಾದರೂ ನಿನಗೆ ತಿಳಿಸಬಹುದು. ನನ್ನ ದೇಹ ವನ್ನು ಸುಡುವವರೆಗೂ ನನಗೆ ಆ ಶಕ್ತಿಯೂ ಇಲ್ಲವು. ಅದಕ್ಕೆ ಮೊದಲು ನಿನ್ನ ಪತ್ನಿಯಾದ ಸೀತೆಯನ್ನು ಕದ್ದೋಡಿದ ಮಹಾವೀರ್ಯವುಳ್ಳ ಆ ರಾಕ್ಷಸ ನನ್ನು ತಿಳಿಯುವುದು ಸಾಧ್ಯವಲ್ಲ. ಶಾಪದೋಷದಿಂದ ನನ್ನ ಜ್ಞಾನಶಕ್ತಿಯೇ ಹಾಳಾಗಿಹೋಗಿರುವುದು ! ನನ್ನ ತಪ್ಪಿನಿಂದಲೇ ಹೀಗೆ ನಾನು ವಿಕಾರರೂಪ ವನ್ನು ಹೊಂದಿರುವೆನು. ರಾಮಾ ! ಅದೋ ! ಆಗಲೇ ಸುತ್ತಿ ಬಳಲಿದ ಕುದುರೆ ಗಳುಳ್ಳ ಸೂರ್ಯನು ಮುಳುಗುವಷ್ಟರೊಳಗಾಗಿ, ನೀನು ನನ್ನನ್ನು ಹಳ್ಳದಲ್ಲಿ ಹಾಕಿ ವಿಧ್ಯುಕ್ತವಾಗಿ ದಹನಮಾಡಿಬಿಡು ! ನೀನು ಶಾಸ್ತ್ರೋಕ್ತವಾಗಿ ಈ ಕಾರ್ಯವನ್ನು ನಡೆಸಿ ಮುಗಿಸಿದಮೇಲೆ ನಾನು ನಿಜರೂಪದಿಂದ ಬಂದು, [1]ಆ ಸೀತಾವೃತ್ತಾಂತವನ್ನು ತಿಳಿದವನಾವನೆಂಬುದನ್ನು ಮಾತ್ರ ನಿನಗೆ ಹೇಳುವೆನು. ಅವನು ನ್ಯಾಯವಾದ ನಡತೆಯುಳ್ಳವನಾದುದರಿಂದ ನೀನು ಅವನೊಡನೆ ಸ್ನೇಹವನ್ನು ಬೆಳೆಸು ! ಅವನೂ ನಿನಗೆ ಸಹಾಯವನ್ನು ಮಾಡುವನು. ಮೂರು ಲೋಕಗಳಲ್ಲಿಯೂ ಅವನಿಗೆ ತಿಳಿಯದುದಿಲ್ಲ ! ಯಾವುದೋ ಒಂದು ಕಾರಣಕ್ಕಾಗಿ ಅವನು ಪೂರ್ವದಲ್ಲಿ ಸಮಸ್ತಲೋಕಗಳನ್ನೂ ಸುತ್ತಿಬಂದಿರುವನು ” ಎಂದನು.

ಇಲ್ಲಿಗೆ ಎಪ್ಪತ್ತೊಂದನೆಯ ಸರ್ಗವು.

---

1. ಇಲ್ಲಿ ಕಬಂಧನು ಸುಗ್ರೀವನನ್ನು ಮಾತ್ರ ತಿಳಿದಿರುವನೇ ಹೊರತು ರಾವಣನನ್ನು ತಿಳಿದವನಲ್ಲ. ಆದುದರಿಂದಲೇ ಮುಂದೆ “ ಯಾವುದೋ ಒಂದು ಕಾರಣಕ್ಕಾಗಿ ” ಎಂದರೆ, ಅಣ್ಣನೊಡನೆ ವೈರವನ್ನು ತಂದುಕೊಂಡು ಮೂರುಲೋಕಗಳನ್ನೂ ಸುಗ್ರೀವನು ತಿರುಗು ತಿದ್ದುದಾಗಿ ಹೇಳಿರುವನು. ಹೀಗೆ ಸುಗ್ರೀವನನ್ನು ಚೆನ್ನಾಗಿ ತಿಳಿದಿದ್ದರೂ, ಈ ವಿಷಯ ವನ್ನು ಈಗಲೇ ರಾಮನಿಗೆ ತಿಳಿಸದಿದ್ದುದೇಕೆಂದರೆ, ರಾಮನು ತನ್ನನ್ನು ದಹಿಸುವುದಕ್ಕೆ ಮೊದಲೇ ಇದನ್ನು ತಿಳಿಸಿಬಿಟ್ಟರೆ, ಆಮೇಲೆ ಸೀತಾನ್ವೇಷಣದ ಆತುರದಲ್ಲಿ ರಾಮನಿಗೆ ಈ ತನ್ನ ಕುತ್ಸಿತಶರೀರವನ್ನು ದಹಿಸುವುದಕ್ಕೆ ಮನಸ್ಸು ಬಾರದೆ ಹೋಗುವುದೋ ಎಂಬ ಶಂಕೆಯಿಂದ, ಮೊದಲು ಈ ವಿಷಯವನ್ನು ತಿಳಿಸಲಿಲ್ಲವೆಂದು ಗ್ರಹಿಸಬೇಕು.

{ ಕಬಂಧನು ರಾಮನಿಂದ ಸಂಸ್ಕೃತನಾಗಿ, ನಿಜರೂಪವನ್ನು ಹೊಂದಿ, ರಾಮನಿಗೆ ತಕ್ಕ ಮಿತ್ರನೊಬ್ಬನನ್ನು ತಿಳಿಸಿದುದು. }

ಕಬಂಧನ ಈ ಮಾತನ್ನು ಕೇಳಿ ರಾಮಲಕ್ಷ್ಮಣರಿಬ್ಬರೂ ಬೆಟ್ಟದಲ್ಲಿ ಒಂದು ಹಳ್ಳವನ್ನು ಮಾಡಿ ಅದರಲ್ಲಿ ಬೆಂಕಿಯನ್ನಿಟ್ಟರು. ಲಕ್ಷ್ಮಣನು ಕಾಡಿನಲ್ಲಿ ಬಿದ್ದಿದ್ದ ಒಣಗಿದ ಕಟ್ಟಿಗೆಗಳನ್ನು ಯಥೇಚ್ಛವಾಗಿ ಸಂಗ್ರಹಿಸಿ ತಂದು ನಾಲ್ಕು ಕಡೆಗಳಲ್ಲಿಯೂ ಇಟ್ಟು ಚೆನ್ನಾಗಿ ಚಿತೆಯನ್ನೊಡ್ಡಿದನು. ಅದು ಜಾಜ್ವಲ್ಯಮಾನವಾಗಿ ಉರಿಯುತ್ತಿತ್ತು. ಆ ಕಬಂಧನ ದೊಡ್ಡ ಕಳೇಬರವು ತುಪ್ಪದ ಮುದ್ದೆಯಂತಿದ್ದರೂ, ವಿಶೇಷವಾಗಿ ಕೊಬ್ಬು ಬೆಳೆದಿದ್ದುದರಿಂದ ಅಗ್ನಿಯಲ್ಲಿ ಆ ದೇಹವು ಸ್ವಲ್ಪಸ್ವಲ್ಪವಾಗಿ ಬೇಯುತ್ತ ಬಂದಿತು. ಸ್ವಲ್ಪ ಹೊತ್ತಿನೊಳಗಾಗಿಯೇ ಆ ಚಿತೆಯಿಂದ ಒಂದು ದಿವ್ಯಾಕೃತಿಯು ಹೊರಟಿತು. ಕೊಳೆಯಿಲ್ಲದ ಶುಭ್ರವಾದ ಬಟ್ಟೆಯನ್ನುಟ್ಟು, ದಿವ್ಯಮಾಲಿಕೆಯನ್ನು ಧರಿಸಿ, ಹೊಗೆಯಿಲ್ಲದ ಬೆಂಕಿಯಂತೆ ಪ್ರಕಾಶಿಸುತ್ತ, ಆ ಕಬಂಧನೇ ಹೀಗೆ ದಿವ್ಯಾಕೃತಿಯಿಂದ ಮೇಲೆದ್ದು ಬಂದನು. ಅವನ ಮುಖದಲ್ಲಿ ಒಂದುಬಗೆಯಾದ ಪ್ರಸನ್ನತೆಯೂ ತುಳುಕುತಿತ್ತು. ಹೀಗೆ ಅವನು ದಿವ್ಯ ತೇಜಸ್ಸಿನಿಂದಲೂ, ದಿವ್ಯಭೂಷಣಗಳಿಂದಲೂ ಕೂಡಿ, ಹಸನ್ಮುಖವುಳ್ಳವನಾಗಿ ಹೊರಗೆ ಬಂದು ನಿಲ್ಲುವಷ್ಟರಲ್ಲಿ, ಅಲ್ಲಿಗೆ [1]ಹಂಸಗಳಿಂದ ಕಟ್ಟಲ್ಪಟ್ಟು, ಪ್ರಭೆಯಿಂದ ಹತ್ತು ದಿಕ್ಕುಗಳನ್ನೂ ಬೆಳಗುವಂತಿದ್ದ ಒಂದು ದಿವ್ಯ ವಿಮಾನವು ಬಂದು ಸಿದ್ಧವಾಯಿತು. ಚಿತೆಯಿಂದ ಮೇಲೆದ್ದು ಬಂದ ಕೂಡಲೆ ಕಬಂಧನು ಅದನ್ನೇರಿ ಕುಳಿತನು. ಆ ಕ್ಷಣವೇ ವಿಮಾನವೂ ಮೇಲೆ ಹಾರಿತು. ಹೀಗೆ ಹೋಗುವಾಗ ಆ ಕಬಂಧನು ಅಂತರಿಕ್ಷದಲ್ಲಿದ್ದಂತೆಯೇ ರಾಮನನ್ನು ನೋಡಿ "ರಾಮಾ! ನಿನಗೆ ಸೀತೆಯು ಹೇಗೆ ಸಿಕ್ಕುವಳೆಂಬುದನ್ನು ನಿಜಸ್ಥಿತಿಯಿಂದ ಹೇಳುವೆನು ಕೇಳು! ಲೋಕದಲ್ಲಿ [2]ಯಾವ ಕಾರ್ಯಸಾಧನೆಗಾದರೂ ಆರು ಉಪಾಯಗಳುಂಟು. ಅವುಗಳಿಂದಲೇ

1. ಇಲ್ಲಿ ಹಂಸಗಳಿಂದ ಕಟ್ಟಲ್ಪಟ್ಟ ವಿಮಾನವೆಂದು ಹೇಳಿರುವುದರಿಂದ, ಆ ಕಬಂಧನು ರಾಮನ ಕೈಯಿಂದ ದಹನವನ್ನು ಹೊಂದಿದ ಪುಣ್ಯವಿಶೇಷಕ್ಕಾಗಿ ಅವನಿಗೆ ಬ್ರಹ್ಮಲೋಕ ಪ್ರಾಪ್ತಿಯಾಗುವುದೆಂದು ಸೂಚಿತವು.

2. ಇಲ್ಲಿ "ಷಡ್ಯುಕ್ತಯಃ" ಎಂದು ಮೂಲವು. ಯುಕ್ತಿಗಳೆಂದರೆ ಉಪಾಯಗಳೆಂದರ್ಥವು. ಆರುಬಗೆಯ ಉಪಾಯಗಳಾವುವೆಂದರೆ: ಸಂಧಿ, ವಿಗ್ರಹ, ಯಾನ,

ರಾಜರು ತಮ್ಮ ತಮ್ಮ ಕಾರ್ಯಗಳನ್ನು ವಿಮರ್ಶಿಸುವರು. ದುರವಸ್ಥೆಯನ್ನು ಹೊಂದಿದವನು ತನ್ನಂತೆ ದುರವಸ್ಥೆಯಲ್ಲಿರುವವನೊಡನೆಯೂ ಸೇರಿ ಸ್ವಕಾರ್ಯವನ್ನು ಸಾಧಿಸಿಕೊಳ್ಳಬೇಕು. ರಾಮಾ! ನೀನು ಭಾರ್ಯೆಯನ್ನಗಲಿ ವ್ಯಸನದಲ್ಲಿರುವುದರಿಂದ ನೀವಿಬ್ಬರೂ ಕಷ್ಟಪಡುತ್ತಿರುವಿರಿ! ನಿಮ್ಮಂತೆಯೇ ಕಷ್ಟಪಡುವವನೊಬ್ಬನಲ್ಲಿ ಅವಶ್ಯವಾಗಿ ಸ್ನೇಹವನ್ನು ಬಳೆಸಬೇಕು! ಹಾಗೆ ಮಾಡದಿದ್ದರೆ ನಿನ್ನ ಕಾರ್ಯವು ಸಿದ್ಧಿಸುವುದೆಂದು ನನಗೇನೋ ತೋರಲಿಲ್ಲ! ಈಗ ನಿನಗೆ ಅಂತವನಾರೆಂಬುದನ್ನು ಹೇಳುವೆನು ಕೇಳು! ಸುಗ್ರೀವನೆಂಬ ವಾನರನೊಬ್ಬನಿರುವನು. ಅವನಿಗೆ ಇಂದ್ರಪುತ್ರನಾದ ವಾಲಿಯೆಂಬವನು ಅಣ್ಣನು. ಏನೋ ಒಂದು ಕಾರಣಾಂತರದಿಂದ ವಾಲಿಯು ಕೋಪಗೊಂಡು ತಮ್ಮನಾದ ಸುಗ್ರೀವನನ್ನು ರಾಜ್ಯದಿಂದೋಡಿಸಿಬಿಟ್ಟನು. ಅದಕ್ಕಾಗಿ ಅದೋ! ಅಲ್ಲಿ ಮುಂದೆ ಕಾಣುವ ಪಂಪಾಸರೋವರದ ತೀರದಲ್ಲಿ ಋಶ್ಯಮೂಕವೆಂಬ ಒಂದು ಬೆಟ್ಟದಮೇಲೆ ಬೇರೆ ನಾಲ್ಕುಮಂದಿ ಕಪಿಗಳೊಡನೆ ಆ ಸುಗ್ರೀವನು ವಾಸಮಾಡುತ್ತಿರುವನು. ಅವನು ಬಹಳ ವೀರ್ಯವುಳ್ಳವನು. ಮಹಾ ತೇಜಸ್ವಿಯು. ಮಾತಿಗೆ ತಪ್ಪುವವನಲ್ಲ. ಬಹಳ ವಿನಯ ಸ್ವಭಾವವುಳ್ಳವನು. ಬಹಳ ಬುದ್ಧಿಶಾಲಿಯಾಗಿಯೂ, ಗೌರವವುಳ್ಳವನಾಗಿಯೂ ಇರುವನು. ಯಾವ ಕಾರ್ಯವನ್ನೂ ಸಾಧಿಸಬಲ್ಲ ಸಾಹಸಿಯು. ಅವನು ವಿಶೇಷವಾದ ಬಲಪರಾಕ್ರಮವುಳ್ಳವನಾಗಿದ್ದರೂ, ರಾಜ್ಯದ ವಿಚಾರ

---

ಆಸನ, ದ್ವೈಧೀಭಾವ, ಸಮಾಶ್ರಯಗಳೆಂಬ ಷಡ್ಗುಣಗಳೇ ಉಪಾಯಗಳೆಂದು ಹೇಳಲ್ಪಟ್ಟವೆ. ಇದರಿಂದ ಸುಗ್ರೀವನೊಡನೆ ಸಂಧಿಯನ್ನು ಮಾಡಿ, ಅವನ ಆಶ್ರಯದಿಂದ ಕಾರ್ಯಸಾಧನೆಯನ್ನು ಮಾಡಬೇಕೆಂದು ಭಾವವು. ಅಥವಾ ಪಾರ್ಥಸಾರಥಿಮಿಶ್ರರು ತಮ್ಮ ಶಾಸ್ತ್ರದೀಪಿಕೆಯಲ್ಲಿ ಯುಕ್ತಿಶಬ್ದಕ್ಕೆ ಪ್ರಮಾಣಗಳೆಂದೂ ಅರ್ಥಮಾಡಿರುವುದರಿಂದ, ಇಲ್ಲಿ ಷಡ್ಯುಕ್ತಿಗಳೆಂದರೆ, ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅಭಾವಗಳೆಂಬ ಆರು ಪ್ರಮಾಣಗಳೆಂದೂ ಅರ್ಥಾಂತರವನ್ನು ಮಾಡಬಹುದು. ಈ ಪ್ರಮಾಣಗಳಿಂದಲೇ ಒಂದೊಂದನ್ನೂ ನಿಶ್ಚಯಿಸಬೇಕೆಂದು ಮುಖ್ಯಾರ್ಥವು. ಇವುಗಳಲ್ಲಿ "ದಶಾಭಾಗಗತೋಹೀನಸ್ತ್ವಂ" ಎಂಬುದರಿಂದ ಪ್ರತ್ಯಕ್ಷಪ್ರಮಾಣವನ್ನೂ, "ಯತ್ಕೃತೇ ವ್ಯಸನಂ ಪ್ರಾಪ್ತಂ ತ್ವಯಾ" ಇತ್ಯಾದಿಗಳಿಂದ ಅನುಮಾನಪ್ರಮಾಣವನ್ನೂ, "ತದವಶ್ಯಂ ತ್ವಯಾ ಕಾರ್ಯಸ್ಸಸುಹೃತ್" ಎಂಬುದರಿಂದ ಶಬ್ದಪ್ರಮಾಣವನ್ನೂ, "ಅಕೃತ್ವಾ ನಹಿ ತೇ ಸಿದ್ಧಿಮಹಂ ಪಶ್ಯಾಮಿ ಚಿಂತಯನ್" ಎಂಬುದರಿಂದ ಅರ್ಥಾಪತ್ತಿಯನ್ನೂ ತೋರಿಸಿದುದಾಗಿ ಗ್ರಾಹ್ಯವು.

ವಾಗಿ ವಾಲಿಯು ಆತನನ್ನು ಓಡಿಸಿಬಿಟ್ಟಿರುವನು. ಅವನು ನಿನಗೆ ಸಹಾಯಕ ನಾಗುವನು. ಕೇವಲ ಕಾರ್ಯಾರ್ಥಿಯಾಗಿಯೇ ಸಹಾಯಮಾಡುವನೆಂದೆಣಿಸ ಬೇಡ! ನಿಜವಾದ ಮಿತ್ರನಾಗಿಯೂ ಇರುವನು. ಸೀತೆಯನ್ನು ಹುಡುಕುವುದರಲ್ಲಿ ನಿನಗೆ ಅವನ ಸಹಾಯವು ಅತ್ಯವಶ್ಯವು. ಇನ್ನುಮೇಲೆ ನೀನು ಮನಸ್ಸಿನಲ್ಲಿರುವ ಶೋಕವನ್ನು ಬಿಟ್ಟುಬಿಡು. ಇದುವರೆಗೆ ನಡೆದುದು ಹೋಗಲಿ! ನಡೆಯ ಬೇಕಾದುದು ನಡೆದೇ ತೀರಬೇಕಲ್ಲವೆ? ಅದನ್ನು ತಪ್ಪಿಸುವುದು ಯಾರಿಂದಲೂ ಸಾಧ್ಯವಲ್ಲ. ಎಲೈ ಇಕ್ಷ್ವಾಕುವಂಶೋತ್ತಮನೆ! ಕಾಲಗತಿಯನ್ನು ಯಾರು ತಾನೇ ಮೀರಬಲ್ಲರು? ರಾಮಾ! ಅದೆಲ್ಲವೂ ಹೋಗಲಿ! ನೀನು ಶೀಘ್ರದಲ್ಲಿಯೇ ಇಲ್ಲಿಂದ ಹೊರಡು. ಮಹಾಬಲಾಢ್ಯನಾದ ಆ ಸುಗ್ರೀವನನ್ನು ಕಂಡು ಆತನಲ್ಲಿ ಸ್ನೇಹವನ್ನು ಬೆಳೆಸು. ಅಗ್ನಿಸಾಕ್ಷಿಕವಾಗಿ ಆತನಲ್ಲಿ ನೀನು ಪ್ರತಿಜ್ಞೆಮಾಡಿಸಿ ನಿನ್ನಲ್ಲಿ ಯಾವಾಗಲೂ ದ್ರೋಹವನ್ನೆಣಿಸದಂತೆ ನಂಬಿಕೆಯನ್ನುಂಟುಮಾಡಿ' ಕೊಳ್ಳುವನಾಗು. ಆ ಸುಗ್ರೀವನು ವಾನರರಿಗೆಲ್ಲಾ ರಾಜನೆನಿಸಿಕೊಂಡಿರುವನು. ಅವನನ್ನು ಯಾವಾಗಲೂ, ಯಾವ ಕಾರಣದಿಂದಲೂ ತಿರಸ್ಕರಿಸಿ ಅವಮಾನಿಸ ಬೇಡ! ಅವನು ಉಪಕಾರಸ್ಮರಣೆಯುಳ್ಳವನು. ಕಾಲೋಚಿತವಾದ ರೂಪ ವನ್ನು ಧರಿಸತಕ್ಕ ಶಕ್ತಿಯೂ ಅವನಿಗುಂಟು. ನಿನ್ನಿಂದ ಅವನಿಗೂ ಸಹಾಯ ವಾಗಬೇಕಾಗಿರುವುದು. ಅವನ ಕಾರ್ಯವನ್ನು ನಡೆಸಿಕೊಡುವುದರಲ್ಲಿಯೂ ನೀವಿಬ್ಬರೂ ಸಮರ್ಥರಾಗಿರುವಿರಿ! ಅವನ ಉದ್ದೇಶವನ್ನು ನೀವು ಈಡೇರಿಸಿ ಕೊಟ್ಟರೂ, ಅಥವಾ ಮುಂದೆ ನಡೆಸಿಕೊಡುವುದಾದರೂ ಆತನು ನಿಮ್ಮ ಕಾರ್ಯವನ್ನು ನಡೆಸಿಬಿಡುವನು. ಅವನು ಋಕ್ಷರಜಸ್ಸೆಂಬುವನ ಮಗನು. ವಾಲಿಯ ಭಯದಿಂದ ಆ ಪಂಪಾಸರೋವರದ ಎಲ್ಲೆಯಲ್ಲಿ ಮಾತ್ರವೇ ಸುತ್ತು ತ್ತಿರುವನು. ಅವನು ಸೂರ್ಯನಿಗೆ ಔರಸಪುತ್ರನು. ಅಣ್ಣನಾದ ವಾಲಿಯೊಡನೆ ಬಹಳವಾಗಿ ವೈರವನ್ನು ಬೆಳೆಸಿಬಿಟ್ಟಿರುವನು. ರಾಮಾ! ಋಶ್ಯಮೂಕದಲ್ಲಿರುವ ಆ ಕಪಿಯ ಬಳಿಗೆ ನೀನು ಈಗಲೇ ಹೋಗಿ ಅವನೊಡನೆ ಅಗ್ನಿಯನ್ನು ಮಾತ್ರವೇ ಅಲ್ಲದೆ, ಆಯುಧವನ್ನೂ ಅವನ ಕೈಯಿಂದ ಹಿಡಿಸಿ, ಪ್ರತಿಜ್ಞಾಪೂರ್ವಕವಾಗಿ ಅವನ ಸ್ನೇಹವನ್ನು ಬಳೆಸಬೇಕು. ಆ ಕಪಿಶ್ರೇಷ್ಠನು ಎಷ್ಟು ಕಷ್ಟವಾದರೂ ಸಮಸ್ತ ಪ್ರದೇಶಗಳನ್ನೂ ಹುಡುಕಿಬರಬಲ್ಲನು. ರಾಕ್ಷಸರ ಗುಂಪಿನಲ್ಲಿಯೂ ಕೂಡ ಬಹಳ ಚಾತುರ್ಯದಿಂದ ಹೋಗಿ ಅವರ ರಹಸ್ಯವನ್ನು ತಿಳಿಯಬಲ್ಲನು.

ಈ ಲೋಕದಲ್ಲಿ ಅವನಿಗೆ ತಿಳಿಯದ ವಿಷಯವೇ ಇಲ್ಲ. ಸೂರ್ಯನ ಕಾಂತಿಯು ಎಲ್ಲಿಯವರೆಗೆ ಬೆಳಗುತ್ತಿರುವುದೋ, ಅಲ್ಲಿಯವರೆಗೂ ಅವನು ಸುತ್ತಿಬಂದು. ಅಲ್ಲಲ್ಲಿನ ವಿಷಯಗಳನ್ನು ಕಂಡುಕೊಳ್ಳುವನು. ಅವನು ಯಾವ ಗುಹೆಗಳನ್ನಾಗಲಿ, ಯಾವ ಗಿರಿದುರ್ಗಗಳನ್ನಾಗಲಿ, ಯಾವ ಗುಹೆಗಳನ್ನಾಗಲಿ ವಾನರರೊಡನೆ ಸುತ್ತಿಬಂದು ಸೀತೆಯಿರುವ ಸ್ಥಳವನ್ನು ಕಂಡುಹಿಡಿಯುವನು. ಮಹಾಕಾಯವುಳ್ಳ ತನ್ನ ಕಡೆಯ ವಾನರರನ್ನೂ ಅಲ್ಲಲ್ಲಿ ಕಳುಹಿಸುವನು. ದಿಕ್ಕುಗಳನ್ನೆಲ್ಲಾ ಹುಡುಕಿಸುವನು. ರಾಮಾ! ಆ ಸುಗ್ರೀವನು ನಿನ್ನ ವಿರಹದುಃಖದಿಂದ ರಾವಣನ ಮನೆಯಲ್ಲಿ ತಪಿಸುತ್ತಿರುವ ಆ ಸೀತೆಯನ್ನು ಕಂಡುಹಿಡಿಯುವುದರಲ್ಲಿ ಸಂದೇಹವೇ ಇಲ್ಲ. ಮುಖ್ಯವಾಗಿ ಒಂದೇ ಮಾತಿನಲ್ಲಿ ಹೇಳುವೆನು ಕೇಳು. ನಿನ್ನ ಪತ್ನಿಯಾದ ಸೀತೆಯು ಮೇರುಪರ್ವತದ ಶಿಖರದ ಕೊನೆಯಲ್ಲಿರಲಿ! ಅಥವಾ ಪಾತಾಳಲೋಕದ ಕೆಳಗೆ ಬಚ್ಚಿಡಲ್ಪಟ್ಟಿರಲಿ! ವಾನರೇಂದ್ರನಾದ ಆ ಸುಗ್ರೀವನು ಅಲ್ಲಿನ ರಾಕ್ಷಸರನ್ನು ಕೊಂದು ಸೀತೆಯನ್ನು ತಂದು ನಿನ್ನ ಕೈಗೊಪ್ಪಿಸದೆ ಬಿಡಲಾರನೆಂದು ತಿಳಿ" ಎಂದನು.

ಇಲ್ಲಿಗೆ ಎಪ್ಪತ್ತೆರಡನೆಯ ಸರ್ಗವು.

---

ಕಬಂಧನು ರಾಮನಿಗೆ ಸುಗ್ರೀವನಿರುವ ಸ್ಥಳವನ್ನೂ, ಅಲ್ಲಿಗೆ ಹೋಗುವ ದಾರಿಯನ್ನೂ ತಿಳಿಸಿ ಅಂತರ್ಧಾನ ಹೊಂದಿದುದು.

ಕಾರ್ಯಜ್ಞನಾದ ಕಬಂಧನು ಹೀಗೆ ರಾಮನಿಗೆ ಸೀತೆಯನ್ನು ಹೊಂದುವ ಉಪಾಯವನ್ನು ತಿಳಿಸಿ, ಪುನಃ ಆತನನ್ನು ಕುರಿತು "ರಾಮಾ! ಇದೋ! ಈ ಪಶ್ಚಿಮದಿಕ್ಕಿನಲ್ಲಿ ಪುಷ್ಪಿತಗಳಾದ ಗಿಡಗಳು ಕಾಣುವುವು ನೋಡು. ಇದೇ ಅನುಕೂಲವಾದ ದಾರಿಯು. ಆ ವೃಕ್ಷಗಳ ಸಮೂಹವು ಎಷ್ಟು ಮನೋಹರವಾಗಿರುವುದು ನೋಡಿದೆಯಾ? ನೇರಳೆ, ಹಲಸು, ಆಲ, ನಾಗಕೇಸರಿ, ಅರಳಿ, ಮಾವು, ಕರ್ಣಿಕಾರ, ತಿಲಕ, ನಕ್ತಮಾಲ, ಅಸುಗೆ, ಕಡವು, ಪುಷ್ಪಿತಗಳಾದ ಕಣಿಗಿಲೆ, ಭಲ್ಲಾತಕಿ, ರಕ್ತಚಂದನ, ಬೇವು, ಮುಂತಾದ ಗಿಡಗಳು ದಟ್ಟವಾಗಿ ಬೆಳೆದಿರುವು

ದನ್ನು ನೋಡಿದೆಯಾ ? ಇದೇ ದಾರಿಯನ್ನು ಹಿಡಿದು ನೀವು ಹೋಗಬೇಕು. ಅಲ್ಲಲ್ಲಿ ಅಡ್ಡಲಾಗಿ ಬೆಳೆದಿರುವ ಮರಗಳನ್ನೇರಿ, ಅಥವಾ ಆ ಮರಗಳನ್ನು ಕಿತ್ತುಹಾಕಿ ದಾರಿಯನ್ನು ಮಾಡಿಕೊಂಡು ನೀವು ಮುಂದೆಮುಂದೆ ಹೋಗಬೇಕು. ಅಲ್ಲಿರುವ ಹಣ್ಣುಗಳು ಅಮೃತದಂತೆ ರುಚಿಯಾಗಿರುವುವು. ನಿಮಗೆ ಬೇಕಾದ ಹಣ್ಣುಗಳನ್ನು ಯಥೇಚ್ಛವಾಗಿ ಭುಜಿಸಬಹುದು. ಈ ಮರದ ತೋಪನ್ನು ದಾಟಿ ಹೋದರೆ ಅದರ ಮುಂದೆ ಪುಷ್ಪಿತವಾದ ಗಿಡಗಳುಳ್ಳ ಒಂದು ತೋಟವು ಕಾಣಿಸುವುದು. ಅದು ನಂದನವನದಂತೆಯೇ ಅತಿಮನೋಹರವಾಗಿರುವುದು. ಉತ್ತರಕುರುದೇಶಗಳಂತೆ ಸರ್ವಕಾಮಸಮೃದ್ಧವಾಗಿರುವುದು. ಅಲ್ಲಿನ ಯಾವ ಮರಗಳನ್ನು ನೋಡಿದರೂ ಅವುಗಳ ಹಣ್ಣುಗಳಿಂದ ಜೇನು ತೊಟ್ಟಿಕ್ಕುತ್ತಿರುವುದು. ಕುಬೇರನ ಚೈತ್ರರಥವೆಂಬ ಉದ್ಯಾನದಲ್ಲಿರುವಂತೆ ಅಲ್ಲಿ ಸರ್ವಕಾಲಗಳಲ್ಲಿಯೂ, ಸಮಸ್ತ ಋತುಗಳೂ ಕಾಣಿಸುವುವು. ಅಲ್ಲಿನ ಒಂದೊಂದು ಮರವೂ ಹಣ್ಣುಗಳ ಭಾರದಿಂದ ಜಗ್ಗುತ್ತಿರುವುವು. ಅಲ್ಲಿನ ಮರದ ಕೊಂಬೆಗಳು ಸರ್ವತೋಮುಖವಾಗಿ ವಿಸ್ತರಿಸಿ ಹಬ್ಬಿರುವುವು. ಅಲ್ಲಿನ ವೃಕ್ಷಗಳೆಲ್ಲವೂ ಮೇಘಗಳಂತೆಯೂ, ಪರ್ವತಗಳಂತೆಯೂ ದೊಡ್ಡ ಆಕಾರದಿಂದ ಬೆಳೆದಿರುವುವು. ಆ ವನದಲ್ಲಿಯೂ ನೀವು ಹಿಂದಿನಂತೆಯೇ ಮರಗಳನ್ನೇರಿಯಾಗಲಿ ಆ ಮರಗಳನ್ನುರುಳಿಸಿಯಾಗಲಿ ಮುಂದೆ ಸಾಗಬೇಕು. ಅಲ್ಲಲ್ಲಿ ನಿನಗಾಗಿ ಲಕ್ಷ್ಮಣನು ತಂದುಕೊಡತಕ್ಕ ಹಣ್ಣುಗಳು ಅಮೃತದಂತೆಯೇ ಇರುವುವು. ಹೀಗೆ ಅತಿಮನೋಹರವಾದ ಆ ವನಪ್ರದೇಶಗಳೆಲ್ಲವನ್ನೂ ನೋಡುತ್ತಾ ನೀವು ಮುಂದೆ ಮುಂದೆ ಹೋಗಿರಿ! ಹೀಗೆ ಬೆಟ್ಟದಿಂದ ಬೆಟ್ಟಕ್ಕೂ, ವನದಿಂದ ವನಕ್ಕೂ ಮುಂದೆ ಸಾಗಿಹೋದರೆ, ಪಂಪೆಯೆಂಬ ಒಂದಾನೊಂದು ಪುಷ್ಕರಿಣಿಯು ಕಾಣುವುದು. ಆ ಸರೋವರದ ರಾಮಣೀಯಕವನ್ನು ಅಷ್ಟಿಷ್ಟೆಂದು ವರ್ಣಿಸಲು ಸಾಧ್ಯವಲ್ಲ. ಅದರ ತೀರದಲ್ಲಿ ಸ್ವಲ್ಪವಾದರೂ ಮಣ್ಣೆಂಬುದೇ ಕಾಣುವುದಿಲ್ಲ. ಅದರ ನೀರಿನಲ್ಲಿ ಸ್ವಲ್ಪವಾದರೂ ಪಾಚಿಯಿಲ್ಲ. ಇಳಿಯುವ ಘಟ್ಟಗಳು ಸ್ವಲ್ಪವೂ ಜಾರಲಿಲ್ಲದೆ ಮಟ್ಟವಾಗಿರುವುವು. ತಾವರೆಗಳೂ ನೈದಿಲೆಗಳೂ ಬೇಕಾದಷ್ಟು ಬೆಳೆದಿರುವುವು. ಅಲ್ಲಿ ಹಂಸಗಳೂ, ಕಾರಂಡವಗಳೂ, ಕ್ರೌಂಚಗಳೂ, ಕುರರಪಕ್ಷಿಗಳೂ ಕಿವಿಗಿಂಪಾದ ಸ್ವರದಿಂದ ಕೂಗುತ್ತಾ ನೇತ್ರಾನಂದಕರವಾಗಿ ಸಂಚರಿಸುತ್ತಿರುವುವು. ಅವು ಇದುವರೆಗೆ ಮನುಷ್ಯರಿಂದ ಸಾವೆಂಬುದನ್ನೇ ತಿಳಿಯವು. ಆದುದರಿಂದ ಮನುಷ್ಯರನ್ನು

ನೋಡಿ ಸ್ವಲ್ಪವೂ ಹೆದರುವುದಿಲ್ಲ. ಬೆಣ್ಣೆಯಮುದ್ದೆಯಂತಿರುವ, ಸ್ಥೂಲದೇಹವುಳ್ಳ ಆ ಪಕ್ಷಿಗಳನ್ನು ಹೊಡೆದು ನಿಮ್ಮ ಆಹಾರಾರ್ಥವಾಗಿ ಉಪಯೋಗಿಸಿಕೊಳ್ಳಬಹುದು. ಆ ಸರೋವರದಲ್ಲಿ ರೋಹಿತಗಳೆಂದೂ, ವಕ್ರತುಂಡಗಳೆಂದೂ, ನಡಮೀನಗಳೆಂದೂ ಕರೆಯಲ್ಪಡುವ ಉತ್ತಮವಾದ ಬೇರೆ ಮತ್ಸ್ಯಜಾತಿಗಳಿರುವುವು. ಅವುಗಳಿಗೆ ಚರ್ಮವಿಲ್ಲ, ರೆಕ್ಕೆಯಿಲ್ಲ. ಮಾಂಸ ತುಂಬಿ ಚೆನ್ನಾಗಿ ಕೊಬ್ಬಿ ಬೆಳೆದಿರುವುವು. ಅವುಗಳ ದೇಹದಲ್ಲಿ ಅಷ್ಟಾಗಿ ಮುಳ್ಳುಗಳೂ ಇಲ್ಲವು. ಹೀಗೆ ಭಕ್ಷಣಯೋಗ್ಯವಾದ ಮೇಲಾದ ಮತ್ಸ್ಯಗಳನ್ನು ಲಕ್ಷ್ಮಣನು ಪಕ್ವಮಾಡಿ ನಿನಗೆ ತಂದುಕೊಡುವನು. ನೀವಿಬ್ಬರೂ ಯಥೇಚ್ಛವಾಗಿ ಆ ಮತ್ಸ್ಯಗಳನ್ನು ಭಕ್ಷಿಸಬಹುದು. ಆಮೇಲೆ ಲಕ್ಷ್ಮಣನು ಆ ಸರೋವರದಿಂದ ಕಮಲದ ವಾಸನೆಯುಳ್ಳುದಾಗಿಯೂ, ಸುಖಶೀತಲವಾಗಿಯೂ, ಆರೋಗ್ಯಕರವಾಗಿಯೂ, ಸ್ಫಟಿಕದಂತೆ ಸ್ವಚ್ಛವಾಗಿಯೂ ಇರುವ ತಿಳಿನೀರನ್ನು ತಾವರೆಯೆಲೆಯಲ್ಲಿ ತುಂಬಿ ತಂದು ನಿನಗೊಪ್ಪಿಸುವನು. ಎಲೈ ಪುರುಷಶ್ರೇಷ್ಠನೆ! ಹೀಗೆ ನಿನ್ನ ಅನ್ನಪಾನಾದಿಗಳಿಗೆಲ್ಲಾ ಅಲ್ಲಿ ಎಷ್ಟೋ ಅನುಕೂಲವಾಗಿರುವುದು. ಇದಲ್ಲದೆ ಅಲ್ಲಿನ ಪರ್ವತಗುಹೆಗಳಲ್ಲಿ ಮಲಗಿದ್ದು, ಕಾಡಿನಲ್ಲಿ ತಿರುಗುತ್ತಾ, ನೀರಿನ ಆಸೆಗಾಗಿ ಆ ಪಂಪಾಸರೋವರಕ್ಕೆ ಬಂದು, ಎತ್ತಿನಂತೆ ಗಂಭೀರಧ್ವನಿಯಿಂದ ಗರ್ಜಿಸುತ್ತಿರುವ ಅಂದವಾದ ಕಾಡುಹಂದಿಗಳನ್ನು ನೋಡಬಹುದು. ರಾಮಾ! ಮುಖ್ಯವಾಗಿ ನೀನು ಸಂಜೆಯಲ್ಲಿ ಸುತ್ತಿಬರುತ್ತಾ ಅಲ್ಲಿನ ಪುಷ್ಪಿತಗಳಾದ ಗಿಡಗಳನ್ನೂ, ಆ ಸರೋವರದ ಶೀತಲವಾದ ನೀರನ್ನೂ ನೋಡಿದಮಾತ್ರಕ್ಕೆ ನಿನ್ನ ಸಮಸ್ತ ದುಃಖವೂ ಮರೆತುಹೋಗುವುದು. ಮತ್ತು ಅಲ್ಲಿ ಹೂಗಳಿಂದ ತುಂಬಿದ ತಿಲಕ, ನಕ್ತಮಾಲ ಮುಂತಾದ ವೃಕ್ಷಗಳನ್ನೂ, ಅರಳಿದ ತಾವರೆ, ನೈದಿಲೆ ಮೊದಲಾದುವುಗಳನ್ನೂ ನೋಡುತಿದ್ದ ಪಕ್ಷದಲ್ಲಿ ನಿನಗೆ ಎಷ್ಟೋ ಆಪ್ಯಾಯನವುಂಟಾಗುವುದು. ಆ ವನಕ್ಕೆ ಬಂದು ಹೂಗಳನ್ನು ಕುಯ್ಯುವವರೇ ಇಲ್ಲ. ಅಲ್ಲಿನ ಹೂಗಳು ಬಾಡುವುದೂ ಇಲ್ಲ. ಕಳಿತುಹೋಗುವುದಿಲ್ಲ. ಉದುರಿಬೀಳುವುದೂ ಇಲ್ಲ. ಯಾವಾಗಲೂ ಹೊಸಹೂಗಳಂತೆಯೇ ಇರುವುವು. ಅಲ್ಲಿ ಬಹಳ ಉತ್ತಮ ಸಮಾಧಿಯುಳ್ಳ ಮತಂಗಮಹರ್ಷಿಯ ಶಿಷ್ಯರಾದ ತಪಸ್ವಿಗಳನೇಕರಿದ್ದರು. ಅವರು ತಮ್ಮ ಗುರುವಿಗಾಗಿ ಆಗಾಗ ವನ್ಯಪದಾರ್ಥಗಳನ್ನು ಸಂಗ್ರಹಿಸಿ ತರುತ್ತ ಬಳಲಿದಾಗ ಅವರ ದೇಹದಿಂದ ಅಲ್ಲಲ್ಲಿ ಬೆವರಿನ ಹನಿಗಳು ಬಿದ್ದು ಅವುಗಳೇ

ಹೂಗಳಾದುವು. ಆ ಸ್ವೇದಬಿಂದುಗಳೇ ಗಾಳಿಯಿಂದ ಹಾರಿ ಮರಗಳ ಮೇಲೆ ಬಿದ್ದು ಪುಷ್ಪಗಳಾಗಿ ಪರಿಣಮಿಸಿರುವುದರಿಂದ, ಅವುಗಳಿಗೆ ಎಂದಿಗೂ ನಾಶವಿಲ್ಲ ! ಅವರ ತಪೋಮಹಿಮೆಯಿಂದ ಆ ಹೂಗಳು ಬಾಡದೆ ಒಂದೇರೀತಿಯಲ್ಲಿರುವುವು. ರಾಮಾ ! ಆ ಮತಂಗಶಿಷ್ಯರೆಲ್ಲರೂ ಸ್ವರ್ಗಸ್ಥರಾಗಿಬಿಟ್ಟರು. ಅವರ ಪರಿಚಾರಿಕೆಯರಲ್ಲಿ ಶಬರಿಯೆಂಬ ಹೆಸರುಳ್ಳವಳೊಬ್ಬಳು ಮಾತ್ರ ಚಿರಂಜೀವಿಯಾಗಿ ಈಗಲೂ ಆ ಆಶ್ರಮದಲ್ಲಿ ಸನ್ಯಾಸಿನಿಯಾಗಿರುವಳು. ಯಾವಾಗಲೂ ಗುರುಶುಶ್ರೂಷಾ ಧರ್ಮದಲ್ಲಿಯೇ ನಿರತಳಾಗಿರುವ ಆ ಶಬರಿಯು ಸರ್ವಭೂತನಮಸ್ಕೃತನಾಗಿಯೂ ದೇವೇಂದ್ರಸಮಾನನಾಗಿಯೂ ಇರುವ ನಿನ್ನ ದರ್ಶನಕ್ಕಾಗಿಯೇ ಇರುವಳು. ನಿನ್ನನ್ನು ನೋಡಿ ಅವಳು ದಿವ್ಯಲೋಕವನ್ನು ಹೊಂದುವಳು ರಾಮಾ ! ನೀನು ಪಂಪಾಸರೋವರದ ಪಶ್ಚಿಮತೀರಕ್ಕೆ ಹೋದರೆ, ಅಲ್ಲಿ ಸರ್ವೋತ್ತಮವಾಗಿಯೂ, ಇತರರಿಗೆ ಅದೃಶ್ಯವಾಗಿಯೂ, ಏಕಾಂತವಾಗಿಯೂ ಇರುವ ಆ ಶಬರ್ಯಾಶ್ರಮವನ್ನು ನೋಡಬಹುದು. ಅದರ ಸುತ್ತಿನ ವನದಲ್ಲಿಯೂ, ಅದರ ಮುಂದಿರುವ ಋಶ್ಯಮೂಕಪರ್ವತದಲ್ಲಿಯೂ ಬಗೆಬಗೆಯಾದ ಕಾಡಾನೆಗಳು ತುಂಬಿರುವುವು. ಆದರೇನು ? ಅಲ್ಲಿನ ಆನೆಗಳು ಆ ಆಶ್ರಮಕ್ಕೆ ಮಾತ್ರ ಕಾಲಿಡಲಾರವು. ಏಕೆಂದರೆ, ಆ ಆಶ್ರಮವು ಮತಂಗಮಹಾಮುನಿಯಿಂದಲೇ ನಿರ್ಮಿತವಾದುದು. (ಅವನ ಪ್ರಭಾವದಿಂದಲೇ ಆನೆಗಳು ಅಲ್ಲಿಗೆ ಬರಲಾರವು.) ನಂದನ ಚೈತ್ರರಥಗಳೆಂಬ ದೇವೋದ್ಯಾನಗಳಿಗೆ ಸಮಾನವಾಗಿ, ಬಗೆಬಗೆಯಾದ ಪಕ್ಷಿಸಮೂಹದಿಂದ ಕೂಡಿದ ಆ ವನದಲ್ಲಿ ನೀನು ನಿನ್ನ ಈ ದುಃಖಗಳೆಲ್ಲವನ್ನೂ ಮರೆತು ಸುಖವಾಗಿ ವಿಹರಿಸಬಹುದು. ಆ ಪಂಪಾಸರೋವರದ ಮುಂದೆಯೇ ಋಶ್ಯಮೂಕ ಪರ್ವತವಿರುವುದು. ಅಲ್ಲಿ ಪುಷ್ಪಿತಗಳಾದ ಗಿಡಗಳು ಅನೇಕವಾಗಿರುವುವು. ಅದರ ಸುತ್ತಲೂ ಮರಿಯಾನೆಗಳು ಕಾವಲಿರುವುದರಿಂದ ಅದನ್ನೇರಿಹೋಗುವುದು ಬಹಳ ಕಷ್ಟವು. ಪೂರ್ವಕಾಲದಲ್ಲಿ ಬ್ರಹ್ಮದೇವನು ಮುಂದೆ ಒಂದಾನೊಂದು ಕಾಲದಲ್ಲಿ ಈ ಪರ್ವತಕ್ಕೆ ಪ್ರಾಶಸ್ತ್ಯವುಂಟಾಗುವುದಾಗಿ ಅನುಗ್ರಹಿಸಿದ್ದನು. ಅದರಿಂದ ಈಗ ಆ ಬೆಟ್ಟದಮೇಲೆ ಮಲಗಿದವರು ಹಣವು ಸಿಕ್ಕಿದಂತೆ ಕನಸನ್ನು ಕಂಡರೆ ಎಚ್ಚರಗೊಂಡಾಗಲೂ ಆ ಹಣವು ಅವರ ಕೈಯಲ್ಲಿ ನಿಂತಿರುವುದು. ದುರಾಚಾರವುಳ್ಳ ಪಾಪಾತ್ಮನಿಗೆ ಅದನ್ನೇರುವುದೇ ಸಾಧ್ಯವಲ್ಲ. ಅಂತವನು ಒಂದುವೇಳೆ ಪ್ರಯಾಸದಿಂದ ಏರಿಹೋಗಿ ಮಲಗಿದರೂ, ಅಲ್ಲಿನ ರಾಕ್ಷಸರು

ಮಲಗಿರುವಾಗಲೇ ಅವನನ್ನು ಹಿಡಿದು ಕೊಂದುಬಿಡುವರು. ಮತಂಗಾಶ್ರಮದ ಸುತ್ತಿನ ಕಾಡುಗಳಲ್ಲಿರುವ ಮರಿಯಾನೆಗಳು ಆಗಾಗ ಪಂಪಾತೀರಕ್ಕೆ ಬಂದು ಕ್ರೀಡಿಸುತ್ತಿರುವುವು. ಋಶ್ಯಮೂಕವು ಅದಕ್ಕೆ ಬಹಳ ಸಮೀಪದಲ್ಲಿರುವುದರಿಂದ ಅಲ್ಲಿಗೆ ಆ ಆನೆಯ ಕೂಗು ಯಾವಾಗಲೂ ಕೇಳಿಸುತ್ತಿರುವುದು. ಮೇಘ ದಂತಿರುವ ಮಹಾಗಜಗಳು ಆಗಾಗ ಅಲ್ಲಿ ಒಂದಕ್ಕೊಂದು ಹೋರಾಡಿ, ಗಾಯ ಪಟ್ಟು ರಕ್ತಮಯವಾದ ದೇಹದಿಂದ ಚದರಿ ಅಲ್ಲಲ್ಲಿ ಓಡುತ್ತಿರುವುವು. ಆ ವನ ದಲ್ಲಿರುವ ಆನೆಗಳೆಲ್ಲವೂ ನಿರ್ಮಲವಾದ ಮತ್ತು ಆರೋಗ್ಯಕರವಾದ ನೀರಿನ ಆಸೆಯಿಂದ ಆ ಪಂಪಾಸರಸ್ಸಿಗೆ ಬಂದು, ಅಲ್ಲಿ ನೀರು ಕುಡಿದು, ಸುಖವಾಗಿ ಹೊರಟುಹೋಗುವುವು. ನೀನು ಅಲ್ಲಿನ ಕರಡಿಗಳನ್ನೂ, ಹುಲಿಗಳನ್ನೂ ನೀಲ ಮಣಿಯಂತೆ ಹೊಳೆಯುತ್ತಿರುವ ಕರೀ ಜಿಂಕೆಗಳನ್ನೂ ನೋಡುತ್ತಿದ್ದರೆ, ನಿನ್ನ ಮನಸ್ಸಿಗೆ ದುಃಖವೇ ತೋರದು. ರಾಮಾ! ಆ ಪರ್ವತದ ಮೇಲೆ ಒಂದು ದೊಡ್ಡ ಕಲ್ಲುಬಂಡೆಯಲ್ಲಿ ವಿಸ್ತಾರವಾದ ಗುಹೆಯೊಂದುಂಟು. ಅದರೊಳಗೆ ಪ್ರವೇಶಿಸುವುದು ಬಹಳ ಕಷ್ಟವು. ಆ ಗುಹೆಯ ಪೂರ್ವದಿಕ್ಕಿನ ಬಾಗಿಲಲ್ಲಿ ಸ್ವಚ್ಛವಾದ ನೀರುಳ್ಳ ಒಂದು ದೊಡ್ಡ ಮಡುವಿರುವುದು. ಅದರ ತೀರದಲ್ಲಿ ಫಲಮೂಲಗಳು ಸಮೃದ್ಧವಾಗಿ ಬೆಳೆದಿರುವುವು. ಅದರ ಸುತ್ತಲೂ ಬಗೆಬಗೆ ಯಾದ ಮೃಗಗಳು ವಾಸಮಾಡುತ್ತಿರುವುವು. ಆ ಮಡುವಿನ ನೀರು ಬಹಳ ಶೀತಲವಾಗಿರುವುದು. ಅದರ ಪಕ್ಕದ ಗುಹೆಯಲ್ಲಿಯೇ ಸುಗ್ರೀವನೆಂಬ ಕಪಿಯು ಬೇರೆ ನಾಲ್ಕು ಕಪಿಗಳೊಡನೆ ವಾಸಮಾಡುತ್ತಿರುವನು. ಆಗಾಗ ಅವನು ಬೆಟ್ಟದ ತುದಿಗೇರಿ ಹೋಗುವುದೂ ಉಂಟು. ನೀನು ಹೋಗಿ ಅವನನ್ನು ನೋಡು!" ಎಂದನು. ಹೀಗೆ ಕಬಂಧನು ರಾಮಲಕ್ಷ್ಮಣರಿಗೆ ತಿಳಿಸಿ, ಪುಷ್ಪ ಮಾಲಿಕೆಯಿಂದಲಂಕೃತನಾಗಿ, ಸೂರ್ಯನಂತೆ ತೇಜೋವಿಶಿಷ್ಟನಾಗಿ ಅಂತರಿಕ್ಷ ದಲ್ಲಿ ಕಾಣಿಸಿಕೊಂಡು ಸ್ವಲ್ಪಹೊತ್ತಿನವರೆಗೆ ನಿಂತಿದ್ದನು. ಆಗ ರಾಮಲಕ್ಷ್ಮಣ ರಿಬ್ಬರೂ ಮುಂದೆ ಹೊರಡುವುದಕ್ಕೆ ಸಿದ್ಧರಾಗಿ, ಅಂತರಿಕ್ಷದಲ್ಲಿ ತಮ್ಮ ಅನುಜ್ಞೆ ಯನ್ನು ನಿರೀಕ್ಷಿಸುತ್ತಿದ್ದ ಕಬಂಧನನ್ನು ಕುರಿತು "ಎಲೈ ಮಹಾತ್ಮನೆ! ಇನ್ನು ನೀನು ಹೋಗು, ನಾವೂ ಹೊರಡುವೆವು" ಎಂದರು. ಆಗ ಕಬಂಧನೂ ಇವ ರನ್ನು ಕುರಿತು "ಸರಿ! ಇನ್ನು ನೀವೂ ನಿಮ್ಮ ಕಾರ್ಯಸಿದ್ಧಿಗಾಗಿ ಹೊರಡಿರಿ!" ಎಂದು ಅವರಿಗೆ ಅನುಜ್ಞೆಯನ್ನು ಕೊಟ್ಟು ತಾನೂ ಅತ್ತಲಾಗಿ ಹೊರಟನು.

ಹೀಗೆ ಕಬಂಧನು ದಿವ್ಯರೂಪವನ್ನು ತಾಳಿ, ಸೂರ್ಯನಂತೆ ಜ್ವಲಿಸುತ್ತ, ಅಂತರಿಕ್ಷದಲ್ಲಿ ಸ್ವಲ್ಪದೂರ ಹೋಗಿ, ಪುನಃ ಅಲ್ಲಿ ನಿಂತು, ರಾಮನನ್ನು ಕೂಗಿ, ಅವನಿಗೆ ಋಶ್ಯಮೂಕವನ್ನು ತೋರಿಸುತ್ತ "ರಾಮಾ! ಮುಖ್ಯವಾಗಿ ನೀನು ಅಲ್ಲಿ ಹೋಗಿ, ಸುಗ್ರೀವನೊಡನೆ ಸ್ನೇಹವನ್ನು ಮಾಡಬೇಕು" ಎಂದನು.

ಇಲ್ಲಿಗೆ ಎಪ್ಪತ್ತುಮೂರನೆಯ ಸರ್ಗವು.

---

ರಾಮಲಕ್ಷ್ಮಣರು ಶಬರ್ಯಾಶ್ರಮಕ್ಕೆ ಹೋದುದು. ಶಬರಿಯು ಅವರನ್ನು ಪೂಜಿಸಿ, ಅಲ್ಲಿ ಮತಂಗಶಿಷ್ಯರ ಆಶ್ರಮವೇ ಮೊದಲಾದುವನ್ನು ತೋರಿಸಿ ತಾನು ಪರಮಪದಕ್ಕೆ ಹೋದುದು.

ರಾಜಪುತ್ರರಾದ ಆ ರಾಮಲಕ್ಷ್ಮಣರಿಬ್ಬರೂ ಪಶ್ಚಿಮಾಭಿಮುಖವಾಗಿ ಹೊರಟು, ಕಬಂಧನು ತೋರಿಸಿದ ಮಾರ್ಗವನ್ನೇ ಹಿಡಿದು, ಪಂಪಾಸರೋವರದ ಕಡೆಗೆ ಪ್ರಯಾಣಮಾಡುತಿದ್ದರು. ಅಲ್ಲಲ್ಲಿ ಪರ್ವತಗಳ ಮೇಲೆ ಜೇನನ್ನು ತೊಟ್ಟಿಕ್ಕುತ್ತಿರುವ ಫಲವೃಕ್ಷಗಳನ್ನು ನೋಡಿ ಆನಂದಿಸುತ್ತ, ಸುಗ್ರೀವನನ್ನು ನೋಡುವ ಕುತೂಹಲದಿಂದ ಆತುರಗೊಂಡು ಮುಂದೆ ಹೊರಟರು. ಕೊನೆಗೆ ಅವರು ಪಂಪಾಸರಸ್ಸಿನ ಪಶ್ಚಿಮತೀರವನ್ನು ಸೇರಿ, ಅಲ್ಲಿ ರಮಣೀಯವಾದ ಶಬರ್ಯಾಶ್ರಮವನ್ನೂ ಕಂಡರು. ಅನೇಕ ವೃಕ್ಷಸಮೂಹದಿಂದ ಪರಿವೃತವಾದ ಆ ಆಶ್ರಮದ ಸೊಗಸನ್ನು ನೋಡಿ ಆಶ್ಚರ್ಯಪಡುತ್ತ, ಶಬರಿಯ ಸಮೀಪಕ್ಕೆ ಬಂದರು. ಆಗ ಯೋಗಸಿದ್ಧಿಯಲ್ಲಿದ್ದ ಶಬರಿಯು ರಾಮಲಕ್ಷ್ಮಣರನ್ನು ಕಂಡೊಡನೆ ಥಿಗ್ಗನೆ ಎದ್ದುನಿಂತು ಕೈಮುಗಿದು, ರಾಮನ ಪಾದಗಳಿಗೆ ನಮಸ್ಕರಿಸಿ, ಆಮೇಲೆ ಲಕ್ಷ್ಮಣನ ಪಾದಗಳಿಗೂ ನಮಸ್ಕರಿಸಿದಳು. ಆಮೇಲೆ ಅವರಿಗೆ ಯಥಾವಿಧಿಯಾಗಿ ಅರ್ಘ್ಯಪಾದ್ಯಗಳನ್ನೂ, ಆಚಮನೀಯವನ್ನೂ ಕೊಟ್ಟಳು. ಆಗ ರಾಮನು ವ್ರತನಿಷ್ಠಳಾದ ಆ ಸನ್ಯಾಸಿನಿಯನ್ನು ನೋಡಿ, "ಎಲೈ ತಪಸ್ವಿನಿ! ನೀನು ತಪೋವಿಘ್ನಗಳೆಲ್ಲವನ್ನೂ ಜಯಿಸಿರುವೆಯಷ್ಟೆ? ನಿನ್ನ ತಪಸ್ಸು ವೃದ್ಧಿಹೊಂದುತ್ತಿರುವುದಷ್ಟೆ? ಕೋಪವನ್ನೂ, ನಿದ್ರಾಹಾರಗಳನ್ನೂ ಅಡಗಿಸಿಕೊಂಡಿರುವೆಯಾ? ಚಾಂದ್ರಾಯಣಾದಿ ವ್ರತಗಳೆಲ್ಲವನ್ನೂ ಮುಗಿಸಿರು

ವೆಯಾ ? ನಿನ್ನ ಮನಸ್ಸು ನಿಶ್ಚಿಂತವಾಗಿರುವುದಷ್ಟೆ ? ನೀನು ನಡೆಸಿದ ಗುರುಶುಶ್ರೂಷೆಗಳೆಲ್ಲವೂ ಸಫಲವಾಗಿರುವುವಲ್ಲವೆ ? " ಎಂದನು. ಇದನ್ನು ಕೇಳಿ ತಪಸ್ಸಿದ್ಧಿಯುಳ್ಳವಳಾಗಿಯೂ, ಸಿದ್ಧರಿಂದ ಗೌರವಿಸಲ್ಪಡತಕ್ಕವಳಾಗಿಯೂ ಇರುವ ಆ ವೃದ್ಧಸನ್ಯಾಸಿನಿಯು, ರಾಮನ ಮುಂದೆ ನಿಂತು, "ಮಹಾತ್ಮನೆ ! ನಿನ್ನ ದರ್ಶನದಿಂದ ಈಗಲೇ ನನ್ನ ತಪಸ್ಸು ಪರಿಪಕ್ವವಾಯಿತು. ನನ್ನ ವ್ರತಾದಿಗಳೆಲ್ಲವೂ ಈಗಲೀಗ ಸಫಲವಾದುವು. ಎಲೈ ಪುರುಷೊತ್ತಮನೆ ! ನೀನು [1]ಸಮಸ್ತ ದೇವತೆಗಳಿಗಿಂತಲೂ ಮೇಲೆನಿಸಿರುವೆ ! (ವಿಷ್ಣುಸ್ವರೂಪನಾಗಿರುವೆ.) ನಿನ್ನನ್ನು ಆರಾಧಿಸುವುದರಿಂದ ಈಗ ನನ್ನ ಜನ್ಮವೂ ಸಫಲವಾಯಿತು. ಈಗ ನನ್ನ ಗುರುಗಳೂ ವಿಶೇಷ ಪೂಜ್ಯರೆನಿಸಿಕೊಂಡರು. ನಾನು ಅವರಿಗೆ ಮಾಡಿದ ಶುಶ್ರೂಷೆಯೂ ಈಗಲೇ ಸಫಲವಾಯಿತು. ಇನ್ನು ನನಗೆ ಪರಮಪದವು ಸಿದ್ಧಿಸಿದಂತೆಯೇ ಹೊರತು ಬೇರೆಯಲ್ಲ. ಎಲೈ ರಘುವಂಶೋತ್ತಮನೆ ! [2]ಪ್ರಸನ್ನವಾದ ನಿನ್ನ ಕಟಾಕ್ಷವೀಕ್ಷಣದಿಂದಲೇ ನನ್ನ ಪಾಪಗಳೆಲ್ಲವೂ ಹೋಗಿ ಪರಿಶುದ್ಧಳಾದೆನು. ನಿನ್ನ ಅನುಗ್ರಹದಿಂದ ಅಕ್ಷಯವಾದ ಪುಣ್ಯಲೋಕಗಳನ್ನೂ (ಪುನರಾವೃತ್ತಿಯಿಲ್ಲದ ಪರಮಪದವನ್ನೂ) ಹೊಂದುವೆನು. ಮತಂಗಶಿಷ್ಯರು ನನಗೆ ಆಚಾರ್ಯರು. ಬಹುಕಾಲದವರೆಗೆ ನಾನು ಅವರನ್ನುಪಚರಿಸುತಿದ್ದೆನು. ನೀನು ಚಿತ್ರಕೂಟಕ್ಕೆ ಬಂದಾಗಲೇ, ಅವರು ವಿಮಾನವನ್ನೇರಿ ಇಲ್ಲಿಂದ ದಿವ್ಯಲೋಕಗಳಿಗೆ ಹೊರಟುಹೋದರು. ಅವರು ಧರ್ಮಗಳನ್ನು ಬಲ್ಲವರು. ಮತ್ತು ಭವಿಷ್ಯದ್ವೃತ್ತಾಂತಗಳನ್ನೂ ಕಂಡುಕೊಳ್ಳಬಲ್ಲ ಮಹಾಮಹಿಮೆ

---

1. ಇದರಿಂದ ಶಬರಿಗೆ ಪರಮಾರ್ಥಜ್ಞಾನವುಂಟೆಂದು ಸೂಚಿತವು.

2. ಇಲ್ಲಿ "ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ । ಗಮಿಷ್ಯಾಮ್ಯಕ್ಷಯಾನ್ ಲೋಕಾನ್ ತ್ವತ್ಪ್ರಸಾದಾದರಿಂದಮ ॥ " ಎಂದು ಮೂಲವು. ಇದರ ಅರ್ಥವಿಶೇಷವೇನೆಂದರೆ, "ಎಲೆ ರಾಮನೆ ! (ತವ ಸೌಮ್ಯೇನ ಚಕ್ಷುಷಾ) ನಿನ್ನ ನಿರ್ಹೇತುಕವಾದ ಕಟಾಕ್ಷದಿಂದ, (ಪೂತಾಸ್ಮಿ) ನನ್ನ ಪೂರ್ವಾಘಗಳೆಲ್ಲವೂ ಹೋಗಿ ಪರಿಶುದ್ಧಳಾದೆನು. (ಅರಿಂದಮ) ಶತ್ರುಭೂತಗಳಾದ ಉತ್ತರಾಘಗಳನ್ನೂ ನಾಶಹೊಂದಿಸತಕ್ಕ ಎಲೈ ಮಹಾತ್ಮನೆ ! (ತ್ವತ್ಪ್ರಸಾದಾತ್) "ಧಾತುಃಪ್ರಸಾದಾನ್ಮಹಿಮಾನಮಾತ್ಮನಃ " ಎಂಬಂತೆ, ಆಚಾರ್ಯಪ್ರಸಾದದಿಂದ ಉಪಬೃಂಹಿತವಾದ ನಿನ್ನ ಅನುಗ್ರಹವಿಶೇಷದಿಂದ (ಅಕ್ಷಯಾನ್ ಲೋಕಾನ್ ಗಮಿಷ್ಯಾಮಿ) ಪುನರಾವರ್ತಿರಹಿತವಾದ ಪರಮಪದವನ್ನೂ ಹೊಂದುವೆನು " ಎಂದು ಹೇಳಿದುದಾಗಿ ಭಾವವು. (ಗೋವಿಂದರಾಜೀಯವು)

ಯುಳ್ಳವರು. ಆದುದರಿಂದ ನನ್ನಂತವಳಿಗೆ ಭಗವತ್ಪ್ರಾಪ್ತಿಗುಪಾಯವಾದ ಯೋಗ ವಿಲ್ಲದಿದ್ದರೂ, ಆಚಾರ್ಯಪ್ರಸಾದದಿಂದ ಭಗವದನುಗ್ರಹವನ್ನು ಸಂಪಾದಿಸಿ, ಅದರಿಂದಲೇ ಸದ್ಗತಿಯನ್ನು ಹೊಂದುವೆನೆಂಬುದನ್ನು ತಿಳಿದು, ಅವರು ಮೊದಲೇ ನನಗೆ "ರಾಮನು ನಿನ್ನನ್ನು ನೋಡುವುದಕ್ಕಾಗಿ ಪವಿತ್ರವಾದ ಈ ಆಶ್ರಮಕ್ಕೆ ಬರುವನು. ಆಗ ನೀನು ರಾಮನನ್ನೂ ಅವನ ತಮ್ಮನಾದ ಲಕ್ಷ್ಮಣನನ್ನೂ ಸತ್ಕರಿಸಿ ಬರಮಾಡಿಕೊಂಡು ಆತಿಥ್ಯಗಳನ್ನು ನಡೆಸಿದರೆ, ಆತನ ದರ್ಶನದಿಂದ ನಿನಗೆ ಅಕ್ಷಯವಾದ ಲೋಕಗಳೆಲ್ಲವೂ ಸಿದ್ಧಿಸುವುವು!" ಎಂದು ಹೇಳಿರುವರು. ಎಲೈ ಪುರುಷಶ್ರೇಷ್ಠನೆ! ಅದರಂತೆಯೇ ನಾನು ನಿನಗಾಗಿ ಈ ಪಂಪಾತೀರದಲ್ಲಿ ಹುಟ್ಟಿದ ಬಗೆಬಗೆಯ [1]ಫಲಮೂಲಾದಿ ವನ್ಯಪದಾರ್ಥಗಳನ್ನೂ ಸಂಗ್ರಹಿಸಿಟ್ಟಿರು ವೆನು" ಎಂದಳು. ಧರ್ಮಾತ್ಮನಾದ ರಾಮನು ಈ ಮಾತನ್ನು ಕೇಳಿ ಸಂತೋಷಿಸಿ, ಅವಳು ಕೇವಲ ಹೀನವಾದ ಬೇಡರಜಾತಿಯಲ್ಲಿ ಹುಟ್ಟಿದರೂ, ಆಚಾರ್ಯಾನುಗ್ರಹದಿಂದ ಪಡೆದ ಉತ್ತಮಜ್ಞಾನದಿಂದ ಜ್ಞಾನಾನುಸಂಧಾನ ದಲ್ಲಿಯೇ ನಿಂತ ಆಕೆಯನ್ನು ನೋಡಿ "ಎಲೆ ಶಬರಿ! ನಾನು ಕಬಂಧನ ಮುಖ ದಿಂದ ಮಹಾತ್ಮನಾದ ಮತ್ತು ನಿನ್ನ ಗುರುವಾದ ಮತಂಗಮಹಾಮುನಿಯ

---

1. ಪಾದ್ಮಪುರಾಣದಲ್ಲಿ ಈ ಶಬರಿಯ ಪ್ರಸ್ತಾವದಲ್ಲಿ "ಪ್ರತ್ಯುದ್ಗಮ್ಯ ಪ್ರಣಮ್ಯಾಥ ನಿವೇಶ್ಯ ಕುಶವಿಷ್ಟರೇ । ಪಾದಪ್ರಕ್ಷಾಳನಂ ಕೃತ್ವಾ ತತ್ತೋಯಂ ಪಾಪನಾಶನಂ ॥ ಶಿರಸಾ ಧಾರ್ಯ ಪೀತ್ವಾ ಚ ವನ್ಯೈಃ ಪುಷ್ಪೈರಥಾರ್ಚಯತ್ । ಫಲಾನಿ ಚ ಸುಪಕ್ವಾನಿ ಮೂಲಾನಿ ಮಧುರಾಣಿ ಚ ॥ ಸ್ವಯಮಾಸ್ವಾದ್ಯ ಮಾಧುರ್ಯಂ ಪರೀಕ್ಷ್ಯ ಪರಿಭಕ್ಷ್ಯ ಚ । ಪಶ್ಚಾ ನ್ನಿವೇದಯಾಮಾಸ ರಾಘವಾಭ್ಯಾಂ ದೃಢವ್ರತಾ ॥ ಫಲಾನ್ಯಾಸ್ವಾದ್ಯ ಕಾಕುತ್ಸ್ಥಃ ತಸ್ಯೈ ಮುಕ್ತಿಂ ಪರಾಂ ದದೌ" ಶಬರಿಯು ರಾಮನನ್ನು ಕಂಡು ಇದಿರೆದ್ದುಬಂದು ನಮಸ್ಕರಿಸಿ, ದರ್ಭಾಸನವನ್ನು ಕೊಟ್ಟು ಕುಳ್ಳಿರಿಸಿ, ಅವನ ಪಾದಗಳನ್ನು ತೊಳೆದು, ಪಾಪಹರವಾದ ಆ ಪಾದತೀರ್ಥವನ್ನು ಶಿರಸ್ಸಿನಲ್ಲಿ ಧರಿಸಿ, ಪಾನಮಾಡಿ, ಪುಷ್ಪಗಳಿಂದ ಆತನನ್ನರ್ಚಿಸಿದಳು. ಮತ್ತು ಕಾಡಿನಲ್ಲಿ ಮಾಗಿದ ಹಣ್ಣುಗಳನ್ನೂ ರುಚಿಯಾದ ಕಂದಮೂಲಗಳನ್ನೂ ತಾನೇ ಹೋಗಿ ಸಂಗ್ರಹಿಸಿ, ಅವುಗಳ ಮಾಧುರ್ಯವನ್ನು ಪರೀಕ್ಷಿಸುವುದಕ್ಕಾಗಿ ತಾನು ಮೊದಲು ಸ್ವಲ್ಪವನ್ನು ರುಚಿನೋಡಿ, ಆಮೇಲೆ ರಾಮಲಕ್ಷ್ಮಣರಿಗೆ ನಿವೇದಿಸಿದಳು. ಅವುಗಳನ್ನು ರಾಮನು ಅತ್ಯಾದರದಿಂದ ಭುಜಿಸಿ, ಅವಳಿಗೆ ಸರ್ವೋತ್ತಮವಾದ ಮೋಕ್ಷವನ್ನು ಕೊಟ್ಟು ದಾಗಿ ಕಾಣಿಸಲ್ಪಟ್ಟಿದೆ. ಆದುದರಿಂದ ಇಲ್ಲಿಯೂ ಶಬರಿಯು ತಾನು ಮೊದಲು ತಿಂದು ರುಚಿನೋಡಿ ಸಂಗ್ರಹಿಸಿಟ್ಟ ಹಣ್ಣುಗಳನ್ನೇ ತಂದುಕೊಟ್ಟುದಾಗಿ ಗ್ರಾಹ್ಯವು.

ಪ್ರಭಾವವನ್ನು ಮೊದಲೇ ಕೇಳಿರುವೆನು. ಆದರೆ ಈಗ ಅದನ್ನು ಪ್ರತ್ಯಕ್ಷ ವಾಗಿಯೂ ನೋಡಬೇಕೆಂದು ಕುತೂಹಲವಿರುವುದು. ನಿನಗೆ ಇಷ್ಟವಿದ್ದಲ್ಲಿ ಅದನ್ನು ತೋರಿಸು" ಎಂದನು. ಇದನ್ನು ಕೇಳಿದ ಕ್ಷಣವೇ ಶಬರಿಯು ಅತಿ ಸಂತೋಷದಿಂದ ಆ ರಾಮಲಕ್ಷ್ಮಣರನ್ನು ಕರೆದುಕೊಂಡುಹೋಗಿ, ಆವರಿಗೆ ಆ ಮಹಾವನವೆಲ್ಲವನ್ನೂ ತೋರಿಸುತ್ತ, ರಾಮನನ್ನು ಕುರಿತು "ಎಲೆ ರಘು ನಂದನನೆ! ಇದೋ ನೋಡು! ಮಹಾಮೇಘದಂತೆ ಕಾಂತಿವಿಶಿಷ್ಟವಾಗಿ, ಮೃಗಪಕ್ಷಿಗಳಿಂದ ತುಂಬಿದ ಈ ವನವೇ ಮತಂಗವನವೆಂದು ಲೋಕಪ್ರಖ್ಯಾತ ವಾಗಿರುವುದು. ಆತ್ಮವಿದರಾದ ನನ್ನ ಗುರುಗಳೆಲ್ಲರೂ ಈ ವನದಲ್ಲಿ ಮಂತ್ರ ಪೂತವಾದ ಗಂಗಾದಿ ಪುಣ್ಯತೀರ್ಥಗಳೆಲ್ಲವನ್ನೂ ಕರೆಸಿಟ್ಟಿರುವರು. ಇದೋ! ಇಲ್ಲಿ ದೇವಪೂಜಾಸ್ಥಾನಗಳಾದ ವೇದಿಕೆಗಳು ಕಾಣುವುವು ನೋಡು. ಈ ವೇದಿಕೆ ಗಳು ಪಶ್ಚಿಮದ ಕಡೆಗೆ ಸ್ವಲ್ಪವಾಗಿ ತಗ್ಗಿರುವುದನ್ನು ನೋಡಿದೆಯಾ? ನನ್ನಿಂದ ವಿಶೇಷವಾಗಿ ಪರಿಚರ್ಯೆಯನ್ನು ಹೊಂದುತಿದ್ದ ಆ ನನ್ನ ಗುರುಗಳು ಮುಪ್ಪಿ ನಿಂದ ನಡುಗುವ ತಮ್ಮ ಕೈಗಳಿಂದಲೇ ಎಷ್ಟೋ ದಿನಗಳವರೆಗೆ ಇವುಗಳನ್ನು ಪೂಜಿಸುತಿದ್ದರು. ಎಲೈ ರಾಮನೆ! ಅವರ ತಪಃಪ್ರಭಾವದಿಂದ, ಈಗಲೂ ಎಣೆಯಿಲ್ಲದ ಕಾಂತಿಯುಳ್ಳ ಈ ವೇದಿಕೆಗಳು ತಮ್ಮ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗುತ್ತಿರುವುವು ನೋಡು! ನನ್ನ ಗುರುಗಳು ವ್ರತೋಪವಾಸಗಳಿಂದ ಬಳಲಿ, ಸಂಚರಿಸುವುದಕ್ಕೂ ಶಕ್ತಿಯಿಲ್ಲದಿದ್ದಾಗ, ಅವರು ಮನಸ್ಸಿನಲ್ಲಿ ಚಿಂತಿಸಿದ ಮಾತ್ರಕ್ಕೆ ಸಪ್ತಸಮುದ್ರಗಳೂ ತಾವಾಗಿ ಈ ಆಶ್ರಮಕ್ಕೆ ಬಂದಿರುವುವು ನೋಡು. ಅವರು ಈ ಸಮುದ್ರಗಳಲ್ಲಿ ಸ್ನಾನಮಾಡಿ ಬಂದು, ಅಲ್ಲಲ್ಲಿ ಮರದ ಮೇಲೆ ಆರಿಹಾಕಿರುವ ನಾರುಮಡಿಗಳು ಈಗಲೂ ಒಣಗದಿರುವುದನ್ನು ನೋಡಿ ದೆಯಾ? ಆ ಮಹರ್ಷಿಗಳು ದೇವಾರ್ಚನೆಯನ್ನು ಮಾಡುವುದಕ್ಕಾಗಿ, ನೈದಿಲೆ ಮೊದಲಾದ ಹೂಗಳನ್ನು ತಂದು ಕಟ್ಟಿದ ಈ ಪುಷ್ಪಮಾಲಿಕೆಗಳು ಈಗಲೂ ಬಾಡದಿರುವುವು ನೋಡು! ಎಲೈ ಮಹಾತ್ಮನೆ! ನೀನು ಈ ವನವೆಲ್ಲವನ್ನೂ ನೋಡಿದುದಾಯಿತಷ್ಟೆ? ಕೇಳಬೇಕಾದುದೆಲ್ಲವನ್ನೂ ಕೇಳಿದೆ! ಇನ್ನು ನಾನು ನಿನ್ನ ಅನುಜ್ಞೆಯಿಂದ ಈ ದೇಹವನ್ನು ಬಿಟ್ಟುಬಿಡಬೇಕೆಂದೆಳಸುವೆನು. ಆತ್ಮವಿದ ರಾದ ಆ ಮಹರ್ಷಿಗಳ ಸಮೀಪಕ್ಕೆ ಹೋಗಿ ಸೇರಬೇಕೆಂದು ನನಗೆ ಆಸೆಯಿರು ವುದು. ಇದು ಯಾರ ಆಶ್ರಮವೋ, ಯಾರಿಗೆ ನಾನು ಪರಿಚರ್ಯೆಯನ್ನು

ಮಾಡುತ್ತಿದ್ದೆನೋ ಅವರ ಬಳಿಗೆ ಹೋಗುವುದಕ್ಕೆ ನನಗೆ ಅನುಮತಿಯನ್ನು ಕೊಡು" ಎಂದಳು. ಧರ್ಮಯುಕ್ತವಾದ ಈ ಮಾತನ್ನು ರಾಮಲಕ್ಷ್ಮಣರಿಬ್ಬರೂ ಕೇಳಿ ಆಶ್ಚರ್ಯಪಡುತ್ತ ಬಹಳ ಸಂತೋಷದಿಂದಿದ್ದರು. ಆಮೇಲೆ ರಾಮನು ವ್ರತನಿಷ್ಠಳಾದ ಆ ಪರಿವ್ರಾಜಿಕೆಯನ್ನು ನೋಡಿ "ಎಲೆ ತಪಸ್ವಿನಿ! ನೀನು ನನ್ನನ್ನು ಎಷ್ಟೋ ಭಕ್ತಿಯಿಂದ ಪೂಜಿಸಿದೆ! ನನಗೆ ಬಹಳ ಸಂತೋಷವಾಯಿತು. ಇನ್ನು ನೀನು ಸುಖವಾಗಿ ನಿನಗಿಷ್ಟಬಂದಂತೆ ಹೋಗಬಹುದು" ಎಂದನು. ಜಟಾಧಾರಿಣಿಯಾಗಿ, ನಾರುಮಡಿಯನ್ನುಟ್ಟು, ಕೃಷ್ಣಾಜಿನವನ್ನು ಮೇಲೆ ಹೊದೆದಿದ್ದ ಆ ಮುದುಬೇಡಿತಿಯು, ರಾಮನ ಅನುಜ್ಞೆಯನ್ನು ಪಡೆದ ಕ್ಷಣವೇ, ತನ್ನ ಜೀರ್ಣವಾದ ದೇಹವನ್ನು ಬಿಟ್ಟುಬಿಡಬೇಕೆಂದು ನಿಶ್ಚಯಿಸಿ, ಅಗ್ನಿಯಲ್ಲಿ ಪ್ರವೇಶಿಸಿದಳು. ಉತ್ತರಕ್ಷಣದಲ್ಲಿಯೇ ಅಗ್ನಿಯಂತೆ ಜ್ವಲಿಸುತ್ತಿರುವ ದಿವ್ಯದೇಹವನ್ನು ಹೊಂದಿ, ದಿವ್ಯಾಭರಣಭೂಷಿತಳಾಗಿ, ದೇವಯೋಗ್ಯಗಳಾದ ಪುಷ್ಪಚಂದನಗಳಿಂದಲಂಕೃತಳಾಗಿ, ದೇವಯೋಗ್ಯವಾದ ಬಟ್ಟೆಯನ್ನು ಉಟ್ಟು, ನೋಡುವವರಿಗೆ ಎಷ್ಟೋ ಪ್ರಿಯವಾದ ರೂಪದಿಂದ ಆ ಪ್ರದೇಶವೆಲ್ಲವನ್ನೂ ಬೆಳಗುತ್ತ, ಆಗಲೇ ದಿವ್ಯಲೋಕವನ್ನು ಹೊಂದಿದಳು. ಹೀಗೆ ಶಬರಿಯು ತನ್ನ [1]ಸಮಾಧಿಯಿಂದ ಪುಣ್ಯಾತ್ಮರಾದ ಆ ಮತಂಗಶಿಷ್ಯರು ವಿಹರಿಸುತಿದ್ದ ಪುಣ್ಯಸ್ಥಾನವನ್ನೇ ಸೇರಿದಳು.

ಇಲ್ಲಿಗೆ ಎಪ್ಪತ್ತನಾಲ್ಕನೆಯ ಸರ್ಗವು.

---

1. ಈ ಸರ್ಗವೃತ್ತಾಂತದಿಂದ ಶಬರಿಯು ಮತಂಗಶಿಷ್ಯರ ಮೂಲಕವಾಗಿ ಸಮಾಧ್ಯುಪದೇಶವನ್ನು ಹೊಂದಿ, ಅವರ ಅನುಜ್ಞೆಯಿಂದ ರಾಮಾಗಮನವನ್ನು ನಿರೀಕ್ಷಿಸುತಿದ್ದು ಆಮೇಲೆ ರಾಮಾಜ್ಞೆಯಿಂದಲೂ, ತನ್ನ ಸಮಾಧಿಬಲದಿಂದಲೂ ತನ್ನ ಗುರುಗಳು ಹೊಂದಿದ ಲೋಕವನ್ನು ಹೊಂದಿದುದಾಗಿ ವ್ಯಕ್ತವಾಗುವುದು. ವಿದುರಾದಿಗಳಂತೆ ಸ್ತ್ರೀಯರಿಗೂ ಯೋಗಾಧಿಕಾರವುಂಟು. ಆದರೆ ಆ ಯೋಗಕ್ಕೆ ಅಂಗವಾದ ಯಜ್ಞಾದಿ ಕರ್ಮಗಳಿಗೆ ಬದಲಾಗಿ ಸ್ತ್ರೀಯರಿಗೆ ಗುರುಶುಶ್ರೂಷೆಯು ಅಂಗವೆಂದು ಗ್ರಾಹ್ಯವು.

ರಾಮಲಕ್ಷ್ಮಣರು ಪಂಪಾತೀರಕ್ಕೆ ಹೋದುದು.

ಆ ಶಬರಿಯು ದಿವ್ಯತೇಜಸ್ಸಿನೊಡನೆ ದಿವ್ಯಲೋಕವನ್ನು ಹೊಂದಿದಮೇಲೆ ಇತ್ತಲಾಗಿ ರಾಮನು ಲಕ್ಷ್ಮಣನೊಡನೆ ಆ ವೈಚಿತ್ರ್ಯಗಳನ್ನೇ ಕುರಿತು ಮಾತಾಡುತ್ತ ಆಶ್ಚರ್ಯಪಡುತ್ತಿದ್ದನು. ಧರ್ಮಾತ್ಮನಾದ ರಾಮನು ಆ ಮಹರ್ಷಿಗಳ ಪ್ರಭಾವವನ್ನು ನೆನೆನೆನೆದು, ತನಗೆ ಹಿತನಾದ ಲಕ್ಷ್ಮಣನನ್ನು ಕುರಿತು, "ಎಲೆ ಸೌಮ್ಯನೆ! ಅದ್ಭುತಗಳಾದ ಇಲ್ಲಿನ ಪುಷ್ಪಫಲಾದಿಗಳನ್ನೂ ಇಲ್ಲಿ ಸಮಸ್ತ ತೀರ್ಥಗಳೂ ಬಂದು ಸೇರಿರುವುದನ್ನೂ ನೋಡಿದರೆ, ಯಾರಿಗೆತಾನೇ ಆಶ್ಚರ್ಯವುಂಟಾಗದು ? ಎಲೆ ವತ್ಸನೆ! ಆತ್ಮಜ್ಞರಾದ ಆ ಮಹರ್ಷಿಗಳ ಪ್ರಭಾವದಿಂದ ಇಲ್ಲಿ ಇನ್ನೂ ಎಷ್ಟೋ ಆಶ್ಚರ್ಯಗಳನ್ನು ನೋಡಬಹುದು! ಇದೋ! ಇಲ್ಲಿ ಜಿಂಕೆಗಳೂ ಹುಲಿಗಳೂ ಒಂದಕ್ಕೊಂದು ವೈರವನ್ನು ಬಿಟ್ಟು ನಂಬಿಕೆಯಿಂದ ಕೂಡಾಡುತ್ತಿರುವುವು. ಇಲ್ಲಿ ಬಗೆಬಗೆಯ ಪಕ್ಷಿಜಾತಿಗಳೆಲ್ಲವೂ ಒಂದಾಗಿ ಕಲೆತಿರುವುವು. ಲಕ್ಷ್ಮಣಾ! ನಾವು ಇಲ್ಲಿಗೆ ಬಂದುದು ನಮ್ಮ ಭಾಗ್ಯವಿಶೇಷವಲ್ಲದೆ ಬೇರೆಯಲ್ಲ! ನಾವು ಇಲ್ಲಿಗೆ ಬಂದುದರಿಂದ ಸಪ್ತಸಮುದ್ರಗಳಲ್ಲಿಯೂ ಸ್ನಾನಮಾಡುವಹಾಗಾಯಿತು! ಆ ತೀರ್ಥಗಳಲ್ಲಿ ಪಿತೃತರ್ಪಣವನ್ನೂ ನಡೆಸಿದೆವು. ಇನ್ನು ನಮಗೆ ಸಮಸ್ತವಿಧವಾದ ಅಶುಭವೂ ನೀಗಿತು! ನಮಗೆ ಶುಭಕಾಲವೂ ಸಮೀಪಿಸಿತು! ಎಲೆ ವತ್ಸನೆ! ನಿಜವಾಗಿಯೂ ಈಗ ನನ್ನ ಮನಸ್ಸಿಗೆ ಎಷ್ಟೋ ತೃಪ್ತಿಯೂ, ಸಂತೋಷವೂ ಉಂಟಾಗಿರುವುದು. ಮುಂದೆ ಬರಬಹುದಾದ ಶುಭಕ್ಕೆ ಸೂಚಕವಾಗಿ ಈಗಲೇ ಮನಸ್ಸಿನಲ್ಲಿ ಒಂದು ವಿಧವಾದ ಹರ್ಷವುಂಟಾಗಿರುವುದು. ಆದುದರಿಂದ ಲಕ್ಷ್ಮಣಾ! ಬಾ. ಪ್ರಿಯದರ್ಶನವುಳ್ಳ ಪಂಪಾಸರೋವರಕ್ಕೆ ಈಗಲೇ ಹೋಗುವೆವು. ಅಣ್ಣನಾದ ವಾಲಿಯ ಭಯಕ್ಕಾಗಿ ನಾಲ್ಕುಮಂದಿ ಬೇರೆ ವಾನರರೊಡನೆ ಸೂರ್ಯಪುತ್ರನಾದ ಧರ್ಮಾತ್ಮನಾದ ಸುಗ್ರೀವನು ವಾಸಮಾಡುತ್ತಿರುವ ಋಶ್ಯಮೂಕಪರ್ವತವೂ ಅದಕ್ಕೆ ಸಮೀಪವಾಗಿ ಕಾಣುವುದು. ವಾನರಶ್ರೇಷ್ಠನಾದ ಅವನನ್ನು ನೋಡಬೇಕೆಂಬ ಆತುರವು ನನಗೆ ಬಹಳವಾಗಿರುವುದು. ಅವನ ಮೂಲಕವಾಗಿಯೇ ನಾವು ಸೀತೆಯನ್ನು ಕಂಡುಹಿಡಿಯಬೇಕಾಗಿರುವುದಲ್ಲವೆ?" ಎಂದನು. ಇದನ್ನು ಕೇಳಿ ಲಕ್ಷ್ಮಣನು ರಾಮನನ್ನು ಕುರಿತು, "ಅಣ್ಣಾ! ನಿನಗಿಂತಲೂ ನನಗೆ ಆತುರವು ಹೆಚ್ಚಾಗಿರುವುದು. ಬೇಗನೆ ಹೋಗುವೆವು ನಡೆ" ಎಂದನು. ಆದೇ ಕ್ಷಣ ರಾಮನು ಲಕ್ಷ್ಮಣ

ನೊಡನೆ ಆಶ್ರಮವನ್ನು ಬಿಟ್ಟು ಹೊರಟು ಪಂಪಾಸರೋವರಕ್ಕೆ ಬಂದುಸೇರಿದನು. ಅನೇಕ ಮಹರ್ಷಿಗಳಿಂದ ಸೇವಿತವಾದ ಆ ಪುಣ್ಯಸರೋವರದ ಬಳಿಗೆ ಬಂದು, ಆ ಸರೋವರದ ಸೊಗಸನ್ನೂ, ಅದರ ತಿಳಿನೀರಿನ ಸ್ವಚ್ಛತೆಯನ್ನೂ ಅದರ ತೀರದಲ್ಲಿ ಬೆಳೆದಿರುವ ಗಿಡಬಳ್ಳಿಗಳ ಅಂದವನ್ನೂ ಇಬ್ಬರೂ ಆಶ್ಚರ್ಯದಿಂದ ನೋಡುತಿದ್ದರು. ಆ ಕೊಳದಲ್ಲಿ ನಡುನಡುವೆ ಪದ್ಮಸೌಗಂಧಿಕಾದಿ ಪುಷ್ಪಗಳ ಕೆಂಪು, ಬಿಳೀ ನೈದಿಲೆಯ ಬಿಳುಪು, ಕರೀನೈದಿಲೆಗಳ ಕಪ್ಪು, ಇವೆಲ್ಲವೂ ಒಂದಾಗಿ ಸೇರಿ ಅದರ ನೀರು ವಿಚಿತ್ರವರ್ಣವುಳ್ಳ ಚಿತ್ರಕಂಬಳವನ್ನು ಹಾಸಿದಂತೆ ಕಾಣುತಿತ್ತು. ತುಂಬಿದ ನೀರುಳ್ಳ ಆ ಸರೋವರವನ್ನು ಬಹುದೂರದವರೆಗೆ ದಾಟಿಹೋಗಿ, ಸಮೀಪದಲ್ಲಿದ್ದ ಮತಂಗಸರಸ್ಸೆಂಬ ಘಟ್ಟದಲ್ಲಿಳಿದು ಸ್ನಾನಮಾಡಿ, ಪಂಪಾಸರೋವರವನ್ನು ಸುತ್ತಿ ನೋಡುತಿದ್ದರು. ಎಡೆಬಿಡದೆ ತುಂಬಿ ಬೆಳೆದ ತಾವರೆ, ನೈದಿಲೆ, ಸೌಗಂಧಿಕಗಳೇ ಮೊದಲಾದ ನೀರುಹೂಗಳು! ಅದರ ತೀರದ ಸುತ್ತಲೂ ಪುಷ್ಪಿತಗಳಾದ ಮಾವಿನ ತೋಪುಗಳು! ಆ ತೋಪುಗಳಲ್ಲಿ ಕಿವಿಗಿಂಪಾಗಿ ಕೂಗುತ್ತಿರುವ ನವಿಲುಗಳ ಧ್ವನಿ! ಮಾವಿನ ತೋಪುಗಳಿಗೆ ಪಕ್ಕದಲ್ಲಿ ತುಂಬಿಬೆಳೆದ ಆಲ, ಬೇಲ, ಅತ್ತಿ, ಮತ್ತಿ, ಮಾವು, ಬೇವು, ಸಾಲೆ, ಹಾಲೆ ಮುಂತಾದ ಮರಗಳು! ಇವುಗಳ ನಡು ನಡುವೆ, ಮೊಲ್ಲೆಮಲ್ಲಿಗೆ, ಸಂಪಿಗೆ, ಇರುವಂತಿಗೆ, ಕಣಿಗಿಲೆ, ಹೊನ್ನೆ, ಸುರಹೊನ್ನೆ ಪಗಡೆ, ಮಾಲತಿ, ಅಸುಗೆ, ತಾಳೆ ಮುಂತಾದ ಹೂಗಿಡಗಳು! ಹೀಗೆ ಹಲವು ಬಗೆಯ ಮರಗಳಿಂದ ವಿಚಿತ್ರವರ್ಣವಾಗಿ, ಆ ಪುಷ್ಕರಿಣಿಯು ಸರ್ವಾಲಂಕಾರ ಭೂಷಿತೆಯಾದ ಒಬ್ಬ ಸ್ತ್ರೀಯಂತೆ ಕಾಣುತಿತ್ತು. ಅಲ್ಲಿನ ವನದಲ್ಲಿ ಒಂದೊಂದು ಮರದಲ್ಲಿಯೂ ಟಿಟ್ಟಿಭ, ಕೋಗಿಲೆ, ಗಿಳಿ, ಅರ್ಜುನಕ ಮೊದಲಾದ ಅನೇಕ ಪಕ್ಷಿಗಳು ಕಿವಿಗಿಂಪಾಗಿ ಕೂಗುತಿದ್ದುವು. ಈ ಮಹಾವನದ ಮಾರ್ಗವಾಗಿಯೇ ರಾಮಲಕ್ಷ್ಮಣರಿಬ್ಬರೂ ನಡೆದುಬರುತ್ತಿದ್ದರು. ಒಂದೊಂದು ವೈಚಿತ್ರ್ಯವನ್ನೂ ಗಮನಿಸಿ ನೋಡುತಿದ್ದರು. ತಂಪಾದ ನೀರಿನಿಂದಲೂ, ಬಗೆಬಗೆಯ ಪಕ್ಷಿಗಳಿಂದಲೂ ತಿಲಕ ಅಶೋಕ, ಹೊನ್ನೆ, ಪಗಡೆ ಮುಂತಾದ ವೃಕ್ಷಗಳಿಂದಲೂ ಕೂಡಿದ ಶುಭಕರವಾದ ಪಂಪಾಸರಸ್ಸಿನ ಸಮೀಪದಲ್ಲಿ ಬಂದು ನಿಂತಾಗ, ಅಲ್ಲಿನ ಬಗೆಬಗೆಯ ವೃಕ್ಷಗಳನ್ನೂ, ಅದಕ್ಕೆ ಸೇರಿದ ಬಗೆಬಗೆಯ ಮಡುಗಳನ್ನೂ ಕಂಡು ರಾಮನ ಮನಸ್ಸಿನಲ್ಲಿ ಕಾಮೋದ್ರೇಕವು ತಲೆದೋರಿತು. ಆ ಕಾಮಸಂತಾಪದಿಂದಲೇ ಆ ಪಂಪಾಸರೋವರದ ದೊಡ್ಡ ಮಡುವಿನ ಬಳಿಗೆ ಬಂದನು. ಪುಷ್ಪಿತವಾದ ಉಪವನ

ಗಳಿಂದ ಕೂಡಿದುದಾಗಿಯೂ, ಸಾಲೆ, ಸಂಪಗೆ ಮೊದಲಾದ ವೃಕ್ಷಗಳಿಂದ ಶೋಭಿತವಾಗಿಯೂ, ಭ್ರಮರಗಳಿಂದ ತುಂಬಿದುದಾಗಿಯೂ, ಸ್ಫಟಿಕದಂತೆ ಸ್ವಚ್ಛವಾದ ನೀರುಳ್ಳುದಾಗಿಯೂ, ಸಣ್ಣ ಮರಳುಗಳಿಂದ ತುಂಬಿದುದಾಗಿಯೂ ಇರುವ ಆ ಮಡುವಿನ ಬಳಿಗೆ ಬಂದು, ಪದ್ಮಸೌಗಂಧಿಕಾದಿ ಹೂಗಳಿಂದ ತುಂಬಿದ ಅದನ್ನು ನೋಡಿ ನೋಡಿ ರಾಮನು ಲಕ್ಷ್ಮಣನನ್ನು ಕುರಿತು "ವತ್ಸ ಲಕ್ಷ್ಮಣಾ! ಮೊದಲು ಕಬಂಧನು ಹೇಳಿದ ಋಶ್ಯಮೂಕವೆಂಬ ಪ್ರಸಿದ್ಧ ಪರ್ವತವು, ಸಮಸ್ತ ಗೈರಿಕಾದಿಧಾತುಗಳಿಂದ ಶೋಭಿತವಾಗಿ, ಪುಷ್ಪಿತಗಳಾದ ಗಿಡಗಳಿಂದ ತುಂಬಿ, ಇದೋ! ಇದರ ತೀರದಲ್ಲಿಯೇ ಇರುವುದು ನೋಡು. ಮಹಾತ್ಮನಾದ ಋಕ್ಷರಜಸ್ಸೆಂಬ ವಾನರನ ಪುತ್ರನಾಗಿ ಸುಗ್ರೀವನೆಂದು ಪ್ರಸಿದ್ಧಿಗೊಂಡ ವೀರ್ಯವಂತನಾದ ಕಪಿಯು ಇದರಮೇಲಿರುವನು. ಎಲೈ ಪುರುಷಶ್ರೇಷ್ಠನೆ! ನೀನು ಹೋಗಿ ಆ ಸುಗ್ರೀವನನ್ನು ನೋಡಿ ಬಾ" ಎಂದನು. ಪುನಃ ರಾಮನು ಸತ್ಯವಿಕ್ರಮನಾದ ಲಕ್ಷ್ಮಣನನ್ನು ಕುರಿತು "ಎಲೆ ವತ್ಸನೆ! ರಾಜ್ಯಭ್ರಷ್ಟನಾಗಿ, ದೀನನಾಗಿ ಆ ಸೀತೆಯಲ್ಲಿಯೇ ನಟ್ಟಮನಸ್ಸುಳ್ಳ ನಾನು ಆ ಸೀತೆಯನ್ನು ಬಿಟ್ಟು ಬದುಕುವುದು ಹೇಗೆ?" ಎಂದು ಹೇಳಿ ಮನ್ಮಥತಾಪಪೀಡಿತನಾಗಿದ್ದನು. ಸಾವಧಾನದಿಂದ ಕೇಳುತ್ತಿರುವ ಆ ಲಕ್ಷ್ಮಣನನ್ನು ಕುರಿತು ಈ ಮಾತನ್ನು ಹೇಳಿದಮೇಲೆ, ಸೀತಾ ವಿಷಯವಾದ ದುಃಖದಿಂದಲೂ ಬೇಸರದಿಂದಲೂ ಕೂಡಿದವನಾಗಿ, ಮನೋಹರವಾದ ಆ ಪುಷ್ಕರಿಣಿಯಲ್ಲಿ ಸ್ನಾನಾರ್ಥವಾಗಿ ಇಳಿದನು. ಹೀಗೆ ರಾಮನು ಬಹು ದೂರದಿಂದ ಬಂದು ಅತಿದೀರ್ಘವಾದ ದಾರಿಯುಳ್ಳುದಾಗಿಯೂ, ಮರುಕಾಂತಾರಗಳಿಂದ ಪಥಿಕರಿಗೆ ಬಹಳ ಕಷ್ಟಕರವಾಗಿಯೂ ಇರುವ ಆ ಕಬಂಧವನವನ್ನು, ಎಷ್ಟೋ ವಿಘ್ನಗಳನ್ನು ತಪ್ಪಿಸಿಕೊಂಡು ದಾಟಿಬಂದು, ಅಲ್ಲಿ ನೇತ್ರಾನಂದಕರವಾದ ಅಡವಿಗಳಿಂದ ಕೂಡಿದುದಾಗಿಯೂ, ಬಗೆಬಗೆಯ ಪಕ್ಷಿಸಮೂಹಗಳಿಂದ ಶೋಭಿತವಾಗಿಯೂ, ಶುಭೋದರ್ಕವಾಗಿಯೂ ಇರುವ ಪಂಪಾಸರಸ್ಸನ್ನು ನೋಡಿ ಪರಮಸಂತೋಷಭರಿತನಾಗಿದ್ದನು.

ಇಲ್ಲಿಗೆ ಎಪ್ಪತ್ತೈದನೆಯ ಸರ್ಗವು.

---

ಇದು ಅರಣ್ಯಕಾಂಡವು.

---

ಶ್ರೀಸೀತಾಲಕ್ಷ್ಮಣಭರತಶತ್ರುಘ್ನಹನುಮತ್ಸಮೇತಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ಶ್ರೀರಾಮಾರ್ಪಣಮಸ್ತು